ವಿಷಯಾನುಕ್ರಮಣಿಕೆ

|| ಓಂ ಶ್ರೀ ದುರ್ಗಾಯೈ ನಮಃ ||

ಶ್ರೀ ಜಯಚಾಮರಾಜೇಂದ್ರಗ್ರಂಥರತ್ನಮಾಲಾ

(ಸಂಖ್ಯಾ-೫೭)

ಮಾರ್ಕಂಡೇಯ ಪುರಾಣಂ

(ಕನ್ನಡ ಅನುವಾದ ಸಹಿತ)

ಸಂಚಿಕೆ ೪

ಅನುವಾದಕ

ಆಸ್ಥಾನವಿದ್ವಾನ್, ಪಾಟಣಕರ ಚಂದ್ರಶೇಖರಭಟ್ಟ

ಮೈಸೂರು

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್

1954

ಪ್ರಸ್ತಾವನೆ

ಮಹರ್ಷಿ ವೇದವ್ಯಾಸರಚಿತವಾದ ಮಾರ್ಕಂಡೇಯ ಮಹಾಪುರಾಣದ ಕನ್ನಡ ಅನುವಾದ ರಚನೆಯ ಉದ್ಯಮವು ಪೂರ್ತಿಗೊಂಡು ಕಡೆಯದಾದ ಈ ನಾಲ್ಕನೆಯ ಸಂಚಿಕೆಯನ್ನು ವಾಚಕರ ಗಮನಕ್ಕೆ ತರಲು ಅತ್ಯಂತ ಕುತೂಹಲವುಳ್ಳವನಾಗಿದ್ದೇನೆ.

ಸಾವರ್ಣಿಕ ಮನ್ವಂತರವನ್ನು ನಿರೂಪಿಸುವ ಶ್ರೀ ದೇವೀಮಾಹಾತ್ಮ್ಯ ಕಥೆಯು ಮುಗಿದು ಮುಂದೆ ದಕ್ಷಸಾವರ್ಣಿ ಮುಂತಾದವರ ಮನ್ವಂತರಗಳನ್ನು ವರ್ಣಿಸುವ ತೊಂಭತ್ತೊಂದನೆಯ ಅಧ್ಯಾಯದಿಂದ ಪ್ರಾರಂಭಿಸಿ ಒಂದುನೂರ ಮೂವತ್ತನಾಲ್ಕನೆಯ ಅಧ್ಯಾಯದಿಂದ ಈ ಸಂಚಿಕೆಯು ಸಮಾಪ್ತಿಗೊಳ್ಳುವುದಾಗಿದೆ.

ಇದರಲ್ಲಿ ಅಡಗಿರುವ ರೌಚ್ಯಮನುರಾಜನ ಜನನ ಕಥೆಯು ಆಶ್ಚರ್ಯವನ್ನುಂಟುಮಾಡುವುದಾಗಿದೆ. ರುಚಿಪ್ರಜಾಪತಿಯು ಗೃಹಸ್ಥಾಶ್ರಮ ಸ್ವೀಕಾರ-ಕರ್ಮಾನುಷ್ಠಾನಗಳು ದುಃಖಜಟಿಲವಾದುವೆಂದು ತಿಳಿದು ವಿವಾಹವನ್ನು ತೊರೆಯುವನು. ಪಿತೃಗಳು ಬಂದು ವಿವಾಹವಾಗುವಂತೆ ರುಚಿಪ್ರಜಾಪತಿಗೆ ಬೋಧಿಸುವರು. ವೃದ್ಧನಾದ ತನಗೆ ಕನ್ಯೆ ಸಿಕ್ಕದಿರಲು ಬ್ರಹ್ಮನ ಆದೇಶದಂತೆ ಮತ್ತೆ ಪಿತೃಗಳನ್ನು ಆರಾಧಿಸಿ ಕನ್ಯೆಯನ್ನು ಹೊಂದಿ ಪಾಣಿಗ್ರಹಣವನ್ನು ಮಾಡಿಕೊಳ್ಳುವನು. ತರುವಾಯ ರೌಚ್ಯನೆಂಬ ಪುತ್ರನು ಜನಿಸಿ ಅವನು ಮನ್ವಂತರಾಧಿಪತಿಯಾಗುವನು. ಇಲ್ಲಿ ಪೂರ್ವಿಕರಾದ ರಾಜರಲ್ಲಿರುವ ಮನೋದಾರ್ಢ್ಯವನ್ನು ನಾವು ಪ್ರಶಂಸಿಸಬೇಕಾಗಿದೆ. “ ಪ್ರಜಾಯೈ ಗೃಹಮೇಧಿನಾಮ್ ” ಸಂತತಿಗೋಸ್ಕರ ಪಾಣಿಗ್ರಹಣ ಹೊರತು ಕಾಮಸುಖದ ಚಪಲತೆಯಿಂದಲ್ಲ. ಅಂತಹ ದೃಢವಾದ ಭಾವನೆಯು ಉತ್ತಮರಾದ ಪತ್ನೀ-ಪುತ್ರರ ಲಾಭವಾಗುವಂತೆ ಬ್ರಹ್ಮದೇವ-ಪಿತೃದೇವತೆಗಳ ಪ್ರಸನ್ನತೆಯನ್ನು ಉಂಟುಮಾಡಿತಲ್ಲದೆ ದೈನ್ಯ-ಚಾಪಲಗಳಿಂದ ವರ್ತಿಸುವ ಕಾಮಿಜನರಿಗಿಂತ ಸುಖಭೋಗದಲ್ಲಿ ರುಚಿಪ್ರಜಾಪತಿಯನ್ನು ಕಡಿಮೆಮಾಡಲಿಲ್ಲ.

ಅಚಿನ್ತಿತಾನಿ ದುಃಖಾನಿ ಯಥೈವಾಯಾನ್ತಿ ದೇಹಿನಾಮ್ ।
ಸುಖಾನ್ಯಪಿ ತಥಾಯಾನ್ತಿ ದೈನ್ಯಮತ್ರಾತಿರಿಚ್ಯತೇ ॥

ಕಾಲಕರ್ಮಸಂಯೋಗದಿಂದ ದುಃಖದಂತೆ ಸುಖರಾಶಿಯೂ ಬಂದೇ ಬರುವುದು. ಅದಕ್ಕಾಗಿ ದೈನ್ಯ-ಚಪಲತೆಗಳನ್ನು ಹೊಂದುವುದು ಅಜ್ಞಾನ. ಮುಂದೆ ಭೂತಿಯೆಂಬ ಕೋಪಶೀಲನಾದ ಮುನಿಗೆ ಶಿಷ್ಯನ ಪ್ರಭಾವದಿಂದ ಪುತ್ರಪ್ರಾಪ್ತಿಯಾಗಿ ಅವನೆ ಭೌತ್ಯನೆಂಬ ಮನುರಾಜನಾಗುವನು. ಶಿಷ್ಯರನ್ನು ತಾರಣ ಮಾಡುವ ಗುರುಜನರನ್ನು ಕೇಳಿರುವೆವು. ಇಲ್ಲಿ ಗುರುವಿಗೆ ಅಮೋಘ ವಾದ ಮನುರಾಜನ ಪಿತೃತ್ವವನ್ನು ತಂದುಕೊಟ್ಟ ಶಾಂತಿಯೆಂಬ ಶಿಷ್ಯನು ಪ್ರಶಂಸಾಪಾತ್ರನೇ ಸರಿ. ಅಗ್ನಿದೇವತೆಯ ಉಪಾಸನೆ ಎಂತಹ ಕಠಿನ ತಪಸ್ಸಿಗೂ ಕಡಿಮೆಯಾಗಲಾರದು. ಸಕಲ ದೇವತೆಗಳ ಮುಖದಂತಿರುವ ಅಗ್ನಿಯ ಉಪಾಸನೆ ಯಿಂದ ಪ್ರಪಂಚವು ಮಳೆ-ಬೆಳೆಗಳನ್ನು ಹೊಂದಿ ಹಾಹಾಕಾರವಿಲ್ಲದಂತಾಗುವು ದೆಂಬ ಶಾಸ್ತ್ರಸಿದ್ಧಾಂತಕ್ಕೆ ಇದೊಂದು ಸಾಕ್ಷಿಯಾಗಿದೆ.

ಕರಂಧಮ-ಅವಿಕ್ಷಿತ-ಮರುತ್ತ ಮುಂತಾದವರ ಚರಿತ್ರೆಗಳು ಕೇಳಲು ಅದ್ಭುತವೂ, ಪಾವನವೂ ಮತ್ತು ಪಾಪವನ್ನು ಭಂಜಿಸುವುವೂ ಆಗಿವೆ.

ಇಂತಹ ಪಾವನ, ನೀತಿಬೋಧಕ ಮತ್ತು ಉದಾತ್ತ ಚರಿತ್ರೆಗಳಿಂದ ತುಂಬಿದ ಪುರಾಣ-ಇತಿಹಾಸಗಳು ಸಂಸ್ಕೃತ ವಾಙ್ಮಯನಿಧಿಯ ವಜ್ರಶಿಲೆಗಳಂತೆ ಇವೆ. ಆಸ್ತಿಕ ಜನರ ಸಕಲ ಕೋರಿಕೆಗಳನ್ನು ಈಡೇರಿಸುವ ವೇದಪುರುಷನ ವಾತ್ಸಲ್ಯದ ವಾಣಿಗಳನ್ನು ಪುಷ್ಟೀಕರಿಸುವುದು ಪುರಾಣ-ಇತಿಹಾಸಗಳ ಗುರಿ.

ಇತಿಹಾಸಪುರಾಣಾಭ್ಯಾಂ ವೇದಂ ಸಮುಪಬೃಹ್ಮಯೇತ್

ವೇದದಲ್ಲಿ ರಾಜಾಜ್ಞೆಯಂತೆ ಕಟ್ಟುನಿಟ್ಟಾಗಿ ವಿಧಿ-ನಿಷೇಧಗಳಿದ್ದರೆ ಪುರಾಣಗಳಲ್ಲಿ ಅವು ಮಿತ್ರೋಪದೇಶದಂತೆ ಮನರಂಜಕವಾಗಿರುವುವು. ವಪುಷ್ಮಂತನಂತಹ ದುರಾಗ್ರಹಿ ನೀಚನಿಗೆ ಅಧೋಗತಿಯೂ ವೀರ ದಮ ಭೂಪಾಲಕನಿಗೆ ಶ್ರೇಯಃಪ್ರಾಪ್ತಿಯೂ ಆಯಿತೆಂದು ಕೇಳಿದರೆ ಯಾರಿಗೆ ತಾನೆ ವಿಹಿತಮಾರ್ಗದಲ್ಲಿ ಪ್ರವೃತ್ತಿಯೂ, ನಿಷಿದ್ಧಕರ್ಮಗಳಲ್ಲಿ ನಿವೃತ್ತಿಯೂ ಉಂಟಾಗುವುದಿಲ್ಲ ?

ಇತರ ಭಾಷಾವಾಙ್ಮಯಗಳಿದ್ದಂತೆ ಸಂಸ್ಕೃತದಲ್ಲಿ ಚಾರಿತ್ರಿಕ ಗ್ರಂಥಗಳು ಇಲ್ಲವೆಂಬುದೊಂದು ಅಪವಾದವುಂಟು. ಆದರೆ ಪ್ರಾಚೀನ ಭಾರತದ ಪ್ರಜಾ

ಕೋಟಿಗೆ ಸೇರಿದ ಮಹಾಮಹಿಮರಾದ ಮುನಿಜನರಿಂದ ಆದಿಯಾಗಿ ಎಲ್ಲರಲ್ಲೂ "ಅನ್ಯಾ ವಾಚೋ ವಿಮುಞ್ಚಥ" ಎಂಬ ನುಡಿಯು ಆದರಣೀಯವಾಗಿತ್ತು. ಅಂತಹ ಮುನಿವರೇಣ್ಯರು ಮನವಿಕಾರಕ್ಕೆ ಸೋತವರಲ್ಲ. ಅವರ ಅನುಭವ ಪೂರ್ಣವಾದ ಮಾತು ಪರೋಪದೇಶಕವಾಗಿತ್ತು. ಅವರ ನಡತೆಯು ಪರರಿಗೆ ಆದರ್ಶವಾಗಿದ್ದಿತು.

ಪ್ರವೃತ್ತಿರ್ವಾ ನಿವೃತ್ತಿರ್ವಾ ನಿತ್ಯೇನ ಕೃತಕೇನ ವಾ ।
ಪುಂಸಾಂ ಯೇನೋಪದಿಶ್ಯೇತ ತಚ್ಛಾಸ್ತ್ರಮಿತಿ ಕಥ್ಯತೇ ॥

ಪರರಿಗೆ ಹಿತ-ಅಹಿತಗಳ ಸಾಧನವನ್ನು ಉಪದೇಶಿಸುವ ವಾಣಿಯೇ ಶಾಸ್ತ್ರಗ್ರಂಥವು. ನಿರರ್ಥಕವಾಗಿ ಕಂಡುಬಂದ ತಮ್ಮ ಅಥವಾ ಪರರ ಜೀವನ ಚರಿತ್ರೆಯನ್ನು ಪ್ರಾಚೀನರು ಬರೆದವರಲ್ಲ. ಅಥವಾ ಅಧರ್ಮ-ಅನ್ಯಾಯದಿಂದ ಪ್ರಸಿದ್ಧರಾದವರ ಚರಿತ್ರೆಯ ಸ್ಮರಣವು ಅವರಿಗೆ ಬೇಕಾಗಿರಲಿಲ್ಲ. ಅಂತಹ ನೀಚರಿಗೆ ಅಧರ್ಮ ಪ್ರಾಬಲ್ಯದಿಂದ ಕೇಡು ಉಂಟಾಯಿತೆಂಬ ಉಪದೇಶವು ಜನರಲ್ಲಿ ಸತ್ಪರಿಣಾಮಕಾರಿಯಾಗಬಹುದಾದ ಸಂದರ್ಭದಲ್ಲಿ ನೀಚಜನರ ವರ್ಣನೆಯು ಚರಿತ್ರೆಯಲ್ಲಿ ಸ್ಥಾನವನ್ನು ಹೊಂದುವುದು.

ಸರ್ಗಶ್ಚ ಪ್ರತಿಸರ್ಗಶ್ಚ ವಂಶೋ ಮನ್ವನ್ತರಾಣಿ ಚ ।
ವಂಶಾನುಚರಿತಂ ಚೇತಿ ಪುರಾಣಂ ಪಞ್ಚಲಕ್ಷಣಮ್ ॥

ಸೃಷ್ಟಿ-ಪ್ರಲಯಗಳ ಜೊತೆಯಲ್ಲಿ ಅನೇಕ ವಂಶ-ಮನ್ವಂತರ-ವಂಶಾವಳಿಯ ಚರಿತ್ರಗಳನ್ನು ಹೇಳುವುದು ಪುರಾಣಗಳ ಲಕ್ಷಣವೆನಿಸಿದೆ. ಆದ್ದರಿಂದ ಪುರಾಣ-ಉಪಪುರಾಣಗಳಿಂದ ತುಂಬಿಹೋದ ಸಂಸ್ಕೃತ ವಾಙ್ಮಯಪ್ರಪಂಚದಲ್ಲಿ ಚಾರಿತ್ರಕಗ್ರಂಥಗಳಿಲ್ಲವೆಂಬುದು ಸಾಧುವೂ ಅಲ್ಲ. ಒಂದು ಸಮಯ ವಿದೇಶಗಳಲ್ಲಿ ಈಗ ಹುಟ್ಟಿ ಸಾಯುವ, ನಸಾಹುತಗಳಲ್ಲಿ ಭಾಗವಹಿಸುವ ಪ್ರತಿಯೊಬ್ಬ ವ್ಯಕ್ತಿಯ ಚರಿತ್ರವೂ ಪ್ರಾಯಶಃ ಪ್ರಸಿದ್ಧವಾಗಿರುವಂತೆ ಭರತಖಂಡದಲ್ಲಿಯೂ ಇರುವುದಾದರೆ ಸಂಖ್ಯಾತೀತವಾಗಿರಬಹುದಾಗಿತ್ತು. ಆ ದೃಷ್ಟಿಯಿಂದ ಚರಿತ್ರ ಗ್ರಂಥಗಳಿಗೆ ಕೊರತೆಯಿದೆಯೆಂದರೆ ಅಂಗೀಕರಿಸೋಣ.

ಪ್ರಕೃತವಾದ ಮಾರ್ಕಂಡೇಯ ಮಹಾಪುರಾಣವು ಕ್ರೌಷ್ಟುಕಿಮುನಿಯ ಪ್ರಶ್ನೆ, ಮಾರ್ಕಂಡೇಯ ಮುನಿಯ ಉತ್ತರಗಳಿಂದ ಕೂಡಿದೆ. ಚಿರಜೀವಿಯಾದ ಮಾರ್ಕಂಡೇಯ ಮುನಿಗೆ ಚಿರಜೀವಿತೆಯೆ ಅಷ್ಟೊಂದು ಪುರಾಣಕಥಾ-

ಚಾರ್ಯತ್ವವನ್ನು ಕೊಟ್ಟಿರುವುದೆಂದು ಊಹಿಸಬಹುದು. ಮಹಾಭಾರತದ ಅರಣ್ಯಪರ್ವದಲ್ಲಿ ಶ್ರೀ ಕೃಷ್ಣಪರಮಾತ್ಮನು ಮಾರ್ಕಂಡೇಯ ಮುನಿಯಿಂದ ಪಾಂಡವರು ಪುರಾಣಕಥೆಗಳನ್ನು ಶ್ರವಣಮಾಡುವಂತೆ ಘಟನೆಮಾಡುತ್ತಾನೆ. ಅಂತಹ ಮಹಾನುಭಾವರ ಉಪದೇಶವು ವೀರ್ಯವತ್ತಾದುದೆಂದು ಭಾವಿಸಬೇಕು. ಮಹಾಭಾರತದಲ್ಲಿ ಭಗವದ್ಗೀತೆಯು ಸಪ್ತಶತೀ ರೂಪದಲ್ಲಿ ಪ್ರಸಿದ್ಧವಾಗಿದ್ದು ಅದು ನಿರ್ಗುಣೋಪಾಸಕರ ಮಾರ್ಗವನ್ನು ಪ್ರಕಾಶಪಡಿಸಿದೆ. ಹಾಗೆಯೇ ಈ ಪುರಾಣದಲ್ಲಿ ದುರ್ಗಾಸಪ್ತಶತಿಯು ಸಗುಣೋಪಾಸಕರಿಗೆ ಒಂದು ರಾಜಮಾರ್ಗ-ವನ್ನು ಪ್ರಕಾಶಮಾಡಿಕೊಟ್ಟಿದೆ.

ಸಪ್ತಶತೀಪುರಶ್ಚರಣದ ಪ್ರಯೋಗದಲ್ಲಿ ಅರ್ಗಲಾ-ಕೀಲಕ-ರಹಸ್ಯತ್ರಯ ಮುಂತಾದ ಸ್ತುತಿಭಾಗಗಳನ್ನು ಪಠನಮಾಡುವ ಸಂಪ್ರದಾಯವಿದೆ. ರಹಸ್ಯಾದಿ ಗ್ರಂಥಗಳು ಮಾರ್ಕಂಡೇಯ ಪುರಾಣಾಂತರ್ಗತವೆಂದು ಸಪ್ತಶತೀಪುಸ್ತಕದಲ್ಲಿ ಮುದ್ರಿತವಾದಂತೆ ಕಂಡುಬರುವುದು. ಆದರೆ ಆ ಭಾಗಗಳು ಈ ಪುರಾಣದಲ್ಲಿ ಲಭಿಸುವುದಿಲ್ಲ. ಗ್ರಂಥಭಾಗ ಲೋಪವಾಗಿದೆಯೆನ್ನುವುದಕ್ಕಿಂತ ಅವುಗಳು ಮೂಲಗ್ರಂಥದಲ್ಲಿ ಗಣನೆಯಿಲ್ಲದ ಪ್ರಕ್ಷಿಪ್ತಭಾಗಗಳೆನ್ನುವುದು ಸರಲವಾದ ಮಾರ್ಗ. ಹದಿನೆಂಟು ಮಹಾಪುರಾಣಗಳಲ್ಲಿ ಇದು ಏಳನೆಯದೆಂದೂ ಇದರ ಶ್ರವಣ-ಪಠನಗಳು ಸಕಲ ಪುರುಷಾರ್ಥಸಾಧಕವೆಂತಲೂ ಕಡೆಯ ಅಧ್ಯಾಯದಲ್ಲಿ ನಿರೂಪಿಸಿದೆ. ಹುಲ್ಲುಕಡ್ಡಿಯು ಗಾಳಿಯ ಹೊಡೆತಕ್ಕೆ ಸಿಕ್ಕಿಬೀಳುವಂತೆ ಹಗುರವೂ ಚಂಚಲವೂ ಆದ ಮಾನಸವು ಸುಖದುಃಖ ತರಂಗಗಳಿಗೆ ಸಿಕ್ಕಿ ತಲ್ಲಣಿಸುವುದು. ಎಂತಹ ಗಾಳಿಗಾದರೂ ಗಿರಿಯು ಅಲ್ಲಾಡದಹಾಗೆ ದೃಢಸಂಸ್ಕಾರಗಳಿಂದ ಕೂಡಿ ಅಚಲವಾದ ಮಾನಸವು ನಿರ್ವಿಕಾರವಾಗಿರುವ ಸ್ಥಿತಿಯುಂಟಾಗಲೆಂದು ಅನೇಕ ಸನ್ನಿವೇಶಗಳ ಕಥೆಗಳು ಕರುಣಾಳುವಾದ ಮುನಿಯಿಂದ ವರ್ಣಿಸಲ್ಪಟ್ಟಿವೆ.

ಆಳುವ ಮಹಾಸ್ವಾಮಿಯವರು **ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಜಿ.ಸಿ.ಬಿ., ಜಿ.ಸಿ.ಎಸ್.ಐ.,** ರವರ ಅಜ್ಞೆಯಂತೆ ಸಂಸ್ಕೃತದಲ್ಲಿದ್ದ ಈ ಗ್ರಂಥವನ್ನು ಕನ್ನಡಿಗರ ತಿಳಿವಳಿಕೆಗಾಗಿ ಕನ್ನಡಕ್ಕೆ ಪರಿವರ್ತನೆ ಮಾಡಿರುತ್ತೇನೆ. ಆಸ್ತಿಕಶಿರೋಮಣಿಗಳಾದ ಮಹಾಪ್ರಭುಗಳವರು ಪವಿತ್ರ ವಾಙ್ಮಯದ ಪ್ರಸಾರದಿಂದ ಸರಸ್ವತೀದೇವಿಯ ಉಪಾಸಕರಾಗಿ ಲೋಕಕ್ಕೆ ಮಹೋಪಕಾರವನ್ನು ಮಾಡುತ್ತ ಭರತಖಂಡದ ರಾಜಾಧಿರಾಜರಲ್ಲಿ ಅದ್ವಿತೀಯ-ರೆಂದು ಖ್ಯಾತಿಗಳಿಸಿರುವರು. ಕರ್ಣಾಟಕದ ಪ್ರಜಾಕೋಟಿಯ ಭಾಗ್ಯದೇವತೆ-

ಯಂತಿರುವ ಮಹಾಸ್ವಾಮಿಯವರು ಸತ್ಪತ್ನೀ-ಪುತ್ರರತ್ನ-ಪರಿವಾರಸಮೇತರಾಗಿ ದೀರ್ಘಾಯುರಾರೋಗ್ಯಾದಿ ಸಕಲ ಸನ್ಮಂಗಳಗಳನ್ನು ಚಿರಕಾಲ ಅನುಭವಿಸು-ವಂತೆ ಕರುಣಿಸಲೆಂದು ಶ್ರೀ ಚಾಮುಂಡಾಂಬಿಕೆಯನ್ನು ಅನನ್ಯಭಕ್ತಿಯಿಂದ ಪ್ರಾರ್ಥಿಸುತ್ತೇನೆ.

ಹೀಗೆ ಈ ಗ್ರಂಥವು ಪ್ರಕಾಶಕ್ಕೆ ಬಂದು ಸಜ್ಜನರ ಸೇವೆಮಾಡಲು ಅವಕಾಶಮಾಡಿಕೊಟ್ಟ ಮಹನೀಯರಲ್ಲಿ ಕೃತಜ್ಞತೆಯನ್ನು ಅರ್ಪಿಸುತ್ತ ವಾಚಕರ ಹೃದಯದಲ್ಲಿ ಜ್ಞಾನಪ್ರಕಾಶವನ್ನು ಬೀರುವ ಈ ಗ್ರಂಥದಿಂದ ರಾಜಮನೆತನದ ಕೀರ್ತಿಯು ಆಚಂದ್ರಾರ್ಕವಾಗಿ ಉಜ್ವಲವಾಗಿರಲೆಂದು ಕೋರುತ್ತೇನೆ.

ಮೈಸೂರು
ತಾ|| 24—5—1954

ಅನುವಾದಕ
ಪಾಟಣಕರ ಚಂದ್ರಶೇಖರಭಟ್ಟ

ವಿಷಯಾನುಕ್ರಮಣಿಕೆ

ಅಧ್ಯಾಯ	ವಿಷಯ	ಪುಟ
೯೧.	ದಕ್ಷ ಸಾವರ್ಣಿ ಮುಂತಾದ ಐದು ಮಂದಿ ಮನುರಾಜರ ಮನ್ವಂತರ ನಿರೂಪಣ, ಆಯಾಯ ಮನ್ವಂತರಗಳಲ್ಲಿ ಇಂದ್ರ–ಸಪ್ತರ್ಷಿ–ದೇವತಾ ಮುಂತಾದ ಪದಗಳಲ್ಲಿರುವವರ ವಿವರಣೆ.	೧
೯೨.	ರುಚಿ–ಪ್ರಜಾಪತಿಯು ಗೃಹಸ್ಥಾಶ್ರಮ ಪರಿಗ್ರಹವು ದುಃಖಕರವೆಂದು ತ್ಯಜಿಸುವುದು. ಪಿತೃಗಳು ವಿದ್ಯಾ–ಅವಿದ್ಯೆಗಳನ್ನು ವಿವೇಚಿಸಿ ಕರ್ಮ ಮಾಡಲು ವಿವಾಹವಾಗಬೇಕೆಂದು ಆಜ್ಞಾಪಿಸುವುದು.	೯
೯೩.	ವೃದ್ಧನಾದ ರುಚಿಪ್ರಜಾಪತಿಯು ತನಗೆ ಕನ್ಯೆಯು ಸಿಕ್ಕದಿರಲು ಖಿನ್ನನಾಗಿ ಬ್ರಹ್ಮದೇವನನ್ನು ಆರಾಧಿಸುವುದು. ಬ್ರಹ್ಮದೇವನು ಪ್ರತ್ಯಕ್ಷನಾಗಿ ಪಿತೃಗಳನ್ನು ಆರಾಧಿಸುವಂತೆ ಹೇಳುವುದು. ಅಂತೆಯೆ ರುಚಿಯು ಪಿತೃದೇವತೆಗಳನ್ನು ಸ್ತುತಿಸುವುದು.	೧೭
೯೪.	ತೇಜಃಪುಂಜವು ಉದಯಿಸಿದಂತಾಗಿ ಅದರಿಂದ ಪಿತೃಗಳು ರುಚಿಗೆ ಪ್ರತ್ಯಕ್ಷ ದರ್ಶನವನ್ನು ಕೊಡುವುದು. ಹಾಗು ಮನ್ವಂತರ ಪದವನ್ನು ಅನುಭವಿಸುವಂತ ಯೋಗ್ಯಪುತ್ರನು ಜನಿಸುವಂತೆ ಪಿತೃಗಳು ಅನುಗ್ರಹಿಸುವುದು.	೩೧
೯೫.	ನದೀ ಮಧ್ಯದಿಂದ ಎದ್ದು ಬಂದ ಪ್ರಮ್ಲೋಚಾ ಎಂಬ ಅಪ್ಸರಾಂಗನೆಯು ತನ್ನ ಪುತ್ರಿಯಾದ ಮಾಲಿನೀ ಕನ್ಯೆಯನ್ನು ಪರಿಗ್ರಹಿಸುವಂತೆ ಪ್ರಾರ್ಥಿಸುವುದು, ರುಚಿ-ಮಾಲಿನಿಯರ ವಿವಾಹ, ಮಾಲಿನಿಯಲ್ಲಿ ರೌಚ್ಯನೆಂಬ ಮನುರಾಜನ ಜನನ.	೪೧
೯೬.	ಭೌತ್ಯಮನ್ವಂತರ : ಭೂತಿ ಎಂಬ ಮುನಿಯು ಸಂತತಿಗೋಸ್ಕರ ತಪವನ್ನು ಆಚರಿಸುವುದು. ತರುವಾಯ ತಪಃಸಿನ ಕ್ಲೇಶವನ್ನು	

ಅಧ್ಯಾಯ	ವಿಷಯ	ಪುಟ
	ಸಹಿಸಲಾರದೆ ತ್ಯಜಿಸುವುದು. ಈ ನಡುವೆ ತಮ್ಮನ ಯಜ್ಞ-ಕರ್ಮಕ್ಕಾಗಿ ಹೊರಡಲು ಭೂತಿಯು ಶಾಂತಿ ಎಂಬ ಶಿಷ್ಯನನ್ನು ಅಗ್ನಿಸಂರಕ್ಷಣೆಗೆ ನಿಯೋಜಿಸುವುದು. ಗುರುವು ಪ್ರಯಾಣಮಾಡಿದ ನಂತರ ಅಗ್ನಿಶಾಲೆಯಲ್ಲಿ ಅಗ್ನಿಯು ಶಮನವಾಗುವುದು. ಗುರು-ಶಾಪದಿಂದ ಭಯಪಟ್ಟು ಶಿಷ್ಯನು ಅಗ್ನಿದೇವತೆಯನ್ನು ಸ್ತುತಿಸು-ವುದು.	೪೫
೯೭.	ಅಗ್ನಿದೇವತೆಯು ಪ್ರತ್ಯಕ್ಷವಾಗಿ ಶಿಷ್ಯನ ಪ್ರಾರ್ಥನೆಯನ್ನು ಈಡೇರಿ-ಸುವುದು. ಅದರಂತೆ ಗುರುವಿಗೆ ಭೌತ್ಯನೆಂಬ ಪುತ್ರನ ಪ್ರಾಪ್ತಿ, ಅಗ್ನಿಯು ಶಾಲೆಯಲ್ಲಿ ಮೊದಲಿನಂತೆ ಉಜ್ವಲವಾಗಿ ಜ್ವಲಿಸುವುದು.	೬೩
೯೮.	ಭೂಪಾಲಕರ ವಂಶಾನುಕೀರ್ತನ, ಬ್ರಹ್ಮದೇವನಿಂದ ದಕ್ಷದಂಪತಿ-ಗಳ ಜನನ, ಬ್ರಹ್ಮಾಂಡವನ್ನು ಭೇದಿಸಿದ ಸಮಯದಲ್ಲಿ ವ್ಯಾಹೃತಿಸ್ವರೂಪನಾದ ಸೂರ್ಯಪರಮಾತ್ಮನ ಆವಿರ್ಭಾವ.	೭೫
೯೯.	ಛಂದೋರೂಪನಾಗಿ ಆವಿರ್ಭವಿಸಿದ ಸೂರ್ಯದೇವನ ಮಹಿಮೆ. ಪ್ರಾತಃಕಾಲ ಮಧ್ಯಾಹ್ನ ಸಾಯಾಹ್ನ ಸಮಯಗಳಲ್ಲಿ ಋಗ್ಯಜುಃ ಸಾಮರೂಪದಿಂದ ಆದಿತ್ಯನ ಪ್ರಕಾಶ.	೮೩
೧೦೦.	ಬ್ರಹ್ಮದೇವನು ಮಾಡಿದ ಆದಿತ್ಯಸ್ತುತಿ. ಸೂರ್ಯದೇವನು ತನ್ನ ತೇಜಃಪುಂಜವನ್ನು ಉಪಸಂಹಾರಮಾಡಿದ ತರುವಾಯ ಬ್ರಹ್ಮದೇವನ ಸೃಷ್ಟಿರಚನೆ.	೮೯
೧೦೧.	ಕಶ್ಯಪಮುನಿಯ ವಂಶವರ್ಣನೆ ಮತ್ತು ಅದಿತಿದೇವಿಯು ಮಾಡಿದ ಸೂರ್ಯನ ಸ್ತುತಿ.	೯೪
೧೦೨.	ಸೂರ್ಯನು ಪ್ರಸನ್ನನಾಗಿ ಅಸುರರನ್ನು ನಿಗ್ರಹಿಸುವಂತೆ ದೇವತೆಗಳಿಗೆ ಬಲದಾನಮಾಡುವುದು. ಮಾರ್ತಂಡದೇವನ ದೃಷ್ಟಿಯಿಂದಲೆ ಅಸುರರು ನಿರ್ವೀರ್ಯರಾಗುವುದು.	೧೦೫

ಅಧ್ಯಾಯ	ವಿಷಯ	ಪುಟ
೧೦೩.	ಸಂಜ್ಞಾದೇವಿಯು ಪತಿದೇವನ ಉಗ್ರತೇಜಸ್ಸನ್ನು ಸಹಿಸದೆ ತಂದೆಯಾದ ವಿಶ್ವಕರ್ಮನ ಬಳಿಗೆ ಹೋಗುವುದು. ತಂದೆಯ ವಚನದಂತೆ ಅಲ್ಲಿಂದ ಹೊರಟು ಅಶ್ವಿನೀರೂಪದಿಂದ ತಪವನ್ನು ಮಾಡುವುದು. ಸೂರ್ಯನು ಇದನ್ನು ತಿಳಿದು ವಿಶ್ವಕರ್ಮನಿಂದ ತೇಜಸ್ಸಿನ ಅಂಶಗಳನ್ನು ತೆಗೆಸಿಹಾಕುವುದು.	೧೧೩
೧೦೪.	ಸೂರ್ಯಬಿಂಬವನ್ನು ಸಾಣೆ ಹಿಡಿಯುತ್ತಿರುವಾಗ ಭಕ್ತ್ಯುದ್ರೇಕದಿಂದ ವಿಶ್ವಕರ್ಮನು ಸೂರ್ಯನನ್ನು ಸ್ತುತಿಸುವುದು.	೧೩೦
೧೦೫.	ಸೂರ್ಯನು ಅಶ್ವರೂಪವನ್ನು ಧರಿಸಿ ಅಶ್ವಿನೀರೂಪದಿಂದಿರುವ ಸಂಜ್ಞಾದೇವಿಯನ್ನು ಹೊಂದುವುದು. ಸೂರ್ಯನು ತನ್ನ ಪುತ್ರರನ್ನು ವಿವಿಧವಾದ ಅಧಿಕಾರಗಳಲ್ಲಿ ನಿಯೋಜಿಸುವುದು.	೧೩೫
೧೦೬.	ರಾಜ್ಯವರ್ಧನ ರಾಜನ ವೈಭವ. ಅಭ್ಯಂಜನ ಸಮಯದಲ್ಲಿ ರಾಣಿಯು ಪತಿಯ ಶಿರದಲ್ಲಿ ವಾರ್ಧಕ್ಯದ ಚಿಹ್ನೆಯನ್ನು ನೋಡಿ ಮರುಗುವುದು. ರಾಜನು ವೈರಾಗ್ಯದಿಂದ ರಾಜ್ಯವನ್ನು ತ್ಯಜಿಸಿ ಹೋಗಲು ಆಕಾಂಕ್ಷಿಸುವುದು. ಪ್ರಜೆಗಳು ಸೂರ್ಯನನ್ನು ಸ್ತುತಿಮಾಡುವುದು.	೧೪೩
೧೦೭.	ಸೂರ್ಯನ ಅನುಗ್ರಹದಿಂದ ರಾಜನಿಗೆ ದೀರ್ಘಾಯುಷ್ಯಪ್ರಾಪ್ತಿ ಮತ್ತು ರಾಜ್ಯಭೋಗ, ತನಗಾಗಿ ತಪವಂ ಗೈದ ಪ್ರಜೆಗಳಿಗೂ ದೀರ್ಘಾಯುಷ್ಯವು ಲಭಿಸುವಂತೆ ರಾಜನ ತಪಃಪ್ರಯತ್ನ. ದೇವತಾನುಗ್ರಹದಿಂದ ಇಷ್ಟಪ್ರಾಪ್ತಿ.	೧೬೪
೧೦೮.	ಸೂರ್ಯವಂಶವಿಸ್ತಾರ : ಮನುವಿಗೆ ಇಲಾ ಎಂಬ ಕನ್ಯಾಪ್ರಾಪ್ತಿ. ಮಿತ್ರಾವರುಣದೇವತಾಪ್ರಸಾದದಿಂದ ಕನ್ಯೆಗೆ ಪುತ್ರತ್ವಪ್ರಾಪ್ತಿ.	೧೭೬
೧೦೯.	ಪೃಷಧ್ರರಾಜನ ಚರಿತ್ರೆ : ಮನುಪುತ್ರನಾದ ಪೃಷಧ್ರನು ಬೇಟೆಯಾಡಲು ಹೋಗಿ ಮುನಿಯ ಹೋಮಧೇನುವನ್ನು	

ಅಧ್ಯಾಯ	ವಿಷಯ	ಪುಟ
	ವಧಿಸುವುದು. ಮುನಿಕುಮಾರಕನು ಶೂದ್ರನಾಗೆಂದು ರಾಜನನ್ನು ಶಪಿಸುವುದು.	೧೮೧
೧೧೦.	ನಾಭಾಗನು ವೈಶ್ಯಕನ್ಯೆಯನ್ನು ವಿವಾಹವಾಗಲು ಬಯಸುವುದು. ಧರ್ಮಭಂಗದಿಂದ ಭಯಗೊಂಡು ತಂದೆಯು ಅದನ್ನು ನಿರಾಕರಿಸಲು ಬಲಾತ್ಕಾರದಿಂದ ಆಕೆಯನ್ನು ಮದುವೆಯಾಗುವುದು.	೧೮೮
೧೧೧.	ವೈಶ್ಯಕನ್ಯಾಸಂಗದಿಂದ ವೈಶ್ಯನಾದ ನಾಭಾಗನು ವೈಶ್ಯಧರ್ಮದಿಂದ ಕಾಲ ಕಳೆಯುವುದು. ಅವನಲ್ಲಿ ಭಲಂದನನೆಂಬ ಪುತ್ರನ ಜನನ. ಅವನು ರಾಜ್ಯಶಾಸನಮಾಡಲು ಬಯಸಿ ನೀಪನೆಂಬ ರಾಜರ್ಷಿಯನ್ನು ಶರಣುಹೊಂದುವುದು. ಮುನಿಪ್ರಸಾದದಿಂದ ವೀರ್ಯಸಂಪನ್ನನಾಗಿ ಜ್ಞಾತಿಗಳಿಂದ ರಾಜ್ಯವನ್ನು ಗ್ರಹಿಸಿ ತಂದೆಯಲ್ಲಿ ಒಪ್ಪಿಸುವುದು. ಆಗ ವೈಶ್ಯಕನ್ಯೆಯು ಜನ್ಮಾಂತರ ಚರಿತ್ರೆಯನ್ನು ಪತಿಗೆ ನಿವೇದಿಸುವುದು.	೧೯೮
೧೧೨.	ಸುಪ್ರಭಾ ಎಂಬ ವೈಶ್ಯಕನ್ಯೆಯು ಜನ್ಮಾಂತರದಲ್ಲಿ ಸಂಭವಿಸಿದ ಶಾಪಪ್ರಭಾವವನ್ನು ನಿವೇದಿಸಿ ವೈಶ್ಯಜಾತಿಯು ನಿವೃತ್ತಿಯಾದುದರಿಂದ ರಾಜ್ಯವನ್ನು ಪರಿಗ್ರಹಿಸಬೇಕೆಂದು ಪ್ರಾರ್ಥಿಸುವುದು.	೨೦೮
೧೧೩.	ನಾಭಾಗನು ಕಡೆಗೂ ರಾಜ್ಯವನ್ನು ತ್ಯಜಿಸುವುದು. ಭಲಂದನನ ರಾಜ್ಯಭಾರ. ಭಲಂದನನಿಗೆ ವತ್ಸಪ್ರೀ ಎಂಬ ಪುತ್ರರತ್ನಾವಾಪ್ತಿ. ವತ್ಸಪ್ರೀ ಎಂಬುವನಿಗೆ ಸೌನಂದಾ ಎಂಬಾಕೆಯ ಪಾಣಿಗ್ರಹಣ. ಕುಜೃಂಭನೆಂಬ ದಾನವನ ಬಳಿಯಿದ್ದ ಸುನಂದ ಮುಸಲವನ್ನು ವ್ಯರ್ಥಗೊಳಿಸಿ ಅವನನ್ನು ವಧಿಸುವುದು.	೨೧೫
೧೧೪.	ಸುನಂದೆಯಲ್ಲಿ ಜನಿಸಿದ ವಂಶಾವಳಿಯಲ್ಲಿ ಪ್ರಜಾತಿ ಎಂಬುವನಿಗೆ ಖನಿತ್ರ ಮುಂತಾದ ಐವರು ಪುತ್ರರ ಜನನ, ಖನಿತ್ರನು ವೈಭವದಿಂದ ರಾಜ್ಯಭಾರ ಮಾಡುವುದು.	೨೩೫

ಅಧ್ಯಾಯ	ವಿಷಯ	ಪುಟ
೧೧೫.	ಖನಿತ್ರರಾಜನ ರಾಜ್ಯವೈಭವವನ್ನು ಸಹಿಸದೆ ಜ್ಞಾತಿರಾಜರ ಮಂತ್ರಿಗಳು ಶೂನ್ಯಮಾಡಿ ಅದರಿಂದ ತಾವು ವಿಪತ್ತಿಗೆ ಒಳಗಾಗುವುದು. ಖನಿತ್ರನು ಪಶ್ಚಾತ್ತಾಪದಿಂದ ತಪಮಾಡುವುದು.	೨೪೯
೧೧೬.	ಕ್ಷುಪರಾಜನ ಚರಿತ್ರೆ, ಪುರಾತನ ಕ್ಷುಪರಾಜನ ಧಾರ್ಮಿಕಗತಿಯನ್ನು ಶ್ರವಣಮಾಡಿ ಅದರಂತೆ ಕ್ಷುಪನು ವರ್ತಿಸುವುದು. ಅವನ ಮೊಮ್ಮಗನಾಗಿ ವಿವಿಂಶನೆಂಬುವನು ಜನಿಸುವುದು. ವಿವಿಂಶಕುಮಾರನ ರಾಜ್ಯವೈಭವ.	೨೫೫
೧೧೭.	ಅಪುತ್ರನಾದ ಖನೀನೇತ್ರನೆಂಬ ರಾಜನು ಬೇಟೆಯಾಡಲು ಹೋಗಿ ಸಂತತಿಯಿಲ್ಲದ ಹಾಗು ಬಹು ಸಂತತಿಯುಳ್ಳ ಎರಡು ಮೃಗಗಳ ಸಂವಾದವನ್ನು ಕೇಳಿ ಪುತ್ರಾರ್ಥಿಯಾಗಿ ಗೋಮತೀ ತೀರದಲ್ಲಿ ತಪಮಾಡುವುದು.	೨೬೧
೧೧೮.	ಇಂದ್ರನು ಪ್ರಸನ್ನನಾಗಿ ಪುತ್ರನನ್ನು ಅನುಗ್ರಹಿಸುವುದು. ಅವನು ಬಲಾಶ್ವನೆಂದು ನಾಮಾಂಕಿತನಾಗಿ ರಾಜ್ಯಾಸನಕ್ಕೆ ಬಂದು ಪ್ರಬಲ ಶತ್ರುಗಳ ಆಕ್ರಮಣದಿಂದ ಖಿನ್ನನಾಗಿ ರಣರಂಗದಲ್ಲಿ ಬಾಯಿಯ ಮೇಲೆ ಕೈಗಳನ್ನಿಟ್ಟುಕೊಂಡು ಉಸಿರುಬಿಡುವುದು. ಆಗ ಅಪಾರಸೈನ್ಯವು ಹುಟ್ಟಿ ರಾಜನಿಗೆ ಜಯವನ್ನು ಗಳಿಸುವುದು.	೨೭೨
೧೧೯.	ವೀರಾದೇವಿ–ಕರಂಧಮರಾಜ–ಇವರಲ್ಲಿ ಅವಿಕ್ಷಿತನೆಂಬ ಪುತ್ರನ ಜನನ, ಧನುರ್ವೇದ ಪಾರಂಗತನಾದ ಅವಿಕ್ಷಿತಕುಮಾರನು ಸ್ವಯಂವರಪ್ರಸ್ತಾಪದಲ್ಲಿ ಮುದತೀಕನ್ಯೆಯನ್ನು ಬಲಾತ್ಕಾರದಿಂದ ಅಪಹರಿಸಿದುದು.	೨೭೮
೧೨೦.	ಶತ್ರುಗಳು ಕನ್ಯಾಪಹಾರವನ್ನು ಸಹಿಸದೆ ಯುದ್ಧಮಾಡಿದುದು. ಕ್ರಮವಾಗಿ ಶತ್ರುಗಳಿಗೆ ಅಪಜಯವಾಗುತ್ತ ಬಂದು ಅಧರ್ಮಯುದ್ಧಕ್ಕೆ ಇಳಿದು ಅವಿಕ್ಷಿತನನ್ನು ಸೆರೆಹಿಡಿಯುವುದು.	೨೮೬

ಅಧ್ಯಾಯ	ವಿಷಯ	ಪುಟ
೧೨೧.	ಶತ್ರುಗಳ ತಂಡದಲ್ಲಿ ಏಕಾಕಿಯಾಗಿ ಸಿಕ್ಕಿಬಿದ್ದ ಪುತ್ರನ ಬಂಧನವನ್ನು ಮೆಚ್ಚಿ ವೀರಾದೇವಿಯು ತನ್ನ ಪತಿದೇವನೆದುರು ಪ್ರಶಂಸೆಮಾಡಿ ಪುತ್ರನ ಬಂಧನ ಬಿಡುಗಡೆಗೆ ಯತ್ನಮಾಡಿಸುವಳು. ಪುತ್ರನನ್ನು ಬಿಡುಗಡೆಮಾಡಿ ಆ ಕನ್ಯೆಯನ್ನು ಮದುವೆಯಾಗುವಂತೆ ತಂದೆ ಬೋಧಿಸುವುದು. ಪುತ್ರನು ನಿರಾಕರಣ ಮಾಡುವುದು. ಕನ್ಯೆಯು ನಿರಾಶಳಾಗಿ ತಪಸ್ಸಿಗೆ ಹೋಗುವುದು.	೨೯೪
೧೨೨.	ವೀರಾದೇವಿಯ ಕಿಮಿಚ್ಛಕವ್ರತಾನುಷ್ಠಾನ, ಅದಕ್ಕೆ ಸಹಾಯಕನಾದ ಪುತ್ರನು ರಾಜಗೃಹದ್ವಾರದಲ್ಲಿ ನಿಂತು "ಅರ್ಥಿಗಳ ಇಷ್ಟವನ್ನು ನೆರವೇರಿಸಿಕೊಡುವೆನು" ಎಂದು ಘೋಷಿಸುವುದು. ಆಗ ತಂದೆಯು ಬಂದು ಪುತ್ರನನ್ನು ಕುರಿತು "ನೀನು ಮದುವೆಯಾಗುವುದು ನನ್ನ ಇಷ್ಟ" ಎಂದು ಪ್ರಾರ್ಥಿಸಿ ಪುತ್ರನು ಅಂಗೀಕರಿಸುವುದು.	೩೧೨
೧೨೩.	ವನದಲ್ಲಿ ತಪವಂ ಗೈಯ್ಯುತ್ತಿದ್ದ ಮುದತೀ ಕನ್ಯೆಯನ್ನು ದೃಢಕೇಶನೆಂಬ ದಾನವನು ಬಲಾತ್ಕಾರದಿಂದ ಸೆಳೆಯುವುದು. ಆಗ ಅವಳ ಆರ್ತನಾದವನ್ನು ಬೇಟೆಗೆ ತೆರಳಿದ್ದ ಅವಿಕ್ಷಿತನು ಕೇಳಿ ಅಭಯ ನೀಡುವುದು ಮತ್ತು ರಾಕ್ಷಸನನ್ನು ವಧಿಸಿ ಕನ್ಯೆಯ ವೃತ್ತಾಂತವನ್ನು ಆಕೆಯಿಂದ ತಿಳಿಯುವನು.	೩೨೨
೧೨೪.	ಅವಿಕ್ಷಿತನಿಗೆ ಮುನಿಶಾಪದಿಂದ ಮುದತಿಯಾಗಿ ಜನಿಸಿದ ಗಂಧರ್ವಪುತ್ರಿ ಭಾಮಿನಿಯೊಡನೆ ವಿವಾಹವಿಜೃಂಭಣೆ, ದಂಪತಿಗಳಲ್ಲಿ ಮರುತ್ತ ಕುಮಾರನ ಉತ್ಪತ್ತಿ.	೩೩೪
೧೨೫.	ಪತ್ನೀ-ಪುತ್ರಸಮೇತನಾಗಿ ಅವಿಕ್ಷಿತನು ಪುರವನ್ನು ಪ್ರವೇಶಿಸುವುದು. ಕರಂಧಮನು ಅವಿಕ್ಷಿತನಿಗೆ ರಾಜ್ಯಭಾರವನ್ನು ವಹಿಸಿಕೊಳ್ಳುವಂತೆ ಬೋಧಿಸಿದುದು. ಅವಿಕ್ಷಿತನು ಹಿಂದೆ ಶತ್ರುಗಳಿಂದ ಅಪಜಯಹೊಂದಿದ ನಾಚಿಕೆಯಿಂದ ರಾಜ್ಯಭಾರವನ್ನು ಒಪ್ಪಿಕೊಳ್ಳದೆ ಮರುತ್ತನಿಗೆ ರಾಜ್ಯಪಟ್ಟಾಭಿಷೇಕ ಮಾಡುವುದು.	೩೪೫

ಅಧ್ಯಾಯ	ವಿಷಯ	ಪುಟ
೧೨೬.	ಮರುತ್ತರಾಜನು ರಾಜ್ಯವಾಳುತ್ತಿರಲು ವೀರಾದೇವಿಯು ತಪಸ್ವಿಗಳಿಗುಂಟಾದ ಸರ್ಪಪೀಡೆಯನ್ನು ಒಬ್ಬ ತಪಸ್ವಿಯ ಮೂಲಕ ಹೇಳಿ ಕಳುಹಿಸುವುದು.	೩೫೪
೧೨೭.	ಮರುತ್ತಕುಮಾರನು ದುಷ್ಟದಮನಕ್ಕಾಗಿ ಪಣತೊಟ್ಟು ಆಶ್ರಮಕ್ಕೆ ತೆರಳುವುದು. ಮರುತ್ತನ ಅಸ್ತ್ರಾಗ್ನಿಪೀಡೆಯಿಂದ ಸರ್ಪಗಳು ಭಾಮಿನಿಯಲ್ಲಿ ಶರಣುಹೊಂದುವುದು. ಭಾಮಿನಿಯ ಸಲಹೆಯಂತೆ ಅವಿಕ್ಷಿತನು ಸರ್ಪಗಳನ್ನು ರಕ್ಷಿಸಲು ತೊಡಗುವುದು.	೩೬೫
೧೨೮.	ಸರ್ಪಗಳನ್ನು ರಕ್ಷಿಸಬೇಕೆಂದು ಅವಿಕ್ಷಿತನೂ ನಿಗ್ರಹಿಸಬೇಕಂದು ಮರುತ್ತಕುಮಾರನೂ ತೊಡಗಿ ತಂದೆ-ಮಕ್ಕಳು ಯುದ್ಧಮಾಡುವ ಪ್ರಸಂಗ. ಆಗ ಮುನಿಗಳು ಸಂಧಿಮಾಡಿಸುವುದು. ಮರಣಹೊಂದಿದ ಮುನಿಗಳನ್ನು ಸರ್ಪಗಳು ಸಂಜೀವನಗೊಳಿಸುವುದು.	೩೭೨
೧೨೯.	ಮರುತ್ತನ ಪುತ್ರನಾದ ನರಿಷ್ಯಂತನ ಯಜ್ಞಸಮೃದ್ಧಿ. ಪ್ರತಿಯೊಂದು ದಿಕ್ಕುಗಳಲ್ಲಿಯೂ ಅದ್ಭುತವಾಗಿ ಯಜ್ಞಾಚರಣೆ.	೩೮೭
೧೩೦.	ನರಿಷ್ಯಂತನಿಗೆ ದಮಕುಮಾರನು ಪುತ್ರನಾಗಿ ಜನಿಸುವುದು. ಸ್ವಯಂವರದಲ್ಲಿ ಸುಮನಾ ಎಂಬ ರಾಜಪುತ್ರಿಯು ದಮನನ್ನು ವರಿಸುವುದು. ಸುಮನೆಯಲ್ಲಿ ಆಶೆಹೊಂದಿದ ಅನೇಕ ಶತ್ರುಗಳು ಯುದ್ಧಮಾಡಿ ದಮನಿಂದ ಸೋತುಹೋಗುವುದು.	೩೯೬
೧೩೧.	ನರಿಷ್ಯಂತ-ಇಂದ್ರಸೇನೆ ಇವರು ವಾನಪ್ರಸ್ಥಾಶ್ರಮಿಗಳಾಗುವುದು. ದಮಭೂಪತಿಯಿಂದ ಸೋತು ವೈರವನ್ನು ಕಟ್ಟಿಕೊಂಡ ವಪುಷ್ಮಂತನೆಂಬುವನು ದಮನಲ್ಲಿನ ದ್ವೇಷದಿಂದ ವಾನಪ್ರಸ್ಥಾಶ್ರಮಿಯಾದ ನರಿಷ್ಯಂತನನ್ನು ವಧಿಸುವುದು. ಇಂದ್ರಸೇನೆಯು ದಮನಿಗೆ ವೃತ್ತಾಂತವನ್ನು ಹೇಳಿಕಳುಹಿಸುವುದು.	೪೧೨

ಅಧ್ಯಾಯ	ವಿಷಯ	ಪುಟ
೧೩೨.	ಪಿತೃವಧವನ್ನು ಸಹಿಸಲಾರದ ದಮಭೂಪಾಲಕನು ಶತ್ರುವನ್ನು ವಧಿಸುವಂತೆ ಉಗ್ರಪ್ರತಿಜ್ಞೆಯನ್ನು ಮಾಡುವುದು.	೪೨೨
೧೩೩.	ದಮಮಹಾರಾಜನು ವಪುಷ್ಮಂತನೊಡನೆ ಹೋರಾಡಿ ಅವನನ್ನು ವಧಿಸುವುದು. ಮತ್ತು ಅವನ ರಕ್ತ-ಮಾಂಸಗಳಿಂದ ಪಿತೃ-ತರ್ಪಣಮಾಡುವುದು.	೪೨೮
೧೩೪.	ಧರ್ಮಪಕ್ಷಿಗಳು ಜೈಮಿನಿಗೆ ಹೇಳಿರುವ ಪುರಾಣಕಥೆಯ ಉಪಸಂಹಾರ. ಮಾರ್ಕಂಡೇಯಮುನಿಯು ಕ್ರೌಷ್ಟುಕಿಗೆ ಪುರಾಣವನ್ನು ಉಪದೇಶಮಾಡಿ ಆಹ್ನಿಕಕ್ಕೆ ತೆರಳುವುದು. ಪುರಾಣಶ್ರವಣಪಠನಗಳ ಫಲಶ್ರುತಿ.	೪೩೮

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣ

ಏಕನವತಿತಮೋಽಧ್ಯಾಯಃ

(ರೌಚ್ಯಾದಿಮನ್ವನ್ತರನಿರೂಪಣಮ್)

ಮಾರ್ಕಣ್ಡೇಯ ಉವಾಚ :—

ಸಾವರ್ಣಿಕಮಿದಂ ಸಮ್ಯಕ್ ಪ್ರೋಕ್ತಂ ಮನ್ವನ್ತರಂ ತವ ।
ತತ್ರೈವ ದೇವೀಮಾಹಾತ್ಮ್ಯಂ ಮಹಿಷಾಸುರಘಾತನಮ್ ॥೧॥

ಉತ್ಪತ್ತಯಶ್ಚ ಯಾ ದೇವ್ಯಾ ಮಾತೄಣಾಂ ಚ ಮಹಾಹವೇ ।
ತತ್ರೈವ ಸಮ್ಭವೋ ದೇವ್ಯಾಶ್ಚಾಮುಣ್ಡಾಯಾ ಯಥಾ ಭವಃ ॥೨॥

ತೊಂಭತ್ತೊಂದನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಇಂತು ಹೇಳಿದನು :—

೧. ಕ್ರೌಷ್ಟುಕಿಮುನಿಯೇ! ಈ ರೀತಿಯಾಗಿ ಸಾವರ್ಣಿಕವೆಂಬ ಮನ್ವಂತರ ಚರಿತ್ರೆಯು ನಿನಗೆ ನನಿಂದ ಚನ್ನಾಗಿ ವರ್ಣಿಸಲ್ಪಟ್ಟಿತು. ಹಾಗು ದೇವೀಮಾಹಾತ್ಮ್ಯವು ಮತ್ತು ಅದರಲ್ಲಿ ಸೇರಿದ ಮಹಿಷಾಸುರಸಂಹಾರ-ಚರಿತ್ರೆಯು ವರ್ಣಿಸಲ್ಪಟ್ಟವೆ.

೨. ಮತ್ತು ದೇವಿಯು ಅನೇಕ ನಿಮಿತ್ತಗಳಿಂದ ಜನ್ಮತಾಳಿದುದು, ಬ್ರಾಹ್ಮೀ ಮುಂತಾದ ಮಾತೃದೇವತೆಗಳ ಉತ್ಪತ್ತಿ ಹಾಗು ಚಾಮುಂಡಾಂಬಿಕೆಯ ಉತ್ಪತ್ತಿ ಇವು ನನ್ನಿಂದ ನಿನಗೆ ಬೋಧಿಸಲ್ಪಟ್ಟವೆ.

ಶಿವದೂತ್ಯಾಶ್ಚ ಮಾಹಾತ್ಮ್ಯಂ ವಧಃ ಶುಮ್ಭನಿಶುಮ್ಭಯೋಃ ।
ರಕ್ತಬೀಜವಧಶ್ಚೈವ ಸರ್ವಮೇತತ್ತವೋದಿತಮ್ ॥೩॥

ಶ್ರೂಯತಾಂ ಮುನಿಶಾರ್ದೂಲ ಸಾವರ್ಣಿಕಮಥಾಪರಮ್ ।
ದತ್ತಪುತ್ರಶ್ಚ ಸಾವರ್ಣಿರ್ಭಾವೀ ಯೋ ನವಮೋ ಮನುಃ ॥೪॥

ಕಥಯಾಮಿ ಮನೋಸ್ತಸ್ಯ ಯೇ ದೇವಾ ಮುನಯೋ ನೃಪಾಃ ।
ಪಾರಾ ಮರೀಚಿಭರ್ಗಾಶ್ಚ ಸುಧರ್ಮಾಣಸ್ತಥಾ ಸುರಾಃ ॥೫॥

ಏತೇ ತ್ರಿಧಾ ಭವಿಷ್ಯನ್ತಿ ಸರ್ವೇ ದ್ವಾದಶಕಾ ಗಣಾಃ ।
ತೇಷಾಮಿನ್ದ್ರೋ ಭವಿಷ್ಯಸ್ತು ಸಹಸ್ರಾಕ್ಷೋ ಮಹಾಬಲಃ ॥೬॥

---

೩. ಹಾಗು ದೇವೀಮಾಹಾತ್ಮ್ಯದಲ್ಲಿ ಸೇರಿದ ಶಿವದೂತಿಯ ಮಾಹಾತ್ಮ್ಯ, ಶುಂಭ-ನಿಶುಂಭ ಅಸುರರ ವಧೆ ಮತ್ತು ರಕ್ತಬೀಜಾಸುರನ ಸಂಹಾರ—ಇವು ಸಮಗ್ರವಾಗಿ ನನ್ನಿಂದ ನಿನಗೆ ಉಪದೇಶಿಸಲ್ಪಟ್ಟವೆ.

೪. ಮುನಿಶ್ರೇಷ್ಠನಾದ ಕ್ರೌಷ್ಟುಕಿಯೇ! ಈಗ ಒಂಭತ್ತನೆಯ ಮನುರಾಜನಾಗುವ, ದತ್ತ ಎಂಬುವನ ಪುತ್ರನಾದ ಸಾವರ್ಣಿ ಎಂಬುವನ ಮತ್ತೊಂದು ಸಾವರ್ಣಿಕ ಮನ್ವಂತರಚರಿತವನ್ನು ಹೇಳುವೆನು, ಅದನ್ನು ನೀನು ಕೇಳು.

೫. ಸಾವರ್ಣಿಮನ್ವಂತರದಲ್ಲಿರುವ ದೇವತೆ-ಮುನಿ-ಮತ್ತು ರಾಜರನ್ನು ನಾನು ಹೇಳುತ್ತೇನೆ. ಆ ಮನ್ವಂತರದಲ್ಲಿ ಪಾರ-ಮರೀಚಿಗರ್ಭ ಮತ್ತು ಸುಧರ್ಮ ಎಂಬ ನಾಮಾಂಕನವುಳ್ಳ ದೇವತೆಗಳು ಇರುವರು.

೬. ಈ ದೇವತೆಗಳು ಮೂರು ಗುಂಪಾಗಿ ಇರುವರು. ಒಂದೊಂದು ಗುಂಪಿನಲ್ಲಿ ಹನ್ನೆರಡು ಮಂದಿ ದೇವತೆಗಳು ಇರುವರು. ಈ ದೇವತೆಗಳಿಗೆ ಮಹಾಬಲಿಷ್ಠನೂ ಸಹಸ್ರ ಕಣ್ಣುಗಳಿಂದ ಕೂಡಿದವನೂ ಆದ ಇಂದ್ರನು ರಾಜನಾಗಿರುವನು.

ಸ್ವಾಮ್ಯ ತಂ ಕಾರ್ತಿಕೇಯೋ ಯೋ ವಹ್ನಿಪುತ್ರಃ ಷಡಾನನಃ ।
ಅದ್ಭುತೋ ನಾಮ ಶಕ್ರೋಽಸೌ ಭಾವೀ ತಸ್ಯಾನ್ತರೇ ಮನೋಃ ॥೭॥

ಮೇಧಾತಿಥಿರ್ವಸುಃ ಸತ್ಯೋ ಜ್ಯೋತಿಷ್ಮಾನ್ದ್ಯುತಿಮಾಂಸ್ತಥಾ ।
ಸಪ್ತರ್ಷಯೋಽನ್ಯಃ ಸಬಲಸ್ತಥಾನ್ಯೋ ಹವ್ಯವಾಹನಃ ॥೮॥

ಧೃಷ್ಟಕೇತುರ್ಬರ್ಹಕೇತುಃ ಖಡ್ಗಹಸ್ತೋ ನಿರಾಮಯಃ ।
ಪೃಥುಶ್ರವಾಸ್ತಥಾರ್ಚಿಷ್ಮಾನ್ ಭೂರಿದ್ಯುಮ್ನೋ ಬೃಹದ್ಭಯಃ ॥೯॥

ಏತೇ ನೃಪಸುತಾಸ್ತಸ್ಯ ದತ್ತಪುತ್ರಸ್ಯ ವೈ ನೃಪಾಃ ।
ಮನೋಸ್ತು ದಶಮಸ್ಯಾನ್ಯಚ್ಛೃಣು ಮನ್ವನ್ತರಂ ದ್ವಿಜ ॥೧೦॥

---

೭. ಈಗ ಕೃತ್ತಿಕೆಯರ ಪುತ್ರನೂ, ಅಗ್ನಿದೇವನಿಂದ ಜನಿಸಿದವನೂ ಆದ ಷಣ್ಮುಖಸ್ವಾಮಿಯು ದಕ್ಷಸಾವರ್ಣಿಯ ಮನ್ವಂತರದಲ್ಲಿ ಅದ್ಭುತ ಎಂಬ ನಾಮಾಂಕಿತನಾದ ಇಂದ್ರನಾಗುವನು.

೮. ಮತ್ತು ದಕ್ಷಸಾವರ್ಣಿಮನ್ವಂತರದಲ್ಲಿ ಮೇಧಾತಿಥಿ, ವಸು, ಸತ್ಯ, ಜ್ಯೋತಿಷ್ಮಾನ್, ವಸುಮಾನ್, ಸಬಲ ಹಾಗು ಹವ್ಯವಾಹನ—ಎಂಬ ನಾಮಾಂಕಿತರಾದ ಏಳುಮಂದಿಯು ಸಪ್ತರ್ಷಿಗಳಾಗಿರುವರು.

೯. ಮತ್ತು ಈ ಸಾವರ್ಣಿಕ ಮನ್ವಂತರದಲ್ಲಿದ್ದ ರಾಜರು ಧೃಷ್ಟಕೇತು, ಬರ್ಹಕೇತು, ಖಡ್ಗಹಸ್ತ, ನಿರಾಮಯ, ಪೃಥುಶ್ರವ, ಅರ್ಚಿಷ್ಮಾನ್, ಭೂರಿದ್ಯುಮ್ನ ಮತ್ತು ಬೃಹದ್ಭಯ ಎಂಬ ನಾಮಾಂಕನದಿಂದ ಪ್ರಖ್ಯಾತರಾಗುವರು.

೧೦. ಹೀಗೆ ಈ ಎಂಟುಮಂದಿ ರಾಜಪುತ್ರರು ದಕ್ಷಸಾವರ್ಣಿಯ ಮನ್ವಂತರದಲ್ಲಿ ರಾಜ್ಯಶಾಸನಮಾಡುವ ರಾಜರಾಗಿರುವರು. ಎಲೈ. ದ್ವಿಜೋತ್ತಮನೇ! ಇನ್ನು ಮುಂದೆ ಹತ್ತನೆಯ ಮನುರಾಜನ ಮನ್ವಂತರ ಚರಿತ್ರೆಯನ್ನು ನೀನು ಕೇಳು.

ಮನ್ವನ್ತರೇ ಚ ದಶಮೇ ಬ್ರಹ್ಮಪುತ್ರಸ್ಯ ಧೀಮತಃ ।
ಸುಖಾಸೀನಾ ನಿರುದ್ಧಾಶ್ಚ ದ್ವಿಪ್ರಕಾರಾಃ ಸುರಾಃ ಸ್ಮೃತಾಃ ॥೧೧॥

ಶತಸಙ್ಖ್ಯಾ ಹಿ ತೇ ದೇವಾ ಭವಿಷ್ಯಾ ಭಾವಿನೋ ಮನೋಃ ।
ಯತ್ಪುತ್ರಾಣಾಂ ಶತಂ ಭಾವಿ ತದ್ದೇವಾನಾಂ ತದಾ ಶತಮ್ ॥೧೨॥

ಶಾನ್ತಿರಿನ್ದ್ರಸ್ತಥಾ ಭಾವೀ ಸರ್ವೈರಿನ್ದ್ರಗುಣೈರ್ಯುತಃ ।
ಸಪ್ತರ್ಷೀಂಸ್ತಾನ್ನಿಬೋಧ ತ್ವಂ ಯೇ ಭವಿಷ್ಯನ್ತಿ ವೈ ತದಾ ॥೧೩॥

ಆಪೋಮೂರ್ತಿರ್ಹವಿಷ್ಮಾಂಶ್ಚ ಸುಕೃತೀ ಸತ್ಯ ಏವ ಚ ।
ನಾಭಾಗೋಽಪ್ರತಿಮಶ್ಚೈವ ವಾಸಿಷ್ಠಶ್ಚೈವ ಸಪ್ತಮಃ ॥೧೪॥

ಸುಕ್ಷೇತ್ರಶ್ಚೋತ್ತಮೌಜಾಶ್ಚ ಭೂರಿಷೇಣಶ್ಚ ವೀರ್ಯವಾನ್ ।
ಶತಾನೀಕೋಽಥ ವೃಷಭೋ ಹ್ಯನಮಿತ್ರೋ ಜಯದ್ರಥಃ ॥೧೫॥

---

೧೧. ಪ್ರಾಜ್ಞನೂ, ಬ್ರಹ್ಮಪುತ್ರನೂ ಆದ ಹತ್ತನೆಯ ಮನುರಾಜನ ಮನ್ವಂತರದಲ್ಲಿ ಸುಖಾಸೀನ–ನಿರುದ್ಧ ಎಂದು ಎರಡು ಗುಂಪಾಗಿ ದೇವತೆಗಳು ಇರುವರೆಂದು ಪ್ರಾಜ್ಞರಿಂದ ಸ್ಮರಿಸಲ್ಪಟ್ಟಿದೆ.

೧೨. ಮುಂದೆ ಬರುವ ಆ ಮನುವಿನ ಮನ್ವಂತರದಲ್ಲಿ ಒಂದುನೂರು ಮಂದಿ ದೇವತೆಗಳು ಎರಡು ಗುಂಪಾಗಿರುವರು. ಆ ಮನ್ವಂತರದಲ್ಲಿ ದೇವತೆಗಳೂ ರಾಜಪುತ್ರರೂ ಒಂದುನೂರು ಮಂದಿ ಇರುವರು.

೧೩. ಹಾಗು ಸಮಸ್ತ ಇಂದ್ರಗುಣಗಳಿಂದ ಕೂಡಿದ ಶಾಂತಿ ಎಂಬ ನಾಮಾಂಕಿತನಾದ ಇಂದ್ರನು ದೇವರಾಜನಾಗಿರುವನು. ಮತ್ತು ಆ ಮನ್ವಂತರದಲ್ಲಿ ಇರುವ ಸಪ್ತರ್ಷಿಗಳನ್ನು ಹೇಳುವೆನು. ನೀನು ಅವನ್ನು ಕೇಳು.

೧೪. ಬ್ರಹ್ಮಪುತ್ರನ ಮನ್ವಂತರದಲ್ಲಿ ಆಪೋಮೂರ್ತಿ, ಹವಿಷ್ಮಾನ್, ಸುಕೃತಿ, ಸತ್ಯ, ನಾಭಾಗ, ಅಪ್ರತಿಮ ಮತ್ತು ವಾಸಿಷ್ಠ ಎಂಬ ನಾಮಾಂಕಿತರಾದ ಏಳು ಮಂದಿಯು ಸಪ್ತರ್ಷಿಗಳಾಗಿರುವರು.

೧೫. ಹಾಗು ಆ ಮನ್ವಂತರದ ರಾಜರು ಕ್ರಮವಾಗಿ ಸುಕ್ಷೇತ್ರ, ಉತ್ತಮೌಜ, ಭೂರಿಷೇಣ, ಶತಾನೀಕ, ವೀರ್ಯವಾನ್, ವೃಷಭ, ಅನಮಿತ್ರ ಮತ್ತು ಜಯದ್ರಥ ಎಂಬ ನಾಮಾಂಕಿತರಾಗಿ ಪ್ರಖ್ಯಾತರಾಗುವರು.

ಭೂರಿದ್ಯುಮ್ನಃ ಸುಪರ್ವಾ ಚ ತಸ್ಯೈತೇ ತನಯಾ ಮನೋಃ ।
ಭವಿಷ್ಯಾ ಧರ್ಮಪುತ್ರಸ್ಯ ಸಾವರ್ಣಸ್ಯಾನ್ತರಂ ಶೃಣು ||೧೬||

ವಿಹಙ್ಗಮಾಃ ಕಾಮಗಾಶ್ಚ ನಿರ್ಮಾಣರತಯಸ್ತಥಾ ।
ತ್ರಿಃಪ್ರಕಾರಾ ಭವಿಷ್ಯನ್ತಿ ಏಕೈಕಸ್ತ್ರಿಂಶಕೋ ಗಣಃ ||೧೭||

ಮಾಸರ್ತುದಿವಸಾ ಯೇ ತು ನಿರ್ಮಾಣಪತಯಸ್ತು ತೇ ।
ವಿಹಙ್ಗಮಾ ರಾತ್ರಯೋಽಥ ಮೌಹೂರ್ತಾಃ ಕಾಮಗಾ ಗಣಾಃ||೧೮||

ಇನ್ದ್ರೋ ವೃಷಾಖ್ಯೋ ಭವಿತಾ ತೇಷಾಂ ಪ್ರಖ್ಯಾತವಿಕ್ರಮಃ ।
ಹವಿಷ್ಮಾಂಶ್ಚ ವರಿಷ್ಠಶ್ಚ ಋಷ್ಟಿರನ್ಯಸ್ತಥಾರುಣಿಃ ||೧೯||

---

೧೬. ಹಾಗು ಭೂರಿದ್ಯುಮ್ನ–ಸುವರ್ಚ ಇವರೀರ್ವರು ಸೇರಿ ಹಿಂದೆ ಹೇಳಿದ ವ್ಯಕ್ತಿಗಳು ಆ ಮನುರಾಜನ ಪುತ್ರರಾಗಿರುವರು. ಇನ್ನು ಮುಂದೆ ಧರ್ಮಪುತ್ರನಾದ ಮನುರಾಜನ ಮತ್ತೊಂದು ಮನ್ವಂತರವನ್ನು ಕೇಳು.

೧೭. ಧರ್ಮಪುತ್ರನ ಮನ್ವಂತರ ಸಮಯದಲ್ಲಿ ವಿಹಂಗಮ, ಕಾಮಗ ಮತ್ತು ನಿರ್ಮಾಣಪತಿ ಎಂಬ ಮೂರು ಗುಂಪಾಗಿ ದೇವತೆಗಳಿರುವರು. ಆ ದೇವತೆಗಳ ಒಂದೊಂದು ಗುಂಪು ಮೂವತ್ತು ವ್ಯಕ್ತಿಗಳಿಂದ ಕೂಡಿರುವುದು.

೧೮. ದಿನ–ಮಾಸ–ಋತು ಎಂಬ ಕಾಲಾಂಶಗಳನ್ನು ನಡೆಸುವ ಕಾಲಾಭಿಮಾನಿದೇವತೆಗಳು ನಿರ್ಮಾಣಪತಿಯೆನಿಸುವರು. ರಾತ್ರಿಯ ಅಭಿಮಾನಿಗಳಾದ ದೇವತೆಗಳು ವಿಹಂಗಮ ಎಂದೂ ಮುಹೂರ್ತ ಅಭಿಮಾನಿಗಳಾದ ದೇವತೆಗಳು ಕಾಮಗ ಎಂದೂ ಖ್ಯಾತಿಯನ್ನು ಹೊಂದಿರುವರು.

೧೯. ಈ ದೇವತೆಗಳಿಗೆ ಪ್ರಖ್ಯಾತವಾದ ವಿಕ್ರಮವುಳ್ಳವನೂ, ವೃಷ ಎಂಬ ನಾಮಾಂಕನವುಳ್ಳವನೂ ಆದ ಇಂದ್ರನು ರಾಜನಾಗಿರುವನು. ಆ ಮನ್ವಂತರದಲ್ಲಿದ್ದ ಸಪ್ತರ್ಷಿಗಳಲ್ಲಿ ಕೆಲವರು ಕ್ರಮವಾಗಿ ಹವಿಷ್ಮಾನ್, ವರಿಷ್ಠ, ಅರುಣಪುತ್ರನಾದ ಋಷ್ಟಿ ಎಂಬ ನಾಮಾಂಕಿತರಾಗಿರುವರು.

ನಿಶ್ಚರಶ್ಚಾನಘಶ್ಚೈವ ವಿಷ್ಟಿಶ್ಚಾನ್ಯೋ ಮಹಾಮುನಿಃ ।
ಸಪ್ತರ್ಷಯೋಽನ್ತರೇ ತಸ್ಮಿನ್ನಗ್ನಿತೇಜಾಶ್ಚ ಸಪ್ತಮಃ ||೨೦||

ಸರ್ವತ್ರಗಃ ಸುಶರ್ಮಾ ಚ ದೇವಾನೀಕಃ ಪುರೂದ್ವಹಃ ।
ಹೇಮಧನ್ವಾ ದೃಢಾಯುಶ್ಚ ಭಾವಿನಸ್ತತ್ಸುತಾ ನೃಪಾಃ ||೨೧||

ದ್ವಾದಶೇ ರುದ್ರಪುತ್ರಸ್ಯ ಪ್ರಾಪ್ತೇ ಮನ್ವನ್ತರೇ ಮನೋಃ ।
ಸಾವರ್ಣಾಖ್ಯಾಶ್ಚ ಯೇ ದೇವಾ ಮುನಯಶ್ಚ ಶೃಣುಷ್ವ ತಾನ್ ||೨೨||

ಸುಧರ್ಮಾಣಃ ಸುಮನಸೋ ಹರಿತೋ ರೋಹಿತಸ್ತಥಾ ।
ಸುವರ್ಣಾಶ್ಚ ಸುರಾಸ್ತತ್ರ ಪಞ್ಚೈತೇ ದಶಕಾ ಗಣಾಃ ||೨೩||

ತೇಷಾಮಿನ್ದ್ರಸ್ತು ವಿಜ್ಞೇಯ ಋತಧಾಮಾ ಮಹಾಬಲಃ ।
ಸರ್ವೈರಿನ್ದ್ರಗುಣೈರ್ಯುಕ್ತಾಃ ಸಪ್ತರ್ಷೀನಪಿ ಮೇ ಶೃಣು ||೨೪||

---

೨೦. ಮತ್ತು ನಿಶ್ಚರ, ಅನಘ, ವಿಷ್ಟಿ ಎಂಬ ನಾಮಾಂಕಿತರಾಗಿ ಮತ್ತೆ ಕೆಲವರು ಇರುವರು. ಅಗ್ನಿತೇಜ ಎಂಬ ಏಳನೆಯ ಮಹಾಮುನಿಯು ಸೇರಿ ಹಿಂದೆ ಹೇಳಿದ ಏಳುಮಂದಿ ಸಪ್ತರ್ಷಿಗಳೆನಿಸಿರುವರು.

೨೧. ಮುಂದೆ ಬರುವ ಧರ್ಮಪುತ್ರನೆಂಬ ಮನುವಿಗೆ ಸರ್ವತ್ರಗ, ಸುಶರ್ಮ, ದೇವಾನೀಕ, ಪುರೂದ್ವಹ, ಹೇಮಧನ್ವಾ ಮತ್ತು ದೃಢಾಯು ಎಂಬುವರು ಪುತ್ರರಾಗಿ ಜನಿಸಿ ರಾಜರಾಗಿರುವರು-

೨೨. ರುದ್ರಪುತ್ರನೆಂಬ ಮನುರಾಜನ ಹನ್ನೆರಡನೆಯ ಮನ್ವಂತರವು ಪ್ರಾಪ್ತವಾಗಲು ಆಗಿನ ಸಾವರ್ಣ ಎಂದು ಕರೆಯಲ್ಪಡುವ ದೇವತೆಗಳನ್ನೂ ಮತ್ತು ಸಪ್ತರ್ಷಿಗಳನ್ನೂ ಹೇಳುವೆನು. ಅದನ್ನು ಕೇಳು.

೨೩. ಹನ್ನೆರಡನೆಯ ಮನ್ವಂತರದ ದೇವತೆಗಳು ಸುಧರ್ಮ, ಸುಮನ, ಹರಿತ, ರೋಹಿತ ಮತ್ತು ಸುವರ್ಣ ಎಂದು ನಾಮಾಂಕಿತರಾಗಿರುವರು. ಈ ಐದು ಗುಂಪುಗಳು ಪ್ರತ್ಯೇಕವಾಗಿ ಹತ್ತುಮಂದಿಯಿಂದ ಕೂಡಿರುವುವು.

೨೪. ಮಹಾವೀರ್ಯಸಂಪನ್ನನೂ ಋತಧಾಮ ಎಂಬ ನಾಮಾಂಕಿತನೂ ಆದ ಇಂದ್ರನು ಆ ದೇವತೆಗಳಿಗೆ ರಾಜನಾಗಿರುವನು. ಆ ಇಂದ್ರನು ಸಮಸ್ತ ಇಂದ್ರಲಕ್ಷಣಗಳಿಂದ ಕೂಡಿಕೊಂಡಿರುವನು. ಆ ಮನ್ವಂತರದ ಸಪ್ತರ್ಷಿಗಳನ್ನು ಕೇಳು.

ದ್ಯುತಿಸ್ತಪಸ್ವೀ ಸುತಪಾಸ್ತಪೋಮೂರ್ತಿಸ್ತಪೋನಿಧಿಃ ।
ತಪೋರತಿಸ್ತಥೈವಾನ್ಯಃ ಸಪ್ತಮಸ್ತು ತಪೋಧೃತಿಃ ॥೨೫॥

ದೇವವಾನುಪದೇವಶ್ಚ ದೇವಶ್ರೇಷ್ಠೋ ವಿದೂರಥಃ ।
ಮಿತ್ರವಾನ್ಮಿತ್ರವಿನ್ದಶ್ಚ ಭಾವಿನಸ್ತತ್ಸುತಾ ನೃಪಾಃ ॥೨೬॥

ತ್ರಯೋದಶಸ್ಯ ಪರ್ಯಾಯೋ ರೌಚ್ಯಾಖ್ಯಸ್ಯ ಮನೋಃ ಸುರಾನ್ ।
ಸಪ್ತರ್ಷೀಂಶ್ಚ ನೃಪಾಂಶ್ಚೈವ ಗದತೋ ಮೇ ನಿಶಾಮಯ ॥೨೭॥

ಸುಧರ್ಮಾಣಃ ಸುರಾಸ್ತತ್ರ ಸುಕರ್ಮಾಣಸ್ತಥಾಪರೇ ।
ಸುಶರ್ಮಾಣಃ ಸುರಾ ಹ್ಯೇತೇ ಸಮಸ್ತಾ ಮುನಿಸತ್ತಮ ॥೨೮॥

---

೨೫. ಆ ಮನ್ವಂತರದಲ್ಲಿರುವ ಸಪ್ತರ್ಷಿಗಳು ಕ್ರಮವಾಗಿ ದ್ಯುತಿ, ತಪಸ್ವೀ, ಸುತಪ, ತಪೋಮೂರ್ತಿ, ತಪೋನಿಧಿ, ತಪೋರತಿ ಮತ್ತು ತಪೋಧೃತಿ ಎಂಬ ನಾಮಾಂಕನಗಳನ್ನು ಹೊಂದಿರುವರು.

೨೬. ಮತ್ತು ದೇವವಾನ್, ಉಪದೇವ, ದೇವಶ್ರೇಷ್ಠ, ವಿದೂರಥ, ಮಿತ್ರವಾನ್, ಮಿತ್ರವಿಂದ ಎಂಬುವರು ಆ ಮನುರಾಜನ ಪುತ್ರರಾಗಿ ಜನಿಸಿ ಭೂಮಿಯನ್ನು ಶಾಸನಮಾಡುವರು.

೨೭. ಇನ್ನು ಮುಂದೆ ಹದಿಮೂರನೆಯ ರೌಚ್ಯ ಎಂಬ ಮನುರಾಜನ ಮನ್ವಂತರದ ಪರ್ಯಾಯವಲ್ಲಿ ಇರುವ ದೇವತೆ, ಸಪ್ತರ್ಷಿ ಮತ್ತು ರಾಜಪುತ್ರರನ್ನು ಬೋಧಿಸುವೆನು. ಅವನ್ನು ನನ್ನಿಂದ ಕೇಳು.

೨೮. ಮುನಿಶ್ರೇಷ್ಠನಾದ ಕ್ರೌಷ್ಟುಕಿಮುನಿಯೇ ! ರೌಚ್ಯವೆಂಬ ಮನುವಿನ ಮನ್ವಂತರದಲ್ಲಿ ಸುಧರ್ಮ ಎಂಬ ದೇವತೆಗಳ ಗುಂಪು ಒಂದಾಗಿತ್ತು. ಸುಕರ್ಮ ಎಂಬ ದೇವತೆಗಳ ಗುಂಪು ಮತ್ತೊಂದು. ಹಾಗು ಸುಶರ್ಮ ಎಂಬ ದೇವತೆಗಳ ಗುಂಪು ಮೂರನೆಯದಾಗಿತ್ತು.

ಮಹಾಬಲೋ ಮಹಾವೀರ್ಯಸ್ತೇಷಾಮಿನ್ದ್ರೋ ದಿವಸ್ಪತಿಃ ।
ಭವಿಷ್ಯಾನಥ ಸಪ್ತರ್ಷೀನ್ ಗದತೋ ಮೇ ನಿಶಾಮಯ ॥೨೯॥

ಧೃತಿಮಾನವ್ಯಯಶ್ಚೈವ ತತ್ತ್ವದರ್ಶೀ ನಿರುತ್ಸುಕಃ ।
ನಿರ್ಮೋಹಃ ಸುತಪಾಶ್ಚಾನ್ಯೋ ನಿಷ್ಪ್ರಕಮ್ಪಶ್ಚ ಸತ್ತಮಃ ॥೩೦॥

ಚಿತ್ರಸೇನೋ ವಿಚಿತ್ರಶ್ಚ ನಿಯತಿರ್ನಿರ್ಭಯೋ ದೃಢಃ ।
ಸುನೇತ್ರಃ ಕ್ಷತ್ರಬುದ್ಧಿಶ್ಚ ಸುವ್ರತಶ್ಚೈವ ತತ್ಸುತಾಃ ॥೩೧॥

ಇತಿ ಶ್ರೀಮಾರ್ಕಣ್ಡೇಯ ಮಹಾಪುರಾಣೇ ರೌಚ್ಯಮನ್ವನ್ತರೇ
ಏಕನವತಿತಮೋಽಧ್ಯಾಯಃ

---

೨೯. ಮಹಾಬಲಿಷ್ಠನೂ, ಅತಿಶಯವಾದ ವೀರ್ಯಸಂಪನ್ನನೂ ಆದ ದಿವಸ್ಪತಿಯೆಂಬುವನು ಆ ದೇವತೆಗಳಿಗೆ ರಾಜನಾಗಿದ್ದನು. ಇನ್ನು ಮುಂದೆ ಆ ಮನ್ವಂತರದಲ್ಲಿ ಭವಿಷ್ಯರಾಗುವ ಸಪ್ತರ್ಷಿಗಳನ್ನು ಹೇಳುವೆನು. ನೀನು ಅದನ್ನು ಕೇಳು.

೩೦. ಆಗಿನ ಸಪ್ತರ್ಷಿಗಳು ಕ್ರಮವಾಗಿ ಧೃತಿಮಾನ್, ಅವ್ಯಯ, ತತ್ತ್ವದರ್ಶಿ, ನಿರುತ್ಸುಕ, ನಿರ್ಮೋಹ, ಸುತಪ ಮತ್ತು ನಿಷ್ಪ್ರಕಂಪ ಎಂಬ ನಾಮಾಂಕನಗಳನ್ನು ಹೊಂದಿರುವರು.

೩೧. ಸುನೇತ್ರ, ಕ್ಷತ್ರಬುದ್ಧಿ, ಸುವ್ರತ, ಚಿತ್ರಸೇನ, ವಿಚಿತ್ರ, ನಿಯತಿ, ನಿರ್ಭಯ ಮತ್ತು ದೃಢ ಎಂಬುವರು ಆ ಮನುರಾಜನ ಪುತ್ರರಾಗಿ ಜನಿಸಿ ರಾಜ್ಯಭಾರಮಾಡುವರು.

ಮಾರ್ಕಂಡೇಯ ಮಹಾಪುರಾಣದಲ್ಲಿ ತೊಂಭತ್ತೊಂದನೆಯ
ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ದ್ವಿನವತಿತಮೋಽಧ್ಯಾಯಃ

(ರುಚಿಪ್ರಜಾಪತಯೇ ಪಿತೃಭಿರ್ದಾರಸಂಗ್ರಹಕರ್ತವ್ಯತೋಪದೇಶಃ)

ಮಾರ್ಕಣ್ಡೇಯ ಉವಾಚ :—

ರುಚಿಃ ಪ್ರಜಾಪತಿಃ ಪೂರ್ವಂ ನಿರ್ಮಮೋ ನಿರಹಙ್ಕೃತಿಃ ।
ಯತ್ರಾಸ್ತಮಿತಶಾಯೀ ಚ ಚಚಾರ ಪೃಥಿವೀಮಿಮಾಮ್ ॥೧॥

ಅನಗ್ನಿಮನಿಕೇತಂ ತಮೇಕಾಹಾರಮನಾಶ್ರಮಮ್ ।
ವಿಮುಕ್ತಸಙ್ಗಂ ತಂ ದೃಷ್ಟ್ವಾ ಪ್ರೋಚುಸ್ತತ್ಪಿತರೋ ಮುನಿಮ್ ॥೨॥

ತೊಂಭತ್ತೆರಡನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಇಂತೆಂದನು :—

೧. ಪೂರ್ವಕಾಲದಲ್ಲಿ ಮಮತೆ-ಅಹಂಕಾರಗಳಿಲ್ಲದ ರುಚಿ ಎಂಬ ಪ್ರಜಾಪತಿಯಿದ್ದನು. ಅವನು ಸೂರ್ಯಾಸ್ತಮಯವಾದಮೇಲೆ ಒಂದೆಡೆಯಲ್ಲಿ ಮಲಗುವವನೂ, ಮಿಕ್ಕ ಸಮಯದಲ್ಲೆಲ್ಲ ಭೂಸಂಚಾರಮಾಡುವವನೂ ಆಗಿದ್ದನು.

೨. ಅವನು ಕರ್ಮಾಗ್ನಿಯಿಲ್ಲದವನೂ, ಮನೆಯಿಲ್ಲದವನೂ, ಒಪ್ಪತ್ತಿನ ಆಹಾರವನ್ನು ಸೇವಿಸುವವನೂ, ನಿರಾಶ್ರಮಿಯೂ ಮತ್ತು ಸಮಸ್ತ ಸಂಗವನ್ನು ತೊರೆದ ಮುನಿಯೂ ಆಗಿರುವುದನ್ನು ನೋಡಿ ಅವನ ಪಿತೃಗಳು ಅವನಿಗೆ ಹೀಗೆ ಹೇಳಿದರು.

ಪಿತರ ಊಚುಃ :—

ವತ್ಸ ಕಸ್ಮಾತ್ತ್ವಯಾ ಪುಣ್ಯೋ ನ ಕೃತೋ ದಾರಸಙ್ಗ್ರಹಃ ।
ಸ್ವರ್ಗಾಪವರ್ಗಹೇತುತ್ವಾದ್ಬನ್ಧಸ್ತೇನಾನಿಶಂ ವಿನಾ ॥೩॥

ಗೃಹೀ ಸಮಸ್ತದೇವಾನಾಂ ಪಿತ್ರೂಣಾಂ ಚ ತಥಾರ್ಹಣಾವ್ ।
ಋಷೀಣಾಮತಿಥೀನಾಂ ಚ ಕುರ್ವಂಲ್ಲೋಕಾನುಪಾಶ್ನುತೇ ॥೪॥

ಸ್ವಾಹೋಚ್ಚಾರಣತೋ ದೇವಾನ್ ಸ್ವಧೋಚ್ಚಾರಣತಃ ಪಿತ್ರೂನ್ ।
ವಿಭಜತ್ಯನ್ನದೋ ನೂನಂ ಭೂತಾದ್ಯಾನತಿಥೀನಪಿ ॥೫॥

ಸ ತ್ವಂ ದೈವಾದೃಣಾದ್ಬನ್ಧಂ ಬನ್ಧಮಸ್ಮದೃಣಾದಪಿ ।
ಅವಾಪ್ನೋಷಿ ಮನುಷ್ಯರ್ಷಿಭೂತೇಭ್ಯಶ್ಚ ದಿನೇ ದಿನೇ ॥೬॥

ಪಿತೃಗಳು ಹೀಗೆಂದರು :—

೩. ಪುತ್ರನೇ ! ನಿನ್ನಿಂದ ಪವಿತ್ರವಾದ ಪಾಣಿಗ್ರಹಣಸಂಸ್ಕಾರವು ಏಕೆ ಹೊಂದಲ್ಪಡಲಿಲ್ಲ. ವಿವಾಹಸಂಸ್ಕಾರವು ಸ್ವರ್ಗ–ಅಪವರ್ಗಗಳಿಗೆ ಕಾರಣ-ವಾದ್ದರಿಂದ ಅದರಿಂದ ಸಂಸ್ಕೃತನಾಗದಿದ್ದರೆ ಯಾವಾಗಲೂ ಬಂಧವು ತಪ್ಪುವುದಿಲ್ಲ.

೪. ಗೃಹಸ್ಥಾಶ್ರಮಿಯಾದ ಮಾನವನು ಸಮಸ್ತ ದೇವತೆಗಳು, ಪಿತೃಗಳು, ಋಷಿಗಳು ಮತ್ತು ಅತಿಥಿ–ಅಭ್ಯಾಗತರಿಗೆ ಪಂಚಮಹಾಯಜ್ಞಗಳನ್ನು ಆಚರಿಸಿ ಪೂಜಿಸುತ್ತ ಪುಣ್ಯಲೋಕಗಳನ್ನು ಹೊಂದುತ್ತಾನೆ.

೫. ಮತ್ತು ಗೃಹಸ್ಥಾಶ್ರಮಿಯು ಸ್ವಾಹಾ ಮಂತ್ರವನ್ನು ಉಚ್ಚರಿಸುತ್ತ ಹೋಮ ಹವನಗಳನ್ನು ಮಾಡಿ ದೇವತೆಗಳನ್ನೂ, ಸ್ವಧಾ ಮಂತ್ರವನ್ನು ಉಚ್ಚರಿಸಿ ಶ್ರಾದ್ಧಕರ್ಮಗಳನ್ನು ಮಾಡಿ ಪಿತೃಗಳನ್ನೂ ಭೂತಯಜ್ಞ-ಮನುಷ್ಯಯಜ್ಞಗಳನ್ನು ಮಾಡಿ ಸಮಸ್ತ ಭೂತ–ಅತಿಥಿಗಳನ್ನೂ ಅನ್ನದಾನದಿಂದ ತೃಪ್ತಿಪಡಿಸುವನು.

೬. ನೀನು ಮಾತ್ರ ಹೀಗೆ ಆವಶ್ಯಕವಾದ ಕರ್ಮಾನುಷ್ಠಾನವನ್ನು ಬಿಟ್ಟು ದೇವಋಣ-ಪಿತೃಋಣ ಬದ್ಧನಾಗಿದ್ದೀಯೆ. ಮತ್ತು ಮನುಷ್ಯ-ಋಷಿ-ಭೂತಗಳನ್ನು ಉದ್ದೇಶಿಸಿ ಮಾಡಬೇಕಾದ ಋಣಪರಿಹಾರದ ಕರ್ಮಾನುಷ್ಠಾನ-ವನ್ನು ಮಾಡದೇ ಆ ಋಣದಿಂದಲೂ ಬದ್ಧನಾಗಿರುತ್ತೀಯೆ

ಅನುತ್ಪಾದ್ಯ ಸುತಾನ್ದೇವಾನಸನ್ತರ್ಪ್ಯ ಪಿತೄಂಸ್ತಥಾ ।
ಭೂತಾದೀಂಶ್ಚ ಕಥಂ ಮೌಢ್ಯಾತ್ಸುಗತಿಂ ಗನ್ತುಮಿಚ್ಛಸಿ ॥೭॥

ಕ್ಲೇಶಮೇವೈಹಿಕಂ ಪುತ್ರ ಮನ್ಯಾಮೋಽತ್ರ ಭವೇತ್ತವ ।
ಮೃತಸ್ಯ ನರಕಂ ತದ್ವತ್ಕ್ಲೇಶಮೇವಾನ್ಯಜನ್ಮನಿ ॥೮॥

ರುಚಿರುವಾಚ :—

ಪರಿಗ್ರಹೋಽತಿದುಃಖಾಯ ಪಾಪಾಯಾಧೋಗತಿಸ್ತಥಾ ।
ಭವತ್ಯತೋ ಮಯಾ ಪೂರ್ವಂ ನ ಕೃತೋ ದಾರಸಙ್ಗ್ರಹಃ ॥೯॥

ಆತ್ಮನಃ ಸಂಯಮೋ ಯೋಽಯಂ ಕ್ರಿಯತೇಽಕ್ಷನಿಯನ್ತ್ರಣಾತ್ ।
ಸ ಮುಕ್ತಿಹೇತುರ್ನ ಭವತ್ಯಸಾವಪಿ ಪರಿಗ್ರಹಾತ್ ॥೧೦॥

೭- ಪುತ್ರರನ್ನು ಹೊಂದದೆ, ದೇವ-ಪಿತೃ-ಮನುಷ್ಯ-ಋಷಿ-ಭೂತಗಳನ್ನು ಅಯಾಯ ಕರ್ಮಾನುಷ್ಠಾನದಿಂದ ತೃಪ್ತಿ ಪಡಿಸದೆ ಹೀಗೆ ಮೂಢತನದಿಂದ ಇದ್ದ ನೀನು ಹೇಗೆ ತಾನೆ ಸದ್ಗತಿಯನ್ನು ಹೊಂದುತ್ತೀಯೆ?

೮. ಎಲೈ, ಪುತ್ರನೇ! ಸಮಸ್ತ ಕರ್ಮವನ್ನು ತ್ಯಜಿಸಿದ ನಿನಗೆ ಇಹಲೋಕದಲ್ಲಿ ಕಷ್ಟವೆಂದೇ ನಾವು ತಿಳಿದಿರುವೆವು. ಇಷ್ಟೇ ಅಲ್ಲ, ನಿನಗೆ ಮರಣಾನಂತರದಲ್ಲಿ ನರಕಯಾತನೆಯೂ ಮುಂದಿನ ಜನ್ಮಾಂತರದಲ್ಲಿ ಮತ್ತೆ ಕ್ಲೇಶವೂ ಸಂತತವಾಗಿ ಉಂಟಾಗುವುದು.

ರುಚಿ ಪ್ರಜಾಪತಿಯು ಹೇಳಿದನು :—

೯. ಪತ್ನೀ-ಪುತ್ರಾದಿ ಪರಿವಾರದ ಸಂಗವು ಅತ್ಯಂತ ದುಃಖವನ್ನೂ, ಪಾಪವನ್ನೂ ಮತ್ತು ಅಧೋಗತಿಯನ್ನೂ ಉಂಟುಮಾಡುವುದು. ಆದುದರಿಂದ ನಾನು ಹಿಂದೆ ಪತ್ನೀ ಪಾಣಿಗ್ರಹಣವನ್ನು ಮಾಡಿರುವುದಿಲ್ಲ.

೧೦. ಮತ್ತು ಇಂದ್ರಿಯಗಳನ್ನು ನಿಗ್ರಹಿಸಿ ಸಂಪಾದಿಸುವ ಯಾವ ಆತ್ಮಸಂಯಮವು ಮುಕ್ತಿಗೆ ಕಾರಣವಾಗುವುದೋ ಆ ಆತ್ಮಸಂಯಮವು ಕೂಡ ಪತ್ನೀ-ಮುಂತಾದ ಪರಿಗ್ರಹವಿರುವಾಗ ಉಂಟಾಗುವುದಿಲ್ಲ.

ಪ್ರಕ್ಷಾಲ್ಯತೇಽನುದಿವಸಂ ಯದಾತ್ಮಾ ನಿಷ್ಪರಿಗ್ರಹೈಃ ।
ಮಮತ್ವಪಙ್ಕದಿಗ್ಧೋಽಪಿ ಚಿತ್ತಾಮ್ಭೋಭಿರ್ವರಂ ಹಿ ತತ್ ॥೧೧॥

ಅನೇಕಭವಸಮುದ್ಭೂತಕರ್ಮಪಙ್ಕಾಙ್ಕಿತೋ ಬುಧೈಃ ।
ಆತ್ಮಾ ಸದ್ವಾಸನಾತೋಯೈಃ ಪ್ರಕ್ಷಾಲ್ಯೋ ನಿಯತೇನ್ದ್ರಿಯೈಃ ॥೧೨॥

ಪಿತರ ಊಚುಃ :—

ಯುಕ್ತಂ ಪ್ರಕ್ಷಾಲನಂ ಕರ್ತುಮಾತ್ಮನೋ ನಿಯತೇನ್ದ್ರಿಯೈಃ ।
ಕಿಂ ತು ಲೇಪಾಯ ಮಾರ್ಗೋಽಯಂ ಯತ್ರ ತ್ವಂ ಪುತ್ರ ವರ್ತಸೇ ॥೧೩॥

ಪರಂ ತು ದಾನೈರಶುಭಂ ನುದ್ಯತೇಽನಭಿಸನ್ಧಿತೈಃ ।
ಫಲೈಸ್ತಥೋಪಭೋಗೈಶ್ಚ ಪೂರ್ವಂ ಕರ್ಮ ಶುಭಾಶುಭೈಃ ॥೧೪॥

---

೧೧. ಇವಕ್ಕಿಂತಲೂ ಮಮತ್ವಭಾವನೆಯೆಂಬ ಕೆಸರಿನಿಂದ ಮಲಿನವಾದ ಆತ್ಮವನ್ನು ಪ್ರತಿದಿನವೂ ಪರಿಗ್ರಹಶೂನ್ಯತೆಯಿಂದ ನಿರ್ಲಿಪ್ತವಾದ ಚಿತ್ತವೆಂಬ ನೀರಿನಿಂದ ತೊಳೆಯುತ್ತಿರುವುದೆಂಬುದು ಎಷ್ಟೋ ಉತ್ತಮವಾದುದು.

೧೨. ಪ್ರಾಜ್ಞರು ಜಿತೇಂದ್ರಿಯರಾಗಿ ಹಿಂದಿನ ಅನೇಕ ಜನ್ಮಾಂತರಗಳಲ್ಲಿ ಮಾಡಿದ ಕರ್ಮಗಳೆಂಬ ಕೆಸರಿನಿಂದ ಮುಚ್ಚಿಹೋದ ಆತ್ಮವನ್ನು ಉತ್ತಮ ಸಂಸ್ಕಾರಗಳೆಂಬ ನೀರಿನಿಂದ ತೊಳೆಯುತ್ತಿರುವುದು ಶ್ರೇಯಸ್ಕರವು.

ಪಿತೃಗಳು ಮತ್ತೆ ಇಂತೆಂದರು :—

೧೩. ಪುತ್ರನೇ! ಮಾನವರು ಜಿತೇಂದ್ರಿಯರಾಗಿ ಆತ್ಮವನ್ನು ಶುದ್ಧಗೊಳಿಸಬೇಕೆಂಬುದು ಯುಕ್ತವಾದುದು. ಆದರೆ ನೀನು ಈಗ ಯಾವ ಮಾರ್ಗದಲ್ಲಿದ್ದೀಯೊ ಆ ಮಾರ್ಗವು ಬಂಧಲೇಪಗಳನ್ನು ಉಂಟುಮಾಡುವುದಾಗಿದೆ.

೧೪. ಫಲಾಪೇಕ್ಷೆಯನ್ನು ಮಾಡದೆ ಆಯಾಯ ಹವ್ಯ-ಕವ್ಯ ಮುಂತಾದ ದಾನಗಳಿಂದ ಹಿಂದಿನ ಪಾಪವು ಕಳೆದುಹೋಗುವುದು. ಹಾಗು ಶುಭ-ಅಶುಭವಾದ ಫಲೋಪಭೋಗಗಳಿಂದಲೂ ಪೂರ್ವಕರ್ಮಗಳು ನಶಿಸಿಹೋಗುವುವು.

ಏವಂ ನ ಬನ್ಧೋ ಭವತಿ ಕುರ್ವತಃ ಕಾರಣಾತ್ಮಕಃ ।
ನ ಚ ಬನ್ಧಾಯ ತತ್ಕರ್ಮ ಭವತ್ಯನಭಿಸನ್ಧಿತಮ್ ॥೧೫॥

ಪೂರ್ವಕರ್ಮ ಕೃತಂ ಭೋಗೈಃ ಕ್ಷೀಯತೇಽಹರ್ನಿಶಂ ತಥಾ ।
ಸುಖದುಃಖಾತ್ಮಕೈರ್ವತ್ಸ ಪುಣ್ಯಾಪುಣ್ಯಾತ್ಮಕೈರ್ನೃಣಾಮ್ ॥೧೬॥

ಏವಂ ಪ್ರಕ್ಷಾಲ್ಯತೇ ಪ್ರಾಜ್ಞೈರಾತ್ಮಾ ಬನ್ಧಾಚ್ಚ ರಕ್ಷ್ಯತೇ ।
ನ ತ್ವೇವಮವಿವೇಕೇನ ಪಾಪಪಙ್ಕೇನ ಲಿಪ್ಯತೇ ॥೧೭॥

ರುಚಿರುವಾಚ :—

ಅವಿದ್ಯಾ ಪಠ್ಯತೇ ವೇದೈಃ ಕರ್ಮಮಾರ್ಗಃ ಪಿತಾಮಹಾಃ ।
ತತ್ಕಥಂ ಕರ್ಮಣೋ ಮಾರ್ಗೇ ಭವನ್ತೋ ಯೋಜಯನ್ತಿ
ಮಾಮ್ ॥೧೮॥

---

೧೫. ಈ ರೀತಿಯಾಗಿ ಆಚರಿಸುತ್ತಿದ್ದ ಮಾನವನಿಗೆ ಜನ್ಮಾಂತರವನ್ನು ಉಂಟುಮಾಡುವ ಕರ್ಮಬಂಧವು ಉಂಟಾಗುವುದಿಲ್ಲ. ಫಲಾಪೇಕ್ಷೆಯನ್ನು ತೊರೆದು ಮಾಡುವ ಕರ್ಮವು ಲೇಪಬಂಧಗಳನ್ನು ಮಾಡುವುದಿಲ್ಲ.

೧೬. ಪುತ್ರನೇ! ಪೂರ್ವಜನ್ಮದಲ್ಲಿ ಮಾಡಿದ ಕರ್ಮದ ಪಾಪ-ಪುಣ್ಯಗಳು ಮಾನವರಿಗೆ ಪುಣ್ಯ-ಪಾಪಗಳಿಂದ ಹುಟ್ಟುವ ಸುಖ-ದುಃಖಗಳ ಭೋಗಗಳಿಂದ ಪ್ರತಿದಿನವೂ ಕ್ಷಯಿಸಿಹೋಗುವುವು.

೧೭. ಪ್ರಾಜ್ಞರಾದವರು ಈ ಬಗೆಯಿಂದ ಆತ್ಮವನ್ನು ಶುದ್ಧಗೊಳಿಸುವರು ಮತ್ತು ಬಂಧವಿಲ್ಲದ ಹಾಗೆ ರಕ್ಷಿಸಿಕೊಳ್ಳುವರು. ಅದನ್ನು ಬಿಟ್ಟು ನಿನ್ನ ಹಾಗೆ ಅವಿವೇಕದಿಂದ ವರ್ತಿಸಿ ಮತ್ತಷ್ಟು ಪಾಪಕರ್ಮದಿಂದ ಲೇಪನ ಮಾಡಿಕೊಳ್ಳುವುದಿಲ್ಲ.

ರುಚಿಪ್ರಜಾಪತಿಯು ಹೇಳಿದನು :—

೧೮. ಪಿತಾಮಹರೆ! ಕರ್ಮಮಾರ್ಗವು ಅವಿದ್ಯಾರೂಪವಾದುದೆಂದು ವೇದಗಳಲ್ಲಿ ಹೇಳಲ್ಪಟ್ಟಿದೆಯಲ್ಲವೆ. ಆದರೂ ನೀವು ಮಾತ್ರ ನನ್ನನ್ನು ಅವಿದ್ಯಾಮಯವಾದ ಕರ್ಮಮಾರ್ಗದಲ್ಲಿ ಏಕೆ ನಿಯೋಜಿಸುವಿರಿ?

ಪಿತರ ಊಚುಃ :—

ಅವಿದ್ಯಾ ಸತ್ಯಮೇವೈತತ್ಕರ್ಮ ನೈತನ್ಮೃಷಾ ವಚಃ ।
ಕಿಂ ತು ವಿದ್ಯಾಪ್ರಾಪ್ತೌ ಹೇತುಃ ಕರ್ಮ ನ ಸಂಶಯಃ ॥೧೯॥

ವಿಹಿತಾಕರಣಾತ್ಪಾಪೈರಸದ್ಭಿಃ ಕ್ರಿಯತೇ ತು ಯಃ ।
ಸಂಯಮೋ ಮುಕ್ತಯೇ ನಾಸೌ ಪ್ರತ್ಯುತಾಧೋಗತಿಪ್ರದಃ ॥೨೦॥

ಪ್ರಕ್ಷಾಲಯಾಮೀತಿ ಭವಾನ್ ಯದಾತ್ಮಾನಂ ತು ಮನ್ಯತೇ ।
ವಿಹಿತಾಕರಣೋದ್ಭೂತೈಃ ಪಾಪೈಸ್ತ್ವಂ ತು ವಿಲಿಪ್ಯಸೇ ॥೨೧॥

ಅವಿದ್ಯಾಪ್ಯುಪಕಾರಾಯ ವಿಷವಜ್ಜಾಯತೇ ನೃಣಾಮ್ ।
ಅನುಷ್ಠಿತಾಭ್ಯುಪಾಯೇನ ಬನ್ಧಾಯಾನ್ಯಾಯತೋ ಹಿ ಸಾ ॥೨೨॥

ಪಿತೃಗಳು ಇಂತೆಂದರು :—

೧೯. ಕರ್ಮಮಾರ್ಗವು ಅವಿದ್ಯಾರೂಪವಾದುದೆಂಬ ವಚನವು ಸತ್ಯವೇ ಸರಿ. ಆ ಮಾತು ಸುಳ್ಳಾದುದಲ್ಲ. ಆದರೆ ವಿದ್ಯಾಪ್ರಾಪ್ತಿಗೆ ಕರ್ಮಾನುಷ್ಠಾನವು ಕಾರಣವಾಗಿರುವುದು. ಇದರಲ್ಲಿ ಸಂಶಯವಿಲ್ಲ.

೨೦. ಆ ಸಾಧುಜನರು ವಿಹಿತಕರ್ಮವನ್ನು ತ್ಯಜಿಸಿ ಯಾವ ಆತ್ಮ-ಸಂಯಮವನ್ನು ಮಾಡುವರೋ ಆ ಸಂಯಮವು ಮುಕ್ತಿಯನ್ನು ಕೊಡಲಾರದು. ಅಷ್ಟೇ ಅಲ್ಲ. ಅಧೋಗತಿಯನ್ನು ಉಂಟುಮಾಡುವುದು.

೨೧. ಪುತ್ರನೇ! ನೀನು ಈ ರೀತಿಯಾಗಿದ್ದು ಆತ್ಮವನ್ನು ತೊಳೆಯುವೆ-ನೆಂದು ತಿಳಿದುಕೊಂಡಿದ್ದೀಯೆ. ಆದರೆ ವಿಹಿತಕರ್ಮಗಳನ್ನು ಮಾಡದೇ ಇದ್ದ ಪಾತಕಗಳಿಂದ ನೀನು ಲಿಪ್ತನಾಗುತ್ತಿದ್ದೀಯೆ.

೨೨. ಅವಿದ್ಯೆಯು ಕೂಡ ವಿಷದಂತೆ ಅದನ್ನು ಉಪಯೋಗಿಸುವ ಉತ್ತಮ ವಿಧಾನದಿಂದ ಆಚರಿಸಿದರೆ ಮಾನವರಿಗೆ ಉಪಕಾರವನ್ನು ಕೊಡುವುದು. ಉಪಯೋಗಮಾಡುವ ಕ್ರಮವು ದುಷ್ಟವಾದರೆ ಅನರ್ಥಕಾರಿಯಾಗುವುದು.

ತಸ್ಮಾದ್ವತ್ಸ ಕುರುಷ್ವ ತ್ವಂ ವಿಧಿವದ್ದಾರಸಙ್ಗ್ರಹಮ್ ।
ಮಾ ಜನ್ಮ ವಿಫಲಂ ತೇಽಸ್ತು ಅಸಮ್ಪ್ರಾಪ್ಯ ತು ಲೌಕಿಕಮ್ ॥೨೩॥

ರುಚಿರುವಾಚ :—

ವೃದ್ಧೋಽಹಂ ಸಾಮ್ಪ್ರತಂ ಕೋ ಮೇ ಪಿತರಃ ಸಮ್ಪ್ರದಾಸ್ಯತಿ ।
ಭಾರ್ಯಾಂ ತಥಾ ದರಿದ್ರಸ್ಯ ದುಷ್ಕರೋ ದಾರಸಙ್ಗ್ರಹಃ ॥೨೪॥

ಪಿತರ ಊಚುಃ :—

ಅಸ್ಮಾಕಂ ಪತನಂ ವತ್ಸ ಭವತಶ್ಚಾಪ್ಯಧೋಗತಿಃ ।
ನೂನಂ ಭಾವಿ ಭವಿತ್ರೀ ಚ ನಾಭಿನನ್ದಸಿ ನೋ ವಚಃ ॥೨೫॥

---

೨೩. ವತ್ಸನೇ! ಆದುದರಿಂದ ನೀನು ಯಥಾವಿಧಿಯಾಗಿ ಪತ್ನಿಯ ಪಾಣಿಗ್ರಹಣವನ್ನು ಮಾಡಿಕೊ. ಲೌಕಿಕವಾದ ಪ್ರಯೋಜನವು ಕೂಡ ದೊರೆಯದಹಾಗೆ ನಿನ್ನ ಜನ್ಮವು ವ್ಯರ್ಥವಾಗಿ ಕಳೆಯುವುದು ಬೇಡ.

ರುಚಿಪ್ರಜಾಪತಿಯು ಹೇಳಿದನು :—

೨೪. ಪಿತೃಗಳೇ! ನಾನು ಈಗ ವೃದ್ಧನಾಗಿರುವೆನು. ಈಗ ನನಗೆ ಕನ್ಯೆಯನ್ನು ಕೊಡುವವರಾರಿರುವರು? ಹಾಗು ದರಿದ್ರನೂ ಆಗಿದ್ದ ನನಗೆ ಪತ್ನೀ ಪಾಣಿಗ್ರಹಣವಿಧಾನವು ದುರ್ಲಭವಾದುದೆಂದು ತೋರುವುದು.

ಪಿತೃಗಳು ಇಂತೆಂದರು :—

೨೫. ಪುತ್ರನೇ! ನಿನ್ನ ಈ ವಿಧದ ನಡತೆಯಿಂದ ನಮಗೆ ಪತನವಾಗುವುದು. ಹಾಗು ನಿನಗೆ ಕೂಡ ಅಧೋಗತಿಯು ತಪ್ಪದೇ ಉಂಟಾಗುವುದು. ನೀನು ನಮ್ಮ ವಚನವನ್ನು ಕೇಳದಿದ್ದರೆ ನಾವೆಲ್ಲರೂ ಅಧೋಗತಿಗೆ ಭಾಗಿಗಳಾಗುತ್ತೇವೆ.

ಮಾರ್ಕಣ್ಡೇಯ ಉವಾಚ :—

ಇತ್ಯುಕ್ತ್ವಾ ಪಿತರಸ್ತಸ್ಯ ಪಶ್ಯತೋ ಮುನಿಸತ್ತಮ ।
ಬಭೂವುಃ ಸಹಸಾದೃಶ್ಯಾ ದೀಪಾ ವಾತಾಹತಾ ಇವ ॥೨೬॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ರುಚ್ಯುಪಾಖ್ಯಾನೇ
ದ್ವಿನವತಿತಮೋಽಧ್ಯಾಯಃ

ಮಾರ್ಕಂಡೇಯ ಮುನಿಯು ಹೇಳಿದನು :—

೨೬. ಮುನಿಶ್ರೇಷ್ಠನಾದ ಕ್ರೌಷ್ಟುಕಿಯೇ! ಪಿತೃಗಳು ರುಚಿಪ್ರಜಾಪತಿಗೆ ಹೀಗೆಂದು ಹೇಳಿ ಅವನು ನೋಡುತ್ತಿರುವ ಹಾಗೆಯೇ ಅಲ್ಲಿಯೆ ಗಾಳಿಯ ಹೊಡೆತದಿಂದ ದೀಪಗಳು ಕಣ್ಮರೆಯಾಗುವಂತೆ ಅದೃಶ್ಯರಾದರು.

ಮಾರ್ಕಂಡೇಯ ಮಹಾಪುರಾಣದಲ್ಲಿ ತೊಂಭತ್ತೆರಡನೆಯ
ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ತ್ರಿನವತಿತಮೋಽಧ್ಯಾಯಃ

(ರುಚಿಕೃತಂ ಪಿತೃಸ್ತವನಮ್)

ಮಾರ್ಕಣ್ಡೇಯ ಉವಾಚ :—

ಸ ತೇನ ಪಿತೃವಾಕ್ಯೇನ ಭೃಶಮುದ್ವಿಗ್ನಮಾನಸಃ ।
ಕನ್ಯಾಭಿಲಾಷೀ ವಿಪ್ರರ್ಷಿಃ ಪರಿಬಭ್ರಾಮ ಮೇದಿನೀಮ್ ॥೧॥

ಕನ್ಯಾಮಲಭಮಾನೋಽಸೌ ಪಿತೃವಾಕ್ಯಾಗ್ನಿದೀಪಿತಃ ।
ಚಿನ್ತಾಮವಾಪ ಮಹತೀಮತೀವೋದ್ವಿಗ್ನಮಾನಸಃ ॥೨॥

ತೊಂಭತ್ತಮೂರನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಹೀಗೆ ಹೇಳಿದನು :—

೧. ಪಿತೃಗಳು ನುಡಿದ ಈ ವಚನದಿಂದ ಅತಿಶಯವಾಗಿ ಖೇದಗೊಂಡ ಮಾನಸವುಳ್ಳ ಬ್ರಹ್ಮರ್ಷಿಯಾದ ರುಚಿಪ್ರಜಾಪತಿಯು ವಿವಾಹವಾಗಲು ಕನ್ಯೆಯ ಅಭಿಲಾಷೆಯುಳ್ಳವನಾಗಿ ಭೂಮಿಯಲ್ಲೆಲ್ಲ ಸುತ್ತಿದನು.

೨. ಎಲ್ಲಿಲ್ಲಿ ಸುತ್ತಿದರೂ ಕನ್ಯೆಯನ್ನು ಹೊಂದದಿರುವ ರುಚಿಮುನಿಯು ಪಿತೃವಾಕ್ಯವೆಂಬ ಅಗ್ನಿಯಿಂದ ತಪಿಸಲ್ಪಡುತ್ತ ಇನ್ನೂ ಹೆಚ್ಚು ಖಿನ್ನನಾದ ಅಂತಃಕರಣವುಳ್ಳವನಾಗಿ ಅಗಾಧವಾದ ಚಿಂತೆಯಲ್ಲಿ ಮುಳುಗಿದನು.

ಕಿಂ ಕರೋಮಿ ಕ್ವ ಗಚ್ಛಾಮಿ ಕಥಂ ಮೇ ದಾರಸಙ್ಗ್ರಹಃ ।
ಕ್ಷಿಪ್ರಂ ಭವೇತ್ಪಿತೄಣಾಂ ಯೋ ಮಮಾಭ್ಯುದಯಕಾರಕಃ ॥೩॥

ಇತಿ ಚಿನ್ತಯತಸ್ತಸ್ಯ ಮತಿರ್ಜಾತಾ ಮಹಾತ್ಮನಃ ।
ತಪಸಾರಾಧಯಾಮ್ಯೇಷ ಬ್ರಹ್ಮಾಣಂ ಕಮಲೋದ್ಭವಮ್ ॥೪॥

ತತೋ ವರ್ಷಶತಂ ದಿವ್ಯಂ ತಪಸ್ತೇಪೇ ಸ ವೇಧಸಮ್ ।
ದಿದೃಕ್ಷುಃ ಸುಚಿರಂ ಕಾಲಂ ಪರಂ ನಿಯಮಮಾಸ್ಥಿತಃ ॥೫॥

ತತಃ ಸ್ವಂ ದರ್ಶಯಾಮಾಸ ಬ್ರಹ್ಮಾ ಲೋಕಪಿತಾಮಹಃ ।
ಉವಾಚ ತಂ ಪ್ರಸನ್ನೋಽಸ್ಮೀತ್ಯುಚ್ಯತಾಮಭಿವಾಞ್ಛಿತಮ್ ॥೬॥

---

೩. ನಾನು ಏನು ಮಾಡಲಿ? ಎಲ್ಲಿಗೆ ಹೋಗಲಿ? ನನಗೆ ಪಾಣಿಗ್ರಹಣವು ಹೇಗೆ ಸಂಭವಿಸುವುದು? ಮತ್ತು ನನಗೂ ನನ್ನ ಪಿತೃಗಳಿಗೂ ಸತ್ಫಲವನ್ನು ಕೊಡುವ ವಿವಾಹಕರ್ಮವು ನನಗೆ ಲಭಿಸುವುದುಂಟೆ?

೪. ಈ ಬಗೆಯಾಗಿ ಚಿಂತಿಸುತ್ತಿದ್ದ ಮಹಾತ್ಮನಾದ ರುಚಿಪ್ರಜಾಪತಿಗೆ ಹೀಗೊಂದು ಯೋಚನೆಯು ಹುಟ್ಟಿತು. ವಿಷ್ಣುವಿನ ನಾಭಿಕಮಲದಲ್ಲಿ ಜನಿಸಿದ ಬ್ರಹ್ಮದೇವನನ್ನು ತಪಸ್ಸನ್ನು ಮಾಡಿ ಆರಾಧಿಸುವೆನು.

೫. ತರುವಾಯ ಆ ರುಚಿಪ್ರಜಾಪತಿಯು ಉತ್ತಮವಾದ ನಿಯಮವನ್ನು ಕೈಗೊಂಡವನಾಗಿ ಬ್ರಹ್ಮದೇವನನ್ನು ಸಾಕ್ಷಾತ್ಕರಿಸುವ ಉದ್ದೇಶದಿಂದ ದೇವಮಾನವ ಒಂದುನೂರು ವರ್ಷಗಳಷ್ಟು ದೀರ್ಘಕಾಲದವರೆಗೆ ತಪಸ್ಸನ್ನು ಮಾಡಿದನು.

೬. ಅನಂತರದಲ್ಲಿ ಲೋಕಗಳಿಗೆ ಪಿತಾಮಹನೆನಿಸಿದ ಬ್ರಹ್ಮದೇವನು ರುಚಿಮುನಿಗೆ ಪ್ರತ್ಯಕ್ಷನಾಗಿ ಬಂದು "ನಾನು ಪ್ರಸನ್ನನಾಗಿದ್ದೇನೆ. ನಿನಗೆ ಇಷ್ಟವಾದ ವರವನ್ನು ಕೇಳು" ಎಂದು ಅವನನ್ನು ಕುರಿತು ಹೇಳಿದನು.

ತತೋಽಸೌ ಪ್ರಣಿಪತ್ಯಾಹ ಬ್ರಹ್ಮಾಣಂ ಜಗತೋ ಗತಿಮ್ ।
ಪಿತೄಣಾಂ ವಚನಾತ್ತೇನ ಯತ್ಕರ್ತುಮಭಿವಾಞ್ಛಿತಮ್ ॥೭॥

ಬ್ರಹ್ಮಾ ಚಾಹ ರುಚಿಂ ವಿಪ್ರಂ ಶ್ರುತ್ವಾ ತಸ್ಯಾಭಿವಾಞ್ಛಿತಮ್ ॥೮॥

ಬ್ರಹ್ಮೋವಾಚ :—

ಪ್ರಜಾಪತಿಸ್ತ್ವಂ ಭವಿತಾ ಸ್ರಷ್ಟವ್ಯಾ ಭವತಾ ಪ್ರಜಾಃ ॥೯॥

ಸೃಷ್ಟ್ವಾ ಪ್ರಜಾಃ ಸುತಾನ್ವಿಪ್ರ ಸಮುತ್ಪಾದ್ಯ ಕ್ರಿಯಾಸ್ತಥಾ ।
ಕೃತ್ವಾ ಕೃತಾಧಿಕಾರಸ್ತ್ವಂ ತತಃ ಸಿದ್ಧಿಮವಾಪ್ಸ್ಯಸಿ ॥೧೦॥

ಸ ತ್ವಂ ಯಥೋಕ್ತಂ ಪಿತೃಭಿಃ ಕುರು ದಾರಪರಿಗ್ರಹಮ್ ।
ಕಾಮಂ ಚೇಮಮಭಿಧ್ಯಾಯ ಕ್ರಿಯತಾಂ ಪಿತೃಪೂಜನಮ್ ॥೧೧॥

---

೭. ತರುವಾಯ ರುಚಿಪ್ರಜಾಪತಿಯು ಜಗತ್ತಿಗೆ ಸುಗತಿಯನ್ನು ಕೊಡುವ ಬ್ರಹ್ಮದೇವನನ್ನು ನಮಸ್ಕರಿಸಿ ಪಿತೃಗಳ ಆದೇಶವಚನದಿಂದ ತನಗೆ ಯಾವುದು ಕರ್ತವ್ಯವೆಂದು ಇಷ್ಟವಾಗಿದ್ದಿತೋ ಅದನ್ನು ಹೇಳಿಕೊಂಡನು.

೮. ಆಗ ಬ್ರಹ್ಮದೇವನು ರುಚಿಪ್ರಜಾಪತಿಗೆ ಪಿತೃಗಳ ಆದೇಶದಿಂದ ವಿವಾಹಸಂಕಲ್ಪವು ಉದಯಿಸಿದ್ದನ್ನೂ ಆದರೆ ಕನ್ಯೆಯು ಲಭಿಸದೇ ಆ ಮನೋರಥವು ದುರ್ಲಭವಾದುದನ್ನೂ ಕೇಳಿ ಹೀಗೆ ಹೇಳಿದನು.

ಬ್ರಹ್ಮದೇವನು ಇಂತೆಂದನು :—

೯. ನಿನ್ನ ತಪಸ್ಸಿಗೆ ಮೆಚ್ಚಿ ನಾನು ವರವನ್ನು ಕೊಡುವವನಾಗಿದ್ದೇನೆ. ನೀನು ಪ್ರಜಾಪತಿಯಾಗುತ್ತೀಯೆ. ಮತ್ತು ನೀನು ಅನೇಕ ಪ್ರಜೆಗಳನ್ನು ಸೃಷ್ಟಿಮಾಡಬೇಕಾಗಿದೆ.

೧೦. ಹಾಗೆ ನೀನು ಪ್ರಜೆಗಳನ್ನು ಸೃಷ್ಟಿಮಾಡಿ, ಅನೇಕ ಸತ್ಪುತ್ರರನ್ನು ಹೊಂದಿ ಮತ್ತು ಕರ್ತವ್ಯವಾದ ಕರ್ಮಗಳನ್ನು ಆಚರಿಸಿ ಅಧಿಕಾರವನ್ನು ನಿರ್ವಹಿಸಿ ಕೃತಾರ್ಥನಾಗಿ ಅನಂತರದಲ್ಲಿ ಸಿದ್ಧಿಯನ್ನು ಹೊಂದುತ್ತೀಯೆ.

೧೧. ಆದುದರಿಂದ ಶುಭಕರವಾದ ಭವಿಷ್ಯವುಳ್ಳ ನೀನು ಪಿತೃಗಳು ಉಪದೇಶಿಸಿದಂತೆ ವಿವಾಹವನ್ನು ಮಾಡಿಕೊ. ಹಾಗೆ ಪಾಣಿಗ್ರಹಣ ಮಾಡಿಕೊಳ್ಳಬೇಕೆಂಬ ಶುಭಮನೋರಥವನ್ನು ಧ್ಯಾನಿಸು. ಮತ್ತು ಪಿತೃಗಳನ್ನು ಭಕ್ತಿಯಿಂದ ಪೂಜಿಸು.

ತ ಏವ ತುಷ್ಟಾಃ ಪಿತರಃ ಪ್ರದಾಸ್ಯನ್ತಿ ತವೇಪ್ಸಿತಾನ್ ।
ಪತ್ನೀಂ ಸುತಾಂಶ್ಚ ಸನ್ತುಷ್ಟಾಃ ಕಿಂ ನ ದದ್ಯುಃ ಪಿತಾಮಹಾಃ ॥೧೨॥

ಮಾರ್ಕಣ್ಡೇಯ ಉವಾಚ :—

ಇತ್ಯೃಷೇರ್ವಚನಂ ಶ್ರುತ್ವಾ ಬ್ರಹ್ಮಣೋಽವ್ಯಕ್ತಜನ್ಮನಃ ।
ನದ್ಯಾ ವಿವಿಕ್ತೇ ಪುಲಿನೇ ಚಕಾರ ಪಿತೃತರ್ಪಣಮ್ ॥೧೩॥

ತುಷ್ಟಾವ ಚ ಪಿತೄನ್ವಿಪ್ರಃ ಸ್ತವೈರೇಭಿಸ್ತಥಾದೃತಃ ।
ಏಕಾಗ್ರಃ ಪ್ರಯತೋ ಭೂತ್ವಾ ಭಕ್ತಿನಮ್ರಾತ್ಮಕನ್ಧರಃ ॥೧೪॥

ರುಚಿರುವಾಚ :—

ನಮಸ್ಯೇಽಹಂ ಪಿತೄನ್ ಶ್ರಾದ್ಧೇ ಯೇ ವಸನ್ತ್ಯಧಿದೇವತಾಃ ।
ದೇವೈರಪಿ ಹಿ ತರ್ಪ್ಯನ್ತೇ ಯೇ ಚ ಶ್ರಾದ್ಧೇ ಸ್ವಧೋತ್ತರೈಃ ॥೧೫॥

---

೧೨. ನಿನ್ನಿಂದ ಆರಾಧಿಸಲ್ಪಟ್ಟ ಪಿತೃಗಳು ಸಂತುಷ್ಟರಾಗಿ ನಿನ್ನ ಮನವೊಪ್ಪುವಂತಹ ಪತ್ನಿ-ಪುತ್ರರನ್ನು ಕರುಣಿಸುವರು. ಭಕ್ತಿಯಿಂದ ಮೆಚ್ಚಿ ಸಂತುಷ್ಟರಾದ ಪಿತೃಗಳು ಏನು ತಾನೆ ಕೊಡಲಾರರು.

ಮಾರ್ಕಂಡೇಯ ಮುನಿಯು ಇಂತೆಂದನು :—

೧೩. ಅವ್ಯಕ್ತತತ್ತ್ವದಿಂದ ಜನ್ಮವೆತ್ತಿದ ಬ್ರಹ್ಮದೇವನ ವಚನವನ್ನು ಕೇಳಿ ರುಚಿಮುನಿಯು ಒಂದು ನದೀತೀರವಲ್ಲಿ ನಿರ್ಜನವಾದ ಮರುಳುದಿಣ್ಣೆಯ ಸ್ಥಳಕ್ಕೆ ಹೋಗಿ ಅಲ್ಲಿ ಪಿತೃತೃಪ್ತಿಯಾಗುವಂತೆ ಆರಾಧನೆ ಮಾಡಿದನು.

೧೪. ಮತ್ತು ಪಿತೃತರ್ಪಣವನ್ನು ಮುಗಿಸಿದ ಬಳಿಕ ಬಹು ಆದರದಿಂದ ಏಕಾಗ್ರತೆಯುಳ್ಳವನೂ ಪವಿತ್ರನೂ ಮತ್ತು ಭಕ್ತಿಯಿಂದ ಬಾಗಿದ ಮನಸ್ಸು-ಕತ್ತುಗಳುಳ್ಳವನೂ ಆಗಿ ಈ ಸ್ತೋತ್ರಗಳನ್ನು ಹೇಳಿ ಪಿತೃಗಳನ್ನು ಸ್ತುತಿಸಿದನು.

ರುಚಿಪ್ರಜಾಪತಿಯು ಹೀಗೆ ಸ್ತುತಿಮಾಡಿದನು :—

೧೫. ಯಾರು ಶ್ರಾದ್ಧಕರ್ಮದಲ್ಲಿ ಆರಾಧಿಸಲ್ಪಡುವ ಅಧಿದೇವತೆಗಳಾಗಿರುವರೋ ಮತ್ತು ಯಾರು ಅಮೃತಾಯಮಾನವಾದ ಕವ್ಯವನ್ನು ಕೊಟ್ಟು ಶ್ರಾದ್ಧಕರ್ಮದಲ್ಲಿ ದೇವತೆಗಳಿಂದಲೂ ತೃಪ್ತಿಗೊಳಿಸಲ್ಪಡುವರೋ ಅಂತಹ ಪಿತೃಗಳನ್ನು ನಾನು ನಮಸ್ಕರಿಸುತ್ತೇನೆ.

ನಮಸ್ಯೇಽಹಂ ಪಿತೄನ್ ಸ್ವರ್ಗೇ ಯೇ ತರ್ಪ್ಯನ್ತೇ ಮಹರ್ಷಿಭಿಃ ।
ಶ್ರಾದ್ಧೈರ್ಮನೋಮಯೈರ್ಭಕ್ತ್ಯಾ ಭುಕ್ತಿಮುಕ್ತಿಮಭೀಪ್ಸುಭಿಃ ॥೧೬॥

ನಮಸ್ಯೇಽಹಂ ಪಿತೄನ್ಸ್ವರ್ಗೇ ಸಿದ್ಧಾಃ ಸನ್ತರ್ಪಯನ್ತಿ ಯಾನ್ ।
ಶ್ರಾದ್ಧೇಷು ದಿವ್ಯೈಃ ಸಕಲೈರುಪಹಾರೈರನುತ್ತಮೈಃ ॥೧೭॥

ನಮಸ್ಯೇಽಹಂ ಪಿತೄನ್ಭಕ್ತ್ಯಾ ಯೇಽರ್ಚ್ಯನ್ತೇ ಗುಹ್ಯಕೈರಪಿ ।
ತನ್ಮಯತ್ವೇನ ವಾಞ್ಛದ್ಭಿರೃದ್ಧಿಮಾತ್ಯನ್ತಿಕೀಂ ಪರಾಮ್ ॥೧೮॥

ನಮಸ್ಯೇಽಹಂ ಪಿತೄನ್ಮರ್ತ್ಯೈರರ್ಚ್ಯನ್ತೇ ಭುವಿ ಯೇ ಸದಾ ।
ಶ್ರಾದ್ಧೇಷು ಶ್ರದ್ಧಯಾಭೀಷ್ಟಲೋಕಪ್ರಾಪ್ತಿಪ್ರದಾಯಿನಃ ॥೧೯॥

---

೧೬. ಯಾವ ಪಿತೃದೇವತೆಗಳು ಸ್ವರ್ಗಲೋಕದಲ್ಲಿ ಭೋಗ-ಮೋಕ್ಷಗಳನ್ನು ಆಶಿಸುವ ಮಹರ್ಷಿಗಳಿಂದ ಆಚರಿಸಲ್ಪಡುವ ಶ್ರಾದ್ಧಕರ್ಮದಲ್ಲಿ ಭಕ್ತಿಯಿಂದ ಅರ್ಪಿಸಿದ ಸಂಕಲ್ಪಮಯವಾದ ಅನ್ನದಿಂದ ತೃಪ್ತಿಗೊಳಿಸಲ್ಪಡುವರೊ ಆ ಪಿತೃಗಳನ್ನು ನಾನು ವಂದಿಸುವೆನು.

೧೭. ಮತ್ತು ಸಿದ್ಧರೆಂಬ ದೇವವರ್ಗದವರು ಶ್ರಾದ್ಧಕರ್ಮವನ್ನು ಆಚರಿಸಿ ದಿವ್ಯವೂ, ಸರ್ವೋತ್ತಮವೂ ಆದ ಸಮಗ್ರ ಉಪಹಾರಗಳಿಂದ ಯಾವ ಪಿತೃದೇವತೆಗಳನ್ನು ಪೂಜಿಸಿ ತೃಪ್ತಿಪಡಿಸುವರೋ ಅಂತಹ ಪಿತೃಗಳನ್ನು ನಾನು ನಮಸ್ಕರಿಸುತ್ತೇನೆ.

೧೮. ಹಾಗು ಗುಹ್ಯಕರೆಂಬ ದೇವಗಣದವರು ತಾವು ಪಿತೃದೇವತಾ ಸ್ವರೂಪರಾಗಿ ಉತ್ತಮವಾದ ಮತ್ತು ಅತಿಶಯವಾದ ಮಹಿಮಾಸಮೃದ್ಧಿಯನ್ನು ಕೋರುವವರಾಗಿ ಯಾವ ಪಿತೃಗಳನ್ನು ಅರ್ಚಿಸುವರೋ ಅಂತಹ ಪಿತೃದೇವತೆಗಳನ್ನು ನಾನು ವಂದಿಸುವೆನು.

೧೯. ಯಾವ ಪಿತೃಗಳು ಮರ್ತ್ಯಲೋಕದಲ್ಲಿ ಮಾನವರಿಂದ ಯಾವಾಗಲೂ ಶ್ರಾದ್ಧಕರ್ಮಗಳಲ್ಲಿ ಶ್ರದ್ಧೆಯಿಂದ ಅರ್ಚಿಸಲ್ಪಟ್ಟು ಹಾಗೆ ಅರ್ಚಿಸಿದ ಭಕ್ತರ ಇಷ್ಟ ಸದ್ಗತಿಯನ್ನು ಕೊಡುವರೋ; ಅಂತಹ ಪಿತೃದೇವತೆಗಳನ್ನು ನಾನು ನಮಸ್ಕರಿಸುತ್ತೇನೆ.

ನಮಸ್ಯೇಽಹಂ ಪಿತೄನ್ವಿಪ್ರೈರರ್ಚ್ಯನ್ತೇ ಭುವಿ ಯೇ ಸದಾ ।
ವಾಞ್ಛಿತಾಭೀಷ್ಟಲಾಭಾಯ ಪ್ರಾಜಾಪತ್ಯಪ್ರದಾಯಿನಃ ॥೨೦॥

ನಮಸ್ಯೇಽಹಂ ಪಿತೄನ್ಯೇ ವೈ ತರ್ಪ್ಯನ್ತೇಽರಣ್ಯವಾಸಿಭಿಃ ।
ವನ್ಯೈಃ ಶ್ರಾದ್ಧೈರ್ಯತಾಹಾರೈಸ್ತಪೋನಿರ್ಧೂತಕಿಲ್ಬಿಷೈಃ ॥೨೧॥

ನಮಸ್ಯೇಽಹಂ ಪಿತೄನ್ವಿಪ್ರೈರ್ನೈಷ್ಠಿಕವ್ರತಚಾರಿಭಿಃ ।
ಯೇ ಸಂಯತಾತ್ಮಭಿರ್ನಿತ್ಯಂ ಸನ್ತರ್ಪ್ಯನ್ತೇ ಸಮಾಧಿಭಿಃ ॥೨೨॥

ನಮಸ್ಯೇಽಹಂ ಪಿತೄನ್ ಶ್ರಾದ್ಧೈ ರಾಜನ್ಯಾಸ್ತರ್ಪಯನ್ತಿ ಯಾನ್ ।
ಕವ್ಯೈರಶೇಷೈರ್ವಿಧಿವಲ್ಲೋಕತ್ರಯಫಲಪ್ರದಾನ್ ॥೨೩॥

---

೨೦. ಮರ್ತ್ಯಲೋಕದಲ್ಲಿ ವಿಪ್ರರಿಂದ ಇಷ್ಟಫಲಪ್ರಾಪ್ತಿಗೋಸ್ಕರ ಪ್ರಾರ್ಥಿಸಲ್ಪಡುವವರೂ ಮತ್ತು ಪ್ರಾಜಾಪತ್ಯಸ್ಥಾನವನ್ನು ಕೊಡುವವರೂ ಆದ ಯಾವ ಪಿತೃದೇವತೆಗಳು ಸರ್ವಕಾಲದಲ್ಲಿಯೂ ಅರ್ಚಿಸಲ್ಪಡುವರೊ ಅಂತಹ ಪಿತೃಗಳನ್ನು ನಾನು ನಮಸ್ಕರಿಸುತ್ತೇನೆ.

೨೧. ಮತ್ತು ವನದಲ್ಲಿ ವಾಸಮಾಡುವವರೂ ಜಿತೇಂದ್ರಿಯರೂ ಮತ್ತು ತಪಶ್ಚರ್ಯೆಯಿಂದ ಪಾಪವನ್ನು ಕಳೆದುಕೊಂಡವರೂ ಆದ ತಪಸ್ವಿಗಳಿಂದ ಶ್ರದ್ಧೆಯಿಂದ ಅರ್ಪಿಸುವ ವನ್ಯವಸ್ತುಉಪಚಾರಗಳಿಂದ ಯಾವ ಪಿತೃಗಳು ತೃಪ್ತಿಗೊಳಿಸಲ್ಪಡುವರೋ ಅಂತಹ ಪಿತೃಗಳನ್ನು ನಾನು ವಂದಿಸುವೆನು.

೨೨. ಮತ್ತು ನೈಷ್ಠಿಕವ್ರತವನ್ನು ಅವಲಂಬಿಸಿರುವವರೂ, ಜಿತವಾದ ಅಂತಃಕರಣವುಳ್ಳವರೂ ಆದ ಯೋಗಿ ವಿಪ್ರರಿಂದ ಯಾವ ಪಿತೃಗಳು ಸಮಾಧಿ-ಅವಸ್ಥೆಯಿಂದ ತೃಪ್ತಿಗೊಳಿಸಲ್ಪಡುವರೋ ಅಂತಹ ಪಿತೃದೇವತೆಗಳನ್ನು ನಾನು ನಮಸ್ಕರಿಸುವೆನು.

೨೩. ಮತ್ತು ಅರಸರು ಮೂರುಲೋಕದಲ್ಲಿರುವ ಉತ್ತಮವಾದ ಇಷ್ಟಫಲವನ್ನು ಕೊಡುವ ಯಾವ ಪಿತೃಗಳನ್ನು ಶ್ರಾದ್ಧಗಳನ್ನು ಮಾಡಿ ಸಂಪೂರ್ಣ ಕವ್ಯದಾನಗಳಿಂದ ಯಥಾವಿಧಿಯಾಗಿ ತೃಪ್ತಿಪಡಿಸುವರೋ ಅಂತಹ ಪಿತೃಗಳನ್ನು ನಾನು ನಮಸ್ಕರಿಸುತ್ತೇನೆ.

ನಮಸ್ಯೇಽಹಂ ಪಿತೄನ್ವೈಶ್ಯೈರರ್ಚ್ಯನ್ತೇ ಭುವಿ ಯೇ ಸದಾ ।
ಸ್ವಕರ್ಮಾಭಿರತೈರ್ನಿತ್ಯಂ ಪುಷ್ಪಧೂಪಾನ್ನವಾರಿಭಿಃ ॥೨೪॥

ನಮಸ್ಯೇಽಹಂ ಪಿತೄನ್ ಶ್ರಾದ್ಧೈರ್ಯೇ ಶೂದ್ರೈರಪಿ ಭಕ್ತಿತಃ ।
ಸನ್ತರ್ಪ್ಯನ್ತೇ ಜಗತ್ಯತ್ರ ನಾಮ್ನಾ ಖ್ಯಾತಾಃ ಸುಕಾಲಿನಃ ॥೨೫॥

ನಮಸ್ಯೇಽಹಂ ಪಿತೄನ್ ಶ್ರಾದ್ಧೈಃ ಪಾತಾಲೇ ಯೇ ಮಹಾಸುರೈಃ ।
ಸನ್ತರ್ಪ್ಯನ್ತೇ ಸ್ವಧಾಹಾರಾಸ್ತ್ಯಕ್ತದಮ್ಭಮದೈಃ ಸದಾ ॥೨೬॥

ನಮಸ್ಯೇಽಹಂ ಪಿತೄನ್ ಶ್ರಾದ್ಧೈರರ್ಚ್ಯನ್ತೇ ಯೇ ರಸಾತಲೇ ।
ಭೋಗೈರಶೇಷೈರ್ವಿಧಿವನ್ನಾಗೈಃ ಕಾಮಾನಭೀಪ್ಸುಭಿಃ ॥೨೭॥

---

೨೪. ಮತ್ತು ಮರ್ತ್ಯಲೋಕದಲ್ಲಿ ಸ್ವಕರ್ಮಾನುಷ್ಠಾನದಲ್ಲಿ ತತ್ಪರರಾದ ವೈಶ್ಯರು ಸಂತತವಾಗಿ ಪುಷ್ಪ-ಧೂಪ-ಅನ್ನ ಅಮೃತಗಳಿಂದ ಯಾವ ಪಿತೃದೇವತೆಗಳನ್ನು ಯಾವಾಗಲೂ ಅರ್ಚಿಸುವರೋ ಅಂತಹ ಪಿತೃಗಳನ್ನು ನಾನು ನಮಸ್ಕರಿಸುತ್ತೇನೆ.

೨೫. ಮತ್ತು ಸುಕಾಲಿ ಎಂಬ ಹೆಸರಿನಿಂದ ಪ್ರಸಿದ್ಧರಾದ ಯಾವ ಪಿತೃದೇವತೆಗಳು ಈ ಲೋಕದಲ್ಲಿ ಶೂದ್ರರಿಂದಲೂ ಭಕ್ತಿಪೂರ್ವಕವಾಗಿ ಶ್ರಾದ್ಧಕರ್ಮವನ್ನು ಮಾಡಿ ತೃಪ್ತಿಗೊಳಿಸಲ್ಪಡುವರೊ ಅಂತಹ ಪಿತೃದೇವತೆಗಳನ್ನು ನಾನು ನಮಸ್ಕರಿಸುವೆನು.

೨೬. ಪಾತಾಲದಲ್ಲಿ ತ್ಯಜಿಸಿದ ದಂಭಾಹಂಕಾರಗಳುಳ್ಳ ಮಹಾ ಅಸುರರು ಸ್ವಧಾನ್ನವೆಂದು ಕರೆಯಲ್ಪಡುವ ಕವ್ಯವನ್ನು ಭುಂಜಿಸುವ ಯಾವ ಪಿತೃಗಳನ್ನು ಶ್ರಾದ್ಧಕರ್ಮಅನುಷ್ಠಾನಗಳಿಂದ ಯಾವಾಗಲೂ ತೃಪ್ತಿಪಡಿಸುವರೋ ಅಂತಹ ಪಿತೃಗಳನ್ನು ನಾನು ವಂದಿಸುವೆನು.

೨೭. ಮತ್ತು ಯಾವ ಪಿತೃಗಳು ರಸಾತಲ ಲೋಕದಲ್ಲಿರುವ, ವಿಧವಿಧವಾದ ಕಾಮುಗಳನ್ನು ಕೋರುವ ನಾಗಜಾತಿಯವರಿಂದ ವಿಧಿವತ್ತಾಗಿ ಸಮಗ್ರ ಉಪಚಾರಗಳನ್ನು ಅರ್ಪಿಸಿ ಪೂಜಿಸಲ್ಪಡುವರೋ ಅಂತಹ ಪಿತೃದೇವತೆಗಳನ್ನು ನಾನು ನಮಸ್ಕರಿಸುವೆನು.

ನಮಸ್ಯೇಽಹಂ ಪಿತೄನ್ ಶ್ರಾದ್ಧೈಃ ಸರ್ವೈಃ ಸನ್ತರ್ಪಿತಾನ್ಸದಾ ।
ತತ್ರೈವ ವಿಧಿವನ್ಮನ್ತ್ರಭೋಗಸಮ್ಪತ್ಸಮನ್ವಿತೈಃ ॥೨೮॥

ಪಿತೄನ್ನಮಸ್ಯೇ ನಿವಸನ್ತಿ ಸಾಕ್ಷಾ-
ದ್ಯೇ ದೇವಲೋಕೇ ಚ ತಥಾನ್ತರಿಕ್ಷೇ ।
ಮಹೀತಲೇ ಯೇ ಚ ಸುರಾದಿಪೂಜ್ಯಾ-
ಸ್ತೇ ಮೇ ಪ್ರಯಚ್ಛನ್ತು ಮಯೋಪನಿತಮ್ ॥೨೯॥

ಪಿತೄನ್ನಮಸ್ಯೇ ಪರಮಾತ್ಮಭೂತಾ
ಯೇ ವೈ ವಿಮಾನೇ ನಿವಸನ್ತಿ ಮೂರ್ತಾಃ ।
ಯಜನ್ತಿ ಯಾನಸ್ತಮಲೈರ್ಮನೋಭಿ-
ರ್ಯೋಗೀಶ್ವರಾಃ ಕ್ಲೇಶವಿಮುಕ್ತಿಹೇತೂನ್ ॥೩೦॥

---

೨೮. ಹಾಗು ಅಲ್ಲಿಯೇ ವಿಧಿವತ್ತಾದ ಮಂತ್ರಪಠನ, ಉಪಚಾರಾರ್ಪಣೆ ಮತ್ತು ಸಮೃದ್ಧಿಗಳಿಂದ ಕೂಡಿದ ಸರ್ವಗಳಿಂದ ಯಾವಾಗಲೂ ಶ್ರಾದ್ಧಕರ್ಮಾಚರಣಪೂರ್ವಕವಾಗಿ ತೃಪ್ತಿಗೊಳಿಸಲ್ಪಟ್ಟ ಪಿತೃದೇವತೆಗಳನ್ನು ನಾನು ನಮಸ್ಕರಿಸುವೆನು.

೨೯. ಯಾವ ಪಿತೃಗಳು ದೇವಲೋಕ, ಅಂತರಿಕ್ಷಲೋಕ ಮತ್ತು ಮರ್ತ್ಯಲೋಕ ಇವುಗಳಲ್ಲಿ ದೇವತೆ ಮುಂತಾದ ಪ್ರಜೆಗಳಿಂದ ಪೂಜಿಸಲ್ಪಡುತ್ತ ವಾಸಮಾಡಿರುವರೊ ಅಂತಹ ಪಿತೃದೇವತೆಗಳನ್ನು ನಾನು ನಮಸ್ಕರಿಸುತ್ತೇನೆ. ಅವರು ನನ್ನ ಭಕ್ತಿಯ ಉಪಚಾರಗಳನ್ನು ಸ್ವೀಕರಿಸಿ ನನ್ನನ್ನು ಅನುಗ್ರಹಿಸಲಿ.

೩೦. ಯಾವ ಪಿತೃಗಳು ಪರಮಾತ್ಮಸ್ವರೂಪರೂ, ಮೂರ್ತಿಯನ್ನು ಧರಿಸಿದವರೂ ಆಗಿ ವಿಮಾನದಲ್ಲಿ ವಾಸಮಾಡುವರೋ ಮತ್ತು ಕ್ಲೇಶಮೋಚನೆಗೆ ಕಾರಣರಾದ ಯಾವ ಪಿತೃಗಳನ್ನು ಯೋಗೀಶ್ವರರು ಕಲ್ಮಷರಹಿತವಾದ ಮನಸ್ಸಿನಿಂದ ಧ್ಯಾನಮಾಡಿ ಅರ್ಚಿಸುವರೊ ಅಂತಹ ಪಿತೃಗಳನ್ನು ನಾನು ನಮಸ್ಕರಿಸುವೆನು.

ಪಿತೄನ್ನಮಸ್ಯೇ ದಿವಿ ಯೇ ಚ ಮೂರ್ತಾಃ
ಸ್ವಧಾಭುಜಃ ಕಾಮ್ಯಫಲಾಭಿಸನ್ಧೌ ।
ಪ್ರದಾನಶಕ್ತಾಃ ಸಕಲೇಪ್ಸಿತಾನಾಂ
ವಿಮುಕ್ತಿದಾ ಯೇಽನಭಿಸಂಹಿತೇಷು ॥೩೦॥

ತೃಪ್ಯನ್ತು ತೇಽಸ್ಮಿನ್ಪಿತರಃ ಸಮಸ್ತಾ
ಇಚ್ಛಾವತಾಂ ಯೇ ಪ್ರದಿಶನ್ತಿ ಕಾಮಾನ್ ।
ಸುರತ್ವಮಿನ್ದ್ರತ್ವಮತೋಽಧಿಕಂ ವಾ
ಸುತಾನ್ ಪಶೂನ್ ಸ್ವಾನಿ ಬಲಂ ಗೃಹಾಣಿ ॥೩೨॥

ಸೋಮಸ್ಯ ಯೇ ರಶ್ಮಿಷು ಯೇಽರ್ಕಬಿಮ್ಬೇ
ಶುಕ್ಲೇ ವಿಮಾನೇ ಚ ಸದಾ ವಸನ್ತಿ ।
ತೃಪ್ಯನ್ತು ತೇಽಸ್ಮಿನ್ಪಿತರೋಽನ್ನತೋಯೈ-
ರ್ಗನ್ಧಾದಿನಾ ಪುಷ್ಟಿಮಿತೋ ವ್ರಜನ್ತು ॥೩೩॥

---

೩೦. ಯಾವ ಪಿತೃಗಳು ಕಾಮ್ಯಫಲವನ್ನು ಅಪೇಕ್ಷಿಸಿ ಆರಾಧಿಸಿದವರಿಗೆ ಸಕಲ ಇಷ್ಟಾರ್ಥಗಳನ್ನು ಕೊಡುವವರೂ, ನಿಷ್ಕಾಮಕರ್ಮವನ್ನು ಮಾಡಿದವರಿಗೆ ಮುಕ್ತಿಯನ್ನು ಕೊಡುವವರೂ, ಸ್ವಧಾಅನ್ನವನ್ನು ಭುಂಜಿಸುವವರೂ ಮತ್ತು ಮೂರ್ತಿಯನ್ನು ಧರಿಸಿದವರೂ ಆಗಿ ಸ್ವರ್ಗಲೋಕದಲ್ಲಿ ವಾಸಮಾಡಿರುವರೋ ಅಂತಹ ಪಿತೃಗಳನ್ನು ನಾನು ನಮಸ್ಕರಿಸುವೆನು.

೩೨. ಯಾವ ಪಿತೃಗಳು ಫಲವನ್ನು ಆಶಿಸುವ ಭಕ್ತರ ಮನೋರಥಗಳಿಗೆ ಅನುರೂಪವಾಗಿ ದೇವತ್ವ, ಇಂದ್ರಪದವಿ, ಅದಕ್ಕೂ ಹೆಚ್ಚಿನ ಪದ, ಪುತ್ರ, ಪಶು, ಐಶ್ವರ್ಯ, ಬಲ, ಮನೆ---ಮುಂತಾದ ಸಕಲ ಇಷ್ಟಗಳನ್ನು ಕೊಡುವರೊ ಅಂತಹ ಸಮಸ್ತ ಪಿತೃಗಳು ನನ್ನ ಸ್ತುತಿ-ಅರ್ಚನೆಗಳಿಂದ ತೃಪ್ತಿಯನ್ನು ಹೊಂದಲಿ.

೩೩. ಮತ್ತು ಯಾವ ಪಿತೃಗಳು ಚಂದ್ರನ ರಶ್ಮಿಗಳಲ್ಲಿ, ಸೂರ್ಯ-ಬಿಂಬದಲ್ಲಿ, ಹಾಗು ಉಜ್ವಲವಿಮಾನದಲ್ಲಿ ಸರ್ವಕಾಲದಲ್ಲಿಯೂ ವಾಸಮಾಡು-ವರೋ ಅಂತಹ ಪಿತೃಗಳು ತೃಪ್ತರಾಗಲಿ. ಅವರು ನಾನು ಅರ್ಪಿಸುವ ಅನ್ನ-ಜಲ-ಗಂಧ ಮುಂತಾದ ಉಪಚಾರಗಳಿಂದ ತೃಪ್ತಿಯನ್ನು ಹೊಂದಿ ತಮ್ಮ ಸ್ಥಾನಕ್ಕೆ ತೆರಳಲಿ.

ಯೇಷಾಂ ಹುತೇಽಗ್ನೌ ಹವಿಷಾ ಚ ತೃಪ್ತಿ-
ರ್ಯೇ ಭುಞ್ಜತೇ ವಿಪ್ರಶರೀರಸಂಸ್ಥಾಃ ।
ಯೇ ಪಿಣ್ಡದಾನೇನ ಮುದಂ ಪ್ರಯಾನ್ತಿ
ತೃಪ್ಯನ್ತು ತೇಽಸ್ಮಿನ್ಪಿತರೋಽನ್ನತೋಯೈಃ ॥೩೪॥

ಯೇ ಖಡ್ಗಿಮಾಂಸೇನ ಸುರೈರಭೀಷ್ಟೈಃ
ಕೃಷ್ಣೈಸ್ತಿಲೈರ್ದಿವ್ಯಮನೋಹರೈಶ್ಚ ।
ಕಾಲೇನ ಶಾಕೇನ ಮಹರ್ಷಿವರ್ಯೈಃ
ಸಮ್ಪ್ರೀಣಿತಾಸ್ತೇ ಮುದಮತ್ರ ಯಾನ್ತು ॥೩೫॥

ಕವ್ಯಾನ್ಯಶೇಷಾಣಿ ಚ ಯಾನ್ಯಭೀಷ್ಟಾ-
ನ್ಯತೀವ ತೇಷಾಮಮರಾರ್ಚಿತಾನಾಮ್ ।
ತೇಷಾಂ ತು ಸಾನ್ನಿಧ್ಯಮಿಹಾಸ್ತು ಪುಷ್ಪ-
ಗನ್ಧಾನ್ನಭೋಜ್ಯೇಷು ಮಯಾ ಕೃತೇಷು ॥೩೬॥

---

೩೪. ಯಾವ ಪಿತೃಗಳಿಗೆ ಅಗ್ನಿಯಲ್ಲಿ ಹವನಮಾಡಿದ ಹವಿಸ್ಸಿನಿಂದ ತೃಪ್ತಿಯುಂಟಾಗುವುದೊ ಯಾವ ಪಿತೃಗಳು ವಿಪ್ರರ ದೇಹದಲ್ಲಿ ಆವಾಹನವನ್ನು ಹೊಂದಿ ಭೋಜನತೃಪ್ತಿಯನ್ನು ಹೊಂದುವರೋ ಮತ್ತು ಯಾವ ಪಿತೃಗಳು ಪಿಂಡದಾನದಿಂದ ವಿಶೇಷ ಸಂತೋಷವನ್ನು ಹೊಂದುವರೋ ಅಂತಹ ಪಿತೃಗಳು ನಾನು ಅರ್ಪಿಸಿದ ಅನ್ನ-ಜಲಗಳಿಂದ ತೃಪ್ತಿಹೊಂದಲಿ.

೩೫. ಯಾವ ಪಿತೃಗಳು ದೇವತೆಗಳಿಂದಲೂ ಮತ್ತು ಮಹರ್ಷಿಶ್ರೇಷ್ಠ-ರಿಂದಲೂ ಖಡ್ಗಮೃಗದ ಮಾಂಸ, ಕಪ್ಪುಎಳ್ಳು, ಹಾಗಲಕಾಯಿ ಮುಂತಾದ ದಿವ್ಯವೂ ಮನೋಹರವೂ ಮತ್ತು ಪಿತೃಗಳಿಗೆ ಇಷ್ಟವೂ ಆದ ಉಪಕರಣಗಳನ್ನು ಅರ್ಪಿಸಿ ಪ್ರೀತಿಗೊಳಿಸಲ್ಪಡುವರೋ ಅಂತಹ ಪಿತೃಗಳು ನನ್ನ ಆರಾಧನೆಯಿಂದ ತೃಪ್ತಿಯನ್ನು ಹೊಂದಲಿ.

೩೬. ದೇವತೆಗಳಿಂದ ಅರ್ಚಿಸಲ್ಪಟ್ಟ ಯಾವ ಪಿತೃಗಳಿಗೆ ಸರ್ವವಿಧ-ವಾದ ಕವ್ಯಾನ್ನಗಳು ತೃಪ್ತಿಯನ್ನು ಕೊಡುತ್ತವೆಯೋ ಅಂತಹ ಪಿತೃದೇವತೆಗಳು ಇಲ್ಲಿ ನಾನು ಅರ್ಪಿಸುತ್ತಿರುವ ಪುಷ್ಪ-ಗಂಧ-ಅನ್ನ ಮತ್ತು ವಿವಿಧವಾದ ಭೋಜ್ಯ ಇವುಗಳನ್ನು ಸ್ವೀಕರಿಸುವಂತೆ ಸನ್ನಿಧಿಯನ್ನು ಕೊಡಲಿ.

ದಿನೇ ದಿನೇ ಯೇ ಪ್ರತಿಗೃಹ್ಣತೇಽರ್ಚಾಂ
　　ಮಾಸಾನ್ತಪೂಜ್ಯಾ ಭುವಿ ಯೇಽಷ್ಟಕಾಸು ।
ಯೇ ವತ್ಸರಾನ್ತೇಽಭ್ಯುದಯೇ ಚ ಪೂಜ್ಯಾಃ
　　ಪ್ರಯಾನ್ತು ತೇ ಮೇ ಪಿತರೋಽತ್ರ ತೃಪ್ತಿಮ್ ॥೩೭॥

ಪೂಜ್ಯಾ ದ್ವಿಜಾನಾಂ ಕುಮುದೇನ್ದುಭಾಸೋ
　　ಯೇ ಕ್ಷತ್ರಿಯಾಣಾಂ ಚ ನವಾರ್ಕವರ್ಣಾಃ ।
ತಥಾ ವಿಶಾಂ ಯೇ ಕನಕಾವದಾತಾ
　　ನೀಲೀನಿಭಾಃ ಶೂದ್ರಜನಸ್ಯ ಯೇ ಚ ॥೩೮॥

ತೇಽಸ್ಮಿನ್ ಸಮಸ್ತಾ ಮಮ ಪುಷ್ಪಗನ್ಧ-
　　ಧೂಪಾನ್ನತೋಯಾದಿನಿವೇದನೇನ ।
ತಥಾಗ್ನಿಹೋಮೇನ ಚ ಯಾನ್ತು ತೃಪ್ತಿಂ
　　ಸದಾ ಪಿತೃಭ್ಯಃ ಪ್ರಣತೋಽಸ್ಮಿ ತೇಭ್ಯಃ ॥೩೯॥

---

೩೭. ಯಾವ ಪಿತೃದೇವತೆಗಳು ಪಿತೃಯಜ್ಞದಿಂದ ಪ್ರತಿದಿನವೂ ಪೂಜೆಯನ್ನು ಸ್ವೀಕರಿಸುವರೊ, ಮಾಸದ ಅಂತ್ಯತಿಥಿಯಾದ ದರ್ಶಕಾಲದಲ್ಲಿ ಪೂಜಿಸಲ್ಪಡುವರೊ, ಮತ್ತು ಅಷ್ಟಕಾತಿಥಿ-ವರ್ಷಾಂತ್ಯದಿನ-ಅಭ್ಯುದಯಕರ್ಮ-ಗಳಲ್ಲಿ ವಿಶೇಷವಾಗಿ ಆರಾಧಿಸಲ್ಪಡುವರೋ ಅಂತಹ ಪಿತೃಗಳು ನನ್ನ ಆರಾಧನೆ-ಯಿಂದ ತೃಪ್ತಿಯನ್ನು ಹೊಂದಲಿ.

೩೮. ಮತ್ತು ಯಾವ ಪಿತೃಗಳು ವಿಪ್ರರಿಗೆ ನೈದಿಲೆ-ಚಂದ್ರರಂತೆ ಬೆಳ್ಳಗಿರುವ ಮೂರ್ತಿಯಿಂದಲೂ, ಕ್ಷತ್ರಿಯರಿಗೆ ಉದಯಿಸುತ್ತಿರುವ ಸೂರ್ಯ-ಬಿಂಬದಂತೆ ಕೆಂಪಗಿರುವ ಮೂರ್ತಿಯಿಂದಲೂ, ವೈಶ್ಯರಿಗೆ ಸುವರ್ಣದಂತೆ ಹೊಂಬಣ್ಣದ ಮೂರ್ತಿಯಿಂದಲೂ ಮತ್ತು ಶೂದ್ರರಿಗೆ ನೀಲಿಯಂತಿರುವ ಮೂರ್ತಿಯಿಂದಲೂ ಪೂಜ್ಯರಾಗಿರುವರೋ ಅಂತಹ ಪಿತೃಗಳು ನನ್ನಲ್ಲಿ ಅನುಗ್ರಹ ತೋರಲಿ.

೩೯. ಅಂತಹ ಸಮಸ್ತ ಪಿತೃಗಳು ಇಲ್ಲಿ ನಾನು ಅರ್ಪಿಸುವ ಪುಷ್ಪ-ಗಂಧ-ಧೂಪ-ಅನ್ನ-ಜಲ ಮುಂತಾದ ಸಮಸ್ತ ಉಪಚಾರಗಳ ನಿವೇದನದಿಂದಲೂ ಮತ್ತು ಅಗ್ನಿಯಲ್ಲಿ ಮಾಡುವ ಹೋಮದಿಂದಲೂ ತೃಪ್ತಿಯನ್ನು ಹೊಂದಲಿ. ನಾನು ಅಂತಹ ಪಿತೃಗಳಿಗೆ ಸರ್ವಕಾಲದಲ್ಲಿಯೂ ನಮಸ್ಕಾರಮಾಡುವೆನು.

ಯೇ ದೇವಪೂರ್ವಾಣ್ಯಭಿತೃಪ್ತಿಹೇತೋ-
ರಶ್ನನ್ತಿ ಕವ್ಯಾನಿ ಶುಭಾಹುತಾನಿ ।
ತೃಪ್ತಾಶ್ಚ ಯೇ ಭೂತಿಸೃಜೋ ಭವನ್ತಿ
ತೃಪ್ಯನ್ತು ತೇಽಸ್ಮಿನ್ಪ್ರಣತೋಽಸ್ಮಿ ತೇಭ್ಯಃ ॥೪೦॥

ರಕ್ಷಾಂಸಿ ಭೂತಾನ್ಯಸುರಾಂಸ್ತಥೋಗ್ರಾ-
ನ್ನಿರ್ನಾಶಯನ್ತಸ್ತ್ವಶಿವಂ ಪ್ರಜಾನಾಮ್ ।
ಆದ್ಯಾಃ ಸುರಾಣಾಮಮರೇಶಪೂಜ್ಯಾ-
ಸ್ತೃಪ್ಯನ್ತು ತೇಽಸ್ಮಿನ್ಪ್ರಣತೋಽಸ್ಮಿ ತೇಭ್ಯಃ ॥೪೧॥

ಅಗ್ನಿಷ್ವಾತ್ತಾ ಬರ್ಹಿಷದ ಆಜ್ಯಪಾಃ ಸೋಮಪಾಸ್ತಥಾ ।
ವ್ರಜನ್ತು ತೃಪ್ತಿಂ ಶ್ರಾದ್ಧೇಽಸ್ಮಿನ್ಪಿತರಸ್ತರ್ಪಿತಾ ಮಯಾ ॥೪೨॥

---

೪೦. ಯಾವ ಪಿತೃಗಳು ಅತಿಯಾದ ತೃಪ್ತಿಯನ್ನು ಬಯಸಿದವರಾಗಿ ಶ್ರಾದ್ಧಕರ್ಮಗಳಲ್ಲಿ ದೇವತೆಗಳಿಗೆ ಮೊದಲು ಉಪಚಾರಗಳನ್ನು ಅರ್ಪಿಸಿದ ಬಳಿಕ ವಿಧಿವತ್ತಾಗಿ ಅರ್ಪಿಸಿದ ಕವ್ಯಾನ್ನವನ್ನು ತಾವು ಭುಂಜಿಸುವರೋ ಮತ್ತು ಹಾಗೆಯೇ ತೃಪ್ತರಾಗಿ ಆರಾಧಿಸಿದವರಿಗೆ ಐಶ್ವರ್ಯವನ್ನು ಕರುಣಿಸುವರೋ ಅಂತಹ ಪಿತೃಗಳು ಈ ಆರಾಧನೆಯಿಂದ ತೃಪ್ತರಾಗಲಿ, ನಾನು ಅಂತಹ ಪಿತೃಗಳಿಗೆ ನಮಸ್ಕರಿಸುವೆನು.

೪೧. ಯಾವ ಪಿತೃಗಳು ಪ್ರಜೆಗಳಿಗೆ ಪೀಡೆಯನ್ನು ಕೊಡುವ ರಾಕ್ಷಸ-ಭೂತ-ಅಸುರ ಅಥವಾ ಉಗ್ರಪಿಶಾಚ ಮುಂತಾದುವುಗಳನ್ನು ಪರಿಹರಿಸಿ ಪೀಡೆಯನ್ನು ದೂರಮಾಡುವರೊ ಮತ್ತು ದೇವತೆಗಳಿಗೆ ಆದಿಭೂತರೂ, ದೇವರಾಜನಿಗೆ ಪೂಜ್ಯರೂ ಆಗಿರುವರೋ ಅಂತಹ ಪಿತೃಗಳಿಗೆ ನಾನು ನಮಸ್ಕಾರ-ಮಾಡುವೆನು. ಅವರು ತೃಪ್ತಿಯನ್ನು ಹೊಂದಲಿ.

೪೨. ಅಗ್ನಿಷ್ವಾತ್ತ, ಬರ್ಹಿಷದ, ಆಜ್ಯಪ ಮತ್ತು ಸೋಮಪ ಎಂಬ ಅನೇಕ ವರ್ಗರೂಪದಿಂದಿರುವ ಪಿತೃಗಳನ್ನು ಶ್ರಾದ್ಧಕರ್ಮದಿಂದ ನಾನು ತೃಪ್ತಿ-ಗೊಳಿಸುತ್ತಿರುವೆನು. ಆ ಪಿತೃಗಳು ತೃಪ್ತಿಯನ್ನು ಹೊಂದಲಿ.

ಅಗ್ನಿಷ್ವಾತ್ತಾಃ ಪಿತೃಗಣಾಃ ಪ್ರಾಚೀಂ ರಕ್ಷನ್ತು ಮೇ ದಿಶಮ್ ।
ತಥಾ ಬರ್ಹಿಷದಃ ಪಾನ್ತು ಯಾಮ್ಯಾಂ ಯೇ ಪಿತರಃ ಸ್ಮೃತಾಃ॥೪೩॥

ಪ್ರತೀಚೀಮಾಜ್ಯಪಾಸ್ತದ್ವದುದೀಚೀಮಪಿ ಸೋಮಪಾಃ ॥೪೪॥
ರಕ್ಷೋಭೂತಪಿಶಾಚೇಭ್ಯಸ್ತಥೈವಾಸುರದೋಷತಃ ।

ಸರ್ವತಶ್ಚಾಧಿಪಸ್ತೇಷಾಂ ಯಮೋ ರಕ್ಷಾಂ ಕರೋತು ಮೇ ॥೪೫॥

ವಿಶ್ವೋ ವಿಶ್ವಭುಗಾರಾಧ್ಯೋ ಧರ್ಮೋ ಧನ್ಯಃ ಶುಭಾನನಃ ।
ಭೂತಿದೋ ಭೂತಿಕೃದ್ಭೂತಿಃ ಪಿತೄಣಾಂ ಯೇ ಗಣಾ ನವ ॥೪೬॥

ಕಲ್ಯಾಣಃ ಕಲ್ಯತಾಂ ಕರ್ತಾ ಕಲ್ಯಃ ಕಲ್ಯತರಾಶ್ರಯಃ ।
ಕಲ್ಯತಾಹೇತುರನಘಃ ಷಡಿಮೇ ತೇ ಗಣಾಃ ಸ್ಮೃತಾಃ ॥೪೭॥

---

೪೩. ಅಗ್ನಿಷ್ವಾತ್ತ, ಎಂಬ ನಾಮಾಂಕಿತರಾದ ಪಿತೃಗಳು ನನ್ನನ್ನು ಪೂರ್ವದಿಕ್ಕಿನಲ್ಲಿ ರಕ್ಷಿಸಲಿ ಮತ್ತು ಬರ್ಹಿಷದರೆಂದು ಸ್ಮರಿಸಲ್ಪಟ್ಟ ಪಿತೃಗಳು ಯಾವಾಗಲೂ ನನ್ನನ್ನು ದಕ್ಷಿಣದಿಕ್ಕಿನಲ್ಲಿ ರಕ್ಷಿಸಲಿ.

೪೪. ಮತ್ತು ಆಜ್ಯಪ ಎಂದು ಪ್ರಖ್ಯಾತರಾದ ಪಿತೃಗಳ ಗಣವು ನನ್ನನ್ನು ಪಶ್ಚಿಮದಿಕ್ಕಿನಲ್ಲಿ ರಕ್ಷಣಮಾಡಲಿ. ಹಾಗು ಸೋಮಪ ಎಂದು ಕರೆಯಲ್ಪಡುವ ಪಿತೃಗಳ ವರ್ಗವು ಉತ್ತರದಿಕ್ಕಿನಲ್ಲಿ ನನ್ನನ್ನು ರಕ್ಷಿಸಲಿ.

೪೫. ಪಿತೃಗಳಿಗೆ ಅಧಿಪತಿಯಾದ ಯಮದೇವನು ರಾಕ್ಷಸ, ಭೂತ, ಪ್ರೇತ, ಪಿಶಾಚ, ಅಸುರ ಮುಂತಾದ ಸಮಸ್ತ ದುಷ್ಟಭೂತಗಳಿಂದ ಆಗುವ ಪೀಡೆಯನ್ನು ಪರಿಹರಿಸಿ ಯಾವಾಗಲೂ ನನ್ನ ರಕ್ಷಣೆಯನ್ನು ಮಾಡಲಿ.

೪೬. ಅನೇಕ ಪಿತೃಗಣಗಳಲ್ಲಿ ವಿಶ್ವ, ವಿಶ್ವಭುಕ್, ಆರಾಧ್ಯ, ಧರ್ಮ, ಧನ್ಯ, ಶುಭಾನನ, ಭೂತಿದ, ಭೂತಿಕೃತ್ ಮತ್ತು ಭೂತಿ ಎಂಬ ನಾಮಾಂಕಿತ-ವಾದ ಒಂಭತ್ತು ಪಿತೃಗಣಗಳು ಪ್ರಸಿದ್ಧವಾಗಿವೆ.

೪೭. ಕಲ್ಯಾಣ, ಕಲ್ಯತಾಂಕರ್ತಾ, ಕಲ್ಯ, ಕಲ್ಯತರಾಶ್ರಯ, ಕಲ್ಯತಾ-ಹೇತು ಮತ್ತು ಅನಘ ಎಂಬ ನಾಮಾಂಕಿತರಾದ ಪಿತೃಗಳು ಸೇರಿರುವ ಆರು ಗುಂಪುಗಳು ಪ್ರತ್ಯೇಕವಾಗಿವೆ.

ವರೋ ವರೇಣ್ಯೋ ವರದಃ ಪುಷ್ಟಿದಸ್ತುಷ್ಟಿದಸ್ತಥಾ ।
ವಿಶ್ವಪಾತಾ ತಥಾ ಧಾತಾ ಸಪ್ತೈವೈತೇ ತಥಾ ಗಣಾಃ ॥೪೮॥

ಮಹಾನ್ಮಹಾತ್ಮಾ ಮಹಿತೋ ಮಹಿಮಾವಾನ್ಮಹಾಬಲಃ ।
ಗಣಾಃ ಪಞ್ಚ ತಥೈವೈತೇ ಪಿತೄಣಾಂ ಪಾಪನಾಶನಾಃ ॥೪೯॥

ಸುಖದೋ ಧನದಶ್ಚಾನ್ಯೋ ಧರ್ಮದೋಽನ್ಯಶ್ಚ ಭೂತಿದಃ ।
ಪಿತೄಣಾಂ ಕಥ್ಯತೇ ಚೈತತ್ತಥಾ ಗಣಚತುಷ್ಟಯಮ್ ॥೫೦॥

ಏಕತ್ರಿಂಶತ್ಪಿತೃಗಣಾ ಯೈರ್ವ್ಯಾಪ್ತಮಖಿಲಂ ಜಗತ್ ।
ತೇ ಮೇಽನುತೃಪ್ತಾಸ್ತುಷ್ಯನ್ತು ಯಚ್ಛನ್ತು ಚ ಸದಾ ಹಿತಮ್ ॥೫೧॥

ಇತಿ ಶ್ರೀಮಾರ್ಕಣ್ಡೇಯಮಹಾಪುರಾಣೇ ರೌಚ್ಯಮನ್ವನ್ತರೇ
ರುಚ್ಯುಪಾಖ್ಯಾನೇ ಪಿತೃಸ್ತವನಂ ನಾಮ ತ್ರಿನವತಿತಮೋಽಧ್ಯಾಯಃ

---

೪೮. ಮತ್ತೆ ಏಳು ಪಿತೃಗಣಗಳು ಇರುತ್ತವೆ. ಆ ಗಣಗಳು ಪ್ರತ್ಯೇಕ-ವಾಗಿ ವರ, ವರೇಣ್ಯ, ವರದ, ಪುಷ್ಟಿದ, ತುಷ್ಟಿದ, ವಿಶ್ವಪಾತ ಮತ್ತು ವಿಶ್ವಧಾತ ಎಂಬ ನಾಮಾಂಕನಗಳಿಂದ ಕರೆಯಲ್ಪಡುವುವು.

೪೯. ಇನ್ನು ಐದು ಪಿತೃಗಣಗಳು ಬೇರೆಯಾಗಿವೆ. ಆ ಗಣಗಳು ಮಹಾನ್, ಮಹಾತ್ಮಾ, ಮಹಿತ, ಮಹಿಮಾವಾನ್ ಮತ್ತು ಮಹಾಬಲ ಎಂಬ ಹೆಸರಿನಿಂದ ಕರೆಯಲ್ಪಡುವುವು. ಸ್ಮರಣಮಾತ್ರದಿಂದ ಈ ಪಿತೃಗಣಗಳು ಪಾಪವನ್ನು ದೂರಮಾಡುವುವು.

೫೦. ಮತ್ತು ಸುಖದ, ಧನದ, ಧರ್ಮದ, ಭೂತಿದ—ಎಂಬ ನಾಲ್ಕು ಪಿತೃಗಣಗಳು ಪ್ರಸಿದ್ಧವಾಗಿ ಹೇಳಲ್ಪಟ್ಟದೆ. ಈ ಪಿತೃಗಣಗಳು ಸುಖ-ಧನ-ಧರ್ಮ ಮತ್ತು ಐಶ್ವರ್ಯವೆಂಬ ಫಲಗಳನ್ನು ಕರುಣಿಸುತ್ತವೆ.

೫೧. ಹೀಗೆ ಹಿಂದೆ ಹೇಳಿದ ಮೂವತ್ತೊಂದು ಪಿತೃಗಣಗಳು ಸಂಪೂರ್ಣ ಜಗತ್ತನ್ನು ವ್ಯಾಪಿಸಿಕೊಂಡಿರುವುವು. ಅಂತಹ ಪಿತೃಗಳು ನನ್ನ ಅರ್ಚನೆಯಿಂದ ತೃಪ್ತಿಹೊಂದಲಿ, ಸಂತುಷ್ಟರಾಗಲಿ, ಮತ್ತು ಯಾವಾಗಲೂ ನನಗೆ ಹಿತವನ್ನು ಕೊಡಲಿ.

ಮಾರ್ಕಂಡೇಯ ಮಹಾಪುರಾಣದಲ್ಲಿ ತೊಂಭತ್ತಮೂರನೆಯ ಅಧ್ಯಾಯವು
ಮುಗಿದುವು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಚತುರ್ನವತಿತಮೋಽಧ್ಯಾಯಃ

(ಪಿತೃವರದಾನಮ್)

ಮಾರ್ಕಣ್ಡೇಯ ಉವಾಚ :—

ಏವಂ ತು ಸ್ತುವತಸ್ತಸ್ಯ ತೇಜಸೋ ರಾಶಿರುಚ್ಛ್ರಿತಃ ।
ಪ್ರಾದುರ್ಬಭೂವ ಸಹಸಾ ಗಗನವ್ಯಾಪ್ತಿಕಾರಕಃ ||೧||

ತದ್ದೃಷ್ಟ್ವಾ ಸುಮಹತ್ತೇಜಃ ಸಮಾಸಾದ್ಯ ಸ್ಥಿತಂ ಜಗತ್ ।
ಜಾನುಭ್ಯಾಮವನಿಂ ಗತ್ವಾ ರುಚಿಃ ಸ್ತೋತ್ರಮಿದಂ ಜಗೌ ||೨||

ತೊಂಭತ್ತನಾಲ್ಕನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಹೀಗೆ ಹೇಳಿದನು :—

೧. ರುಚಿಪ್ರಜಾಪತಿಯು ಈ ಬಗೆಯಿಂದ ಸ್ತೋತ್ರಮಾಡುತ್ತಿರಲು ಆಕಾಶವನ್ನೆಲ್ಲ ವ್ಯಾಪಿಸಿರುವ ಅಗಾಧವಾದ ಒಂದು ತೇಜೋರಾಶಿಯು ಪ್ರಾದುರ್ಭಾವವಾಯಿತು.

೨. ರುಚಿಪ್ರಜಾಪತಿಯು ಜಗತ್ತನ್ನು ವ್ಯಾಪಿಸಿರುವ ಅಧಿಕವಾದ ತೇಜೋರಾಶಿಯನ್ನು ನೋಡಿ ಭಕ್ತಿಯಿಂದ ಮೊಣಕಾಲನ್ನು ನೆಲದ ಮೇಲೆ ಊರಿಕೊಂಡು ನಿಂತು ಈ ಸ್ತೋತ್ರವನ್ನು ಹೇಳಿದನು.

ರುಚಿರುವಾಚ :—

ಅಮೂರ್ತಾನಾಂ ಚ ಮೂರ್ತಾನಾಂ ಪಿತೄಣಾಂ ದೀಪ್ತತೇಜಸಾಮ್ ।
ನಮಸ್ಯಾಮಿ ಸದಾ ತೇಷಾಂ ಧ್ಯಾನಿನಾಂ ದಿವ್ಯಚಕ್ಷುಷಾಮ್ ॥೩॥

ಇನ್ದ್ರಾದೀನಾಂ ಚ ನೇತಾರೋ ದಕ್ಷಮಾರೀಚಯೋಸ್ತಥಾ ।
ಸಪ್ತರ್ಷೀಣಾಂ ತಥಾನ್ಯೇಷಾಂ ತಾನ್ನಮಸ್ಯಾಮಿ ಕಾಮದಾನ್ ॥೪॥

ಮನ್ವಾದೀನಾಂ ಮುನೀನ್ದ್ರಾಣಾಂ ಸೂರ್ಯಚನ್ದ್ರಮಸೋಸ್ತಥಾ ।
ತಾನ್ನಮಸ್ಯಾಮ್ಯಹಂ ಸರ್ವಾನ್ ಪಿತರಶ್ಚಾರ್ಣವೇಷು ಯೇ ॥೫॥

ನಕ್ಷತ್ರಾಣಾಂ ಗ್ರಹಾಣಾಂ ಚ ವಾಯ್ವಗ್ನ್ಯೋರ್ನಭಸಸ್ತಥಾ ।
ದ್ಯಾವಾಪೃಥಿವ್ಯೋಶ್ಚ ತಥಾ ನಮಸ್ಯಾಮಿ ಕೃತಾಞ್ಜಲಿಃ ॥೬॥

ರುಚಿಯು ಹೀಗೆ ಸ್ತುತಿಮಾಡಿದನು :—

೩. ಉಜ್ವಲವಾದ ತೇಜಸ್ಸುಳ್ಳವರೂ, ಧ್ಯಾನಶೀಲರೂ ಮತ್ತು ದಿವ್ಯವಾದ ದೃಷ್ಟಿಯುಳ್ಳವರೂ ಆದ ಮೂರ್ತ-ಅಮೂರ್ತ ರೂಪಗಳಿಂದ ಇರುವ ಪಿತೃಗಳನ್ನು ನಾನು ನಮಸ್ಕರಿಸುವೆನು.

೪. ಇಂದ್ರನು ಮೊದಲಾದ ದೇವತೆಗಳಿಗೂ, ದಕ್ಷ-ಮಾರೀಚ ಪ್ರಜಾಪತಿಗಳಿಗೂ ಮತ್ತು ಸಪ್ತರ್ಷಿಗಳಿಗೂ ಯಾವ ಪಿತೃಗಳು ನಾಯಕರಾಗಿರುವರೋ ಅಂತಹ ಇಷ್ಟವನ್ನು ಕೊಡುವ ಪಿತೃಗಳನ್ನು ನಾನು ನಮಸ್ಕರಿಸುವೆನು.

೫. ಹಾಗು ಮನು ಮುಂತಾದವರಿಗೂ, ಮಹಾಮುನಿಗಳಿಗೂ, ಸೂರ್ಯ-ಚಂದ್ರರಿಗೂ ನಾಯಕರಾಗಿರುವ ಪಿತೃಗಳನ್ನು ನಾನು ವಂದಿಸುವೆನು. ಮತ್ತು ಸಮುದ್ರಗಳಲ್ಲಿ ವ್ಯಾಪಿಸಿರುವ ಪಿತೃಗಳನ್ನು ನಾನು ನಮಸ್ಕರಿಸುವೆನು.

೬. ನಕ್ಷತ್ರಗಣ, ಗ್ರಹಮಂಡಲ, ವಾಯು, ಅಗ್ನಿ, ಆಕಾಶ ಮತ್ತು ದ್ಯಾವಾಪೃಥಿವಿಗಳಲ್ಲಿ ವ್ಯಾಪಿಸಿರುವ ಮಹಿಮೆಯುಳ್ಳ ಪಿತೃಗಳನ್ನು ಅಂಜಲಿಬದ್ಧನಾಗಿ ನಿಂತು ನಮಸ್ಕರಿಸುತ್ತೇನೆ.

ದೇವರ್ಷೀಣಾಂ ಗ್ರಹಾಣಾಂ ಚ ಸರ್ವಲೋಕನಮಸ್ಕೃತಾನ್ ।
ಅಕ್ಷಯ್ಯಸ್ಯ ಸದಾ ದಾತೄನ್ನಮಸ್ಯೇಽಹಂ ಕೃತಾಞ್ಜಲಿಃ ॥೭॥

ಪ್ರಜಾಪತೇಃ ಕಶ್ಯಪಾಯ ಸೋಮಾಯ ವರುಣಾಯ ಚ ।
ಯೋಗೇಶ್ವರೇಭ್ಯಶ್ಚ ಸದಾ ನಮಸ್ಯಾಮಿ ಕೃತಾಞ್ಜಲಿಃ ॥೮॥

ನಮೋ ಗಣೇಭ್ಯಃ ಸಪ್ತಭ್ಯಸ್ತಥಾ ಲೋಕೇಷು ಸಪ್ತಸು ।
ಸ್ವಯಮ್ಭುವೇ ನಮಸ್ಯಾಮಿ ಬ್ರಹ್ಮಣೇ ಯೋಗಚಕ್ಷುಷೇ ॥೯॥

ಸೋಮಾಧಾರಾನ್ ಪಿತೃಗಣಾನ್ ಯೋಗಮೂರ್ತಿಧರಾಂಸ್ತಥಾ ।
ನಮಸ್ಯಾಮಿ ತಥಾ ಸೋಮಂ ಪಿತರಂ ಜಗತಾಮಹಮ್ ॥೧೦॥

ಅಗ್ನಿರೂಪಾಂಸ್ತಥೈವಾನ್ಯಾನ್ನಮಸ್ಯಾಮಿ ಪಿತೄನಹಮ್ ।
ಅಗ್ನೀಷೋಮಮಯಂ ವಿಶ್ವಂ ಯತ ಏತದಶೇಷತಃ ॥೧೧॥

---

೭. ದೇವ-ಋಷಿ-ಗ್ರಹ ಮುಂತಾದ ಸಮಸ್ತ ಲೋಕಕ್ಕೆ ನಮಸ್ಕಾರ ಮಾಡಲು ಅರ್ಹರಾದವರೂ, ಅಕ್ಷಯವಾದ ಫಲವನ್ನು ಯಾವಾಗಲೂ ಕೊಡುವವರೂ ಆದ ಪಿತೃಗಳನ್ನು ನಾನು ಕೈಜೋಡಿಸಿಕೊಂಡು ನಮಸ್ಕರಿಸುತ್ತೇನೆ.

೮. ಕಶ್ಯಪಮುನಿ, ಪ್ರಜಾಪತಿ, ಸೋಮ, ವರುಣ ಮುಂತಾದ ಲೋಕಪಾಲಕಸ್ವರೂಪರೂ ಮತ್ತು ಯೋಗೇಶ್ವರಸ್ವರೂಪರೂ ಆದ ಪಿತೃಗಳನ್ನು ಅಂಜಲಿಯನ್ನು ಕಟ್ಟಿಕೊಂಡು ಭಕ್ತಿಯಿಂದ ನಮಸ್ಕರಿಸುವೆನು.

೯. ಪಿತೃದೇವತೆಗಳ ಏಳು ಗಣಗಳನ್ನು ನಮಸ್ಕರಿಸುವೆನು. ಸಪ್ತ-ಲೋಕವಾಸಿಗಳೂ, ಸ್ವಯಂಭುಸ್ವರೂಪರೂ, ಬ್ರಹ್ಮದೇವನಮೂರ್ತಿರೂಪರೂ ಮತ್ತು ಯೋಗದೃಷ್ಟಿಶಾಲಿಗಳೂ ಆದ ಪಿತೃಗಳಿಗೆ ನಮಸ್ಕಾರವು.

೧೦. ಚಂದ್ರಬಿಂಬವೆಂಬ ಆಧಾರದಲ್ಲಿರುವವರೂ, ಯೋಗಮೂರ್ತಿ-ಯನ್ನು ಧರಿಸಿದವರೂ ಆದ ಪಿತೃಗಳನ್ನೂ ಮತ್ತು ಜಗತ್ತಿಗೆ ಪಿತೃಸ್ವರೂಪನಾದ ಚಂದ್ರನನ್ನೂ ನಾನು ನಮಸ್ಕರಿಸುವೆನು.

೧೧. ಮತ್ತು ನಾನು ಅಗ್ನಿಸ್ವರೂಪರಾಗಿರುವ ಮತ್ತೊಂದು ಗುಂಪಿನ ಪಿತೃಗಳನ್ನು ನಮಸ್ಕರಿಸುವೆನು. ಅಗ್ನಿಸ್ವರೂಪ-ಸೋಮಸ್ವರೂಪರಾದ ಪಿತೃಗಳು ಜಗತ್ತನ್ನು ವ್ಯಾಪಿಸಿರುವುದರಿಂದ ಅಶೇಷವಿಶ್ವವು ಅಗ್ನೀಷೋಮಮಯವಾಗಿದೆ.

ಯೇ ತು ತೇಜಸಿ ಯೇ ಚೈತೇ ಸೋಮಸೂರ್ಯಾಗ್ನಿಮೂರ್ತಯಃ ।
ಜಗತ್ಸ್ವರೂಪಿಣಶ್ಚೈವ ತಥಾ ಬ್ರಹ್ಮಸ್ವರೂಪಿಣಃ ॥೧೨॥

ತೇಭ್ಯೋಽಖಿಲೇಭ್ಯೋ ಯೋಗಿಭ್ಯಃ ಪಿತೃಭ್ಯೋ ಯತಮಾನಸಃ ।
ನಮೋ ನಮೋ ನಮಸ್ತೇ ಮೇ ಪ್ರಸೀದನ್ತು ಸ್ವಧಾಭುಜಃ ॥೧೩॥

ಮಾರ್ಕಣ್ಡೇಯ ಉವಾಚ :—

ಏವಂ ಸ್ತುತಾ ತತಸ್ತೇನ ತೇಜಸಾ ಮುನಿಸತ್ತಮ ।
ನಿಶ್ಚಕ್ರಮುಸ್ತೇ ಪಿತರೋ ಭಾಸಯನ್ತೋ ದಿಶೋ ದಶ ॥೧೪॥

ನಿವೇದಿತಂ ಚ ಯತ್ತೇನ ಪುಷ್ಪಗನ್ಧಾನುಲೇಪನಮ್ ।
ತದ್ಭೂಷಿತಾನಥ ಸ ತಾನ್ದದೃಶೇ ಪುರತಃ ಸ್ಥಿತಾನ್ ॥೧೫॥

---

೧೨. ತೇಜೋಮಂಡಲದಲ್ಲಿರುವ ಪಿತೃಗಳನ್ನೂ, ಸೋಮ-ಸೂರ್ಯ-ಅಗ್ನಿ ಮೂರ್ತಿಯಿಂದ ಇರುವ ಪಿತೃಗಳನ್ನೂ, ವಿಶ್ವರೂಪದಿಂದ ಇರುವ ಪಿತೃಗಳನ್ನೂ ಮತ್ತು ಬ್ರಹ್ಮಸ್ವರೂಪದಿಂದ ಇರುವ ಪಿತೃಗಳನ್ನೂ ವಂದಿಸುವೆನು.

೧೩. ಯೋಗೇಶ್ವರರಾದ ಆ ಸಮಸ್ತ ಪಿತೃಗಳಲ್ಲಿ ಭಕ್ತಿಪರವಾದ ಮಾನಸವುಳ್ಳ, ನನಗೆ ಸ್ವಧಾನ್ನವನ್ನು ಭುಂಜಿಸಿದ ಪಿತೃಗಳು ಪ್ರಸನ್ನರಾಗಲಿ. ನಾನು ಮತ್ತೆ ಮತ್ತೆ ಆ ಪಿತೃಗಣಗಳನ್ನು ನಮಸ್ಕರಿಸುತ್ತೇನೆ.

ಮಾರ್ಕಂಡೇಯ ಮುನಿಯು ಹೀಗೆ ಹೇಳಿದನು :—

೧೪. ಎಲೈ ಮುನಿಶ್ರೇಷ್ಠನಾದ ಕ್ರೌಷ್ಟುಕಿಯೇ ! ತರುವಾಯ ರುಚಿಯಿಂದ ಈ ರೀತಿಯಾಗಿ ಸ್ತುತಿಸಲ್ಪಟ್ಟ ಆ ಪಿತೃಗಳು ಹತ್ತು ದಿಕ್ಕುಗಳನ್ನು ಪ್ರಕಾಶಪಡಿಸುತ್ತ ತೇಜೋರಾಶಿಯಿಂದ ಹೊರಟುಬಂದರು.

೧೫. ಆಗ ರುಚಿಪ್ರಜಾಪತಿಯು ತನ್ನಿಂದ ಯಾವ ಪುಷ್ಪ-ಗಂಧ-ಅನುಲೇಪನರೂಪವಾದ ಉಪಚಾರಗಳು ಅರ್ಪಿಸಲ್ಪಟ್ಟಿದ್ದುವೋ ಅವುಗಳಿಂದ ಅಲಂಕರಿಸಲ್ಪಟ್ಟು ಪ್ರತ್ಯಕ್ಷರಾಗಿ ಮುಂದೆ ನಿಂತಿರುವ ಪಿತೃಗಳನ್ನು ಕಂಡನು.

ಪ್ರಣಿಪತ್ಯ ಪುನರ್ಭಕ್ತ್ಯಾ ಪುನರೇವ ಕೃತಾಞ್ಜಲಿಃ ।
ನಮಸ್ತುಭ್ಯಂ ನಮಸ್ತುಭ್ಯಮಿತ್ಯಾಹ ಪೃಥಗಾದೃತಃ ॥೧೬॥

ತತಃ ಪ್ರಸನ್ನಾಃ ಪಿತರಸ್ತಮೂಚುರ್ಮುನಿಸತ್ತಮಮ್ ।
ವರಂ ವೃಣೀಷ್ವೇತಿ ಸ ತಾನುವಾಚಾನತಕನ್ಧರಃ ॥೧೭॥

ರುಚಿರುವಾಚ :—

ಸಾಮ್ಪ್ರತಂ ಸರ್ಗಕರ್ತೃತ್ವಮಾದಿಷ್ಟಂ ಬ್ರಹ್ಮಣಾ ಮಮ ।
ಸೋಽಹಂ ಪತ್ನೀಮಭೀಪ್ಸಾಮಿ ಧನ್ಯಾಂ ದಿವ್ಯಾಂ ಪ್ರಜಾವತೀಮ್ ॥೧೮॥

ಪಿತರ ಊಚುಃ :—

ಅದ್ಯೈವ ಸದ್ಯಃ ಪತ್ನೀ ತೇ ಭವತ್ವತಿಮನೋರಮಾ ।
ತಸ್ಯಾಂ ಚ ಪುತ್ರೋ ಭವಿತಾ ಭವತೋ ಮನುರುತ್ತಮಃ ॥೧೯॥

---

೧೬. ರುಚಿಪ್ರಜಾಪತಿಯು ಭಕ್ತಿಯಿಂದ ಮತ್ತೆ ನಮಸ್ಕರಿಸಿ ಮತ್ತು ಕೈಜೋಡಿಸಿ ಕೊಂಡವನಾಗಿ ಆ ಪಿತೃಗಳ ಸನ್ನಿಧಿಯಲ್ಲಿ ಪ್ರತಿಯೊಂದು ಪಿತೃ-ವ್ಯಕ್ತಿಯನ್ನು ಉದ್ದೇಶಿಸಿ ಆದರದಿಂದ “ ನಿನಗೆ ವಂದನೆಯು ” ಎಂದು ಹೇಳುತ್ತ ವಂದಿಸಿದನು.

೧೭. ತರುವಾಯ ಪ್ರಸನ್ನರಾದ ಪಿತೃಗಳು ಮುನಿಶ್ರೇಷ್ಠನಂತೆ ಆಚಾರವುಳ್ಳ ರುಚಿಯನ್ನು ನೋಡಿ “ ಪ್ರಸನ್ನರಾಗಿ ಬಂದ ನಿಮ್ಮಿಂದ ನೀನು ನಿನ್ನ ಇಷ್ಟವರವನ್ನು ಕೇಳಿಕೋ ” ಎಂದು ಹೇಳಿದರು. ರುಚಿಯು ಭಕ್ತಿಯಿಂದ ಬಾಗಿದ ಕತ್ತುಳ್ಳವನಾಗಿ ಹೇಳಿಕೊಂಡನು.

ರುಚಿಪ್ರಜಾಪತಿಯು ಇಂತೆಂದನು :—

೧೮. ಬ್ರಹ್ಮದೇವನಿಂದ ನನಗೆ ಸೃಷ್ಟಿಕರ್ತೃತ್ವ ಅಧಿಕಾರವು ಈಗ ಆಜ್ಞಾಪಿಸಲ್ಪಟ್ಟಿರುವುದು. ಹಾಗೆ ಆಜ್ಞೆಯನ್ನು ಹೊಂದಿದ ನಾನು ಪ್ರಜಾ-ಸಮೃದ್ಧಿಗೆ ಕಾರಣಳೂ, ದಿವ್ಯಳೂ, ಮತ್ತು ಧನ್ಯಳೂ ಆದ ಕನ್ಯೆಯನ್ನು ಹೊಂದಲು ಇಷ್ಟಪಡುತ್ತಿರುವೆನು.

ಪಿತೃಗಳು ಇಂತೆಂದರು :—

೧೯. ರುಚಿಮುನಿಯೇ ! ಸರ್ವಸುಂದರಿಯಾದ ಪತ್ನಿಯು ನಿನಗೆ ಇಂದು ಕೂಡಲೆ ದೊರೆಯುವಂತಾಗಲಿ, ಮತ್ತು ಆ ಪತ್ನಿಯಲ್ಲಿ ನಿನ್ನಿಂದ ಸರ್ವೋತ್ತಮನಾದ ಮನುರಾಜನು ಜನ್ಮವೆತ್ತಲಿ.

ಮನ್ವನ್ತರಾಧಿಪೋ ಧೀಮಾಂಸ್ತ್ವನ್ನಾಮ್ನೈವೋಪಲಕ್ಷಿತಃ ।
ರುಚೇ ರೌಚ್ಯ ಇತಿ ಖ್ಯಾತಿಂ ಯೋ ಯಾಸ್ಯತಿ ಜಗತ್ತ್ರಯೇ ॥೨೦॥

ತಸ್ಯಾಪಿ ಬಹವಃ ಪುತ್ರಾ ಮಹಾಬಲಪರಾಕ್ರಮಾಃ ।
ಭವಿಷ್ಯನ್ತಿ ಮಹಾತ್ಮಾನಃ ಪೃಥಿವೀಪರಿಪಾಲಕಾಃ ॥೨೧॥

ತ್ವಂ ಚ ಪ್ರಜಾಪತಿರ್ಭೂತ್ವಾ ಪ್ರಜಾಃ ಸೃಷ್ಟ್ವಾ ಚತುರ್ವಿಧಾಃ ।
ಕ್ಷೀಣಾಧಿಕಾರೋ ಧರ್ಮಜ್ಞ ತತಃ ಸಿದ್ಧಿಮವಾಪ್ಸ್ಯಸಿ ॥೨೨॥

ಸ್ತೋತ್ರೇಣಾನೇನ ಚ ನರೋ ಯೋಽಸ್ಮಾಂಸ್ತೋಷ್ಯತಿ ಭಕ್ತಿತಃ ।
ತಸ್ಯ ತುಷ್ಟಾ ವಯಂ ಭೋಗಾನಾತ್ಮಜ್ಞಾನಂ ತಥೋತ್ತಮಮ್ ॥೨೩॥

---

೨೦. ರುಚಿಮುನಿಯೇ! ಮನ್ವಂತರಕ್ಕೆ ಅಧಿಪತಿಯೂ, ಪ್ರಜ್ಞಾವಂತನೂ ಆದ ಯಾವ ಕುಮಾರನು ನಿನ್ನ ನಾಮಾಂಕನ ಸಂಬಂಧದಿಂದ ಅಂಕಿತನಾಗಿ "ರೌಚ್ಯ" ಎಂದು ಮೂರು ಲೋಕಗಳಲ್ಲಿ ಖ್ಯಾತಿಯನ್ನುಗಳಿಸುವನೋ ಅಂತಹ ಪುತ್ರನು ನಿನಗೆ ಲಭಿಸಲಿ.

೨೧. ಮತ್ತು ನಿನ್ನ ಪುತ್ರನಿಗೂ ಮಹತ್ತಾದ ಬಲ-ಪರಾಕ್ರಮಗಳಿಂದ ಕೂಡಿದ ಅನೇಕ ಮಂದಿ ಪುತ್ರರು ಜನಿಸಿ ಆ ಮಹಾತ್ಮರೂ ಪೃಥಿವಿಯನ್ನು ಶಾಸನ ಮಾಡುವ ರಾಜರಾಗುವರು.

೨೨. ಧರ್ಮವನ್ನು ಅರಿತ ರುಚಿಮುನಿಯೇ! ನೀನು ಪ್ರಜಾಪತಿಯ ಅಧಿಕಾರವನ್ನು ವಹಿಸಿ ನಾಲ್ಕು ಬಗೆಯ ಪ್ರಜೆಗಳನ್ನು ಸೃಷ್ಟಿಮಾಡಿ ಕ್ಷಯಗೊಳಿಸಿದ ಕರ್ತವ್ಯಭಾರದ ಅಧಿಕಾರವುಳ್ಳವನಾಗಿ ತರುವಾಯ ಸಿದ್ಧಿಯನ್ನು ಹೊಂದುತ್ತೀಯೆ.

೨೩. ಮತ್ತು ಯಾವ ಮಾನವನು ಭಕ್ತಿಯಿಂದ ಈ ದಿವ್ಯವಾದ ಸ್ತೋತ್ರದಿಂದ ನಮ್ಮನ್ನು ಸ್ತುತಿಸುವನೋ ಅವನಲ್ಲಿ ಸಂತುಷ್ಟರಾದ ನಾವು ಅನೇಕ ಭೋಗಗಳನ್ನೂ ಮತ್ತು ಸರ್ವೋತ್ತಮವಾದ ಆತ್ಮಜ್ಞಾನವನ್ನೂ ಕೊಡುವೆವು.

ಶರೀರಾರೋಗ್ಯಮರ್ಥಂ ಚ ಪುತ್ರಪೌತ್ರಾದಿಕಂ ತಥಾ ।
ಪ್ರದಾಸ್ಯಾಮೋ ನ ಸನ್ದೇಹೋ ಯಚ್ಚಾನ್ಯದಭಿವಾಞ್ಛಿತಮ್ ॥೨೪॥

ತಸ್ಮಾತ್ಪುಣ್ಯಫಲಂ ಲೋಕೇ ವಾಞ್ಛದ್ಭಿಃ ಸತತಂ ನರೈಃ ।
ಪಿತೄಣಾಂ ಚಾಕ್ಷಯಾಂ ತೃಪ್ತಿಂ ಸ್ತವ್ಯಾಃ ಸ್ತೋತ್ರೇಣ ಮಾನವೈಃ ॥೨೫॥

ವಾಞ್ಛದ್ಭಿಃ ಸತತಂ ಸ್ತವ್ಯಾಃ ಸ್ತೋತ್ರೇಣಾನೇನ ವೈ ಯತಃ ॥೨೬॥

ಶ್ರಾದ್ಧೇ ಚ ಯ ಇಮಂ ಭಕ್ತ್ಯಾ ಅಸ್ಮತ್ಪ್ರೀತಿಕರಂ ಸ್ತವಮ್ ।
ಪಠಿಷ್ಯನ್ತಿ ದ್ವಿಜಾಗ್ರ್ಯಾಣಾಂ ಭುಞ್ಜತಾಂ ಪುರತಃ ಸ್ಥಿತಃ ॥೨೭॥

---

೨೪. ಮತ್ತು ಹಾಗೆ ಭಕ್ತಿಯಿಂದ ಭಜಿಸಿದ ಮಾನವನಿಗೆ ನಾವು ಶರೀರಾರೋಗ್ಯ-ಧನ-ಪುತ್ರ-ಪೌತ್ರ ಮುಂತಾದ ಸಂತತಿ ಅಥವಾ ಇನ್ನಾವುದು ಇಷ್ಟವಾಗಿದ್ದರೂ ಆ ಇಷ್ಟ ಫಲ—ಇದೆಲ್ಲವನ್ನೂ ಕೊಡುವೆವು. ಇದರಲ್ಲಿ ಸಂದೇಹವಿಲ್ಲ.

೨೫. ಆದುದರಿಂದ ಲೋಕದಲ್ಲಿ ಪುಣ್ಯದಿಂದಲಭಿಸುವ ಭೋಗಫಲ-ವನ್ನು ಆಶಿಸುವ ಮತ್ತು ಪಿತೃಗಳಿಗೆ ಅಕ್ಷಯವಾದ ತೃಪ್ತಿಯನ್ನು ಕೊಡುವ ಮಾನವರು ಈ ಸ್ತೋತ್ರವನ್ನು ಹೇಳಿ ಪಿತೃಗಳನ್ನು ಸ್ತುತಿಮಾಡಬೇಕು.

೨೬. ಯಾವ ಕಾರಣದಿಂದ ಭಕ್ತಿಯಿಂದ ಸ್ತುತಿಸಿದ ಮಾನವನಿಗೆ ಸಮಸ್ತ ಫಲಗಳನ್ನು ಕೊಡುತ್ತೇವೆಂದು ಪಿತೃಗಳು ಪ್ರತಿಜ್ಞೆಮಾಡಿರುವರೋ ಆ ಕಾರಣದಿಂದ ಉತ್ತಮ ಫಲಗಳನ್ನು ಆಶಿಸುವವರು ಪಿತೃಗಳನ್ನು ಸ್ತೋತ್ರ-ಮಾಡಬೇಕು.

೨೭. ಮತ್ತು ಶ್ರಾದ್ಧ ಸಮಯದಲ್ಲಿ ಶ್ರೇಷ್ಠರಾದ ಬ್ರಾಹ್ಮಣರು ಭುಂಜಿಸುತ್ತಿರುವಾಗ ಅವರ ಮುಂದೆ ಕುಳಿತುಕೊಂಡು ನಮಗೆ ಪ್ರೀತಿಯನ್ನು ಉಂಟುಮಾಡುವ ಈ ಪಿತೃಸ್ತೋತ್ರವನ್ನು ಭಕ್ತಿಯಿಂದ ಪಠಿಸಬೇಕು.

ಸ್ತೋತ್ರಶ್ರವಣಸಪ್ರೀತ್ಯಾ ಸನ್ನಿಧಾನೇ ಪರೇ ಕೃತೇ ।
ಅಸ್ಮಾಕಮಕ್ಷಯಂ ಶ್ರಾದ್ಧಂ ತದ್ಭವಿಷ್ಯತ್ಯಸಂಶಯಮ್ ॥೨೮॥

ಯದ್ಯಪ್ಯಶ್ರೋತ್ರಿಯಂ ಶ್ರಾದ್ಧಂ ಯದ್ಯಪ್ಯುಪಹತಂ ಭವೇತ್ ।
ಅನ್ಯಾಯೋಪಾತ್ತವಿತ್ತೇನ ಯದಿ ವಾ ಕೃತಮನ್ಯಥಾ ॥೨೯॥

ಅಶ್ರಾದ್ಧಾರ್ಹೈರುಪಹತೈರುಪಹಾರೈಸ್ತಥಾ ಕೃತಮ್ ।
ಅಕಾಲೇಽಪ್ಯಥವಾದೇಶೇ ವಿಧಿಹೀನಮಥಾಪಿ ವಾ ॥೩೦॥

ಅಶ್ರದ್ಧಯಾ ವಾ ಪುರುಷೈರ್ದಂಭಮಾಶ್ರಿತ್ಯ ವಾ ಕೃತಮ್ ।
ಅಸ್ಮಾಕಂ ತೃಪ್ತಯೇ ಶ್ರಾದ್ಧಂ ತಥಾಪ್ಯೇತದುದೀರಣಾತ್ ॥೩೧॥

---

೨೮. ಆಗ ಸ್ತೋತ್ರವನ್ನು ಶ್ರವಣಮಾಡಿದ ಪ್ರೀತಿಯಿಂದ ನಾವು ಅನುಗ್ರಹವಿಟ್ಟು ಉತ್ತಮ ಸನ್ನಿಧಿಯನ್ನು ಕೊಡುವುದರಿಂದ ಆ ಶ್ರಾದ್ಧಕರ್ಮವು ನಿಸ್ಸಂದೇಹವಾಗಿ ನಮಗೆ ಅಕ್ಷಯವಾದ ತೃಪ್ತಿಯನ್ನು ಉಂಟುಮಾಡುವುದು.

೨೯. ಒಂದು ಸಮಯವಲ್ಲಿ ಶ್ರಾದ್ಧಕರ್ಮವು ಶ್ರೋತ್ರಿಯ ವಿಪ್ರರಿಲ್ಲದ್ದೂ, ಅನೇಕ ಉಪಘಾತಗಳಿಂದ ಕೆಟ್ಟುಹೋದುದೂ ಅಥವಾ ಅನ್ಯಾಯದಿಂದ ಆರ್ಜಿಸಿದ ಹಣದಿಂದ ಆಚರಿಸಲ್ಪಟ್ಟದ್ದೂ ಆಗಿ ಅಂಗನ್ಯೂನತೆಗಳುಳ್ಳದ್ದಾಗಿರಬಹುದು.

೩೦. ಅಥವಾ ಶ್ರಾದ್ಧಕ್ಕೆ ಅನರ್ಹವಾದ, ದುಷ್ಟವಾದ ಉಪಹಾರಗಳ ಅರ್ಪಣೆಯಿಂದ ಮಾಡಲ್ಪಟ್ಟಿರುವುದೂ, ಅಕಾಲ-ಅದೇಶಗಳಲ್ಲಿ ವಿಧಿಯಿಲ್ಲದಹಾಗೆ ಆಚರಿಸಲ್ಪಟ್ಟಿರುವುದೂ ಆಗಿ ಶ್ರಾದ್ಧಕರ್ಮವು ಕರ್ಮಲೋಪದಿಂದ ಕೂಡಿರಬಹುದು.

೩೧. ಹಾಗು ಶ್ರದ್ಧೆಯಿಲ್ಲದವರೂ, ದಂಭವನ್ನು ಹೊಂದಿದವರೂ ಆದ ಪುರುಷರಿಂದ ಮಾಡಲ್ಪಟ್ಟ ಶ್ರಾದ್ಧವು ದುಷ್ಟಕರ್ಮವಾಗಿರಬಹುದು. ಹಾಗಿದ್ದರೂ ಈದಿವ್ಯಸ್ತೋತ್ರವನ್ನು ಪಠಿಸುವುದರಿಂದ ನಮಗೆ ಆ ಶ್ರಾದ್ಧಕರ್ಮವು ಅಕ್ಷಯ ತೃಪ್ತಿಯನ್ನುಂಟುಮಾಡುವುದು.

ಯತ್ರೈತತ್ಪಠ್ಯತೇ ಶ್ರಾದ್ಧೇ ಸ್ತೋತ್ರಮಸ್ಮತ್ಸುಖಾವಹಮ್ ।
ಅಸ್ಮಾಕಂ ಜಾಯತೇ ತೃಪ್ತಿಸ್ತತ್ರ ದ್ವಾದಶವಾರ್ಷಿಕೀ ॥೩೨॥

ಹೇಮನ್ತೇ ದ್ವಾದಶಾಬ್ದಾನಿ ತೃಪ್ತಿಮೇತತ್ಪ್ರಯಚ್ಛತಿ ।
ಶಿಶಿರೇ ದ್ವಿಗುಣಾಬ್ದಾಂಶ್ಚ ತೃಪ್ತಿಸ್ತೋತ್ರಮಿದಂ ಶುಭಮ್ ॥೩೩॥

ವಸನ್ತೇ ಷೋಡಶಸಮಾಸ್ತೃಪ್ತಯೇ ಶ್ರಾದ್ಧಕರ್ಮಣಿ ।
ಗ್ರೀಷ್ಮೇ ಚ ಷೋಡಶೈವೈತತ್ಪಠಿತಂ ತೃಪ್ತಿಕಾರಕಮ್ ॥೩೪॥

ವಿಕಾಲೇಽಪಿ ಕೃತೇ ಶ್ರಾದ್ಧೇ ಸ್ತೋತ್ರೇಣಾನೇನ ಸಾಧಿತೇ ।
ವರ್ಷಾಸು ತೃಪ್ತಿರಸ್ಮಾಕಮಕ್ಷಯಾ ಜಾಯತೇ ರುಚೇ ॥೩೫॥

---

೩೨. ಯಾವ ಶ್ರಾದ್ಧಕರ್ಮದಲ್ಲಿ ನಮಗೆ ಆನಂದವನ್ನು ಉಂಟುಮಾಡುವ ಈ ಸ್ತೋತ್ರವು ಪಠಿಸಲ್ಪಡುವುದೋ ಆ ಶ್ರಾದ್ಧದಿಂದ ನಮಗೆ ಹನ್ನೆರಡು ವರ್ಷಗಳ ಪೂರ್ತಿಯಾಗಿ ತೃಪ್ತಿಯುಂಟಾಗುವುದು.

೩೩. ಮತ್ತು ಈ ಸ್ತೋತ್ರವು ಆಯಾಯ ಋತುಗಳಲ್ಲಿ ಪಠಿಸಿದ್ದರಿಂದ ವಿಶೇಷಫಲಗಳನ್ನು ಕೊಡುವುದು. ಹೇಮಂತ ಋತುವಿನಲ್ಲಿ ಈ ಸ್ತೋತ್ರಪಾಠವು ಹನ್ನೆರಡುವರ್ಷಗಳ ತೃಪ್ತಿಯನ್ನು ಕೊಡುವುದು. ಶಿಶಿರ ಋತುವಿನಲ್ಲಿ ಅದಕ್ಕೆ ದ್ವಿಗುಣವರ್ಷಗಳ ತೃಪ್ತಿಯನ್ನು ಕೊಡುವುದು.

೩೪. ಹಾಗು ವಸಂತಋತುವಿನಲ್ಲಿ ಶ್ರಾದ್ಧಸಮಯದಲ್ಲಿ ಪಠಿಸಿದ ಈ ಸ್ತೋತ್ರವು ನಮಗೆ ಹದಿನಾರು ವರ್ಷಗಳು ಪೂರ್ತಿಯಾಗಿ ತೃಪ್ತಿಯನ್ನು ಕೊಡುವುದು. ಮತ್ತು ಗ್ರೀಷ್ಮಋತುವಿನಲ್ಲಿ ಹದಿನಾರುವರ್ಷಗಳ ತೃಪ್ತಿಯನ್ನು ಉಂಟುಮಾಡುವುದು.

೩೫. ರುಚಿ ಮುನಿಯೇ! ಅಕಾಲದಲ್ಲಿ ಮಾಡಿದ್ದಾದರೂ ಅಂತಹ ಶ್ರಾದ್ಧದಲ್ಲಿ ಈ ಸ್ತೋತ್ರವನ್ನು ಪಠನಮಾಡುವುದರಿಂದ ಕರ್ಮವು ಸಂಪೂರ್ಣವಾಗುವುದು. ವರ್ಷಋತುವಿನಲ್ಲಿ ಈ ಸ್ತೋತ್ರವನ್ನು ಪಠಿಸುವುದರಿಂದ ನಮಗೆ ಅಕ್ಷಯತೃಪ್ತಿಯುಂಟಾಗುವುದು.

ಶರತ್ಕಾಲೇಽಪಿ ಪಠಿತಂ ಶ್ರಾದ್ಧಕಾಲೇ ಪ್ರಯಚ್ಛತಿ ।
ಅಸ್ಮಾಕಮೇತತ್ಪುರುಷೈಸ್ತೃಪ್ತಿಂ ಪಞ್ಚದಶಾಬ್ದಿಕೀಮ್ ॥೩೬॥

ಯಸ್ಮಿನ್ಗೃಹೇ ಚ ಲಿಖಿತಮೇತತ್ತಿಷ್ಠತಿ ನಿತ್ಯದಾ ।
ಸನ್ನಿಧಾನಕೃತೇ ಶ್ರಾದ್ಧೇ ತತ್ರಾಸ್ಮಾಕಂ ಭವಿಷ್ಯತಿ ॥೩೭॥

ತಸ್ಮಾದೇತತ್ತ್ವಯಾ ಶ್ರಾದ್ಧೇ ವಿಪ್ರಾಣಾಂ ಭುಞ್ಜತಾಂ ಪುರಃ ।
ಶ್ರವಣೀಯಂ ಮಹಾಭಾಗ ಅಸ್ಮಾಕಂ ಪುಷ್ಟಿಹೇತುಕಮ್ ॥೩೮॥

ಇತ್ಯುಕ್ತ್ವಾ ಪಿತರಸ್ತಸ್ಯ ಸ್ವರ್ಗತಾ ಮುನಿಸತ್ತಮ ॥೩೯॥

ಇತಿ ಶ್ರೀಮಾರ್ಕಣ್ಡೇಯ ಮಹಾಪುರಾಣೇ ರೌಚ್ಯಮನ್ವನ್ತರೇ
ಪಿತೃವರಪ್ರದಾನಂ ನಾಮ ಚತುರ್ನವತಿತಮೋಽಧ್ಯಾಯಃ

---

೩೬. ಮತ್ತು ಶರದೃತುವಿನಲ್ಲಿ ಆಚರಿಸಿದ ಶ್ರಾದ್ಧಸಮಯದಲ್ಲಿ ಮಾನವರಿಂದ ಪಠಿಸಲ್ಪಟ್ಟ ಈ ಸ್ತೋತ್ರವು ನಮಗೆ ಹದಿನೈದು ವರ್ಷಗಳ ದೀರ್ಘಕಾಲದಷ್ಟು ತೃಪ್ತಿಯನ್ನು ನೀಡುವುದು.

೩೭. ಬರೆಯಲ್ಪಟ್ಟ ಈ ಪಾವನ ಸ್ತೋತ್ರವು ಯಾವ ಮನೆಯಲ್ಲಿ ಯಾವಾಗಲೂ ಇರುವುದೋ ಆ ಮನೆಯಲ್ಲಿ ನಡೆಯುವ ಶ್ರಾದ್ಧಕರ್ಮಗಳಲ್ಲಿ ನಾವು ಸನ್ನಿಹಿತರಾಗಿರುವೆವು.

೩೮. ಮಹಾತ್ಮನಾದ ರುಚಿ ಮುನಿಯೇ! ಆ ಕಾರಣದಿಂದ ಶ್ರಾದ್ಧಸಮಯದಲ್ಲಿ ಭುಂಜಿಸುತ್ತಿದ್ದ ವಿಪ್ರರ ಎದುರಿನಲ್ಲಿ ನೀನು ನಮಗೆ ಸಂತೋಷವನ್ನು ಉಂಟುಮಾಡುವ ಈ ಸ್ತೋತ್ರವನ್ನು ಶ್ರವಣಮಾಡಬೇಕು.

೩೯. ಮುನಿಶ್ರೇಷ್ಠನೇ! ಕನ್ಯೆಯನ್ನು ಹೊಂದುವುದಕ್ಕೋಸ್ಕರ ಈ ರೀತಿಯಾಗಿ ಪಿತೃಗಳನ್ನು ಭಕ್ತಿಯಿಂದ ಸ್ತುತಿಮಾಡಿದ ರುಚಿಪ್ರಜಾಪತಿಗೆ ಪಿತೃಗಳು ಅನುಗ್ರಹಮಾಡಿ ಸ್ವರ್ಗಲೋಕಕ್ಕೆ ತೆರಳಿದರು.

ಮಾರ್ಕಂಡೇಯ ಮಹಾಪುರಾಣದಲ್ಲಿ ತೊಂಭತ್ತನಾಲ್ಕನೆಯ ಅಧ್ಯಾಯವು
ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಷಣ್ಣವತಿತಮೋಽಧ್ಯಾಯಃ

(ಮಾಲಿನೀಪರಿಣಯಃ)

ಮಾರ್ಕಣ್ಡೇಯ ಉವಾಚ :—

ತತಸ್ತಸ್ಮಾನ್ನದೀಮಧ್ಯಾತ್ಸಮುತ್ತಸ್ಥೌ ಮನೋರಮಾ |
ಪ್ರಮ್ಲೋಚಾ ನಾಮ ತನ್ವಙ್ಗೀ ತತ್ಸಮೀಪೇ ವರಾಪ್ಸರಾಃ ||೧||

ಸಾ ಚೋವಾಚ ಮಹಾತ್ಮಾನಂ ರುಚಿಂ ಸುಮಧುರಾಕ್ಷರಮ್ |
ಪ್ರಶ್ರಯಾವನತಾ ಸುಭ್ರೂಃ ಪ್ರಮ್ಲೋಚಾ ನೈ ವರಾಪ್ಸರಾಃ ||೨||

ತೊಂಭತ್ತಾರನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಹೇಳಿದನು :—

೧. ತರುವಾಯ ಮನೋಹರಳೂ, ಕೃಶಾಂಗಿಯೂ ಮತ್ತು ಪ್ರಮ್ಲೋಚಾ ಎಂದು ನಾಮಾಂಕಿತಳೂ ಆದ ಅಪ್ಸರಾಂಗನೆಯು ಆ ನದಿಯ ಮಧ್ಯದಿಂದ ಎದ್ದು ರುಚಿಪ್ರಜಾಪತಿಯ ಸಮೀಪಕ್ಕೆ ಬಂದಳು.

೨. ಸುಂದರವಾದ ಹುಬ್ಬುಗಳುಳ್ಳವಳೂ ಮತ್ತು ಶ್ರೇಷ್ಠ ಅಪ್ಸರಾಂಗನೆಯೂ ಆದ ಪ್ರಮ್ಲೋಚೆ ಎಂಬಾಕೆಯು ಮಹಾತ್ಮನಾದ ರುಚಿಪ್ರಜಾಪತಿಯನ್ನು ಕುರಿತು ಮಧುರವಾದ ಅಕ್ಷರಗಳಿಂದ ಕೂಡಿದ ಈ ಮಾತನ್ನು ಆಡಿದಳು.

ಅತೀವ ರೂಪಿಣೀ ಕನ್ಯಾ ಮತ್ಸುತಾ ತಪತಾಂ ವರ ।
ಜಾತಾ ವರುಣಪುತ್ರೇಣ ಪುಷ್ಕರೇಣ ಮಹಾತ್ಮನಾ ॥೩॥

ತಾಂ ಗೃಹಾಣ ಮಯಾ ದತ್ತಾಂ ಭಾರ್ಯಾರ್ಥೇ ವರವರ್ಣಿನೀಮ್ ।
ಮನುರ್ಮಹಾಮತಿಸ್ತಸ್ಯಾಂ ಸಮುತ್ಪತ್ಸ್ಯತಿ ತೇ ಸುತಃ ॥೪॥

ಮಾರ್ಕಣ್ಡೇಯ ಉವಾಚ :—

ತಥೇತಿ ತೇನ ಸಾಪ್ಯುಕ್ತಾ ತಸ್ಮಾತ್ತೋಯಾದ್ವಪುಷ್ಮತೀಮ್ ।
ಉಜ್ಜಹಾರ ತತಃ ಕನ್ಯಾಂ ಮಾಲಿನೀಂ ನಾಮ ನಾಮತಃ ॥೫॥

ನದ್ಯಾಶ್ಚ ಪುಲಿನೇ ತಸ್ಮಿನ್ ಸ ರುಚಿರ್ಮುನಿಸತ್ತಮಃ ।
ಜಗ್ರಾಹ ಪಾಣಿಂ ವಿಧಿವತ್ ಸಮಾನಾಯ್ಯ ಮಹಾಮುನೀನ್ ॥೬॥

---

೩. ತಪಸ್ವಿಗಳಲ್ಲಿ ಶ್ರೇಷ್ಠನೆನಿಸಿರುವ ರುಚಿ ಪ್ರಜಾಪತಿಯೇ! ಮಹಾತ್ಮನೂ ವರುಣಪುತ್ರನೂ ಆದ ಪುಷ್ಕರ ಎಂಬುವನಿಂದ ನನ್ನಲ್ಲಿ ಜನಿಸಿದ ನನ್ನ ಪುತ್ರಿಯು ಅತ್ಯಂತ ರೂಪವತಿಯಾದ ಕನ್ಯೆಯಾಗಿರುವಳು.

೪. ಪತ್ನಿಯನ್ನಾಗಿ ಪರಿಗ್ರಹಿಸಲೋಸ್ಕರ ನಾನು ನಿನಗೆ ಕೊಟ್ಟ ಆ ರೂಪವತಿಯಾದ ಕನ್ಯೆಯನ್ನು ನೀನು ಪರಿಗ್ರಹಿಸು. ಮಹಾಪ್ರಜ್ಞಾಶಾಲಿಯಾದ ಮನುರಾಜನು ಆಕೆಯಲ್ಲಿ ನಿನ್ನ ಪುತ್ರನಾಗಿ ಜನಿಸುವನು.

ಮಾರ್ಕಂಡೇಯ ಮುನಿಯು ಹೇಳಿದನು :—

೫. ರುಚಿಪ್ರಜಾಪತಿಯಿಂದ "ಹಾಗೆ ಆಗಲಿ" ಎಂದು ನುಡಿಯಲ್ಪಟ್ಟ ಆ ಅಪ್ಸರಾಂಗನೆಯು ಕೂಡಲೆ ಸುಂದರಗಾತ್ರಿಯೂ, ಮಾಲಿನೀ ಎಂಬ ನಾಮಾಂಕನವುಳ್ಳವಳೂ ಆದ ಕನ್ಯೆಯನ್ನು ನೀರಿನ ಮಧ್ಯದಿಂದ ಮೇಲಕ್ಕೆ ಎತ್ತಿ ತಂದಳು.

೬. ತರುವಾಯ ಮುನಿವರ್ಯನಾದ ರುಚಿ ಪ್ರಜಾಪತಿಯು ಆ ನದೀತೀರದ ಮರಳುದಿಣ್ಣೆಯಲ್ಲಿ ಅನೇಕ ಮಂದಿ ಮುನಿಗಳನ್ನು ಆಹ್ವಾನಿಸಿ ಯಥಾವಿಧಿಯಾಗಿ ಮಾಲಿನಿಯೆಂಬ ಆ ಕನ್ಯೆಯ ಪಾಣಿಗ್ರಹಣವನ್ನು ಮಾಡಿದನು.

ತಸ್ಯಾಂ ತಸ್ಯ ಸುತೋ ಜಜ್ಞೇ ಮಹಾವೀರ್ಯೋ ಮಹಾಮತಿಃ ।
ರೌಚ್ಯೋಽಭವತ್ಪಿತುರ್ನಾಮ್ನಾ ಖ್ಯಾತೋಽತ್ರ ವಸುಧಾತಲೇ ॥೭॥

ತಸ್ಯ ಮನ್ವನ್ತರೇ ದೇವಾಸ್ತಥಾ ಸಪ್ತರ್ಷಯಶ್ಚ ಯೇ ।
ತನಯಾಶ್ಚ ನೃಪಾಶ್ಚೈವ ತೇ ಸಮ್ಯಕ್ಕಥಿತಾಸ್ತವ ॥೮॥

ಧರ್ಮವೃದ್ಧಿಸ್ತಥಾರೋಗ್ಯಂ ಧನಧಾನ್ಯಸುತೋದ್ಭವಃ ।
ನೃಣಾಂ ಭವತ್ಯಸನ್ದಿಗ್ಧಮಸ್ಮಿನ್ಮನ್ವನ್ತರೇ ಶ್ರುತೇ ॥೯॥

ಪಿತೃಸ್ತವಂ ತಥಾ ಶ್ರುತ್ವಾ ಪಿತೄಣಾಂ ಚ ತಥಾ ಗಣಾನ್ ।
ಸರ್ವಾನ್ಕಾಮಾನವಾಪ್ನೋತಿ ತತ್ಪ್ರಸಾದಾನ್ಮಹಾಮುನೇ ॥೧೦॥

ಇತಿ ಶ್ರೀಮಾರ್ಕಣ್ಡೇಯ ಮಹಾಪುರಾಣೇ ಮಾಲಿನೀಪರಿಣಯೋ ನಾಮ ಷಣ್ಣವತಿತಮೋಽಧ್ಯಾಯಃ

---

೭. ರುಚಿಪ್ರಜಾಪತಿಗೆ ತನ್ನ ಪತ್ನಿಯಾದ ಮಾಲಿನಿಯಲ್ಲಿ ಮಹತ್ತಾದ ವೀರ್ಯವುಳ್ಳವನೂ, ಮಹಾಮೇಧಾವಿಯೂ ಆದ ಪುತ್ರನು ಜನಿಸಿದನು. ಅವನು ಭೂಮಂಡಲದಲ್ಲಿ ತಂದೆಯ ಹೆಸರಿನ ಸಂಬಂಧದಿಂದ ರೌಚ್ಯನೆಂದು ಖ್ಯಾತಿಗಳಿಸಿದವನಾದನು.

೮. ಆ ರೌಚ್ಯಮನ್ವಂತರದಲ್ಲಿದ್ದ ದೇವತೆಗಳು, ಸಪ್ತರ್ಷಿಗಳು, ಮತ್ತು ಅವನ ಕುಮಾರರಾಗಿ ಜನಿಸಿ ರಾಜ್ಯಭಾರಮಾಡಿದವರು ಯಾರಾರು ಇರುವರೆಂಬುದು ಹಿಂದೆ ನನ್ನಿಂದ ನಿನಗೆ ಸಮಗ್ರವಾಗಿ ಹೇಳಲ್ಪಟ್ಟಿದೆ.

೯. ಈ ರೌಚ್ಯಮನ್ವಂತರ ಚರಿತ್ರೆಯನ್ನು ಶ್ರವಣಮಾಡುವುದರಿಂದ ಮಾನವರಿಗೆ ಧರ್ಮವೃದ್ಧಿಯೂ, ಆರೋಗ್ಯವೂ ಮತ್ತು ಧನ-ಧಾನ್ಯ-ಸಂತತಿಗಳ ಸಮೃದ್ಧಿಯೂ ನಿಸ್ಸಂಶಯವಾಗಿ ಲಭಿಸುವುವು.

೧೦. ಮಹಾಮುನಿಯಾದ ಕ್ರೌಷ್ಟುಕಿಯೇ! ಹಾಗು ಇಲ್ಲಿ ಹೇಳಿದ ಪಿತೃಸ್ತೋತ್ರವನ್ನೂ ಮತ್ತು ಪಿತೃಗಳ ಗಣಗಳನ್ನೂ ಶ್ರವಣಮಾಡಿದ ಮಾನವನು ಪಿತೃಪ್ರಸಾದದಿಂದ ಸಮಸ್ತ ಇಷ್ಟಾರ್ಥಗಳನ್ನು ಹೊಂದುವನು.

ಮಾರ್ಕಂಡೆಯ ಮಹಾಪುರಾಣದಲ್ಲಿ ತೊಂಭತ್ತಾರನೆಯ
ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಷಣ್ಣವತಿತಮೋಽಧ್ಯಾಯಃ

(ಭೌತ್ಯಮನ್ವನ್ತರೇಽಗ್ನಿಸ್ತೋತ್ರಮ್)

ಮಾರ್ಕಣ್ಡೇಯ ಉವಾಚ :—

ತತಃ ಪರಂ ತು ಭೌತ್ಯಸ್ಯ ಸಮುತ್ಪತ್ತಿಂ ನಿಶಾಮಯ ।
ದೇವಾನೃಷೀಂಸ್ತಥಾ ಪುತ್ರಾಂಸ್ತಥೈವ ವಸುಧಾಧಿಪಾನ್ ॥೧॥

ಬಭೂವಾಙ್ಗಿರಸಃ ಶಿಷ್ಯೋ ಭೂತಿರ್ನಾಮಾತಿಕೋಪನಃ ।
ಚಣ್ಡಶಾಪಪ್ರದೋಽಲ್ಪೇಽರ್ಥೇ ಮುನಿರಾಗಸ್ಯಸೌಮ್ಯವಾಕ್ ॥೨॥

ತೊಂಭತ್ತಾರನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಹೇಳಿದನು :—

೧. ಇನ್ನು ಮುಂದೆ ಭೌತ್ಯನೆಂಬ ಮನುರಾಜನ ಉತ್ಪತ್ತಿಯನ್ನು ಕೇಳು. ಆ ಮನ್ವಂತರದಲ್ಲಿದ್ದ ದೇವತೆ-ಋಷಿ-ಭೌತ್ಯಮನುವಿನ ಪುತ್ರರು ಮತ್ತು ರಾಜ್ಯಭಾರಮಾಡಿದವರು ಇವರನ್ನು ಹೇಳುವೆನು. ಕೇಳು.

೨. ಹಿಂದೆ ಬಹಳ ಕೋಪಸ್ವಭಾವವುಳ್ಳವನೂ, ಅಪರಾಧವನ್ನು ಕಂಡಲ್ಲಿ ಕಠಿನವಾದ ಮಾತುಗಳನ್ನು ಆಡುವವನೂ, ಸ್ವಲ್ಪಕಾರಣದಿಂದ ಉಗ್ರಶಾಪವನ್ನು ಕೊಡುವವನೂ ಮತ್ತು ಅಂಗಿರಮುನಿಯ ಶಿಷ್ಯನೂ ಆದ ಭೂತಿ ಎಂಬ ಹೆಸರಿನ ಮುನಿಯಿದ್ದನು.

ತಸ್ಯಾಶ್ರಮೇ ಮಾತರಿಶ್ವಾ ನ ವವಾವತಿನಿಷ್ಠುರಮ್ ।
ನಾತಿತಾಪಂ ರವಿಶ್ಚಕ್ರೇ ಪರ್ಜನ್ಯೋ ನಾತಿಕರ್ದಮಮ್ ॥೩॥

ನಾತಿಶೀತಂ ಚ ಶೀತಾಂಶುಃ ಪರಿಪೂರ್ಣೋಽಪಿ ರಶ್ಮಿಭಿಃ ।
ಚಕಾರ ಭೀತ್ಯಾ ವೈ ತಸ್ಯ ಕೋಪನಸ್ಯಾತಿತೇಜಸಃ ॥೪॥

ಋತವಶ್ಚ ಕ್ರಮಂ ತ್ಯಕ್ತ್ವಾ ವೃಕ್ಷೇಷ್ವಾಶ್ರಮಜನ್ಮಸು ।
ತಸ್ಯ ಪುಷ್ಪಫಲಂ ಚಕ್ರುರಾಜ್ಞಯಾ ಸಾರ್ವಕಾಲಿಕಮ್ ॥೫॥

ಊಹುರಾಪಶ್ಚ ಛನ್ದೇನ ತಸ್ಯಾಶ್ರಮಸಮೀಪಗಾಃ ।
ಕಮಣ್ಡಲುಗತಾಶ್ಚೈವ ತಸ್ಯ ಭೀತಾ ಮಹಾತ್ಮನಃ ॥೬॥

---

೩. ಆ ಮುನಿಯ ಆಶ್ರಮದಲ್ಲಿ ಭಯದಿಂದ ಗಾಳಿಯು ಬಹಳ ಬಿರುಸಿನಿಂದ ಬೀಸುತ್ತಿರಲಿಲ್ಲ. ಸೂರ್ಯನು ಹೆಚ್ಚು ತಾಪವನ್ನು ಉಂಟುಮಾಡಲಿಲ್ಲ. ಮತ್ತು ಪರ್ಜನ್ಯದೇವನು ಹೆಚ್ಚು ಮಳೆಯಿಂದ ಕೆಸರನ್ನು ಮಾಡಲಿಲ್ಲ.

೪. ಅತಿತೇಜಸ್ವಿಯೂ ಬಲು ಕೋಪಶೀಲನೂ ಆದ ಆ ಮುನಿಯ ಭಯದಿಂದ ಸಂಪೂರ್ಣ ಬಿಂಬದಿಂದ ಕೂಡಿದ ಚಂದ್ರನು ಕೂಡ ತನ್ನ ರಶ್ಮಿಗಳಿಂದ ಹೆಚ್ಚು ಶೀತವನ್ನು ಉಂಟುಮಾಡಲಿಲ್ಲ.

೫. ಹಾಗು ಋತುಗಳು ಆ ಮುನಿಯ ಆಜ್ಞೆಯಿಂದ ಪರ್ಯಾಯವಾಗಿ ಬರುವುದನ್ನು ಬಿಟ್ಟು ಅವನ ಆಶ್ರಮದ ಬಳಿಯಿದ್ದ ವೃಕ್ಷಗಳಲ್ಲಿ ಎಲ್ಲ ಕಾಲದಲ್ಲಿಯೂ ಎಲ್ಲ ಋತುಗಳ ಫಲ-ಪುಷ್ಪಗಳ ಸಮೃದ್ಧಿಯನ್ನು ಕೊಟ್ಟವು.

೬. ಹಾಗು ನೀರು ಮಹಾತ್ಮನಾದ ಆ ಮುನಿಗೆ ಭಯಪಟ್ಟು ಅವನ ಇಷ್ಟದಂತೆ ಆಶ್ರಮದ ಬಳಿಯಲ್ಲಿ ಹರಿಯುತ್ತ ತಾನಾಗಿ ಅವನ ಜಲಪಾತ್ರ-ಕಮಂಡಲುಗಳಲ್ಲಿ ಬಂದು ತುಂಬಿಕೊಳ್ಳುತ್ತ ಪ್ರವಹಿಸುತ್ತಿತ್ತು.

ನಾತಿಕ್ಲೇಶಸಹೋ ವಿಪ್ರ ಸೋಽಭವತ್ ಕೋಪನೋ ಭೃಶಮ್ ।
ಅಪುತ್ರಶ್ಚ ಮಹಾಭಾಗಃ ಸ ತಪಸ್ಯಕರೋನ್ಮನಃ ॥೭॥

ಪುತ್ರಕಾಮೋ ಯತಾಹಾರಃ ಶೀತವಾತಾನಲಾಹತಃ ।
ತಪಸ್ಯಾಮಿ ವಿಚಿನ್ತ್ಯೇತಿ ತಪಸ್ಯೇವ ಮನೋ ದಧೇ ॥೮॥

ತಸ್ಯೇನ್ದುರ್ನಾತಿಶೀತಾಯ ನಾತಿತಾಪಾಯ ಭಾಸ್ಕರಃ ।
ಅಭವನ್ಮಾತರಿಶ್ವಾ ಚ ವವೌ ನಾತಿ ಮಹಾಮುನೇ ॥೯॥

ಅಪೀಡ್ಯಮಾನೋ ದ್ವನ್ದ್ವೈಶ್ಚ ಸ ಭೂತಿರ್ಮುನಿಸತ್ತಮಃ ।
ಅನವಾಪ್ಯಾಭಿಲಾಷಂ ತಂ ತಪಸಃ ಸನ್ನ್ಯವರ್ತತ ॥೧೦॥

---

೭. ಆ ವಿಪ್ರನು ಹೆಚ್ಚು ಕ್ಲೇಶವನ್ನು ಸಹಿಸಲಾರದವನಾಗಿದ್ದನು. ಆದರೆ ಬಲು ಕೋಪಸ್ವಭಾವವನ್ನು ಹೊಂದಿದ್ದನು. ಪುತ್ರಸಂತತಿಯಿಲ್ಲದ ಮಹಾತ್ಮನಾದ ಆ ವಿಪ್ರನು ಸಂತತಿಗೋಸ್ಕರ ತಪಶ್ಚರ್ಯೆ ಮಾಡಲು ಸಂಕಲ್ಪಿಸಿದನು.

೮. ಪುತ್ರಕಾಮನಾದ ಆ ಭೂತಿಮುನಿಯು ತ್ಯಜಿಸಿದ ಆಹಾರವುಳ್ಳವನೂ, ಶೀತ-ವಾತ-ಬಿಸಿಲು ಇವುಗಳ ಪೀಡೆಯನ್ನು ಅನುಭವಿಸುವವನೂ ಆಗಿ ತಾನು ತಪಸ್ಸನ್ನು ಮಾಡುವೆನೆಂದು ಯೋಚಿಸಿ ಹಾಗೆಯೆ ತಪಮಾಡಲು ಮನಸ್ಸನ್ನು ಮಾಡಿದನು.

೯. ಮಹಾಮುನಿಯಾದ ಕ್ರೌಷ್ಟುಕಿಯೇ! ಆ ಮುನಿಗೆ ಚಂದ್ರನು ಹೆಚ್ಚು ಶೀತವನ್ನು ಕೊಡಲಿಲ್ಲ. ಸೂರ್ಯನು ಹೆಚ್ಚು ತಪಿಸಲಿಲ್ಲ. ಮತ್ತು ಗಾಳಿಯು ಬಿರುಸಿನಿಂದ ಬೀಸಲಿಲ್ಲ. ಶೀತ ಮುಂತಾದ ಬಾಧೆಗಳಾವುವೂ ಹೆಚ್ಚಾಗಿ ಅವನನ್ನು ಪೀಡಿಸಲಿಲ್ಲ.

೧೦. ಆದರೆ ಸ್ವಲ್ಪಮಾತ್ರ ಉಂಟಾಗುತ್ತಿದ್ದ ಶೀತ-ಉಷ್ಣ ಮುಂತಾದ ದ್ವಂದ್ವಗಳ ಬಾಧೆಯನ್ನು ಸಹಿಸಲಾರದ ಮುನಿಶ್ರೇಷ್ಠನಾದ ಆ ಭೂತಿವಿಪ್ರನು ತನ್ನ ಮನೋರಥವನ್ನು ಹೊಂದಲಾಗದೆ ಅಷ್ಟರಲ್ಲಿಯೆ ತಪಶ್ಚರ್ಯೆಯನ್ನು ನಿಲ್ಲಿಸಿದನು.

ತಸ್ಯ ಭ್ರಾತಾ ಸುವರ್ಚಾರ್ಭೂದ್ಯಜ್ಞೇ ತೇನಾಭಿಮನ್ತ್ರಿತಃ ।
ಯಿಯಾಸುಃ ಶಾನ್ತಿನಾಮಾನಂ ಶಿಷ್ಯಮಾಹ ಮಹಾಮತಿಮ್ ॥೧೧॥

ಪ್ರಶಾನ್ತಮಕ್ಷಪ್ರತಿಮಂ ವಿನೀತಂ ಗುರುಕರ್ಮಣಿ ।
ಸದೋದ್ಯುಕ್ತಂ ಶುಭಾಧಾರಮುದಾರಂ ಮುನಿಸತ್ತಮಮ್ ॥೧೨॥

ಭೂತಿರುವಾಚ :

ಅಹಂ ಯಜ್ಞಂ ಗಮಿಷ್ಯಾಮಿ ಭ್ರಾತುಃ ಶಾನ್ತೇ ಸುವರ್ಚಸಃ ।
ತೇನಾಹೂತಸ್ತ್ವಯಾ ಚೇಹ ಯತ್ಕರ್ತವ್ಯಂ ಶೃಣುಷ್ವ ತತ್ ॥೧೩॥

ಅತಿಜಾಗರಣಂ ವಹ್ನೇಸ್ತ್ವಯಾ ಕಾರ್ಯಂ ಮಮಾಶ್ರಮೇ ।
ತಥಾ ತಥಾ ಪ್ರಯತ್ನೇನ ಯಥಾಗ್ನಿರ್ನ ಶಮಂ ವ್ರಜೇತ್ ॥೧೪॥

---

೧೧. ಆ ಭೂತಿವಿಪ್ರನಿಗೆ ಸುವರ್ಚ ಎಂಬ ಒಬ್ಬ ಭ್ರಾತೃವಿದ್ದನು. ಅವನಿಂದ ಭೂತಿವಿಪ್ರನು ಯಜ್ಞಕ್ಕೋಸ್ಕರ ಆಹ್ವಾನಿಸಲ್ಪಟ್ಟವನಾಗಿ ಅಲ್ಲಿಗೆ ಹೋಗುವ ಇಷ್ಟವುಳ್ಳವನಾಗಿ ಮಹಾಬುದ್ಧಿಶಾಲಿಯಾದ ಶಾಂತಿ ಎಂಬ ಹೆಸರಿನ ತನ್ನ ಶಿಷ್ಯನನ್ನು ಕರೆದು ಹೇಳಿದನು.

೧೨. ಆ ಶಿಷ್ಯನು ಶಾಂತಸ್ವಭಾವವುಳ್ಳವನೂ, ತನ್ನ ಇಂದ್ರಿಯದಂತೆ ವರ್ತಿಸುವವನೂ, ವಿನಯವಂತನೂ, ಗುರುಶುಶ್ರೂಷೆಯಲ್ಲಿ ಯಾವಾಗಲೂ ತತ್ಪರನಾದವನೂ, ಶುಭಕರನೂ, ಉದಾರಶೀಲನೂ ಮತ್ತು ಮುನಿಶ್ರೇಷ್ಠನೂ ಆಗಿ ವರ್ತಿಸಿಕೊಂಡಿದ್ದನು.

ಭೂತಿಯು ಇಂತೆಂದನು :—

೧೩. ಶಾಂತಿಯೆ! ನನ್ನ ಭ್ರಾತೃವಾದ ಸುವರ್ಚನಿಂದ ನಾನು ಯಜ್ಞಸಮಾರಂಭಕ್ಕೆ ಕರೆಯಲ್ಪಟ್ಟಿದ್ದೇನೆ. ನಾನು ಅಲ್ಲಿಗೆ ಹೋಗುತ್ತೇನೆ. ನೀನು ಇಲ್ಲಿದ್ದು ಯಾವ ಕರ್ತವ್ಯವನ್ನು ನೆರವೇರಿಸಬೇಕೋ ಆ ಕರ್ತವ್ಯವನ್ನು ಕೇಳು.

೧೪. ನನ್ನ ಆಶ್ರಮದಲ್ಲಿ ನೀನು ಅಗ್ನಿಸಂರಕ್ಷಣೆಯ ವಿಷಯದಲ್ಲಿ ಬಹಳ ಜಾಗರೂಕತೆಯನ್ನು ಇಡಬೇಕು. ಯಾವ ವಿಧದ ಪ್ರಯತ್ನದಿಂದ ಅಗ್ನಿಯು ಶಮನವಾಗುವುದಿಲ್ಲವೋ ಆ ಪ್ರಯತ್ನದಲ್ಲಿ ನೀನು ತೊಡಗಿರಬೇಕು.

ಮಾರ್ಕಣ್ಡೇಯ ಉವಾಚ :—

ಇತ್ಯಾಜ್ಞಾಪ್ಯ ತಥೇತ್ಯುಕ್ತೋ ಗುರುಃ ಶಿಷ್ಯೇಣ ಶಾನ್ತಿನಾ ।
ಜಗಾಮ ಯಜ್ಞಂ ತಂ ಭ್ರಾತುರಾಹೂತಃ ಸ ಯವೀಯಸಃ ॥೧೫॥

ಸ ಚ ಶಾನ್ತಿರ್ವನಾದ್ಯಾವತ್ಸಮಿತ್ಪುಷ್ಪಫಲಾದಿಕಮ್ ।
ಉಪಾನಯತಿ ಭೂತ್ಯರ್ಥಂ ಗುರೋಸ್ತಸ್ಯ ಮಹಾತ್ಮನಃ ॥೧೬॥

ಅನ್ಯಚ್ಚ ಕುರುತೇ ಕರ್ಮ ಗುರುಕರ್ಮವಶಾನುಗಃ ।
ಪ್ರಶಾನ್ತಸ್ತಾವದನಲೋ ಯೋಽಸೌ ಭೂತಿಪರಿಗ್ರಹಃ ॥೧೭॥

ತಂ ದೃಷ್ಟ್ವಾ ಸೋಽನಲಂ ಶಾನ್ತಂ ಶಾನ್ತಿರತ್ಯನ್ತದುಃಖಿತಃ ।
ಭೀತಶ್ಚ ಭೂತೇರ್ಬಹುಧಾ ಚಿನ್ತಾಮಾಪ ಮಹಾಮತಿಃ ॥೧೮॥

ಮಾರ್ಕಂಡೇಯ ಮುನಿಯು ಹೇಳಿದನು :—

೧೫. ಹೀಗೆಂದು ಆಜ್ಞಾಪಿಸಿ "ಹಾಗೆ ಆಗಲಿ" ಎಂದು ಶಾಂತಿ ಎಂಬ ಶಿಷ್ಯನಿಂದ ವಿಜ್ಞಾಪಿಸಲ್ಪಟ್ಟ ಗುರುವಾದ ಭೂತಿ ವಿಪ್ರನು ಕಿರಿಯ ತಮ್ಮನಾದ ಸುವರ್ಚನಿಂದ ಆಹ್ವಾನಿಸಲ್ಪಟ್ಟಂತೆ ಅವನ ಯಜ್ಞಕ್ಕೆ ಹೊರಟುಹೋದನು.

೧೬. ತರುವಾಯ ಆ ಶಾಂತಿ ಶಿಷ್ಯನು ಮಹಾತ್ಮನಾದ ಗುರುವಿನ ಕರ್ಮ ಸಮೃದ್ಧಿಗೋಸ್ಕರ ಕಾಡಿನಿಂದ ಸಮಿತ್ತು-ಪುಷ್ಪ-ಫಲ ಮುಂತಾದುವುಗಳನ್ನು ತಂದು ಸೇವೆ ಮಾಡುತ್ತಿದ್ದನು.

೧೭. ಹಾಗು ಗುರುವಿನಲ್ಲಿ ಇಟ್ಟಿದ್ದ ಭಕ್ತಿಗೆ ಪರತಂತ್ರನಾಗಿ ಮಿಕ್ಕ ಸಮಸ್ತ ಕರ್ಮವನ್ನು ತತ್ಪರತೆಯಿಂದ ಮಾಡುತ್ತಿದ್ದನು. ಅಷ್ಟರಲ್ಲಿ ಭೂತಿಗುರುವಿನ ಉಪಾಸ್ಯವಾದ ಅಗ್ನಿಯು ಶಾಂತವಾಯಿತು.

೧೮. ಮಹಾ ಪ್ರಜ್ಞಾಶಾಲಿಯಾದ ಶಾಂತಿಶಿಷ್ಯನು ಅಗ್ನಿಯು ಶಾಂತವಾದುದನ್ನು ಕಂಡು ಬಹಳ ದುಃಖಗೊಂಡವನೂ ಮತ್ತು ಗುರುವಿಗೆ ಬಹಳ ಭಯಪಟ್ಟವನೂ ಆಗಿ ನಾನಾಬಗೆಯಿಂದ ಚಿಂತಿಸತೊಡಗಿದನು.

ಕಿಂ ಕರೋಮಿ ಕಥಂ ವಾತ್ರ ಭವಿತಾಗಮನಂ ಗುರೋಃ ।
ಮಯಾದ್ಯ ಪ್ರತಿಪತ್ತವ್ಯಂ ಕಿಂ ಕೃತೇ ಸುಕೃತಂ ಭವೇತ್ ॥೧೯॥

ಪ್ರಶಾನ್ತಾಗ್ನಿಮಿಮಂ ಧಿಷ್ಣ್ಯಂ ಯದಿ ಪಶ್ಯತಿ ಮೇ ಗುರುಃ ।
ತತೋ ಮಾಂ ವಿಷಮೇ ಹ್ಯದ್ಯ ವ್ಯಸನೇ ಸನ್ನಿಯೋಕ್ಷ್ಯತಿ ॥೨೦॥

ಯದ್ಯನ್ಯಮಗ್ನಿಮತ್ರಾಹಮಗ್ನಿಸ್ಥಾನೇ ಕರೋಮಿ ತತ್ ।
ಸರ್ವಪ್ರತ್ಯಕ್ಷದೃಗ್ಧಸ್ಮ ಸೋಽವಶ್ಯಂ ಮಾಂ ಕರಿಷ್ಯತಿ ॥೨೧॥

ಸೋಽಹಂ ಪಾಪೋ ಗುರೋಸ್ತಸ್ಯ ನಿಮಿತ್ತಂ ಕೋಪಶಾಪಯೋಃ ।
ತಥಾತ್ಮಾನಂ ನ ಶೋಚಾಮಿ ಯಥಾ ಪಾಪಂ ಕೃತಂ ಗುರೋಃ ॥೨೨॥

ದೃಷ್ಟ್ವಾ ಪ್ರಶಾನ್ತಮನಲಂ ನೂನಂ ಶಪ್ಸ್ಯತಿ ಮಾಂ ಗುರುಃ ।
ಯಥಾ ವಾ ಪಾವಕಃ ಕ್ರುದ್ಧಸ್ತಥಾವೀರ್ಯೋ ಹಿ ಸ ದ್ವಿಜಃ ॥೨೩॥

---

೧೯. ಈಗ ನಾನೇನು ಮಾಡಲಿ? ಇಷ್ಟರಲ್ಲಿ ನನ್ನ ಗುರುವಿನ ಆಗಮನವಾಗುವುದು. ಈಗ ನನ್ನಿಂದ ಮಾಡಬೇಕಾದುದೇನು? ಈಗ ನಾನೇನು ಮಾಡಿದರೆ ಸರಿಯಾಗಿ ವರ್ತಿಸಿದಂತೆ ಆದೀತು?

೨೦. ನನ್ನ ಗುರುವು ಈಗ ಇಲ್ಲಿಗೆ ಬಂದು ಅಗ್ನಿಯು ಶಾಂತಿಹೊಂದಿದ ಈ ಧಿಷ್ಣ್ಯ (ಅಗ್ನಿಕುಂಡ) ವನ್ನು ನೋಡಿದರೆ ಕೂಡಲೆ ನನ್ನನ್ನು ಬಹಳ ಕಠಿನವಾದ ವಿಪತ್ತಿನಲ್ಲಿ ತಳ್ಳುವನು.

೨೧. ನಾನು ಈ ಅಗ್ನಿಸ್ಥಾನವಾದ ಕುಂಡದಲ್ಲಿ ಬೇರೊಂದು ಅಗ್ನಿಯನ್ನು ತಂದು ಇಟ್ಟರೂ ಕೂಡ ಸರ್ವವನ್ನು ಪ್ರತ್ಯಕ್ಷದಂತೆ ತಿಳಿಯಬಲ್ಲ ಗುರುವು ಆ ತಪ್ಪನ್ನು ತಿಳಿದು ತಪ್ಪದೇ ನನ್ನನ್ನು ಕೂಡಲೆ ಭಸ್ಮಮಾಡುವನು.

೨೨. ಅಂತಹ ಪಾತಕಿಯಾದ ನಾನು ಆ ಗುರುವಿನ ಕೋಪ ಮತ್ತು ಶಾಪಗಳಿಗೆ ಪಾತ್ರನಾಗಿರುವೆನು. ಆದರೆ ಗುರುವಿನ ವಿಷಯದಲ್ಲಿ ಹೀಗೆ ಅಜಾಗರೂಕತೆಯಿಂದ ಪಾಪವು ನಡೆದುದಕ್ಕೆ ನಾನು ಶೋಕಪಡುವಂತೆ ನನ್ನ ಮುಂದಿನ ದುಷ್ಪರಿಣಾಮಕ್ಕೆ ಶೋಚಿಸುವುದಿಲ್ಲ.

೨೩. ಗುರುವು ಇಲ್ಲಿಗೆ ಬಂದು ಅಗ್ನಿಯು ಶಾಂತವಾದುದನ್ನು ನೋಡಿ ಕೂಡಲೆ ನನ್ನನ್ನು ಶಪಿಸುವನು. ಜ್ವಲಿಸುವ ಅಗ್ನಿಯು ಹೇಗೋ ಕೋಪತಾಳಿದ ಆ ದ್ವಿಜನು ಕೂಡ ಅಂತಹ ಉಗ್ರವೀರ್ಯವುಳ್ಳವನಾಗಿರುವನು.

ಯಸ್ಯ ಪ್ರಭಾವಾದ್ಭಿಭ್ಯನ್ತೋ ದೇವಾಸ್ತಿಷ್ಠನ್ತಿ ಶಾಸನೇ ।
ಕೃತಾಗಸಂ ಸ ಮಾಂ ಯುಕ್ತ್ಯಾ ಕಯಾ ನೋ ಧರ್ಷಯಿಷ್ಯತಿ ॥೨೪॥

ಮಾರ್ಕಣ್ಡೇಯ ಉವಾಚ :—

ಬಹುಧೈವಂ ವಿಚಿನ್ತ್ಯಾಸೌ ಭೀತಸ್ತಸ್ಯ ಸದಾ ಗುರೋಃ ।
ಯಯೌ ಮತಿಮತಾಂ ಶ್ರೇಷ್ಠಃ ಶರಣಂ ಜಾತವೇದಸಮ್ ॥೨೫॥

ಸ ಚಕಾರ ತದಾ ಸ್ತೋತ್ರಂ ಸಪ್ತಾರ್ಚಿರ್ಯತಮಾನಸಃ ।
ಸ ಚೈಕಚಿತ್ತೋ ಮೇದಿನ್ಯಾಂ ನ್ಯಸ್ತಜಾನುಃ ಕೃತಾಞ್ಜಲಿಃ ॥೨೬॥

ಶಾನ್ತಿರುವಾಚ :—

ಓಂ ನಮಃ ಸರ್ವಭೂತಾನಾಂ ಸಾಧನಾಯ ಮಹಾತ್ಮನೇ ।
ಏಕದ್ವಿಪಞ್ಚಧಿಷ್ಣ್ಯಾಯ ರಾಜಸೂಯೇ ಷಡಾತ್ಮನೇ ॥೨೭॥

---

೨೪. ಯಾವ ಗುರುವಿನ ಪ್ರಭಾವದಿಂದ ದೇವತೆಗಳು ಭಯಪಟ್ಟು ಗುರುಶಾಸನದಂತೆ ನಡೆದುಕೊಳ್ಳುವರೊ ಅಂತಹ ಗುರುವು ಹೇಗೆ ಅಪರಾಧ-ಮಾಡಿದ ನನ್ನನ್ನು ಯಾವ ಕಾರಣದಿಂದ ಕ್ಲೇಶಗೊಳಿಸದಿರುವನು ?

ಮಾರ್ಕಂಡೇಯ ಮುನಿಯು ಹೀಗೆಂದನು :—

೨೫. ಯಾವಾಗಲೂ ಆ ಗುರುವಿನ ವಿಷಯದಲ್ಲಿ ಭಯಗೊಂಡಿರುವ ಮತ್ತು ವಿವೇಕವಂತರಲ್ಲಿ ಶ್ರೇಷ್ಠನಾದ ಶಾಂತಿಶಿಷ್ಯನು ಹೀಗೆ ಬಗೆ ಬಗೆಯಾಗಿ ಚಿಂತಿಸಿ ಕಡೆಗೆ ಅಗ್ನಿಯನ್ನು ಶರಣು ಹೊಂದಿದನು.

೨೬. ಆಗ ಆ ಶಿಷ್ಯನು ನಿಗ್ರಹಿಸಿದ ಮಾನಸವುಳ್ಳವನೂ, ಏಕಾಗ್ರತೆಯ ಚಿತ್ತವುಳ್ಳವನೂ, ನೆಲದಲ್ಲಿ ಮೊಣಕಾಲುಗಳನ್ನು ಊರಿಕೊಂಡವನೂ ಮತ್ತು ಅಂಜಲಿಯನ್ನು ಕಟ್ಟಿಕೊಂಡವನೂ ಆಗಿ ಏಳು ಜ್ವಾಲೆಗಳಿಂದ ಕೂಡಿದ ಅಗ್ನಿ-ಯನ್ನು ಸ್ತೋತ್ರಮಾಡಿದನು.

ಶಾಂತಿಯು ಹೀಗೆ ಸ್ತುತಿಮಾಡಿದನು :—

೨೭. ಸಮಸ್ತ ಭೂತಗಳಿಗೆ ಸಾಧಕನೂ, ಮಹಾತ್ಮನೂ, ಒಂದು-ಎರಡು ಅಥವಾ ಐದು ಸಂಖ್ಯೆಯ ಧಿಷ್ಣ್ಯಗಳಲ್ಲಿ ಆಯಾಯ ನಾಮ-ರೂಪಗಳಿಂದ ಇರುವವನೂ, ರಾಜಸೂಯಯಾಗದಲ್ಲಿ ಆರು ರೂಪಗಳಿಂದ ಇರುವವನೂ ಮತ್ತು ಪ್ರಣವರೂಪಿಯೂ ಆದ ಅಗ್ನಿಯನ್ನು ನಮಸ್ಕರಿಸುವೆನು.

ನಮಃ ಸಮಸ್ತದೇವಾನಾಂ ವೃತ್ತಿದಾಯ ಸುವರ್ಚಸೇ ।
ಶುಕ್ರರೂಪಾಯ ಜಗತಾಮಶೇಷಾಣಾಂ ಸ್ಥಿತಿಪ್ರದಃ ॥೨೮॥

ತ್ವಂ ಮುಖಂ ಸರ್ವದೇವಾನಾಂ ತ್ವಯಾತ್ತಂ ಭಗವನ್ ಹವಿಃ ।
ಪ್ರೀಣಯಸ್ಯಖಿಲಾನ್ ದೇವಾನ್ ತ್ವತ್ಪ್ರಾಣಾಃ ಸರ್ವದೇವತಾಃ ॥೨೯॥

ಹುತಂ ಹವಿಸ್ತ್ವಯ್ಯನಲ ಮೇಘತ್ವಮುಪಗಚ್ಛತಿ ।
ತತಶ್ಚ ಜಲರೂಪೇಣ ಪರಿಣಾಮಮುಪೈತಿ ಯತ್ ॥೩೦॥

ತೇನಾಖಿಲೌಷಧೀಜನ್ಮ ಭವತ್ಯನಿಲಸಾರಥೇ ।
ಓಷಧೀಭಿರಶೇಷಾಭಿಃ ಸುಖಂ ಜೀವನ್ತಿ ಜನ್ತವಃ ॥೩೧॥

ವಿತನ್ವತೇ ನರಾ ಯಜ್ಞಾಂಸ್ತ್ವತ್ಸೃಷ್ಟಾಷ್ವೋಷಧೀಷು ಚ ।
ಯಜ್ಞೈರ್ದೇವಾಸ್ತಥಾ ದೈತ್ಯಾಸ್ತದ್ವದ್ರಕ್ಷಾಂಸಿ ಪಾವಕ ॥೩೨॥

---

೨೮. ಮತ್ತು ಸಮಸ್ತ ದೇವತೆಗಳಿಗೆ ಜೀವನವನ್ನು ಕೊಡುವವನೂ, ಉತ್ತಮವಾದ ವರ್ಚಸ್ಸಿನಿಂದ ಕೂಡಿದವನೂ, ಶುದ್ಧ ಸ್ವರೂಪನೂ ಮತ್ತು ಸಮಸ್ತ ಜಗತ್ತಿನ ಸ್ಥಿತಿಗೆ ಕಾರಣನೂ ಆದ ಅಗ್ನಿದೇವನಿಗೆ ನಮಸ್ಕಾರವು.

೨೯. ನೀನು ಸಮಸ್ತ ದೇವತೆಗಳಿಗೆ ಮುಖರೂಪನಾಗಿರುವೆ. ಪೂಜ್ಯನೆ! ನಿನ್ನಿಂದ ಸ್ವೀಕರಿಸಲ್ಪಟ್ಟ ಹವಿಸ್ಸು ಸಮಸ್ತ ದೇವತೆಗಳನ್ನು ತೃಪ್ತಿಗೊಳಿಸುವುದು. ಸಮಸ್ತ ದೇವತೆಗಳಿಗೂ ನೀನು ಪ್ರಾಣಸ್ವರೂಪನಾಗಿದ್ದೀಯೆ.

೩೦. ಎಲೈ ಅಗ್ನಿದೇವನೇ! ನಿನ್ನಲ್ಲಿ ಹೋಮಮಾಡಿದ ಹವಿಸ್ಸು ಮೇಘದ ರೂಪವನ್ನು ಹೊಂದುವುದು. ಮತ್ತು ಮೇಘದಲ್ಲಿ ಸೇರಿದ ಹವಿಸ್ಸು ನೀರಿನ ರೂಪವಾಗಿ ಪರಿಣಾಮವಾಗುವುದು.

೩೧. ವಾಯುವೇ ಸಾರಥಿಯಾಗಿ ಇರುವ ಅಗ್ನಿದೇವನೆ! ಆ ನೀರು ಮಳೆಯಾಗಿ ಬಿದ್ದು ಅನೇಕ ಸಸ್ಯವರ್ಗವು ಹುಟ್ಟುವುದು. ಹಾಗೆ ಬೆಳೆದ ಸಮಸ್ತ ಓಷಧಿಗಳಿಂದ ಪ್ರಾಣಿಗಳು ಸುಖವಾಗಿ ಜೀವಿಸುತ್ತವೆ.

೩೨. ಪೂಜ್ಯನಾದ ಅಗ್ನಿಯೇ! ಹೀಗೆ ನಿನ್ನಿಂದ ಸೃಜಿಸಲ್ಪಟ್ಟ ಓಷಧಿಗಳಿಂದ ಮಾನವರು ಅನೇಕ ಯಜ್ಞಕರ್ಮಗಳನ್ನು ಆಚರಿಸುತ್ತಾರೆ. ಆ ಯಜ್ಞಗಳಿಂದ ದೇವತೆಗಳು, ದೈತ್ಯರು ಮತ್ತು ರಾಕ್ಷಸರು ಪ್ರೀತಿಹೊಂದುವರು.

ಆಪ್ಯಾಯ್ಯನ್ತೇ ಚ ತೇ ಯಜ್ಞಾಸ್ತ್ವದಾಧಾರಾ ಹುತಾಶನ ।
ಅತಃ ಸರ್ವಸ್ಯ ಯೋನಿಸ್ತ್ವಂ ವಹ್ನೇ ಸರ್ವಮಯಸ್ತಥಾ ॥೩೩॥

ದೇವತಾ ದಾನವಾ ಯಕ್ಷಾ ದೈತ್ಯಾ ಗನ್ಧರ್ವರಾಕ್ಷಸಾಃ ।
ಮಾನುಷಾಃ ಪಶವೋ ವೃಕ್ಷಾ ಮೃಗಪಕ್ಷಿಸರೀಸೃಪಾಃ ॥೩೪॥

ಆಪ್ಯಾಯ್ಯನ್ತೇ ತ್ವಯಾ ಸರ್ವೇ ಸಂವರ್ಧ್ಯನ್ತೇ ಚ ಪಾವಕ ।
ತ್ವತ್ತ ಏವೋದ್ಭವಂ ಯಾನ್ತಿ ತ್ವಯ್ಯನ್ತೇ ಚ ತಥಾ ಲಯಮ್ ॥೩೫॥

ಅಪಃ ಸೃಜಸಿ ದೇವ ತ್ವಂ ತ್ವಮತ್ಸಿ ಪುನರೇವ ತಾಃ ।
ಪಚ್ಯಮಾನಾಸ್ತ್ವಯಾ ತಾಶ್ಚ ಪ್ರಾಣಿನಾಂ ಪುಷ್ಟಿಕಾರಣಮ್ ॥೩೬॥

---

೩೩. ಹುತವನ್ನು ಭುಂಜಿಸುವ ಅಗ್ನಿಯೆ! ಹೀಗೆ ಯಜ್ಞಗಳಿಂದ ದೇವತೆ ಮುಂತಾದವರಿಗೆ ತೃಪ್ತಿಯಾಗುವುದು. ಆ ಯಜ್ಞಗಳು ನಿನ್ನ ಆಧಾರದಿಂದ ನಡೆಯುವುವು. ಅಗ್ನಿದೇವನೇ! ಆದ್ದರಿಂದ ಸಮಸ್ತ ವಿಶ್ವಕ್ಕೆ ಕಾರಣನಾಗಿದ್ದೀಯೆ. ಮತ್ತು ಸರ್ವಾತ್ಮಕನೂ ಆಗಿದ್ದೀಯೆ.

೩೪. ದೇವತೆ-ದಾನವ-ಯಕ್ಷ-ದೈತ್ಯ-ಗಂಧರ್ವ-ರಾಕ್ಷಸ-ಮಾನುಷ-ಪಶು-ವೃಕ್ಷ-ಮೃಗ-ಪಕ್ಷಿ ಮತ್ತು ಸರ್ಪ ಮುಂತಾದ ಸಮಸ್ತ ಪ್ರಾಣಿಗಳಿಗೂ ನಿನ್ನಿಂದ ತೃಪ್ತಿಯು ದೊರೆಯಬೇಕಾಗಿರುವುದು.

೩೫. ಅಗ್ನಿದೇವನೇ! ಹೀಗೆ ಸಮಸ್ತ ಪ್ರಾಣಿಗಳು ನಿನ್ನಿಂದ ತೃಪ್ತಿಗೊಳಿಸಲ್ಪಡುತ್ತವೆ. ನಿನ್ನಿಂದ ವೃದ್ಧಿಗೊಳಿಸಲ್ಪಡುತ್ತವೆ. ನಿನ್ನಿಂದಲೆ ಉತ್ಪತ್ತಿಯನ್ನು ಹೊಂದುತ್ತವೆ. ಮತ್ತು ನಿನ್ನಲ್ಲಿಯೇ ಲಯವನ್ನು ಹೊಂದುತ್ತವೆ.

೩೬. ಅಗ್ನಿದೇವನೇ! ನೀನು ಜಲವನ್ನು ಸೃಷ್ಟಿಮಾಡುತ್ತೀಯೆ. ಮತ್ತೆ ಆ ಜಲವನ್ನು ನೀನೇ ಪಾನಮಾಡುತ್ತೀಯೆ. ಪಾನಮಾಡಿದ ಜಲವು ನಿನ್ನಿಂದ ಸರಿಯಾಗಿ ಪಚನವಾದರೆ ಅದು ಪ್ರಾಣಿಗಳಿಗೆ ಪುಷ್ಟಿಕಾರಣವಾಗುವುದು.

ದೇವೇಷು ತೇಜೋರೂಪೇಣ ಕಾನ್ತ್ಯಾ ಸಿದ್ಧೇಷ್ವವಸ್ಥಿತಃ ।
ವಿಷರೂಪೇಣ ನಾಗೇಷು ವಾಯುರೂಪಃ ಪತತ್ರಿಷು ||೩೭||

ಮನುಜೇಷು ಭವಾನ್ ಕ್ರೋಧೋ ಮೋಹಃ ಪಕ್ಷಿಮೃಗಾದಿಷು ।
ಅವಷ್ಟಮ್ಭೋಽಸಿ ತರುಷು ಕಾಠಿನ್ಯಂ ತ್ವಂ ಮಹೀಂ ಪ್ರತಿ ||೩೮||

ಜಲೇ ದ್ರವಸ್ತ್ವಂ ಭಗವಾಞ್ಜವರೂಪೀ ತಥಾನಿಲೇ ।
ವ್ಯಾಪಿತ್ವೇನ ತಥೈವಾಗ್ನೇ ನಭಸಿ ತ್ವಂ ವ್ಯವಸ್ಥಿತಃ ||೩೯||

ತ್ವಮಗ್ನೇ ಸರ್ವಭೂತಾನಾಮನ್ತಶ್ಚರಸಿ ಪಾಲಯನ್ ।
ತ್ವಾಮೇಕಮಾಹುಃ ಕವಯಸ್ತ್ವಾಮಾಹುಸ್ತ್ರಿವಿಧಂ ಪುನಃ ||೪೦||

---

೩೭. ಅಗ್ನಿಯೇ! ನೀನು ದೇವತೆಗಳಲ್ಲಿ ತೇಜೋರೂಪದಿಂದಲೂ, ಸಿದ್ಧರೆಂಬ ದೇವತೆಗಳಲ್ಲಿ ಕಾಂತಿಯ ರೂಪದಿಂದಲೂ, ಸರ್ಪಗಳಲ್ಲಿ ವಿಷದರೂಪದಿಂದಲೂ ಮತ್ತು ಪಕ್ಷಿಗಳಲ್ಲಿ ವಾಯುವಿನ ರೂಪದಿಂದಲೂ ಇದ್ದು ಉಪಕಾರಮಾಡುತ್ತೀಯೆ.

೩೮. ಮತ್ತು ಮಾನವರಲ್ಲಿ ನೀನು ಕ್ರೋಧರೂಪನಾಗಿರುತ್ತೀಯೆ. ಪಕ್ಷಿ-ಮೃಗಗಳಲ್ಲಿ ಮೋಹದ ರೂಪದಿಂದ ಇರುತ್ತೀಯೆ. ಮರಗಳಲ್ಲಿ ಧೀರತನದ ರೂಪದಿಂದ ಇರುತ್ತೀಯೆ ಮತ್ತು ಭೂಮಿಯಲ್ಲಿ ಕಾಠಿನ್ಯರೂಪದಿಂದ ಇರುತ್ತೀಯೆ.

೩೯. ಅಗ್ನಿಯೇ! ಜಲದಲ್ಲಿ ದ್ರವಾಂಶದಿಂದ ನೀನು ಇರುತ್ತೀಯೆ. ವಾಯುವಿನಲ್ಲಿ ವೇಗದ ಅಂಶದಿಂದ ನೀನು ಇರುತ್ತೀಯೆ. ಹಾಗು ವ್ಯಾಪಕತ್ವದ ರೂಪದಿಂದ ನೀನು ಆಕಾಶದಲ್ಲಿ ನೆಲೆಸಿದ್ದೀಯೆ.

೪೦. ಅಗ್ನಿದೇವನೇ! ನೀನು ಸಮಸ್ತ ಪ್ರಾಣಿಗಳ ಶರೀರದ ಒಳಭಾಗದಲ್ಲಿ ಸಂಚರಿಸುತ್ತ ರಕ್ಷಣಮಾಡುತ್ತೀಯೆ. ಪ್ರಾಜ್ಞರು ನಿನ್ನನ್ನು ಏಕರೂಪನೆಂದು ಹೇಳುವರು. ಮತ್ತೆ ನಿನ್ನನ್ನು ಮೂರುರೂಪಗಳಿಂದ ಕೂಡಿದವನೆಂದು ಹೇಳುವುದೂ ಉಂಟು.

ತ್ವಾಮಷ್ಟಧಾ ಕಲ್ಪಯಿತ್ವಾ ಯಜ್ಞವಾಹಮಕಲ್ಪಯನ್ ।
ತ್ವಯಾ ಸೃಷ್ಟಮಿದಂ ವಿಶ್ವಂ ವದನ್ತಿ ಪರಮರ್ಷಯಃ ॥೪೧॥

ತ್ವಾಮೃತೇ ಹಿ ಜಗತ್ಸರ್ವಂ ಸದ್ಯೋ ನಶ್ಯೇದ್ಧುತಾಶನ ॥೪೨॥

ತುಭ್ಯಂ ಕೃತ್ವಾ ದ್ವಿಜಃ ಪೂಜಾಂ ಸ್ವಕರ್ಮವಿಹಿತಾಂ ಗತಿಮ್ ।
ಪ್ರಯಾತಿ ಹವ್ಯಕವ್ಯಾದ್ಯೈಃ ಸ್ವಧಾಸ್ವಾಹಾಭ್ಯುದೀರಣಾತ್ ॥೪೩॥

ಪರಿಣಾಮಾತ್ಮವೀರ್ಯಾಣಿ ಪ್ರಾಣಿನಾಮಮರಾರ್ಚಿತ ।
ದಹನ್ತಿ ಸರ್ವಭೂತಾನಿ ತತೋ ನಿಷ್ಕ್ರಮ್ಯ ಹೇತಯಃ ॥೪೪॥

---

೪೧. ನಿನ್ನನ್ನು ಎಂಟು ಬಗೆಯ ರೂಪದಿಂದ ಇರುವಂತೆ ಕಲ್ಪಿಸಿ ಪ್ರಾಜ್ಞರು ನಿನ್ನಲ್ಲಿ ಯಜ್ಞಗಳಲ್ಲಿ ಕೊಟ್ಟ ಆಹುತಿಯನ್ನು ವಹಿಸುವವನೆಂದು ಮಹಿಮೆಯನ್ನು ಕಲ್ಪಿಸಿರುವರು. ಮಹರ್ಷಿಗಳು ಈ ವಿಶ್ವವೆಲ್ಲವೂ ನಿನ್ನಿಂದ ಸೃಷ್ಟಿಸಲ್ಪಟ್ಟದೆಯೆಂದು ಹೇಳುವರು.

೪೨. ಹೋಮಮಾಡಿದ ಹವಿಸ್ಸನ್ನು ಭುಂಜಿಸುವ ಅಗ್ನಿದೇವನೇ! ನಿನ್ನ ಅವಲಂಬನೆಯು ಇಲ್ಲದಿದ್ದರೆ ಈ ಸಮಸ್ತ ವಿಶ್ವವು ಕೂಡಲೆ ನಾಶ-ಹೊಂದುವುದು. ಜಗತ್ತಿನ ಸೃಷ್ಟಿ-ಲಯಗಳು ನಿನ್ನಿಂದ ಆಗುತ್ತಿರುವುವು.

೪೩. ದ್ವಿಜನು ಸ್ವಧಾ-ಸ್ವಾಹಾ ಮಂತ್ರಗಳನ್ನು ಉಚ್ಚರಿಸಿ ಯಥಾ-ವಿಧಿಯಾಗಿ ಹವ್ಯ-ಕವ್ಯ ಆಹುತಿಗಳನ್ನು ನಿನ್ನಲ್ಲಿ ಅರ್ಪಿಸಿ ನಿನಗೆ ಆರಾಧನೆ-ಯನ್ನು ಮಾಡಿ ತನ್ನ ಕರ್ಮಾನುಸಾರವಾಗಿ ಲಭ್ಯವಾದ ಗತಿಯನ್ನು ಹೊಂದುವನು.

೪೪. ದೇವತೆಗಳಿಗೆ ಪೂಜ್ಯನಾದ ಅಗ್ನಿಯೇ! ನಿನ್ನಿಂದ ಹೊರಟ ಜ್ವಾಲೆಗಳು ಪ್ರಾಣಿಗಳ ಪರಿಣಾಮ- ಆತ್ಮವೀರ್ಯಗಳನ್ನು ಧ್ವಂಸಮಾಡ-ಬಲ್ಲವು. ಆದ್ದರಿಂದ ಸರ್ವಭೂತಗಳನ್ನು ದಹಿಸುವ ಶಕ್ತಿಯನ್ನು ನೀನು ಹೊಂದಿರುತ್ತೀಯೆ.

ಜಾತವೇದಸ್ತ್ವಯ್ಯೈವೇದಂ ವಿಶ್ವಂ ಸೃಷ್ಟಂ ಮಹಾದ್ಯುತೇ ।
ತವೈವ ವೈದಿಕಂ ಕರ್ಮ ಸರ್ವಭೂತಾತ್ಮಕಂ ಜಗತ್ ॥೪೫॥

ನಮಸ್ತೇಽನಲ ಪಿಙ್ಗಾಕ್ಷ ನಮಸ್ತೇಽಸ್ತು ಹುತಾಶನ ।
ಪಾವಕಾದ್ಯ ನಮಸ್ತೇಽಸ್ತು ನಮಸ್ತೇ ಹವ್ಯವಾಹನ ॥೪೬॥

ತ್ವಮೇವ ಸರ್ವಭೂತಾನಾಂ ಪಾವನಾದ್ವಿಶ್ವಪಾವನಃ ।
ತ್ವಮೇವ ಭುಕ್ತಪೀತಾನಾಂ ಪಾಚನಾದ್ವಿಶ್ವಪಾಚಕಃ ॥೪೭॥

ಸಸ್ಯಾನಾಂ ಪಾಕಕರ್ತಾ ತ್ವಂ ಪೋಷ್ಟಾ ತ್ವಂ ಜಗತಸ್ತಥಾ ।
ತ್ವಮೇವ ಮೇಘಸ್ತ್ವಂ ವಾಯುಸ್ತ್ವಂ ಬೀಜಂ ಸಸ್ಯಹೇತುಕಮ್ ॥೪೮॥

---

೪೫. ಮಹತ್ತಾದ ತೇಜಸ್ಸಿನಿಂದ ಪ್ರಕಾಶಿಸುವ ಅಗ್ನಿದೇವನೇ ! ನಿನ್ನಿಂದ ಈ ಜಗತ್ತು ಸೃಷ್ಟಿಸಲ್ಪಟ್ಟಿರುವುದು. ವೈದಿಕ ಕರ್ಮವೆಲ್ಲವೂ ನಿನ್ನ ಆರಾಧನಾರೂಪವಾಗಿರುವುದು. ಮತ್ತು ಸಮಸ್ತಭೂತಗಳಿಂದ ಪೂರ್ಣವಾದ ಜಗತ್ತು ನಿನ್ನ ಅಂಶವಾಗಿರುವುದು.

೪೬. ಹೊಂಬಣ್ಣದ ಕಣ್ಣುಗಳಿಂದ ಶೋಭಿಸುವ ಅಗ್ನಿಯೇ ! ನಿನಗೆ ನಮಸ್ಕಾರವು. ಮತ್ತು ಹವಿಸ್ಸನ್ನು ತೆಗೆದುಕೊಂಡು ಹೋಗುವವನೇ ! ನಿನಗೆ ನಮಸ್ಕಾರವು.

೪೭. ನೀನು ಸಮಸ್ತ ಪ್ರಾಣಿಗಳನ್ನು ಪಾವನಮಾಡುವುದರಿಂದ ವಿಶ್ವಪಾವನನೆಂದು ಯಥಾರ್ಥವಾದ ಹೆಸರನ್ನು ಹೊಂದಿದ್ದೀಯೆ. ಮತ್ತು ನೀನೇ ಪ್ರಾಣಿಗಳು ಭಕ್ಷಿಸಿದ, ಪಾನಮಾಡಿದ ವಸ್ತುಗಳ್ನು ಪರಿಪಕ್ವವನ್ನಾಗಿ ಮಾಡುವುದರಿಂದ ವಿಶ್ವಪಾಚಕನೆಂದೆನಿಸಿದ್ದೀಯೆ.

೪೮. ಮತ್ತು ಸಸ್ಯವರ್ಗವನ್ನು ಪರಿಪಾಕಮಾಡುವವನು ನೀನು. ಹಾಗು ಜಗತ್ತನ್ನು ಪೋಷಣಗೊಳಿಸುವವನು ನೀನು. ನೀನೇ ಮೋಡವು. ನೀನೇ ಗಾಳಿಯು. ಮತ್ತು ಸಸ್ಯಸಂಪತ್ತಿಗೆ ಕಾರಣವಾದ ಬೀಜವು ನೀನೇ ಆಗಿದ್ದೀಯೆ.

ಪೋಷಾಯ ಸರ್ವಭೂತಾನಾಂ ಭೂತಭವ್ಯಭವೋ ಹ್ಯಸಿ ।
ತ್ವಂ ಜ್ಯೋತಿಃ ಸರ್ವಭೂತೇಷು ತ್ವಮಾದಿತ್ಯೋ ವಿಭಾವಸುಃ ॥೪೯॥

ತ್ವಮಹಸ್ತ್ವಂ ತಥಾ ರಾತ್ರಿರುಭೇ ಸನ್ಧ್ಯೇ ತಥಾ ಭವಾನ್ ।
ಹಿರಣ್ಯರೇತಾಸ್ತ್ವಂ ವಹ್ನೇ ಹಿರಣ್ಯೋದ್ಭವಕಾರಣಮ್ ॥೫೦॥

ಹಿರಣ್ಯಗರ್ಭಶ್ಚ ಭವಾನ್ ಹಿರಣ್ಯಸದೃಶಪ್ರಭಃ ।
ತ್ವಂ ಮುಹೂರ್ತಂ ಕ್ಷಣಶ್ಚ ತ್ವಂ ತ್ವಂ ತ್ರುಟಿಸ್ತ್ವಂ ತಥಾ ಲವಃ ॥೫೧॥

ಕಲಾಕಾಷ್ಠಾನಿಮೇಷಾದಿರೂಪೇಣಾಸಿ ಜಗತ್ಪ್ರಭೋ ।
ತ್ವಮೇತದಖಿಲಂ ಕಾಲಃ ಪರಿಣಾಮಾತ್ಮಕೋ ಭವಾನ್ ॥೫೨॥

---

೪೯. ಸಮಸ್ತ ಪ್ರಾಣಿಗಳ ಪೋಷಣೆಯನ್ನು ಉಂಟುಮಾಡುವವನು ಭೂತ-ಭವಿಷ್ಯ-ವರ್ತಮಾನ ಕಾಲಗಳಲ್ಲಿ ನೀನೇ ಆಗಿದ್ದೀಯೆ. ಸರ್ವ ಭೂತಗಳಲ್ಲಿರುವ ಜ್ಯೋತಿಯು ನೀನು, ಸೂರ್ಯದೇವನು ನೀನು, ಮತ್ತು ಅಗ್ನಿರೂಪವನ್ನು ತಾಳಿದವನು ನೀನು.

೫೦. ಎಲೈ, ಅಗ್ನಿದೇವನೇ! ಹಗಲು ನೀನು, ರಾತ್ರಿ ಸಮಯವೂ ನೀನು. ಮತ್ತು ಎರಡು ಸಂಧ್ಯಾ ಸಮಯಗಳು ನೀನು. ಮತ್ತು ಸುವರ್ಣ ರೂಪವಾದ ವೀರ್ಯವುಳ್ಳವನಾದ್ದರಿಂದ ಸುವರ್ಣದ ಉತ್ಪತ್ತಿಗೆ ನೀನೇ ಕಾರಣನಾಗಿದ್ದೀಯೆ.

೫೧. ಅಗ್ನಿಯೇ! ಹಿರಣ್ಯವನ್ನು ಗರ್ಭದಲ್ಲಿ ನೀನು ಧರಿಸಿದ್ದೀಯೆ. ಹಿರಣ್ಯಕ್ಕೆ ಸಮಾನವಾದ ಪ್ರಭೆಯುಳ್ಳವನಾಗಿದ್ದೀಯೆ. ನೀನು ಮುಹೂರ್ತ, ಕ್ಷಣ, ತ್ರುಟಿ, ಮತ್ತು ಲವಗಳೆಂಬ ಸೂಕ್ಷ್ಮಕಾಲಾಂಶಗಳ ಸ್ವರೂಪನಾಗಿದ್ದೀಯೆ.

೫೨. ಜಗತ್ತಿನ ಪ್ರಭುವಾದ ಅಗ್ನಿಯೇ! ನೀನು ಕಲಾ-ಕಾಷ್ಠಾ-ನಿಮೇಷ ಮುಂತಾದ ಕಾಲಾಂಶಗಳ ರೂಪದಿಂದ ಸಮಸ್ತಕಾಲ ಸ್ವರೂಪದಿಂದ ಇರುತ್ತೀಯೆ ನೀನು ಸಮಸ್ತ ಪರಿಣಾಮಗಳ ಸ್ವರೂಪನಾಗಿರುತ್ತೀಯೆ.

ಯಾ ಜಿಹ್ವಾ ಭವತಃ ಕಾಲೀ ಕಾಲನಿಷ್ಠಾಕರೀ ಪ್ರಭೋ ।
ತಯಾ ನಃ ಪಾಹಿ ಪಾಪೇಭ್ಯ ಐಹಿಕಾಚ್ಚ ಮಹಾಭಯಾತ್ ॥೫೩॥

ಕರಾಲೀ ನಾಮ ಯಾ ಜಿಹ್ವಾ ಮಹಾಪ್ರಲಯಕಾರಣಮ್ ।
ತಯಾ ನಃ ಪಾಹಿ ಪಾಪೇಭ್ಯ ಐಹಿಕಾಚ್ಚ ಮಹಾಭಯಾತ್ ॥೫೪॥

ಮನೋಜವಾ ಚ ಯಾ ಜಿಹ್ವಾ ಲಘಿಮಾಗುಣಲಕ್ಷಣಾ ।
ತಯಾ ನಃ ಪಾಹಿ ಪಾಪೇಭ್ಯ ಐಹಿಕಾಚ್ಚ ಮಹಾಭಯಾತ್ ॥೫೫॥

ಕರೋತಿ ಕಾಮಂ ಭೂತೇಭ್ಯೋ ಯಾ ತೇ ಜಿಹ್ವಾ ಸುಲೋಹಿತಾ ।
ತಯಾ ನಃ ಪಾಹಿ ಪಾಪೇಭ್ಯ ಐಹಿಕಾಚ್ಚ ಮಹಾಭಯಾತ್ ॥೫೬॥

ಸಧೂಮ್ರವರ್ಣಾ ಯಾ ಜಿಹ್ವಾ ಪ್ರಾಣಿನಾಂ ರೋಗದಾಯಿಕಾ ।
ತಯಾ ನಃ ಪಾಹಿ ಪಾಪೇಭ್ಯ ಐಹಿಕಾಚ್ಚ ಮಹಾಭಯಾತ್ ॥೫೭॥

---

೫೩. ಪ್ರಭುವಾದ ಅಗ್ನಿಯೇ! ಕಾಲದ ನಿಷ್ಠೆಯನ್ನು ನೆರವೇರಿಸುವ ನಿನ್ನ ಕಾಲಿ ಎಂಬ ನಾಮಾಂಕಿತವಾದ ಯಾವ ನಾಲಿಗೆಯಿದೆಯೋ ಅದರಿಂದ ನಮ್ಮನ್ನು ಪಾಪಗಳಿಂದ ಮೋಚನ ಮಾಡು. ಮತ್ತು ಮಹತ್ತ್ವದ ಐಹಿಕ ಭಯದಿಂದ ರಕ್ಷಿಸು.

೫೪. ಮತ್ತು ಮಹಾಪ್ರಲಯಕ್ಕೆ ಕಾರಣವಾದ ನಿನ್ನ ಕರಾಲಿ ಎಂಬ ನಾಮಾಂಕಿತವಾಗಿ ಯಾವ ನಾಲಿಗೆಯಿದೆಯೋ ಆ ನಾಲಿಗೆಯಿಂದ ಐಹಿಕ ಮಹಾಭಯದಿಂದಲೂ ಮತ್ತು ಪಾಪಗಳಿಂದಲೂ ರಕ್ಷಿಸು.

೫೫. ಅಗ್ನಿದೇವನೇ! ಲಘಿಮಾ ಎಂಬ ಗುಣದಿಂದ ಪೂರ್ಣವಾದ ನಿನ್ನ ಮನೋಜವಾ ಎಂಬ ನಾಮಾಂಕಿತವಾದ ನಾಲಿಗೆಯಿಂದ ನಮ್ಮನ್ನು ರಕ್ಷಿಸು. ಅದರಿಂದ ನಮ್ಮ ಪಾಪಗಳನ್ನೂ ಐಹಿಕಮಹಾಭಯವನ್ನೂ ದೂರಮಾಡು.

೫೬. ಸರ್ವಭೂತಗಳನ್ನು ವಹಿಸುವ ಕಾಮದಿಂದ ಕೂಡಿದ ನಿನ್ನ ಸುಲೋಹಿತಾ ಎಂಬ ನಾಮಾಂಕಿತವುಳ್ಳ ನಾಲಿಗೆಯಿಂದ ನಮ್ಮ ಪಾಪ ಮತ್ತು ಐಹಿಕ ಮಹಾಭಯಗಳನ್ನು ತಪ್ಪಿಸಿ ನಮ್ಮನ್ನು ರಕ್ಷಿಸು.

೫೭. ನಿನ್ನ ಸುಧೂಮ್ರವರ್ಣಾ ಎಂಬ ನಾಮಾಂಕಿತವಾದ ನಾಲಿಗೆಯು ಪ್ರಾಣಿಗಳಿಗೆ ರೋಗವನ್ನು ಕೊಡುವುದಾಗಿದೆ. ಆ ನಾಲಿಗೆಯಿಂದ ಪಾಪ ಮತ್ತು ಐಹಿಕ ಮಹಾಭಯಗಳನ್ನು ಪರಿಹರಿಸಿ ನಮ್ಮನ್ನು ರಕ್ಷಿಸು.

ಸ್ಫುಲಿಙ್ಗಿನೀ ಚ ಯಾ ಜಿಹ್ವಾ ಯತಃ ಸಕಲಪುದ್ಗಲಾಃ ।
ತಯಾ ನಃ ಪಾಹಿ ಪಾಪೇಭ್ಯ ಐಹಿಕಾಚ್ಚ ಮಹಾಭಯಾತ್ ॥೫೮॥

ಯಾ ತೇ ವಿಶ್ವಸೃಜಾ ಜಿಹ್ವಾ ಪ್ರಾಣಿನಾಂ ಶರ್ಮದಾಯಿನೀ ।
ತಯಾ ನಃ ಪಾಹಿ ಪಾಪೇಭ್ಯ ಐಹಿಕಾಚ್ಚ ಮಹಾಭಯಾತ್ ॥೫೯॥

ಪಿಙ್ಗಾಕ್ಷ ಲೋಹಿತಗ್ರೀವ ಕೃಷ್ಣವರ್ತ್ಮ ಹುತಾಶನ ।
ತ್ರಾಹಿ ಮಾಂ ಸರ್ವದೋಷೇಭ್ಯಃ ಸಂಸಾರಾದುದ್ಧರೇಹ ಮಾಮ್ ॥೬೦॥

ಪ್ರಸೀದ ವಹ್ನೇ ಸಪ್ತಾರ್ಚಿಃ ಕೃಶಾನೋ ಹವ್ಯವಾಹನ ।
ಅಗ್ನಿಪಾವಕಶುಕ್ರಾದಿನಾಮಾಷ್ಟಭಿರುದೀರಿತಃ ॥೬೧॥

---

೫೮. ಸಮಸ್ತ ವಸ್ತುಗಳ ಉತ್ಪತ್ತಿಗೆ ಕಾರಣವಾದ ನಿನ್ನ ಸ್ಫುಲಿಂಗಿನೀ ಎಂಬ ನಾಮಾಂಕಿತವಾದ ನಾಲಿಗೆಯಿಂದ ನಮ್ಮ ಪಾತಕ-ಐಹಿಕ ಮಹಾಭಯ-ಗಳನ್ನು ನಿವಾರಣಮಾಡಿ ನಮ್ಮನ್ನು ರಕ್ಷಣಮಾಡು.

೫೯. ಮತ್ತು ವಿಶ್ವಸೃಜಾ ಎಂಬ ನಾಮಾಂಕಿತವಾದ ನಿನ್ನ ನಾಲಿಗೆಯು ಪ್ರಾಣಿಗಳಿಗೆ ಸುಖವನ್ನು ಕೊಡುವುದಾಗಿದೆ. ಆ ನಿನ್ನ ನಾಲಿಗೆಯಿಂದ ನಮ್ಮನ್ನು ಪಾಲಿಸು. ನಮ್ಮ ಪಾಪಗಳನ್ನೂ ಐಹಿಕಮಹಾಭಯಗಳನ್ನೂ ದೂರಮಾಡು.

೬೦. ಹೊಂಬಣ್ಣದ ಕಣ್ಣುಗಳಿಂದ ಕೂಡಿದವನೇ! ಕೆಂಪುಕಂಠವುಳ್ಳ-ವನೇ! ಕಪ್ಪಾದ ಹೊಗೆಯಮಾರ್ಗವುಳ್ಳವನೇ! ಮತ್ತು ಹುತವಾದ ಹವಿಸ್ಸನ್ನು ಭುಂಜಿಸುವವನೇ! ಸಮಸ್ತದೋಷಗಳಿಂದ ನನ್ನನ್ನು ರಕ್ಷಿಸು. ನನ್ನನ್ನು ಸಂಸಾರ ದುಃಖದಿಂದ ಉದ್ಧರಿಸು.

೬೧. ಹೋಮಮಾಡಿದ ಹವಿಸ್ಸನ್ನು ವಹಿಸುವವನೇ! ಏಳು ಜ್ವಾಲೆ-ಗಳುಳ್ಳವನೇ! ಹವ್ಯವನ್ನು ಭುಂಜಿಸುವವನೇ! ಮತ್ತು ಪ್ರಪಂಚವನ್ನು ದಹಿಸಿ ಕ್ಷಯಿಸುವ ಶಕ್ತಿಸಂಪನ್ನನಾದ ಅಗ್ನಿಯೆ! ಅಗ್ನಿ-ಪಾವಕ-ಶುಕ್ರ ಮುಂತಾದ ಎಂಟು ನಾಮಾವಳಿಯಿಂದ ನೀನು ಸ್ತುತಿಸಲ್ಪಡುವವನಾಗಿದ್ದೀಯೆ.

ಅಗ್ನೇಽಗ್ರೇ ಸರ್ವಭೂತಾನಾಂ ಸಮುತ್ಪತ್ತಿರ್ವಿಭಾವಸೋ ।
ಪ್ರಸೀದ ಹವ್ಯವಾಹಾಖ್ಯ ಅಭಿಷ್ಟುತ ಮಯಾವ್ಯಯ ||೬೨||

ತ್ವಮಕ್ಷಯೋ ವಹ್ನಿರಚಿನ್ತ್ಯರೂಪಃ
ಸಮೃದ್ಧಿಮಾನ್ದುಷ್ಪ್ರಸಹೋಽತಿತೀವ್ರಃ ।
ತವಾವ್ಯಯಂ ಭೀಮಮಶೇಷಲೋಕ-
ಸಂವರ್ಧಕಂ ಹನ್ತ್ಯಥವಾತಿವೀರ್ಯಮ್ ||೬೩||

ತ್ವಮುತ್ತಮಂ ತತ್ತ್ವಮಶೇಷಸತ್ತ್ವ-
ಹೃತ್ಪುಣ್ಡರೀಕಸ್ಥಮನನ್ತಮೀಡ್ಯಮ್ ।
ತ್ವಯಾ ತತಂ ವಿಶ್ವಮಿದಂ ಚರಾಚರಂ
ಹುತಾಶನೈಕೋ ಬಹುಧಾ ತ್ವಮತ್ರ ||೬೪||

---

೬೨. ಅಗ್ನಿಯೇ! ಸಮಸ್ತಭೂತಗಳ ಮುಂದೆ ನೀನು ಉತ್ಪತ್ತಿಯನ್ನು ಹೊಂದಿದವನಾಗಿದ್ದೀಯೆ. ನನ್ನಿಂದ ಸ್ತುತಿಸಲ್ಪಟ್ಟವನೂ ಮತ್ತು ವ್ಯಯವಿಲ್ಲದವನೂ ಆದ ಅಗ್ನಿಯೇ! ನೀನು ನನ್ನಲ್ಲಿ ಅನುಗ್ರಹತೋರುವವನಾಗು.

೬೩. ಅಗ್ನಿಯೇ! ನೀನು ಕ್ಷಯವಿಲ್ಲದವನೂ, ಮನಸ್ಸಿನಲ್ಲಿ ಯೋಚಿಸಲಾಗದ ರೂಪವುಳ್ಳವನೂ ಆಗಿದ್ದೀಯೆ, ಸಮೃದ್ಧಿಯಾಗಿ ಜ್ವಲಿಸುವವನೇ! ನೀನು ಅತಿ ತೀಕ್ಷ್ಣರೂಪನೂ ಯಾರಿಂದಲೂ ಸಹಿಸಲಾಗದವನೂ ಆಗಿದ್ದೀಯೆ. ನಿನ್ನ ಅವ್ಯಯವೂ ಭಯಂಕರವೂ ಆದ ಅತಿ ವೀರ್ಯವು ಅಶೇಷಲೋಕವನ್ನು ಧ್ವಂಸಮಾಡುವುದೂ ಮತ್ತು ಲೋಕವನ್ನು ವೃದ್ಧಿಗೊಳಿಸುವುದೂ ಆಗಿದೆ.

೬೪. ಹುತವಾದುದನ್ನು ಭುಂಜಿಸುವ ಅಗ್ನಿಯೇ! ನೀನು ಸರ್ವೋತ್ತಮವಾದ ತತ್ತ್ವಸ್ವರೂಪನೂ, ಸಮಸ್ತ ಪ್ರಾಣಿಗಳ ಹೃದಯ ಪುಂಡರೀಕದಲ್ಲಿ ವಾಸಮಾಡುವವನೂ, ಅಂತಶೂನ್ಯನೂ, ಸ್ತುತಿಸಲ್ಪಡುವವನೂ ಆಗಿದ್ದೀಯೆ. ನಿನ್ನಿಂದ ಈ ಚರ-ಅಚರ ವಿಶ್ವವೆಲ್ಲವೂ ವ್ಯಾಪಿಸಲ್ಪಟ್ಟಿದೆ. ಈ ಲೋಕದಲ್ಲಿ ನೀನು ಏಕರೂಪನೂ, ಬಹುರೂಪವುಳ್ಳವನೂ ಆಗಿದ್ದೀಯೆ.

ತ್ವಮಕ್ಷಯಃ ಸಗಿರಿವನಾ ವಸುನ್ಧರಾ
ನಭಃ ಸಸೋಮಾರ್ಕಮಹರ್ದಿವಾಖಿಲಮ್ ।
ಮಹೋದಧೇರ್ಜಠರಗತಶ್ಚ ವಾಡಬೋ
ಭವಾನ್ವಿಭುಃ ಪಿಬತಿ ಪಯಾಂಸಿ ಪಾವಕ ॥೬೫॥

ಹುತಾಶನಸ್ತ್ವಮಿತಿ ಸದಾಭಿಪೂಜ್ಯಸೇ
ಮಹಾಕ್ರತೌ ನಿಯಮಪರೈರ್ಮಹರ್ಷಿಭಿಃ ।
ಅಭಿಷ್ಟುತಃ ಪಿಬಸಿ ಚ ಸೋಮಮಧ್ವರೇ
ವಷಟ್ಕೃತಾನ್ಯಪಿ ಚ ಹವೀಂಷಿ ಭೂತಯೇ ॥೬೬॥

ತ್ವಂ ವಿಪ್ರೈಃ ಸತತಮಿಹೇಜ್ಯಸೇ ಫಲಾರ್ಥಂ
ವೇದಾಙ್ಗೇಷ್ವಥ ಸಕಲೇಷು ಗೀಯಸೇ ತ್ವಮ್ ।
ತ್ವದ್ಧೇತೋರ್ಯಜನಪರಾಯಣಾ ದ್ವಿಜೇನ್ದ್ರಾ
ವೇದಾಙ್ಗಾನ್ಯಧಿಗಮಯನ್ತಿ ಸರ್ವಕಾಲೇ ॥೬೭॥

---

೬೫. ಅಗ್ನಿಯೇ! ಕ್ಷಯವಿಲ್ಲದವನೂ, ಗಿರಿವನಗಳಿಂದ ಕೂಡಿದ ಭೂಮಿಯ ಸ್ವರೂಪನೂ, ಆಕಾಶ-ಚಂದ್ರ-ಸೂರ್ಯ-ಹಗಲು-ರಾತ್ರಿ ಮುಂತಾದ ಸಕಲ ಸ್ವರೂಪನೂ ಆಗಿದ್ದೀಯೆ. ಸರ್ವವ್ಯಾಪಕವಾದ ನೀನು ಮಹೋದಧಿಯ ಜಠರದಲ್ಲಿ ಬಡಬಾಗ್ನಿಯ ರೂಪದಿಂದ ವಾಸಿಸುತ್ತ ಅದರ ನೀರನ್ನು ಪಾನ-ಮಾಡುತ್ತೀಯೆ

೬೬. ಮಹತ್ತಾದ ಯಜ್ಞಸಮಾರಂಭದಲ್ಲಿ ಹವಿಸ್ಸನ್ನು ಭುಂಜಿಸುವವನೆಂದು ನಿಯಮಪರರಾದ ಮಹರ್ಷಿಗಳಿಂದ ನೀನು ಪೂಜಿಸಲ್ಪಡುತ್ತೀಯೆ. ಹಾಗು ಯಾಗಗಳಲ್ಲಿ ಸ್ತುತಿಸಲ್ಪಟ್ಟವನಾಗಿ ಕಲ್ಯಾಣಪ್ರಾಪ್ತಿಗೋಸ್ಕರ ಅರ್ಪಿಸಿದ ಸೋಮರಸವನ್ನೂ ಮತ್ತು ವಷಟ್ಕಾರಮಂತ್ರಪಠನಪೂರ್ವಕವಾಗಿ ಅರ್ಪಿಸಿದ ಹವಿಸ್ಸನ್ನೂ ಸ್ವೀಕರಿಸುತ್ತೀಯೆ.

೬೭. ನೀನು ಆಯಾಯ ಫಲಪ್ರಾಪ್ತಿಗೋಸ್ಕರ ವಿಪ್ರರಿಂದ ಪೂಜಿಸಲ್ಪಡುತ್ತೀಯೆ. ನೀನು ಸಮಸ್ತ ವೇದಾಂಗಗ್ರಂಥಗಳಲ್ಲಿ ಸ್ತುತಿಸಲ್ಪಡುತ್ತೀಯೆ ಮತ್ತು ಯಾಗಮಾಡುವ ಸಂತತ ಆಸಕ್ತಿಯುಳ್ಳ ವಿಪ್ರರು ನಿನ್ನ ಉದ್ದೇಶದಿಂದ ಎಲ್ಲ ಸಮಯದಲ್ಲಿ ವೇದಾಂಗಗಳನ್ನು ಪಠಿಸಿ ನಿನ್ನನ್ನು ಧ್ಯಾನಿಸಿಕೊಳ್ಳುವರು.

ತ್ವಂ ಬ್ರಹ್ಮಾ ಯಜನಪರಸ್ತಥೈವ ವಿಷ್ಣು-
ರ್ಭೂತೇಶಃ ಸುರಪತಿರರ್ಯಮಾ ಜಲೇಶಃ ।
ಸೂರ್ಯೇನ್ದೂ ಸಕಲಸುರಾಸುರಾಶ್ಚ ಹವ್ಯೈಃ
ಸನ್ತೋಷ್ಯಾಭಿಮತಫಲಾನ್ಯಥಾಪ್ನುವನ್ತಿ ॥೬೮॥

ಅರ್ಚಿರ್ಭಿಃ ಪರಮಮಹೋಪಘಾತದುಷ್ಟಂ
ಸಂಸ್ಪೃಷ್ಟಂ ತವ ಶುಚಿ ಜಾಯತೇ ಸಮಸ್ತಮ್ ।
ಸ್ನಾನಾನಾಂ ಪರಮಮತೀವ ಭಸ್ಮನಾ ಸ-
ತ್ಸನ್ಧ್ಯಾಯಾಂ ಮುನಿಭಿರತೀವ ಸೇವ್ಯತೇ ತತ್ ॥೬೯॥

ತತ್ಕೃತ್ವಾ ತ್ರಿದಿವಮವಾಪ್ನುವನ್ತಿ ಲೋಕಾಃ ।
ಸದ್ಭಕ್ತ್ಯಾ ಸುಖನಿಯತಾಃ ಸಮೂಹಗೀತಮ್ ॥೭೦॥

---

೬೮. ಅಗ್ನಿಯೇ ! ಯಾಗಕರ್ಮಕ್ಕೆ ಮುಖ್ಯಾಧಾರನು ನೀನಾಗಿದ್ದೀಯೆ, ಬ್ರಹ್ಮ, ವಿಷ್ಣು, ಈಶ್ವರ, ದೇವರಾಜ, ಅರ್ಯಮ, ವರುಣ, ಸೂರ್ಯ, ಚಂದ್ರ ಮತ್ತು ಸಮಸ್ತ ಸುರ–ಅಸುರರ ಗುಣಗಳು ಸಂತೋಷಪಟ್ಟು ಯಜ್ಞಭಾಗವನ್ನು ಭುಂಜಿಸುವರು. ಹಾಗು ಯಾಗಮಾಡಿದವರು ಆಯಾಯ ದೇವತೆಗಳಿಂದ ಹೊಂದ ಬೇಕಾದ ಅಭಿಮತಫಲವನ್ನು ಹೊಂದುವರು.

೬೯. ಮತ್ತು ಅತಿಯಾದ ಉಪಘಾತಗಳಿಂದ ದುಷ್ಟವಾದ ಸಮಸ್ತ ವಸ್ತುಗಳು ನಿನ್ನ ಜ್ವಾಲೆಗಳ ಸ್ಪರ್ಶವನ್ನು ಹೊಂದಿಕೊಂಡು ಪವಿತ್ರವಾಗುವುವು. ನಿನ್ನ ಭಸ್ಮವು ಸ್ನಾನಗಳಲ್ಲೆಲ್ಲ ಉತ್ತಮವಾದ ಭಸ್ಮಸ್ನಾನವನ್ನು ನೆರವೇರಿಸುವ ಸಾಧನವಾಗಿದೆ. ಮಹರ್ಷಿಗಳಿಂದ ಸಂಧ್ಯಾಸಮಯಗಳಲ್ಲಿ ನಿನ್ನ ಭಸ್ಮವು ಅವಶ್ಯವಾಗಿ ಧರಿಸಲ್ಪಡಬೇಕಾದುದು.

೭೦. ಶಿಷ್ಟಜನರು ಭಸ್ಮಧಾರಣ ಮುಂತಾದುವನ್ನು ಮಾಡಿ ಸುಖ-ಭೋಗಕ್ಕೆ ಭಾಗಿಗಳಾಗಿ ಭಕ್ತಿಯಿಂದ ಈ ಸ್ತುತಿಪಾಠವನ್ನು ಮಾಡಿ ಸ್ವರ್ಗಾದಿ ಸದ್ಗತಿಯನ್ನು ಹೊಂದುವರು.

ಪ್ರಸೀದ ವಹ್ನೇ ಶುಚಿನಾಮಧೇಯ
ಪ್ರಸೀದ ವಾಯೋ ವಿಮಲಾತಿದೀಪ್ತೇ ।
ಪ್ರಸೀದ ಮೇ ಪಾವಕ ವೈದ್ಯುತಾಭ
ಪ್ರಸೀದ ಹವ್ಯಾಶನ ಪಾಹಿ ಮಾಂ ತ್ವಮ್ ॥೭೧॥

ಯತ್ತೇ ವಹ್ನೇ ಶಿವಂ ರೂಪಂ ಯೇ ಚ ತೇ ಸಪ್ತ ಹೇತಯಃ ।
ತೈಃ ಪಾಹಿ ನಃ ಸ್ತುತೋ ದೇವ ಪಿತಾ ಪುತ್ರಮಿವಾತ್ಮಜಮ್ ॥೭೨॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಭೌತ್ಯಮನ್ವನ್ತರೇ
ಅಗ್ನಿಸ್ತೋತ್ರಂ ನಾಮ ಷಣ್ಣವತಿತಮೋಽಧ್ಯಾಯಃ

---

೭೧. ಶುಚಿ ಎಂಬ ನಾಮಾಂಕನದಿಂದ ಕೂಡಿದ ಅಗ್ನಿಯೇ! ನೀನು ಪ್ರಸನ್ನನಾಗು, ನಿರ್ಮಲವಾದ ಅಧಿಕ ತೇಜಸ್ಸಿನಿಂದ ಕೂಡಿದ ವಾಯುದೇವನೇ! ನೀನು ಪ್ರಸನ್ನನಾಗು, ಮಿಂಚಿನ ತೇಜೋರೂಪಿಯಾದ ಅಗ್ನಿಯೇ! ನೀನು ಪ್ರಸನ್ನನಾಗು ಮತ್ತು ಹವ್ಯವನ್ನು ಭುಂಜಿಸುವವನೇ! ನೀನು ಪ್ರಸನ್ನನಾಗಿ ನನ್ನನ್ನು ರಕ್ಷಣಮಾಡು.

೭೨. ಎಲೈ ಅಗ್ನಿದೇವನೇ! ನಿನ್ನ ಕಲ್ಯಾಣಕರವಾದ ರೂಪ ಮತ್ತು ಏಳು ಜ್ವಾಲೆಗಳು—ಇವುಗಳಿಂದ ನಮ್ಮನ್ನು ಕಾಪಾಡು, ನಮ್ಮಿಂದ ಸ್ತುತಿಸಲ್ಪಟ್ಟ ನೀನು ಮಗನನ್ನು ತಂದೆಯು ಸಲಹಿದಂತೆ ನಮ್ಮನ್ನು ಸಲಹು.

ಮಾರ್ಕಂಡೇಯ ಮಹಾಪುರಾಣದಲ್ಲಿ ತೊಂಭತ್ತಾರನೆಯ ಅಧ್ಯಾಯವು ಮುಗಿದುದು.

॥ ಓಂ ಶ್ರೀ ದುರ್ಗಾಯೈ ನಮಃ ॥

ಮಾರ್ಕಂಡೇಯ ಪುರಾಣಂ

ಸಪ್ತನವತಿತಮೋಽಧ್ಯಾಯಃ

(ಮನ್ವನ್ತರಚರಿತೋಪಸಂಹಾರಃ)

ಮಾರ್ಕಣ್ಡೇಯ ಉವಾಚ :—

ಏವಂ ಸ್ತುತಸ್ತತಸ್ತೇನ ಭಗವಾನ್ ಹವ್ಯವಾಹನಃ ।
ಜ್ವಾಲಾಮಾಲಾವೃತತನುಸ್ತಸ್ಯಾಸೀದಗ್ರತೋ ಮುನೇ ॥೧॥

ದೇವೋ ವಿಭಾವಸುಃ ಪ್ರೀತಃ ಸ್ತೋತ್ರೇಣಾನೇನ ವೈ ದ್ವಿಜ ।
ತಂ ಶಾನ್ತಿಮಾಹ ಪ್ರಣತಂ ಮೇಘಗಮ್ಭೀರವಾಗಥ ॥೨॥

ತೊಂಭತ್ತೇಳನೆಯ ಅಧ್ಯಾಯ

ಮಾರ್ಕಂಡೇಯು ಮುನಿಯ ಹೇಳಿದನು :—

೧. ಕ್ರೌಷ್ಟುಕಿಮುನಿಯೇ ! ಶಾಂತಿಶಿಷ್ಯನಿಂದ ಈ ರೀತಿಯಾಗಿ ಸ್ತುತಿಸಲ್ಪಟ್ಟವನೂ, ಅಖಂಡೈಶ್ವರ್ಯಸಂಪನ್ನನೂ ಮತ್ತು ಹವಿಸ್ಸನ್ನು ವಹಿಸುವವನೂ ಆದ ಅಗ್ನಿಯು ಜ್ವಾಲೆಗಳ ಮಾಲೆಯಿಂದ ಸುತ್ತಲ್ಪಟ್ಟ ದೇಹವುಳ್ಳವನಾಗಿ ಶಾಂತಿಯ ಮುಂದೆ ಪ್ರತ್ಯಕ್ಷನಾದನು.

೨. ದ್ವಿಜನಾದ ಕ್ರೌಷ್ಟುಕಿಯೇ ! ಈ ಸ್ತೋತ್ರಪಾಠದಿಂದ ಪ್ರೀತಿಗೊಂಡಿರುವ ಅಗ್ನಿದೇವನು ಪ್ರತ್ಯಕ್ಷನಾಗಿ ಬಂದು ನಮುಸ್ಕಾರಮಾಡಿ ನಿಂತಿರುವ ಶಾಂತಿಕುಮಾರನನ್ನು ಕುರಿತು ಮೇಘದಂತೆ ಗಂಭೀರವಾದ ಧ್ವನಿಯುಳ್ಳವನಾಗಿ ಮಾತನಾಡಿದನು.

ಅಗ್ನಿರುವಾಚ :—

ಪರಿತುಷ್ಟೋಽಸ್ಮಿ ತೇ ವಿಪ್ರ ಭಕ್ತ್ಯಾ ಯಾ ತೇ ಸ್ತುತಿಃ ಕೃತಾ ।
ವರಂ ದದಾಮಿ ಭವತೇ ಪ್ರಾರ್ಥ್ಯತಾಂ ಯತ್ತವೇಪ್ಸಿತಮ್ ॥೩॥

ಶಾನ್ತಿರುವಾಚ :—

ಭಗವನ್ಕೃತಕೃತ್ಯೋಽಸ್ಮಿ ಯತ್ತ್ವಾಂ ಪಶ್ಯಾಮಿ ರೂಪಿಣಮ್ ।
ತಥಾಪಿ ಭಕ್ತಿನಮ್ರಸ್ಯ ಭವತಾ ಶ್ರೂಯತಾಂ ಮಮ ॥೪॥

ಭ್ರಾತುರ್ಯಜ್ಞಂ ಗತೋ ದೇವ ಮಮಾಚಾರ್ಯೋ ನಿಜಾಶ್ರಮಾತ್ ।
ಆಗತಶ್ಚಾಶ್ರಮಂ ಧಿಷ್ಣ್ಯಂ ತ್ವತ್ಸನಾಥಂ ಸ ಪಶ್ಯತು ॥೫॥

ಮಮಾಪರಾಧಾತ್ಸಂತ್ಯಕ್ತಂ ಧಿಷ್ಣ್ಯಂ ಯತ್ತೇ ವಿಭಾವಸೋ ।
ತತ್ತ್ವಯಾಧಿಷ್ಠಿತಂ ಸೋಽದ್ಯ ಪೂರ್ವವತ್ಪಶ್ಯತು ದ್ವಿಜಃ ॥೬॥

ಅಗ್ನಿದೇವನು ಇಂತೆಂದನು :—

೩. ಎಲೈ ವಿಪ್ರನೇ ! ಭಕ್ತಿಯಿಂದ ನೀನು ಮಾಡಿದ ಸ್ತೋತ್ರಪಾಠಕ್ಕೆ ನಾನು ಸಂತುಷ್ಟನಾಗಿದ್ದೇನೆ. ನಿನಗೆ ವರವನ್ನು ಕೊಡುವುದಕ್ಕೋಸ್ಕರ ಬಂದಿದ್ದೇನೆ. ನಿನಗೆ ಇಷ್ಟವಾದ ವರವನ್ನು ಕೇಳಿಕೊ.

ಶಾಂತಿಯು ಹೇಳಿದನು :—

೪. ಅಖಂಡೈಶ್ವರ್ಯಸಂಪನ್ನನಾದ ಅಗ್ನಿದೇವನೇ ! ಮೂರ್ತಿಮಂತನಾಗಿ ಬಂದಿರುವ ನಿನ್ನನ್ನು ನೋಡಿದೆನು. ಅದರಿಂದ ನಾನು ಕೃತಾರ್ಥನಾಗಿದ್ದೇನೆ. ಆದರೆ ಭಕ್ತಿಯಿಂದ ನಮ್ರನಾದ ನನ್ನ ವಚನವನ್ನು ನೀನು ಕೇಳುವವನಾಗು.

೫. ಅಗ್ನಿದೇವನೇ ! ನನ್ನ ಆಚಾರ್ಯನು ತನ್ನ ಆಶ್ರಮವನ್ನು ಬಿಟ್ಟು ಭ್ರಾತೃವು ಮಾಡುವ ಯಜ್ಞಕರ್ಮಕ್ಕೋಸ್ಕರ ಹೋಗಿರುವನು. ಅವನು ಮತ್ತೆ ಹಿಂದಕ್ಕೆ ಬಂದು ಅಗ್ನಿಕುಂಡವು ನಿನ್ನಿಂದ ಶೂನ್ಯವಾಗದಿರುವುದನ್ನು ಕಾಣುವಂತಾಗಲಿ.

೬. ಅಗ್ನಿಯೇ ! ನನ್ನ ಅಪರಾಧದಿಂದ ನೀನು ಧಿಷ್ಣ್ಯರೂಪವಾದ ಕುಂಡವನ್ನು ಬಿಟ್ಟಿದ್ದೀಯೆ. ಮತ್ತೆ ಹಿಂದಿನಂತೆ ಆ ಕುಂಡವು ನಿನ್ನಿಂದ ಕೂಡಿರುವಂತೆ ಇಂದು ನನ್ನ ಆಚಾರ್ಯನು ನೋಡಲಿ.

ತಥಾನ್ಯದಪಿ ಮೇ ದೇವ ಪ್ರಸಾದಂ ಕುರುಷೇ ಯದಿ ।
ಪುತ್ರೋ ವಿಶಿಷ್ಟೋ ಭವತು ತದಪುತ್ರಸ್ಯ ಮೇ ಗುರೋಃ ॥೭॥

ತಥಾ ಚ ಮೈತ್ರೀಂ ತನಯೇ ಸ ಕರಿಷ್ಯತಿ ಮೇ ಗುರುಃ ।
ತಥಾ ಸಮಸ್ತಸತ್ತ್ವೇಷು ಭವತ್ವಸ್ಯ ಮನೋ ಮೃದು ॥೮॥

ಯಶ್ಚ ತ್ವಾಂ ಸ್ತೋಷ್ಯತೇಽನೇನ ಪ್ರೀತಿಂ ಯಾತೋಽಸಿ ಮೇಽವ್ಯಯ।
ಸ್ತೋತ್ರೇಣ ತಸ್ಯ ವರದೋ ಭವೇಥಾ ಮತ್ಪ್ರಸಾದಿತಃ ॥೯॥

ಮಾರ್ಕಣ್ಡೇಯ ಉವಾಚ :—

ಏತಚ್ಛ್ರುತ್ವಾ ವಚಸ್ತಸ್ಯ ತಮಾಹ ದ್ವಿಜಸತ್ತಮಮ್ ।
ಸ್ತೋತ್ರೇಣಾರಾಧಿತಸ್ತೇನ ಗುರುಭಕ್ತ್ಯಾ ಚ ಪಾವಕಃ ॥೧೦॥

---

೭. ಅಗ್ನಿಯೇ ! ನೀನು ನನ್ನಲ್ಲಿ ಪ್ರೀತಿಯಿಂದ ಇನ್ನೂ ಅನುಗ್ರಹವನ್ನು ತೋರುವೆಯಾದರೆ ಪುತ್ರ ಸಂತತಿಯಿಲ್ಲದ ನನ್ನ ಆಚಾರ್ಯನಿಗೆ ಶ್ರೇಷ್ಠಗುಣಗಳಿಂದ ಕೂಡಿದ ಪುತ್ರನು ಜನಿಸಲಿ.

೮. ಮತ್ತು ನನ್ನ ಗುರುವು ಪುತ್ರನಲ್ಲಿ ವಿಶೇಷವಾದ ವಾತ್ಸಲ್ಯವನ್ನು ಇಡುವವನಾಗಲಿ, ಹಾಗು ನನ್ನ ಆಚಾರ್ಯನ ಮಾನಸವು ಸಮಸ್ತ ಪ್ರಾಣಿಗಳಲ್ಲಿಯೂ ಮೃದುಸ್ವಭಾವದಿಂದ ಇರಲಿ.

೯. ಶಾಶ್ವತನಾದ ಅಗ್ನಿದೇವನೇ ! ನೀನು ನನ್ನಲ್ಲಿ ಪ್ರೀತಿಯಿಟ್ಟಿರುವೆಯಾದರೆ ನನ್ನಿಂದ ಪ್ರಸಾದಗೊಳಿಸಲ್ಪಟ್ಟ ನೀನು ನನ್ನ ಪ್ರಾರ್ಥನೆಯಂತೆ ಯಾವ ಮಾನವನು ಈ ಸ್ತೋತ್ರದಿಂದ ನಿನ್ನನ್ನು ಸ್ತುತಿಸುವನೋ ಅವನಿಗೆ ವರವನ್ನು ನೀಡುವವನಾಗು.

ಮಾರ್ಕಂಡೇಯ ಮುನಿಯು ಹೇಳಿದನು :—

೧೦. ಅಚಲವಾದ ಗುರುಭಕ್ತಿಯಿಂದ ಕೂಡಿದ ಶಾಂತಿಶಿಷ್ಯನಿಂದ ಈ ಸ್ತೋತ್ರಪಾಠದಿಂದ ಆರಾಧಿಸಲ್ಪಟ್ಟ ಅಗ್ನಿದೇವನು ದ್ವಿಜೋತ್ತಮನಾದ ಶಾಂತಿ ಶಿಷ್ಯನ ಈ ಮಾತನ್ನು ಕೇಳಿ ಅವನಿಗೆ ಹೀಗೆ ಪ್ರತ್ಯುತ್ತರವನ್ನು ಹೇಳಿದನು.

ಅಗ್ನಿರುವಾಚ :—

ಗುರೋರರ್ಥೇ ಯತೋ ಬ್ರಹ್ಮನ್ ಯಾಚಿತಂ ತೇ ವರದ್ವಯಮ್ ।
ನಾತ್ಮಾರ್ಥಂ ತೇನ ಮೇ ಪ್ರೀತಿಸ್ತ್ವಯ್ಯತೀವ ಮಹಾಮುನೇ ॥೧೧॥

ಭವಿಷ್ಯತ್ಯೇತದಖಿಲಂ ಗುರೋರ್ಯತ್ಪ್ರಾರ್ಥಿತಂ ತ್ವಯಾ ।
ಮೈತ್ರೀ ಸಮಸ್ತಭೂತೇಷು ಪುತ್ರಶ್ಚಾಸ್ಯ ಭವಿಷ್ಯತಿ ॥೧೨॥

ಮನ್ವನ್ತರಾಧಿಪಃ ಪುತ್ರೋ ಭೌತ್ಯೋ ನಾಮ ಭವಿಷ್ಯತಿ ।
ಮಹಾಬಲೋ ಮಹಾವೀರ್ಯೋ ಮಹಾಪ್ರಾಜ್ಞೋ ಗುರುಸ್ತವ ॥೧೩॥

ಅನೇನ ಯಶ್ಚ ಸ್ತೋತ್ರೇಣ ಸ್ತೋಷ್ಯತೇ ಮಾಂ ಸಮಾಹಿತಃ ।
ತಸ್ಯಾಭಿಲಷಿತಂ ಸರ್ವಂ ಪುಣ್ಯಂ ಚಾಸ್ಯ ಭವಿಷ್ಯತಿ ॥೧೪॥

ಅಗ್ನಿಯು ಹೇಳಿದನು :—

೧೧. ಎಲೈ ವಿಪ್ರನೇ ! ಮಹಾಮುನಿಯೇ ! ನೀನೀಗ ಗುರುವಿಗೋಸ್ಕರ ಎರಡು ವರಗಳನ್ನು ಕೇಳಿದ್ದೀಯೆ. ನಿನಗೋಸ್ಕರ ವರಗಳನ್ನು ಕೇಳಿಕೊಂಡಿಲ್ಲ. ಇದರಿಂದ ನನಗೆ ನಿನ್ನಲ್ಲಿ ವಿಶೇಷವಾಗಿ ಪ್ರೀತಿಯುಂಟಾಗಿರುವುದು.

೧೨. ನೀನು ಗುರುವಿಗೋಸ್ಕರವಾಗಿ ಏನನ್ನು ಪ್ರಾರ್ಥಿಸಿಕೊಂಡಿರುವೆಯೋ ಅದೆಲ್ಲವೂ ಲಭಿಸುವುದು. ಅದರಂತೆ ನಿನ್ನ ಗುರುವಿಗೆ ಸಮಸ್ತ ಭೂತಗಳಲ್ಲಿ ಮೈತ್ರಿಯು ಉಂಟಾಗುವುದು. ಮತ್ತು ಅವನಿಗೆ ಪುತ್ರನು ಜನಿಸುವನು.

೧೩. ಮತ್ತು ನಿನ್ನ ಗುರುವಿಗೆ ಭೌತ್ಯ ಎಂಬ ನಾಮಾಂಕಿತನಾಗಿ ಮನ್ವಂತರಾಧಿಪತಿಯಾಗುವ ಪುತ್ರನು ಜನಿಸುವನು. ನಿನ್ನ ಗುರುವು ಮಹಾ ಬಲಿಷ್ಠನೂ, ಮಹತ್ತಾದ ವೀರ್ಯವಂತನೂ, ಮತ್ತು ಮಹಾ ಪ್ರಜ್ಞಾಶಾಲಿಯೂ ಆಗಿರುವನು.

೧೪. ಮತ್ತು ಯಾವ ಮಾನವನು ಶಾಂತಚಿತ್ತನಾಗಿ ಈ ಸ್ತೋತ್ರವನ್ನು ಹೇಳಿ ನನ್ನನ್ನು ಸ್ತುತಿಸುವನೋ ಆ ಮಾನವನಿಗೆ ಸಕಲ ಇಷ್ಟಗಳು ನೆರವೇರುವುವು. ಹಾಗು ಅವನಿಗೆ ಅತಿಶಯವಾದ ಪುಣ್ಯಲಾಭವಾಗುವುದು.

ಯಜ್ಞೇಷು ಪರ್ವಕಾಲೇಷು ತೀರ್ಥೇಜ್ಯಾಹೋಮಕರ್ಮಸು ।
ಧರ್ಮಾಯ ಪಠತಾಮೇತನ್ಮಮ ಪುಷ್ಟಿಕರಂ ಪರಮ್ ॥೧೫॥

ಅಹೋರಾತ್ರಕೃತಂ ಪಾಪಂ ಶ್ರುತಮೇತತ್ಸಕೃದ್ದ್ವಿಜ ।
ನಾಶಯಿಷ್ಯತ್ಯಸನ್ದಿಗ್ಧಂ ಮಮ ತುಷ್ಟಿಕರಂ ಪರಮ್ ॥೧೬॥

ಅಹೋಮಕಾಲದೋಷಾದೀನಯೋಗ್ಯೈರಪಿ ತತ್ಕೃತೈಃ ।
ಯೋ ದೋಷಾಸ್ತಾನಿದಂ ಸದ್ಯಃ ಶಮಯಿಷ್ಯತಿ ಸಂಶ್ರುತಮ್ ॥೧೭॥

ಪೌರ್ಣಮಾಸ್ಯಾಮಮಾವಾಸ್ಯಾಂ ಪರ್ವಸ್ವನ್ಯೇಷು ಚ ಸ್ತವಃ ।
ಮಮೈಷ ಸಂಶ್ರುತೋ ಮರ್ತ್ಯೈರ್ಭವಿತಾ ಪಾಪನಾಶನಃ ॥೧೮॥

---

೧೫. ಯಜ್ಞಸಮಯ, ಪರ್ವಕಾಲ, ತೀರ್ಥಸನ್ನಿಧಿ, ಪೂಜಾಸಮಯ ಮತ್ತು ಹೋಮಕರ್ಮಗಳಲ್ಲಿ ಪಠಿಸಿದ ಸ್ತೋತ್ರವು ಪಠಿಸಿದವರಿಗೆ ಪುಣ್ಯವನ್ನು ಕೊಡುವುದು. ಮತ್ತು ನನಗೆ ಪ್ರೀತಿಯನ್ನು ಉಂಟುಮಾಡುವುದು.

೧೯. ಎಲೈ ದ್ವಿಜನಾದ ಶಾಂತಿಯೇ! ಒಂದು ಸಲ ಶ್ರವಣಮಾಡಿದ ಈ ಸ್ತುತಿಪಾಠವು ನನಗೆ ಅತಿಶಯವಾದ ಸಂತೋಷವನ್ನುಂಟುಮಾಡುವುದಾಗಿ ಒಂದು ಹಗಲು ರಾತ್ರಿಗಳಲ್ಲಿ ಮಾಡಿದ ಪಾಪವನ್ನು ನಿಸ್ಸಂದೇಹವಾಗಿ ನಾಶ ಮಾಡುವುದು.

೧೭. ಮತ್ತು ಅವಿಹಿತವಾದ ಕಾಲದಲ್ಲಿ ಹೋಮಮಾಡುವುದು ಅಥವಾ ಅಯೋಗ್ಯವಾದ ಉಪಕರಣಗಳಿಂದ ಹೋಮಮಾಡುವುದು—ಮುಂತಾದ ಬಗೆ-ಗಳಿಂದ ಉಂಟಾಗುವ ದೋಷಗಳನ್ನು ಒಂದು ಸಲ ಈ ಸ್ತೋತ್ರಪಾಠದ ಶ್ರವ-ಣವು ಕೂಡಲೆ ನಾಶಮಾಡುವುದು.

೧೮. ನನ್ನ ಈ ಸ್ತೋತ್ರವನ್ನು ಪೂರ್ಣಿಮಾ, ಅಮಾವಾಸ್ಯಾ ಮತ್ತು ಇತರ ಪರ್ವತಿಥಿಗಳಲ್ಲಿ ಶ್ರವಣಮಾಡುವುದರಿಂದ ಆ ಮರ್ತ್ಯರ ಪಾಪವನ್ನು ನಾಶಮಾಡಲು ಸ್ತೋತ್ರವು ಸಾಧನವಾಗುವುದು.

ಮಾರ್ಕಣ್ಡೇಯ ಉವಾಚ :—

ಇತ್ಯುಕ್ತ್ವಾ ಭಗವಾನಗ್ನಿಃ ಪಶ್ಯತಸ್ತಸ್ಯ ವೈ ಮುನೇ ।
ಬಭೂವಾದರ್ಶನಃ ಸದ್ಯೋ ದೀಪಸ್ಥೋ ನಿರ್ವೃತೋ ಯಥಾ ॥೧೯॥

ಸ ಚ ಶಾನ್ತಿರ್ಗತೇ ವಹ್ನೌ ಪರಿತುಷ್ಟೇನ ಚೇತಸಾ ।
ಹರ್ಷರೋಮಾಞ್ಚಿತತನುಃ ಪ್ರವಿವೇಶಾಶ್ರಮಂ ಗುರೋಃ ॥೨೦॥

ಜಾಜ್ವಲ್ಯಮಾನಂ ತತ್ರಾಸೌ ಗುರುಧಿಷ್ಣ್ಯೇ ಹುತಾಶನಮ್ ।
ದದರ್ಶ ಪೂರ್ವವತ್ಪ್ರಾಪ ತತಃ ಸ ಪರಮಾಂ ಮುದಮ್ ॥೨೧॥

ಏತಸ್ಮಿನ್ನನ್ತರೇ ಸೋಽಪಿ ಗುರುಸ್ತಸ್ಯ ಮಹಾತ್ಮನಃ ।
ಭ್ರಾತುರ್ಯವೀಯಸೋ ಯಜ್ಞಾದಾಜಗಾಮ ಸ್ವಮಾಶ್ರಮಮ್ ॥೨೨॥

ಮಾರ್ಕಂಡೇಯ ಮುನಿಯು ಹೀಗೆಂದನು :—

೧೯. ಕ್ರೌಷ್ಟುಕಿ ಮುನಿಯೇ! ಪೂಜ್ಯನಾದ ಅಗ್ನಿದೇವನು ಹೀಗೆಂದು ಹೇಳಿ ಶಾಂತಿಶಿಷ್ಯನು ನೋಡುತ್ತಿರುವ ಹಾಗೆ ದೀಪಜ್ವಾಲೆಯಲ್ಲಿ ಕಾಣಿಸುವ ಅಗ್ನಿರೂಪವು ಆರಿಹೋದಂತೆ ಕೂಡಲೆ ಅದೃಶ್ಯನಾದನು.

೨೦. ಹೀಗೆ ಅಗ್ನಿಯು ಅಂತರ್ಧಾನಹೊಂದಲು ಆ ಶಾಂತಿ ಶಿಷ್ಯನು ಬಲು ಸಂತೋಷಗೊಂಡ ಮನಸ್ಸಿನಿಂದ ಆನಂದದಿಂದ ಉಂಟಾದ ರೋಮಾಂಚದಿಂದ ಕೂಡಿದ ದೇಹವುಳ್ಳವನಾಗಿ ಗುರುವಿನ ಆಶ್ರಮವನ್ನು ಪ್ರವೇಶಿಸುವನು.

೨೧. ಆ ಆಶ್ರಮದಲ್ಲಿ ಗುರುವಿನ ಅಗ್ನಿಕುಂಡದಲ್ಲಿ ಮೊದಲಿನಂತೆ ಜ್ವಾಲಾಮಯವಾಗಿ ಜ್ವಲಿಸುತ್ತಿದ್ದ ಅಗ್ನಿಯನ್ನು ಶಾಂತಿಯು ನೋಡಿದನು. ಮತ್ತು ಅದನ್ನು ನೋಡಿದ್ದರಿಂದ ಅವನು ಅಧಿಕವಾಗಿ ಸಂತೋಷವನ್ನು ಹೊಂದಿದನು.

೨೨. ಈ ಸಮಯದಲ್ಲಿ ಮಹಾತ್ಮನಾದ ಶಾಂತಿಶಿಷ್ಯನ ಗುರುವು ತನ್ನ ಕಿರಿಯ ಭ್ರಾತೃವಿನ ಯಜ್ಞಕರ್ಮವನ್ನು ಪೂರೈಸಿಕೊಂಡು ಅಲ್ಲಿಂದ ತನ್ನ ಆಶ್ರಮಕ್ಕೆ ಹಿಂತಿರುಗಿ ಬಂದನು.

ತಸ್ಯಾಗ್ರತಶ್ಚ ಶಿಷ್ಯೋಽಸೌ ಚಕ್ರೇ ಪಾದಾಭಿವನ್ದನಮ್ ।
ಗೃಹೀತಾಸನಪೂಜಶ್ಚ ತಮಾಹ ಸ ತದಾ ಗುರುಃ ॥೨೩॥

ವತ್ಸಾತಿಹಾರ್ದಂ ತ್ವಯಿ ಮೇ ತಥಾನ್ಯೇಷು ಚ ಜನ್ತುಷು ।
ನ ವೇದ್ಮಿ ಕಿಮಿದಂ ತ್ವಂ ಚೇದ್ವೇತ್ಸ್ಯೇತತ್ಕಥಯಾಶು ಮೇ ॥೨೪॥

ತತಃ ಸ ಶಾನ್ತಿಸ್ತತ್ಸರ್ವಮಾಚಾರ್ಯಾಯ ಮಹಾಮುನೇ ।
ಅಗ್ನಿನಾಶಾದಿಕಂ ವಿಪ್ರಃ ಸಮಾಚಷ್ಟೇ ಯಥಾತಥಮ್ ॥೨೫॥

ತಚ್ಛ್ರುತ್ವಾ ಸ ಪರಿಷ್ವಜ್ಯ ಸ್ನೇಹಾರ್ದ್ರನಯನೋ ಗುರುಃ ।
ಶಿಷ್ಯಾಯ ಪ್ರದದೌ ವೇದಾನ್ ಸಾಙ್ಗೋಪಾಙ್ಗಾನ್ಮಹಾಮುನೇ ॥೨೬॥

---

೨೩. ಆಗ ಈ ಶಿಷ್ಯನು ಗುರುವಿನ ಮುಂದೆ ಬಂದು ಗುರುವಿಗೆ ಪಾದ ವಂದನೆಯನ್ನು ಮಾಡಿದನು. ಆಗ ಗುರುವು ಶಿಷ್ಯನೊಪ್ಪಿಸಿದ ಆಸನ–ಪೂಜಾದಿ-ಗಳನ್ನು ಸ್ವೀಕರಿಸಿದವನಾಗಿ ಆಗ ಶಿಷ್ಯನನ್ನು ಕುರಿತು ಮಾತನಾಡಿದನು.

೨೪. ವತ್ಸನೇ! ನನಗೆ ನಿನ್ನಲ್ಲಿಯೂ ಹಾಗು ಇತರ ಜಂತುಗಳಲ್ಲಿಯೂ ಅತ್ಯಂತ ಪ್ರೀತಿಯುಂಟಾಗಿರುವುದು. ಇದೇಕೆ ಹೀಗಾಯಿತೋ! ನನಗೆ ಕಾರಣವು ತಿಳಿಯದು. ನೀನೇನಾದರೂ ತಿಳಿದಿದ್ದರೆ ಅದನ್ನು ಬೇಗ ನನಗೆ ಹೇಳು.

೨೫. ಮಹಾಮುನಿಯಾದ ಕ್ರೌಷ್ಟುಕಿಯೇ! ತರುವಾಯ ಆ ಶಾಂತಿ-ಶಿಷ್ಯನು ಆಚಾರ್ಯನಿಗೆ ಅಗ್ನಿಯು ಶಮನವಾದುದು ಮೊದಲಾಗಿ ಸಮಸ್ತ-ವೃತ್ತಾಂತವನ್ನೂ ನಡೆದಂತೆಯೇ ವಿಸ್ತಾರವಾಗಿ ಹೇಳಿದನು.

೨೬. ಮಹಾಮುನಿಯೇ! ಆ ವೃತ್ತಾಂತವನ್ನು ಕೇಳಿ ಭೂತಿ ಎಂಬ ಆ ಗುರುವು ಸ್ನೇಹಬಾಷ್ಪದಿಂದ ಒದ್ದೆಯಾದ ಕಣ್ಣುಗಳುಳ್ಳವನಾಗಿ ಶಿಷ್ಯನನ್ನು ಅಪ್ಪಿಕೊಂಡು ಅವನಿಗೆ ಸಾಂಗೋಪಾಂಗವಾದ ಸಕಲ ವೇದಗಳನ್ನು ಅನುಗ್ರಹಿ-ಸಿದನು.

ಭೌತ್ಯೋ ನಾಮ ಮನುಸ್ತಸ್ಯ ಪುತ್ರೋ ಭೂತೇರಜಾಯತ ।
ತಸ್ಯ ಮನ್ವನ್ತರೇ ದೇವಾನೃಷೀನ್ ಭೂಪಾಂಶ್ಚ ಮೇ ಶೃಣು ॥೨೭॥

ಭವಿಷ್ಯಸ್ಯ ಭವಿಷ್ಯಾಂಸ್ತು ಗದತೋ ಮಮ ವಿಸ್ತರಾತ್ ।
ದೇವೇನ್ದ್ರೋ ಯಶ್ಚ ಭವಿತಾ ತಸ್ಯ ವಿಖ್ಯಾತಕರ್ಮಣಃ ॥೨೮॥

ಚಾಕ್ಷುಷಾಶ್ಚ ಕನಿಷ್ಠಾಶ್ಚ ಪವಿತ್ರಾ ಭ್ರಾಜಿರಾಸ್ತಥಾ ।
ಧರಾವೃಕಾಶ್ಚೇತ್ಯೇತೇ ವೈ ಪಞ್ಚ ದೇವಗಣಾಃ ಸ್ಮೃತಾಃ ॥೨೯॥

ಶುಚಿರಿನ್ದ್ರಸ್ತದಾ ತೇಷಾಂ ತ್ರಿದಶಾನಾಂ ಭವಿಷ್ಯತಿ ।
ಮಹಾಬಲೋ ಮಹಾವೀರ್ಯಃ ಸರ್ವೈರಿನ್ದ್ರಗುಣೈರ್ಯುತಃ ॥೩೦॥

---

೨೭. ತರುವಾಯ ಆ ಭೂತಿಗುರುವಿಗೆ ಭೌತ್ಯ ಎಂಬ ನಾಮಾಂಕಿತನಾದ ಮನುರಾಜನಾಗುವ ಪುತ್ರನು ಜನಿಸಿದನು. ಆ ಭೌತ್ಯಮನುವಿನ ಮನ್ವಂತರದಲ್ಲಿರುವ ದೇವತೆ-ಋಷಿ-ರಾಜಕುಮಾರರು–ಮುಂತಾದವರನ್ನು ನಾನು ಹೇಳುವೆನು; ನೀನು ಅದನ್ನು ಕೇಳು.

೨೮. ಮತ್ತು ಖ್ಯಾತಿಗೊಂಡಿರುವ ವಿಕ್ರಮವುಳ್ಳ ಆ ಭೌತ್ಯಮನುವಿನ ಭವಿಷ್ಯ ಮನ್ವಂತರದಲ್ಲಿ ದೇವೇಂದ್ರನಾಗಿದ್ದವನು ಯಾರು? ಮುಂತಾದ ಭವಿಷ್ಯ ವ್ಯಕ್ತಿಗಳನ್ನು ವಿಸ್ತಾರವಾಗಿ ನಾನು ಹೇಳುವುದನ್ನು ಕೇಳು.

೨೯. ಭೌತ್ಯಮನ್ವಂತರದಲ್ಲಿ ಚಾಕ್ಷುಷ, ಕನಿಷ್ಠ, ಪವಿತ್ರ, ಭ್ರಾಜಿರ ಮತ್ತು ಧರಾವೃಕ ಎಂಬ ನಾಮಾಂಕಿತವಾದ ಐದು ದೇವಗಣಗಳು ಇರುವುವೆಂದು ಪ್ರಾಜ್ಞರಿಂದ ಸ್ಮರಿಸಲ್ಪಟ್ಟಿದೆ.

೩೦. ಮತ್ತು ಆ ಮನ್ವಂತರದಲ್ಲಿ ಮಹಾಬಲಿಷ್ಠನೂ, ಅಧಿಕವೀರ್ಯವಂತನೂ, ಸಮಸ್ತ ಇಂದ್ರಗುಣಗಳಿಂದ ರಾಜಿತನೂ ಮತ್ತು ಶುಚಿ ಎಂಬ ನಾಮಾಂಕಿತನೂ ಆದ ಇಂದ್ರನು ದೇವತೆಗಳಿಗೆ ರಾಜನಾಗಿರುವನು.

ಅಗ್ನೀಧ್ರಶ್ಚಾಗ್ನಿಬಾಹುಶ್ಚ ಶುಚಿರ್ಮುಕ್ತೋಽಥ ಮಾಧವಃ ।
ಶುಕ್ರೋಽಜಿತಶ್ಚ ಸಪ್ತೈತೇ ತದಾ ಸಪ್ತರ್ಷಯಃ ಸ್ಮೃತಾಃ ॥೩೧॥

ಗುರುರ್ಗಭೀರೋ ಬ್ರಧ್ನಶ್ಚ ಭರತೋಽನುಗ್ರಹಸ್ತಥಾ ।
ಶ್ರೀಮಾನೀ ಚ ಪ್ರತೀರಶ್ಚ ವಿಷ್ಣುಃ ಸಙ್ಕ್ರನ್ದನಸ್ತಥಾ ॥೩೨॥

ತೇಜಸ್ವೀ ಸುಬಲಶ್ಚೈವ ಭೌತ್ಯಸ್ಯೈತೇ ಮನೋಃ ಸುತಾಃ ।
ಚತುರ್ದಶಂ ಮಯೈತತ್ತೇ ಮನ್ವನ್ತರಮುದಾಹೃತಮ್ ॥೩೩॥

ಶ್ರುತ್ವಾ ಮನ್ವನ್ತರಾಣೀತ್ಥಂ ಕ್ರಮೇಣ ಮುನಿಸತ್ತಮ ।
ಪುಣ್ಯಮಾಪ್ನೋತಿ ಮನುಜಸ್ತಥಾಕ್ಷೀಣಾಂ ಚ ಸನ್ತತಿಮ್ ॥೩೪॥

ಶ್ರುತ್ವಾ ಮನ್ವನ್ತರಂ ಪೂರ್ವಂ ಧರ್ಮಮಾಪ್ನೋತಿ ಮಾನವಃ ।
ಸ್ವಾರೋಚಿಷಸ್ಯ ಶ್ರವಣಾತ್ಸರ್ವಕಾಮಾನವಾಪ್ನುತೇ ॥೩೫॥

---

೩೧. ಹಾಗು ಭೌತ್ಯಮನ್ವಂತರದಲ್ಲಿರುವ ಸಪ್ತರ್ಷಿಗಳು ಅಗ್ನೀಧ್ರ, ಅಗ್ನಿಬಾಹು, ಶುಚಿ, ಮುಕ್ತ, ಮಾಧವ, ಶುಕ್ರ ಮತ್ತು ಅಜಿತ ಎಂಬ ನಾಮಾಂಕನಗಳಿಂದ ಕೂಡಿರುವರೆಂದು ಸ್ಮರಿಸಲ್ಪಟ್ಟಿದೆ.

೩೨. ಭೌತ್ಯ ಮನುರಾಜನ ಪುತ್ರರಲ್ಲಿ ಕೆಲವರು ಗುರು, ಗಭೀರ, ಬ್ರಧ್ನ, ಭರತ, ಅನುಗ್ರಹ, ಶ್ರೀಮಾನೀ, ಪ್ರತೀರ, ವಿಷ್ಣು ಮತ್ತು ಸ್ರಂಕ್ರಂದನ ಎಂಬ ನಾಮಾಂಕನದಿಂದ ಖ್ಯಾತಿಗೊಂಡಿರುವರು.

೩೩. ಮತ್ತು ತೇಜಸ್ವಿ, ಸುಬಲರೆಂಬುವರು ಸೇರಿ ಹಿಂದೆ ಹೇಳಿದವರು ಮನುರಾಜನ ಪುತ್ರರಾಗಿ ಜನಿಸಿ ರಾಜ್ಯಪಾಲಕರಾಗಿರುವರು. ಹೀಗೆ ನಿನಗೆ ನನ್ನಿಂದ ಹದಿನಾಲ್ಕನೆಯ ಮನ್ವಂತರ ಚರಿತ್ರೆಯು ಹೇಳಲ್ಪಟ್ಟಿದೆ.

೩೪. ಮುನಿಶ್ರೇಷ್ಠನಾದ ಕ್ರೌಷ್ಟುಕಿಯೇ! ಹೀಗೆ ಕ್ರಮವಾಗಿ ಎಲ್ಲ ಮನ್ವಂತರಗಳನ್ನು ಶ್ರವಣಮಾಡಿದ ಮಾನವನು ಪುಣ್ಯವನ್ನು ಸಂಪಾದಿಸುವನು. ಮತ್ತು ಅಕ್ಷಯವಾದ ಸಂತತಿಯನ್ನು ಹೊಂದುವನು.

೩೫. ಮಾನವನು ಈ ಮನ್ವಂತರಗಳಲ್ಲಿ ಮೊದಲನೆಯ ಸ್ವಾಯಂಭುವ ಮನ್ವಂತರವನ್ನು ಶ್ರವಣಮಾಡಿ ಪುಣ್ಯವನ್ನು ಹೊಂದುವನು. ಸ್ವಾರೋಚಿಷ-ಮನ್ವಂತರದ ಶ್ರವಣದಿಂದ ಸಕಲ ಇಷ್ಟಾರ್ಥಗಳನ್ನು ಹೊಂದುವನು.

ಔತ್ತಮೇ ಧನಮಾಪ್ನೋತಿ ಜ್ಞಾನಮಾಪ್ನೋತಿ ತಾಮಸೇ ।
ರೈವತೇ ಚ ಶ್ರುತೇ ಬುದ್ಧಿಂ ಸುರೂಪಾಂ ವಿನ್ದತೇ ಸ್ತ್ರಿಯಮ್ ॥೩೬॥

ಆರೋಗ್ಯಂ ಚಾಕ್ಷುಷೇ ಪುಂಸಾಂ ಶ್ರುತೇ ವೈವಸ್ವತೇ ಬಲಮ್ ।
ಗುಣವತ್ಪುತ್ರಪೌತ್ರಾಸ್ತು ಸೂರ್ಯಸಾವರ್ಣಿಕೇ ಶ್ರುತೇ ॥೩೭॥

ಮಾಹಾತ್ಮ್ಯಂ ಬ್ರಹ್ಮಸಾವರ್ಣೇರ್ಧರ್ಮಸಾವರ್ಣಿಕೇ ಶುಭಾಮ್ ।
ಮತಿಮಾಪ್ನೋತಿ ಮನುಜೋ ರುದ್ರಸಾವರ್ಣಿಕೇ ಜಯಮ್ ॥೩೮॥

ಜ್ಞಾತಿಶ್ರೇಷ್ಠೋ ಗುಣೈರ್ಯುಕ್ತೋ ದಕ್ಷಸಾವರ್ಣಿಕೇ ಶ್ರುತೇ ।
ನಿಶಾತಯತ್ಯರಿಬಲಂ ರೌಚ್ಯಂ ಶ್ರುತ್ವಾ ನರೋತ್ತಮ ॥೩೯॥

---

೩೬. ಔತ್ತಮ ಮನ್ವಂತರದ ಶ್ರವಣದಿಂದ ಧನವನ್ನು ಹೊಂದುವನು. ತಾಮಸಮನ್ವಂತರದ ಶ್ರವಣದಿಂದ ಜ್ಞಾನವಂತನಾಗುವನು. ಮತ್ತು ರೈವತ ಮನ್ವಂತರ ಚರಿತ್ರೆಯನ್ನು ಶ್ರವಣಮಾಡಿದುದರಿಂದ ಉತ್ತಮವಾದ ಬುದ್ಧಿಯನ್ನೂ ಸುಂದರಿಯಾದ ಸ್ತ್ರೀಯನ್ನೂ ಹೊಂದುವನು.

೩೭. ಚಾಕ್ಷುಷಮನ್ವಂತರವನ್ನು ಶ್ರವಣಮಾಡಿದ ಮಾನವರಿಗೆ ಆರೋಗ್ಯವು ಲಭಿಸುವುದು. ವೈವಸ್ವತಮನ್ವಂತರವನ್ನು ಶ್ರವಣಮಾಡಿದವರಿಗೆ ಬಲಪ್ರಾಪ್ತಿಯಾಗುವುದು. ಹಾಗು ಸೂರ್ಯಸಾವರ್ಣಿಕಮನ್ವಂತರಶ್ರವಣದಿಂದ ಗುಣವಂತರಾದ ಪುತ್ರಪೌತ್ರಸಂತತಿಯುಂಟಾಗುವುದು.

೩೮. ಮತ್ತು ಮಾನವನು ಬ್ರಹ್ಮಸಾವರ್ಣಿಕಮನ್ವಂತರಶ್ರವಣದಿಂದ ಮಾಹಾತ್ಮ್ಯವನ್ನೂ, ಧರ್ಮಸಾವರ್ಣಿಕಮನ್ವಂತರಶ್ರವಣದಿಂದ ಮಂಗಳಕರವಾದ ಬುದ್ಧಿಯನ್ನೂ ಹಾಗು ರುದ್ರಸಾವರ್ಣಿಕಮನ್ವಂತರಶ್ರವಣದಿಂದ ಶತ್ರುಜಯವನ್ನೂ ಹೊಂದುವನು.

೩೯. ಮಾನವೋತ್ತಮನಾದ ಕ್ರೌಷ್ಟುಕಿಯೇ! ದಕ್ಷಸಾವರ್ಣಿಮನ್ವಂತರ ಶ್ರವಣಮಾಡಿದವನು ಸದ್ಗುಣಗಳಿಂದ ಶೋಭಿತನಾಗಿ ಜ್ಞಾತಿವರ್ಗದಲ್ಲಿ ಶ್ರೇಷ್ಠನಾಗುವನು. ಮತ್ತು ರೌಚ್ಯಮನ್ವಂತರವನ್ನು ಶ್ರವಣಮಾಡಿದ ಮಾನವನು ಶತ್ರುಬಲವನ್ನು ನಿಶ್ಶೇಷಮಾಡುವನು.

ದೇವಪ್ರಸಾದವಾಪ್ನೋತಿ ಭೌತ್ಯೇ ಮನ್ವನ್ತರೇ ಶ್ರುತೇ ।
ತಥಾಗ್ನಿಹೋತ್ರಂ ಪುತ್ರಾಂಶ್ಚ ಗುಣಯುಕ್ತಾನವಾಪ್ನುತೇ ॥೪೦॥

ಸರ್ವಾಣ್ಯನುಕ್ರಮಾದ್ಯಶ್ಚ ಶೃಣೋತಿ ಮುನಿಸತ್ತಮ ।
ಮನ್ವನ್ತರಾಣಿ ತಸ್ಯಾಪಿ ಶ್ರೂಯತಾಂ ಫಲಮುತ್ತಮಮ್ ॥೪೧॥

ತತ್ರ ದೇವಾನೃಷೀನಿನ್ದ್ರಾನ್ಮನೂಂಸ್ತತ್ತನಯಾನ್ನೃಪಾನ್ ।
ಶ್ರುತ್ವಾ ವಂಶಾಂಶ್ಚ ಸರ್ವೇಭ್ಯಃ ಪಾಪೇಭ್ಯೋ ವಿಪ್ರಮುಚ್ಯತೇ॥೪೨॥

ದೇವರ್ಷೀನ್ದ್ರನೃಪಾಶ್ಚಾನ್ಯೇ ಯೇ ತನ್ಮನ್ವನ್ತರಾಧಿಪಾಃ ।
ತೇ ಪ್ರೀಯನ್ತೇ ತಥಾ ಪ್ರೀತಾಃ ಪ್ರಯಚ್ಛನ್ತಿ ಶುಭಾಂ ಮತಿಮ್॥೪೩॥

---

೪೦. ಕಡೆಯದಾದ ಭೌತ್ಯಮನ್ವಂತರವನ್ನು ಶ್ರವಣಮಾಡುವುದರಿಂದ ದೇವತಾಪ್ರಸಾದವನ್ನು ಹೊಂದುವನು. ಮತ್ತು ಅಗ್ನಿಹೋತ್ರ, ಗುಣವಂತರಾದ ಪುತ್ರಸಂಪತ್ತಿಯನ್ನೂ ಹೊಂದುತ್ತಾನೆ.

೪೧. ಮುನಿಶ್ರೇಷ್ಠನಾದ ಕ್ರೌಷ್ಟುಕಿಯೇ! ಹಿಂದೆ ಹೇಳಿದ ಎಲ್ಲ ಮನ್ವಂತರಗಳನ್ನು ಕ್ರಮವಾಗಿ ಯಾವ ಮಾನವನು ಶ್ರವಣಮಾಡುವನೊ, ಅವನಿಗೆ ಲಭಿಸುವ ಉತ್ತಮ ಫಲಗಳನ್ನು ನಾನು ಹೇಳುವೆನು, ಅದನ್ನು ಕೇಳು.

೪೨. ಆಯಾಯ ಮನ್ವಂತರಗಳಲ್ಲಿರುವ ದೇವತೆ–ಋಷಿ-ದೇವರಾಜ–ಮನು–ಮನುಪುತ್ರರಾಗಿ ಜನಿಸಿದ ರಾಜರು ಮತ್ತು ವಂಶಾವಳಿಯನ್ನು ಕೇಳಿದ ಮಾನವನು ಸಮಸ್ತ ಪಾತಕಗಳಿಂದ ಬಿಡುಗಡೆಯಾಗುವನು.

೪೩. ಮತ್ತು ಆಯಾಯ ಮನ್ವಂತರಗಳಲ್ಲಿ ಯಾವ ಯಾವ ದೇವತೆ-ಋಷಿ–ರಾಜರು ಇರುವರೋ ಯಾರು ಮನ್ವಂತರಾಧಿಪತಿಗಳಾಗಿರುವರೋ ಅವರೆಲ್ಲರೂ ಮನ್ವಂತರಶ್ರವಣದಿಂದ ಪ್ರೀತಿಗೊಂಡವರಾಗಿ ಕಲ್ಯಾಣಬುದ್ಧಿಯನ್ನು ಅನುಗ್ರಹಿಸುವರು.

ತತಃ ಶುಭಾಂ ಮತಿಂ ಪ್ರಾಪ್ಯ ಕೃತ್ವಾ ಕರ್ಮ ತಥಾ ಶುಭಮ್ ।
ಶುಭಾಂ ಗತಿಮವಾಪ್ನೋತಿ ಯಾವದಿನ್ದ್ರಾಶ್ಚತುರ್ದಶ ॥೪೪॥

ಸರ್ವೇ ಸ್ಯುರ್ಋತವಃ ಕ್ಷೇಮ್ಯಾಃ ಸರ್ವೇ ಸೌಮ್ಯಾಸ್ತಥಾ ಗ್ರಹಾಃ ।
ಭವನ್ತ್ಯಸಂಶಯಂ ಕೃತ್ವಾ ಕ್ರಮಾನ್ಮನ್ವನ್ತರಸ್ಥಿತಿಮ್ ॥೪೫॥

ಇತಿ ಶ್ರೀಮಾರ್ಕಣ್ಡೇಯಮಹಾಪುರಾಣೇ ಚತುರ್ದಶಮನ್ವನ್ತರ-
ಸಮಾಪ್ತಿರ್ನಾಮ ಸಪ್ತನವತಿತಮೋಽಧ್ಯಾಯಃ

---

೪೪. ಪುಣ್ಯಚರಿತ್ರಶ್ರವಣದಿಂದ ಶುಭಮತಿಯನ್ನು ಹೊಂದಿ ಹಾಗೆ ಶುಭಕರವಾದ ಕರ್ಮವನ್ನು ಆಚರಿಸಿ ಹದಿನಾಲ್ಕುಮಂದಿ ಇಂದ್ರರ ಪರ್ಯಾಯವು ಮುಗಿಯುವಷ್ಟು ದೀರ್ಘಕಾಲ ಸದ್ಗತಿಯನ್ನು ಹೊಂದುವನು.

೪೫. ಮನ್ವಂತರ ಚರಿತ್ರೆಯನ್ನು ಕ್ರಮವಾಗಿ ಶ್ರವಣಮಾಡಿದ ಮಹಾತ್ಮನಿಗೆ ಎಲ್ಲ ಋತುಗಳು ಕ್ಷೇಮದಾಯಕವಾಗುವುವು. ಮತ್ತು ನಿಸ್ಸಂದೇಹವಾಗಿ ಎಲ್ಲ ಗ್ರಹಗಳು ಸೌಮ್ಯರಾಗಿದ್ದು ಶುಭಫಲವನ್ನು ಕೊಡುವರು.

ಮಾರ್ಕಂಡೇಯ ಮಹಾಪುರಾಣದಲ್ಲಿ ತೊಂಭತ್ತೇಳನೆಯ ಅಧ್ಯಾಯವು ಮುಗಿದುದು.

!! ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಅಷ್ಟನವತಿತಮೋಽಧ್ಯಾಯಃ

(ವಂಶಾನುಕೀರ್ತನಮ್)

ಕ್ರೌಷ್ಟುಕಿರುವಾಚ :—

ಭಗವನ್ಕಥಿತಾ ಸಮ್ಯಕ್ ತ್ವಯಾ ಮನ್ವನ್ತರಸ್ಥಿತಿಃ |
ಕ್ರಮಾದ್ವಿಸ್ತರತಸ್ತ್ವತ್ತೋ ಮಯಾ ಚೈವಾವಧಾರಿತಾ ||೧||

ಬ್ರಹ್ಮಾದ್ಯಮಖಿಲಂ ವಂಶಂ ಭೂಭುಜಾಂ ದ್ವಿಜಸತ್ತಮ |
ಶ್ರೋತುಂ ಮಮೇಚ್ಛಾ ತತಃ ಸಮ್ಯಗ್ಭಗವನ್ಪ್ರಬ್ರವೀಹಿ ಮೇ ||೨||

ತೊಂಭತ್ತೆಂಟನೆಯ ಅಧ್ಯಾಯ

ಕ್ರೌಷ್ಟುಕಿಯು ಹೀಗೆಂದನು :—

೧. ಷಡ್ಗುಣೈಶ್ವರ್ಯಸಂಪನ್ನನಾದ ಮುನಿಯೆ! ನಿನ್ನಿಂದ ಮನ್ವಂತರಗಳ ಸ್ಥಿತಿಯು ಕ್ರಮವಾಗಿಯೂ ವಿಸ್ತಾರವಾಗಿಯೂ ನನಗೆ ಚನ್ನಾಗಿ ಹೇಳಲ್ಪಟ್ಟದೆ. ಅದರಂತೆ ನಾನು ಅದನ್ನು ಚನ್ನಾಗಿ ಅರಿತುಕೊಂಡೆನು.

೨. ದ್ವಿಜೋತ್ತಮನಾದ ಮಾರ್ಕಂಡೇಯ ಮುನಿಯೇ! ಬ್ರಹ್ಮನು ಆದಿಯಾಗಿ ಜನಿಸಿದ ಸಮಸ್ತ ರಾಜರ ವಂಶಕ್ರಮವನ್ನು ತಿಳಿಯಲು ನಾನು ಕುತೂಹಲಗೊಂಡಿರುವೆನು. ಪೂಜ್ಯನೆ! ನನಗೆ ಅದನ್ನು ವಿಸ್ತಾರವಾಗಿ ಹೇಳಬೇಕು.

ಮಾರ್ಕಣ್ಡೇಯ ಉವಾಚ :—

ಶೃಣು ವತ್ಸ ನೃಪಾಣಾಂ ತ್ವಮಶೇಷಾಣಾಂ ಸಮುದ್ಭವಮ್ ।
ಚರಿತಂ ಚ ಜಗನ್ಮೂಲಮಾದೌ ಕೃತ್ವಾ ಪ್ರಜಾಪತಿಮ್ ॥೧॥

ಅಯಂ ಹಿ ವಂಶೋ ಭೂಪಾಲೈರನೇಕಕ್ರತುಕರ್ತೃಭಿಃ ।
ಸಙ್ಗ್ರಾಮಜಿದ್ಭಿರ್ಧರ್ಮಜ್ಞೈಃ ಶತಸಙ್ಖ್ಯೈರಲಙ್ಕೃತಃ ॥೨॥

ಶ್ರುತ್ವಾ ಚೈಷಾಂ ನರೇನ್ದ್ರಾಣಾಂ ಚರಿತಾನಿ ಮಹಾತ್ಮನಾಮ್ ।
ಉತ್ಪತ್ತಯಶ್ಚ ಪುರುಷಃ ಸರ್ವಪಾಪೈಃ ಪ್ರಮುಚ್ಯತೇ ॥೩॥

ಮನುರ್ಯತ್ರ ತಥೇಕ್ಷ್ವಾಕುರನರಣ್ಯೋ ಭಗೀರಥಃ ।
ಅನ್ಯೇ ಚ ಶತಶೋ ಭೂಪಾಃ ಸಮ್ಯಕ್ಪಾಲಿತಭೂಮಯಃ ॥೪॥

ಮಾರ್ಕಂಡೇಯ ಮುನಿಯು ಇಂತೆಂದನು :—

೧. ವತ್ಸನೇ! ಜಗತ್ತಿಗೆ ಮೂಲನಾಗಿರುವ ಪ್ರಜಾಪತಿಯನ್ನು ಮೊದಲಿಟ್ಟುಕೊಂಡು ಮುಂದೆ ಜನಿಸಿದ ಅಶೇಷರಾಜರ ಉತ್ಪತ್ತಿಯನ್ನೂ ಮತ್ತು ಅವರ ಅದ್ಭುತಚರಿತ್ರೆಯನ್ನೂ ನೀನು ನನ್ನಿಂದ ಕೇಳು.

೨. ಈ ರಾಜವಂಶವು ಅನೇಕ ಯಜ್ಞಕರ್ಮಗಳನ್ನು ಆಚರಿಸಿದವರೂ, ಧರ್ಮವೇತ್ತರೂ ಮತ್ತು ಯುದ್ಧಗಳಲ್ಲಿ ಜಯವನ್ನು ಹೊಂದಿದವರೂ ಆದ ನೂರಾರು ಸಂಖ್ಯೆಯ ಭೂಪಾಲಕರಿಂದ ಅಲಂಕರಿಸಲ್ಪಟ್ಟಿರುವುದು.

೩. ಇಂತಹ ಮಹಾನುಭಾವರಾದ ನರೇಂದ್ರರ ಚರಿತ್ರಗಳನ್ನೂ ಮತ್ತು ಮಾಹಾತ್ಮ್ಯವನ್ನು ಸೂಚಿಸುವ ಜನ್ಮಗಳನ್ನೂ ಕೇಳಿದ ಪುರುಷನು ಸಮಸ್ತ ಪಾಪಗಳಿಂದ ಮುಕ್ತನಾಗಿ ಪವಿತ್ರನಾಗುವನು.

೪. ಮನುರಾಜನಿಂದ ಆದಿಯಾದ ವಂಶದಲ್ಲಿ ಜನಿಸಿದ ರಾಜರ ವಂಶಾವಳಿಯಲ್ಲಿ ಇಕ್ಷ್ವಾಕು, ಅನರಣ್ಯ, ಭಗೀರಥ ಮತ್ತು ಇತರ ನೂರಾರುಮಂದಿ ರಾಜರು ಉತ್ತಮವಾಗಿ ರಾಜ್ಯಭಾರಮಾಡಿದವರೆಂದು ಪ್ರಖ್ಯಾತರಾಗಿರುವರು.

ಧರ್ಮಜ್ಞಾ ಯಜ್ವಿನಃ ಶೂರಾಃ ಪರಮಾರ್ಥಾರ್ಥವೇದಿನಃ ।
ಶ್ರುತೇ ತಸ್ಮಿನ್ಸ್ವಮಾನ್ವಂಶೇ ಪಾಪೌಘಾದ್ವಿಪ್ರಮುಚ್ಯತೇ ॥೭॥

ತದಯಂ ಶ್ರೂಯತಾಂ ವಂಶೋ ಯತೋ ವಂಶಾಃ ಸಹಸ್ರಶಃ ।
ಭಿದ್ಯನ್ತೇ ಮನುಜೇನ್ದ್ರಾಣಾಮವರೋಹಾ ಯಥಾ ವಟಾತ್ ॥೮॥

ಬ್ರಹ್ಮಾ ಪ್ರಜಾಪತಿಃ ಪೂರ್ವಂ ಸಿಸೃಕ್ಷುರ್ವಿವಿಧಾಃ ಪ್ರಜಾಃ ।
ಅಙ್ಗುಷ್ಠಾದ್ದಕ್ಷಿಣಾದ್ದಕ್ಷಮಸೃಜದ್ದ್ವಿಜಸತ್ತಮ ॥೯॥

ವಾಮಾಙ್ಗುಷ್ಠಾಚ್ಚ ತತ್ಪತ್ನೀಂ ಜಗತ್ಸೃಷ್ಟಿಕರೋ ವಿಭುಃ ।
ಸಸರ್ಜ ಭಗವಾನ್ಬ್ರಹ್ಮಾ ಜಗತಾಂ ಕಾರಣಂ ಪರಮ್ ॥೧೦॥

---

೭. ಮತ್ತು ಆ ವಂಶದಲ್ಲಿ ಜನಿಸಿದ ವ್ಯಕ್ತಿಗಳು ಧರ್ಮಜ್ಞರೂ, ಯಜ್ಞಾನುಷ್ಠಾನಪರರೂ, ಶೂರರೂ ಮತ್ತು ಪರಮಾರ್ಥತತ್ತ್ವವನ್ನು ಅರಿತವರೂ ಆಗಿರುವರು. ಆದ್ದರಿಂದ ಅಂತಹ ವಂಶವನ್ನು ಶ್ರವಣಮಾಡುವುದರಿಂದ ಮಾನವನು ಪಾಪರಾಶಿಯಿಂದ ಮುಕ್ತನಾಗುವನು.

೮. ಆದುದರಿಂದ ಈ ಮನುವಂಶವನ್ನು ನೀನು ಕೇಳು. ಒಂದು ವಂಶದಿಂದ ಸಾವಿರಾರು ವಂಶಗಳು ಹುಟ್ಟಿಕೊಂಡಿರುವುವು. ಹಾಗೆ ಬೇರೆ ಬೇರೆಯಾದ ರಾಜರ ವಂಶಗಳು ಆಲದಮರದಿಂದ ಅನೇಕ ಜಡೆಗಳು ಕೆಳಗೆ ಇಳಿದಿರುವಂತೆ ಒಂದು ಮೂಲದಿಂದ ಹುಟ್ಟಿರುವುವು.

೯. ದ್ವಿಜೋತ್ತಮನಾದ ಕ್ರೌಷ್ಟುಕಿಯೇ! ಪ್ರಜಾಪಾಲಕನಾದ ಬ್ರಹ್ಮದೇವನು ಕಲ್ಪದ ಆದಿಯಲ್ಲಿ ವಿವಿಧವಾದ ಪ್ರಜೆಗಳನ್ನು ಸೃಜಿಸುವ ಇಷ್ಟವುಳ್ಳವನಾಗಿ ಬಲಭಾಗದ ಅಂಗುಷ್ಠದಿಂದ ದಕ್ಷಪ್ರಜಾಪತಿಯನ್ನು ಸೃಜಿಸಿದನು.

೧೦. ಮತ್ತು ಜಗತ್ತಿನ ಉತ್ಪತ್ತಿಯನ್ನು ಮಾಡುವವನೂ, ಸರ್ವವ್ಯಾಪಕನೂ, ಅಖಂಡೈಶ್ವರ್ಯವಂತನೂ ಮತ್ತು ಜಗತ್ತಿಗೆ ಪರಮಕಾರಣನೂ ಆದ ಬ್ರಹ್ಮದೇವನು ತನ್ನ ಎಡಭಾಗದ ಅಂಗುಷ್ಠದಿಂದ ದಕ್ಷಪ್ರಜಾಪತಿಯ ಪತ್ನಿಯನ್ನು ಸೃಜಿಸಿದನು.

ಅದಿತಿಸ್ತಸ್ಯ ದಕ್ಷಸ್ಯ ಕನ್ಯಾಜಾಯತ ಶೋಭನಾ ।
ತಸ್ಯಾಂ ಚ ಕಶ್ಯಪೋ ದೇವಂ ಮಾರ್ತಣ್ಡಂ ಸಮಜೀಜನತ್ ॥೧೧॥

ಬ್ರಹ್ಮಾ ಸ್ವರೂಪಂ ಜಗತಾಮಶೇಷಾಣಾಂ ವರಪ್ರದಮ್ ।
ಆದಿಮಧ್ಯಾನ್ತಭೂತಂ ಚ ಸರ್ಗಸ್ಥಿತ್ಯನ್ತಕರ್ಮಸು ॥೧೨॥

ಯತೋಽಖಿಲಮಿದಂ ಯಸ್ಮಿನ್ನಶೇಷಂ ಚ ಸ್ಥಿತಂ ದ್ವಿಜ ।
ಯತ್ಸ್ವರೂಪಂ ಜಗಚ್ಚೇದಂ ಸದೇವಾಸುರಮಾನುಷಮ್ ॥೧೩॥

ಯಃ ಸರ್ವಭೂತಃ ಸರ್ವಾತ್ಮಾ ಪರಮಾತ್ಮಾ ಸನಾತನಃ ।
ಅದಿತ್ಯಾಮಭವದ್ಭಾಸ್ವಾನ್ ಪೂರ್ವಮಾರಾಧಿತಸ್ತಯಾ ॥೧೪॥

---

೧೧. ಆ ದಕ್ಷಪ್ರಜಾಪತಿಗೆ ಮಂಗಳರೂಪಿಣಿಯಾದ ಅದಿತಿ ಎಂಬ ಕನ್ಯೆಯು ಜನಿಸಿದಳು. ಕಶ್ಯಪಮುನಿಯು ತನ್ನ ಪತ್ನಿಯಾದ ಆ ಅದಿತಿಯಲ್ಲಿ ಸೂರ್ಯನೆಂಬ ಪುತ್ರನನ್ನು ಹೊಂದಿದನು.

೧೨. ಜಗತ್ತಿನ ಸ್ವರೂಪನಾದವನೂ, ಅಶೇಷ ಪ್ರಾಣಿಗಳ ಇಷ್ಟವನ್ನು ಕೊಡುವವನೂ ಮತ್ತು ವಿಶ್ವದ ಸೃಷ್ಟಿ-ಸ್ಥಿತಿ-ಲಯ ವ್ಯಾಪಾರಗಳಲ್ಲಿ ಆದಿ-ಮಧ್ಯ-ಅಂತಸ್ವರೂಪನಾಗಿರುವವನೂ ಆದ ಬ್ರಹ್ಮದೇವನು ಅದಿತಿಯಲ್ಲಿ ಪುತ್ರನಾಗಿ ಜನಿಸಿದನು.

೧೩. ದ್ವಿಜನಾದ ಕ್ರೌಷ್ಟುಕಿಯೇ! ಈ ವಿಶ್ವವೆಲ್ಲವೂ ಯಾವ ಬ್ರಹ್ಮನಿಂದ ಹುಟ್ಟುವುದೋ, ಈ ಅಶೇಷ ಪ್ರಪಂಚವು ಯಾವ ಬ್ರಹ್ಮವಸ್ತುವಿನ ಆಧಾರದಲ್ಲಿರುವುದೋ ಮತ್ತು ದೇವ-ಅಸುರ-ಮಾನುಷರಿಂದ ಕೂಡಿದ ಈ ಜಗತ್ತು ಯಾವ ಬ್ರಹ್ಮನ ಸ್ವರೂಪವೋ ಅಂತಹ ಬ್ರಹ್ಮದೇವನು ಅದಿತಿಯಲ್ಲಿ ಜನಿಸಿದನು.

೧೪. ಸರ್ವಭೂತಸ್ವರೂಪನೂ, ಸರ್ವಭೂತಗಳಿಗೆ ಆತ್ಮರೂಪನೂ ಮತ್ತು ಅನಾದಿಯೂ ಆದ ಪರಮಾತ್ಮನು ಅದಿತಿದೇವಿಯಿಂದ ಹಿಂದೆ ಆರಾಧಿಸಲ್ಪಟ್ಟವನಾಗಿ ಅವಳಲ್ಲಿ ಸೂರ್ಯದೇವನ ರೂಪದಿಂದ ಪುತ್ರನಾಗಿ ಜನಿಸಿದನು.

ಕ್ರೌಷ್ಟುಕಿರುವಾಚ :—

ಭಗವನ್ ಶ್ರೋತುಮಿಚ್ಛಾಮಿ ಯತ್ಸ್ವರೂಪಂ ವಿವಸ್ವತಃ ।
ಯತ್ಕಾರಣಂ ಚಾದಿದೇವಃ ಸೋಽಭವತ್ಕಶ್ಯಪಾತ್ಮಜಃ ॥೧೫॥

ಯಥಾ ಚಾರಾಧಿತೋ ದೇವ್ಯಾ ಸೋಽದಿತ್ಯಾ ಕಶ್ಯಪೇನ ಚ ।
ಆರಾಧಿತೇನ ಚೋಕ್ತಂ ಯತ್ತೇನ ದೇವೇನ ಭಾಸ್ವತಾ ॥೧೬॥

ಪ್ರಭಾವಂ ಚಾವತೀರ್ಣಸ್ಯ ಯಥಾವನ್ಮುನಿಸತ್ತಮ ।
ಭವತಾ ಕಥಿತಂ ಸಮ್ಯಕ್ ಶ್ರೋತುಮಿಚ್ಛಾಮ್ಯಶೇಷತಃ ॥೧೭॥

ಮಾರ್ಕಣ್ಡೇಯ ಉವಾಚ :—

ವಿಸ್ಪಷ್ಟಾ ಪರಮಾ ವಿದ್ಯಾ ಜ್ಯೋತಿರ್ಭಾ ಶಾಶ್ವತೀ ಸ್ಫುಟಾ ।
ಕೈವಲ್ಯಂ ಜ್ಞಾನಮಾವಿರ್ಭಾಃ ಪ್ರಾಕಾಮ್ಯಂ ಸಂವಿದೇವ ಚ ॥೧೮॥

ಕ್ರೌಷ್ಟುಕಿಯು ಹೀಗೆಂದನು :—

೧೫. ಪೂಜ್ಯನಾದ ಮಾರ್ಕಂಡೇಯ ಮುನಿಯೇ! ಸೂರ್ಯದೇವನ ಸ್ವರೂಪವನ್ನು ಕೇಳಲು ಇಷ್ಟವುಳ್ಳವನಾಗಿದ್ದೇನೆ. ಮತ್ತು ಆದಿದೇವನಾದ ಪರಮಾತ್ಮನು ಯಾವ ಕಾರಣದಿಂದ ಕಶ್ಯಪಮುನಿಯ ಪುತ್ರನಾಗಿ ಜನ್ಮವೆತ್ತಿದನೋ ಆ ಕಾರಣವನ್ನು ಕೇಳಬೇಕೆಂದಿರುವೆನು.

೧೬. ಮತ್ತು ಅದಿತಿದೇವಿ, ಕಶ್ಯಪಮುನಿ ಇವರಿಬ್ಬರೂ ಪರಮಾತ್ಮನನ್ನು ಯಾವ ಬಗೆಯಿಂದ ಆರಾಧಿಸಿದರು? ಹಾಗು ಅವರಿಂದ ಆರಾಧಿಸಲ್ಪಟ್ಟು ಒಲಿದು ಬಂದ ಪ್ರಕಾಶಮಯನಾದ ಪರಮಾತ್ಮನು ಅನುಗ್ರಹಿಸಿ ಹೇಳಿದ ಮಾತೇನು?

೧೭. ಮುನಿಶ್ರೇಷ್ಠನಾದ ಮಾರ್ಕಂಡೇಯಮಹರ್ಷಿಯೇ! ಮತ್ತು ಅವತಾರಮಾಡಿದ ಪರಮಾತ್ಮನ ಪ್ರಭಾವದ ವಿಷಯವಾಗಿ ತಾತ್ತ್ವಿಕವಾಗಿ ನೀನು ಹೇಳುವುದನ್ನು ವಿಸ್ತಾರವಾಗಿಯೂ ಸಂಪೂರ್ಣವಾಗಿಯೂ ಕೇಳಬೇಕೆಂದು ಆಶಿಸುತ್ತಿದ್ದೇನೆ.

ಮಾರ್ಕಂಡೇಯ ಮುನಿಯು ಇಂತೆಂದನು :—

೧೮. ರೂಪರಹಿತನಾದ ಪರಮಾತ್ಮನಲ್ಲಿ ಇರುವ ಕಲ್ಪಿತರೂಪವನ್ನು ಉತ್ತಮವಾದ ಸ್ಫೂರ್ತಿ, ವಿದ್ಯೆ, ಜ್ಯೋತಿ, ಸ್ಪಷ್ಟವೂ ಮತ್ತು ಶಾಶ್ವತವೂ ಆದ ಪ್ರಭೆ, ಕೈವಲ್ಯ, ಜ್ಞಾನ, ಸಾಕ್ಷಾತ್ಕಾರ, ಸ್ವಚ್ಛಂದ ಪ್ರಕಾಶ ಮತ್ತು ಅನುಭವ ಎಂಬ ನಾನಾವಿಧವಾದ ಹೆಸರಿನಿಂದ ಕರೆಯುತ್ತಿರುವರು.

ಬೋಧಶ್ಚಾವಗತಿಶ್ಚೈವ ಸ್ಮೃತಿರ್ವಿಜ್ಞಾನಮೇವ ಚ।
ಇತ್ಯೇತಾನೀಹ ರೂಪಾಣಿ ತಸ್ಯಾರೂಪಸ್ಯ ವಾ ಸ್ವತಃ ॥೧೯॥

ಶ್ರೂಯತಾಂ ಚ ಮಹಾಭಾಗ ವಿಸ್ತರಾದ್ವದತೋ ಮಮ।
ಯತ್ಪೃಷ್ಟವಾನಸಿ ರವೇರಾವಿರ್ಭಾವೋ ಯಥಾಭವತ್ ॥೨೦॥

ನಿಷ್ಪ್ರಭೇಽಸ್ಮಿನ್ನಿರಾಲೋಕೇ ಸರ್ವತಸ್ತಮಸಾ ವೃತೇ।
ಬೃಹದಣ್ಡಮಭೂದೇಕಮಕ್ಷರಂ ಕಾರಣಂ ಪರಮ್ ॥೨೧॥

ತದ್ವಿಭೇದ ತದನ್ತಃಸ್ಥೋ ಭಗವಾನ್ಪ್ರಪಿತಾಮಹಃ।
ಪದ್ಮಯೋನಿಃ ಸ್ವಯಂ ಬ್ರಹ್ಮಾ ಯಃ ಸ್ರಷ್ಟಾ ಜಗತಾಂ ಪ್ರಭುಃ॥೨೨॥

---

೧೯. ಮತ್ತು ಬೋಧ, ಅವಗತಿ, ಸ್ಮೃತಿ, ವಿಜ್ಞಾನ—ಎಂಬ ಅನೇಕ ಸಂಜ್ಞೆಗಳಿಂದ ಕರೆಯಲ್ಪಡುವ ರೂಪಗಳು ಪಾರಮಾರ್ಥಿಕವಾಗಿ ರೂಪವಿಲ್ಲದ ಪರಮಾತ್ಮನಲ್ಲಿ ಕಲ್ಪನೆಯಿಂದ ವ್ಯವಹರಿಸಲ್ಪಡುತ್ತಿವೆ.

೨೦. ಮಹಾಭಾಗ್ಯಶಾಲಿಯಾದ ಕ್ರೌಷ್ಟುಕಿಯೇ! ಸೂರ್ಯದೇವನ ಆವಿರ್ಭಾವವು ಹೇಗಾಯಿತೆಂದು ನೀನು ನನ್ನನ್ನು ಪ್ರಶ್ನಿಸಿದ್ದೀಯೆ. ಅದನ್ನು ವಿಸ್ತಾರವಾಗಿ ಹೇಳುವ ನನ್ನ ವಚನವನ್ನು ನೀನು ಕೇಳು.

೨೧. ಸೃಷ್ಟಿಯ ಪೂರ್ವಕಾಲದಲ್ಲಿ ಈ ಪ್ರಪಂಚವು ಪ್ರಭೆಯಿಂದ ಶೂನ್ಯವೂ ಪ್ರಕಾಶದಿಂದ ರಹಿತವೂ ಮತ್ತು ಗಾಢಾಂಧಕಾರದಿಂದ ಪರಿಪೂರ್ಣವೂ ಆಗಿರಲು ಶಾಶ್ವತವೂ ಉತ್ತಮಕಾರಣವೂ ಆದ ಒಂದು ಬೃಹದಾಕಾರವಾದ ಅಂಡವು ಹುಟ್ಟಿತು.

೨೨. ಆ ಅಂಡದ ಒಳಭಾಗದಲ್ಲಿರುವವನೂ, ಅಖಂಡೈಶ್ವರ್ಯವಂತನೂ, ಪ್ರಪಿತಾಮಹನೆಂದೆನಿಸಿರುವವನೂ, ನಾಭಿಪದ್ಮದಲ್ಲಿ ಹುಟ್ಟಿದವನೂ ಮತ್ತು ಜಗತ್ತಿನ ಸೃಷ್ಟಿವ್ಯಾಪಾರದಲ್ಲಿ ಪ್ರಭುವೂ ಆದ ಬ್ರಹ್ಮದೇವನು ಅಂಡವನ್ನು ಒಡೆದನು.

ತನ್ಮುಖಾದೋಮಿತಿ ಮಹಾನಭೂಚ್ಛಬ್ದೋ ಮಹಾಮುನೇ ।
ತತೋ ಭೂಸ್ತು ಭುವಸ್ತಸ್ಮಾತ್ತತಶ್ಚ ಸ್ವರನನ್ತರಮ್ ॥೨೩॥

ಏತಾ ವ್ಯಾಹೃತಯಸ್ತಿಸ್ರಃ ಸ್ವರೂಪಂ ತದ್ವಿವಸ್ವತಃ ।
ಓಮಿತ್ಯಸ್ಮಾತ್ಸ್ವರೂಪಾತ್ತು ಸೂಕ್ಷ್ಮರೂಪಂ ರವೇಃ ಪರಮ್ ॥೨೪॥

ತತೋ ಮಹರಿತಿ ಸ್ಥೂಲಂ ಜನಂ ಸ್ಥೂಲತರಂ ತತಃ ।
ತತಸ್ತಪಸ್ತತಃ ಸತ್ಯಮಿತಿ ಮೂರ್ತಾನಿ ಸಪ್ತಧಾ ॥೨೫॥

ಸ್ಥಿತಾನಿ ತಸ್ಯ ರೂಪಾಣಿ ಭವನ್ತಿ ನ ಭವನ್ತಿ ಚ ।
ಸ್ವಭಾವಾಭಾವಯೋರ್ಭಾವಂ ಯತೋ ಗಚ್ಛನ್ತಿ ಸಂಶಯಮ್ ॥೨೬॥

---

೨೩. ಮಹಾಮುನಿಯೇ ! ಹಾಗೆ ಅಂಡವನ್ನು ಭೇದಿಸುತ್ತಿರಲು ಅವರ ಮುಖದಿಂದ " ಓಂ " ಎಂಬ ಒಂದು ಶಬ್ದವು ಹುಟ್ಟಿತು. ತರುವಾಯ " ಭೂಃ–ಭುವಃ–ಸ್ವಃ " ಎಂಬ ಶಬ್ದಗಳು ಕ್ರಮವಾಗಿ ಹುಟ್ಟಿದುವು.

೨೪. ಹೀಗೆ ಹುಟ್ಟಿದ " ಭೂಃ " ಮೊದಲಾದ ಮೂರು ವ್ಯಾಹೃತಿ ಮಂತ್ರಗಳು ಸೂರ್ಯದೇವನ ಸೂಕ್ಷ್ಮರೂಪವು. ಮೊದಲು ಹುಟ್ಟಿದ ಪ್ರಣವಾಕ್ಷರವಾದ " ಓಂ " ಎಂಬುದು ಇವಕ್ಕಿಂತಲೂ ಸೂಕ್ಷ್ಮವಾದ ಸೂರ್ಯದೇವನ ಶ್ರೇಷ್ಠವಾದ ರೂಪವು.

೨೫. ತರುವಾಯ ಕ್ರಮವಾಗಿ ಒಂದಕ್ಕಿಂತಲು ಮತ್ತೊಂದು ಸ್ಥೂಲವಾಗಿ " ಮಹಃ, ಜನಃ, ತಪಃ ಸತ್ಯಮ್ " ಎಂದು ನಾಲ್ಕು ವ್ಯಾಹೃತಿಮಂತ್ರದ ರೂಪಗಳು ಹುಟ್ಟಿದುವು. " ಭೂಃ, ಭುವಃ, ಸ್ವಃ, ಮಹಃ, ಜನಃ, ತಪಃ, ಸತ್ಯಮ್ " ಇವು ಸೂರ್ಯನ ಮೂರ್ತರೂಪಗಳಾಗಿವೆ.

೨೬. ಸೂರ್ಯದೇವನ ಈ ಮೂರ್ತರೂಪಗಳು ಸಂಶಯದಲ್ಲಿ ತೋರುವ ಭಾವ–ಅಭಾವಗಳ ಸ್ವರೂಪವನ್ನು ಹೊಂದುವುವಾದ್ದರಿಂದ ಅಸ್ತಿತ್ವ-ನಾಸ್ತಿತ್ವಗಳನ್ನು ಹೊಂದಿರುತ್ತವೆ.

**ಆದ್ಯನ್ತಂ ಯತ್ಪರಂ ಸೂಕ್ಷ್ಮಮರೂಪಂ ಪರಮಂ ಸ್ಥಿತಮ್ ।
ಓಮಿತ್ಯುಕ್ತಂ ಮಯಾ ವಿಪ್ರ ತತ್ಪರಂ ಬ್ರಹ್ಮ ತದ್ವಪುಃ ॥೨೭॥**

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ವಂಶಾನುಕೀರ್ತನಂ ನಾಮಾಷ್ಟನವತಿತಮೋಽಧ್ಯಾಯಃ

---

೨೭. ವಿಪ್ರನಾದ ಕ್ರೌಷ್ಟುಕಿಯೇ! ನಾನು ಹಿಂದೆ ಹೇಳಿರುವ ಓಂಕಾರವು ಆದಿ-ಅಂತಗಳಲ್ಲಿರುವುದೂ, ಎಲ್ಲಕ್ಕಿಂತಲೂ ಸೂಕ್ಷ್ಮವಾದುದೂ, ರೂಪರಹಿತವಾಗಿರುವುದೂ ಆದ ಪರಬ್ರಹ್ಮವಸ್ತುವಿನ ಸ್ವರೂಪವಾಗಿರುವುದು.

ಮಾರ್ಕಂಡೇಯ ಮಹಾಪುರಾಣದಲ್ಲಿ ತೊಂಭತ್ತೆಂಟನೆಯ ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಏಕೋನಶತತಮೋಽಧ್ಯಾಯಃ

(ಮಾರ್ತಣ್ಡಮಾಹಾತ್ಮ್ಯಕೀರ್ತನಮ್)

ಮಾರ್ಕಣ್ಡೇಯ ಉವಾಚ :—

ತಸ್ಮಾದಣ್ಡಾದ್ವಿಭಿನ್ನಾತ್ತು ಬ್ರಹ್ಮಣೋಽವ್ಯಕ್ತಜನ್ಮನಃ ।
ಋಚೋ ಬಭೂವುಃ ಪ್ರಥಮಂ ಪ್ರಥಮಾದ್ವದನಾನ್ಮುನೇ ||೧||

ಜಪಾಪುಷ್ಪನಿಭಾಃ ಸದ್ಯಸ್ತೇಜೋರೂಪಾ ಹ್ಯಸಂಹತಾಃ ।
ಪೃಥಕ್ಪೃಥಗ್ವಿಭಿನ್ನಾಶ್ಚ ರಜೋರೂಪಮಹಾಸ್ತತಃ ||೨||

ತೊಂಭತ್ತೊಂಭತ್ತನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಹೇಳಿದನು :—

೧. ಕ್ರೌಷ್ಟುಕಿಮುನಿಯೇ! ಹಿಂದೆ ಹೇಳಿದ ಅಂಡವು ಭೇದಿಸಲ್ಪಟ್ಟ ಬಳಿಕ ಅದರಿಂದ ಪ್ರಕಾಶಿಸಿದ ಅವ್ಯಕ್ತತತ್ತ್ವದಿಂದ ಜನಿಸಿರುವ ಬ್ರಹ್ಮದೇವನ ಮೊದಲನೆಯ ಮುಖದಿಂದ ಮೊದಲು ಋಙ್ಮಂತ್ರಗಳು ಉತ್ಪತ್ತಿಯಾದುವು.

೨. ಆ ಋಙ್ಮಂತ್ರಗಳು ದಾಶವಾಳದ ಹೂಗಳಂತೆ ಬಣ್ಣವುಳ್ಳವುಗಳೂ, ತೇಜೋರೂಪದಿಂದ ಹೊಳೆಯುತ್ತಿರುವುವೂ, ದಂಡಾಕಾರವಾಗಿ ಸಮಷ್ಟಿಯಾಗಿ ಸೇರದಿರುವುವೂ ಮತ್ತು ಪ್ರತ್ಯೇಕವಾಗಿ ಇರುವುವೂ ಆಗಿದ್ದುವು.

ಯಜೂಂಷಿ ದಕ್ಷಿಣಾದ್ವಕ್ತ್ರಾದನಿರುದ್ಧಾನಿ ಕಾನಿಚಿತ್ ।
ಯಾದೃಗ್ವರ್ಣಂ ತಥಾವರ್ಣಾನ್ಯಸಂಹತಿಧರಾಣಿ ಚ ॥೩॥

ಪಶ್ಚಿಮಂ ಯದ್ವಿಭೋರ್ವಕ್ತ್ರಂ ಬ್ರಹ್ಮಣಃ ಪರಮೇಷ್ಠಿನಃ ।
ಆವಿರ್ಭೂತಾನಿ ಸಾಮಾನಿ ತತ್ತಚ್ಛನ್ದಾಂಸಿ ತಾನ್ಯಥ ॥೪॥

ಅಥರ್ವಣಾಮಶೇಷಂ ಚ ಭೃಙ್ಗಾಞ್ಜನಚಯಪ್ರಭಮ್ ।
ಯಾವದ್ಘೋರಸ್ವರೂಪಂ ತದಾಭಿಚಾರಿಕಶಾನ್ತಿಕಮ್ ॥೫॥

ಉತ್ತರಾತ್ಪ್ರಕಟೀಭೂತಂ ವದನಾತ್ತಸ್ಯ ವೇಧಸಃ ।
ಸುಖಸತ್ತ್ವತಮಃಪ್ರಾಯಂ ಸೌಮ್ಯಾಸೌಮ್ಯಸ್ವರೂಪವತ್ ॥೬॥

ಋಚೋ ರಜೋಗುಣಾಃ ಸತ್ತ್ವಂ ಯಜುಷಾಂ ಚ ಗುಣಾ ಮುನೇ ।
ತಮೋಗುಣಾನಿ ಸಾಮಾನಿ ತಮಃ ಸತ್ತ್ವಮಥರ್ವಸು ॥೭॥

---

೩. ಮತ್ತು ಬ್ರಹ್ಮನ ದಕ್ಷಿಣಭಾಗದ ಮುಖದಿಂದ ತಡೆಯಿಲ್ಲದ ಹಾಗೆ ಯಜುರ್ಮಂತ್ರಗಳು ಹುಟ್ಟಿದುವು. ಆ ಯಜುರ್ಮಂತ್ರಗಳು ಚಿನ್ನದ ಬಣ್ಣ-ವುಳ್ಳವುಗಳೂ, ಸಂಘ ಸೇರದಿರುವ ವರ್ಣಗಳಿಂದ ಕೂಡಿದವುಗಳೂ ಆಗಿದ್ದುವು.

೪. ವಿಭುವಾದ ಮತ್ತು ಉತ್ತಮಸ್ಥಾನದಲ್ಲಿರುವ ಬ್ರಹ್ಮದೇವನ ಪಶ್ಚಿಮದಿಕ್ಕಿನ ಕಡೆಯ ಮುಖದಿಂದ ಆಯಾಯ ಛಂದಸ್ಸುಗಳಿಂದ ಕೂಡಿರುವ ಅನೇಕ ಸಾಮಮಂತ್ರಗಳು ಆವಿರ್ಭಾವವನ್ನು ಹೊಂದಿದುವು.

೫. ಅನಂತರ ಅಭಿಚಾರ ಶಾಂತಿಕರ್ಮಗಳಿಗೆ ಸಂಬಂಧಿಸಿರುವುದೂ, ಘೋರಸ್ವರೂಪವುಳ್ಳದ್ದೂ ಮತ್ತು ದುಂಬಿ–ಕಾಡಿಗೆಯ ರಾಶಿಗಳಂತೆ ಪ್ರಭೆ-ಯುಳ್ಳದ್ದೂ ಆದ ಅಥರ್ವಮಂತ್ರಗಳ ಗುಂಪು ಉದಯಿಸಿತು.

೬. ಸುಖ–ಸತ್ತ್ವ–ತಮಸ್ಸುಗಳ ಮಿಶ್ರಣವುಳ್ಳದ್ದೂ ಸೌಮ್ಯ–ಅಸೌಮ್ಯ ಸ್ವರೂಪಗಳಿಂದ ಕೂಡಿರುವುದೂ ಆದ ಅಥರ್ವಮಂತ್ರಗಳ ಗುಂಪು ಆ ಬ್ರಹ್ಮ-ದೇವನ ಉತ್ತರಮುಖದಿಂದ ಪ್ರಕಾಶಗೊಂಡಿತು.

೭. ಮುನಿಯೇ! ಋಙ್ಮಂತ್ರಗಳು ರಜೋಗುಣದಿಂದ ಕೂಡಿವೆ. ಯಜುರ್ಮಂತ್ರಗಳಲ್ಲಿ ಸತ್ತ್ವಗುಣವಿರುವುದು. ಸಾಮಮಂತ್ರಗಳು ತಮೋಗುಣ-ವುಳ್ಳದ್ದಾಗಿವೆ. ಮತ್ತು ಅಥರ್ವಮಂತ್ರಗಳಲ್ಲಿ ಸತ್ತ್ವ–ತಮೋಗುಣಗಳು ಮಿಶ್ರಣವಾಗಿವೆ.

ಏತಾನಿ ಜ್ವಲಮಾನಾನಿ ತೇಜಸಾಪ್ರತಿಮಾನಿ ವೈ ।
ಪೃಥಕ್ಪೃಥಗವಸ್ಥಾನಭಾಞ್ಜಿ ಪೂರ್ವಮಿವಾಭವನ್ ॥೮॥

ತತಸ್ತದಾದ್ಯಂ ಯತ್ತೇಜ ಓಮಿತ್ಯುಕ್ತ್ಯಾಭಿಶಬ್ದ್ಯತೇ ।
ತಸ್ಯ ಸ್ವಭಾವಾದ್ಯತ್ತೇಜಸ್ತತ್ಸಮಾವೃತ್ಯ ಸಂಸ್ಥಿತಮ್ ॥೯॥

ಯಥಾ ಯಜುರ್ಮಯಂ ತೇಜಸ್ತದ್ವತ್ಸಾಮ್ನಾಂ ಮಹಾಮುನೇ ।
ಏಕತ್ವಮುಪಯಾತಾನಿ ಪರೇ ತೇಜಸಿ ಸಂಶ್ರಯೇ ॥೧೦॥

ಶಾನ್ತಿಕಂ ಪೌಷ್ಟಿಕಂ ಚೈವ ತಥಾ ಚೈವಾಭಿಚಾರಿಕಮ್ ।
ಋಗಾದಿಷು ಲಯಂ ಬ್ರಹ್ಮಂಸ್ತ್ರಿತಯಂ ತ್ರಿಷ್ವಥಾಗಮತ್ ॥೧೧॥

---

೮. ನಿರುಪಮವಾದ ತೇಜಃಪುಂಜದಿಂದ ಜ್ವಲಿಸುವಂತೆ ಇದ್ದ ಈ ವೇದಮಂತ್ರಗಳ ಗುಂಪು ಬೇರೆ ಬೇರೆಯಾಗಿ ಸ್ಥಿತಿಯನ್ನು ಹೊಂದಿ ಎಲ್ಲಕ್ಕೂ ಪೂರ್ವದಲ್ಲಿ ಪ್ರಕಾಶವನ್ನು ಹೊಂದಿತು.

೯. ತರುವಾಯ “ ಓಂ ” ಎಂಬ ಶಬ್ದದಿಂದ ಕರೆಯಲ್ಪಡುವ, ಎಲ್ಲಕ್ಕೂ ಆದಿಯಾದ ಯಾವ ತೇಜಸ್ಸು ಆವಿರ್ಭವಿಸಿತೋ ಅದು ತನ್ನ ಸ್ವಭಾವದಿಂದ ಜನಿಸಿದ ಮಂತ್ರಮಯತೇಜಸ್ಸನ್ನು ವ್ಯಾಪಿಸಿಕೊಂಡಿತು.

೧೦. ಮಹಾಮುನಿಯೇ! ಹಾಗೆ ಆದಿತೇಜಸ್ಸಿನಲ್ಲಿ ಋಙ್ಮಂತ್ರಗಳ ತೇಜಸ್ಸು ಮತ್ತು ಯಜುರ್ಮಂತ್ರತೇಜಸ್ಸು ಸೇರಿಕೊಂಡಂತೆ ಸಾಮಮಂತ್ರಗಳ ತೇಜಸ್ಸು ಐಕ್ಯವನ್ನು ಹೊಂದಿತು. ಎಲ್ಲ ತೇಜಸ್ಸುಗಳು ಆದಿ ತೇಜಸ್ಸಿನಲ್ಲಿ ಸೇರಿಕೊಂಡುವು.

೧೧. ಬ್ರಹ್ಮರ್ಷಿಯೇ! ಶಾಂತಿಕರ್ಮ, ಪುಷ್ಟಿಕರ್ಮ ಮತ್ತು ಅಭಿಚಾರಕರ್ಮಗಳಿಗೆ ಸಂಬಂಧಿಸಿದ ಮೂರು ಅಂಶಗಳು ಕ್ರಮವಾಗಿ ಋಕ್, ಯಜುಃ, ಸಾಮಮಂತ್ರಗಳಲ್ಲಿ ಲಯಹೊಂದಿದುವು.

ತತೋ ವಿಶ್ವಮಿದಂ ಸದ್ಯಸ್ತಮೋನಾಶಾತ್ಸುನಿರ್ಮಲಮ್ ।
ವಿಭಾವನೀಯಂ ವಿಪ್ರರ್ಷೇ ತಿರ್ಯಗೂರ್ಧ್ವಮಧಸ್ತಥಾ ॥೧೨॥

ತತಸ್ತನ್ಮಣ್ಡಲೀಭೂತಂ ಛಾನ್ದಸಂ ತೇಜ ಉತ್ತಮಮ್ ।
ಪರೇಣ ತೇಜಸಾ ಬ್ರಹ್ಮನ್ನೇಕತ್ವಮುಪಗಮ್ಯ ತತ್ ॥೧೩॥

ಆದಿತ್ಯಸಞ್ಜ್ಞಾಮಗಮದಾದಾವೇವ ಯತೋಽಭವತ್ ।
ವಿಶ್ವಸ್ಯಾಸ್ಯ ಮಹಾಭಾಗ ಕಾರಣಂ ಚಾವ್ಯಯಾತ್ಮಕಮ್ ॥೧೪॥

ಪ್ರಾತರ್ಮಧ್ಯನ್ದಿನೇ ಚೈವ ತಥಾ ಚೈವಾಪರಾಹ್ಣಿಕೇ ।
ತ್ರಯೀ ತಪತಿ ಸಾ ಕಾಲೇ ಋಗ್ಯಜುಸ್ಸಾಮಸಞ್ಜ್ಞಿತಾ ॥೧೫॥

ಋಚಸ್ತಪನ್ತಿ ಪೂರ್ವಾಹ್ಣೇ ಮಧ್ಯಾಹ್ನೇ ಚ ಯಜೂಂಷಿ ವೈ ।
ಸಾಮಾನಿ ಚಾಪರಾಹ್ಣೇ ವೈ ತಪನ್ತಿ ಮುನಿಸತ್ತಮ ॥೧೬॥

---

೧೨. ಬ್ರಹ್ಮರ್ಷಿಯಾದ ಕ್ರೌಷ್ಟುಕಿಮುನಿಯೇ! ತರುವಾಯ ಕತ್ತಲೆಯು ನಾಶವಾದುದರಿಂದ ನಿರ್ಮಲವಾಗಿ ಹೊಳೆಯುವ ಈ ವಿಶ್ವವು ಮೇಲೆ-ಕೆಳಗೆ-ಸುತ್ತಲೂ-ಎಲ್ಲೆಡೆಗಳಲ್ಲಿಯೂ ಚನ್ನಾಗಿ ಪ್ರಕಾಶಮಯವಾಯಿತು.

೧೩. ಬ್ರಹ್ಮರ್ಷಿಯಾದ ಕ್ರೌಷ್ಟುಕಿಮಹರ್ಷಿಯೇ! ತರುವಾಯ ಮಂಡಲಾಕಾರವನ್ನು ಹೊಂದಿದ ಆ ಛಂದೋಮಯವಾದ ತೇಜಸ್ಸು ಸರ್ವೋತ್ತಮವಾದ ತೇಜಸ್ಸಿನೊಡನೆ ಐಕ್ಯವನ್ನು ಹೊಂದಿತು.

೧೪. ಅಂತಹ ಸಮಷ್ಟಿರೂಪವಾದ ತೇಜಸ್ಸು ಎಲ್ಲಕ್ಕೂ ಆದಿಯಲ್ಲಿ ಜನಿಸಿದುದರಿಂದ ಆದಿತ್ಯ ಎಂಬ ನಾಮಾಂಕನವನ್ನು ಹೊಂದಿತು. ಮತ್ತು ಆ ತೇಜಸ್ಸು ವ್ಯಯವಿಲ್ಲದಿರುವುದೂ ಈ ವಿಶ್ವಕ್ಕೆ ಕಾರಣವೂ ಆಯಿತು.

೧೫. ತೇಜೋಮಯವಾದ ಆ ಮಂಡಲದಲ್ಲಿ ಸೇರಿರುವ ಋಗ್ವೇದ-ಯಜುರ್ವೇದ-ಸಾಮವೇದಗಳೆಂಬ ತ್ರಯೀಮಯವಾದ ತೇಜಸ್ಸು ಕ್ರಮವಾಗಿ ಪ್ರಾತಃಕಾಲ-ಮಧ್ಯಾಹ್ನಕಾಲ, ಅಪರಾಹ್ಣಕಾಲಗಳಲ್ಲಿ ತಪಿಸುತ್ತಿರುವುದು.

೧೬. ಎಲೈ ಮುನಿಶ್ರೇಷ್ಠನೇ! ಪ್ರಾತಃಕಾಲದಲ್ಲಿ ಋಙ್ಮಂತ್ರತೇಜಸ್ಸು ತಪಿಸುವುದು. ಮಧ್ಯಾಹ್ನದಲ್ಲಿ ಯಜುರ್ಮಂತ್ರ ತೇಜಸ್ಸು ತಪಿಸುವುದು. ಹಾಗು ಅಪರಾಹ್ಣಸಮಯದಲ್ಲಿ ಸಾಮಮಂತ್ರ ತೇಜಸ್ಸು ತಪಿಸುವುದು.

ಶಾನ್ತಿಕಮೃಕ್ಷು ಪೂರ್ವಾಹ್ಣೇ ಯಜುಃಷ್ವೇವ ಚ ಪೌಷ್ಟಿಕಮ್ ।
ವಿನ್ಯಸ್ತಂ ಸಾಮ್ನಿ ಸಾಯಾಹ್ನೇ ಹ್ಯಾಭಿಚಾರಿಕಮನ್ತತಃ ॥೧೭॥

ಮಧ್ಯನ್ದಿನೇಽಪರಾಹ್ಣೇ ಚ ಸಮೇ ಚೈವಾಭಿಚಾರಿಕಮ್ ।
ಅಪರಾಹ್ಣೇ ಪಿತೄಣಾಂ ತು ಸಾಮ್ನಾ ಕಾರ್ಯಾಣಿ ತಾನಿ ವೈ ॥೧೮॥

ವಿಸೃಷ್ಟೌ ಋಙ್ಮಯೋ ಬ್ರಹ್ಮಾ ಸ್ಥಿತೌ ವಿಷ್ಣುರ್ಯಜುರ್ಮಯಃ ।
ರುದ್ರಃ ಸಾಮಮಯೋಽನ್ತೇ ಚ ತಸ್ಮಾತ್ತಸ್ಯಾಶುಚಿರ್ಧ್ವನಿಃ ॥೧೯॥

ತದೇವಂ ಭಗವಾನ್ ಭಾಸ್ವಾನ್ವೇದಾತ್ಮಾ ವೇದಸಂಸ್ಥಿತಃ ।
ವೇದವಿದ್ಯಾತ್ಮಕಶ್ಚೈವ ಪರಃ ಪುರುಷ ಉಚ್ಯತೇ ॥೨೦॥

---

೧೭. ಪೂರ್ವಾಹ್ಣದಲ್ಲಿ ಜಪಿಸುವ ಋಙ್ಮಂತ್ರಗಳಲ್ಲಿ ಶಾಂತಿಕಕರ್ಮವೂ, ಮಧ್ಯಾಹ್ನದಲ್ಲಿ ಜಪಿಸುವ ಯಜುರ್ಮಂತ್ರಗಳಲ್ಲಿ ಪೌಷ್ಟಿಕಕರ್ಮವೂ ಮತ್ತು ಅಪರಾಹ್ಣಸಮಯದಲ್ಲಿ ಜಪಿಸುವ ಸಾಮಮಂತ್ರಗಳಲ್ಲಿ ಅಭಿಚಾರಕರ್ಮವೂ ಅಡಗಿರುವುದು.

೧೮. ಮಧ್ಯಾಹ್ನ ಸಮಯ, ಅಪರಾಹ್ಣಕಾಲ ಮತ್ತು ಇವುಗಳ ಅಂತರಗಳಲ್ಲಿ ಮಾಡಬೇಕಾದ ಅಭಿಚಾರ ಕರ್ಮ ಹಾಗು ಅಪರಾಹ್ಣ ಸಮಯದಲ್ಲಿ ಮಾಡಬೇಕಾದ ಪಿತೃಕಾರ್ಯಗಳು ಸಾಮ ಮಂತ್ರಗಳಿಂದ ಮಾಡುವುದು ಶ್ಲಾಘ್ಯವಾಗಿವೆ.

೧೯. ಜಗತ್ತಿನ ಸೃಷ್ಟಿಕರ್ಮದಲ್ಲಿ ಅಧಿಕಾರಿಯಾಗಿರುವ ಬ್ರಹ್ಮದೇವನು ಋಗ್ವೇದ ಸ್ವರೂಪನಾಗಿರುವನು. ಸ್ಥಿತಿಕರ್ಮದಲ್ಲಿ ನಿಯಾಮಕನಾದ ವಿಷ್ಣುವು ಯಜುರ್ವೇದ ರೂಪನಾಗಿರುವನು. ಮತ್ತು ಪ್ರಲಯವನ್ನು ನೆರವೇರಿಸುವ ರುದ್ರನು ಸಾಮಮಂತ್ರಮಯನಾಗಿರುವನು. ಆದುದರಿಂದ ಸಾಮವೇದ ಪಠನದ ಧ್ವನಿಯು ಅಶುಚಿಯೆನಿಸಿದೆ.

೨೦. ಹೀಗೆ ಹಿಂದೆ ಹೇಳಿರುವ ಮಹಿಮೆಯುಳ್ಳವನೂ, ಅಖಂಡೈಶ್ವರ್ಯವಂತನೂ ಆದ ಸೂರ್ಯದೇವನು ವೇದಸ್ವರೂಪನೂ ಮತ್ತು ವೇದಗಳಲ್ಲಿ ನೆಲೆಸಿದವನೂ ಆಗಿರುವನು. ಮತ್ತು ವೇದವಿದ್ಯಾ ಸ್ವರೂಪನಾದ ಪರಮ ಪುರುಷನೂ ಆಗಿರುವನು.

ಸರ್ಗಸ್ಥಿತ್ಯನ್ತಹೇತುತ್ವೇ ರಜಃಸತ್ತ್ವಾದಿಕಾನ್ ಗುಣಾನ್ ।
ಆಶ್ರಿತ್ಯ ಬ್ರಹ್ಮವಿಷ್ಣ್ವಾದಿಸಂಜ್ಞಾಮಭ್ಯೇತಿ ಶಾಶ್ವತಃ ॥೨೧॥

ದೇವ್ಯೈಃ ಸದೇಡ್ಯಃ ಸ ತು ದೇವಮೂರ್ತಿ-
ರಮೂರ್ತಿರಾದ್ಯೋಽಖಿಲಮರ್ತ್ಯಮೂರ್ತಿಃ ।
ವಿಶ್ವಾಶ್ರಯಂ ಜ್ಯೋತಿರವೇದ್ಯಧರ್ಮಾ
ವೇದಾನ್ತಗಮ್ಯಃ ಪರಮಃ ಪರೇಶಃ ॥೨೨॥

ಇತಿ ಶ್ರೀ ಮಾರ್ಕಣ್ಡೇಯಮಹಾಪುರಾಣೇ ಮಾರ್ತಣ್ಡಮಾಹಾತ್ಮ್ಯೇ
ಏಕೋನಶತತಮೋಽಧ್ಯಾಯಃ

---

೨೧. ಪ್ರಪಂಚದ ಸೃಷ್ಟಿ-ಸ್ಥಿತಿ-ಲಯಗಳಿಗೆ ಕಾರಣನಾದ ಅನಾದಿ ಪುರುಷನು ರಜ-ತಮಸ್ಸು-ಸತ್ತ್ವ ಗುಣಗಳನ್ನು ಆಶ್ರಯಿಸಿ ಆಯಾಯ ವ್ಯಾಪಾರ-ಗಳಲ್ಲಿ ಬ್ರಹ್ಮ-ವಿಷ್ಣು-ಶಿವ ಎಂಬ ತ್ರಿಮೂರ್ತಿಗಳ ಸಂಜ್ಞೆಯನ್ನು ಹೊಂದುವನು.

೨೨. ಮತ್ತು ಆ ಸೂರ್ಯದೇವನು ದೇವತೆಗಳಿಂದ ಯಾವಾಗಲೂ ಸ್ತುತಿಸಲ್ಪಡುವವನೂ, ವೇದಮೂರ್ತಿಯೂ, ತಾತ್ತ್ವಿಕಮೂರ್ತಿಶೂನ್ಯನೂ, ಸರ್ವವಸ್ತುಗಳಿಗೆ ಆದಿಕಾರಣನೂ, ಸಕಲ ಮರ್ತ್ಯರೂಪಿಯೂ, ವಿಶ್ವಕ್ಕೆ ಆಶ್ರಯನೂ, ಜ್ಯೋತಿರೂಪನೂ, ತಿಳಿಯಲಾಗದ ಧರ್ಮವುಳ್ಳವನೂ, ವೇದಾಂತ-ಗಳಿಂದ ಅರಿಯಲು ಅರ್ಹನೂ ಮತ್ತು ಪರಮಪುರುಷನೂ ಆಗಿರುವನು.

ಮಾರ್ಕಂಡೇಯ ಮಹಾಪುರಾಣದಲ್ಲಿ ತೊಂಭತ್ತೊಂಭತ್ತನೆಯ ಅಧ್ಯಾಯವು
ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಶತತಮೋಽಧ್ಯಾಯಃ

(ಆದಿತ್ಯಸ್ತವಃ)

ಮಾರ್ಕಣ್ಡೇಯ ಉವಾಚ :—

ತಸ್ಯ ಸನ್ತಾಪ್ಯಮಾನೇ ತು ತೇಜಸೋರ್ಧ್ವಮಧಸ್ತಥಾ ।
ಸಿಸೃಕ್ಷುಶ್ಚಿನ್ತಯಾಮಾಸ ಪದ್ಮಯೋನಿಃ ಪಿತಾಮಹಃ ||೧||

ಸೃಷ್ಟಿಃ ಕೃತಾಪಿ ಮೇ ನಾಶಂ ಪ್ರಯಾಸ್ಯತ್ಯಭಿತೇಜಸಾ ।
ಭಾಸ್ವತಃ ಸೃಷ್ಟಿಸಂಹಾರಸ್ಥಿತಿಹೇತೋರ್ಮಹಾತ್ಮನಃ ||೨||

ಒಂದುನೂರನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಇಂತೆಂದನು :—

೧. ಅಂತಹ ಸೂರ್ಯದೇವನ ತೇಜಸ್ಸಿನಿಂದ ಜಗತ್ತಿನ ಮೇಲುಭಾಗ-ಕೆಳಭಾಗಗಳೆಲ್ಲವೂ ತಪಿಸಲ್ಪಡುತ್ತಿರಲು ಶ್ರೀಮನ್ನಾರಾಯಣನ ನಾಭಿಕಮಲದಲ್ಲಿ ಜನಿಸಿದ ಬ್ರಹ್ಮದೇವನು ಸೃಷ್ಟಿಮಾಡಲು ಉಪಕ್ರಮಿಸುವವನಾಗಿ ಈ ರೀತಿಯಾಗಿ ಚಿಂತಿಸಿದನು.

೨. ಪ್ರಪಂಚದ ಸೃಷ್ಟಿ-ಸ್ಥಿತಿ-ಸಂಹಾರಗಳಲ್ಲಿ ಕಾರಣನೂ, ಮತ್ತು ಮಹಾತ್ಮನೂ ಆದ ಸೂರ್ಯದೇವನ ಅಗಾಧತೇಜಸ್ಸಿನಿಂದ ನಾನು ಮಾಡುವ ಸಕಲ ಸೃಷ್ಟಿಯೂ ನಾಶವಾಗಿಹೋಗುವುದು.

ಅಸ್ಮಾತ್ಪ್ರಾಣಾಃ ಪ್ರಾಣಿನಃ ಸರ್ವ ಆಪಃ ಶುಷ್ಯನ್ತಿ ತೇಜಸಾ ।
ನ ಚಾಪ್ಯಸ್ಯಾ ವಿನಾ ಸೃಷ್ಟಿರ್ವಿಶ್ವಸ್ಯಾಸ್ಯ ಭವಿಷ್ಯತಿ ॥೩॥

ಇತಿ ಸಞ್ಚಿನ್ತ್ಯ ಭಗವಾನ್ ಸ್ತೋತ್ರಂ ಭಗವತೋ ರವೇಃ ।
ಚಕಾರ ತಸ್ಯ ಯೋ ಭೂತ್ವಾ ಬ್ರಹ್ಮಾ ಲೋಕಪಿತಾಮಹಃ ॥೪॥

ಬ್ರಹ್ಮೋವಾಚ :—

ನಮಸ್ಯೇ ಯನ್ಮಯಂ ಸರ್ವಮೇತತ್ಸರ್ವಮಯಶ್ಚ ಯಃ ।
ವಿಶ್ವಮೂರ್ತಿಃ ಪರಂ ಜ್ಯೋತಿರ್ಯತ್ತದ್ಧ್ಯಾಯನ್ತಿ ಯೋಗಿನಃ ॥೫॥

ಯ ಋಙ್ಮಯೋ ಯೋ ಯಜುಷಾಂ ನಿಧಾನಂ
ಸಾಮ್ನಾಂ ಚ ಯೋ ಯೋನಿರಚಿನ್ತ್ಯಶಕ್ತಿಃ ।
ತ್ರಯೀಮಯಃ ಸ್ಥೂಲತಯಾರ್ಧಮಾತ್ರಾ-
ಪರಸ್ವರೂಪೋ ಗುಣಪಾರಯೋಗ್ಯಃ ॥೬॥

---

೩. ಸಮಸ್ತ ಪ್ರಾಣಿಗಳು ಜಲಮಯವಾದ ಪ್ರಾಣವುಳ್ಳವುಗಳಾಗಿವೆ. ಸೂರ್ಯದೇವನ ತೇಜಸ್ಸಿನಿಂದ ನೀರೆಲ್ಲವೂ ಬಣಗಿಹೋಗುವುದು. ಹೀಗಿರಲು ನೀರಿಲ್ಲದೆ ಈ ವಿಶ್ವದ ಸೃಷ್ಟಿಯು ಮುಂದುವರಿಯುವುದಿಲ್ಲ.

೪. ಹೀಗೆಂದು ಚಿಂತಿಸಿ ಪೂಜ್ಯನೂ, ಲೋಕಪಿತಾಮಹನೆನಿಸಿದವನೂ ಆದ ಬ್ರಹ್ಮದೇವನು ತನ್ಮಯನಾಗಿ ಅಖಂಡೈಶ್ವರ್ಯಸಂಪನ್ನನಾದ ಸೂರ್ಯದೇವನನ್ನು ಸ್ತುತಿಮಾಡಿದನು.

ಬ್ರಹ್ಮದೇವನು ಹೀಗೆ ಸ್ತುತಿಸಿದನು :—

೫. ಯೋಗಿಗಳು ಯಾವ ಜ್ಯೋತಿಯನ್ನು ಧ್ಯಾನಿಸುವರೋ, ಈ ವಿಶ್ವವೆಲ್ಲವೂ ಯಾವ ಜ್ಯೋತಿಯಿಂದ ಪೂರ್ಣವೋ, ಯಾವ ಜ್ಯೋತಿಯು ಸರ್ವಾಕಾರವಾಗಿದೆಯೋ ಮತ್ತು ಯಾವ ಜ್ಯೋತಿಯು ವಿಶ್ವಾಕಾರವಾಗಿರುವುದೋ ಅಂತಹ ಪರಂಜ್ಯೋತಿಯನ್ನು ನಾನು ವಂದಿಸುವೆನು.

೬. ಯಾವ ಸೂರ್ಯಪರಮಾತ್ಮನು ಋಗ್ವೇದಸ್ವರೂಪನೂ, ಯಜುರ್ಮಂತ್ರಗಳಿಗೆ ನಿಧಿಸ್ವರೂಪನೂ, ಸಾಮಮಂತ್ರಗಳಿಗೆ ಕಾರಣನೂ, ಅಚಿಂತ್ಯವಾದ ಶಕ್ತಿಯುಳ್ಳವನೂ, ಸ್ಥೂಲರೂಪದಿಂದ ವೇದತ್ರಯಸ್ವರೂಪವುಳ್ಳವನೂ,

ತ್ವಾಂ ಸರ್ವಹೇತುಂ ಪರಮಂ ಚ ವೇದ್ಯ
ಮಾದ್ಯಂ ಪರಂ ಜ್ಯೋತಿರವೇದ್ಯರೂಪಮ್ ।
ಸ್ಥೂಲಂ ಚ ದೇವಾತ್ಮತಯಾ ನಮಸ್ಯೇ
ಭಾಸ್ವನ್ತಮಾದ್ಯಂ ಪರಮಂ ಪರೇಭ್ಯಃ ॥೭॥

ಸೃಷ್ಟಿಂ ಕರೋಮಿ ಯದಹಂ ತವ ಶಕ್ತಿರಾದ್ಯಾ
ತತ್ಪ್ರೇರಿತೋ ಜಲಮಹೀಪವನಾಗ್ನಿರೂಪಾಮ್ ।
ತದ್ದೇವತಾದಿವಿಷಯಾಂ ಪ್ರಣವಾದ್ಯಶೇಷಾಂ
ನಾತ್ಮೇಚ್ಛಯಾ ಸ್ಥಿತಿಲಯಾವಪಿ ತದ್ವದೇವ ॥೮॥

ವಹ್ನಿಸ್ತ್ವಮೇವ ಜಲಶೋಷಣತಃ ಪೃಥಿವ್ಯಾಃ
ಸೃಷ್ಟಿಂ ಕರೋಷಿ ಜಗತಾಂ ಚ ತಥಾದ್ಯಪಾಕಮ್ ।

ಸೂಕ್ಷ್ಮರೂಪದಿಂದ ಅರ್ಧಮಾತ್ರೆಯನ್ನು ಮೀರಿದ ರೂಪವುಳ್ಳವನೂ ಮತ್ತು ಗುಣಗಳನ್ನು ಮೀರಿದ ಉತ್ತಮಸ್ವರೂಪವುಳ್ಳವನೂ ಆಗಿರುವನೋ ಅಂತಹ ಸೂರ್ಯದೇವನನ್ನು ವಂದಿಸುವೆನು.

೭. ಮತ್ತು ಸಮಸ್ತವಸ್ತುಗಳಿಗೆ ಕಾರಣನೂ, ಉತ್ತಮವಾದ ವೇದ್ಯ-ವಸ್ತುಸ್ವರೂಪನೂ, ಆದಿಯಾದವನೂ, ಪರಂಜ್ಯೋತಿರೂಪನೂ, ತಿಳಿಯಲಾಗದ ಸ್ವರೂಪವುಳ್ಳವನೂ, ದೇವಾತ್ಮರೂಪದಿಂದ ಸ್ಥೂಲಾಕಾರವುಳ್ಳವನೂ, ಸರ್ವ-ವಸ್ತುಗಳಿಗೆ ಆದಿಸ್ವರೂಪನೂ ಮತ್ತು ಉತ್ತಮವಸ್ತುಗಳಲ್ಲಿ ಉತ್ತಮನಾದವನೂ ಆದ ಸೂರ್ಯದೇವನನ್ನು ನಮಸ್ಕರಿಸುವೆನು.

೮. ದೇವನೇ! ನಾನು ಪೃಥಿವೀ-ಜಲ ತೇಜಸ್ಸು-ವಾಯು-ಆಕಾಶವೆಂಬ ಪಂಚಭೂತಗಳ ಸ್ವರೂಪವೂ, ಆಯಾಯ ದೇವತೆಗಳ ವಿಷಯವಾದುದೂ ಮತ್ತು ಪ್ರಣವ ಮುಂತಾದ ಅಶೇಷವಸ್ತುಗರ್ಭಿತವೂ ಆದ ಸೃಷ್ಟಿಯನ್ನು ಮಾಡುತ್ತಿರುವೆನು. ಆ ಸೃಷ್ಟಿವ್ಯಾಪಾರವು ನನ್ನ ಇಚ್ಛೆಯಿಂದ ನಡೆಯುವುದಲ್ಲ. ನಿನ್ನ ಆದಿಶಕ್ತಿಯಿಂದ ಪ್ರೇರಿತನಾಗಿ ಸೃಷ್ಟಿಯಲ್ಲಿ ತೊಡಗಿರುವೆನು. ಹೀಗೆಯೆ ಸ್ಥಿತಿ-ಪ್ರಲಯಗಳು ನಿನ್ನ ಶಕ್ತಿಪ್ರೇರಣೆಯಿಂದಲೇ ನಡೆಯುವುವು.

೯. ಪೂಜ್ಯನಾದ ಸೂರ್ಯದೇವನೆ! ನೀನು ಜಲವನ್ನು ಬತ್ತಿಸಿ ಗಟ್ಟಿಯಾದ ಪೃಥಿವಿಯ ಸೃಷ್ಟಿಯನ್ನು ಮಾಡುವ ಅಗ್ನಿಯಾಗಿದ್ದೀಯೆ. ಹಾಗು

ವ್ಯಾಪೀ ತ್ವಮೇವ ಭಗವನ್ಗಗನಸ್ವರೂಪ
ತ್ವಂ ಪಞ್ಚಧಾ ಜಗದಿದಂ ಪರಿಪಾಸಿ ವಿಶ್ವಮ್ ॥೯॥

ಯಜ್ಞೈರ್ಯಜನ್ತಿ ಪರಮಾತ್ಮವಿದೋ ಭವನ್ತಂ
ವಿಷ್ಣುಸ್ವರೂಪಮಖಿಲೇಷ್ಟಿಮಯಂ ವಿವಸ್ವನ್ ।
ಧ್ಯಾಯನ್ತಿ ಚಾಪಿ ಯತಯೋ ನಿಯತಾತ್ಮಚಿತ್ತಾಃ
ಸರ್ವೇಶ್ವರಂ ಪರಮಮಾತ್ಮವಿಮುಕ್ತಿಕಾಮಾಃ ॥೧೦॥

ನಮಸ್ತೇ ದೇವರೂಪಾಯ ಯಜ್ಞರೂಪಾಯ ತೇ ನಮಃ ।
ಪರಬ್ರಹ್ಮಸ್ವರೂಪಾಯ ಚಿನ್ತ್ಯಮಾನಾಯ ಯೋಗಿಭಿಃ ॥೧೧॥

ಉಪಸಂಹರ ತೇಜೋ ಯತ್ತೇಜಸಃ ಸಂಹತಿಸ್ತವ ।
ಸೃಷ್ಟೇರ್ವಿಘಾತಾಯ ವಿಭೋ ಸೃಷ್ಟೌ ಚಾಹಂ ಸಮುದ್ಯತಃ ॥೧೨॥

ಜಗತ್ತಿನ ಪಾಕವನ್ನು ಮಾಡುತ್ತೀಯೆ. ಮತ್ತು ವ್ಯಾಪಕತ್ವಗುಣದಿಂದ ನೀನು ಆಕಾಶಸ್ವರೂಪನಾಗಿದ್ದೀಯೆ. ಹೀಗೆ ಪೃಥಿವಿ ಮುಂತಾದ ಪಂಚಭೂತಗಳ ರೂಪದಿಂದ ಸಮಸ್ತ ವಿಶ್ವವನ್ನು ರಕ್ಷಿಸುತ್ತಿದ್ದೀಯೆ.

೧೦. ಸೂರ್ಯದೇವನೆ ! ಪರಮಾತ್ಮರೂಪಿಯಾದ ನಿನ್ನನ್ನು ಅರಿತವರು ವಿಷ್ಣುಸ್ವರೂಪನೂ ಸಮಸ್ತ ಯಜ್ಞಸ್ವರೂಪನೂ ಆದ ನಿನ್ನನ್ನು ಉದ್ದೇಶಿಸಿ ಯಜ್ಞಕರ್ಮಗಳಿಂದ ಆರಾಧಿಸುವರು ಮತ್ತು ಮುಕ್ತಿಯನ್ನು ಅಪೇಕ್ಷಿಸುವ ಯತಿಗಳು ನಿಗ್ರಹಿಸಿದ ತನು-ಮನಗಳುಳ್ಳವರಾಗಿ ಸರ್ವೇಶ್ವರನೂ, ಪರಮಾತ್ಮ-ಸ್ವರೂಪನೂ ಆದ ನಿನ್ನನ್ನು ಧ್ಯಾನಮಾಡುವರು.

೧೧. ಸಮಸ್ತ ದೇವತಾಸ್ವರೂಪನೂ, ಯಜ್ಞಾದಿಕರ್ಮರೂಪಿಯೂ, ಪರಬ್ರಹ್ಮಸ್ವರೂಪನೂ ಮತ್ತು ಯೋಗಿಗಳಿಂದ ಧ್ಯಾನಿಸಲ್ಪಡುವವನೂ ಆದ ಸೂರ್ಯದೇವನಿಗೆ ಮತ್ತೆ ಮತ್ತೆ ನಮಸ್ಕರಿಸುವೆವು.

೧೨. ಸರ್ವೇಶ್ವರನಾದ ಸೂರ್ಯದೇವನೇ ! ನಾನು ಸೃಷ್ಟಿವ್ಯಾಪಾರ-ದಲ್ಲಿ ತೊಡಗಿರುವೆನು. ನಿನ್ನ ಉಗ್ರವಾದ ತೇಜಃಪುಂಜವು ಸೃಷ್ಟಿಯನ್ನು ನಾಶಮಾಡುವುದಾಗಿದೆ. ಅಂತಹ ನಿನ್ನ ತೇಜಸ್ಸನ್ನು ಸಂಕೋಚಮಾಡು.

ಮಾರ್ಕಣ್ಡೇಯ ಉವಾಚ :—

ಇತ್ಯೇವಂ ಸಂಸ್ತುತೋ ಭಾಸ್ವಾನ್ ಬ್ರಹ್ಮಣಾ ಸರ್ಗಕರ್ತೃಣಾ ।
ಉಪಸಂಹೃತವಾಂಸ್ತೇಜಃ ಪರಂ ಸ್ವಲ್ಪಮಧಾರಯತ್ ॥೧೩॥

ಚಕಾರ ಚ ತತಃ ಸೃಷ್ಟಿಂ ಜಗತಃ ಪದ್ಮಸಮ್ಭವಃ ।
ತಥಾ ತೇಷು ಮಹಾಭಾಗಃ ಪೂರ್ವಕಲ್ಪಾನ್ತರೇಷು ವೈ ॥೧೪॥

ದೇವಾಸುರಾದೀನ್ಮರ್ತ್ಯಾಂಶ್ಚ ಪಶ್ವಾದೀನ್ ವೃಕ್ಷವೀರುಧಃ ।
ಸಸರ್ಜ ಪೂರ್ವವದ್ಬ್ರಹ್ಮಾ ನರಕಾಂಶ್ಚ ಮಹಾಮುನೇ ॥೧೫॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಆದಿತ್ಯಸ್ತವೋ ನಾಮ ಶತತಮೋಽಧ್ಯಾಯಃ

ಮಾರ್ಕಂಡೇಯ ಮುನಿಯು ಇಂತೆಂದನು :—

೧೩. ಪ್ರಪಂಚಸೃಷ್ಟಿಯನ್ನು ರಚಿಸುವ ಬ್ರಹ್ಮದೇವನಿಂದ ಈ ರೀತಿಯಾಗಿ ಸ್ತುತಿಸಲ್ಪಟ್ಟ ಸೂರ್ಯಪರಮಾತ್ಮನು ತನ್ನ ಅತ್ಯಧಿಕವಾದ ತೇಜೋಭಾಗವನ್ನು ಸಂಕೋಚಪಡಿಸಿಕೊಂಡು ಅಲ್ಪಮಾತ್ರ ತೇಜಸ್ಸನ್ನು ಧರಿಸಿಕೊಂಡನು.

೧೪. ಮಹಾಮಹಿಮಾಶಾಲಿಯೂ ನಾಭಿಕಮಲದಲ್ಲಿ ಜನಿಸಿದವನೂ ಆದ ಬ್ರಹ್ಮದೇವನು ಸೂರ್ಯನ ತೇಜಸ್ಸು ಸಂಕುಚಿತವಾದ ಮೇಲೆ ಪೂರ್ವಕಲ್ಪಾಂತರಗಳಲ್ಲಿ ಜಗತ್ತಿನ ಸೃಷ್ಟಿಯನ್ನು ನಿರ್ವಹಿಸಿದನು.

೧೫. ಕ್ರೌಷ್ಟುಕಿ ಮಹಾಮುನಿಯೇ! ಹಾಗೆ ಬ್ರಹ್ಮದೇವನು ಹಿಂದಿನ ಕಲ್ಪದಂತೆ ಮುಂದಿನ ಕಲ್ಪಗಳಲ್ಲಿ ದೇವತೆ-ಅಸುರ-ಮರ್ತ್ಯ-ಪಶ್ವಾದಿ-ವೃಕ್ಷ-ಲತೆ ಮತ್ತು ನರಕಗಳೆಂಬ ಪಾಪಭೋಗಸ್ಥಾನ—ಇವುಗಳನ್ನು ಸೃಷ್ಟಿಸಿದನು.

ಮಾರ್ಕಂಡೇಯ ಮಹಾಪುರಾಣದಲ್ಲಿ ಒಂದುನೂರನೆಯ
ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಏಕಾಧಿಕಶತತಮೋಽಧ್ಯಾಯಃ

(ಅದಿತಿಕೃತದಿವಾಕರಸ್ತುತಿಃ)

ಮಾರ್ಕಣ್ಡೇಯ ಉವಾಚ :—

ಸೃಷ್ಟ್ವಾ ಜಗದಿದಂ ಬ್ರಹ್ಮಾ ಪ್ರವಿಭಾಗಮಥಾಕರೋತ್ ।
ವರ್ಣಾಶ್ರಮಸಮುದ್ರಾದಿದ್ವೀಪಾನಾಂ ಪೂರ್ವವದ್ಯಥಾ ॥೧॥

ದೇವದೈತ್ಯೋರಗಾದೀನಾಂ ರೂಪಸ್ಥಾನಾನಿ ಪೂರ್ವವತ್ ।
ವೇದೇಭ್ಯ ಏವ ಭಗವಾನಕರೋತ್ಕಮಲೋದ್ಭವಃ ॥೨॥

ನೂರೊಂದನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಇಂತೆಂದನು :—

೧. ತರುವಾಯ ಬ್ರಹ್ಮದೇವನು ಈ ಜಗತ್ತನ್ನು ಸೃಷ್ಟಿಮಾಡಿ ವರ್ಣ-ಆಶ್ರಮ-ಸಮುದ್ರ-ದ್ವೀಪ ಮುಂತಾದುವುಗಳ ವಿಭಾಗವನ್ನು ಹಿಂದಿನ ಕಲ್ಪಗಳಲ್ಲಿದ್ದಂತೆ ಪ್ರತ್ಯೇಕವಾಗಿ ರಚಿಸಿದನು.

೨. ಹಾಗು ಕಮಲದಲ್ಲಿ ಜನ್ಮವೆತ್ತಿದ ಮತ್ತು ಪೂಜ್ಯನಾದ ಬ್ರಹ್ಮದೇವನು ದೇವ-ದೈತ್ಯ-ಸರ್ಪ ಮುಂತಾದವರ ರೂಪ ಮತ್ತು ಸ್ಥಾನಗಳ ಭೇದವನ್ನು ಪೂರ್ವಕಲ್ಪಾನುಸಾರವಾಗಿ ವೇದಗಳಿಂದಲೇ ನಿರ್ಮಾಣಮಾಡಿದನು.

ಬ್ರಹ್ಮಣಸ್ತನಯೋ ಯೋಽಭೂನ್ಮರೀಚಿರಿತಿ ವಿಶ್ರುತಃ ।
ಕಶ್ಯಪಸ್ತಸ್ಯ ಪುತ್ರೋಽಭೂತ್ಕಾಶ್ಯಪೋ ನಾಮ ನಾಮತಃ ॥೩॥

ದಕ್ಷಸ್ಯ ತನಯಾ ಬ್ರಹ್ಮನ್ ತಸ್ಯ ಭಾರ್ಯಾಸ್ತ್ರಯೋದಶ ।
ಬಹವಸ್ತತ್ಸುತಾಶ್ಚಾಸನ್ದೇವದೈತ್ಯೋರಗಾದಯಃ ॥೪॥

ಅದಿತಿರ್ಜನಯಾಮಾಸ ದೇವಾಂಸ್ತ್ರಿಭುವನೇಶ್ವರಾನ್ ।
ದೈತ್ಯಾನ್ದಿತಿರ್ದನುಶ್ಚೋಗ್ರಾನ್ದಾನವಾನುರುವಿಕ್ರಮಾನ್ ॥೫॥

ಗರುಡಾರುಣೌ ಚ ವಿನತಾ ಯಕ್ಷರಕ್ಷಾಂಸಿ ವೈ ಖಸಾ ।
ಕದ್ರೂಃ ಸುಷಾವ ನಾಗಾಂಶ್ಚ ಗನ್ಧರ್ವಾನ್ ಸುಷುವೇ ಮುನಿಃ ॥೬॥

---

೩. ಮರೀಚಿ ಎಂಬ ನಾಮಾಂಕನದಿಂದ ಪ್ರಸಿದ್ಧನಾದ ಮುನಿಯು ಬ್ರಹ್ಮದೇವನ ಪುತ್ರನಾಗಿದ್ದನು. ಆ ಮರೀಚಿಮುನಿಗೆ ಕಾಶ್ಯಪನೆಂಬ ನಾಮಾಂಕಿತನಾದ ಕಶ್ಯಪನೆಂಬ ಒಬ್ಬ ಪುತ್ರನಿದ್ದನು.

೪. ದಕ್ಷಪ್ರಜಾಪತಿಯ ಹದಿಮೂರು ಮಂದಿ ಕನ್ಯೆಯರು ಆ ಕಶ್ಯಪ ಮುನಿಯ ಪತ್ನಿಯರಾಗಿದ್ದರು. ಅವರಲ್ಲಿ ದೇವ-ದೈತ್ಯ-ನಾಗ ಮುಂತಾದ ಅನೇಕ ಜಾತಿಯ ಪುತ್ರರು ಜನ್ಮವೆತ್ತಿದರು.

೫. ಕಾಶ್ಯಪಮುನಿಯ ಪತ್ನಿಯಾದ ಅದಿತಿದೇವಿಯು ತ್ರಿಭುವನಗಳಿಗೆ ಪ್ರಭುಗಳಾದ ದೇವತೆಗಳನ್ನು ಪುತ್ರರನ್ನಾಗಿ ಪ್ರಸವಿಸಿದಳು. ದಿತಿಯು ದೈತ್ಯರನ್ನೂ ದನು ಎಂಬುವಳು ಉಗ್ರರೂ, ಅತಿಯಾದ ವಿಕ್ರಮವುಳ್ಳವರೂ ಆದ ದಾನವರನ್ನೂ ಪ್ರಸವಿಸಿದಳು.

೬. ಹಾಗು ವಿನತೆಯು ಗರುಡ-ಅರುಣರಿಬ್ಬರನ್ನೂ, ಖಸಾ ಎಂಬುವಳು ಯಕ್ಷ-ರಾಕ್ಷಸರನ್ನೂ, ಕದ್ರೂ ಎಂಬುವಳು ನಾಗರನ್ನೂ ಮತ್ತು ಮುನಿಯೆಂಬುವಳು ಗಂಧರ್ವರನ್ನೂ ಪುತ್ರರನ್ನಾಗಿ ಹೊಂದಿದರು.

ಕ್ರೋಧಾಯಾ ಜಜ್ಞಿರೇ ಕುಲ್ಯಾ ಅರಿಷ್ಟಾಯಾಶ್ಚಾಪ್ಸರೋಗಣಾಃ ।
ಐರಾವತಾದೀನ್ನಾಗಾನ್ ಇರಾ ಚ ಸುಷುವೇ ದ್ವಿಜಃ ॥೭॥

ತಾಮ್ರಾಂ ಚ ಸುಷುವೇ ಶ್ಯೇನೀಪ್ರಮುಖಾಃ ಕನ್ಯಕಾ ದ್ವಿಜ ।
ಯಾಸಾಂ ಪ್ರಸೂತಾಃ ಖಗವಾಃ ಶ್ಯೇನಭಾಸಶುಕಾದಯಃ ॥೮॥

ಇಲಾಯಾಃ ಪಾದಪಾ ಜಾತಾಃ ಪ್ರಧಾಯಾ ಯಾದಸಾಂ ಗಣಾಃ ।
ಅದಿತ್ಯಾಂ ಯಾ ಸಮುತ್ಪನ್ನಾ ಕಶ್ಯಪಸ್ಯೇತಿ ಸನ್ತತಿಃ ॥೯॥

ತಸ್ಯಾಶ್ಚ ಪುತ್ರದೌಹಿತ್ರೈಃ ಪೌತ್ರದೌಹಿತ್ರಿಕಾದಿಭಿಃ ।
ವ್ಯಾಪ್ತಮೇತಜ್ಜಗತ್ಕೃತ್ಸ್ನಂ ತೇಷಾಂ ತಾಸಾಂ ಚ ವೈ ಮುನೇ ॥೧೦॥

---

೭. ಎಲೈ ಕ್ರೌಷ್ಟುಕಿದ್ವಿಜನೇ! ಕ್ರೋಧಾ ಎಂಬುವಳಿಗೆ ಕುಲ್ಯಾ ಎಂಬ ಪುತ್ರರು ಹುಟ್ಟಿದರು. ಅರಿಷ್ಟೆಗೆ ಅಪ್ಸರಃಸ್ತ್ರೀಯರು ಪುತ್ರಿಯರಾಗಿ ಜನಿಸಿದರು. ಮತ್ತು ಇರಾ ಎಂಬುವಳು ಐರಾವತ ಮುಂತಾದ ಗಜಜಾತಿಯ ಪುತ್ರರನ್ನು ಹೊಂದಿದಳು.

೮. ವಿಪ್ರೋತ್ತಮನಾದ ಕ್ರೌಷ್ಟುಕಿಯೇ! ತಾಮ್ರಾ ಎಂಬುವಳು ಶ್ಯೇನೀ ಮುಂತಾದ ಕನ್ಯೆಯರನ್ನು ಪ್ರಸವಿಸಿದಳು. ಮುಂದೆ ಆ ಶ್ಯೇನೀ ಮುಂತಾದ ಕನ್ಯಕೆಯರಲ್ಲಿ ಶ್ಯೇನ-ಭಾಸ-ಶುಕ ಮುಂತಾದ ವಿವಿಧ ಪಕ್ಷಿಗಳು ಹುಟ್ಟಿದುವು.

೯. ಇಲಾ ಎಂಬುವಳಲ್ಲಿ ವೃಕ್ಷಗಳು ಜನಿಸಿದುವು. ಪ್ರಧಾ ಎಂಬುವಳಲ್ಲಿ ಜಲಜಂತುಗಳ ಗುಂಪುಗಳು ಹುಟ್ಟಿದುವು. ಕಶ್ಯಪಮುನಿಯಿಂದ ಅದಿತಿದೇವಿಯಲ್ಲಿ ಯಾವ ಸಂತತಿಯು ಜನಿಸಿತೋ ಅದೇ ದೇವಸಂತತಿಯು.

೧೦. ಕ್ರೌಷ್ಟುಕಿಮುನಿಯೇ! ಆ ಸಂತತಿಯಲ್ಲಿ ಕ್ರಮವಾಗಿ ಜನಿಸಿದ ಪುತ್ರ-ದೌಹಿತ್ರರಿಂದಲೂ, ಪೌತ್ರ-ದೌಹಿತ್ರಿಯರಿಂದಲೂ ಮತ್ತು ಅವರಲ್ಲಿ ಮುಂದೆ ಜನಿಸಿದ ಸ್ತ್ರೀ-ಪುರುಷಪ್ರಜೆಯಿಂದಲೂ ಈ ಸಮಸ್ತ ಜಗತ್ತು ವ್ಯಾಪಿಸಲ್ಪಟ್ಟಿರುವುದು.

ತೇಷಾಂ ಕಶ್ಯಪಪುತ್ರಾಣಾಂ ಪ್ರಧಾನಾ ದೇವತಾಗಣಾಃ ।
ಸಾತ್ತ್ವಿಕಾ ರಾಜಸಾಸ್ತ್ವೇತೇ ತಾಮಸಾಶ್ಚ ಮುನೇ ಗಣಾಃ ॥೧೧॥

ದೇವಾನ್ ಯಜ್ಞಭುಜಶ್ಚಕ್ರೇ ತಥಾ ತ್ರಿಭುವನೇಶ್ವರಾನ್ ।
ಬ್ರಹ್ಮಾ ಬ್ರಹ್ಮವಿದಾಂ ಶ್ರೇಷ್ಠಃ ಪರಮೇಷ್ಠೀ ಪ್ರಜಾಪತಿಃ ॥೧೨॥

ತಾನಬಾಧನ್ತ ಸಹಿತಾಃ ಸಪತ್ನಾ ದೈತ್ಯದಾನವಾಃ ।
ರಾಕ್ಷಸಾಶ್ಚ ತಥಾ ಯುದ್ಧಂ ತೇಷಾಮಾಸೀತ್ಸುದಾರುಣಮ್ ॥೧೩॥

ದಿವ್ಯಂ ವರ್ಷಸಹಸ್ರಂ ತು ಪರಾಜೀಯನ್ತ ದೇವತಾಃ ।
ಜಯಿನಶ್ಚಾಭವನ್ವಿಪ್ರ ಬಲಿನೋ ದೈತ್ಯದಾನವಾಃ ॥೧೪॥

ತತೋ ನಿರಾಕೃತಾನ್ ಪುತ್ರಾನ್ ದೈತೇಯೈರ್ದಾನವೈಸ್ತಥಾ ।
ಹೃತತ್ರಿಭುವನಾನ್ ದೃಷ್ಟ್ವಾ ಹ್ಯದಿತಿರ್ಮುನಿಸತ್ತಮ ॥೧೫॥

---

೧೧. ಕ್ರೌಷ್ಟುಕಿ ಮಹರ್ಷಿಯೇ! ಕಶ್ಯಪಪುತ್ರರಲ್ಲಿ ದೇವಗಣವು ಪ್ರಧಾನವಾದುದು. ಆ ದೇವತೆಗಳು ಸತ್ತ್ವಗುಣದಿಂದ ಕೂಡಿದವರಾದರು. ಇತರ ಪುತ್ರರು ರಾಜಸ ಮತ್ತು ತಾಮಸರಾದರು.

೧೨. ಬ್ರಹ್ಮವೇತ್ತರಲ್ಲಿ ಶ್ರೇಷ್ಠನೂ, ಪರಮಸ್ಥಾನದಲ್ಲಿರುವವನೂ ಆದ ಬ್ರಹ್ಮದೇವನು ದೇವತೆಗಳನ್ನು ಯಜ್ಞಭಾಗಗಳನ್ನು ಭುಂಜಿಸುವವರನ್ನಾಗಿಯೂ ಮತ್ತು ತ್ರಿಭುವನಗಳಿಗೆ ಅಧಿಪತಿಗಳನ್ನಾಗಿಯೂ ಏರ್ಪಡಿಸಿದನು.

೧೩. ಆಗ ಸವತಿಯರ ಮಕ್ಕಳಾದ ದೈತ್ಯ-ದಾನವರು ಮತ್ತು ರಾಕ್ಷಸರು ಒಟ್ಟು ಸೇರಿ ಆ ದೇವತೆಗಳನ್ನು ಬಾಧಿಸಿದರು. ಆಗ ದೇವತೆಗಳಿಗೂ-ದೈತ್ಯ-ದಾನವ-ರಾಕ್ಷಸರ ಗುಂಪಿಗೂ ಘೋರವಾದ ಸಂಗ್ರಾಮವು ಜರುಗಿತು.

೧೪. ವಿಪ್ರನೇ! ಆ ದೇವ-ದಾನವ ಯುದ್ಧವು ದೇವಮಾನದಂತೆ ಒಂದು ಸಹಸ್ರವರ್ಷಗಳವರೆಗೆ ನಡೆಯಿತು. ದೇವತೆಗಳು ಸೋತುಹೋದರು. ಬಲಿಷ್ಠರಾದ ದೈತ್ಯ–ದಾನವರು ಜಯಶಾಲಿಗಳಾದರು.

೧೫. ಮುನಿಶ್ರೇಷ್ಠನಾದ ಕ್ರೌಷ್ಟುಕಿಯೆ! ತರುವಾಯ ದಿತಿಪುತ್ರರು-ಮತ್ತು ದನುಪುತ್ರರಿಂದ ದೂರ ಓಡಿಸಲ್ಪಟ್ಟವರೂ ಮತ್ತು ಕಿತ್ತುಕೊಳ್ಳಲ್ಪಟ್ಟ ಅಧಿಕಾರವುಳ್ಳವರೂ ಆದ ತನ್ನ ಪುತ್ರರನ್ನು ಕಂಡು ಅದಿತಿಯು ವ್ಯಥೆಪಟ್ಟಳು.

ಆಚ್ಛಿನ್ನಯಜ್ಞಭಾಗಾಂಶ್ಚ ಶುಚಾ ಸಮ್ಪೀಡಿತಾ ಭೃಶಮ್ ।
ಆರಾಧನಾಯ ಸವಿತುಃ ಪರಂ ಯತ್ನಂ ಪ್ರಚಕ್ರಮೇ ॥೧೬॥

ಏಕಾಗ್ರಾ ನಿಯತಾಹಾರಾ ಪರಂ ನಿಯಮಮಾಸ್ಥಿತಾ ।
ತುಷ್ಟಾವ ತೇಜಸಾಂ ರಾಶಿಂ ಗಗನಸ್ಥಂ ದಿವಾಕರಮ್ ॥೧೭॥

ಅದಿತಿರುವಾಚ :—

ನಮಸ್ತುಭ್ಯಂ ಪರಾಂ ಸೂಕ್ಷ್ಮಾಂ ಸೌವರ್ಣೀಂ ಬಿಭ್ರತೇ ತನುಮ್ ।
ಧಾಮ ಧಾಮವತಾಮೀಶ ಧಾಮ್ನಾಮಾಧಾರ ಶಾಶ್ವತ ॥೧೮॥

ಜಗತಾಮುಪಕಾರಾಯ ತಥಾಪಸ್ತವ ಗೋಪತೇ ।
ಆದದಾನಸ್ಯ ಯದ್ರೂಪಂ ತೀವ್ರಂ ತಸ್ಮೈ ನಮಾಮ್ಯಹಮ್ ॥೧೯॥

---

೧೬. ಮತ್ತು ಅಪಹರಿಸಲ್ಪಟ್ಟ ಯಜ್ಞಭಾಗವುಳ್ಳ ಪುತ್ರರು ಅತಿಶಯವಾಗಿ ವ್ಯಥೆಯಿಂದ ಪೀಡಿತರಾದುದನ್ನು ಕಂಡು ಅದಿತಿಯು ಸೂರ್ಯದೇವನ ಆರಾಧನೆಯನ್ನು ಮಾಡಲು ಉತ್ತಮವಾದ ಪ್ರಯತ್ನವನ್ನು ಕೈಗೊಂಡಳು.

೧೭. ಆಗ ಅದಿತಿಯು ಏಕಾಗ್ರತೆಯಿಂದ ಕೂಡಿದ ಮಾನಸವುಳ್ಳವಳೂ, ಕಠಿನವಾದ ನಿಯಮವನ್ನು ಕೈಗೊಂಡವಳೂ ಆಗಿ ಆಕಾಶದಲ್ಲಿ ರಾಜಿಸುವ, ತೇಜೋರಾಶಿಯಾದ ಸೂರ್ಯದೇವನನ್ನು ಸ್ತುತಿಸಿದಳು.

ಅದಿತಿದೇವಿಯು ಹೀಗೆ ಸ್ತುತಿಮಾಡಿದಳು :—

೧೮. ಎಲೈ, ಈಶ್ವರನೇ! ತೇಜಸ್ಸುಗಳಿಗೆ ಆಧಾರನೇ! ಮತ್ತು ಶಾಶ್ವತನೇ! ಎಲ್ಲಕ್ಕಿಂತಲೂ ಸೂಕ್ಷ್ಮವೂ ತೇಜಸ್ವಿವಸ್ತುಗಳಿಗೆ ಆಲಂಬನವೂ ಮತ್ತು ಸುವರ್ಣಮಯವಾದಂತೆ ಶೋಭಿಸುವುದೂ ಆದ ಮೂರ್ತಿಯನ್ನು ಧರಿಸಿದ ನಿನ್ನನ್ನು ನಮಸ್ಕರಿಸುವೆನು.

೧೯. ಕಿರಣ ಮಾಲೆಯಿಂದ ಶೋಭಿಸುವ ಪ್ರಭುವೇ! ಜಗತ್ತಿನ ಉಪಕಾರಕ್ಕೋಸ್ಕರ ಕಿರಣಗಳಿಂದ ನೀರನ್ನು ಶೋಷಿಸುವ ನಿನ್ನ ತೀಕ್ಷ್ಣವಾದ ರೂಪವನ್ನು ನಾನು ವಂದಿಸುವೆನು.

ಗೃಹೀತುಮಷ್ಟಮಾಸೇನ ಕಾಲೇನೇನ್ದುಮಯಂ ರಸಮ್ ।
ಬಿಭ್ರತಸ್ತವ ಯದ್ರೂಪಮತಿತೀವ್ರಂ ನತಾಸ್ಮಿ ತತ್ ॥೨೦॥

ತಮೇವ ಮುಞ್ಚತಃ ಸರ್ವಂ ರಸಂ ವೈ ವರ್ಷಕಾಯ ಯತ್ ।
ರೂಪಮಾಪ್ಯಾಯಕಂ ಭಾಸ್ವಂಸ್ತಸ್ಮೈ ಮೇಘಾಯ ತೇ ನಮಃ ॥೨೧॥

ವಾಯುರ್ಯುತ್ಸರ್ಗನಿಷ್ಪನ್ನಮಶೇಷಂ ಚೌಷಧೀಗಣಮ್ ।
ಪಾಕಾಯ ತವ ಯದ್ರೂಪಂ ಭಾಸ್ಕರಂ ತಂ ನಮಾಮ್ಯಹಮ್ ॥೨೨॥

ಯಚ್ಚ ರೂಪಂ ತವಾತೀತಂ ಹಿಮೋತ್ಸರ್ಗಾದಿಶೀತಲಮ್ ।
ತತ್ಕಾಲಸಸ್ಯಪೋಷಾಯ ತರಣೇ ತಸ್ಯ ತೇ ನಮಃ ॥೨೩॥

ನಾತಿತೀವ್ರಂ ಚ ಯದ್ರೂಪಂ ನಾತಿಶೀತಂ ಚ ಯತ್ತವ ।
ವಸನ್ತರ್ತೌ ರವೇ ಸೌಮ್ಯಂ ತಸ್ಮೈ ದೇವ ನಮೋ ನಮಃ ॥೨೪॥

---

೨೦. ಎಂಟು ಮಾಸಗಳಷ್ಟು ದೀರ್ಘಕಾಲದಲ್ಲಿ ಚಂದ್ರಬಿಂಬದಿಂದ ಪರಿಣಮಿಸುವ ರಸಾಂಶವನ್ನು ತೆಗೆದುಕೊಳ್ಳಲು ಧರಿಸಿರುವ ನಿನ್ನ ಉಗ್ರವಾದ ರೂಪವನ್ನು ನಾನು ನಮಸ್ಕರಿಸುವೆನು.

೨೧. ಸೂರ್ಯದೇವನೇ! ಮೊದಲು ಹೀರಿಕೊಂಡಿರುವ ರಸದ ಅಂಶವನ್ನೆಲ್ಲ ಮತ್ತೆ ಬಿಡುತ್ತ ಮಳೆಯನ್ನು ಸುರಿಸುವುದಕ್ಕೋಸ್ಕರ ಜಗತ್ತಿಗೆ ವೃದ್ಧಿಕರವಾದ ರೂಪವನ್ನು ಸ್ವೀಕರಿಸುವ ನಿನ್ನ ಮೇಘರೂಪಕ್ಕೆ ನಮಸ್ಕಾರವು.

೨೨. ಹಾಗೆ ಮಳೆಯು ಬೀಳುವುದರಿಂದ ಹುಟ್ಟಿದ ಎಲ್ಲ ಬಗೆಯ ಸಸ್ಯವರ್ಗವನ್ನು ಪಾಕಮಾಡುವುದಕ್ಕೋಸ್ಕರ ನೀನು ಯಾವ ರೂಪವನ್ನು ಧರಿಸುತ್ತೀಯೋ ಅಂತಹ ಉಜ್ವಲ ರೂಪವನ್ನು ನಾನು ವಂದಿಸುವೆನು.

೨೩. ಸೂರ್ಯದೇವನೇ! ಹಿಮುವನ್ನು ಸುರಿಸುವುದರಿಂದ ಶೀತಲವಾದ ಯಾವ ರೂಪವು ಹಿಮಕಾಲದ ಸಸ್ಯಪೋಷಣೆಗೋಸ್ಕರ ನಿನ್ನಿಂದ ಸ್ವೀಕರಿಸಲ್ಪಟ್ಟಿತ್ತೋ ಅಂತಹ ನಿನ್ನ ರೂಪವನ್ನು ವಂದಿಸುವೆನು.

೨೪. ಸೂರ್ಯಪರಮಾತ್ಮನೇ! ವಸಂತ ಋತುವಿನಲ್ಲಿ ಯಾವ ನಿನ್ನ ರೂಪವು ಅತಿ ತೀಕ್ಷ್ಣವಲ್ಲದುದಾಗಿಯೂ ಮತ್ತು ಅತಿ ಶೀತವಲ್ಲದುದಾಗಿಯೂ ಇರುವುದೊ ಅಂತಹ ಸೌಮ್ಯರೂಪಕ್ಕೆ ನಮಸ್ಕಾರವು.

ಆಪ್ಯಾಯನಮಶೇಷಾಣಾಂ ದೇವಾನಾಂ ಚ ತಥಾ ಪರಮ್ ।
ಪಿತೃಣಾಂ ಚ ನಮಸ್ತಸ್ಮೈ ಸಸ್ಯಾನಾಂ ಪಾಕಹೇತವೇ ॥೨೫॥

ಯದ್ರೂಪಂ ಜೀವನಾಯೈಕಂ ವೀರುಧಾಮಮೃತಾತ್ಮಕಮ್ ।
ಪೀಯತೇ ದೇವಪಿತೃಭಿಸ್ತಸ್ಮೈ ಸೋಮಾತ್ಮನೇ ನಮಃ ॥೨೬॥

ಆಪ್ಯಾಯದ್ದಾಹರೂಪಾಭ್ಯಾಂ ರೂಪಂ ವಿಶ್ವಮಯಂ ತವ ।
ಸಮೇತಮಗ್ನೀಷೋಮಾಭ್ಯಾಂ ನಮಸ್ತಸ್ಮೈ ಗುಣಾತ್ಮನೇ ॥೨೭॥

ಯದ್ರೂಪಮೃಗ್ಯಜುಃಸಾಮ್ನಾಮೈಕ್ಯೇನ ತಪತೇ ತವ ।
ವಿಶ್ವಮೇತತ್ತ್ರಯೀಸಂಜ್ಞಂ ನಮಸ್ತಸ್ಮೈ ವಿಭಾವಸೋ ॥೨೮॥

---

೨೫. ಸಮಸ್ತ ದೇವತೆಗಳಿಗೆ ಆನಂದಕರವೂ, ಪಿತೃಗಳಿಗೆ ಸುಖಕರವೂ ಮತ್ತು ಎಲ್ಲ ಬಗೆಯ ಸಸ್ಯವರ್ಗಕ್ಕೆ ಪರಿಪಾಕವನ್ನುಂಟುಮಾಡುವುದೂ ಆದ ನಿನ್ನ ರೂಪವನ್ನು ನಮಸ್ಕರಿಸುವೆನು.

೨೬. ಲತೆಗಳಿಗೆ ಜೀವವನ್ನುಂಟುಮಾಡುವುದೂ, ಹಾಗು ದೇವ-ಪಿತೃ-ಗಳಿಂದ ಪಾನಮಾಡಲ್ಪಡುವುದೂ ಆದ ಅಮೃತಾತ್ಮಕವೂ ಆದ ರೂಪವು ನಿನ್ನದಾಗಿದೆ. ಅಂತಹ ರೂಪದಿಂದ ಕೂಡಿದ ಚಂದ್ರರೂಪನಾದ ನಿನಗೆ ನಮಸ್ಕಾರವು.

೨೭. ಸೂರ್ಯದೇವನೇ! ವೃದ್ಧಿಗೊಳಿಸುವ ಮತ್ತು ದಹಿಸುವ ರೂಪವೆನಿಸಿದ ಅಗ್ನಿ ಸೋಮ ಎಂಬ ಎರಡು ರೂಪಗಳಿಂದ ಕೂಡಿರುವ ವಿಶ್ವಾತ್ಮಕನು ನೀನಾಗಿದ್ದೀಯೆ. ಅಂತಹ ನಿನ್ನ ಗುಣಮಯವಾದ ಮೂರ್ತಿಯನ್ನು ನಾನು ನಮಸ್ಕರಿಸುವೆನು.

೨೮. ಪ್ರಕಾಶಮಯದೇವನೆ! ಮತ್ತು ಋಗ್ವೇದ-ಯಜುರ್ವೇದ-ಸಾಮವೇದಗಳ ಐಕ್ಯವನ್ನು ಹೊಂದಿ ತ್ರಯೀ ಎಂಬ ನಾಮಾಂಕನವನ್ನು ಹೊಂದಿದ ನಿನ್ನ ಯಾವ ರೂಪವು ವಿಶ್ವವನ್ನು ತಪಿಸುತ್ತಿರುವುದೋ ಅಂತಹ ನಿನ್ನ ರೂಪಕ್ಕೆ ನಮಸ್ಕಾರವು.

ಯತ್ತು ತಸ್ಮಾತ್ಪರಂ ರೂಪಮೋಮಿತ್ಯುಕ್ತ್ವಾಭಿಶಬ್ದಿತಮ್ ।
ಅಸ್ಥೂಲಾನನ್ತಮಮಲಂ ನಮಸ್ತಸ್ಮೈ ಸದಾತ್ಮನೇ ॥೨೯॥

ಮಾರ್ಕಣ್ಡೇಯ ಉವಾಚ :—

ಏವಂ ಸಾ ನಿಯತಾ ದೇವೀ ಚಕ್ರೇ ಸ್ತೋತ್ರಮಹರ್ನಿಶಮ್ ।
ನಿರಾಹಾರಾ ವಿವಸ್ವನ್ತಮಾರಿರಾಧಯಿಷುರ್ಮುನೇ ॥೩೦॥

ತತಃ ಕಾಲೇನ ಮಹತಾ ಭಗವಾಂಸ್ತಪನೋಽಮ್ಬರೇ ।
ಪ್ರತ್ಯಕ್ಷತಾಮಗಾದಸ್ಯಾ ದಾಕ್ಷಾಯಣ್ಯಾ ದ್ವಿಜೋತ್ತಮ ॥೩೧॥

ಸಾ ದದರ್ಶ ಮಹಾಕೂಟಂ ತೇಜಸೋಽಮ್ಬರಸಂಶ್ರಿತಮ್ ।
ಜಗಾದ ಮೇ ಪ್ರಸೀದೇತಿ ನ ತ್ವಾಂ ಪಶ್ಯಾಮಿ ಗೋಪತೇ ॥೩೨॥

---

೨೯. ಈ ರೂಪಗಳಿಗಿಂತ ಮಿಗಿಲಾದ, ಓಂ ಎಂಬ ಅಕ್ಷರದಿಂದ ಪ್ರತಿಪಾದಿಸಲ್ಪಡುವ, ಸ್ಥೂಲವಸ್ತುವಿಲ್ಲದ, ಅಂತವಿಲ್ಲದ ಮತ್ತು ಕಳಂಕವಿಲ್ಲದ ಸೂಕ್ಷ್ಮರೂಪದಿಂದ ನೀನು “ ಸತ್ ” ಎಂದು ಕರೆಯಲ್ಪಡುತ್ತೀಯೆ. ಅಂತಹ ನಿನಗೆ ನಮಸ್ಕಾರವು.

ಮಾರ್ಕಂಡೇಯ ಮುನಿಯು ಹೀಗೆಂದನು :—

೩೦. ಕ್ರೌಷ್ಟುಕಿಮುನಿಯೇ ! ನಿಯಮವತಿಯೂ, ನಿರಾಹಾರಳೂ ಆದ ಅದಿತಿದೇವಿಯು ಸೂರ್ಯದೇವನನ್ನು ಆರಾಧಿಸುವ ಇಷ್ಟವುಳ್ಳವಳಾಗಿ ಈ ವಿಧವಾಗಿ ಹಗಲು–ರಾತ್ರಿಗಳಲ್ಲೆಲ್ಲ ಸ್ತೋತ್ರಮಾಡಿದಳು.

೩೧. ದ್ವಿಜೋತ್ತಮನಾದ ಕ್ರೌಷ್ಟುಕಿಯೇ ! ಹೀಗೆ ಬಹು ಕಾಲವು ಕಳೆದ ಮೇಲೆ ಷಡ್ಗುಣೈಶ್ವರ್ಯಸಂಪನ್ನನಾದ ಸೂರ್ಯದೇವನು ದಕ್ಷಪ್ರಜಾಪತಿಯ ಪುತ್ರಿಯಾದ ಅದಿತಿಗೆ ಆಕಾಶದಲ್ಲಿ ಪ್ರತ್ಯಕ್ಷವಾಗಿ ಕಾಣಿಸಿಕೊಂಡನು.

೩೨. ಆಗ ಅದಿತಿಯು ಆಕಾಶದಲ್ಲಿ ಉದಯಿಸಿದ ತೇಜಃಪುಂಜವನ್ನು ನೋಡಿದಳು “ ಕಿರಣಮಾಲಿಯೇ ! ನನ್ನಲ್ಲಿ ಅನುಗ್ರಹತೋರು. ತೇಜಃಪುಂಜದಲ್ಲಿ ಮುಳುಗಿದ ನಿನ್ನನ್ನು ನಾನು ಕಾಣಲಾರೆನು.” ಹೀಗೆಂದು ಹೇಳಿದಳು.

ಯಥಾ ದೃಷ್ಟವತೀ ಪೂರ್ವಮುಪ್ಪ್ರಸ್ಥಂ ಸುದುರ್ದೃಶಮ್ ।
ನಿರಾಹಾರಾ ವಿವಸ್ವನ್ತಂ ತಪನ್ತಂ ತದನನ್ತರಮ್ ॥೩೩॥

ಸಙ್ಘಾತಂ ತೇಜಸಾಂ ತದ್ವದಿಹ ಪಶ್ಯಾಮಿ ಭೂತಲೇ ॥೩೪॥

ಪ್ರಸಾದಂ ಕುರು ಪಶ್ಯೇಯಂ ಯದ್ರೂಪಂ ತೇ ದಿವಾಕರ ।
ಭಕ್ತಾನುಕಮ್ಪಕ ವಿಭೋ ಭಕ್ತಾಹಂ ಪಾಹಿ ಮೇ ಸುತಾನ್ ॥೩೫॥

ತ್ವಂ ಧಾತಾ ವಿಸೃಜಸಿ ವಿಶ್ವಮೇತ-
ತ್ತ್ವಂ ಪಾಸಿ ಸ್ಥಿತಿಕರಣಾಯ ಸಂಪ್ರವೃತ್ತಃ ।
ತ್ವಯ್ಯನ್ತೇ ಲಯಮಖಿಲಂ ಪ್ರಯಾತಿ ತತ್ತ್ವಂ
ತ್ವತ್ತೋಽನ್ಯಾ ನ ಹಿ ಗತಿರಸ್ತಿ ಸರ್ವಲೋಕೇ ॥೩೬॥

---

೩೩. ನಿರಾಹಾರಳಾಗಿ ತಪಮಾಡುತ್ತಿದ್ದ ನಾನು ಅಂತರವಿಲ್ಲದಂತೆ ತಪಿಸುವವನೂ, ನೋಡಲು ದುಃಖಸಾಧ್ಯನೂ ಮತ್ತು ಆಕಾಶದಲ್ಲಿರುವವನೂ ಆದ ನಿನ್ನನ್ನು ನೋಡಿರುವಂತೆಯೆ ಸಮೀಪದಲ್ಲಿ ಪ್ರತ್ಯಕ್ಷದರ್ಶನವನ್ನು ಅನುಗ್ರಹಿಸು.

೩೪. ಸೂರ್ಯದೇವನೇ! ಆಕಾಶದಲ್ಲಿ ನಿನ್ನ ತೇಜಃಪುಂಜವನ್ನು ನೋಡಿರುವಂತೆ ಅಂತಹ ತೇಜಃಸಂಘಾತದ ರೂಪವನ್ನು ಇಲ್ಲಿ ಭೂಮಿಯಲ್ಲಿ ನಾನು ನೋಡುವಂತೆ ಅನುಗ್ರಹ ತೋರು.

೩೫. ಸೂರ್ಯಪರಮಾತ್ಮನೇ! ನಿನ್ನ ರೂಪವನ್ನು ನಾನು ನೋಡುವೆನು. ಹಾಗೆ ನೀನು ನನ್ನಲ್ಲಿ ಅನುಗ್ರಹಮಾಡು. ಭಕ್ತರಲ್ಲಿ ದಯೆತೋರುವವನೇ! ಸರ್ವವ್ಯಾಪಕನೇ! ನಾನು ನಿನ್ನಲ್ಲಿ ಭಕ್ತಳಾಗಿರುವೆನು. ನನ್ನ ಪುತ್ರರನ್ನು ರಕ್ಷಿಸು.

೩೬. ಸೂರ್ಯದೇವನೇ! ನೀನು ಸೃಷ್ಟಿಕರ್ತೃವಾಗಿ ಸಮಸ್ತ ವಿಶ್ವವನ್ನು ಸೃಜಿಸುತ್ತೀಯೆ. ನೀನು ರಕ್ಷಣವ್ಯಾಪಾರದಲ್ಲಿ ತೊಡಗಿದವನಾಗಿ ವಿಶ್ವವನ್ನು ರಕ್ಷಿಸುತ್ತೀಯೆ ಮತ್ತು ಪ್ರಲಯಸಮಯದಲ್ಲಿ ಸಕಲ ತತ್ವಗಳು ನಿನ್ನಲ್ಲಿ ಲಯವನ್ನು ಹೊಂದುತ್ತವೆ. ಸಮಸ್ತ ಲೋಕಗಳಲ್ಲಿ ನಿನ್ನನ್ನು ಬಿಟ್ಟು ಬೇರೊಂದು ಗತಿಯಿರುವುದಿಲ್ಲ.

ತ್ವಂ ಬ್ರಹ್ಮಾ ಹರಿರಜಸಞ್ಜ್ಞಸ್ತ್ವಮಿನ್ದ್ರೋ
ವಿತ್ತೇಶಃ ಪಿತೃಪತಿರಪ್ಪತಿಃ ಸಮೀರಃ ।
ಸೋಮೋಽಗ್ನಿರ್ಗಗನಪತಿರ್ಮಹೀಧರೋಽಬ್ಧಿಃ
ಕಿಂ ಸ್ತವ್ಯಂ ತವ ಸಕಲಾತ್ಮರೂಪಧಾಮ್ನಃ ॥೩೭॥

ಯಜ್ಞೇಶ ತ್ವಾಮನುದಿನಮಾತ್ಮಕರ್ಮಸಕ್ತಾಃ
ಸ್ತುನ್ವನ್ತೋ ವಿವಿಧಪದೈರ್ದ್ವಿಜಾ ಯಜನ್ತಿ ।
ಧ್ಯಾಯನ್ತೋ ವಿನಿಯತಚೇತಸೋ ಭವನ್ತಂ
ಯೋಗಸ್ಥಾಃ ಪರಮಪದಂ ಪ್ರಯಾನ್ತಿ ಮರ್ತ್ಯಾಃ ॥೩೮॥

ತಪಸಿ ಪಚಸಿ ವಿಶ್ವಂ ಪಾಸಿ ಭಸ್ಮೀಕರೋಷಿ
ಪ್ರಕಟಯಸಿ ಮಯೂಖೈರ್ಹ್ಲಾದಯಸ್ಯಮ್ಬುಗರ್ಭೈಃ ।

---

೩೭. ಬ್ರಹ್ಮ, ವಿಷ್ಣು, ಶಂಕರ, ಇಂದ್ರ, ಕುಬೇರ, ಯಮ, ವರುಣ, ವಾಯು, ಸೋಮ, ಅಗ್ನಿ, ಸೂರ್ಯ, ಪರ್ವತ ಮತ್ತು ಸಮುದ್ರ ಮುಂತಾದ ಶಬ್ದಗಳಿಂದ ಕರೆಯಲ್ಪಡುವ ಚೇತನ-ಅಚೇತನ ವರ್ಗವು ನೀನೇ ಆಗಿದ್ದೀಯೆ. ವಿಶ್ವರೂಪವಾದ ತೇಜೋಮಂಡಲವುಳ್ಳ ನಿನ್ನನ್ನು ಸ್ತುತಿಸುವುದೇನಿದೆ ?

೩೮. ಯಜ್ಞಕರ್ಮಾಧಿಪತಿಯೇ ! ಸ್ವಕರ್ಮನಿಷ್ಠರಾದ ದ್ವಿಜರು ಪ್ರತಿದಿನದಲ್ಲಿ ನಾನಾಬಗೆಯ ಮಂತ್ರಗಳಿಂದ ನಿನ್ನನ್ನು ಸ್ತುತಿಮಾಡುತ್ತ ನಿನ್ನ ಉದ್ದೇಶದಿಂದ ಯಾಗಮಾಡುವರು. ಮತ್ತು ಧ್ಯಾನಾಸಕ್ತರೂ, ನಿಗ್ರಹಿಸಿದ ಮಾನಸವುಳ್ಳವರೂ ಆದ ಯೋಗಿಜನರು ನಿನ್ನನ್ನು ಉಪಾಸನಮಾಡಿ ಮುಕ್ತಿ-ಪದವನ್ನು ಹೊಂದುತ್ತಾರೆ.

೩೯. ಪೂಜ್ಯನೇ ! ನೀನು ತಪಿಸುತ್ತಿದ್ದೀಯೆ, ಪರಿಪಾಕಮಾಡುತ್ತೀಯೆ, ವಿಶ್ವವನ್ನು ರಕ್ಷಿಸುತ್ತೀಯೆ, ಭಸ್ಮಮಾಡುತ್ತೀಯೆ, ರಶ್ಮಿಗಳಿಂದ ಬೆಳಗುತ್ತೀಯೆ,

ಸೃಜಸಿ ಕಮಲಜನ್ಮಾ ಪಾಲಯಸ್ಯಚ್ಯುತಾಖ್ಯಃ
ಕ್ಷಪಯಸಿ ಚ ಯುಗಾನ್ತೇ ರುದ್ರರೂಪಸ್ತ್ವಮೇಕಃ ॥೩೯॥

ಇತಿ ಶ್ರೀ ಮಾರ್ಕಣ್ಡೇಯಮಹಾಪುರಾಣೇ ದಿವಾಕರಸ್ತುತಿರ್ನಾಮ.
ಏಕಾಧಿಕಶತತಮೋಽಧ್ಯಾಯಃ

ನೀರು ತುಂಬಿದ ಮೋಡದ ರೂಪದಿಂದ ಗರ್ಜಿಸುತ್ತೀಯೆ, ಬ್ರಹ್ಮರೂಪದಿಂದ ಸೃಷ್ಟಿಮಾಡುತ್ತೀಯೆ, ವಿಷ್ಣುವಿನ ರೂಪದಿಂದ ವಿಶ್ವವನ್ನು ಪಾಲಿಸುತ್ತೀಯೆ, ಮತ್ತು ಪ್ರಲಯ ಸಮಯದಲ್ಲಿ ರುದ್ರರೂಪದಿಂದ ಸಂಹರಿಸುತ್ತೀಯೆ, ನೀನೊಬ್ಬನೆ ಎಲ್ಲ ಶಕ್ತಿಯನ್ನು ಹೊಂದಿರುತ್ತೀಯೆ.

ಮಾರ್ಕಂಡೇಯ ಮಹಾಪುರಾಣದಲ್ಲಿ ನೂರೊಂದನೆಯ ಅಧ್ಯಾಯವು
ಮುಗಿದುದು.

!! ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ದ್ವ್ಯಧಿಕಶತತಮೋಽಧ್ಯಾಯಃ

(ಮಾರ್ತಣ್ಡೋತ್ಪತ್ತಿನಿರೂಪಣಮ್)

ಮಾರ್ಕಣ್ಡೇಯ ಉವಾಚ :—

ತತಃ ಸ್ವತೇಜಸಸ್ತಸ್ಮಾದಾವಿರ್ಭೂತೋ ವಿಭಾವಸುಃ |
ಅದೃಶ್ಯತ ತದಾದಿತ್ಯಸ್ತಪ್ತತಾಮ್ರೋಪಮಪ್ರಭಃ ||೧||

ಅಥ ತಾಂ ಪ್ರಣತಾಂ ದೇವೀಂ ತಸ್ಯ ಸನ್ದರ್ಶನಾನ್ಮುನೇ |
ಪ್ರಾಹ ಭಾಸ್ವಾನ್ವೃಣೇಷ್ಟೇಷ್ಟವರಂ ಮತ್ತೋ ಯಮಿಚ್ಛಸಿ ||೨||

ನೂರೆರಡನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಇಂತೆಂದನು :—

೧. ತರುವಾಯ ಆ ತನ್ನ ತೇಜಃಪುಂಜದಿಂದ ಆವಿರ್ಭಾವವನ್ನು ಹೊಂದಿದವನೂ, ಪ್ರಕಾಶಮಯನೂ ಆದ ಸೂರ್ಯನು ಕಾಯಿಸಿದ ತಾಮ್ರ-ದಂತೆ ಕೆಂಪಾದ ಪ್ರಭೆಯುಳ್ಳವನಾಗಿ ಅದಿತಿಗೆ ಕಾಣಿಸಿಕೊಂಡನು.

೨. ಕ್ರೌಷ್ಟುಕಿಯೇ! ತರುವಾಯ ಸೂರ್ಯದೇವನ ದರ್ಶನದಿಂದ ಸಂತುಷ್ಟಳಾಗಿ ನಮಸ್ಕಾರಮಾಡಿರುವ ಅದಿತಿಯನ್ನು ನೋಡಿ " ನನ್ನಿಂದ ಯಾವ ಇಷ್ಟವನ್ನು ಅಪೇಕ್ಷಿಸುತ್ತೀಯೊ ; ಅಂತಹ ವರವನ್ನು ಕೇಳು " ಎಂದು ಹೇಳಿದನು.

ಪ್ರಣತಾ ಶಿರಸಾ ಸಾ ಚ ಜಾನುಪೀಡಿತಮೇದಿನೀ ।
ಪ್ರತ್ಯುವಾಚ ವಿವಸ್ವಂತಂ ವರದಂ ಸಮುಪಸ್ಥಿತಮ್ ॥೩॥

ದೇವ ಪ್ರಸೀದ ಪುತ್ರಾಣಾಂ ಹೃತಂ ತ್ರಿಭುವನಂ ಮಮ ।
ಯಜ್ಞಭಾಗಾಶ್ಚ ದೈತ್ಯೈಶ್ಚ ದಾನವೈಶ್ಚ ಬಲಾಧಿಕೈಃ ॥೪॥

ತನ್ನಿಮಿತ್ತಂ ಪ್ರಸಾದಂ ತ್ವಂ ಕುರುಷ್ವ ಮಮ ಗೋಪತೇ ।
ಅಂಶೇನ ತೇಷಾಂ ಭ್ರಾತೃತ್ವಂ ಗತ್ವಾ ನಾಶಯ ತದ್ರಿಪೂನ್ ॥೫॥

ಯಥಾ ಮೇ ತನಯಾ ಭೂಯೋ ಯಜ್ಞಭಾಗಭುಜಃ ಪ್ರಭೋ ।
ಭವೇಯುರಧಿಪಾಶ್ಚೈವ ತ್ರೈಲೋಕ್ಯಸ್ಯ ದಿವಾಕರ ॥೬॥

---

೩. ಆಗ ತಲೆಯನ್ನು ಬಾಗಿ ನಮಸ್ಕಾರಮಾಡಿದವಳೂ ಮೊಣಕಾಲುಗಳನ್ನು ನೆಲದಲ್ಲಿ ಇಟ್ಟುಕೊಂಡಿರುವವಳೂ ಆದ ಅದಿತಿದೇವಿಯು ವರವನ್ನು ನೀಡುವವನಾಗಿ ಪ್ರತ್ಯಕ್ಷನಾಗಿ ಬಂದಿರುವ ಸೂರ್ಯನನ್ನು ನೋಡಿ ಕೇಳಿಕೊಂಡಳು.

೪. ಸ್ವಾಮಿಯೆ ! ನನ್ನಲ್ಲಿ ಅನುಗ್ರಹವಿಡು. ಅತಿಬಲಿಷ್ಠರಾದ ದೈತ್ಯರು ಮತ್ತು ದಾನವರಿಂದ ನನ್ನ ಪುತ್ರರ ತ್ರಿಭುವನ ರಾಜ್ಯವು ಅಪಹರಿಸಲ್ಪಟ್ಟಿತು. ಮತ್ತು ಯಜ್ಞಭಾಗಗಳು ನನ್ನ ಪುತ್ರರಿಗಿಲ್ಲದ ಹಾಗೆ ಅವರಿಂದ ಕಿತ್ತುಕೊಳ್ಳಲ್ಪಟ್ಟವೆ.

೫. ರಶ್ಮಿಮಾಲೆಯಿಂದ ರಾಜಿಸುವ ಸ್ವಾಮಿಯೆ ! ಈ ಕಾರಣದಿಂದ ನೀನು ನನ್ನಲ್ಲಿ ಅನುಗ್ರಹಮಾಡಬೇಕು. ನೀನು ನಿನ್ನ ಅಂಶದಿಂದ ದೈತ್ಯ-ದಾನವರಿಗೆ ಭ್ರಾತೃವಾಗಿ ಅವತರಿಸಿ ದೇವಶತ್ರುಗಳನ್ನು ನಾಶಮಾಡು.

೬. ಸೂರ್ಯದೇವನೇ ! ನನ್ನ ಪುತ್ರರು ಮತ್ತೆ ಯಜ್ಞಭಾಗಗಳನ್ನು ಭುಂಜಿಸುವವರೂ, ಮೂರು ಲೋಕಗಳಿಗೆ ಅಧಿಪತಿಗಳೂ ಆಗುವ ಹಾಗೆ ನೀನು ಉಪಕಾರಮಾಡಬೇಕು.

ತಥಾನುಕಮ್ಪಾಂ ಪುತ್ರಾಣಾಂ ಸುಪ್ರಸನ್ನೋ ರವೇ ಮಮ ।
ಕುರು ಪ್ರಪನ್ನಾರ್ತಿಹರ ಸ್ಥಿತಿಕರ್ತಾ ತ್ವಮುಚ್ಯಸೇ ॥೭॥

ಮಾರ್ಕಣ್ಡೇಯ ಉವಾಚ :—

ತತಸ್ತಾಮಾಹ ಭಗವಾನ್ಭಾಸ್ಕರೋ ವಾರಿತಸ್ಕರಃ ।
ಪ್ರಣತಾಮದಿತಿಂ ವಿಪ್ರ ಪ್ರಸಾದಸುಮುಖೋ ವಿಭುಃ ॥೮॥

ಸಹಸ್ರಾಂಶೇನ ತೇ ಗರ್ಭೇ ಸಮ್ಭೂಯಾಹಮಶೇಷತಃ ।
ತತ್ಪುತ್ರಶತ್ರೂನದಿತೇ ನಾಶಯಾಮ್ಯಾಶು ನಿರ್ವೃತಃ ॥೯॥

ಇತ್ಯುಕ್ತ್ವಾ ಭಗವಾನ್ಭಾಸ್ವಾನನ್ತರ್ಧಾನಮುಪಾಗಮತ್ ।
ನಿವೃತ್ತಾ ಸಾಪಿ ತಪಸಃ ಸಮ್ಪ್ರಾಪ್ತಾಖಿಲವಾಞ್ಛಿತಾ ॥೧೦॥

---

೭. ಶರಣಾಗತ ಜನರ ಸಂಕಟವನ್ನು ಪರಿಹರಿಸುವ ಸೂರ್ಯದೇವನೇ! ನನ್ನಲ್ಲಿ ಪ್ರಸನ್ನನಾದ ನೀನು ನನ್ನ ಪುತ್ರರಲ್ಲಿ ಹೀಗೆ ದಯೆತೋರುವವನಾಗಬೇಕು. ನೀನು ರಕ್ಷಕನೆಂದು ಕರೆಯಲ್ಪಡುವವನಲ್ಲವೇ !

ಮಾರ್ಕಂಡೇಯ ಮುನಿಯು ಹೇಳಿದನು :—

೮. ವಿಪ್ರರ್ಷಿಯಾದ ಕ್ರೌಷ್ಟುಕಿಯೇ ! ತರುವಾಯ ಅಖಂಡೈಶ್ವರ್ಯವಂತನೂ, ಜಲವನ್ನು ಶೋಷಣಮಾಡುವವನೂ ಮತ್ತು ಸರ್ವವ್ಯಾಪಕನೂ ಆದ ಸೂರ್ಯದೇವನು ಅನುಗ್ರಹಮಯವಾದ ದೃಷ್ಟಿಯುಳ್ಳವನಾಗಿ ನಮಸ್ಕಾರಮಾಡಿಕೊಂಡಿದ್ದ ಅದಿತಿದೇವಿಗೆ ಹೀಗೆಂದನು.

೯. ಅದಿತಿಯೇ ! ನಾನು ನನ್ನ ಸಹಸ್ರದಲ್ಲಿ ಒಂದು ಅಂಶದಿಂದ ನಿನ್ನ ಗರ್ಭದಲ್ಲಿ ಜನ್ಮವೆತ್ತಿ ಶ್ರಮವಿಲ್ಲದವನಾಗಿ ನಿನ್ನ ಪುತ್ರರ ಶತ್ರುಗಳನ್ನು ಸಂಪೂರ್ಣವಾಗಿ ನಾಶಮಾಡುವೆನು. ನೀನು ದುಃಖಿಸಬೇಡ.

೧೦. ಪೂಜ್ಯನಾದ ಸೂರ್ಯದೇವನು ಹೀಗೆಂದು ಹೇಳಿ ಅಲ್ಲಿಯೇ ಅಂತರ್ಧಾನವನ್ನು ಹೊಂದಿದನು. ಇತ್ತ ಅದಿತಿದೇವಿಯು ಪೂರ್ತಿಗೊಂಡ ತನ್ನ ಸಕಲ ಇಷ್ಟವುಳ್ಳವಳಾಗಿ ತಪಶ್ಚರ್ಯೆಯನ್ನು ಮುಗಿಸಿದಳು.

ತತೋ ರಶ್ಮಿಸಹಸ್ರಾತ್ತು ಸೌಷುಮ್ನಾಖ್ಯೋ ರವೇಃ ಕರಃ ।
ವಿಪ್ರಾವತಾರಂ ಸಞ್ಚಕ್ರೇ ದೇವಮಾತುರಥೋದರೇ ॥೧೧॥

ಕೃಚ್ಛ್ರಚಾನ್ದ್ರಾಯಣಾದೀನಿ ಸಾ ಚ ಚಕ್ರೇ ಸಮಾಹಿತಾ ।
ಶುಚಿಃ ಸನ್ಧಾರಯಾಮಾಸ ದಿವ್ಯಂ ಗರ್ಭಮಿತಿ ದ್ವಿಜ ॥೧೨॥

ತತಸ್ತಾಂ ಕಶ್ಯಪಃ ಪ್ರಾಹ ಕಿಞ್ಚಿತ್ಕೋಪಪ್ಲುತಾಕ್ಷರಮ್ ।
ಕಿಂ ಮಾರಯಸಿ ಗರ್ಭಾಣ್ಡಮಿತಿ ನಿತ್ಯೋಪವಾಸಿನೀ ॥೧೩॥

ಸಾ ಚ ತಂ ಪ್ರಾಹ ಗರ್ಭಾಣ್ಡಮೇತತ್ಪಶ್ಯೇತಿ ಕೋಪನಾ ।
ನ ಮಾರಿತಂ ವಿಪಕ್ಷಾಣಾಂ ಮೃತ್ಯವೇ ತದ್ಭವಿಷ್ಯತಿ ॥೧೪॥

---

೧೧. ವಿಪ್ರರ್ಷಿಯೆ ! ತರುವಾಯ ಸೂರ್ಯದೇವನ ಸಹಸ್ರ ರಶ್ಮಿಗಳಲ್ಲಿ ಒಂದಾದ ಸೌಷುಮ್ನ ಎಂಬ ಕಿರಣವು ದೇವತೆಗಳ ಜನನಿಯಾದ ಅದಿತಿದೇವಿಯ ಉದರದಲ್ಲಿ ಗರ್ಭರೂಪದಿಂದ ಅವತರಿಸಿತು.

೧೨. ದ್ವಿಜೋತ್ತಮನೇ ! ಆಗ ಅದಿತಿದೇವಿಯು ತನ್ನ ಉದರದಲ್ಲಿರುವುದು ದೇವಗರ್ಭವೆಂದು ತಿಳಿದು ಕೃಚ್ಛ್ರ-ಚಾಂದ್ರಾಯಣ ಮುಂತಾದ ವ್ರತಗಳ ಉಪವಾಸದಿಂದ ಸಮಾಧಾನಚಿತ್ತಳೂ ಪರಿಶುದ್ಧಳೂ ಆಗಿ ಗರ್ಭವನ್ನು ಧರಿಸಿದಳು.

೧೩. ಆಗ ಕಶ್ಯಪಮುನಿಯು ಅದಿತಿಯಲ್ಲಿ ಉಂಟಾದ ಕೋಪಾವೇಶದಿಂದ ಸ್ವಲ್ಪತೊದಲಿದ ವಚನದಿಂದ ಅವಳನ್ನು ಹೀಗೆಂದು ಆಕ್ಷೇಪಿಸಿದನು. ನೀನು ಹೀಗೆ ನಿತ್ಯೋಪವಾಸವನ್ನು ಮಾಡಿ ಗರ್ಭದ ಅಂಡವನ್ನು ಏಕೆ ಕೊಲ್ಲುತ್ತಿಯೆ ? ಎಂದನು.

೧೪. ಆಗ ಅದಿತಿಯು ಕೋಪಗೊಂಡವಳಾಗಿ "ಇಗೊ ! ಗರ್ಭಾಂಡವನ್ನು ನೀನು ನೋಡು. ನಾನು ಅದನ್ನು ಕೊಲ್ಲುವುದಿಲ್ಲ. ಈ ಗರ್ಭಾಂಡವು ಶತ್ರುಗಳ ಸಂಹಾರಕ್ಕೆ ಸಾಧನವಾಗುವುದು ಎಂದು ಪ್ರತ್ಯುತ್ತರ ಹೇಳಿದಳು.

ಮಾರ್ಕಣ್ಡೇಯ ಉವಾಚ :—

ಇತ್ಯುಕ್ತ್ವಾ ತಂ ತದಾ ಗರ್ಭಮುತ್ಸಸರ್ಜ ಸುರಾರಣಿಃ ।
ಜಾಜ್ವಲ್ಯಮಾನಂ ತೇಜೋಭಿಃ ಪತ್ಯುರ್ವಚನಕೋಪಿತಾ ॥೧೫॥

ತಂ ದೃಷ್ಟ್ವಾ ಕಶ್ಯಪೋ ಗರ್ಭಮುದ್ಯದ್ಭಾಸ್ಕರವರ್ಚಸಮ್ ।
ತುಷ್ಟಾವ ಪ್ರಣತೋ ಭೂತ್ವಾ ಋಗ್ಭಿರಾದ್ಯಾಭಿರಾದರಾತ್ ॥೧೬॥

ಸಂಸ್ತೂಯಮಾನಃ ಸ ತದಾ ಗರ್ಭಾಣ್ಡಾತ್ಪ್ರಕಟೋಽಭವತ್ ।
ಪದ್ಮಪತ್ರಸವರ್ಣಾಭಸ್ತೇಜಸಾ ವ್ಯಾಪ್ತದಿಙ್ಮುಖಃ ॥೧೭॥

ಅಥಾನ್ತರಿಕ್ಷಾದಾಭಾಷ್ಯ ಕಶ್ಯಪಂ ಮುನಿಸತ್ತಮಮ್ ।
ಸತೋಯಮೇಘಗಮ್ಭೀರವಾಗುವಾಚಾಶರೀರಿಣೀ ॥೧೮॥

ಮಾರ್ಕಂಡೇಯ ಮುನಿಯು ಹೇಳಿದನು :—

೧೫. ದೇವತೆಗಳ ಮಾತೆಯಾದ ಅದಿತಿಯು ಹೀಗೆಂದು ಹೇಳಿ ಪತಿಯ ವಚನದಿಂದ ಕೋಪಗೊಂಡವಳಾಗಿ ತೇಜಃಪುಂಜದಿಂದ ಜ್ವಲಿಸುವಂತಿದ್ದ ಆ ಗರ್ಭಾಂಡವನ್ನು ಪ್ರಸವಿಸಿದಳು.

೧೬. ಅನಂತರ ಕಶ್ಯಪಮುನಿಯು ಉದಯಿಸುತ್ತಿದ್ದ ಸೂರ್ಯನಂತೆ ಪ್ರಭೆಯುಳ್ಳ ಆ ಗರ್ಭಾಂಡವನ್ನು ನೋಡಿ ನಮಸ್ಕಾರಮಾಡಿಕೊಂಡು ಆದರದಿಂದ ಋಙ್ಮಂತ್ರಗಳನ್ನು ಪಠಿಸುತ್ತ ಸ್ತುತಿಮಾಡಿದನು.

೧೭. ಆಗ ಸ್ತುತಿಸಲ್ಪಡುತ್ತಿದ್ದ ಸೂರ್ಯದೇವನು ಕಮಲದಳದಂತೆ ಸುಂದರವಾದ ಕಾಂತಿಯುಳ್ಳವನೂ, ಪ್ರಭೆಯಿಂದ ದಿಕ್ಕುಗಳನ್ನು ವ್ಯಾಪಿಸಿದವನೂ ಆಗಿ ಆ ಗರ್ಭಾಂಡದಿಂದ ಪ್ರಕಾಶವಾಗಿ ಬಂದನು.

೧೮. ತರುವಾಯ ನೀರಿನಿಂದ ಪೂರ್ಣವಾದ ಮೇಘದ ಗರ್ಜನದಂತೆ ಗಂಭೀರಧ್ವನಿಯುಳ್ಳ ಆಕಾಶವಾಣಿಯು ಮುನಿಶ್ರೇಷ್ಠನಾದ ಕಶ್ಯಪಮುನಿಯನ್ನು ಕುರಿತು ಆಕಾಶದಿಂದ ಹೀಗೆ ಹೇಳಿತು.

ಮಾರಿತಂ ತೇ ಯತಃ ಪ್ರೋಕ್ತಮೇತದಣ್ಡಂ ತ್ವಯಾ ಮುನೇ ।
ತಸ್ಮಾನ್ಮುನೇ ಸುತಸ್ತೇಽಯಂ ಮಾರ್ತಣ್ಡಾಖ್ಯೋ ಭವಿಷ್ಯತಿ ॥೧೯॥

ಸೂರ್ಯಾಧಿಕಾರಂ ಚ ವಿಭುರ್ಜಗತ್ಯೇಷ ಕರಿಷ್ಯತಿ ।
ಹನಿಷ್ಯತ್ಯಸುರಾಂಶ್ಚಾಯಂ ಯಜ್ಞಭಾಗಹರಾನರೀನ್ ॥೨೦॥

ದೇವಾ ನಿಶಮ್ಯೇತಿ ವಚೋ ಗಗನಾತ್ಸಮುಪಾಗಮನ್ ।
ಪ್ರಹರ್ಷಮತುಲಂ ಯಾತಾ ದಾನವಾಶ್ಚ ಹೃತೌಜಸಃ ॥೨೧॥

ತತೋ ಯುದ್ಧಾಯ ದೈತೇಯಾನಾಜುಹಾವ ಶತಕ್ರತುಃ ।
ಸಹ ದೇವೈರ್ಮುದಾ ಯುಕ್ತೋ ದಾನವಾಶ್ಚ ಸಮಭ್ಯಯುಃ ॥೨೨॥

---

೧೯. ಕಶ್ಯಪಮುನಿಯೇ! "ಹೀಗೇಕೆ ಇದನ್ನು ಕೊಲ್ಲುತ್ತೀಯೆ?" ಎಂದು ಹೇಳಿದ ನೀನು ಈ ಗರ್ಭಾಂಡವನ್ನು ಕೊಲ್ಲಲ್ಪಡುವಂತೆ ಹೇಳಿದ್ದೀಯೆ. ಮುನಿಯೆ! ಆ ಕಾರಣದಿಂದ ನಿನಗೆ ಜನಿಸಿದ ಈ ಪುತ್ರನು ಮೃತವಾದ ಅಂಡದಿಂದ ಜನಿಸಿದವನು ಎಂಬ ಅರ್ಥದಿಂದ ಕೂಡಿದ ಮಾರ್ತಂಡ ಎಂಬ ನಾಮಾಂಕನವನ್ನು ಹೊಂದುವನು.

೨೦. ಸರ್ವಶಕ್ತನಾದ ನಿನ್ನ ಪುತ್ರನು ಜಗತ್ತಿನಲ್ಲಿ ಸೂರ್ಯಪದದ ಅಧಿಕಾರವನ್ನು ನೆರವೇರಿಸುವನು. ಮತ್ತು ದೇವತೆಗಳ ಯಜ್ಞಭಾಗವನ್ನು ಅಪಹರಿಸಿದ ಶತ್ರುಗಳಾದ ಅಸುರರನ್ನು ಸಂಹರಿಸುವನು.

೨೧. ದೇವತೆಗಳು ಈ ವಚನವನ್ನು ಕೇಳಿದ ಕೂಡಲೆ ಆಕಾಶದಿಂದ ಬಂದು ಸೇರಿದರು. ಮತ್ತು ಅಧಿಕವಾದ ಆನಂದವನ್ನು ಹೊಂದಿದರು. ದಾನವರು ಕ್ಷಯಿಸಿದ ಬಲವುಳ್ಳವರಾದರು.

೨೨. ತರುವಾಯ ದೇವೇಂದ್ರನು ಸಂತೋಷದಿಂದ ಕೂಡಿದವನಾಗಿ ದೇವತೆಗಳೊಡನೆ ಸೇರಿ ದೈತ್ಯ-ದಾನವರನ್ನು ಯುದ್ಧಕ್ಕೆ ಕರೆದನು. ರಾಕ್ಷಸರು ಮದಿಸಿ ಯುದ್ಧಕ್ಕೆ ಬಂದರು.

ತೇಷಾಂ ಯುದ್ಧಮಭೂದ್ಘೋರಂ ದೇವಾನಾಮಸುರೈಃ ಸಹ ।
ಶಸ್ತ್ರಾಸ್ತ್ರದೀಪ್ತಿಸನ್ದೀಪ್ತಂ ಸಮಸ್ತಭುವನಾನ್ತರಮ್ ॥೨೩॥

ತಸ್ಮಿನ್ಯುದ್ಧೇ ಭಗವತಾ ಮಾರ್ತಣ್ಡೇನ ನಿರೀಕ್ಷಿತಾಃ ।
ತೇಜಸಾ ದಹ್ಯಮಾನಾಸ್ತೇ ಭಸ್ಮೀಭೂತಾ ಮಹಾಸುರಾಃ ॥೨೪॥

ತತಃ ಪ್ರಹರ್ಷಮತುಲಂ ಪ್ರಾಪ್ತಾಃ ಸರ್ವೇ ದಿವೌಕಸಃ ।
ತುಷ್ಟುವುಸ್ತೇಜಸಾಂ ಯೋನಿಂ ಮಾರ್ತಣ್ಡಮದಿತಿಂ ತಥಾ ॥೨೫॥

ಸ್ವಾಧಿಕಾರಾಂಸ್ತಥಾ ಪ್ರಾಪ್ತಾ ಯಜ್ಞಭಾಗಾಂಶ್ಚ ಪೂರ್ವವತ್ ।
ಭಗವಾನಪಿ ಮಾರ್ತಣ್ಡಃ ಸ್ವಾಧಿಕಾರಮಥಾಕರೋತ್ ॥೨೬॥

---

೨೩. ಆಗ ದೇವತೆಗಳಿಗೆ ಆ ಅಸುರರೊಡನೆ ಘೋರವಾದ ಸಂಗ್ರಾಮವು ಜರುಗಿತು. ಆ ಘೋರಯುದ್ಧದಿಂದ ಸಮಸ್ತ ಭುವನ ಭಾಗವು ಶಸ್ತ್ರ-ಅಸ್ತ್ರಗಳ ಪ್ರಭೆಯಿಂದ ಜ್ವಲಿಸುವಂತೆ ಇತ್ತು.

೨೪. ಆ ಕದನದಲ್ಲಿ ಷಡ್ಗುಣೈಶ್ವರ್ಯಸಂಪನ್ನನಾದ ಸೂರ್ಯನಿಂದ ನೋಡಲ್ಪಟ್ಟಿರುವ ಮಹಾದೈತ್ಯ-ದಾನವರು ಆ ತೇಜಸ್ಸಿನಿಂದ ದಹಿಸಲ್ಪಟ್ಟು ಭಸ್ಮವಾಗಿಹೋದರು.

೨೫. ಅನಂತರ ಸಮಸ್ತ ದೇವತೆಗಳು ನಿರುಪಮವಾದ ಹರ್ಷವನ್ನು ಹೊಂದಿದರು. ಮತ್ತು ತೇಜಸ್ಸುಗಳಿಗೆ ನಿಧಿಯಾದ ಸೂರ್ಯದೇವನನ್ನೂ ಹಾಗು ಅದಿತಿದೇವಿಯನ್ನೂ ಸ್ತುತಿಮಾಡಿದರು.

೨೬. ತರುವಾಯ ದೇವತೆಗಳು ತಮ್ಮ ತಮ್ಮ ಅಧಿಕಾರಗಳನ್ನೂ ಮತ್ತು ಯಜ್ಞಭಾಗಗಳನ್ನೂ ಮತ್ತೆ ಹೊಂದಿದರು. ಪೂಜ್ಯನಾದ ಸೂರ್ಯದೇವನು ತನ್ನ ಅಧಿಕಾರವನ್ನು ನಡೆಸಿದನು.

ಕದಮ್ಬಪುಷ್ಪವದ್ಭಾಸ್ವಾನಧಶ್ಚೋರ್ಧ್ವಂ ಚ ರಶ್ಮಿಭಿಃ ।
ವೃತ್ತಾಗ್ನಿಪಿಣ್ಡಸದೃಶೋ ದಧ್ರೇ ನಾತಿಸ್ಫುರದ್ವಪುಃ ॥೨೭॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಮಾರ್ತಣ್ಡೋತ್ಪತ್ತಿರ್ನಾಮ ದ್ವ್ಯಧಿಕಶತತಮೋಽಧ್ಯಾಯಃ

---

೨೭. ಆಗ ಸೂರ್ಯದೇವನು ಈಚಲು ಹೂಗಳಂತೆ ಮೇಲೆ-ಕೆಳಗೆ ಎಲ್ಲ ಭಾಗಗಳಲ್ಲಿಯೂ ತನ್ನ ರಶ್ಮಿಗಳಿಂದ ವ್ಯಾಪಿಸಿದನು. ಗುಂಡಗಿರುವ ಅಗ್ನಿಪುಂಜಕ್ಕೆ ಸದೃಶನಾಗಿ ಅತಿಯಾಗಿ ಸ್ಫುರಿಸದಿರುವ ಮೂರ್ತಿಯನ್ನು ಧರಿಸಿದನು.

ಮಾರ್ಕಂಡೇಯ ಮಹಾಪುರಾಣದಲ್ಲಿ ನೂರೆರಡನೆಯ
ಅಧ್ಯಾಯವು ಮುಗಿದುದು.

॥ ಓಂ ಶ್ರೀ ದುರ್ಗಾಯೈ ನಮಃ ॥

ಮಾರ್ಕಂಡೇಯ ಪುರಾಣಂ

ತ್ರ್ಯತ್ರಿಂಶತತಮೋಽಧ್ಯಾಯಃ

(ಭಾನುತನುವಿಲೇಖನಮ್)

ಮಾರ್ಕಣ್ಡೇಯ ಉವಾಚ :—

ಅಥ ತಸ್ಮೈ ದದೌ ಕನ್ಯಾಂ ಸಞ್ಜ್ಞಾಂ ನಾಮ ವಿವಸ್ವತೇ ।
ಪ್ರಸಾದ್ಯ ಪ್ರಣತೋ ಭೂತ್ವಾ ವಿಶ್ವಕರ್ಮಾ ಪ್ರಜಾಪತಿಃ ॥೧॥

ವೈವಸ್ವತಸ್ತು ಸಮುದ್ಭೂತೋ ಮನುಸ್ತಸ್ಯಾಂ ವಿವಸ್ವತಃ ।
ಪೂರ್ವಮೇವ ತಥಾಖ್ಯಾತಂ ತತ್ಸ್ವರೂಪಂ ವಿಶೇಷತಃ ॥೨॥

ನೂರಮೂರನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಹೇಳಿದನು :—

೧. ತರುವಾಯ ವಿಶ್ವಕರ್ಮ ಪ್ರಜಾಪತಿಯು ಸೂರ್ಯದೇವನಿಗೆ ನಮಸ್ಕಾರಮಾಡಿ ಒಲಿಸಿಕೊಂಡು ಸಂಜ್ಞಾ ಎಂಬ ನಾಮಾಂಕಿತಳಾದ ತನ್ನ ಕನ್ಯೆಯನ್ನು ಅವನಿಗೆ ಕೊಟ್ಟನು.

೨. ಸೂರ್ಯದೇವನ ಪತ್ನಿಯಾದ ಸಂಜ್ಞಾದೇವಿಯಲ್ಲಿ ವೈವಸ್ವತ ಎಂಬ ಮನುವು ಪುತ್ರನಾಗಿ ಜನಿಸಿದನು. ವೈವಸ್ವತ ಮನುರಾಜನ ಚರಿತ್ರೆಯು ವಿಶೇಷವಾಗಿ ಹಿಂದೆ ನನ್ನಿಂದ ಹೇಳಲ್ಪಟ್ಟಿರುವುದು.

ಕ್ರೌಷ್ಟುಕಿರುವಾಚ :—

ಚರಿತಂ ಘ್ನನ್ತಿ ಯತ್ಪಾಪಂ ಕಲೌ ಸಂಶೃಣ್ವತಾಂ ನೃಣಾಮ್ ॥೩॥

ಮಾರ್ಕಣ್ಡೇಯ ಉವಾಚ :—

ತ್ರೀಣ್ಯಪತ್ಯಾನ್ಯಸೌ ತಸ್ಯಾಂ ಜನಯಾಮಾಸ ಗೋಪತಿಃ ।
ದ್ವೌ ಪುತ್ರೌ ಸುಮಹಾಭಾಗೌ ಕನ್ಯಾಂ ಚ ಯಮುನಾಂ ಮುನೇ॥೪॥

ಮನುರ್ವೈವಸ್ವತೋ ಜ್ಯೇಷ್ಠಃ ಶ್ರಾದ್ಧದೇವಃ ಪ್ರಜಾಪತಿಃ ।
ತತೋ ಯಮೋ ಯಮೀ ಚೈವ ಯಮಲೌ ಸಮ್ಬಭೂವತುಃ ॥೫॥

ಯತ್ತೇಜೋಽಭ್ಯಧಿಕಂ ತಸ್ಯ ಮಾರ್ತಣ್ಡಸ್ಯ ವಿವಸ್ವತಃ ।
ತೇನಾತಿತಾಪಯಾಮಾಸ ತ್ರೀಂಲ್ಲೋಕಾನ್ ಸಚರಾಚರಾನ್ ॥೬॥

ಕ್ರೌಷ್ಟುಕಿಯು ಹೀಗೆಂದನು :—

೩. ಮಹಾತ್ಮನಾದ ಸೂರ್ಯದೇವನ ಆ ಚರಿತ್ರೆಯನ್ನು ಮತ್ತೆ ಕೇಳಬೇಕೆಂದು ಇಷ್ಟಪಡುತ್ತೇನೆ. ಕಲಿಯುಗದಲ್ಲಿ ಆ ಚರಿತ್ರೆಯನ್ನು ಕೇಳಿದ ಮಾನವರಿಗೆ ಪಾಪವೆಲ್ಲವೂ ನಾಶವಾಗುವುದು.

ಮಾರ್ಕಂಡೇಯ ಮುನಿಯು ಹೇಳಿದನು :—

೪. ಕ್ರೌಷ್ಟುಕಿ ಮುನಿಯೇ ! ಕಿರಣಮಾಲಿಯಾದ ಸೂರ್ಯನಿಗೆ ತನ್ನ ಪತ್ನಿಯಾದ ಸಂಜ್ಞಾದೇವಿಯಲ್ಲಿ ಮಹಾಭಾಗ್ಯವಂತರಾದ ಇಬ್ಬರು ಪುತ್ರರು ಮತ್ತು ಯಮುನಾ ಎಂಬ ಒಬ್ಬಳು ಕನ್ಯೆ—ಹೀಗೆ ಮೂರು ಮಂದಿ ಜನಿಸಿದರು.

೫. ಅವರಲ್ಲಿ ಜ್ಯೇಷ್ಠನಾಗಿ ಜನಿಸಿದ ಪುತ್ರನು ವೈವಸ್ವತ ಮನುರಾಜನಾದನು. ಶ್ರಾದ್ಧದೇವನೆಂದೂ, ಪ್ರಜಾಪತಿಯೆಂದೂ ಪ್ರಖ್ಯಾತನಾದ ಯಮ ಮತ್ತು ಯಮೀ ಇವರಿಬ್ಬರು ಯಮಳರಾಗಿ ಜನ್ಮವೆತ್ತಿದರು.

೬. ಮಾರ್ತಂಡ ಎನಿಸಿದ ಸೂರ್ಯನಲ್ಲಿ ಯಾವ ತೇಜಸ್ಸು ಅತ್ಯಧಿಕವಾಗಿ ಬೆಳಗುತ್ತಿತ್ತೋ ಆ ತೇಜಸ್ಸಿನಿಂದ ಸೂರ್ಯನು ಚರ-ಅಚರಪ್ರಾಣಿಗಳಿಂದ ಕೂಡಿದ ಮೂರು ಲೋಕಗಳನ್ನು ಹೆಚ್ಚಾಗಿ ತಪಿಸಿದನು.

ಗೋಲಾಕಾರಸ್ತು ತದ್ದೃಷ್ಟ್ವಾ ಸಞ್ಜ್ಞಾ ರೂಪಂ ವಿವಸ್ವತಃ ।
ಅಸಹನ್ತೀ ಮಹತ್ತೇಜಃ ಸ್ವಾಂ ಛಾಯಾಂ ಪ್ರೇಕ್ಷ್ಯ ಸಾಬ್ರವೀತ್ ॥೭॥

ಸಞ್ಜ್ಞೋವಾಚ :—

ಅಹಂ ಯಾಸ್ಯಾಮಿ ಭದ್ರಂ ತೇ ಸ್ವಮೇವ ಭವನಂ ಪಿತುಃ ।
ನಿರ್ವಿಕಾರಂ ತ್ವಯಾಪ್ಯತ್ರ ಸ್ಥೇಯಂ ಮಚ್ಛಾಸನಾಚ್ಛುಭೇ ॥೮॥

ಇಮೌ ಚ ಬಾಲಕೌ ಮಹ್ಯಂ ಕನ್ಯಾ ಚ ವರವರ್ಣಿನೀ ।
ಸಮ್ಭಾವ್ಯಾ ನೈವ ಚಾಖ್ಯೇಯಮಿದಂ ಭಗವತೇ ತ್ವಯಾ ॥೯॥

ಛಾಯೋವಾಚ :—

ಆಕೇಶಗ್ರಹಣಾದ್ದೇವಿ ಆಶಾಪಾನ್ನೈವ ಕರ್ಹಿಚಿತ್ ।
ಆಖ್ಯಾಸ್ಯಾಮಿ ಮತಂ ತುಭ್ಯಂ ಗಮ್ಯತಾಂ ಯತ್ರವಾಞ್ಛಿತಮ್ ॥೧೦॥

---

೭. ಆಗ ಸಂಜ್ಞಾದೇವಿಯು ಪತಿಯಾದ ಸೂರ್ಯನ ಗೋಲಾಕಾರವಾದ ಉಗ್ರರೂಪವನ್ನು ನೋಡಿ ಅವರ ಮಹತ್ತಾದ ತೇಜಸ್ಸನ್ನು ಸಹಿಸದವಳಾಗಿ ತನ್ನ ಛಾಯಾಮೂರ್ತಿಯನ್ನು ನೋಡಿ ಹೀಗೆ ಹೇಳಿದಳು.

ಸಂಜ್ಞಾದೇವಿಯು ಹೀಗೆಂದಳು :—

೮. ಎಲೈ ಮಂಗಳಾಂಗಿಯೇ! ನಾನು ನನ್ನ ತಂದೆಯ ಮನೆಗೆ ಹೊರಟುಹೋಗುವೆನು. ನಿನಗೆ ಕಲ್ಯಾಣವಾಗಲಿ. ನನ್ನ ಶಾಸನದಂತೆ ನೀನು ಇಲ್ಲಿ ಯಾವ ವ್ಯತ್ಯಾಸವೂ ತೋರಿ ಬರದಂತೆ ಇರಬೇಕು.

೯. ಮತ್ತು ನನ್ನ ಬಾಲ್ಯಾವಸ್ಥೆಯಲ್ಲಿದ್ದ ಈ ಪುತ್ರರನ್ನೂ ಹಾಗು ರತ್ನಪ್ರಾಯಳಾದ ಈ ಕನ್ಯೆಯನ್ನೂ ನೀನು ಪ್ರೀತಿಯಿಂದ ನೋಡಿಕೊಂಡಿರಬೇಕು. ಈ ಸಮಾಚಾರವನ್ನು ನೀನು ಸೂರ್ಯದೇವನಿಗೆ ತಿಳಿಸಬಾರದು.

ಛಾಯಾದೇವಿಯು ಹೀಗೆಂದಳು :—

೧೦. ಸಂಜ್ಞಾದೇವಿಯೇ! ಮುಡಿಯನ್ನು ಹಿಡಿದೆಳೆಯುವ ಅಥವಾ ಶಪಿಸುವ ಪ್ರಸಂಗ ಬರುವವರೆಗೆ ಯಾವಾಗಲೂ ನಿನಗೋಸ್ಕರ ಈ ಸಮಾಚಾರ-ವನ್ನು ಯಾರಲ್ಲಿಯೂ ಹೇಳದೆ ಮರೆಮಾಚಿಕೊಂಡಿರುವೆನು. ನೀನು ನಿನ್ನ ಇಷ್ಟದಂತೆ ಹೋಗು.

ಇತ್ಯುಕ್ತಾ ಛಾಯಯಾ ಸಞ್ಜ್ಞಾ ಜಗಾಮ ಪಿತೃಮನ್ದಿರಮ್ ।
ತತ್ರಾವಸತ್ಪಿತುರ್ಗೇಹೇ ಕಂಚಿತ್ಕಾಲಂ ಶುಭೇಕ್ಷಣಾ ॥೧೧॥

ಭರ್ತುಃ ಸಮೀಪಂ ಯಾಹೀತಿ ಪಿತ್ರೋಕ್ತಾ ಸಾ ಪುನಃ ಪುನಃ ।
ಅಗಚ್ಛದ್ವಡವಾ ಭೂತ್ವಾ ಕುರೂನ್ಪ್ರೋತ್ತರಾಂಸ್ತತಃ ॥೧೨॥

ತತ್ರ ತೇಪೇ ತಪಃ ಸಾಧ್ವೀ ನಿರಾಹಾರಾ ಮಹಾಮುನೇ ॥೧೩॥

ಪಿತುಃ ಸಮೀಪಂ ಯಾತಾಯಾಃ ಸಞ್ಜ್ಞಾಯಾ ವಾಕ್ಯತತ್ಪರಾ ।
ತದ್ರೂಪಧಾರಿಣೀ ಛಾಯಾ ಭಾಸ್ಕರಂ ಸಮುಪಸ್ಥಿತಾ ॥೧೪॥

ತಸ್ಯಾಂ ಚ ಭಗವಾನ್ ಸೂರ್ಯಃ ಸಞ್ಜ್ಞೇಯಮಿತಿ ಚಿನ್ತಯನ್ ।
ತಥೈವ ಜನಯಾಮಾಸ ದ್ವೌ ಸುತೌ ಕನ್ಯಕಾಂ ತಥಾ ॥೧೫॥

---

೧೧. ಛಾಯಾದೇವಿಯು ಹೀಗೆಂದು ಹೇಳಿದಮೇಲೆ ಸುಂದರಾಕ್ಷಿಯಾದ ಸಂಜ್ಞೆಯು ತನ್ನ ತಂದೆಯ ಮನೆಗೆ ಹೊರಟುಹೋದಳು. ಆ ತಂದೆಯ ಮನೆಯಲ್ಲಿ ಕೆಲವು ಕಾಲ ಸುಖವಾಗಿ ವಾಸಮಾಡಿದಳು.

೧೨. ವಿಪ್ರನೇ ! ತರುವಾಯ "ನೀನು ಇನ್ನು ಪತಿಯ ಬಳಿಗೆ ಹೋಗು" ಎಂದು ತಂದೆಯಿಂದ ಮತ್ತೆ ಮತ್ತೆ ಬೋಧಿಸಲ್ಪಟ್ಟ ಸಂಜ್ಞಾದೇವಿಯು ಹೆಣ್ಣು ಕುದುರೆಯ ರೂಪವನ್ನು ಧರಿಸಿ ಅಲ್ಲಿಂದ ಉತ್ತರ ಕುರುಕ್ಷೇತ್ರಕ್ಕೆ ಹೋದಳು.

೧೩. ಕ್ರೌಷ್ಟುಕಿ ಮುನಿಯೇ ! ಆ ಸಂಜ್ಞಾದೇವಿಯು ಉತ್ತರ ಕುರುಕ್ಷೇತ್ರದಲ್ಲಿ ಪತಿವ್ರತಾನಿಯಮವತಿಯೂ, ತ್ಯಜಿಸಿದ ಆಹಾರವುಳ್ಳವಳೂ ಆಗಿ ತಪಸ್ಸನ್ನು ಮಾಡಿದಳು.

೧೪. ಹೀಗೆ ತಂದೆಯ ಮನೆಗೆ ಹೋದ ಸಂಜ್ಞಾದೇವಿಯ ಶಾಸನದಂತೆ ವರ್ತಿಸುತ್ತಿದ್ದ ಮತ್ತು ಸಂಜ್ಞಾದೇವಿಯ ರೂಪವನ್ನು ಧರಿಸಿದ ಛಾಯಾದೇವಿಯು ಸೂರ್ಯನನ್ನು ಸೇವಿಸಿಕೊಂಡಿದ್ದಳು.

೧೫. ಅಖಂಡೈಶ್ವರ್ಯವಂತನಾದ ಸೂರ್ಯದೇವನು ಸಂಜ್ಞಾದೇವಿಯೆಂದೇ ಭಾವಿಸಿ ಛಾಯಾದೇವಿಯಲ್ಲಿಯೂ ಹಾಗೆಯೆ ಪತಿಧರ್ಮದಿಂದ ವರ್ತಿಸಿಕೊಂಡಿದ್ದು ಇಬ್ಬರು ಪುತ್ರರನ್ನೂ ಒಬ್ಬಳು ಕನ್ಯೆಯನ್ನೂ ಹೊಂದಿದನು.

ಪೂರ್ವಜಸ್ಯ ಮನೋಸ್ತುಲ್ಯಃ ಸಾವರ್ಣಿಸ್ತೇನ ಸೋಽಭವತ್ ।
ಯಸ್ತಯೋಃ ಪ್ರಥಮಂ ಜಾತಃ ಪುತ್ರಯೋರ್ದ್ವಿಜಸತ್ತಮ ॥೧೬॥

ದ್ವಿತೀಯೋ ಯೋಽಭವಚ್ಚಾನ್ಯಃ ಸ ಗ್ರಹೋಽಭೂಚ್ಛನೈಶ್ಚರಃ ।
ಕನ್ಯಾಭೂತ್ತಪತೀ ಯಾ ತಾಂ ವವ್ರೇ ಸಂವರಣೋ ನೃಪಃ ॥೧೭॥

ಸಂಜ್ಞಾ ತು ಪಾರ್ಥಿವೀ ತೇಷಾಮಾತ್ಮಜಾನಾಂ ಯಥಾಕರೋತ್ ।
ಸ್ನೇಹಾನ್ನ ಪೂರ್ವಜಾತಾನಾಂ ತಥಾ ಕೃತವತೀ ಸತೀ ॥೧೮॥

ಮನುಸ್ತತ್ಕ್ಷಾಂತವಾಂಸ್ತಸ್ಯಾ ಯಮಶ್ಚಾಸ್ಯಾ ನ ಚಕ್ಷಮೇ ।
ಬಹುಶೋ ಯಾಚ್ಯಮಾನಸ್ತು ಪಿತುಃ ಪತ್ನ್ಯಾ ಸ ದುಃಖಿತಃ ॥೧೯॥

---

೧೬. ದ್ವಿಜೋತ್ತಮನೇ ! ಇಬ್ಬರು ಪುತ್ರರಲ್ಲಿ ಮೊದಲು ಜನ್ಮವೆತ್ತಿದ ಕುಮಾರನು ಹಿಂದೆ ಜನಿಸಿದ ವೈವಸ್ವತಮನುವಿಗೆ ತುಲ್ಯನಾದುದರಿಂದ ಸಾವರ್ಣಿ ಎಂಬ ಮನುವಾದನು.

೧೭. ಎರಡನೆಯವನಾಗಿ ಜನಿಸಿದ ಮತ್ತೊಬ್ಬ ಪುತ್ರನು ಶನೈಶ್ಚರನೆಂಬ ಗ್ರಹರೂಪಿಯಾದನು. ಮೂರನೆಯವಳಾದ ಕನ್ಯೆಯು ತಪತಿ ಎಂಬ ನಾಮಾಂಕಿತಳಾದಳು. ಅವಳನ್ನು ಸಂವರಣ ಎಂಬ ರಾಜನು ವರಿಸಿದನು.

೧೮. ಆಗ ಛಾಯಾರೂಪಳಾದ ಸಂಜ್ಞೆಯು ತನ್ನಲ್ಲಿ ಜನಿಸಿದ ಪುತ್ರರಿಗೆ ಯಾವ ರೀತಿಯಾಗಿ ಉಪಚಾರ ಮಾಡಿದಳೋ ಹಾಗೆ ಸ್ನೇಹದಿಂದ ಸಂಜ್ಞೆಯಲ್ಲಿ ಜನಿಸಿದ ಪುತ್ರರನ್ನು ಉಪಚರಿಸುತ್ತಿರಲಿಲ್ಲ.

೧೯. ಛಾಯಾದೇವಿಯ ಆ ಅಪಚಾರವನ್ನು ವೈವಸ್ವತ ಮನುವು ಸಹಿಸಿಕೊಂಡಿದ್ದನು. ಆದರೆ ಯಮನು ಮಾತ್ರ ಎಷ್ಟೇ ಹೇಳಿದರೂ ಪಿತೃವಿಗೆ ಪತ್ನಿಯಂತಿದ್ದ ಛಾಯಾದೇವಿಯಿಂದ ದುಃಖಗೊಂಡವನಾಗಿ ಆ ಅಪರಾಧವನ್ನು ಸಹಿಸಲಿಲ್ಲ.

ಸ ವೈ ಕೋಪಾಚ್ಚ ಬಾಲ್ಯಾಚ್ಚ ಭಾವಿನೋಽರ್ಥಸ್ಯ ವೈ ಬಲಾತ್ ।
ತದಾ ಸನ್ತರ್ಜಯಾಮಾಸ ಛಾಯಾಸಞ್ಜ್ಞಾಂ ಯಮೋ ಮುನೇ ॥೨೦॥

ತತಃ ಶಶಾಪ ಚ ಯಮಂ ಸಞ್ಜ್ಞಾ ಸಾಮರ್ಷಿಣೀ ಭೃಶಮ್ ॥೨೧॥

ಛಾಯೋವಾಚ :—

ಪದಾ ತರ್ಜಯಸೇ ಯಸ್ಮಾತ್ಪಿತೃಭಾರ್ಯಾಂ ಗರೀಯಸೀಮ್ ।
ತಸ್ಮಾತ್ತವೈಷ ಚರಣಃ ಪತಿಷ್ಯತಿ ನ ಸಂಶಯಃ ॥೨೨॥

ಯಮಸ್ತು ತೇನ ಶಾಪೇನ ಭೃಶಂ ಪೀಡಿತಮಾನಸಃ ।
ಮನುನಾ ಸಹ ಧರ್ಮಾತ್ಮಾ ಸರ್ವಂ ಪಿತ್ರೇ ನ್ಯವೇದಯತ್ ॥೨೩॥

---

೨೦. ಕ್ರೌಷ್ಟುಕಿ ಮುನಿಯೇ! ಆ ಯಮನು ಕೋಪದಿಂದಲೂ, ವಿವೇಕಶೂನ್ಯವಾದ ಬಾಲ್ಯಾವಸ್ಥೆಯಿಂದಲೂ ಮತ್ತು ಭವಿತವ್ಯತೆಯ ಅನಿವಾರ್ಯವಾದ ಬಲದಿಂದಲೂ ಛಾಯಾಸಂಜ್ಞಾದೇವಿಯನ್ನು ಕಾಲಿನಿನಿಂದ ಒದೆಯುವಂತೆ ಬೆದರಿಸಿದನು.

ಛಾಯಾದೇವಿಯು ಇಂತೆಂದಳು :—

೨೧. ಹೀಗೆ ಪುತ್ರನಂತಿರುವ ಯಮನು ತನ್ನನ್ನು ಕಾಲೆತ್ತಿ ಹೆದರಿಸಿದ ನಿಮಿತ್ತದಿಂದ ಅತಿಯಾಗಿ ಅಸಹನೆಗೊಂಡ ಛಾಯಾ ಸಂಜ್ಞಾದೇವಿಯು ಯಮನನ್ನು ಈ ರೀತಿಯಾಗಿ ಶಪಿಸಿದಳು.

೨೨. ಯಾವ ಕಾರಣ ನೀನು ಪೂಜ್ಯಳಾದ ಮತ್ತು ತಂದೆಯ ಧರ್ಮಚಾರಿಣಿಯಾದ ನನ್ನನ್ನು ಕಾಲೆತ್ತಿ ಬೆದರಿಸುತ್ತಿರುವೆಯೋ ಆ ಕಾರಣದಿಂದ ಮೇಲಕ್ಕೆ ಎತ್ತಿದ ಕಾಲು ಕೆಳಗೆ ಬೀಳುವುದು ; ಸಂದೇಹವಿಲ್ಲ.

೨೩. ತಾಯಿಯು ತನಗೆ ಕೊಟ್ಟ ಈ ಶಾಪದಿಂದ ಪೀಡಿಸಲ್ಪಟ್ಟ ಮಾನಸವುಳ್ಳ ಧರ್ಮಾತ್ಮನಾದ ಯಮನು ವೈವಸ್ವತ ಮನುವಿನೊಡನೆ ತಂದೆಯ ಬಳಿಗೆ ಹೋಗಿ ಎಲ್ಲ ಸಂಗತಿಯನ್ನು ತಂದೆಗೆ ತಿಳಿಸಿದನು.

ಯಮ ಉವಾಚ :—

ಸ್ನೇಹೇನ ತುಲ್ಯಮಸ್ಮಾಸು ಮಾತಾ ದೇವ ನ ವರ್ತತೇ ।
ವಿಸೃಜ್ಯ ಜ್ಯಾಯಸೋಽಪ್ಯಸ್ಮಾನ್ ಕನೀಯಾಂಸೌ ಬುಭೂರ್ಷತಿ ॥೨೪॥

ತಸ್ಯಾಂ ಮಯೋದ್ಯತಃ ಪಾದೋ ನ ತು ದೇಹೇ ನಿಪಾತಿತಃ ।
ಬಾಲ್ಯಾದ್ವಾ ಯದಿ ವಾ ಮೋಹಾತ್ತದ್ಭವಾನ್ ಕ್ಷನ್ತುಮರ್ಹತಿ ॥೨೫॥

ಶಪ್ತೋಽಹಂ ತಾತ ಕೋಪೇನ ಜನನ್ಯಾ ತನಯೋ ಯತಃ ।
ತತೋ ನ ಮನ್ಯೇ ಜನನೀಮಿಮಾಂ ವೈ ತಪತಾಂ ವರ ॥೨೬॥

ನಿರ್ಗುಣೇಷ್ವಪಿ ಪುತ್ರೇಷು ನ ಮಾತಾ ನಿರ್ಗುಣಾ ಪಿತಃ ।
ಪಾದಸ್ತೇ ಪತತಾಂ ಪುತ್ರ ಕಥಮೇತತ್ಪ್ರವಕ್ಷ್ಯತಿ ॥೨೭॥

ಯಮನು ಇಂತೆಂದನು :—

೨೪. ಸ್ವಾಮಿಯೇ ! ನಮ್ಮ ತಾಯಿಯು ನಮ್ಮಲ್ಲಿ ತುಲ್ಯವಾದ ಸ್ನೇಹದಿಂದ ವರ್ತಿಸುತ್ತ ಇಲ್ಲ. ಹಿರಿಯವರಾಗಿದ್ದ ನಮ್ಮನ್ನು ಅಸಡ್ಡೆಯಿಂದ ಬಿಟ್ಟು ಕಿರಿಯ ಪುತ್ರರನ್ನು ವಿಶೇಷವಾತ್ಸಲ್ಯದಿಂದ ಸಲಹುತ್ತಿರುವಳು.

೨೫. ಇದನ್ನು ಸಹಿಸಲಾಗದ ನನ್ನಿಂದ ಅವಳನ್ನು ಒದೆಯುವಂತೆ ಕಾಲು ಎತ್ತಲ್ಪಟ್ಟಿತು. ಆದರೆ ಅವಳ ದೇಹಕ್ಕೆ ತಗುಲಿಸಲ್ಪಡಲಿಲ್ಲ. ಬಾಲ್ಯಾವಸ್ಥೆ-ಯಿಂದಲೋ ಮೋಹದಿಂದಲೋ ನಡೆದ ನನ್ನ ಅಪರಾಧವನ್ನು ನೀನು ಕ್ಷಮಿಸ-ಬೇಕು.

೨೬. ತಪಿಸುವ ತೇಜಸ್ಸುಗಳಲ್ಲಿ ಶ್ರೇಷ್ಠನಾದ ಜನಕನೇ ! ಪುತ್ರನಂತಿದ್ದ ನಾನು ಜನನಿಯಂತಿದ್ದ ಈಕೆಯಿಂದ ಯಾವ ಕಾರಣ ಶಪಿಸಲ್ಪಟ್ಟಿರುವೆನೋ ಆ ಕಾರಣದಿಂದ ಇವಳನ್ನು ನಾನು ಜನನಿಯೆಂದು ತಿಳಿಯುವುದಿಲ್ಲ.

೨೭. ತಂದೆಯೇ ! ಗುಣಹೀನರಾದ ಪುತ್ರರ ವಿಷಯದಲ್ಲಿಯೂ ತಾಯಿಯು ಮಾತ್ರ ಗುಣಹೀನಳಾಗುವುದಿಲ್ಲ. “ಪುತ್ರನೇ! ನಿನ್ನ ಪಾದವು ಕೆಳಗೆ ಬೀಳಲಿ” ಹೀಗೆಂಬ ಶಾಪವಚನವನ್ನು ತಾಯಿಯು ಹೇಗೆ ಹೇಳುವಳು ?

ತವ ಪ್ರಸಾದಾಚ್ಚರಣೋ ನ ಪತೇದ್ಭಗವನ್ಯಥಾ ।
ಮಾತೃಶಾಪಾದಯಂ ಮೇಽದ್ಯ ತಥಾ ಚಿನ್ತಯ ಗೋಪತೇ ॥೨೮॥

ರವಿರುವಾಚ :—

ಅಸಂಶಯಮಿದಂ ಪುತ್ರ ಭವಿಷ್ಯತ್ಯತ್ರ ಕಾರಣಮ್ ।
ಯೇನ ತ್ವಾಮಾವಿಶತ್ಕ್ರೋಧೋ ಧರ್ಮಜ್ಞಂ ಸತ್ಯವಾದಿನಮ್॥೨೯॥

ಸರ್ವೇಷಾಮೇವ ಶಾಪಾನಾಂ ಪ್ರತಿಘಾತೋ ಹಿ ವಿದ್ಯತೇ ।
ನ ತು ಮಾತ್ರಾಭಿಶಪ್ತಾನಾಂ ಕ್ವಚಿಚ್ಛಾಪನಿವರ್ತನಮ್ ॥೩೦॥

ನ ಶಕ್ಯಮೇತನ್ಮಿಥ್ಯಾ ತು ಕರ್ತುಂ ಮಾತುರ್ವಚಸ್ತವ ।
ಕಿಂಚಿತ್ತವ ವಿಧಾಸ್ಯಾಮಿ ಪುತ್ರಸ್ನೇಹಾದನುಗ್ರಹಮ್ ॥೩೧॥

---

೨೮. ಅಖಂಡೈಶ್ವರ್ಯಸಂಪನ್ನನೇ! ರಶ್ಮಿಗಳಿಗೆ ಪತಿಯೆ! ಮಾತೃ-ಶಾಪಕ್ಕೆ ಗುರಿಯಾದ ನನ್ನ ಈ ಪಾದವು ನಿನ್ನ ಅನುಗ್ರಹವಿಶೇಷದಿಂದ ಹೇಗೆ ಬೀಳದಿರುವುದೋ ಹಾಗೆ ಉಪಾಯವನ್ನು ಚಿಂತಿಸು.

ಸೂರ್ಯದೇವನು ಹೀಗೆ ಹೇಳಿದನು :—

೨೯. ಪುತ್ರನೇ! ಹೀಗೆಲ್ಲ ನಡೆದಿರುವುದು ವಾಸ್ತವಾಂಶವು. ಸಂದೇಹ-ವಿಲ್ಲ. ಈ ವಿಷಯದಲ್ಲಿ ಕಾರಣವು ಇರುವುದು. ಅದರಿಂದ ಧರ್ಮವೇತ್ತನೂ, ಸತ್ಯವಾದಿಯೂ ಆದ ನಿನ್ನಲ್ಲಿ ಕೋಪವು ಆವೇಶಿಸಿತು.

೩೦. ಲೋಕದಲ್ಲಿ ಸಮಸ್ತಶಾಪಗಳಿಗೆ ಕೂಡ ನಿವಾರಣೋಪಾಯವು ಸುಲಭವಾಗಿ ಇರುವುದು. ಆದರೆ ಮಾತೃಶಾಪಕ್ಕೆ ಗುರಿಯಾದವರಿಗೆ ಮಾತ್ರ ಆ ಶಾಪವನ್ನು ನಿವೃತ್ತಿಗೊಳಿಸುವ ಯಾವುದೊಂದು ಉಪಾಯವೂ ಎಲ್ಲಿಯೂ ಇಲ್ಲ.

೩೧. ನಿನ್ನ ತಾಯಿಯ ಈ ಶಾಪವಚನವನ್ನು ಸುಳ್ಳನ್ನಾಗಿ ಮಾಡುವುದು ಶಕ್ಯವಲ್ಲ. ಆದರೆ ನಿನ್ನಲ್ಲಿರುವ ಪುತ್ರವಾತ್ಸಲ್ಯದಿಂದ ನಿನ್ನ ಶಾಪವನ್ನು ಸಂಕೋಚ ಮಾಡುವ ಒಂದು ಬಗೆಯ ಅನುಗ್ರಹವನ್ನು ಮಾಡುವೆನು.

ಕೃಮಯೋ ಮಾಂಸಮಾದಾಯ ಪ್ರಯಾಸ್ಯನ್ತಿ ಮಹೀತಲಮ್ ।
ಕೃತಂ ತಸ್ಯಾ ವಚಃ ಸತ್ಯಂ ತ್ವಂ ಚ ತ್ರಾತೋ ಭವಿಷ್ಯಸಿ ॥೩೨॥

ಮಾರ್ಕಣ್ಡೇಯ ಉವಾಚ :—

ಆದಿತ್ಯಸ್ತ್ವಬ್ರವೀಚ್ಛಾಯಾಂ ಕಿಮರ್ಥಂ ತನಯೇಷು ವೈ ।
ತುಲ್ಯೇಷ್ವಪ್ಯಧಿಕಃ ಸ್ನೇಹ ಏಕತ್ರ ಕ್ರಿಯತೇ ತ್ವಯಾ ॥೩೩॥

ನೂನಂ ನೈಷಾಂ ತ್ವಂ ಜನನೀ ಸಞ್ಜ್ಞಾ ಕಾಪಿ ತ್ವಮಾಗತಾ ।
ವಿಗುಣೇಷ್ವಪ್ಯಪತ್ಯೇಷು ಕಥಂ ಮಾತಾ ಶಪೇತ್ಸುತಮ್ ॥೩೪॥

ಮಾರ್ಕಣ್ಡೇಯ ಉವಾಚ :—

ಸಾ ತತ್ಪರಿಹರನ್ತೀ ಚ ನಾಚಚಕ್ಷೇ ವಿವಸ್ವತಃ ।
ಸ ಚಾತ್ಮಾನಂ ಸಮಾಧಾಯ ಯುಕ್ತಸ್ತತ್ತ್ವಮಪಶ್ಯತ ॥೩೫॥

---

೩೨. ನಿನ್ನ ಪಾದದಿಂದ ಮಾಂಸವನ್ನು ತಿಂದುಕೊಂಡು ಕ್ರಿಮಿಗಳು ನೆಲಕ್ಕೆ ಬೀಳುವುವು. ಅದರಿಂದ ನಿನ್ನ ತಾಯಿಯ ಶಾಪವಚನವು ಸತ್ಯವಾದಂತೆ ಆಗುವುದು. ನೀನು ಕೂಡ ಶಾಪಭಯದಿಂದ ರಕ್ಷಿತನಾಗುತ್ತೀಯೆ.

ಮಾರ್ಕಂಡೇಯ ಮುನಿಯು ಇಂತೆಂದನು :—

೩೩. ತರುವಾಯ ಸೂರ್ಯದೇವನು ಛಾಯೆಯನ್ನು ಕರೆದು ಹೇಳಿದನು—ತಾಯಿಗೆ ಪುತ್ರರೆಲ್ಲರೂ ತುಲ್ಯರಾಗಿದ್ದರೂ ನಿನ್ನಿಂದ ಪುತ್ರರ ಒಂದು ಗುಂಪಿನಲ್ಲಿ ಮಾತ್ರ ಅಧಿಕವಾದ ಸ್ನೇಹವು ಏಕೆ ತೋರಿಸಲ್ಪಡುವುದು ?

೩೪. ನೀನು ನಿಜವಾಗಿ ಇವರ ಜನನಿಯಾದ ಸಂಜ್ಞಾದೇವಿಯಲ್ಲ. ನೀನಾರೋ ಬೇರೊಬ್ಬಳು ಇಲ್ಲಿಗೆ ಬಂದಿದ್ದೀಯೆ. ಪುತ್ರರು ಎಷ್ಟು ಗುಣಹೀನರಾಗಿದ್ದರೂ ತಾಯಿಯು ಪುತ್ರನನ್ನು ಶಪಿಸುವುದೆಂತು ?

ಮಾರ್ಕಂಡೇಯ ಮುನಿಯು ಹೇಳಿದನು :—

೩೫. ಆಗ ಛಾಯಾದೇವಿಯು ನಿಜಸಂಗತಿಯನ್ನು ಮರೆಮಾಚುವವಳಾಗಿ ಸೂರ್ಯದೇವನಿಗೆ ನಡೆದುದನ್ನು ತಿಳಿಸಲಿಲ್ಲ. ಸೂರ್ಯನು ಚಿತ್ತವನ್ನು ಧ್ಯಾನದಲ್ಲಿ ಇರಿಸಿದವನಾಗಿ ಯೋಗದೃಷ್ಟಿಯಿಂದ ನಿಜವನ್ನು ಅರಿತನು.

ತಂ ಶಪ್ತುಮುದ್ಯತಂ ದೃಷ್ಟ್ವಾ ಛಾಯಾಸಞ್ಜ್ಞಾ ದಿವಸ್ಪತಿಮ್ ।
ಭಯೇನ ಕಮ್ಪಿತಾ ಬ್ರಹ್ಮನ್ಯಥಾವೃತ್ತಂ ನ್ಯವೇದಯತ್ ॥೩೬॥

ವಿವಸ್ವಾಂಸ್ತು ತತಃ ಕ್ರುದ್ಧಃ ಶ್ರುತ್ವಾ ಶ್ವಶುರಮಭ್ಯಗಾತ್ ॥೩೭॥

ಸ ಚಾಪಿ ತಂ ಯಥಾನ್ಯಾಯಮರ್ಚಯಿತ್ವಾ ದಿವಾಕರಮ್ ।
ನಿರ್ದಗ್ಧುಕಾಮಂ ರೋಷೇಣ ಸಾನ್ತ್ವಯಾಮಾಸ ಸುವ್ರತಃ ॥೩೮॥

ವಿಶ್ವಕರ್ಮೋವಾಚ :—

ತವಾತಿತೇಜಸಾ ವ್ಯಾಪ್ತಮಿದಂ ರೂಪಂ ಸುದುಸ್ಸಹಮ್ ।
ಅಸಹನ್ತೀ ತತಃ ಸಞ್ಜ್ಞಾ ವನೇ ಚರತಿ ವೈ ತಪಃ ॥೩೯॥

---

೩೬. ಬ್ರಹ್ಮರ್ಷಿಯಾದ ಕ್ರೌಷ್ಟುಕಿಯೇ! ಆಗ ಛಾಯಾದೇವಿಯು ತನ್ನನ್ನು ಶಪಿಸಲು ಸಿದ್ಧನಾದ ಸೂರ್ಯದೇವನನ್ನು ನೋಡಿ ಭಯದಿಂದ ನಡುಗುತ್ತ ನಡೆದ ಸಂಗತಿಯನ್ನು ತಾತ್ತ್ವಿಕವಾಗಿ ತಿಳಿಸಿದಳು.

೩೭. ತರುವಾಯ ಸೂರ್ಯದೇವನು ಆ ಸಮಾಚಾರವನ್ನು ಕೇಳಿ ಸಂಜ್ಞೆಯು ತಂದೆಯ ಮನೆಗೆ ತೆರಳಿರುವುದರಿಂದ ಅವಳಲ್ಲಿ ಅತ್ಯಂತ ಕೋಪಾವೇಶವುಳ್ಳವನಾಗಿ ತಾನು ಅಲ್ಲಿಗೆ ಹೋದನು.

೩೮. ಸಾಧುವಾದ ನಡತೆಯುಳ್ಳ ಆ ವಿಶ್ವಕರ್ಮಪ್ರಜಾಪತಿಯು ಕೋಪದಿಂದ ಸುಟ್ಟುಹಾಕುವ ಇಷ್ಟವುಳ್ಳವನಂತೆ ತೋರಿದ ಸೂರ್ಯನನ್ನು ಯಥಾವಿಧಿಯಾಗಿ ಗೌರವಿಸಿ ಸಮಾಧಾನಮಾಡಿದನು.

ವಿಶ್ವಕರ್ಮನು ಇಂತೆಂದನು :—

೩೯. ಸಂಜ್ಞಾದೇವಿಯು ಅತ್ಯಂತ ತೇಜಸ್ಸಿನಿಂದ ವ್ಯಾಪಿಸಲ್ಪಟ್ಟಿರುವ, ಸಹಿಸಲಾಗದ ನಿನ್ನ ಈ ರೂಪವನ್ನು ನೋಡಲು ಶಕ್ತಿಯಿಲ್ಲದವಳಾಗಿ ಆ ನಿಮಿತ್ತದಿಂದ ಕಾಡಿನಲ್ಲಿ ತಪಸ್ಸನ್ನು ಆಚರಿಸುತ್ತಿರುವಳು.

ದ್ರಕ್ಷ್ಯತೇ ತಾಂ ಭವಾನದ್ಯ ಸ್ವಭಾರ್ಯಾಂ ಶುಭಚಾರಿಣೀಮ್ ।
ರೂಪಾರ್ಥಂ ಭವತೋಽರಣ್ಯೇ ಚರನ್ತೀಂ ಸುಮಹತ್ತಪಃ ॥೪೦॥

ಶ್ರುತಂ ಮೇ ಬ್ರಹ್ಮಣೋ ವಾಕ್ಯಂ ಯದಿ ತೇ ದೇವ ರೋಚತೇ ।
ರೂಪಂ ನಿವರ್ತಯಾಮ್ಯೇತತ್ತವ ಕಾನ್ತಂ ದಿವಸ್ಪತೇ ॥೪೧॥

ಮಾರ್ಕಣ್ಡೇಯ ಉವಾಚ :—

ಯತೋ ಹಿ ಭಾಸ್ವತೋ ರೂಪಂ ಪ್ರಾಗಾಸೀತ್ಪರಿಮಣ್ಡಲಮ್ ।
ತತಸ್ತಥೇತಿ ತಂ ಪ್ರಾಹ ತ್ವಷ್ಟಾರಂ ಭಗವಾನ್ರವಿಃ ॥೪೨॥

ವಿಶ್ವಕರ್ಮಾ ತ್ವನುಜ್ಞಾತಃ ಶಾಕದ್ವೀಪೇ ವಿವಸ್ವತಃ ।
ಭ್ರಮಿಮಾರೋಪ್ಯ ತತ್ತೇಜಶ್ಶಾತನಾಯೋಪಚಕ್ರಮೇ ॥೪೩॥

---

೪೦. ನಿನ್ನಲ್ಲಿ ಸೌಮ್ಯರೂಪವನ್ನು ನೋಡುವ ಸಂಕಲ್ಪದಿಂದ ಅರಣ್ಯದಲ್ಲಿ ಮಹತ್ತಾದ ತಪಶ್ಚರ್ಯೆಯನ್ನು ಕೈಗೊಂಡಿರುವವಳೂ ಮತ್ತು ಮಂಗಳಕರವಾದ ನಡತೆಯುಳ್ಳವಳೂ ಆದ ಆ ನಿನ್ನ ಪತ್ನಿಯನ್ನು ಇಂದು ನೀನು ನೋಡುತ್ತೀಯೆ.

೪೧. ಸೂರ್ಯದೇವನೇ! ನನಗೆ ಈ ಪ್ರಸಂಗದಲ್ಲಿ ಬ್ರಹ್ಮನ ವಾಣಿಯು ನೆನಪಾಗಿರುವುದು. ಅದು ನಿನಗೆ ಇಷ್ಟವಾಗಿರುವ ಪಕ್ಷದಲ್ಲಿ ನಿನ್ನ ಉಗ್ರವಾದ ಈ ರೂಪವನ್ನು ಸೌಮ್ಯವನ್ನಾಗಿ ಮಾಡುವೆನು.

ಮಾರ್ಕಂಡೇಯ ಮುನಿಯು ಇಂತೆಂದನು : --

೪೨. ಹಿಂದೆ ಸೂರ್ಯದೇವನ ರೂಪವು ಮಂಡಲಾಕಾರವನ್ನು ಹೊಂದಿದ್ದಿತು. ಅದ್ದರಿಂದ ಆ ತೇಜಸ್ಸನ್ನು ಸಹಿಸುವಂತೆ ಮಾಡುವೆನು ಎಂದು ವಿಶ್ವಕರ್ಮನು ಹೇಳಿದ ಮಾತನ್ನು ಪೂಜ್ಯನಾದ ಸೂರ್ಯನು "ಹಾಗೆ ಆಗಲಿ" ಎಂದು ಅಂಗೀಕರಿಸಿದನು.

೪೩. ಹೀಗೆ ಸೂರ್ಯದೇವನ ಅನುಮತಿಯನ್ನು ಹೊಂದಿದ ವಿಶ್ವ-ಕರ್ಮನು ಶಾಕದ್ವೀಪದಲ್ಲಿ ಸೂರ್ಯನ ಬಿಂಬವನ್ನು ತನ್ನ ಚಕ್ರದಲ್ಲಿ ಇಟ್ಟು ಅದರ ತೇಜಸ್ಸು ನ್ಯೂನವಾಗುವಂತೆ ಮಾಡಲು ಉಪಕ್ರಮಿಸಿದನು.

ಭ್ರಮತಾಶೇಷಜಗತಾಂ ನಾಭಿಭೂತೇನ ಭಾಸ್ವತಾ ।
ಸಮುದ್ರಾದಿವನೋಪೇತಾ ಸಾರುರೋಹ ಮಹೀ ನಭಃ ॥೪೪॥

ಗಗನಂ ಚಾಖಿಲಂ ಬ್ರಹ್ಮನ್ ಸಚನ್ದ್ರಗ್ರಹತಾರಕಮ್ ।
ಅಧೋಗತಂ ಮಹಾಭಾಗ ಬಭೂವಾಕ್ಷಿಪ್ತಮಾಕುಲಮ್ ॥೪೫॥

ವಿಕ್ಷಿಪ್ತಸಲಿಲಾಃ ಸರ್ವೇ ಬಭೂವುಶ್ಚ ತಥಾಬ್ಧಯಃ ।
ವ್ಯಭಿದ್ಯನ್ತ ಮಹಾಶೈಲಾಃ ಶೀರ್ಣಸಾನುನಿಬನ್ಧನಾಃ ॥೪೬॥

ಧ್ರುವಾಧಾರಾಣ್ಯಶೇಷಾಣಿ ಧಿಷ್ಣ್ಯಾನಿ ಮುನಿಸತ್ತಮ ।
ತ್ರುಟ್ಯದ್ರಶ್ಮಿನಿಬನ್ಧಾನಿ ಹ್ಯಧೋ ಜಗ್ಮುಃ ಸಹಸ್ರಶಃ ॥೪೭॥

ವೇಗಭ್ರಮಣಸಂಜಾತವಾಯುಕ್ಷಿಪ್ತಾಃ ಸಮನ್ತತಃ ।
ವ್ಯಶೀರ್ಯನ್ತ ಮಹಾಮೇಘಾ ಘೋರರಾವವಿರಾವಿಣಃ ॥೪೮॥

---

೪೪. ಸಮಸ್ತಜಗತ್ತೆಂಬ ಚಕ್ರಕ್ಕೆ ನಾಭಿಯಂತಿದ್ದ ಸೂರ್ಯಬಿಂಬವು ವಿಶ್ವಕರ್ಮನ ಚಕ್ರದಲ್ಲಿ ಸುತ್ತುತ್ತಿರಲು ಸಮುದ್ರ-ಗಿರಿ-ಅರಣ್ಯಗಳಿಂದ ಕೂಡಿದ ಭೂಮಿಯು ಆಕಾಶವನ್ನು ಏರಿತು.

೪೫. ಮಹಾಭಾಗನಾದ ಕ್ರೌಷ್ಟುಕಿಯೇ! ಹಾಗು ಚಂದ್ರ-ಗ್ರಹ-ನಕ್ಷತ್ರಗಳಿಂದ ಕೂಡಿದ ಆಕಾಶವೆಲ್ಲವೂ ಕೆಳಭಾಗಕ್ಕೆ ಇಳಿಯಿತು. ಹೀಗೆ ಭೂಮಿ-ಆಕಾಶಗಳು ಕೂಡ ತಲೆಕೆಳಗಾಗುವ ಪ್ರಸಂಗವು ಉಂಟಾಯಿತು.

೪೬. ಆಗ ಸಮಸ್ತ ಸಮುದ್ರಗಳು ಮೇಲಕ್ಕೆ ಉಕ್ಕಿಬಂದ ನೀರುಳ್ಳವುಗಳಾದವು. ಕಾಡು-ತಪ್ಪಲುಗಳ ಭಾಗಗಳು ಕುಸಿದು ಮಹತ್ತಾದ ಪರ್ವತಗಳು ಭೇದಿಸಿದುವು.

೪೭. ಮುನಿಶ್ರೇಷ್ಠನಾದ ಕ್ರೌಷ್ಟುಕಿಯೇ! ಧ್ರುವ ಮಂಡಲದ ಆಧಾರದಲ್ಲಿರುವ ಅನೇಕ ತೇಜೋಭವನಗಳು ಸಡಿಲವಾದ ರಶ್ಮಿಬಂಧನವುಳ್ಳವುಗಳಾಗಿ ಕೆಳಗೆ ಬಂದುವು.

೪೮. ಮತ್ತು ದೊಡ್ಡ ಮೇಘಗಳು ಸೂರ್ಯಬಿಂಬವು ವೇಗದಿಂದ ಸುತ್ತುತ್ತಿರಲು ಅದರಿಂದ ಉಂಟಾದ ಗಾಳಿಯಿಂದ ತಳ್ಳಲ್ಪಟ್ಟು ಘೋರವಾದ ಗರ್ಜನೆಯ ಧ್ವನಿಯುಳ್ಳವುಗಳಾಗ ಅಲ್ಲಲ್ಲಿ ತುಂಡಾಗಿಹೋದುವು.

ಭಾಸ್ವದ್ಭ್ರಮಣವಿಭ್ರಾಂತಂ ಭೂವ್ಯೋಮಾಕಾಶರಸಾತಲವತ್ ।
ಜಗಾದಾಕುಲಮತ್ಯರ್ಥಂ ತದಾಸೀನ್ಮುನಿಸತ್ತಮ ॥೪೯॥

ತ್ರೈಲೋಕ್ಯೇ ಸಕಲೇ ವಿಪ್ರ ಭ್ರಮಮಾಣೇ ಸುರರ್ಷಯಃ ।
ದೇವಾಶ್ಚ ಬ್ರಹ್ಮಣಾ ಸಾರ್ಧಂ ಭಾಸ್ವಂತಮಭಿತುಷ್ಟುವುಃ ॥೫೦॥

ಆದಿದೇವೋಽಸಿ ದೇವಾನಾಂ ಜ್ಞಾತಮೇತತ್ಸ್ವರೂಪತಃ ।
ಸರ್ಗಸ್ಥಿತ್ಯಂತಕಾಲೇಷು ತ್ರಿಧಾ ಭೇದೇನ ತಿಷ್ಠಸಿ ॥೫೧॥

ಸ್ವಸ್ತಿ ತೇಽಸ್ತು ಜಗನ್ನಾಥ ಘರ್ಮವರ್ಷಾಹಿಮಾಕರ ।
ಜುಷಸ್ವ ಶಾಂತಿಂ ಲೋಕಾನಾಂ ದೇವದೇವ ದಿವಾಕರ ॥೫೨॥

---

೪೯. ಮಹಾಮುನಿಯಾದ ಕ್ರೌಷ್ಟುಕಿಯೇ! ಆಗ ಸೂರ್ಯಬಿಂಬವ ಭ್ರಮಣದಿಂದ ಸುತ್ತುತ್ತಿದ್ದ, ಭೂಮಿ-ಆಕಾಶ-ಪಾತಾಳವೆಂಬ ತ್ರಿಲೋಕ-ರೂಪವಾದ ಜಗತ್ತು ಅತಿಯಾಗಿ ಅಸ್ತವ್ಯಸ್ತವಾಗಿಹೋಯಿತು.

೫೦. ಬ್ರಹ್ಮರ್ಷಿಯಾದ ಕ್ರೌಷ್ಟುಕಿಯೆ! ಹೀಗೆ ಸಮಸ್ತ ತ್ರಿಲೋಕಗಳು ಸುತ್ತುತ್ತಿರಲು ದೇವರ್ಷಿ-ದೇವತೆ ಮುಂತಾದವರು ಬ್ರಹ್ಮನೊಡನೆ ಬಂದು ಸೂರ್ಯನನ್ನು ಸ್ತುತಿಸಿದರು.

೫೧. ಸೂರ್ಯದೇವನೇ! ನೀನು ದೇವತೆಗಳಲ್ಲಿ ಮೊದಲನೆಯ ದೇವನಾಗಿದ್ದೀಯೆ. ನಿನ್ನ ಸ್ವರೂಪವು ಇಂದು ಯಥಾರ್ಥವಾಗಿ ನಮ್ಮಿಂದ ತಿಳಿಯಲ್ಪಟ್ಟಿತು. ನೀನು ಜಗತ್ತಿನ ಸೃಷ್ಟಿ-ಸ್ಥಿತಿ-ಲಯ ಸಮಯಗಳಲ್ಲಿ ಮೂರು ರೂಪಗಳಿಂದ ಇರುತ್ತೀಯೆ.

೫೨. ಜಗತ್ತಿನ ಪ್ರಭುವೇ! ತಾಪವನ್ನು ಕೊಡುವವನೇ! ಮತ್ತು ಉಷ್ಣವಾದ ಕಿರಣವುಳ್ಳವನೇ! ನಿನಗೆ ಕಲ್ಯಾಣವಾಗಲಿ. ದೇವತೆಗಳ ಸ್ವಾಮಿಯೇ! ಹಗಲುಸಮಯವನ್ನು ನಿರ್ಮಿಸುವವನೇ! ಲೋಕಕ್ಕೆ ಶಾಂತಿ-ಯನ್ನು ಕೊಡು.

ಇನ್ದ್ರಶ್ಚಾಗತ್ಯ ತಂ ದೇವಂ ಲಿಖ್ಯಮಾನಂ ಯಥಾಸ್ತುವತ್ ।
ಜಯ ದೇವ ಜಗದ್ವ್ಯಾಪಿನ್ ಜಯಾಶೇಷಜಗತ್ಪತೇ ॥೫೩॥

ಋಷಯಶ್ಚ ತತಃ ಸಪ್ತ ವಸಿಷ್ಠಾತ್ರಿಪುರೋಗಮಾಃ ।
ತುಷ್ಟುವುರ್ವಿವಿಧೈಃ ಸ್ತೋತ್ರೈಃ ಸ್ವಸ್ತಿ ಸ್ವಸ್ತೀತಿ ವಾದಿನಃ ॥೫೪॥

ವೇದೋಕ್ತಾಭಿರಥಾಗ್ರ್ಯಾಭಿರ್ವಾಲಖಿಲ್ಯಾಶ್ಚ ತುಷ್ಟುವುಃ ।
ಭಾಸ್ವನ್ತಮೃಗ್ಭಿರಾದ್ಯಾಭಿರ್ಲಿಖ್ಯಮಾನಂ ಮುದಾ ಯುತಾಃ ॥೫೫॥

ತ್ವಂ ನಾಥ ಮೋಕ್ಷಿಣಾಂ ಮೋಕ್ಷೋ ಧ್ಯೇಯಸ್ತ್ವಂ ಧ್ಯಾನಿನಾಂ ಪರಃ ।
ತ್ವಂ ಗತಿಃ ಸರ್ವಭೂತಾನಾಂ ಕರ್ಮಕಾಣ್ಡೇಽಪಿ ವರ್ತತಾಮ್ ॥೫೬॥

---

೫೩. ಹಾಗೆಯೇ ಇಂದ್ರನು ಅಲ್ಲಿಗೆ ಬಂದು ಸಾಣೆ ಹಿಡಿಯಲ್ಪಡುತ್ತಿದ್ದ ಸೂರ್ಯದೇವನನ್ನು ಸ್ತೋತ್ರಮಾಡಿದನು. ಜಗತ್ತನ್ನು ವ್ಯಾಪಿಸಿರುವ ಸ್ವಾಮಿಯೇ ! ನೀನು ಜಯವನ್ನು ಗಳಿಸು. ಸಮಸ್ತ ಜಗತ್ತಿನ ಈಶ್ವರನೇ ! ನೀನು ಜಯಶಾಲಿಯಾಗು.

೫೪. ತರುವಾಯ ವಸಿಷ್ಠ-ಅತ್ರಿ ಮುಂತಾದ ಸಪ್ತರ್ಷಿಗಳು ಅಲ್ಲಿಗೆ ಬಂದು “ ಶುಭವಾಗಲಿ ; ಮಂಗಳವಾಗಲಿ ” ಎಂದು ಹೇಳುತ್ತ ನಾನಾವಿಧವಾದ ಸ್ತೋತ್ರಗಳನ್ನು ಹೇಳಿ ಸ್ತುತಿಸಿದರು.

೫೫. ಹಾಗು ವಾಲಖಿಲ್ಯರೆಂಬ ಮಹರ್ಷಿಗಳು ಬಂದು ಸಂತೋಷದಿಂದ ಕೂಡಿದವರಾಗಿ ಪುರಾಣವಾಣಿಯೂ, ಶ್ರೇಷ್ಠವೂ ಮತ್ತು ವೇದರೂಪವೂ ಆದ ಋಙ್ಮಂತ್ರಗಳಿಂದ ಸೂರ್ಯನನ್ನು ಸ್ತುತಿಸಿದರು.

೫೬. ಪ್ರಭುವೇ ! ನೀನು ಮುಕ್ತಿಪದವನ್ನು ಅಪೇಕ್ಷಿಸುವವರಿಗೆ ಮುಕ್ತಿಪದರೂಪನಾಗಿದ್ದೀಯೆ. ಧ್ಯಾನಾಸಕ್ತರಿಗೆ ಸರ್ವೋತ್ತಮವಾದ ಧ್ಯೇಯತತ್ತ್ವವಾಗಿದ್ದೀಯೆ. ಕರ್ಮಕಾಂಡದ ತತ್ಪರತೆಯುಳ್ಳ ಸಮಸ್ತ ಮಾನವರಿಗೆ ನೀನು ಗತಿಯಾಗಿದ್ದೀಯೆ.

ಶಂ ಪ್ರಜಾಭ್ಯೋಽಸ್ತು ದೇವೇಶ ಶನ್ನೋಽಸ್ತು ಜಗತಾಂ ಪತೇ ।
ಶನ್ನೋಽಸ್ತು ದ್ವಿಪದೇ ನಿತ್ಯಂ ಶನ್ನಶ್ಚಾಸ್ತು ಚತುಷ್ಪದೇ ॥೫೭॥

ತತೋ ವಿದ್ಯಾಧರಗಣಾ ಯಕ್ಷರಾಕ್ಷಸಪನ್ನಗಾಃ ।
ಕೃತಾಞ್ಜಲಿಪುಟಾಃ ಸರ್ವೇ ಶಿರೋಭಿಃ ಪ್ರಣತಾ ರವಿಮ್ ॥೫೮॥

ಊಚುರೇವಂವಿಧಾ ವಾಚೋ ಮನಃಶ್ರೋತ್ರಸುಖಾವಹಾಃ ।
ಸಹ್ಯಂ ಭವತು ತೇ ತೇಜೋ ಭೂತಾನಾಂ ಭೂತಭಾವನ ॥೫೯॥

ತತೋ ಹಾಹಾ ಹುಹೂಶ್ಚೈವ ನಾರದಸ್ತುಮ್ಬುರುಸ್ತಥಾ ।
ಉಪಗಾಯಿತುಮಾರಬ್ಧಾ ಗನ್ಧರ್ವಕುಶಲಾ ರವಿಮ್ ॥೬೦॥

ಷಡ್ಜಮಧ್ಯಮಗಾನ್ಧಾರಗ್ರಾಮತ್ರಯವಿಶಾರದಾಃ ।
ಮೂರ್ಛನಾಭಿಶ್ಚ ತಾನೈಶ್ಚ ಸಮ್ಪ್ರಯೋಗೈಃ ಸುಖಪ್ರದಮ್ ॥೬೧॥

---

೫೭. ದೇವತೆಗಳ ಈಶ್ವರನೇ! ಪ್ರಜೆಗಳಿಗೆ ಮಂಗಳವಾಗಲಿ. ಜಗತ್ತಿಗೆ ಒಡೆಯನೇ! ಜಗತ್ತಿಗೆ ಶಾಂತಿಯುಂಟಾಗಲಿ. ದ್ವಿಪದ ಪ್ರಾಣಿಗಳಿಗೆ ಯಾವಾಗಲೂ ಸುಖವುಂಟಾಗಲಿ. ಹಾಗು ಚತುಷ್ಪದ ಪ್ರಾಣಿಗಳಿಗೆ ಕಲ್ಯಾಣವಾಗಲಿ.

೫೮. ತರುವಾಯ ವಿದ್ಯಾಧರರ ಗುಂಪು, ಯಕ್ಷ, ರಾಕ್ಷಸ ಮತ್ತು ನಾಗ ಮುಂತಾದವರು ಅಂಜಲಿಯನ್ನು ಕಟ್ಟಿಕೊಂಡವರಾಗಿ ಎಲ್ಲರೂ ತಲೆಬಾಗಿಸಿ ಸೂರ್ಯದೇವನನ್ನು ನಮಸ್ಕರಿಸಿದರು.

೫೯. ಮತ್ತು ಮನಸ್ಸು-ಶ್ರೋತ್ರಗಳಿಗೆ ಸುಖವನ್ನು ಉಂಟುಮಾಡು-ವಂತಹ ಈ ವಿಧದ ಸ್ತುತಿವಚನಗಳನ್ನು ಹೇಳಿದರು. ಭೂತಗಳ ಉತ್ಪತ್ತಿಗೆ ಕಾರಣನಾದ ಪೂಜ್ಯನೇ! ನಿನ್ನ ತೇಜಸ್ಸು ಭೂತಗಳಿಗೆ ಸಹಿಸುವಂತಾಗಲಿ.

೬೦. ಅನಂತರ ಹಾಹಾ, ಹೂಹು, ನಾರದ, ತುಂಬುರು—ಮುಂತಾದ ಗಂಧರ್ವಶಾಸ್ತ್ರದಲ್ಲಿ ಕೌಶಲವುಳ್ಳವರೆಲ್ಲರೂ ಸೂರ್ಯದೇವನ ಮಹಿಮೆಯನ್ನು ಗಾನಮಾಡಲು ಆರಂಭಿಸಿದರು.

೬೧. ಷಡ್ಜ-ಮಧ್ಯಮ-ಗಾಂಧಾರ ಮುಂತಾದ ಸ್ವರಪ್ರಸ್ತಾರ, ಮೂರು ಬಗೆಯ ಗ್ರಾಮ, ತಾನ, ಮೂರ್ಛನಾ ಮುಂತಾದ ಪ್ರಯೋಗಗಳಿಂದ ಸುಖಕರ-ವಾಗುವಂತೆ ಗಂಧರ್ವರು ಗಾನಮಾಡಿದರು.

ವಿಶ್ವಾಚೀ ಚ ಘೃತಾಚೀ ಚ ಉರ್ವಶ್ಯಥ ತಿಲೋತ್ತಮಾ ।
ಮೇನಕಾ ಸಹಜನ್ಯಾ ಚ ರಮ್ಭಾ ಚಾಪ್ಸರಸಾಂ ವರಾ ||೬೨||

ನನೃತುರ್ಜಗತಾಮೀಶೇ ಲಿಖ್ಯಮಾನೇ ವಿಭಾವಸೌ ।
ಜ್ಞಾನಭಾವವಿಲಾಸಾಢ್ಯಾನ್ಕುರ್ವನ್ತ್ಯೋಽಭಿನಯಾನ್ಬಹೂನ್ ||೬೩||

ಪ್ರಾವಾದ್ಯನ್ತ ತತಸ್ತತ್ರ ವೇಣುವೀಣಾದಿಝರ್ಝರಾಃ ।
ಪಣವಾಃ ಪುಷ್ಕರಾಶ್ಚೈವ ಮೃದಙ್ಗಾಃ ಪಟಹಾನಕಾಃ ||೬೪||

ದೇವದುನ್ದುಭಯಃ ಶಙ್ಖಾಃ ಶತಶೋಽಥ ಸಹಸ್ರಶಃ ||೬೫||

ಗಾಯದ್ಭಿಶ್ಚೈವ ಗಾನ್ಧರ್ವಂ ನೃತ್ಯದ್ಭಿಶ್ಚಾಪ್ಸರೋಗಣೈಃ ।
ತೂರ್ಯವಾದಿತ್ರಘೋಷೈಶ್ಚ ಸರ್ವಂ ಕೋಲಾಹಲೀಕೃತಮ್ ||೬೬||

---

೬೨. ಮತ್ತು ಅಪ್ಸರಾಂಗನೆಯರಲ್ಲಿ ಉತ್ತಮರಾದ ವಿಶ್ವಾಚಿ, ಘೃತಾಚಿ ಉರ್ವಶೀ, ತಿಲೋತ್ತಮಾ, ಮೇನಕಾ, ಸಹಜನ್ಯಾ ಮತ್ತು ರಂಭಾ ಮುಂತಾದವರು ಸಂತೋಷದಿಂದ ನರ್ತನಮಾಡಿದರು.

೬೩. ಜಗತ್ತಿಗೆ ಈಶ್ವರನಾದ ಸೂರ್ಯದೇವನು ಸಾಣೆಹಿಡಿಯಲ್ಪಡುತ್ತಿರಲು ರಂಭಾ ಮುಂತಾದ ಅಪ್ಸರಾಂಗನೆಯರು ರಾಗ-ಭಾವ-ವಿಲಾಸಗಳಿಂದ ಪೂರ್ಣವಾದ ಅನೇಕ ವಿಧವಾದ ಅಭಿನಯಗಳನ್ನು ಮಾಡುತ್ತ ನಾಟ್ಯವಾಡಿದರು.

೬೪. ಆ ಸಮಯದಲ್ಲಿ ಅಲ್ಲಿ ಕೊಳಲು, ವೀಣೆ, ಝರ್ಝರಿ, ಪಣವ, ಪುಷ್ಕರ, ಮೃದಂಗ, ಪಟಹ ಮತ್ತು ಆನಕ—ಎಂಬ ವಿಧವಿಧವಾದ ವಾದ್ಯಗಳು ಬಾರಿಸಲ್ಪಟ್ಟುವು.

೬೫. ಹಾಗು ಶತ-ಸಹಸ್ರ ಮುಂತಾದ ಅಧಿಕಸಂಖ್ಯೆಯಲ್ಲಿ ಶಂಖ ಮತ್ತು ದೇವದುಂದುಭಿ ಮುಂತಾದ ವಾದ್ಯಗಳನ್ನು ಧ್ವನಿಗೈದರು. ಹೀಗೆ ಸಂತೋಷದಿಂದ ಎಲ್ಲರೂ ತಮ್ಮ ತಮ್ಮ ಕಲಾಕೌಶಲವನ್ನು ತೋರಿಸಿದರು.

೬೬. ಹೀಗೆ ಗಾಂಧರ್ವಶಾಸ್ತ್ರವಿಧಿಯಂತೆ ಗಾನಮಾಡುವ, ಅಪ್ಸರಸ್ತ್ರೀಯರು ನರ್ತಿಸುವ ಮತ್ತು ವಿವಿಧವಾದ ವಾದ್ಯಗಳನ್ನು ಬಾರಿಸುವ ತೂರ್ಯವಾದ್ಯಘೋಷಗಳಿಂದ ಎಲ್ಲವೂ ಕೋಲಾಹಲವಾಗುವಂತೆ ಆಯಿತು.

ತತಃ ಕೃತಾಞ್ಜಲಿಪುಟಾ ಭಕ್ತಿನಮ್ರಾತ್ಮಮೂರ್ತಯಃ ।
ಲಿಖ್ಯಮಾನಂ ಸಹಸ್ರಾಂಶುಂ ಪ್ರಣೇಮುಃ ಸರ್ವದೇವತಾಃ ॥೬೭॥

ತತಃ ಕೋಲಾಹಲೇ ತಸ್ಮಿನ್ ಸರ್ವದೇವಸಮಾಗಮೇ ।
ತೇಜಸಃ ಶಾತನಂ ಚಕ್ರೇ ವಿಶ್ವಕರ್ಮಾ ಶನೈಃ ಶನೈಃ ॥೬೮॥

ಇತಿ ಹಿಮಜಲಘರ್ಮಕಾಲಹೇತೋ-
ರ್ಹರಕಮಲಾಸನವಿಷ್ಣುಸಂಸ್ತುತಸ್ಯ ।
ತನುಪರಿಲಿಖನಂ ನಿಶಮ್ಯ ಭಾನೋ-
ರ್ವ್ರಜತಿ ದಿವಾಕರಲೋಕಮಾಯುಷೋಽನ್ತೇ ॥೬೯॥

ಇತಿ ಶ್ರೀಮಾರ್ಕಣ್ಡೇಯ ಮಹಾಪುರಾಣೇ ಭಾನುತನು-
ವಿಲೇಖನೇ ತ್ರ್ಯಧಿಕಶತತಮೋಽಧ್ಯಾಯಃ

---

೬೭. ತರುವಾಯ ಮಾಡಿದ ಅಂಜಲಿಬಂಧವುಳ್ಳವರೂ, ಭಕ್ತಿಯಿಂದ ನಮ್ರವಾದ ತನು-ಮನವುಳ್ಳವರೂ ಆದ ಸಮಸ್ತ ದೇವತೆಗಳು ಕ್ಷೀಣಗೊಳಿಸಲ್ಪಡುತ್ತಿದ್ದ ಸಹಸ್ರಕಿರಣನಾದ ಸೂರ್ಯನನ್ನು ವಂದಿಸಿದರು.

೬೮. ಆಮೇಲೆ ಸಮಸ್ತ ದೇವತೆಗಳು ಸೇರಿ ನೃತ್ಯ-ಗೀತಾದಿ ಕೋಲಾಹಲವು ನಡೆಯುತ್ತಿರಲು ವಿಶ್ವಕರ್ಮನು ಮೆಲ್ಲಮೆಲ್ಲಗೆ ಸೂರ್ಯದೇವನ ತೇಜಸ್ಸನ್ನು ಕ್ಷಯಗೊಳಿಸಿದನು.

೬೯. ಛಳಿ-ಮಳೆ-ಬೇಸಿಗೆ ಕಾಲಗಳಿಗೆ ಕಾರಣನೂ, ಹರ-ಬ್ರಹ್ಮ-ವಿಷ್ಣು ತ್ರಿಮೂರ್ತಿಗಳಿಂದ ಸ್ತುತಿಸಲ್ಪಟ್ಟವನೂ ಆದ ಸೂರ್ಯದೇವನ ಈ ವಿಧವಾದ ಬಿಂಬಕ್ಷೀಣತೆಯನ್ನು ಕೇಳಿದ ಮಾನವನು ತನ್ನ ಆಯುಷ್ಯಾವಸಾನದಲ್ಲಿ ಸೂರ್ಯನ ಲೋಕವನ್ನು ಹೊಂದುತ್ತಾನೆ.

ಮಾರ್ಕಂಡೇಯ ಮಹಾಪುರಾಣದಲ್ಲಿ ನೂರಮೂರನೆಯ
ಅಧ್ಯಾಯವು ಮುಗಿದುದು.

॥ ಓಂ ಶ್ರೀ ದುರ್ಗಾಯೈ ನಮಃ ॥

ಮಾರ್ಕಂಡೇಯ ಪುರಾಣಂ

ಚತುರಧಿಕಶತತಮೋಽಧ್ಯಾಯಃ

(ಸೂರ್ಯಸ್ತವನಮ್)

ಮಾರ್ಕಣ್ಡೇಯ ಉವಾಚ :—

ಲಿಖ್ಯಮಾನೇ ತತೋ ಭಾನೌ ವಿಶ್ವಕರ್ಮಾ ಪ್ರಜಾಪತಿಃ ।
ಉದ್ಭೂತಪುಲಕಃ ಸ್ತೋತ್ರಮಿದಂ ಚಕ್ರೇ ವಿವಸ್ವತಃ ॥೧॥

ವಿವಸ್ವತೇ ಪ್ರಣತಹಿತಾನುಕಮ್ಪಿನೇ
ಮಹಾತ್ಮನೇ ಸಮಜವಸಪ್ತಸಪ್ತಯೇ ।
ಸುತೇಜಸೇ ಕಮಲಕುಲಾವಬೋಧಿನೇ
ನಮಸ್ತಮಃಪಟಲಪಟಾವಪಾಟಿನೇ ॥೨॥

ನೂರನಾಲ್ಕನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಹೇಳಿದನು :—

೧. ತರುವಾಯ ವಿಶ್ವಕರ್ಮ ಪ್ರಜಾಪತಿಯು ತನ್ನಿಂದ ಸೂರ್ಯನು ಕ್ಷೀಣಗೊಳಿಸಲ್ಪಡುತ್ತಿರುವಾಗ ಭಕ್ತಿಯಿಂದ ಉಂಟಾದ ರೋಮಾಂಚನ-ವುಳ್ಳವನಾಗಿ ಸೂರ್ಯದೇವನ ಈ ಸ್ತೋತ್ರವನ್ನು ಪಠಿಸಿದನು.

೨. ತನ್ನನ್ನು ವಂದಿಸುವ ಭಕ್ತರಿಗೆ ಹಿತವನ್ನು ದಯಪಾಲಿಸುವವನೂ, ಸಮಾನವೇಗದ ಏಳು ಕುದುರೆಗಳುಳ್ಳವನೂ, ಅಧಿಕವಾದ ತೇಜಸ್ಸುಳ್ಳವನೂ, ಕಮಲಗಳ ಗುಂಪನ್ನು ಅರಳಿಸುವವನೂ, ಮಹಾತ್ಮನೂ ಮತ್ತು ಕತ್ತಲೆಯನ್ನು ಬಟ್ಟೆಯಂತೆ ಸೀಳಿಹಾಕುವವನೂ ಆದ ಸೂರ್ಯದೇವನಿಗೆ ನಮಸ್ಕಾರವು.

ಪಾವನಾತಿಶಯಪುಣ್ಯಕರ್ಮಣೇ
ನೈಕಕಾಮವಿಷಯಪ್ರದಾಯಿನೇ ।
ಭಾಸ್ವರಾನಲಮಯೂಖಶಾಯಿನೇ
ಸರ್ವಲೋಕಹಿತಕಾರಿಣೇ ನಮಃ ॥೩॥

ಅಜಾಯ ಲೋಕತ್ರಯಕಾರಣಾಯ
ಭೂತಾತ್ಮನೇ ಗೋಪತಯೇ ವೃಷಾಯ ।
ನಮೋ ಮಹಾಕಾರುಣಿಕೋತ್ತಮಾಯ
ಸೂರ್ಯಾಯ ಚಕ್ಷುಃಪ್ರಭವಾಲಯಾಯ ॥೪॥

ವಿವಸ್ವತೇ ಜ್ಞಾನಭೃತೇಽನ್ತರಾತ್ಮನೇ
ಜಗತ್ಪ್ರತಿಷ್ಠಾಯ ಜಗದ್ಧಿತೈಷಿಣೇ ।
ಸ್ವಯಮ್ಭುವೇ ಲೋಕಸಮಸ್ತಚಕ್ಷುಷೇ
ಸುರೋತ್ತಮಾಯಾಮಿತತೇಜಸೇ ನಮಃ ॥೫॥

---

೩. ಪಾವನವೂ ಅತಿಶಯವೂ ಆದ ವ್ಯಾಪಾರವುಳ್ಳವನೂ, ಅನೇಕ ವಿಧವಾದ ಆಶಿಸಿದ ಫಲಗಳನ್ನು ಕೊಡುವವನೂ, ಪ್ರಕಾಶಮಯವಾದ ಅಗ್ನಿಯಲ್ಲಿ ಕಿರಣಗಳನ್ನಿಟ್ಟು ಶಯನಮಾಡುವವನೂ ಮತ್ತು ಸಮಸ್ತಲೋಕಗಳಿಗೆ ಹಿತವನ್ನು ಕೊಡುವವನೂ ಆದ ಸೂರ್ಯನಿಗೆ ನಮಸ್ಕಾರವು.

೪. ಮತ್ತು ಜನ್ಮವಿಲ್ಲದವನೂ, ಮೂರುಲೋಕಗಳಿಗೆ ಕಾರಣನೂ, ಸರ್ವಭೂತಸ್ವರೂಪನೂ, ಕಿರಣಗಳಿಗೆ ಪ್ರಭುವೂ, ಇಷ್ಟದಾಯಕನೂ, ಕಾರುಣಿಕರಲ್ಲಿ ಉತ್ತಮನೂ, ಚಕ್ಷುರಿಂದ್ರಿಯದ ಪ್ರಭಾವಕ್ಕೆ ಆಧಾರನೂ ಆದ ಸೂರ್ಯನನ್ನು ವಂದಿಸುವೆನು.

೫. ಜ್ಞಾನಪೂರ್ಣನೂ, ಸರ್ವಾಂತರ್ಯಾಮಿಯೂ, ಜಗತ್ತಿಗೆ ಆಧಾರನೂ, ಪ್ರಪಂಚಹಿತವನ್ನು ಕೋರುವವನೂ, ಆತ್ಮತಂತ್ರನೂ, ಸರ್ವ-ಲೋಕಗಳಿಗೆ ಚಕ್ಷುವಿನಂತೆ ಇರುವವನೂ, ದೇವೋತ್ತಮನೂ ಮತ್ತು ಅಪಾರವಾದ ತೇಜೋಮೂರ್ತಿಯೂ ಆದ ಸೂರ್ಯದೇವನಿಗೆ ನಮಸ್ಕಾರವು.

ಕ್ಷಣಮುದಯಾಚಲಮೌಲಿಮಣಿಃ
ಸುರಗಣಮಹಿತಹಿತೋ ಜಗತಃ ।
ತ್ವಮು ಮಯೂಖಸಹಸ್ರವಪು-
ರ್ಜಗತಿ ವಿಭಾಸಿ ತಮಾಂಸಿ ನುದನ್ ॥೬॥

ಭವತಿಮಿರಾಸವಪಾನಮದಾ-
ದ್ಭವತಿ ವಿಲೋಹಿತವಿಗ್ರಹತಃ ।
ಮಿಹಿರ ವಿಭಾಸಿ ಯತಃ ಸುತರಾಂ
ತ್ರಿಭುವನಭಾವನ ಭಾನಿಕರೈಃ ॥೭॥

ರಥಮಧಿರುಹ್ಯ ಸಮಾವಯವಂ
ಚಾರುವಿಕಮ್ಪಿತಮುರುರುಚಿರಮ್ ।

---

೬. ದೇವತೆಗಳ ಗುಂಪಿನಿಂದ ವಂದಿತನಾದ ಸೂರ್ಯದೇವನೇ ! ಉದಯಿಸುತ್ತಿರುವ ಸಮಯದಲ್ಲಿ ಕ್ಷಣಕಾಲಮಾತ್ರ ಉದಯಗಿರಿಶಿಖರದ ಕಿರೀಟ-ಮಣಿಯೂ, ಜಗತ್ತಿಗೆ ಹಿತವನ್ನು ಕೊಡುವವನೂ, ಮತ್ತು ಸಹಸ್ರಕಿರಣಗಳಿಂದ ಕೂಡಿದ ಮೂರ್ತಿಯುಳ್ಳವನೂ ಆದ ನೀನು ಜಗತ್ತಿನಲ್ಲಿ ಕತ್ತಲೆಯನ್ನು ನಾಶ-ಗೊಳಿಸುತ್ತ ಪ್ರಕಾಶಿಸುತ್ತೀಯೆ.

೭. ಸೂರ್ಯದೇವನೇ ! ನೀನು ಮೂರು ಭುವನಗಳನ್ನು ಬೆಳಗುವ ತೇಜಃಪುಂಜದಿಂದ ವಿಶೇಷವಾಗಿ ಪ್ರಕಾಶಿಸುತ್ತೀಯೆ. ಮತ್ತು ನೀನು ಸಂಸಾರ ದುಃಖಾಂಧಕಾರವೆಂಬ ಸುರೆಯನ್ನು ಪಾನಮಾಡಿದ ಮದದಿಂದ ಕೆಂಪಾದ ಬಿಂಬವನ್ನು ಧರಿಸಿರುವಂತೆ ಕಾಣುತ್ತೀಯೆ.

೮. ಅಖಂಡೈಶ್ವರ್ಯಸಂಪನ್ನನಾದ ಸೂರ್ಯದೇವನೆ ! ಹೊಂದಿಕೆ-ಯಾದ ಅವಯವಗಳಿಂದ ಕೂಡಿರುವುದೂ, ಸುಂದರವಾದ ಗತಿಯುಳ್ಳದ್ದೂ,

ಸತತಮಖಿನ್ನಹಯೈರ್ಭಗವಂ-
　　ಶ್ಚರಸಿ ಜಗದ್ಧಿತಾಯ ವಿತತಮ್ ॥೮॥

ಅಮೃತಮಯೇನ ರಸೇನ ಸಮಂ
　　ವಿಬುಧಪಿತೄನಪಿ ತರ್ಪಯಸೇ ।
ಅರಿಗಣಸೂದನ ತೇನ ತವ
　　ಪ್ರಣತಿಮುಪೇತ್ಯ ಲಿಖಾಮಿ ವಪುಃ ॥೯॥

ಶುಕಸಮವರ್ಣಹಯಪ್ರಥಿತಂ
　　ತವ ಪಾದಪಾಂಸುಪವಿತ್ರತಮಮ್ ।
ನತಜನವತ್ಸಲ ಮಾಂ ಪ್ರಣತಂ
　　ತ್ರಿಭುವನ ಪಾವನ ಪಾಹಿ ರವೇ ॥೧೦॥

ಇತಿ ಸಕಲಜಗತ್ಪ್ರಸೂತಿಭೂತಂ
　　ತ್ರಿಭುವನಭಾವನಧಾಮಹೇತುಮೇಕಮ್ ।

ಹೃದಯಂಗಮವೂ ಮತ್ತು ಏಳು ಕುದುರೆಗಳಿಂದ ಸೆಳೆಯಲ್ಪಡುವುದೂ ಆದ ರಥವನ್ನು ಏರಿ ನೀನು ಪ್ರಪಂಚದ ಹಿತಕ್ಕಾಗಿ ಸಂತತವಾಗಿ ಸಂಚರಿಸುತ್ತೀಯೆ.

೯. ಶತ್ರುಸಮೂಹವನ್ನು ಧ್ವಂಸಮಾಡುವವನೇ ! ನೀನು ಅಮೃತ-ಸ್ವರೂಪವಾದ ರಸದಿಂದ ದೇವತೆಗಳನ್ನೂ ಪಿತೃಗಳನ್ನೂ ಸಮವಾಗಿ ತೃಪ್ತಿ-ಗೊಳಿಸುತ್ತೀಯೆ. ಈ ನಿನ್ನ ಮಾಹಾತ್ಮ್ಯದಿಂದ ನಿನ್ನನ್ನು ವಂದಿಸಿ ನಿನ್ನ ಬಿಂಬವನ್ನು ಕ್ಷೀಣಗೊಳಿಸುತ್ತಿದ್ದೇನೆ.

೧೦. ಗಿಣಿಯಂತೆ ಹಸುರುಬಣ್ಣದ ಕುದುರೆಗಳುಳ್ಳವನೇ ! ಭಕ್ತಜನರಲ್ಲಿ ವಾತ್ಸಲ್ಯವುಳ್ಳವನೇ ! ಮತ್ತು ತ್ರಿಭುವನಗಳನ್ನು ಪಾವನಗೊಳಿಸುವ ಸೂರ್ಯ-ದೇವನೇ ! ನಿನ್ನ ಪಾದಧೂಳಿಯಿಂದ ಪವಿತ್ರವಾದ ದೇಹವುಳ್ಳವನೂ ಮತ್ತು ಭಕ್ತಿಯಿಂದ ವಂದಿಸಿದವನೂ ಆದ ನನ್ನನ್ನು ಪಾಲಿಸು.

೧೧. ದೇವತೆಗಳಲ್ಲಿ ಉತ್ತಮನಾದ ಸೂರ್ಯನೇ ! ಸಕಲ ಜಗತ್ತಿನ ಉತ್ಪತ್ತಿಗೆ ಕಾರಣನೂ, ತ್ರಿಭುವನಗಳ ಸ್ಥಿತಿಗೆ ಏಕಮಾತ್ರ ಆಧಾರವಾದ

ರವಿಮಖಿಲಜಗತ್ಪ್ರದೀಪಭೂತಂ
ತ್ರಿದಶವರ ಪ್ರಣತೋಽಸ್ಮಿ ಸರ್ವದಾ ತ್ವಾಮ್ ॥೧೧॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಸೂರ್ಯಸ್ತವನಂ ನಾಮ
ಚತುರಧಿಕಶತತಮೋಽಧ್ಯಾಯಃ

ತೇಜೋರೂಪನೂ ಮತ್ತು ಸಕಲ ಪ್ರಪಂಚಕ್ಕೆ ದೀಪದಂತಿರುವವನೂ ಆದ ನಿನ್ನನ್ನು ಯಾವಾಗಲೂ ನಮಸ್ಕರಿಸುವೆನು.

ಮಾರ್ಕಂಡೇಯ ಮಹಾಪುರಾಣದಲ್ಲಿ ನೂರನಾಲ್ಕನೆಯ
ಅಧ್ಯಾಯವು ಮುಗಿದುದು.

॥ ಓಂ ಶ್ರೀ ದುರ್ಗಾಯೈ ನಮಃ ॥

ಮಾರ್ಕಂಡೇಯ ಪುರಾಣಂ

ಷಡ್ಕಾಧಿಕಶತತಮೋಽಧ್ಯಾಯಃ

(ರವಿಮಾಹಾತ್ಮ್ಯವರ್ಣನಮ್)

ಮಾರ್ಕಣ್ಡೇಯ ಉವಾಚ :—

ಏವಂ ಸೂರ್ಯಸ್ತವಂ ಕುರ್ವನ್ವಿಶ್ವಕರ್ಮಾ ದಿವಸ್ಪತೇಃ ।
ತೇಜಸಃ ಷೋಡಶಂ ಭಾಗಂ ಮಂಡಲಸ್ಥಮಧಾರಯತ್ ॥೧॥

ಶಾತಿತೈಸ್ತೇಜಸೋ ಭಾಗೈರ್ದಶಭಿಃ ಪಞ್ಚಭಿಸ್ತಥಾ ।
ಅತೀವ ಕಾನ್ತಿಮಚ್ಚಾರು ಭಾನೋರಾಸೀತ್ತದಾ ವಪುಃ ॥೨॥

ಶಾತಿತಂ ಚಾಸ್ಯ ಯತ್ತೇಜಸ್ತೇನ ಚಕ್ರಂ ವಿನಿರ್ಮಿತಮ್ ।
ವಿಷ್ಣೋಃ ಶೂಲಂ ಚ ಶರ್ವಸ್ಯ ಶಿಬಿಕಾ ಧನದಸ್ಯ ಚ ॥೩॥

ನೂರಐದನೆಯ ಅಧ್ಯಾಯ

೧. ಈ ಬಗೆಯಿಂದ ಸೂರ್ಯಪರಮಾತ್ಮನ ಸ್ತುತಿಯನ್ನು ಮಾಡುತ್ತ ವಿಶ್ವಕರ್ಮಪ್ರಜಾಪತಿಯು ಸೂರ್ಯನ ಬಿಂಬದಲ್ಲಿರುವ ತೇಜಸ್ಸಿನಲ್ಲಿ ಹದಿನಾರನೆಯ ಒಂದು ಭಾಗವನ್ನು ಮಾತ್ರ ಉಳಿಸಿದನು.

೨. ಆಗ ಸೂರ್ಯಬಿಂಬದಲ್ಲಿದ್ದ ತೇಜೋಭಾಗಗಳಲ್ಲಿ ಹದಿನೈದು ಭಾಗಗಳನ್ನು ವಿಶ್ವಕರ್ಮನು ತೆಗೆದುಹಾಕಿದುದರಿಂದ ಒಂದು ಅವಶೇಷಭಾಗದಿಂದ ಕೂಡಿದ ಬಿಂಬವು ಅತಿಶಯವಾದ ಕಾಂತಿಯಿಂದ ಕೂಡಿ ಮನೋಹರವಾಯಿತು.

೩. ಸೂರ್ಯಬಿಂಬದಲ್ಲಿದ್ದ ತೇಜಸ್ಸುಗಳಲ್ಲಿ ಯಾವ ತೇಜಸ್ಸಿನ ಅಂಶಗಳು ತೆಗೆಯಲ್ಪಟ್ಟುವೊ ಅವುಗಳಿಂದ ವಿಷ್ಣುವಿನ ಚಕ್ರಾಯುಧವೂ, ಈಶ್ವರನ ತ್ರಿಶೂಲಾಯುಧವೂ ಮತ್ತು ಕುಬೇರನ ಪಲ್ಲಕ್ಕಿಯೂ ರಚಿಸಲ್ಪಟ್ಟುವು.

ದಣ್ಡಃ ಪ್ರೇತಪತೇಃ ಶಕ್ತಿರ್ದೇವಸೇನಾಪತೇಸ್ತಥಾ ।
ಅನ್ಯೇಷಾಂ ಚೈವ ದೇವಾನಾಮಾಯುಧಾನಿ ಸ ವಿಶ್ವಕೃತ್ ॥೪॥

ಚಕಾರ ತೇಜಸಾ ಭಾನೋರ್ಭಾಸುರಾಣ್ಯರಿಶಾನ್ತಯೇ ।
ಇತಿ ಶಾತಿತತೇಜಾಃ ಸ ಶುಶುಭೇ ನಾತಿತೇಜಸಾ ॥೫॥

ವಪುರ್ದಧಾರ ಮಾರ್ತಣ್ಡಃ ಸರ್ವಾವಯವಶೋಭನಮ್ ।
ಸ ದದರ್ಶ ಸಮಾಧಿಸ್ಥಃ ಸ್ವಾಂ ಭಾರ್ಯಾಂ ವಡವಾಕೃತಿಮ್ ॥೬॥

ಅಧೃಷ್ಯಾಂ ಸರ್ವಭೂತಾನಾಂ ತಪಸಾ ನಿಯಮೇನ ಚ ।
ಉತ್ತರಾಂಶ್ಚ ಕುರೂನ್ಗತ್ವಾ ಭೂತ್ವಾಶ್ವೋ ಭಾನುರಾಗಮತ್ ॥೭॥

---

೪. ಮತ್ತು ವಿಶ್ವಕರ್ಮಪ್ರಜಾಪತಿಯು ಸೂರ್ಯತೇಜಸ್ಸಿನಿಂದ ಪ್ರೇತಪತಿಯಾದ ಯಮನ ದಂಡವನ್ನೂ, ದೇವಸೇನೆಯ ನಾಯಕನಾದ ಕುಮಾರಸ್ವಾಮಿಯ ಶಕ್ತಿ-ಆಯುಧವನ್ನೂ ಮತ್ತು ಇತರ ದೇವತೆಗಳ ಆಯಾಯ ಆಯುಧಗಳನ್ನೂ ನಿರ್ಮಿಸಿದನು.

೫. ಹೀಗೆ ಸೂರ್ಯನ ತೇಜಸ್ಸಿನಿಂದ ಶತ್ರುಗಳನ್ನು ಸಂಹಾರ ಮಾಡಲು ಸಾಧನವಾದ ಮತ್ತು ಉಜ್ಜ್ವಲವಾದ ಆಯುಧಗಳನ್ನು ರಚಿಸಿದನು. ಹೀಗೆ ಕ್ಷಯಗೊಳಿಸಿದ ತೇಜಸ್ಸುಳ್ಳ ಸೂರ್ಯನು ಸೌಮ್ಯವಾದ ತೇಜಸ್ಸಿನಿಂದ ಪ್ರಕಾಶಿಸಿದನು.

೬. ಆಗ ಸೂರ್ಯನು ಸಮಸ್ತ ಅವಯವಗಳಲ್ಲಿ ಸೌಂದರ್ಯದಿಂದ ಕೂಡಿದ ಮೂರ್ತಿಯನ್ನು ಧರಿಸಿದನು. ಮತ್ತು ಸಮಾಧಿಸ್ಥಿತಿಯನ್ನು ಕೈಗೊಂಡವನಾಗಿ ಹೆಣ್ಣುಕುದುರೆಯ ರೂಪದಿಂದ ಇದ್ದ ತನ್ನ ಪತ್ನಿಯಾದ ಸಂಜ್ಞಾದೇವಿಯನ್ನು ಧ್ಯಾನದೃಷ್ಟಿಯಿಂದ ಕಂಡನು.

೭. ಕಠಿನವಾದ ತಪಶ್ಚರ್ಯೆ-ನಿಯಮಗಳಿಂದ ಸಮಸ್ತಪ್ರಾಣಿಗಳಿಗೆ ಅಲಕ್ಷ್ಯಮಾಡಲಾಗದ ತನ್ನ ಪತ್ನಿಯನ್ನು ಧ್ಯಾನದೃಷ್ಟಿಯಿಂದ ನೋಡಿದ ಸೂರ್ಯನು ತಾನು ಕುದುರೆಯರೂಪವನ್ನು ಧರಿಸಿ ಉತ್ತರ ಕುರುಕ್ಷೇತ್ರಕ್ಕೆ ಬಂದನು.

ಸಾ ಚ ದೃಷ್ಟ್ವಾ ತಮಾಯಾನ್ತಂ ಪರಪುಂಸೋ ವಿಶಙ್ಕಯಾ ।
ಜಗಾಮ ಸಮ್ಮುಖೀ ತಸ್ಯ ಪೃಷ್ಠರಕ್ಷಣತತ್ಪರಾ ॥೮॥

ತತಶ್ಚ ನಾಸಿಕಾಯೋಗಂ ತಯೋಸ್ತತ್ರ ಸಮೇತಯೋಃ ।
ವಡವಾಯಾಂ ಚ ತತ್ತೇಜೋ ನಾಸಿಕಾಭ್ಯಾಂ ವಿವಸ್ವತಃ ॥೯॥

ದೇವೌ ತತ್ರ ಸಮುತ್ಪನ್ನಾವಶ್ವಿನೌ ಭಿಷಜಾಂ ವರೌ ।
ನಾಸತ್ಯದಸ್ರೌ ತನಯಾವಶ್ವಿವಕ್ತ್ರಾದ್ವಿನಿರ್ಗತೌ ॥೧೦॥

ಮಾರ್ತಣ್ಡಸ್ಯ ಸುತಾವೇತಾವಶ್ವರೂಪಧರಸ್ಯ ಹಿ ।
ರೇತಸೋಽನ್ತೇ ಚ ರೇವನ್ತಃ ಖಡ್ಗೀ ಧನ್ವೀ ತನುತ್ರಧೃಕ್ ॥೧೧॥

---

೮. ಆಗ ತನ್ನ ಬಳಿಗೆ ಬರುತ್ತಿದ್ದ ಕುದುರೆಯನ್ನು ನೋಡಿ ಸಂಜ್ಞಾದೇವಿಯು ಪರಪುರುಷನೆಂಬ ಶಂಕೆಯಿಂದ ಅವನ ಸಂಗವನ್ನು ಪರಿಹರಿಸುವ ಕಾರಣದಿಂದ ತನ್ನ ಪೃಷ್ಠಭಾಗವನ್ನು ರಕ್ಷಿಸುತ್ತ ತಾನು ಆ ಕುದುರೆಯ ಸಮ್ಮುಖವಾಗಿಹೋಯಿತು.

೯. ಆಗ ಆ ಎರಡು ಕುದುರೆಗಳು ಪರಸ್ಪರ ಅಭಿಮುಖವಾಗಿ ಮೂಗಿನ ಸ್ಥಳದಲ್ಲಿ ಸಂಗವನ್ನು ಹೊಂದಿರಲು ಅಶ್ವಿನಿಯಲ್ಲಿ ವ್ಯಾಪಿಸಿದ ಸೂರ್ಯನ ತೇಜಸ್ಸಿನಿಂದ ಆ ಅಶ್ವಿನಿಯ ಮೂಗಿನ ರಂಧ್ರಗಳಿಂದ ಇಬ್ಬರು ಪುತ್ರರು ಜನಿಸಿದರು.

೧೦. ಅಮೋಘಫಲವನ್ನು ಕೊಡುವವರೂ, ವ್ಯಾಧಿಯನ್ನು ನಾಶಮಾಡುವವರೂ ಎಂಬ ಅರ್ಥದಲ್ಲಿ ನಾಸತ್ಯ-ದಸ್ರ ಎಂಬ ನಾಮಾಂಕನಗಳನ್ನು ಹೊಂದಿದ ದೇವಲೋಕದ ವೈದ್ಯರಾದ ಅಶ್ವಿನೀದೇವತೆಗಳು ಅಶ್ವಿನಿಯ ಮುಖಭಾಗದಿಂದ ಹುಟ್ಟಿಬಂದರು.

೧೧. ಅಶ್ವರೂಪವನ್ನು ಧರಿಸಿದ ಸೂರ್ಯದೇವನಿಂದ ಇಬ್ಬರು ಅಶ್ವಿನೀಕುಮಾರರು ಜನಿಸಿದರು. ಸೂರ್ಯನ ತೇಜೋಭಾಗದಿಂದ ಅಶ್ವಿನೀಕುಮಾರರು ಜನಿಸಿದಮೇಲೆ ವೀರ್ಯದಿಂದ ಖಡ್ಗ-ಬಿಲ್ಲು ಮತ್ತು ಕವಚ—ಇವುಗಳನ್ನು ಧರಿಸಿದ ರೇವಂತನೆಂಬ ಕುಮಾರನು ಜನಿಸಿದನು.

ಅಶ್ವಾರೂಢಃ ಸಮುದ್ಭೂತೋ ಬಾಣತೂಣಸಮನ್ವಿತಃ ।
ತತಃ ಸ್ವರೂಪಮಮಲಂ ದರ್ಶಯಾಮಾಸ ಭಾನುಮಾನ್ ॥೧೨॥

ತಸ್ಯ ಶಾನ್ತಂ ಸಮಾಲೋಕ್ಯ ಸಾ ರೂಪಂ ಮುದಮಾದದೇ ।
ಸ್ವರೂಪಧಾರಿಣೀಂ ಚೇಮಾಂ ಸ ನಿನಾಯ ನಿಜಾಲಯಮ್ ॥೧೩॥

ಸಞ್ಜ್ಞಾಂ ಭಾರ್ಯಾಂ ಪ್ರೀತಿಮತೀಂ ಭಾಸ್ಕರೋ ವಾರಿತಸ್ಕರಃ ॥೧೪॥

ತತಃ ಪೂರ್ವಸುತೋ ಯೋಽಸ್ಯಾಃ ಸೋಽಭೂದ್ವೈವಸ್ವತೋ ಮನುಃ।
ದ್ವಿತೀಯಶ್ಚ ಯಮಃ ಶಾಪಾದ್ಧರ್ಮದೃಷ್ಟಿರನುಗ್ರಹಾತ್ ॥೧೫॥

ಯಮಸ್ತು ತೇನ ಶಾಪೇನ ಭೃಶಂ ಪೀಡಿತಮಾನಸಃ ।
ಧರ್ಮೋಽಭಿರೋಚತೇ ಯಸ್ಮಾದ್ಧರ್ಮರಾಜಸ್ತತಃ ಸ್ಮೃತಃ ॥೧೬॥

---

೧೨. ಮತ್ತು ಆ ರೇವಂತಕುಮಾರನು ಬಿಲ್ಲು-ಬತ್ತಳಿಕೆಗಳನ್ನು ಧರಿಸಿ-ದವನೂ ಅಶ್ವವಾಹನವನ್ನು ಏರಿದವನೂ ಆಗಿ ಜನ್ಮವೆತ್ತಿ ಕಂಗೊಳಿಸಿದನು. ತರುವಾಯ ಸೂರ್ಯನು ನಿರ್ಮಲವೂ ಶಾಂತವೂ ಆದ ತನ್ನ ನಿಜರೂಪವನ್ನು ತೋರಿಸಿದನು.

೧೩. ಸಂಜ್ಞಾದೇವಿಯು ತನ್ನ ಪತಿದೇವನ ಶಾಂತರೂಪವನ್ನು ನೋಡಿ ಆನಂದವನ್ನು ಹೊಂದಿದಳು. ಆಗ ಸೂರ್ಯನು ಅಶ್ವಿನಿಯ ರೂಪವನ್ನು ಬಿಟ್ಟು ನಿಜಸ್ವರೂಪವನ್ನು ಧರಿಸಿದ ಸಂಜ್ಞಾದೇವಿಯನ್ನು ತನ್ನ ಮನೆಗೆ ಕರೆತಂದನು.

೧೪. ಉಷ್ಣಕಿರಣಗಳಿಂದ ಭೂಮಿಯಲ್ಲಿರುವ ನೀರನ್ನು ಶೋಷಣ-ಮಾಡುವ ಸೂರ್ಯನು ಸೌಮ್ಯವಾದ ತನ್ನ ರೂಪವನ್ನು ನೋಡಿ ಪ್ರೀತಿಸುವ ತನ್ನ ಪತ್ನಿಯನ್ನು ಮತ್ತೆ ಹೊಂದಿದನು.

೧೫. ತರುವಾಯ ಸಂಜ್ಞಾದೇವಿಯ ಪುತ್ರರಲ್ಲಿ ಜ್ಯೇಷ್ಠಕುಮಾರನು ವೈವಸ್ವತ ಮನುರಾಜನಾದನು. ಎರಡನೆಯ ಪುತ್ರನಾದ ಯಮನು ಮಾತೃ-ಶಾಪಕ್ಕೆ ಗುರಿಯಾಗಿ ಮತ್ತೆ ಅನುಗ್ರಹದಿಂದ ಧರ್ಮದೃಷ್ಟಿಯುಳ್ಳವನಾದನು.

೧೬. ಆ ಮಾತೃಶಾಪದಿಂದ ಅತಿಶಯವಾಗಿ ನೊಂದಿರುವ ಮನಸ್ಸುಳ್ಳ ಯಮನು ಧರ್ಮಲೋಪಕ್ಕೆ ಭಯಪಟ್ಟು ವಿಶೇಷವಾಗಿ ಧರ್ಮದಲ್ಲಿ ಅಭಿರುಚಿ-ಯುಳ್ಳವನಾದುದರಿಂದ ಅವನು ಧರ್ಮರಾಜನೆಂದು ಸ್ಮರಿಸಲ್ಪಟ್ಟಿರುವನು.

ಕೃಮಯೋ ಮಾಂಸಮಾದಾಯ ಪಾದತಸ್ತೇ ಮಹೀತಲಮ್ ।
ಪತಿಷ್ಯನ್ತೀತಿ ಶಾಪಾನ್ತಂ ತಸ್ಯ ಚಕ್ರೇ ಪಿತಾ ಸ್ವಯಮ್ ॥೧೭॥

ಧರ್ಮದೃಷ್ಟಿರ್ಯತಶ್ಚಾಸೌ ಸಮೋ ಮಿತ್ರೇ ತಥಾಹಿತೇ ।
ತತೋ ನಿಯೋಗೇ ತಂ ಯಾಮ್ಯೇ ಚಕಾರ ತಿಮಿರಾಪಹಃ ॥೧೮॥

ತಸ್ಮೈ ದದೌ ಪಿತಾ ವಿಪ್ರ ಭಗವಾಂಲ್ಲೋಕಪಾಲತಾಮ್ ।
ಪಿತೃಣಾಮಾಧಿಪತ್ಯಂ ಚ ಪರಿತುಷ್ಟೋ ದಿವಾಕರಃ ॥೧೯॥

ಯಮುನಾಂ ಚ ನದೀಂ ಚಕ್ರೇ ಕಲಿನ್ದಾನ್ತರವಾಹಿನೀಮ್ ।
ಅಶ್ವಿನೌ ದೇವಭಿಷಜೌ ಕೃತೌ ಪಿತ್ರಾ ಮಹಾತ್ಮನಾ ॥೨೦॥

ಗುಹ್ಯಕಾಧಿಪತಿತ್ವೇ ಚ ರೇವನ್ತೋ ವಿನಿಯೋಜಿತಃ ॥೨೧॥

---

೧೭. ಯಮನಿಗೆ ಸಂಭವಿಸಿದ ಶಾಪಕ್ಕೆ ತಂದೆಯಾದ ಸೂರ್ಯನು "ನಿನ್ನ ಕಾಲಿನಿಂದ ಮಾಂಸವನ್ನು ತೆಗೆದುಕೊಂಡು ಕ್ರಿಮಿಗಳು ನೆಲಕ್ಕೆ ಬೀಳುವುವು" ಎಂದು ಹೇಳಿ ಅನುಗ್ರಹತೋರಿಸಿ ಪರಿಣಾಮವನ್ನು ಕಲ್ಪಿಸಿದನು.

೧೮. ಅನಂತರ ಅಂಧಕಾರಕ್ಕೆ ಶತ್ರುವಾದ ಸೂರ್ಯನು ಯಮನಲ್ಲಿ ಇರುವ ಧರ್ಮದೃಷ್ಟಿ, ಹಿತ-ಅಹಿತರಲ್ಲಿ ಇರುವ ಸಮತ್ವಬುದ್ಧಿ—ಇವುಗಳನ್ನು ನೋಡಿ ಅವನನ್ನು ಯಮಪದದಲ್ಲಿ ನಿಯೋಜಿಸಿದನು.

೧೯. ದ್ವಿಜೋತ್ತಮನಾದ ಕ್ರೌಷ್ಟುಕಿಯೇ! ಮಹಾಮಹಿಮನೂ, ಯಮನಲ್ಲಿ ಸಂತುಷ್ಟನೂ ಆದ ತಂದೆಯಾದ ಸೂರ್ಯನು ಯಮನಿಗೆ ಪಿತೃಗಳ ಆಧಿಪತ್ಯವನ್ನೂ ಮತ್ತು ಲೋಕಪಾಲಕಪದವನ್ನೂ ಕೊಟ್ಟು ಅನುಗ್ರಹಿಸಿದನು.

೨೦. ಹಾಗು ಮಹಾತ್ಮನಾದ ತಂದೆಯಾದ ಸೂರ್ಯನು ಯಮುನೆ ಎಂಬ ಕನ್ಯೆಯನ್ನು ಕಲಿಂದಗಿರಿಯ ನಡುವೆ ಹರಿಯುವ ನದಿಯನ್ನಾಗಿ ಮಾಡಿದನು. ಅಶ್ವಿನೀಕುಮಾರರನ್ನು ದೇವಲೋಕದ ವೈದ್ಯರನ್ನಾಗಿ ಮಾಡಿದನು.

೨೧. ಮತ್ತು ಪುತ್ರನಾದ ರೇವಂತನನ್ನು ಗುಹ್ಯಕರೆಂಬ ದೇವವರ್ಗದ ಅಧಿಪತಿ ಪದದಲ್ಲಿ ನಿಯೋಜನಮಾಡಿದನು. ಹೀಗೆ ಸಂಜ್ಞಾದೇವಿಯಲ್ಲಿ ಜನಿಸಿದ ಎಲ್ಲ ಕುಮಾರರನ್ನು ಆಯಾಯ ಪದದಲ್ಲಿ ಇರಿಸಿ ಅನುಗ್ರಹಿಸಿದನು.

ಏವಮುಕ್ತ್ವಾಹ ಚ ತತೋ ಭಗವಾಂಲ್ಲೋಕಭಾವಿತಃ ।
ತ್ವಮಪ್ಯಶೇಷಲೋಕಸ್ಯ ಪೂಜ್ಯೋ ವತ್ಸ ಭವಿಷ್ಯಸಿ ॥೨೨॥

ಅರಣ್ಯಾದಿಮಹಾದಾವವೈರಿದಸ್ಯುಭಯೇಷು ಚ ।
ತ್ವಾಂ ಸ್ಮರಿಷ್ಯನ್ತಿ ಯೇ ಮರ್ತ್ಯಾ ಮೋಕ್ಷ್ಯನ್ತೇ ತೇ ಮಹಾಪದಃ ॥೨೩॥

ಕ್ಷೇಮಂ ಬುದ್ಧಿಂ ಸುಖಂ ರಾಜ್ಯಮಾರೋಗ್ಯಂ ಕೀರ್ತಿಮುನ್ನತಿಮ್ ।
ನರಾಣಾಂ ಪರಿತುಷ್ಟಸ್ತ್ವಂ ಪೂಜಿತಃ ಸಮ್ಪ್ರದಾಸ್ಯಸಿ ॥೨೪॥

ಛಾಯಾಸಂಜ್ಞಾಸುತಶ್ಚಾಪಿ ಸಾವರ್ಣಿಃ ಸುಮಹಾಯಶಾಃ ।
ಭಾವ್ಯಃ ಸೋऽನಾಗತೇ ಕಾಲೇ ಮನುಃ ಸಾವರ್ಣಿಕೋऽಷ್ಟಮಃ ॥೨೫॥

ಮೇರುಪೃಷ್ಠೇ ತಪೋ ಘೋರಮದ್ಯಾಪಿ ಚರತಿ ಪ್ರಭುಃ ।
ಭ್ರಾತಾ ಶನೈಶ್ಚರಸ್ತಸ್ಯ ಗ್ರಹೋऽಭೂಚ್ಛಾಸನಾದ್ರವೇಃ ॥೨೬॥

---

೨೨. ಲೋಕದಲ್ಲಿ ಗೌರವಿಸಲ್ಪಟ್ಟವನೂ, ಅಖಂಡಐಶ್ವರ್ಯವಂತನೂ ಆದ ಸೂರ್ಯನು ರೇವಂತನನ್ನು ಕುರಿತು ಹೀಗೆ ಹೇಳಿದನು—ಪುತ್ರನೇ! ನೀನು ಸಮಸ್ತ ಲೋಕಕ್ಕೆ ಪೂಜ್ಯನಾಗುತ್ತೀಯೆ.

೨೩. ಯಾವ ಮಾನವರು ಅರಣ್ಯ, ಕಾಡುಕಿಚ್ಚು, ಶತ್ರು ಅಥವಾ ಕಳ್ಳ-ಕಾಕರು ಇವರ ಭಯಗಳುಂಟಾಗುವ ಪ್ರಸಂಗದಲ್ಲಿ ನಿನ್ನನ್ನು ಸ್ಮರಣ ಮಾಡುವರೊ ಅವರು ಕೂಡಲೆ ಮಹತ್ತಾದ ಆಪತ್ತಿನಿಂದ ಮುಕ್ತರಾಗುವರು.

೨೪. ಮತ್ತು ಮಾನವರಿಂದ ಪೂಜಿಸಲ್ಪಟ್ಟು ಅವರಲ್ಲಿ ಸಂತುಷ್ಟನಾದ ನೀನು ಕ್ಷೇಮ, ಸದ್ಬುದ್ಧಿ, ಸುಖ, ರಾಜ್ಯ, ಆರೋಗ್ಯ, ಕೀರ್ತಿ ಮತ್ತು ಉನ್ನತ-ಪದವೆಂಬ ಫಲಪರಂಪರೆಯನ್ನು ಕೊಡುವವನಾಗುತ್ತೀಯೆ.

೨೫. ಛಾಯಾಸಂಜ್ಞೆಯಲ್ಲಿ ಜನಿಸಿದ ಮಹಾಕೀರ್ತಿಶಾಲಿಯಾದ ಸಾವರ್ಣಿ ಎಂಬ ಪುತ್ರನು ಭವಿಷ್ಯಸಮಯದಲ್ಲಿ ಸಾವರ್ಣಿಕ ಎಂಬ ಎಂಟನೆಯ ಮನುರಾಜನಾಗುವನು.

೨೬. ಸರ್ವಶಕ್ತನಾದ ಆ ಸಾವರ್ಣಿಯು ಈಗ ಮೇರುಗಿರಿ ಶಿಖರದಲ್ಲಿ ಘೋರವಾದ ತಪಸ್ಸನ್ನು ಮಾಡುತ್ತಿರುವನು. ಅವನ ಭ್ರಾತೃವಾದ ಶನೈಶ್ಚರನು ತಂದೆಯಾದ ಸೂರ್ಯನ ಶಾಸನದಂತೆ ಗ್ರಹಮಂಡಲದಲ್ಲಿ ಸೇರಿ ಗ್ರಹರೂಪನಾದನು.

ಯಮೀಯಮೀ ತು ಯಾ ಕನ್ಯಾದಿತ್ಯಸ್ಯಾಭೂದ್ದ್ವಿಜೋತ್ತಮ ।
ಅಭವತ್ಸಾ ಸರಿಚ್ಛ್ರೇಷ್ಠಾ ತಪತೀ ಲೋಕಪಾವನೀ ॥೨೭॥

ಯಸ್ತು ಜ್ಯೇಷ್ಠೋ ಮಹಾಭಾಗಃ ಸರ್ಗೋ ಯಸ್ಯೇದ ಸಾಂಪ್ರ-
ತಮ್ ।
ವಿಸ್ತರಂ ತಸ್ಯ ವಕ್ಷ್ಯಾಮಿ ಮನೋರ್ವೈವಸ್ವತಸ್ಯ ಚ ॥೨೮॥

ಇದಂ ಯೋ ಜನ್ಮ ದೇವಾನಾಂ ಶೃಣುಯಾದ್ವಾ ಪಠೇತ ವಾ ।
ವಿವಸ್ವತಸ್ತನೂಜಾನಾಂ ರವೇರ್ಮಾಹಾತ್ಮ್ಯಮೇವ ಚ ॥೨೯॥

ಆಪದಂ ಪ್ರಾಪ್ಯ ಮುಚ್ಯೇತ ಪ್ರಾಪ್ನುಯಾಚ್ಚ ಮಹಾಯಶಃ ॥೩೦॥

---

೨೭. ದ್ವಿಜೋತ್ತಮನಾದ ಕ್ರೌಷ್ಟುಕಿಯೇ! ಸೂರ್ಯದೇವನಿಗೆ ಕಿರಿಯವಳಾಗಿ ಯಾವ ಕನ್ಯೆಯು ಜನಿಸಿದಳೊ ಅವಳು ಲೋಕವನ್ನು ಪವಿತ್ರ-ಗೊಳಿಸುವ ತಪತಿ ಎಂಬ ನಾಮಾಂಕಿತಳಾದ ಉತ್ತಮ ನದಿಯಾದಳು.

೨೮. ಸೂರ್ಯನ ಪುತ್ರರಲ್ಲಿ ಯಾರು ಜ್ಯೇಷ್ಠನಾಗಿ ಜನಿಸಿರುವನೋ, ಈಗ ಯಾವ ಮನುವಿನ ಸೃಷ್ಟಿಯು ನಡೆಯುತ್ತಿದೆಯೋ ಆ ವೈವಸ್ವತಮನು-ರಾಜನ ಮಾಹಾತ್ಮ್ಯ ವಿಸ್ತಾರವನ್ನು ನಿನಗೆ ಹೇಳುತ್ತೇನೆ.

೨೯. ಹೀಗೆ ಸೂರ್ಯನ ಪುತ್ರನಾಗಿ ಜನಿಸಿದ ಸಮಸ್ತ ದೇವತೆಗಳ ಜನ್ಮಚರಿತ್ರೆಯನ್ನೂ ಮತ್ತು ಸೂರ್ಯನ ಮಾಹಾತ್ಮ್ಯವನ್ನೂ ಶ್ರವಣ ಅಥವಾ ಪಠನಮಾಡುವುದು ಮಾನವರಿಗೆ ಶ್ರೇಯಸ್ಕರವಾಗಿರುವುದು.

೩೦. ಹಾಗೆ ಈ ಚರಿತ್ರೆಯನ್ನು ಶ್ರವಣ ಅಥವಾ ಪಠನ ಮಾಡಿದ ಮಾನವರು ಆಪತ್ತನ್ನು ಕಳೆದುಕೊಂಡವರಾಗಿ ಅತಿಶಯವಾದ ಕೀರ್ತಿಯನ್ನು ಗಳಿಸುವರು.

ಅಹೋರಾತ್ರಕೃತಂ ಪಾಪಮೇತಚ್ಛ್ರವಣಯತೇ ಶ್ರುತಮ್ ।
ಮಾಹಾತ್ಮ್ಯಮಾದಿದೇವಸ್ಯ ಮಾರ್ತಣ್ಡಸ್ಯ ಮಹಾತ್ಮನಃ ॥೩೧॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ರವೇರ್ಮಾಹಾತ್ಮ್ಯವರ್ಣನಂ ನಾಮ ಪಞ್ಚಾಧಿಕಶತತಮೋಽಧ್ಯಾಯಃ

---

೩೧. ಆದಿದೇವನೂ, ಮಹಾಮಹಿಮನೂ ಆದ ಸೂರ್ಯನ ಮಾಹಾತ್ಮ್ಯವನ್ನು ಶ್ರವಣಮಾಡುವುದರಿಂದ ಒಂದು ಹಗಲು ರಾತ್ರಿಗಳಲ್ಲಿ ಮಾಡಿದ ಪಾಪವು ಸಮಗ್ರವಾಗಿ ನಾಶವಾಗುವುದು.

ಮಾರ್ಕಂಡೇಯ ಮಹಾಪುರಾಣದಲ್ಲಿ ನೂರಐದನೆಯ ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಷಡಧಿಕಶತತಮೋಽಧ್ಯಾಯಃ

(ವಿಪ್ರಕೃತಭಾನುಸ್ತುತಿಃ)

ಕ್ರೌಷ್ಟುಕಿರುವಾಚ :—

ಭಗವನ್ ಕಥಿತಃ ಸಮ್ಯಗ್ಭಾನೋಃ ಸನ್ತತಿಸಮ್ಭವಃ ।
ಮಾಹಾತ್ಮ್ಯಮಾದಿದೇವಸ್ಯ ಸ್ವರೂಪಂ ಚಾತಿವಿಸ್ತರಾತ್ ॥೧॥

ಭೂಯೋಽಪಿ ಭಾಸ್ವತಃ ಸಮ್ಯಙ್ಮಾಹಾತ್ಮ್ಯಂ ಮುನಿಸತ್ತಮ ।
ಶ್ರೋತುಮಿಚ್ಛಾಮ್ಯಹಂ ತನ್ಮೇ ಪ್ರಸನ್ನೋ ವಕ್ತುಮರ್ಹಸಿ ॥೨॥

ನೂರಆರನೆಯ ಅಧ್ಯಾಯ

ಕ್ರೌಷ್ಟುಕಿಯು ಹೀಗೆ ಹೇಳಿದನು :—

೧. ಪೂಜ್ಯನಾದ ಮಾರ್ಕಂಡೇಯ ಮುನಿಯೇ! ಸೂರ್ಯದೇವನ ಸಂತತಿಯ ಜನ್ಮಚರಿತ್ರೆಯು ನಿನ್ನಿಂದ ಚನ್ನಾಗಿ ಹೇಳಲ್ಪಟ್ಟಿತು. ಹಾಗು ಆದಿದೇವನಾದ ಸೂರ್ಯನ ಸ್ವರೂಪ ಮತ್ತು ಮಾಹಾತ್ಮ್ಯಗಳು ವಿಸ್ತಾರವಾಗಿ ಹೇಳಲ್ಪಟ್ಟುವು.

೨. ಮುನಿಶ್ರೇಷ್ಠನಾದ ಮಾರ್ಕಂಡೇಯ ಮಹರ್ಷಿಯೇ! ನಾನು ಸೂರ್ಯನ ಮಾಹಾತ್ಮ್ಯವನ್ನು ಇನ್ನೂ ಚನ್ನಾಗಿ ಶ್ರವಣಮಾಡಲು ಇಷ್ಟವುಳ್ಳವನಾಗಿದ್ದೇನೆ. ಪ್ರಸನ್ನನಾದ ನೀನು ಅದನ್ನು ನನಗೆ ಹೇಳಿ ಅನುಗ್ರಹಿಸಬೇಕು.

ಮಾರ್ಕಣ್ಡೇಯ ಉವಾಚ :—

ಶ್ರೂಯತಾಮಾದಿದೇವಸ್ಯ ಮಾಹಾತ್ಮ್ಯಂ ಕಥಯಾಮಿ ತೇ ।
ವಿವಸ್ವತೋ ಯಚ್ಚಕಾರ ಪೂರ್ವಮಾರಾಧಿತೋ ಜನೈಃ ॥೧॥

ದಮಸ್ಯ ಪುತ್ರೋ ವಿಖ್ಯಾತೋ ರಾಜಾಭೂದ್ರಾಜ್ಯವರ್ಧನಃ ।
ಸ ಸಮ್ಯಕ್ಪಾಲನಂ ಚಕ್ರೇ ಪೃಥಿವ್ಯಾಃ ಪೃಥಿವೀಪತಿಃ ॥೨॥

ಧರ್ಮತಃ ಪಾಲ್ಯಮಾನಂ ತು ತೇನ ರಾಷ್ಟ್ರಂ ಮಹಾತ್ಮನಾ ।
ವವೃಧೇಽನುದಿನಂ ವಿಪ್ರ ಜನೇನ ಚ ಧನೇನ ಚ ॥೩॥

ಹೃಷ್ಟಪುಷ್ಟಮತೀವಾಸೀತ್ತಸ್ಮಿನ್ ರಾಜನ್ಯಶೇಷತಃ ।
ನಿರ್ಭಯಾಃ ಸಕಲಶ್ಚೋರ್ವ್ಯಾಂ ಪೌರಜಾನಪದೋ ಜನಃ ॥೪॥

ನೋಪಸರ್ಗೋ ನ ಚ ವ್ಯಾಧಿರ್ನ ಚ ವ್ಯಾಲೋದ್ಭವಂ ಭಯಮ್ ।
ನ ಚಾವೃಷ್ಟಿಭಯಂ ತತ್ರ ದಮಪುತ್ರೇ ಮಹೀಪತೌ ॥೫॥

ಮಾರ್ಕಂಡೇಯ ಮುನಿಯು ಇಂತೆಂದನು :—

೧. ಪೂರ್ವಕಾಲದಲ್ಲಿ ಜನರಿಂದ ಆರಾಧಿಸಲ್ಪಟ್ಟು ಸೂರ್ಯದೇವನು ಯಾವ ಚರಿತ್ರವನ್ನು ನಡೆಯಿಸಿದನೋ ಅಂತಹ ಆದಿದೇವನಾದ ಸೂರ್ಯನ ಮಾಹಾತ್ಮ್ಯವನ್ನು ನಾನು ವರ್ಣಿಸುವೆನು. ನೀನು ಅದನ್ನು ಕೇಳು.

೨. ಹಿಂದೆ ದಮಭೂಪಾಲಕನ ಪುತ್ರನೂ ರಾಜ್ಯವರ್ಧನನೆಂದು ಖ್ಯಾತಿಗಳಿಸಿದವನೂ ಆದ ಒಬ್ಬ ರಾಜನಿದ್ದನು. ಅವನು ರಾಜ್ಯಾಧಿಕಾರವನ್ನು ಹೊಂದಿದವನಾಗಿ ಚನ್ನಾಗಿ ಭೂಮಿಯನ್ನು ರಕ್ಷಿಸಿದನು.

೩. ವಿಪ್ರೋತ್ತಮನೇ! ಮಹಾತ್ಮನಾದ ರಾಜ್ಯವರ್ಧನನಿಂದ ಪಾಲಿಸಲ್ಪಟ್ಟು ಆ ರಾಜ್ಯವು ಪ್ರತಿದಿನವೂ ಜನ-ಧನಸಮೃದ್ಧಿಯಿಂದ ವೃದ್ಧಿಗೊಂಡಿತು.

೪. ರಾಜ್ಯವರ್ಧನನು ರಾಜ್ಯಭಾರಮಾಡುತ್ತಿರಲು ದೇಶವೆಲ್ಲವೂ ಹೆಚ್ಚಾಗಿ ಹೃಷ್ಟ-ಪುಷ್ಟವಾಗಿದ್ದಿತು. ಮತ್ತು ಪುರ-ಜನಪದಗಳಿಗೆ ಸೇರಿದ ಸಮಸ್ತ ಜನರು ನಿರ್ಭಯರಾಗಿ ವಾಸಮಾಡುತ್ತಿದ್ದರು.

೫. ದಮಭೂಪತಿಯ ಪುತ್ರನಾದ ರಾಜ್ಯವರ್ಧನನು ರಾಜನಾಗಿರಲು ದೇಶದಲ್ಲಿ ಅನಾವೃಷ್ಟಿಯ ಪೀಡೆ, ದುಷ್ಟಜಂತುಗಳ ಹಿಂಸೆ, ರೋಗಬಾಧೆ ಅಥವಾ ಮತ್ತಾವ ವಿಧದ ಉಪಸರ್ಗಪೀಡೆಯೂ ಇರಲಿಲ್ಲ.

ಸ ಈಜೇ ಚ ಮಹಾಯಜ್ಞೈರ್ದದೌ ದಾನಾನಿ ಚಾರ್ಥಿನಾಮ್ ।
ಸುಧರ್ಮಸ್ಯಾವಿರೋಧೇನ ಬುಭುಜೇ ವಿಷಯಾನಪಿ ॥೮॥

ತಸ್ಯೈವಂ ಕುರ್ವತೋ ರಾಜ್ಯಂ ಸಮ್ಯಕ್ಪಾಲಯತಃ ಪ್ರಜಾಃ ।
ಸಪ್ತವರ್ಷಸಹಸ್ರಾಣಿ ಜಗ್ಮುರೇಕಮಹರ್ಯಥಾ ॥೯॥

ವಿದೂರಥಸ್ಯ ತನಯಾ ದಾಕ್ಷಿಣಾತ್ಯಸ್ಯ ಭೂಭೃತಃ ।
ತಸ್ಯ ಪತ್ನೀ ಬಭೂವಾಥ ಮಾನಿನೀ ನಾಮ ಮಾನಿನೀ ॥೧೦॥

ಕದಾಚಿತ್ತಸ್ಯ ಸಾ ಸುಭ್ರೂಃ ಶಿರಸೋಽಭ್ಯಞ್ಜನಾದೃತಾ ।
ಪಶ್ಯತೋ ರಾಜಲೋಕಸ್ಯ ಮುಮೋಚಾಶ್ರೂಣಿ ಮಾನಿನೀ ॥೧೧॥

ತದಶ್ರುಬಿನ್ದವೋ ಗಾತ್ರೇ ಯದಾ ತಸ್ಯ ಮಹೀಪತೇಃ ।
ತದಾ ವೀಕ್ಷ್ಯಾಶ್ರುವದನಾಂ ತಾಮಪೃಚ್ಛತ ಮಾನಿನೀಮ್ ॥೧೨॥

---

೮. ಆ ರಾಜನು ದೊಡ್ಡ ದೊಡ್ಡ ಯಜ್ಞಗಳನ್ನು ಮಾಡಿದನು. ಅರ್ಥಿಗಳಿಗೆ ವಿಶೇಷವಾಗಿ ದಾನಮಾಡಿದನು. ಮತ್ತು ಧರ್ಮಕ್ಕೆ ವಿರೋಧವಿಲ್ಲದಂತೆ ವಿವಿಧವಾದ ವಿಷಯ ಭೋಗಗಳನ್ನು ಅನುಭವಿಸಿದನು.

೯. ರಾಜ್ಯವರ್ಧನನು ಈ ವಿಧವಾಗಿ ರಾಜ್ಯಭಾರವನ್ನು ಮಾಡುತ್ತಿರಲು ಮತ್ತು ಪ್ರಜೆಗಳನ್ನು ಚನ್ನಾಗಿ ಪಾಲಿಸುತ್ತಿರಲು ಏಳು ಸಹಸ್ರ ವರ್ಷಗಳಷ್ಟು ದೀರ್ಘಕಾಲವು ಒಂದು ದಿನವು ಕಳೆದಹಾಗೆ ಕಳೆದುಹೋಯಿತು.

೧೦. ಅವನಿಗೆ ದಕ್ಷಿಣದೇಶದ ರಾಜನಾದ ವಿದೂರಥ ಎಂಬುವನ ಮಗಳೂ ಮತ್ತು ಮಾನಿನೀ ಎಂಬ ನಾಮಾಂಕನಕ್ಕೆ ಅನುರೂಪವಾಗಿ ಅಭಿಮಾನವತಿಯೂ ಆದ ಪತ್ನಿಯಿದ್ದಳು.

೧೧. ಒಂದು ಸಮಯದಲ್ಲಿ ಸುಂದರಿಯಾದ ಆ ಮಾನಿನಿಯು ಪತಿಯ ಅಭ್ಯಂಜನ ಉಪಚಾರದಲ್ಲಿ ಆದರವತಿಯಾಗಿರುವಾಗ ಇತರ ರಾಜಪರಿವಾರವು ನೋಡುತ್ತಿರುವಹಾಗೆ ಕಣ್ಣೀರನ್ನು ಸುರಿಸಿದಳು.

೧೨. ಆಕೆಯ ಕಣ್ಣೀರಿನ ಬಿಂದುಗಳು ಪತಿಯಾದ ರಾಜನ ಗಾತ್ರದಲ್ಲಿ ಬಿದ್ದುವು. ಆಗ ರಾಜನು ಕಣ್ಣೀರು ಸುರಿಸುವ ಮುಖದಿಂದ ಕೂಡಿದ ಪತ್ನಿಯಾದ ಮಾನಿನಿಯನ್ನು ಪ್ರಶ್ನಿಸಿದನು.

ನಿಃಶಬ್ದಮಶ್ರುಮೋಕ್ಷೇಣ ರುದತೀಂ ತಾಂ ವಿಲೋಕ್ಯ ವೈ ।
ಕಿಮೇತದಿತಿ ಪಪ್ರಚ್ಛ ಮಾನಿನೀಂ ರಾಜ್ಯವರ್ಧನಃ ॥೧೩॥

ಪೃಷ್ಟಾ ಸಾ ತು ತತಸ್ತೇನ ಭರ್ತ್ರಾ ಪ್ರಾಹ ಮನಸ್ವಿನೀ ।
ನ ಕಿಂಚಿದಿತಿ ತಾಂ ಭೂಯಃ ಪಪ್ರಚ್ಛ ಸ ಮಹೀಪತಿಃ ॥೧೪॥

ಬಹುಶಃ ಪೃಚ್ಛತಸ್ತಸ್ಯ ಭೂಭೃತಃ ಸಾ ಸುಮಧ್ಯಮಾ ।
ನ ಕಿಂಚಿದಿತಿ ಹೋವಾಚ ಸಾ ಭೂಯೋ ರಾಜ್ಯವರ್ಧನಮ್ ॥೧೫॥

ಕಿಮೇತದಿತಿ ಪಪ್ರಚ್ಛ ಮಾನಿನೀಂ ಪಾರ್ಥಿವಃ ಪುನಃ ॥೧೬॥

ಬಹುಶಃ ಪ್ರೇರಿತಾ ತೇನ ಸಾ ಭರ್ತ್ರಾ ತತ್ರ ಭಾಮಿನೀ ।
ದರ್ಶಯಾಮಾಸ ಪಲಿತಂ ಕೇಶಭಾರಾನ್ತರೋದ್ಭವಮ್ ॥೧೭॥

---

೧೩. ರಾಜ್ಯವರ್ಧನನೆಂಬ ಪತಿಯು ಶಬ್ದವಿಲ್ಲದಂತೆ ಕಣ್ಣೀರನ್ನು ಸುರಿಸುತ್ತ ಅಳುತ್ತಿದ್ದ ಆ ಮಾನಿನಿಯನ್ನು ನೋಡಿ "ಇದೇಕೆ ಹೀಗೆ ಅಳುತ್ತೀಯೆ?" ಎಂದು ಕೇಳಿದನು.

೧೪. ಪತಿಯಿಂದ ಪ್ರಶ್ನಿಸಲ್ಪಟ್ಟ ಅಭಿಮಾನವತಿಯಾದ ಆ ಮಾನಿನಿಯು "ಏನೂ ಇಲ್ಲ" ಎಂದು ಉತ್ತರಹೇಳಿದಳು. ಆಗ ಆ ರಾಜನು ಮತ್ತೆ ಮತ್ತೆ ಹಾಗೆಯೇ ಪ್ರಶ್ನಿಸಿದನು.

೧೫. ಕೃಶವಾದ ನಡುವಿನಿಂದ ಕೂಡಿದ ಮಾನಿನಿಯು ಪತಿಯಿಂದ ಮತ್ತೆ ಮತ್ತೆ ಅನೇಕಾವೃತ್ತಿಯಾಗಿ ಪ್ರಶ್ನಿಸಲ್ಪಟ್ಟರೂ "ಏನೂ ಇಲ್ಲ" ಎಂದೇ ಪತಿಯಾದ ರಾಜ್ಯವರ್ಧನನಿಗೆ ಉತ್ತರ ಕೊಟ್ಟಳು.

೧೬. ಆದರೆ ರಾಜ್ಯವರ್ಧನನು ಉದಾಸೀನನಾಗಿರದೇ ಮತ್ತೆ ಮತ್ತೆ "ಇದೇನು? ಹೀಗೆ ಅಳಲು ಕಾರಣವೇನು?" ಎಂದು ಆಗ್ರಹದಿಂದ ಕೇಳಿದನು.

೧೭. ಹೀಗೆ ಅನೇಕಸಲ ಪತಿಯಿಂದ ಅಳಲು ಕಾರಣವನ್ನು ಪ್ರಶ್ನಿಸ-ಲ್ಪಟ್ಟ ಮಾನಿನಿಯು ರಾಜನ ಕೇಶಭಾರದಲ್ಲಿ ನೆರೆತಿರುವ ಒಂದು ಕೂದಲನ್ನು ತೋರಿಸಿದಳು.

ಏತತ್ಪಶ್ಯೇತಿ ಭೂಪಾಲ ಕಿಮನ್ಯನ್ಮನ್ಯುಕಾರಣಮ್ ।
ಮಮಾತಿಮನ್ದಭಾಗ್ಯಾಯಾ ಜಹಾಸಾಥ ನೃಪಸ್ತತಃ ॥೧೮॥

ಸ ವಿಹಸ್ಯಾಹ ತಾಂ ಪತ್ನೀಂ ಶೃಣ್ವತಾಂ ಸರ್ವಭೂಭೃತಾಮ್ ।
ಪೌರಾಣಾಂ ಚ ಮಹೀಪಾಲಾ ಯೇ ತತ್ರಾಸನ್ ಸಮಾವೃತಾಃ॥೧೯॥

ಶೋಕೇನಾಲಂ ವಿಶಾಲಾಕ್ಷಿ ರೋದಿತವ್ಯಂ ನ ತೇ ಶುಭೇ ।
ಜನ್ಮರ್ಧಿಪರಿಣಾಮಾದ್ಯಾ ವಿಕಾರಾಃ ಸರ್ವಜನ್ತುಷು ॥೨೦॥

ಅಧೀತಾಃ ಸಕಲಾ ವೇದಾ ಇಷ್ಟಾ ಯಜ್ಞಾಃ ಸಹಸ್ರಶಃ ।
ದತ್ತಂ ದ್ವಿಜಾನಾಂ ಪುತ್ರಾಶ್ಚ ಸಮುತ್ಪನ್ನಾ ವರಾನನೇ ॥೨೧॥

ಭುಕ್ತ್ವಾ ಭೋಗಾಸ್ತ್ವಯಾ ಸಾರ್ಧಂ ಯೇ ಮರ್ತ್ಯೈರತಿದುರ್ಲಭಾಃ ।
ಸಮ್ಯಕ್ಚ ಪಾಲಿತಾ ಪೃಥ್ವೀ ಶೌರ್ಯಂ ಯುದ್ಧೇಷ್ವನುಷ್ಠಿತಮ್॥೨೨॥

---

೧೮. ರಾಜನಾದ ಪತಿದೇವನೇ! ಇದನ್ನು ನೋಡು. ಇದಲ್ಲದೆ ಮಂದಭಾಗ್ಯಳಾದ ನನಗೆ ಇನ್ನೇನು ಶೋಕಕಾರಣವುಂಟಾಗುವುದಿದೆ? ಎಂದು ತೋರಿಸುತ್ತಿರಲು ರಾಜನು ಅದನ್ನು ನೋಡಿ ನಕ್ಕನು.

೧೯. ಹೀಗೆ ರಾಜನು ನಕ್ಕು ಅಲ್ಲಿ ಸೇರಿದ್ದ ಅನೇಕ ರಾಜರು, ಪುರಜನರು ಎಲ್ಲರೂ ಕೇಳುತ್ತಿರುವ ಹಾಗೆ ತನ್ನ ಪತ್ನಿಯನ್ನು ಕುರಿತು ಈರೀತಿಯಾಗಿ ಹೇಳಿದನು.

೨೦. ವಿಶಾಲವಾದ ನೇತ್ರವುಳ್ಳವಳೇ! ದುಃಖಪಡಬೇಡ. ಮಂಗಳಾಂಗಿಯಾದ ಮಾನಿನಿಯೇ! ನೀನು ಅಳಬೇಡ. ಜನ್ಮ-ವೃದ್ಧಿ-ಕ್ಷಯ ಮುಂತಾದ ವಿಕಾರಗಳು ಎಲ್ಲ ಜಂತುಗಳಲ್ಲಿಯೂ ಉಂಟಾಗುವುವು.

೨೧. ಸುಂದರವಾದ ಮುಖವುಳ್ಳ ಮಾನಿನಿಯೇ! ನಾನು ಸಕಲ ವೇದಗಳನ್ನು ಅಧ್ಯಯನಮಾಡಿರುವೆನು. ಸಹಸ್ರಾರು ಯಜ್ಞಗಳನ್ನು ಆಚರಿಸಿದ್ದೇನೆ. ದ್ವಿಜೋತ್ತಮರಲ್ಲಿ ದಾನಮಾಡಿರುವೆನು. ಮತ್ತು ಪುತ್ರಸಂತತಿಯನ್ನು ಹೊಂದಿದ್ದೇನೆ.

೨೨. ಮತ್ತು ಮಾನವರಿಗೆ ಅತಿ ದುರ್ಲಭವಾದ ವಿಷಯಭೋಗಗಳನು ನಿನ್ನ ಸಂಗಡ ಅನುಭವಿಸಿದ್ದೇನೆ. ಭೂಮಿಯನ್ನು ಚನ್ನಾಗಿ ಪಾಲಿಸಿದ್ದೇನೆ. ಹಾಗು ಯುದ್ಧದಲ್ಲಿ ನಿರುಪಮವಾದ ಶೌರ್ಯವನ್ನು ತೋರಿಸಿದ್ದೇನೆ.

ಮಿತ್ರೈಃ ಸಹೇಷ್ಟೈರ್ಹಸಿತಂ ವಿಹೃತಂ ಚ ವನಾನ್ತರೇ ।
ಕಿಮನ್ಯನ್ನ ಕೃತಂ ಭದ್ರೇ ಪಲಿತೇಭ್ಯೋ ಬಿಭೇಷಿ ಯತ್ ॥೨೩॥

ಭವನ್ತು ಕೇಶಾಃ ಪಲಿತಾ ವಲಯಃ ಸನ್ತು ಮೇ ಶುಭೇ ।
ಶೈಥಿಲ್ಯಮೇತು ಮೇ ಕಾಯಃ ಕೃತಕೃತ್ಯೋಽಸ್ಮಿ ಮಾನಿನಿ ॥೨೪॥

ಮೂರ್ಧ್ನಿ ಯದ್ದರ್ಶಿತಂ ಭದ್ರೇ ಭವತ್ಯಾ ಪಲಿತಂ ಮಮ ।
ಚಿಕಿತ್ಸಾಮೇವ ತಸ್ಯಾಹಂ ಕರೋಮಿ ವನಸಂಶ್ರಯಾತ್ ॥೨೫॥

ಬಾಲ್ಯೇ ಬಾಲಕ್ರಿಯಾ ಪೂರ್ವಂ ತದ್ವತ್ಕೌಮಾರಕೇ ಚ ಯಾ ।
ಯೌವನೇ ಚಾಪಿ ಯಾ ಯೋಗ್ಯಾ ವಾರ್ಧಕೇ ವನಸಂಶ್ರಯಾ॥೨೬॥

---

೨೩. ಇಷ್ಟಮಿತ್ರರೊಡನೆ ಹಾಸ್ಯವಿನೋದವನ್ನು ಅನುಭವಿಸಿದ್ದೇನೆ. ಮತ್ತು ಅವರೊಡನೆ ವನದಲ್ಲಿ ಯಥೇಚ್ಛವಾಗಿ ವಿಹರಿಸಿದ್ದೇನೆ. ಸುಂದರಾಂಗಿಯೇ! ನಾನು ಮಾಡದಿರುವ ಸುಕರ್ತವ್ಯವು ಇನ್ನೇನು ಇದೆ? ತಲೆಯು ನೆರೆತಿರುವುದಕ್ಕೆ ನೀನು ಏಕೆ ಅಂಜುತ್ತೀಯೆ?

೨೪. ಮಾನಿನಿಯೇ! ನಾನು ಮಾಡಬೇಕಾದುದನ್ನು ಎಲ್ಲ ಪೂರೈಸಿರುವೆನು. ನನ್ನ ಕೂದಲು ಬೆಳ್ಳಗಾಗಲಿ; ನನ್ನ ದೇಹದಲ್ಲಿ ವಲಿಗಳು ಉಂಟಾಗಲಿ ಅಥವಾ ನನ್ನ ದೇಹವು ಜೀರ್ಣವಾಗಿಹೋಗಲಿ.

೨೫. ಕಲ್ಯಾಣಶೀಲಳೇ! ನಿನ್ನಿಂದ ನನ್ನ ತಲೆಯಲ್ಲಿ ಯಾವ ಬಿಳಿಯ-ಕೂದಲು ತೋರಿಸಲ್ಪಟ್ಟಿತೊ ಅದಕ್ಕೆ ಪ್ರತೀಕಾರಮಾಡುವೆನು. ಸರ್ವಸಂಗ-ತ್ಯಾಗವನ್ನು ಮಾಡಿ ವನವನ್ನು ಸೇವಿಸಿ ಅದಕ್ಕೆ ಚಿಕಿತ್ಸೆಯನ್ನು ಮಾಡುವೆನು.

೨೬. ಬಾಲ್ಯಾವಸ್ಥೆಯಲ್ಲಿ ಬಾಲಕರಿಗೆ ಯೋಗ್ಯವೆನಿಸುವ ಕ್ರೀಡಾದಿ-ಯಂತೆ, ಕೌಮಾರಾವಸ್ಥೆಯಲ್ಲಿ ಕುಮಾರರಿಗೆ ಯೋಗ್ಯವಾದ ಶಿಕ್ಷಣಾದಿಯಂತೆ ಮತ್ತು ಯೌವನಾವಸ್ಥೆಯಲ್ಲಿ ಕಾಮಸುಖಭೋಗದಂತೆ ಮುಪ್ಪಿನಲ್ಲಿ ಅರಣ್ಯ-ವಾಸವು ಕರ್ತವ್ಯವಾದುದು.

ಏವಂ ಮತ್ಪೂರ್ವಜೈಭದ್ರೇ ಕೃತಂ ತ್ವತ್ಪೂರ್ವಜೈಶ್ಚ ಯತ್ ।
ಅತೋ ನ ತೇಽಶ್ರುಪಾತಸ್ಯ ಕಿಂಚಿತ್ಪಶ್ಯಾಮಿ ಕಾರಣಮ್ ॥೨೭॥

ಅಲಂ ತೇ ಮನ್ಯುನಾ ಭದ್ರೇ ನನ್ವಭ್ಯುದಯಕಾರಿ ಮೇ ।
ದರ್ಶನಂ ಪಲಿತಸ್ಯಾಸ್ಯ ಮಾ ರೋದೀರ್ನಿಷ್ಪ್ರಯೋಜನಮ್ ॥೨೮॥

ಮಾರ್ಕಣ್ಡೇಯ ಉವಾಚ :—

ತತಃ ಪ್ರಣಮ್ಯ ತಂ ಭೂಪಾಃ ಪೌರಾಶ್ಚೈವ ಸಮೀಪಗಾಃ ।
ಸಾಮ್ನಾ ಪ್ರೋಚುರ್ಮಹೀಪಾಲಾ ಮಹರ್ಷೇ ರಾಜ್ಯವರ್ಧನಮ್ ॥೨೯॥

ನ ರೋದಿತವ್ಯಮನಯಾ ತವ ಪತ್ನ್ಯಾ ನರಾಧಿಪ ।
ರೋದಿತವ್ಯಮಿಹಾಸ್ಮಾಭಿರಥವಾ ಸರ್ವಜನ್ತುಭಿಃ ॥೩೦॥

---

೨೭. ಮಂಗಳಾಂಗಿಯೆ ! ನನ್ನ ಪೂರ್ವಿಕರಿಂದ ಆಯಾಯ ಅವಸ್ಥೆಗಳಿಗೆ ಯೋಗ್ಯವಾದ ಕರ್ತವ್ಯವು ನೆರವೇರಿಸಲ್ಪಟ್ಟಿದೆ. ಹಾಗು ನಿನ್ನ ಪೂರ್ವಜರಿಂದಲೂ ಹಾಗೆಯೇ ಆಚರಿಸಲ್ಪಟ್ಟಿದೆ. ಹೀಗಿರುವುದರಿಂದ ನೀನು ಕಣ್ಣೀರಿಡುವುದಕ್ಕೆ ಏನೊಂದು ಕಾರಣವನ್ನೂ ನಾನರಿಯೆನು.

೨೮. ಕಲ್ಯಾಣಶೀಲಳೇ ! ನೀನು ಶೋಕಪಡಬೇಡ, ನನ್ನ ಶಿರದಲ್ಲಿ ಹೀಗೆ ಕೂದಲಿನ ನೆರೆಯ ಬಿಳುಪು ಕಂಡಿರುವುದು ನನಗೆ ಶ್ರೇಯಸ್ಕರವಾಗಿರುವುದು. ಹೀಗಿರಲು ನಿರರ್ಥಕವಾಗಿ ನೀನು ಅಳಬೇಡ.

ಮಾರ್ಕಂಡೇಯ ಮುನಿಯು ಹೀಗೆಂದನು :—

೨೯. ಕ್ರೌಷ್ಟುಕಿಮಹರ್ಷಿಯೇ ! ತರುವಾಯ ಧೊರೆಯ ಸಮೀಪದಲ್ಲಿದ್ದ ಆಯಾಯ ದೇಶಪಾಲಕರಾದ ರಾಜರು ಮತ್ತು ಪುರಜನರು ಆ ರಾಜ್ಯವರ್ಧನನನ್ನು ನಮಸ್ಕಾರಮಾಡಿ ಸಮಾಧಾನದಿಂದ ಈರೀತಿಯಾಗಿ ಹೇಳಿದರು.

೩೦. ಎಲೈ ನರಾಧಿಪತಿಯಾದ ರಾಜ್ಯವರ್ಧನನೇ ! ನಿನ್ನ ಧರ್ಮಪತ್ನಿಯಾದ ಮಾನಿನಿಯು ಅಳಬಾರದೆಂಬುದು ನಿಜವು. ಈ ಪ್ರಸಂಗದಲ್ಲಿ ನಾವೆಲ್ಲರೂ ಅಳಬೇಕಾಗಿದೆ. ಅಥವಾ ಸಮಸ್ತ ಜಂತುಗಳು ಅಳಬೇಕಾಗಿರುವುದು.

ತ್ವಂ ಬ್ರವೀಷಿ ಯಥಾ ನಾಥ ವನವಾಸಾಶ್ರಿತಂ ವಚಃ ।
ಪತನ್ತಿ ತೇನ ನಃ ಪ್ರಾಣಾ ಲಾಲಿತಾನಾಂ ತ್ವಯಾ ನೃಪ ॥೩೧॥

ಸರ್ವೇ ಯಾಸ್ಯಾಮಹೇ ಭೂಪ ಯದಿ ಯಾತಿ ಭವಾನ್ವನಮ್ ।
ತತೋಽಶೇಷಕ್ರಿಯಾಹಾನಿಃ ಸರ್ವಪೃಥ್ವೀನಿವಾಸಿನಾಮ್ ॥೩೨॥

ಭವಿಷ್ಯತಿ ನ ಸನ್ದೇಹಸ್ತ್ವಯಿ ನಾಥ ವನಾಶ್ರಯೇ ।
ಸಾ ಚ ಧರ್ಮೋಪಘಾತಾಯ ಯದಿ ತತ್ಪ್ರವಿಮುಚ್ಯತಾಮ್॥೩೩॥

ಸಪ್ತವರ್ಷಸಹಸ್ರಾಣಿ ತ್ವಯೇಯಂ ಪಾಲಿತಾ ಮಹೀ ।
ತತ್ಸಮುತ್ಥಂ ಮಹಾಪುಣ್ಯಮಾಲೋಕಯ ನರಾಧಿಪ ॥೩೪॥

---

೩೧. ಎಲೈ ಪ್ರಭುವೇ ! ರಾಜನೇ ! ನೀನು ವನವಾಸದ ವಿಷಯವಾಗಿ ಯಾವ ವಚನವನ್ನು ಆಡುತ್ತಲಿರುವೆಯೋ ಆ ಮಾತಿನಿಂದ ಇದುವರೆಗೆ ನಿನ್ನಿಂದ ಲಾಲಿಸಲ್ಪಟ್ಟು ಬದುಕಿಬಂದ ನಮ್ಮ ಪ್ರಾಣಗಳು ಹಾರಿಹೋಗುತ್ತಿವೆ.

೩೨. ಭೂಪತಿಯಾದ ರಾಜ್ಯವರ್ಧನನೇ ! ನೀನು ವನಕ್ಕೆ ಹೋಗುವುದು ನಿಜವಾದರೆ ನಿನ್ನ ಸಂಗಡ ನಾವೆಲ್ಲರೂ ವನಕ್ಕೆ ಬರುವೆವು. ಆಗ ಪೃಥಿವಿಯಲ್ಲಿ ವಾಸಮಾಡತಕ್ಕವರೆಲ್ಲರಿಗೂ ಅವರವರ ಕರ್ತವ್ಯಕ್ರಿಯೆಗಳಿಗೆ ಸಂಪೂರ್ಣವಾಗಿ ಲೋಪವಾಗುವುದು.

೩೩. ರಕ್ಷಕನಾದ ಧೊರೆಯೇ ! ನೀನು ವನವನ್ನು ಆಶ್ರಯಿಸಿದರೆ ನಿಸ್ಸಂದೇಹವಾಗಿ ಸಮಸ್ತ ಪ್ರಜೆಗಳಲ್ಲಿ ಕರ್ತವ್ಯಕ್ರಿಯಾಹಾನಿಯು ಸಂಭವಿಸು-ವುದು. ಅದರಿಂದ ಧರ್ಮಕ್ಕೆ ಭಂಗವುಂಟಾಗುವುದು. ಆದ್ದರಿಂದ ವನವಾಸದ ವಿಷಯವು ತ್ಯಜಿಸಲ್ಪಡಲಿ.

೩೪. ನರರನ್ನು ಪಾಲಿಸುವ ರಾಜ್ಯವರ್ಧನನೇ ! ನೀನು ಏಳು ಸಹಸ್ರ ವರ್ಷಗಳಿಂದ ಈ ಭೂಮಿಯನ್ನು ರಕ್ಷಣಮಾಡಿದ್ದೀಯೆ. ಅಂತಹ ಪ್ರಜಾ-ಪಾಲನೆಯಿಂದ ಜನಿಸಿದ ಪುಣ್ಯಭಾರವನ್ನು ಆಲೋಚಿಸು.

ವನೇ ವಸನ್ ಮಹಾರಾಜ ತ್ವಂ ಕರಿಷ್ಯಸಿ ಯತ್ತಪಃ ।
ತನ್ಮಹೀಪಾಲನಸ್ಯಾಸ್ಯ ಕಲಾಂ ನಾರ್ಹತಿ ಷೋಡಶೀಮ್ ॥೩೫॥

ರಾಜೋವಾಚ :—

ಸಪ್ತವರ್ಷಸಹಸ್ರಾಣಿ ಮಯೇಯಂ ಪಾಲಿತಾ ಮಹೀ ।
ಇದಾನೀಂ ವನವಾಸಸ್ಯ ಮಮ ಕಾಲೋಽಯಮಾಗತಃ ॥೩೬॥

ಮಮಾಪತ್ಯಾನಿ ಜಾತಾನಿ ದೃಷ್ಟ್ವಾ ಮೇಽಪತ್ಯಸನ್ತತೀಃ ।
ಸ್ವಲ್ಪೈರೇವಮಹೋಭಿರ್ಮೇ ಹ್ಯನ್ತಕೋ ನ ಸಹಿಷ್ಯತಿ ॥೩೭॥

ಯದೇತತ್ಪಲಿತಂ ಮೂರ್ಧ್ನಿ ತದ್ವಿಜಾನೀತ ನಾಗರಾಃ ।
ದೂತಭೂತಮನಾರ್ಯಸ್ಯ ಮೃತ್ಯೋರತ್ಯುಗ್ರಕರ್ಮಣಃ ॥೩೮॥

---

೩೫. ಮಹಾರಾಜನೇ! ಇಂದು ವನದಲ್ಲಿ ವಾಸಮಾಡುತ್ತ ನೀನು ಯಾವ ತಪವನ್ನು ಮಾಡಬೇಕೆಂದಿರುವೆಯೋ ಆ ತಪವು ಈ ಭೂಮಿಪಾಲನದ ಹದಿನಾರನೆಯ ಒಂದು ಅಂಶಕ್ಕೆ ಕೂಡ ತುಲ್ಯವಾದುದಲ್ಲ. ಭೂಮಿಪಾಲನದ ಪುಣ್ಯವು ಅತಿಶಯವಾಗಿರುವುದು.

ರಾಜನಿಂತೆಂದನು :—

೩೬. ನನ್ನಿಂದ ಈ ಭೂಮಿಯು ಏಳು ಸಹಸ್ರ ವರ್ಷಗಳಷ್ಟು ದೀರ್ಘ-ಕಾಲದಲ್ಲಿ ರಕ್ಷಿಸಲ್ಪಟ್ಟಿದೆ. ಈಗ ನನಗೆ ಇದನ್ನು ಬಿಟ್ಟು ವನವಾಸದಿಂದ ಜನ್ಮಸಾರ್ಥಕ್ಯವನ್ನು ಸಾಧಿಸಿಕೊಳ್ಳುವ ಕಾಲವು ಬಂದಿರುವುದು.

೩೭. ನನಗಾದರೋ ವಂಶವೃದ್ಧಿಯನ್ನುಂಟುಮಾಡುವ ಸಂತತಿಯು ಜನಿಸಿರುವುದು. ನನ್ನ ಸಂತತಿಪರಂಪರೆಯನ್ನು ನೋಡಿ ಇನ್ನು ಸ್ವಲ್ಪ ದಿವಸ-ಗಳಲ್ಲಿಯೇ ಅಂತಕನು ನನ್ನಲ್ಲಿ ಸಹನೆಯಿಲ್ಲದಂತಾಗುವನು.

೩೮. ಎಲೈ ನಗರವಾಸಿಗಳೇ! ನನ್ನ ಶಿರದಲ್ಲಿ ಇಂದು ಮುಪ್ಪಿನ ಸ್ವಭಾವದ ಯಾವ ಕೂದಲಿನ ಬಿಳುಪು ಕಾಣುತ್ತಿರುವುದೋ ಅದನ್ನು ನೀವು ಘೋರಕರ್ಮಗಳಲ್ಲಿ ತೊಡಗಿದ ನೀಚನಾದ ಅಂತಕನ ದೂತನೆಂದು ತಿಳಿಯಿರಿ.

ಸೋಽಹಂ ರಾಜ್ಯೇ ಸುತಂ ಕೃತ್ವಾ ಭೋಗಾಂಸ್ತ್ಯಕ್ತ್ವಾ ವನಾಶ್ರಯಃ।
ತಪಸ್ತಪ್ಸ್ಯೇ ಸಮಾಯಾನ್ತಿ ನ ಯಾವದ್ಯಮಸೈನಿಕಾಃ ॥೩೯॥

ಮಾರ್ಕಣ್ಡೇಯ ಉವಾಚ :—

ತತೋ ಯಿಯಾಸುಃ ಸ ವನಂ ದೈವಜ್ಞಾನವನೀಪತಿಃ।
ಪುತ್ರಸ್ಯ ರಾಜ್ಯಾಭಿಷೇಕಾಯ ದಿನಲಗ್ನಾನ್ಯಪೃಚ್ಛತ ॥೪೦॥

ಶ್ರುತ್ವಾ ಚ ತೇ ತು ನೃಪತೇರ್ವಚೋವ್ಯಾಕುಲಚೇತಸಃ।
ದಿನಂ ಲಗ್ನಂ ಚ ಹೋರಾಶ್ಚ ನ ವಿದುಃ ಶಾಸ್ತ್ರದೃಷ್ಟಯಃ ॥೪೧॥

ಊಚುಶ್ಚ ತಂ ಮಹೀಪಾಲಂ ದೈವಜ್ಞಾ ಬಾಷ್ಪಗದ್ಗದಮ್।
ಜ್ಞಾನಾನಿ ನಃ ಪ್ರಣಷ್ಟಾನಿ ಶ್ರುತ್ವೈತತ್ತೇ ವಚೋ ನೃಪ ॥೪೨॥

---

೩೯. ಈ ಅವಸ್ಥೆಯನ್ನು ಹೊಂದಿರುವ ನಾನು ರಾಜ್ಯಸಿಹ್ಮಾಸನದಲ್ಲಿ ಪುತ್ರನನ್ನು ಕುಳ್ಳಿರಿಸಿ ವಿಷಯಭೋಗಗಳನ್ನು ದೂರಮಾಡಿ ವನವಾಸಮಾಡುತ್ತ ಇನ್ನು ಯಮನ ಸೈನಿಕರು ನನ್ನ ಬಳಿಗೆ ಬರುವಷ್ಟರಲ್ಲಿ ತಪಸ್ಸನ್ನು ಆಚರಿಸುವೆನು.

ಮಾರ್ಕಂಡೇಯ ಮುನಿಯು ಹೇಳಿದನು :—

೪೦. ಹೀಗೆಂದು ಹೇಳಿದ ತರುವಾಯ ಧೊರೆಯಾದ ರಾಜ್ಯವರ್ಧನನು ಕಾಡಿಗೆ ಹೋಗುವ ದೃಢಸಂಕಲ್ಪವುಳ್ಳವನಾಗಿ ಜ್ಯೋತಿಷ್ಕರನ್ನು ಕುರಿತು ಪುತ್ರನ ಪಟ್ಟಾಭಿಷೇಕಕ್ಕೆ ಯೋಗ್ಯವಾದ ದಿನ-ಲಗ್ನಗಳನ್ನು ಪ್ರಶ್ನಿಸಿದನು.

೪೧. ಜ್ಯೋತಿಃಶಾಸ್ತ್ರದಲ್ಲಿ ಪ್ರವೀಣರಾದ ಆ ಜ್ಯೋತಿಷ್ಕರು ಹೀಗೆಂಬ ರಾಜನ ವಚನವನ್ನು ಕೇಳಿ ಶೋಕದಿಂದ ವ್ಯಾಕುಲವಾದ ಮಾನಸವುಳ್ಳವರಾಗಿ ಪಟ್ಟಾಭಿಷೇಕಯೋಗ್ಯವಾದ ದಿನ-ಲಗ್ನ-ಹೋರಾದಿಗಳನ್ನು ತಿಳಿಯಲಾರದೆ ಹೋದರು.

೪೨. ಮತ್ತು ಆ ಜ್ಯೋತಿಷ್ಕರು ಶೋಕದಿಂದ ಬಾಷ್ಪ-ಗದ್ಗದ ಧ್ವನಿಗಳಿಂದ ಕೂಡಿದವರಾಗಿ ರಾಜ್ಯವರ್ಧನನನ್ನು ಕುರಿತು ಹೀಗೆಂದರು :— ರಾಜನೇ ! ನಿನ್ನ ಈ ವನವಾಸದ ವಚನವನ್ನು ಕೇಳಿ ನಮ್ಮ ಜ್ಞಾನಶಕ್ತಿಯು ಅಡಗಿಹೋಯಿತು.

ತತೋಽನ್ಯನಗರೇಭ್ಯಶ್ಚ ಭೃತ್ಯೈ ರಾಷ್ಟ್ರೇಭ್ಯ ಏವ ಚ ।
ತತಸ್ತಸ್ಮಾಚ್ಚ ನಗರಾತ್ಪ್ರಚುರ್ಯೇಣಾಭ್ಯುಪಾಗಮನ್ ॥೪೩॥

ಸಮುತ್ಪತ್ಯ ಮಹೀಪಾಲಂ ತಂ ಯಿಯಾಂಸುಂ ಮುನೇ ವನಮ್ ।
ಪ್ರಕಮ್ಪಿಶಿರಸೋ ಭೂತ್ವಾ ಪ್ರೋಚುರ್ಬ್ರಾಹ್ಮಣಸತ್ತಮಾಃ ॥೪೪॥

ಪ್ರಸೀದ ಪಾಹಿ ನೋ ರಾಜನ್ ಪಾಲಿತಾಃ ಸ್ಮ ಯಥಾ ಪುರಾ ॥೪೫॥

ಸೀದಿಷ್ಯತ್ಯಖಿಲೋ ಲೋಕಸ್ತ್ವಯಿ ಭೂಪ ವನಾಶ್ರಯೇ ।
ತ್ವಂ ಕುರುಷ್ವ ತಥಾ ರಾಜನ್ ಯಥಾ ನೋ ಸೀದತೇ ಜಗತ್ ॥೪೬॥

ಯಾವಜ್ಜೀವಾಮಹೇ ವೀರ ಸ್ವಲ್ಪಕಾಲಮಿಮೇ ವಯಮ್ ।
ನೇಚ್ಛಾಮಶ್ಚ ಭವಚ್ಛೂನ್ಯಂ ದ್ರಷ್ಟುಂ ಸಿಹ್ಮಾಸನಂ ವಿಭೋ ॥೪೭॥

---

೪೩. ತರುವಾಯ ಅಕ್ಕಪಕ್ಕದ ಇತರ ನಗರಗಳಿಂದಲೂ ಭೃತ್ಯರಾಜರು ಆಳುತ್ತಿದ್ದ ರಾಷ್ಟ್ರಗಳಿಂದಲೂ ಆ ರಾಜ್ಯವರ್ಧನನು ಆಳುವ ರಾಜಧಾನಿಯಾದ ನಗರದಿಂದಲೂ ಅಧಿಕಸಂಖ್ಯೆಯಲ್ಲಿ ಜನರು ಬಂದು ಸೇರಿದರು.

೪೪. ಕ್ರೌಷ್ಟುಕಿ ಮುನಿಯೇ ! ವನವಾಸಕ್ಕೆ ಹೋಗುವ ಇಷ್ಟವನ್ನು ಹೊಂದಿದ ಆ ರಾಜ್ಯವರ್ಧನ ರಾಜನ ಬಳಿಗೆ ಅನೇಕ ಮಂದಿ ಬ್ರಾಹ್ಮಣೋತ್ತಮರು ಬಂದು ಚಲಿಸುತ್ತಿದ್ದ ಶಿರವುಳ್ಳವರಾಗಿ ರಾಜನಲ್ಲಿ ಹೇಳಿಕೊಂಡರು.

೪೫. ರಾಜನೇ ! ನಮ್ಮಲ್ಲಿ ನೀನು ಪ್ರಸನ್ನನಾಗು. ನಮ್ಮನ್ನು ಇದುವರೆಗೆ ಹೇಗೆ ರಕ್ಷಣಮಾಡಿದೆಯೊ ಅದರಂತೆ ಮುಂದೆಯೂ ನಮ್ಮನ್ನು ರಕ್ಷಣಮಾಡು. ನೀನು ವನಕ್ಕೆ ಹೋಗಿ ನಮ್ಮನ್ನು ಅನಾಥರನ್ನಾಗಿ ಮಾಡಬೇಡ.

೪೬. ಎಲೈ, ರಾಜನೇ ! ನೀನು ವನವಾಸಿಯಾದರೆ ಆ ದುಃಖವನ್ನು ಸಹಿಸಲಾರದೆ ಸಮಸ್ತ ಲೋಕವು ನಾಶಹೊಂದುವುದು. ರಾಜನೇ ! ಯಾವ ರೀತಿಯಿಂದ ಜಗತ್ತು ನಾಶವಾಗದೆ ಇರುವುದೊ ನೀನು ಹಾಗೆ ಮಾಡು.

೪೭. ವೀರರಾಜನೇ ! ಪ್ರಭುವೇ ! ಈ ನಾವು ಇನ್ನು ಎಷ್ಟು ಸ್ವಲ್ಪ ಮಾತ್ರ ಕಾಲದವರೆಗೆ ಬದುಕಿರುವೆವೊ ಆ ಅಲ್ಪ ಸಮಯದಲ್ಲಿ ನೀನಿಲ್ಲದ ರಾಜ್ಯಸಿಹ್ಮಾಸನವನ್ನು ನೋಡುವಂತಾಗುವುದು ಬೇಡ. ನಮಗೆ ಇದೊಂದು ಇಷ್ಟವನ್ನು ಅನುಗ್ರಹಿಸು.

ಮಾರ್ಕಣ್ಡೇಯ ಉವಾಚ :—

ಇತ್ಯೇವಂ ತೈಸ್ತಥಾನ್ಯೈಶ್ಚ ದ್ವಿಜೈಃ ಪೌರಪುರಸ್ಸರೈಃ ।
ಭೂಪೈರ್ಭೃತ್ಯೈರಮಾತ್ಯೈಶ್ಚ ರಾಜಾ ಪ್ರೋಕ್ತಃ ಪುನಃ ಪುನಃ ॥೪೮॥

ವನವಾಸವಿನಿರ್ಬನ್ಧಂ ನೋಪಸಂಹರತೇ ಯದಾ ।
ಕ್ಷಮಿಷ್ಯತ್ಯನ್ತಕೋ ನೇತಿ ದದೌ ಸ ಚ ತದೋತ್ತರಮ್ ॥೪೯॥

ತತೋಽಮಾತ್ಯಾಶ್ಚ ಭೂಪಾಶ್ಚ ಪೌರವೃದ್ಧಾಸ್ತಥಾ ದ್ವಿಜಾಃ ।
ಸಮೇತ್ಯ ಮನ್ತ್ರಯಾಮಾಸುಃ ಕಿಮತ್ರ ಕ್ರಿಯತಾಮಿತಿ ॥೫೦॥

ತೇಷಾಂ ಮನ್ತ್ರಯತಾಂ ವಿಪ್ರ ನಿಶ್ಚಯೋಽಯಮಜಾಯತ ।
ಅನುರಾಗವತಾಂ ತತ್ರ ಮಹೀಪಾಲೇಽತಿಧಾರ್ಮಿಕೇ ॥೫೧॥

ಮಾರ್ಕಂಡೇಯ ಮುನಿಯು ಹೀಗೆಂದನು :—

೪೮. ಆ ರಾಜ್ಯವರ್ಧನರಾಜನು ಆ ದ್ವಿಜರಿಂದಲೂ ಇತರ ಬ್ರಾಹ್ಮಣವರ್ಗದಿಂದಲೂ, ಪೌರಜನರಿಂದಲೂ, ಅನೇಕ ರಾಜರಿಂದಲೂ, ಭೃತ್ಯ-ಪರಿವಾರದಿಂದಲೂ ಮತ್ತು ಅಮಾತ್ಯರಿಂದಲೂ ಮತ್ತೆ ಮತ್ತೆ ಈ ಬಗೆಯಾಗಿ ಪ್ರಾರ್ಥಿಸಲ್ಪಟ್ಟನು.

೪೯. ಆದರೆ ರಾಜನು ಮಾತ್ರ ತನಗೆ ಉಂಟಾದ ವನವಾಸದ ಅಭಿರುಚಿಯನ್ನು ಅನೇಕರು ಅನೇಕ ಬಗೆಯಲ್ಲಿ ಪ್ರಾರ್ಥಿಸಿಕೊಂಡರೂ ಬಿಡಲಾರದೆ "ಅಂತಕನು ಹಾಗೆ ನಿಮ್ಮ ಇಷ್ಟದಂತಿರಲು ಕ್ಷಮಿಸುವುದಿಲ್ಲ" ಎಂಬ ಉತ್ತರವನ್ನು ಹೇಳಿದನು.

೫೦. ತರುವಾಯ ಅಮಾತ್ಯರು, ಭೂಪರು, ವೃದ್ಧರಾದ ಪುರಜನರು ಮತ್ತು ದ್ವಿಜರು ಎಲ್ಲರೂ ಒಟ್ಟುಗೂಡಿ ದೊರೆಯು ವನವಾಸಕ್ಕೆ ಹೋಗದೆ ರಾಜ್ಯಪರಿಪಾಲನೆಯನ್ನು ಮಾಡಿಕೊಂಡಿರುವಂತೆ ಸಾಧಿಸಲು ಮುಂದೇನು ಮಾಡೋಣವೆಂದು ಯೋಚಿಸಿದರು.

೫೧. ದ್ವಿಜೋತ್ತಮನಾದ ಕ್ರೌಷ್ಟುಕಿಯೇ! ಅತಿಶಯವಾಗಿ ಧಾರ್ಮಿಕನಾದ ಆ ರಾಜ್ಯವರ್ಧನ ರಾಜನಲ್ಲಿ ಅನುರಾಗವುಳ್ಳ ಅಮಾತ್ಯ ಮುಂತಾದವರು ಸೇರಿ ಯೋಚಿಸುತ್ತಿರಲು ಅವರಲ್ಲಿ ಒಂದು ಬಗೆಯ ನಿರ್ಣಯವು ಉಂಟಾಯಿತು.

ಸಮ್ಯಗ್ಧ್ಯಾನಪರಾ ಭೂತ್ವಾ ಪ್ರಾರ್ಥಯಾಮಃ ಸಮಾಹಿತಾಃ ।
ತಪಸಾರಾಧ್ಯ ಭಾಸ್ವನ್ತಮಾಯುರಸ್ಯ ಮಹೀಪತೇಃ ॥೫೨॥

ತತ್ರೈಕನಿಶ್ಚಯಾಃ ಕಾರ್ಯೇ ಕೇಚಿದ್ಗೇಹೇ ಚ ಭಾಸ್ಕರಮ್ ।
ಸಮ್ಯಗರ್ಘ್ಯೋಪಚಾರಾದ್ಯೈರುಪಹಾರೈರಪೂಜಯನ್ ॥೫೩॥

ಅಪರೇ ಮೌನಿನೋ ಭೂತ್ವಾ ಋಗ್ಜಾಪೇನ ತಥಾಪರೇ ।
ಯಜುಷಾಮಥ ಸಾಮ್ನಾ ಚ ತೋಷಯಾಞ್ಚಕ್ರಿರೇ ರವಿಮ್ ॥೫೪॥

ಅಪರೇ ಚ ನಿರಾಹಾರಾ ನದೀಪುಲಿನಶಾಯಿನಃ ।
ತಪಾಂಸಿ ಚಕ್ರುರಿಚ್ಛನ್ತೋ ಭಾಸ್ಕರಾರಾಧನಂ ದ್ವಿಜಾಃ ॥೫೫॥

---

೫೨. ನಾವು ಸರಿಯಾದ ಕ್ರಮದಲ್ಲಿ ಧ್ಯಾನದಲ್ಲಿ ನಿಷ್ಠರೂ, ಚಿತ್ತಶಾಂತಿಯುಳ್ಳವರೂ ಆಗಿ ಸೂರ್ಯಪರಮಾತ್ಮನನ್ನು ತಪಸ್ಸಿನಿಂದ ಆರಾಧಿಸಿ ಈ ರಾಜ್ಯವರ್ಧನನಿಗೆ ದೀರ್ಘವಾದ ಆಯುಷ್ಯಭಾಗ್ಯವನ್ನು ಪ್ರಾರ್ಥಿಸೋಣ.

೫೩. ಆ ಸಮಯದಲ್ಲಿ ಮಹಾರಾಜನ ಆಯುಷ್ಯವನ್ನು ವೃದ್ಧಿಗೊಳಿಸುವ ಏಕಮಾತ್ರ ಕಾರ್ಯದಲ್ಲಿ ನಿರ್ಣಯವನ್ನು ಹೊಂದಿದ ಕೆಲವರು ತಮ್ಮ ತಮ್ಮ ಮನೆಗಳಲ್ಲಿ ಅರ್ಘ್ಯ, ಧೂಪ—ಮುಂತಾದ ಉಪಚಾರಗಳಿಂದ ಕೂಡಿದ ಉಪಹಾರಗಳಿಂದ ಸೂರ್ಯನನ್ನು ಪೂಜಿಸಿದರು.

೫೪. ಮತ್ತೆ ಕೆಲವರು ಮೌನವ್ರತವನ್ನು ಕೈಗೊಂಡವರಾಗಿ ಸೂರ್ಯನ ಆರಾಧನೆಯನ್ನು ಮಾಡಿದರು. ಇನ್ನು ಕೆಲವರು ಋಗ್ವೇದಮಂತ್ರಜಪ, ಯಜುರ್ವೇದ ಮಂತ್ರಜಪ ಅಥವಾ ಸಾಮ ಗಾನ—ಇವುಗಳಿಂದ ಸೂರ್ಯನನ್ನು ಆರಾಧಿಸಿದರು.

೫೫. ಮತ್ತು ಹಲವು ಮಂದಿ ದ್ವಿಜರು ನದಿಗಳ ತೀರದಲ್ಲಿರುವ ಮರಳಿನ ದಿಣ್ಣೆಗಳನ್ನು ಆಶ್ರಯಿಸಿ ನಿರಾಹಾರವ್ರತಧಾರಿಗಳಾಗಿ ಸೂರ್ಯದೇವನ ಪ್ರಸನ್ನತೆಯನ್ನು ಇಚ್ಛಿಸುತ್ತ ಕಠಿನವಾದ ತಪವನ್ನು ಮಾಡಿದರು.

ಅಗ್ನಿಹೋತ್ರಪರಾಶ್ಚಾನ್ಯೇ ರವಿಸೂಕ್ತಾನ್ಯಹರ್ನಿಶಮ್ ।
ಜೇಪುಸ್ತತ್ರಾಪರೇ ತಸ್ಥುರ್ಭಾಸ್ಕರೇ ನ್ಯಸ್ತದೃಷ್ಟಯಃ ॥೫೬॥

ಇತ್ಯೇವಮತಿನಿರ್ಬನ್ಧಂ ಭಾಸ್ಕರಾರಾಧನಂ ಪ್ರತಿ ।
ಬಹುಪ್ರಕಾರಂ ಚಕ್ರುಸ್ತೇ ತಂ ತಂ ವಿಧಿಮುಪಾಶ್ರಿತಾಃ ॥೫೭॥

ತಥಾ ತು ಯತತಾಂ ತೇಷಾಂ ಭಾಸ್ಕರಾರಾಧನಂ ಪ್ರತಿ ।
ಸುದಾಮಾ ನಾಮ ಗನ್ಧರ್ವ ಉಪಗಮ್ಯೇದಮಬ್ರವೀತ್ ॥೫೮॥

ಯದ್ಯಾರಾಧನಮಿಷ್ಟಂ ವೋ ಭಾಸ್ಕರಸ್ಯ ದ್ವಿಜಾತಯಃ ।
ತದೇತತ್ಕ್ರಿಯತಾಂ ಯೇನ ಭಾನುಃ ಪ್ರೀತಿಮುಪೈಷ್ಯತಿ ॥೫೯॥

---

೫೬. ಹಾಗು ಕೆಲವರು ವಿಶೇಷಕಾಮನೆಯಿಂದ ಅಗ್ನಿಹೋತ್ರವನ್ನು ಆಚರಿಸಿದರು. ಇನ್ನು ಕೆಲವರು ಸೌರಸೂಕ್ತಗಳನ್ನು ಸಂತತವಾಗಿ ಜಪಿಸಿದರು. ಮತ್ತೆ ಕೆಲವರು ಸೂರ್ಯಬಿಂಬದಲ್ಲಿ ದೃಷ್ಟಿಯನ್ನಿಟ್ಟು ಅಚಲರಾಗಿ ನಿಂತು-ಕೊಂಡರು.

೫೭. ಈ ವಿಧವಾಗಿ ಪ್ರಜೆಗಳು ಸೂರ್ಯದೇವನ ಆರಾಧನೆಯಲ್ಲಿ ಅತಿಶಯವಾದ ನಿರ್ಬಂಧವನ್ನು ಹೊಂದಿದವರಾಗಿ ಆಯಾಯ ವಿಧಾನವನ್ನು ಆಶ್ರಯಿಸಿ ಅನೇಕ ಬಗೆಗಳಿಂದ ಸೂರ್ಯನನ್ನು ಪೂಜಿಸಿದರು.

೫೮. ಹೀಗೆ ಸಮಸ್ತ ಪ್ರಜೆಗಳು ಆಯಾಯ ಬಗೆಗಳಿಂದ ಸೂರ್ಯಾ-ರಾಧನೆಯಲ್ಲಿ ಯತ್ನವನ್ನು ಕೈಗೊಂಡಿರಲು ಸುದಾಮ ಎಂಬ ನಾಮಾಂಕನವನ್ನು ಹೊಂದಿದ ಒಬ್ಬ ಗಂಧರ್ವನು ಅಲ್ಲಿಗೆ ಬಂದು ಅವರಿಗೆ ಹೀಗೆಂದು ಹೇಳಿದನು.

೫೯. ಎಲೈ, ದ್ವಿಜರೇ! ಸೂರ್ಯದೇವನ ಆರಾಧನೆಯು ನಿಮ್ಮೆಲ್ಲರಿಗೆ ಇಷ್ಟವಾಗಿರುವ ಪಕ್ಷದಲ್ಲಿ ಯಾವ ವಿಧಾನದಿಂದ ಸೂರ್ಯದೇವನಿಗೆ ಪ್ರೀತಿ-ಯುಂಟಾಗುವುದೋ ಅಂತಹ ಒಂದು ವಿಧಾನವು ನಿಮ್ಮಿಂದ ಆಚರಿಸಲ್ಪಡಲಿ.

ತಸ್ಮಾದ್ಗುರು ವಿಶಾಲಾಖ್ಯಂ ವನಂ ಸಿದ್ಧನಿಷೇವಿತಮ್ ।
ಕಾಮರೂಪೇ ಮಹಾಶೈಲೇ ಗಮ್ಯತಾಂ ತತ್ರ ವೈ ಲಘು ||೬೦||

ತಸ್ಮಿನ್ನಾರಾಧನಂ ಭಾನೋಃ ಕ್ರಿಯತಾಂ ಸುಸಮಾಹಿತೈಃ ।
ಸಿದ್ಧಕ್ಷೇತ್ರಂ ಹಿ ತಂ ತತ್ರ ಸರ್ವಕಾಮಾನವಾಪ್ಸ್ಯಥ ||೬೧||

ಮಾರ್ಕಣ್ಡೇಯ ಉವಾಚ :—

ಇತಿ ತೇ ತದ್ವಚಃ ಶ್ರುತ್ವಾ ಗತ್ವಾ ತತ್ಕಾನನಂ ದ್ವಿಜಾಃ ।
ದದೃಶುರ್ಭಾಸ್ವತಸ್ತತ್ರ ಪುಣ್ಯಮಾಯತನಂ ಶುಭಮ್ ||೬೨||

ತತ್ರ ತೇ ನಿಯತಾಹಾರಾ ವರ್ಣಾ ವಿಪ್ರಾದಯೋ ದ್ವಿಜ ।
ಧೂಪಪುಷ್ಪೋಪಹಾರಾಢ್ಯಾಂ ಪೂಜಾಂ ಚಕ್ರುರತನ್ದ್ರಿತಾಃ ||೬೩||

---

೬೦. ಮತ್ತು ಅಂತಹ ವಿಧಾನವನ್ನು ಆಚರಿಸುವ ಕಾರಣದಿಂದ ಕಾಮರೂಪವೆಂಬ ಮಹಾಗಿರಿಯಲ್ಲಿರುವ, ಅನೇಕ ಸಿದ್ಧರಿಂದ ಸೇವಿಸಲ್ಪಟ್ಟಿರುವ ಮತ್ತು ಅನೇಕ ಮಹಿಮೆಯಿಂದ ಕೂಡಿದ ವಿಶಾಲವೆಂಬ ವನಕ್ಕೆ ನೀವು ಬೇಗ ತೆರಳಿರಿ.

೬೧. ಆ ವಿಶಾಲವನದಲ್ಲಿ ಶಾಂತಚಿತ್ತರಾದ ನಿಮ್ಮಿಂದ ಸೂರ್ಯದೇವನ ಆರಾಧನವು ಮಾಡಲ್ಪಡಲಿ. ಆ ವಿಶಾಲವನವು ಪ್ರಸಿದ್ಧವಾದ ಸಿದ್ಧಕ್ಷೇತ್ರವಾಗಿರುವುದು. ಅಲ್ಲಿ ನೀವು ಸಮಸ್ತ ಇಷ್ಟಾರ್ಥಗಳನ್ನು ಹೊಂದುತ್ತೀರಿ.

ಮಾರ್ಕಂಡೇಯ ಮುನಿಯು ಹೀಗೆಂದನು :—

೬೨. ಆ ದ್ವಿಜೋತ್ತಮರು ಹೀಗೆಂಬ ಆ ಗಂಧರ್ವನ ವಚನವನ್ನು ಕೇಳಿ ಅದರಂತೆ ವಿಶಾಲವೆಂಬ ಆ ಅರಣ್ಯಕ್ಕೆ ಹೋಗಿ ಅಲ್ಲಿ ಪವಿತ್ರವೂ, ಮಂಗಳಕರವೂ ಆದ ಸೂರ್ಯದೇವನ ಆಲಯವನ್ನು ನೋಡಿದರು.

೬೩. ಮತ್ತು ಆ ಸ್ಥಳದಲ್ಲಿ ಆಯಾಯ ವರ್ಣಗಳಿಗೆ ಸೇರಿದ ಪ್ರಜೆಗಳು ನಿಯತವಾದ ಆಹಾರ ಸೇವಿಗಳೂ ಮತ್ತು ಪ್ರಮಾದ-ಆಲಸ್ಯಗಳಿಲ್ಲದವರೂ ಆಗಿ ಧೂಪ-ಪುಷ್ಪ-ನಿವೇದನಗಳೆಂಬ ಉಪಚಾರಸಮೃದ್ಧಿಯಿಂದ ಕೂಡಿದ ಪೂಜೆಯಿಂದ ಸೂರ್ಯನನ್ನು ಆರಾಧಿಸಿದರು.

ಪುಷ್ಪಾನುಲೇಪನಾದ್ಯೈಶ್ಚ ಧೂಪಗನ್ಧಾದಿಕೈಸ್ತಥಾ ॥೬೪॥

ಜಪಹೋಮಾನ್ನದಾನಾದ್ಯೈಃ ಪೂಜನಂ ತೇ ಸಮಾಹಿತಾಃ ।
ಕುರ್ವನ್ತಸ್ತುಷ್ಟುವುರ್ಬ್ರಹ್ಮನ್ ವಿವಸ್ವನ್ತಂ ದ್ವಿಜಾತಯಃ ॥೬೫॥

ಬ್ರಾಹ್ಮಣಾ ಊಚುಃ :—

ದೇವದಾನವಯಕ್ಷಾಣಾಂ ಗ್ರಹಾಣಾಂ ಜ್ಯೋತಿಷಾಮಪಿ ।
ತೇಜಸಾಭ್ಯಧಿಕಂ ದೇವಂ ವ್ರಜಾಮ ಶರಣಂ ರವಿಮ್ ॥೬೬॥

ದಿವಿ ಸ್ಥಿತಂ ಚ ದೇವೇಶಂ ದ್ಯೋತಯನ್ತಂ ಸಮನ್ತತಃ ।
ವಸುಧಾಮನ್ತರಿಕ್ಷಂ ಚ ವ್ಯಾಪ್ನುವನ್ತಂ ಮರೀಚಿಭಿಃ ॥೬೭॥

---

೬೪. ಮತ್ತು ಬ್ರಾಹ್ಮಣ ಮುಂತಾದ ಪ್ರಜೆಗಳು ಭಕ್ತಿಯಿಂದ ಸೂರ್ಯ-ದೇವನಿಗೆ ಪುಷ್ಪ-ಗಂಧ-ಧೂಪ-ದೀಪ-ಸುಗಂಧಾನುಲೇಪನ ಮುಂತಾದ ಅನೇಕ ಉಪಚಾರಾರ್ಪಣೆಯಿಂದ ಪೂಜೆಮಾಡಿದರು.

೬೫. ಕ್ರೌಷ್ಟುಕಿಮುನಿಯೇ ! ಮತ್ತು ಆ ಪ್ರಜೆಗಳು ಸಮಾಧಾನವಾದ ಚಿತ್ತವುಳ್ಳವರಾಗಿ ಜಪ-ಹೋಮ-ಅನ್ನದಾನ—ಮುಂತಾದ ವಿಧಾನಗಳಿಂದ ಪೂಜೆಯನ್ನು ಮಾಡುತ್ತ ಸೂರ್ಯಪರಮಾತ್ಮನನ್ನು ಸ್ತುತಿಮಾಡಿದರು.

ಬ್ರಾಹ್ಮಣರು ಹೀಗೆ ಸ್ತುತಿಮಾಡಿದರು :—

೬೬. ದೇವ-ದಾನವ-ಯಕ್ಷ-ಗ್ರಹ ಮತ್ತು ಇತರ ಸಮಸ್ತ ಜ್ಯೋತಿ-ರ್ಮಂಡಲಗಳಲ್ಲಿ ತೇಜಸ್ಸಿನಿಂದ ಅಧಿಕವಾಗಿ ಪ್ರಕಾಶಿಸುವ ಸೂರ್ಯಪರಮಾತ್ಮ-ನನ್ನು ನಾವು ಅನನ್ಯಭಕ್ತಿಯಿಂದ ಶರಣುಹೊಂದಿದ್ದೇವೆ.

೬೭. ಅಂತರಿಕ್ಷದಲ್ಲಿರುವವನೂ, ದೇವತೆಗಳಿಗೆ ಪ್ರಭುವೂ, ಸುತ್ತ-ವಲಯಗಳಲ್ಲಿ ಪ್ರಕಾಶಿಸುವವನೂ, ಮತ್ತು ತನ್ನ ಕಿರಣಗಳಿಂದ ಭೂಮಿ-ಆಕಾಶ-ಗಳನ್ನು ವ್ಯಾಪಿಸಿರುವವನೂ ಆದ ಸೂರ್ಯನನ್ನು ಶರಣುಹೊಂದಿರುವೆವು.

ಆದಿತ್ಯಂ ಭಾಸ್ಕರಂ ಭಾನುಂ ಸವಿತಾರಂ ದಿವಾಕರಮ್ ।
ಪೂಷಾಣಮರ್ಯಮಾಣಂ ಚ ಸ್ವರ್ಭಾನುಂ ದೀಪ್ತದೀಧಿತಿಮ್ ॥೬೮॥

ಚತುರ್ಯುಗಾನ್ತಕಾಲಾಗ್ನಿದುಷ್ಪ್ರೇಕ್ಷ್ಯಂ ಪ್ರಲಯಾನ್ತಗಮ್ ।
ಯೋಗೀಶ್ವರಮನನ್ತಂ ಚ ರಕ್ತಂ ಪೀತಂ ಸಿತಾಸಿತಮ್ ॥೬೯॥

ಋಷೀಣಾಮಗ್ನಿಹೋತ್ರೇಷು ಯಜ್ಞದೇವೇಷ್ವವಸ್ಥಿತಮ್ ॥೭೦॥

ವ್ರಜಾಮ ಶರಣಂ ದೇವಂ ತೇಜೋರಾಶಿಂ ತಮಚ್ಯುತಮ್ ।
ಅಕ್ಷರಂ ಪರಮಂ ಗುಹ್ಯಂ ಮೋಕ್ಷದ್ವಾರಮನುತ್ತಮಮ್ ॥೭೧॥

---

೬೮. ಮತ್ತು ಆದಿಕಾರಣನೂ, ಪ್ರಕಾಶಮಯನೂ, ಪ್ರಭೆಗೆ ಆಶ್ರಯನೂ, ಪ್ರಪಂಚವನ್ನು ಸೃಷ್ಟಿಸುವವನೂ, ಹಗಲಿನ ಒಡೆಯನೂ, ಭೂತಗ್ರಾಮವನ್ನು ಪೋಷಣಮಾಡುವವನೂ, ಗತಿಶೀಲನೂ, ಸ್ವರ್ಗಲೋಕದ ರತ್ನವೂ ಮತ್ತು ಉಜ್ವಲದೀಪ್ತಿಯುಳ್ಳವನೂ ಆದ ಸೂರ್ಯನನ್ನು ಶರಣುಹೊಂದಿದ್ದೇವೆ.

೬೯. ಮತ್ತು ನಾಲ್ಕುಯುಗಗಳ ಪರ್ಯಾಯದ ಕಡೆಯಲ್ಲಿ ಉದಯಿಸುವ ಪ್ರಲಯಾಗ್ನಿಯಂತೆ ಕಣ್ಣಿಂದ ನೋಡಲಾಗದವನೂ, ಪ್ರಲಯದಲ್ಲಿ ಎಲ್ಲವನ್ನೂ ನಾಶಮಾಡುವವನೂ, ಯೋಗೀಶ್ವರನೂ, ಅಂತವಿಲ್ಲದವನೂ ಮತ್ತು ಕೆಂಪು-ಹಳದಿ ಕಪ್ಪು-ಬಿಳುಪು ಮುಂತಾದ ವರ್ಣಗಳಿಗೆ ಆಧಾರನೂ ಆದ ಸೂರ್ಯನನ್ನು ಶರಣುಹೊಂದಿದ್ದೇವೆ.

೭೦. ಮಹರ್ಷಿಗಳು ಆಚರಿಸುವ ಅಗ್ನಿಹೋತ್ರ ಮತ್ತು ಸಮಸ್ತ ಯಜ್ಞಸಮಾರಂಭಗಳಲ್ಲಿ ಪೂಜಿಸಲ್ಪಡುವ ದೇವತೆಗಳಲ್ಲಿ ಇರುವ ಸೂರ್ಯಪರಮಾತ್ಮನನ್ನು ನಾವು ಶರಣುಹೊಂದಿದ್ದೇವೆ.

೭೧. ಮತ್ತು ತೇಜಸ್ಸಿನ ರಾಶಿಯಾಗಿರುವವನೂ, ನಾಶವಿಲ್ಲದವನೂ, ಸರ್ವೋತ್ತಮನೂ, ರಹಸ್ಯತತ್ತ್ವಸ್ವರೂಪನೂ, ನಿರುಪಮವಾದ ಮುಕ್ತಿದ್ವಾರದಂತಿರುವವನೂ ಮತ್ತು ವಿಕಾರವಿಲ್ಲದವನೂ ಆದ ಸೂರ್ಯದೇವನನ್ನು ನಾವು ಶರಣುಹೊಂದಿರುವೆವು.

ಛನ್ದೋಭಿರಶ್ವರೂಪೈಶ್ಚ ಸಕೃದ್ಯುಕ್ತೈರ್ವಿಹಙ್ಗಮಮ್ ।
ಉದಯಾಸ್ತಮನೇ ಯುಕ್ತಂ ಸದಾ ಮೇರೋಃ ಪ್ರದಕ್ಷಿಣೇ ॥೭೨॥

ಅನೃತಂ ಚ ಋತಂ ಚೈವ ಪುಣ್ಯತೀರ್ಥಂ ಪೃಥಗ್ವಿಧಮ್ ।
ವಿಶ್ವಸ್ಥಿತಿಮಚಿನ್ತ್ಯಂ ಚ ಪ್ರಪನ್ನಾಃ ಸ್ಮ ಪ್ರಭಾಕರಮ್ ॥೭೩॥

ಯೋ ಬ್ರಹ್ಮಾ ಯೋ ಮಹಾದೇವೋ ಯೋ ವಿಷ್ಣುರ್ಯಃ ಪ್ರಜಾಪತಿಃ ।
ವಾಯುರಾಕಾಶಮಾಪಶ್ಚ ಪೃಥಿವೀಗಿರಿಸಾಗರಾಃ ॥೭೪॥

ಗ್ರಹನಕ್ಷತ್ರಚನ್ದ್ರಾದ್ಯಾ ವಾನಸ್ಪತ್ಯಂ ದ್ರುಮೌಷಧಮ್ ।
ವ್ಯಕ್ತಾವ್ಯಕ್ತೇಷು ಭೂತೇಷು ಧರ್ಮಾಧರ್ಮಪ್ರವರ್ತಕಃ ॥೭೫॥

---

೭೨. ವೇದಮಂತ್ರರೂಪವಾದ ಮತ್ತು ಒಂದೇ ಸಲ ಕಟ್ಟಿರುವ ಅಶ್ವಗಳಿಂದ ಕೂಡಿದ ರಥವನ್ನು ಏರಿ ಆಕಾಶದಲ್ಲಿ ಸಂಚರಿಸುವವನೂ ಮೇರು-ಪರ್ವತವನ್ನು ಪ್ರದಕ್ಷಿಣಾಕಾರವಾಗಿ ಸುತ್ತುತ್ತ ಉದಯ-ಅಸ್ತಮಯಗಳನ್ನು ತೋರ್ಪಡಿಸುವವನೂ ಆದ ಸೂರ್ಯದೇವನನ್ನು ಶರಣುಹೊಂದಿದ್ದೇವೆ.

೭೩. ಸತ್ಯ-ಅನೃತವಸ್ತುಸ್ವರೂಪನೂ, ಪುಣ್ಯಾರ್ಜನೆಗೆ ದ್ವಾರದಂತಿರುವವನೂ, ನಾನಾರೂಪವುಳ್ಳವನೂ, ವಿಶ್ವದ ಸ್ಥಿತಿಗೆ ಕಾರಣನೂ ಮತ್ತು ಚಿಂತಿಸಲಾಗದವನೂ ಆದ ಸೂರ್ಯದೇವನನ್ನು ಶರಣುಹೊಂದಿದ್ದೇವೆ.

೭೪. ಯಾವ ಸೂರ್ಯದೇವನು ಬ್ರಹ್ಮ-ಮಹಾದೇವ-ವಿಷ್ಣು-ಪ್ರಜಾಪತಿ ಮುಂತಾದ ದೇವತಾಸ್ವರೂಪನೂ, ವಾಯು-ಆಕಾಶ-ಜಲ-ಪೃಥಿವೀ-ಗಿರಿ-ಸಾಗರ ಮುಂತಾದ ಭೂತ-ಭೌತಿಕಸ್ವರೂಪನೂ ಆಗಿರುವನೋ ಅಂತಹ ಸೂರ್ಯನನ್ನು ಶರಣುಹೊಂದಿದ್ದೇವೆ.

೭೫. ಹಾಗು ಗ್ರಹ-ನಕ್ಷತ್ರ-ಚಂದ್ರ ಮುಂತಾದ ಜ್ಯೋತಿರ್ಗಣ, ಸಸ್ಯ-ವೃಕ್ಷ ಮುಂತಾದ ಸ್ಥಾವರ ಜಾತಿ ಇವುಗಳ ಸ್ವರೂಪನೂ, ಮತ್ತು ವ್ಯಕ್ತ-ಅವ್ಯಕ್ತ ಭೂತಗಳಲ್ಲಿ ಆಯಾಯ ಧರ್ಮಪ್ರವೃತ್ತಿಯನ್ನು ಉಂಟುಮಾಡುವವನೂ ಆದ ಸೂರ್ಯನಿಗೆ ಶರಣಾಗತರಾಗಿದ್ದೇವೆ.

ಬ್ರಾಹ್ಮೀ ಮಾಹೇಶ್ವರೀ ಚೈವ ವೈಷ್ಣವೀ ಚೈವ ತೇ ತನುಃ ।
ತ್ರಿಧಾ ಯಸ್ಯ ಸ್ವರೂಪಂ ತು ಭಾನೋರ್ಭಾಸ್ವಾನ್ ಪ್ರಸೀದತು॥೭೬॥

ಯಸ್ಯ ಸರ್ವಮಯಸ್ಯೇದಮಙ್ಗಭೂತಂ ಜಗತ್ಪ್ರಭೋಃ ।
ಸ ನಃ ಪ್ರಸೀದತಾಂ ಭಾಸ್ವಾಞ್ಜಗತಾಂ ಯಶ್ಚ ಜೀವನಮ್ ॥೭೭॥

ಯಸ್ಯೈಕಮಕ್ಷರಂ ರೂಪಂ ಪ್ರಭಾಮಣ್ಡಲದುರ್ದೃಶಮ್ ।
ದ್ವಿತೀಯಮೈನ್ದವಂ ಸೌಮ್ಯಂ ಸ ನೋ ಭಾಸ್ವಾನ್ಪ್ರಸೀದತು ॥೭೮॥

ತಾಭ್ಯಾಂ ಚ ತಸ್ಯ ರೂಪಾಭ್ಯಾಮಿದಂ ವಿಶ್ವಂ ವಿನಿರ್ಮಿತಮ್ ।
ಅಗ್ನೀಷೋಮಮಯಂ ಭಾಸ್ವಾನ್ ಸ ನೋ ದೇವಃ ಪ್ರಸೀದತು॥೭೯॥

---

೭೬. ಸೂರ್ಯದೇವನೇ ! ಬ್ರಹ್ಮ-ವಿಷ್ಣು-ಮಹೇಶ್ವರರೂಪವಾಗಿ ನೀನು ಮೂರು ಮೂರ್ತಿಗಳನ್ನು ಹೊಂದಿರುತ್ತೀಯೆ. ಈ ತ್ರಿಮೂರ್ತಿಗಳು ಯಾವ ಸೂರ್ಯಪರಮಾತ್ಮನ ಸ್ವರೂಪವಾಗಿವೆಯೊ ಅಂತಹ ಸೂರ್ಯನು ಪ್ರಸನ್ನನಾಗಲಿ.

೭೭. ಸಮಸ್ತ ವಿಶ್ವವು ಸರ್ವಾತ್ಮಕನೂ, ಜಗತ್ಪ್ರಭುವೂ ಆದ ಯಾವ ಸೂರ್ಯದೇವನ ಅಂಶರೂಪವಾಗಿದೆಯೊ, ಯಾವ ಸೂರ್ಯದೇವನು ಜಗತ್ತಿನ ಜೀವನಕ್ಕೆ ಕಾರಣನಾಗಿರುವನೋ ಅವನು ನಮ್ಮಲ್ಲಿ ಪ್ರಸನ್ನನಾಗಲಿ.

೭೮. ಯಾವ ಸೂರ್ಯನಿಗೆ ಪ್ರಭೆಯ ಪುಂಜದಿಂದ ನೋಡಲು ಶಕ್ಯವಿಲ್ಲದಂತಹ, ಒಂದು ಅಕ್ಷರರೂಪವೂ, ಚಂದ್ರಬಿಂಬದಲ್ಲಿರುವ ಮತ್ತೊಂದು ಸೌಮ್ಯರೂಪವೂ ಇರುವುವೋ ಅಂತಹ ಸೂರ್ಯನು ನಮ್ಮಲ್ಲಿ ಪ್ರಸನ್ನನಾಗಲಿ.

೭೯. ಯಾವ ಸೂರ್ಯದೇವನ ಆ ಎರಡು ರೂಪಗಳಿಂದ ಅಗ್ನಿ-ಸೋಮರೂಪಗಳನ್ನು ಹೊಂದಿದ ಈ ಅಖಂಡ ವಿಶ್ವವು ರಚಿಸಲ್ಪಟ್ಟಿದೆಯೊ ಅಂತಹ ಸೂರ್ಯಪರಮಾತ್ಮನು ನಮ್ಮಲ್ಲಿ ಅನುಗ್ರಹತೋರಲಿ.

ಮಾರ್ಕಣ್ಡೇಯ ಉವಾಚ :—

ಇತ್ಥಂ ಸ್ತುತ್ವಾ ತದಾ ಭಕ್ತ್ಯಾ ಸಮ್ಯಕ್ ಪೂಜಾವಿಧಾನತಃ ।
ತುತೋಷ ಭಗವಾನ್ ಭಾಸ್ವಾಂಸ್ತ್ರಿಭಿರ್ಮಾಸೈರ್ದ್ವಿಜೋತ್ತಮ ॥೮೦॥

ತತಃ ಸ ಮಣ್ಡಲಾದುದ್ಯನ್ನಿಜಬಿಮ್ಬಸಮಪ್ರಭಃ ।
ಅವತೀರ್ಯ ದದೌ ತೇಭ್ಯೋ ದುರ್ದೃಶೋ ದರ್ಶನಂ ರವಿಃ ॥೮೧॥

ತತಸ್ತೇ ಸ್ಪಷ್ಟರೂಪಂ ತಂ ಸವಿತಾರಮಜಂ ಜನಾಃ ।
ಪುಲಕೋತ್ಕಮ್ಪಿನೋ ವಿಪ್ರ ಭಕ್ತಿನಮ್ರಾಃ ಪ್ರಣೇಮಿರೇ ॥೮೨॥

ನಮೋ ನಮಸ್ತೇಽಸ್ತು ಸಹಸ್ರರಶ್ಮೇ
ಸರ್ವಸ್ಯ ಹೇತುಸ್ತ್ವಮಶೇಷಕೇತುಃ ।

ಮಾರ್ಕಂಡೇಯ ಮುನಿಯು ಹೀಗೆಂದನು :—

೮೦. ದ್ವಿಜೋತ್ತಮನಾದ ಕ್ರೌಷ್ಟುಕಿಯೇ! ಆಗ ಪ್ರಜೆಗಳು ಮಾಡಿದ ಈ ವಿಧವಾದ ಸ್ತುತಿಯಿಂದಲೂ ಭಕ್ತಿಯಿಂದ ಮಾಡಿದ ಶ್ರೇಷ್ಠವಾದ ಪೂಜಾ-ವಿಧಾನದಿಂದಲೂ ಅಖಂಡ ಮಹಿಮೈಶ್ವರ್ಯಗಳಿಂದ ಕೂಡಿದ ಸೂರ್ಯನು ಮೂರು ಮಾಸಗಳಲ್ಲಿ ಪ್ರಸನ್ನನಾದನು.

೮೧. ತರುವಾಯ ಸಾಮಾನ್ಯವಾಗಿ ನೋಡಲಾಗದಂತಿರುವ ಸೂರ್ಯ-ದೇವನು ತನ್ನ ಬಿಂಬಕ್ಕೆ ಸಮಾನವಾದ ಪ್ರಭೆಯುಳ್ಳವನಾಗಿ ತನ್ನ ಬಿಂಬದಿಂದ ಉದಯಿಸಿ ಅವತರಿಸಿ ಬಂದು ಆ ಪ್ರಜೆಗಳಿಗೆ ದರ್ಶನವನ್ನಿತ್ತನು.

೮೨. ಅನಂತರ ಆ ದ್ವಿಜರು ರೋಮಾಂಚ-ಗಾತ್ರಕಂಪದಿಂದ ಕೂಡಿ-ದವರೂ, ಭಕ್ತಿಯಿಂದ ಬಗ್ಗಿದವರೂ ಆಗಿ ಜನ್ಮವಿಲ್ಲದವನೂ, ಸ್ಪಷ್ಟರೂಪವನ್ನು ತೆಗೆದುಕೊಂಡು ಅವತರಿಸಿ ಬಂದವನೂ ಆದ ಸೂರ್ಯನನ್ನು ನಮಸ್ಕರಿಸಿದರು.

೮೩. ಸಹಸ್ರ ರಶ್ಮಿಗಳಿಂದ ಕೂಡಿದ ಸೂರ್ಯನೇ! ನಿನಗೆ ಮತ್ತೆ ಮತ್ತೆ ವಂದಿಸುವೆವು. ನೀನು ಸಮಸ್ತ ವಿಶ್ವಕ್ಕೆ ಕಾರಣನೂ ಸಮಸ್ತ ತತ್ತ್ವವನ್ನು ತಿಳಿದವನೂ, ಎಲ್ಲರಿಗೆ ರಕ್ಷಕನೂ, ಸ್ತುತಿಗೆ ಅರ್ಹನೂ, ಸಮಸ್ತ ಯಜ್ಞಾದಿ-

ಪಾತಾ ತ್ವಮಾದ್ಯೋಽಖಿಲಯಜ್ಞಧಾಮ
ಧ್ಯೇಯಸ್ತಥಾ ಯೋಗವಿದಾಂ ಪ್ರಸೀದ ||೮೩||

ಇತಿ ಶ್ರೀಮಾರ್ಕಣ್ಡೇಯ ಮಹಾಪುರಾಣೇ ಭಾನುಸ್ತವೋ ನಾಮ
ಷಡಧಿಕಶತತಮೋಽಧ್ಯಾಯಃ

ಕರ್ಮಗಳಿಗೆ ಕಾರಣನೂ ಮತ್ತು ಯೋಗಾಭ್ಯಾಸಪರರಿಗೆ ಧ್ಯಾನಕ್ಕೆ ಆಲಂಬನವೂ ಆಗಿದ್ದೀಯೆ. ನೀನು ನಮ್ಮನ್ನು ಅನುಗ್ರಹಿಸು.

ಮಾರ್ಕಂಡೇಯ ಮಹಾಪುರಾಣದಲ್ಲಿ ನೂರಆರನೆಯ
ಅಧ್ಯಾಯವು ಮುಗಿದುದು.

॥ ಓಂ ಶ್ರೀ ದುರ್ಗಾಯೈ ನಮಃ ॥

ಮಾರ್ಕಂಡೇಯ ಪುರಾಣಂ

ಸಪ್ತಾಧಿಕಶತತಮೋಽಧ್ಯಾಯಃ

ಮಾರ್ಕಣ್ಡೇಯ ಉವಾಚ :—

ತತಃ ಪ್ರಸನ್ನೋ ಭಗವಾನ್ ಭಾನುರಾಹಾಖಿಲಾಞ್ಜನಾನ್ ।
ವ್ರಿಯತಾಂ ಯದಭಿಪ್ರೇತಂ ಮತ್ತಃ ಪ್ರಾಪ್ತುಂ ದ್ವಿಜಾದಯಃ ॥೧॥

ಮಾರ್ಕಣ್ಡೇಯ ಉವಾಚ :—

ತತಸ್ತೇ ಪ್ರಣಿಪತ್ಯೋಚುರ್ವಿಪ್ರಕ್ಷತ್ರಾದಯೋ ಜನಾಃ ।
ಸಸಾಧ್ವಸಮುಶೀತಾಂಶುಮುಪಲೋಕ್ಯ ಪುರಃಸ್ಥಿತಮ್ ॥೨॥

ನೂರಏಳನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಹೇಳಿದನು :—

೧. ತರುವಾಯ ಷಡ್ಗುಣೈಶ್ವರ್ಯಸಂಪನ್ನನೂ ಮತ್ತು ದ್ವಿಜೋತ್ತಮರಲ್ಲಿ ಪ್ರಸನ್ನನಾಗಿ ಬಂದವನೂ ಆದ ಸೂರ್ಯನು ಎಲ್ಲ ಜನರನ್ನು ಕುರಿತು ಹೀಗೆ ಹೇಳಿದನು. ದ್ವಿಜರೇ! ನೀವು ನನ್ನಿಂದ ಯಾವ ಇಷ್ಟವನ್ನು ಹೊಂದುವ ಆಶೆಯುಳ್ಳವರಾಗಿದ್ದೀರೊ ಅದನ್ನು ಕೇಳಿರಿ.

ಮಾರ್ಕಂಡೇಯ ಮುನಿಯು ಹೇಳಿದನು :—

೨. ಅನಂತರ ಬ್ರಾಹ್ಮಣ-ಕ್ಷತ್ರಿಯ ಮುಂತಾದ ಆ ಪ್ರಜೆಗಳು ತಮ್ಮ ಮುಂದುಗಡೆಯಲ್ಲಿರುವ ಉಷ್ಣಕಿರಣಗಳಿಂದ ಕೂಡಿದ ಸೂರ್ಯನನ್ನು ನೋಡಿ ಭಯದಿಂದ ಕೂಡಿದವರಾಗಿ ನಮಸ್ಕರಿಸುತ್ತ ಹೀಗೆ ಕೇಳಿಕೊಂಡರು.

ಪ್ರಜಾ ಊಚುಃ :—

ಭಗವನ್ಯದಿ ನೋ ಭಕ್ತ್ಯಾ ಪ್ರಸನ್ನಸ್ತಿಮಿರಾಪಹ ||೩||

ದಶವರ್ಷಸಹಸ್ರಾಣಿ ತತೋ ನೋ ಜೀವತಾಂ ನೃಪಃ ।
ನಿರಾಮಯೋ ಜಿತಾರಾತಿಃ ಸುಕೋಶಃ ಸ್ಥಿರಯೌವನಃ ||೪||

ಮಾರ್ಕಣ್ಡೇಯ ಉವಾಚ :—

ತಥೇತ್ಯುಕ್ತ್ವಾ ಜನಾನ್ಭಾಸ್ವಾನದೃಶ್ಯೋಽಭೂನ್ಮಹಾಮುನೇ ।
ತೇಽಪಿ ಲಬ್ಧವರಾ ಹೃಷ್ಟಾಃ ಸಮಾಜಗ್ಮುರ್ಜನೇಶ್ವರಮ್ ||೫||

ಯಥಾವೃತ್ತಂ ಚ ತೇ ತಸ್ಮೈ ನರೇನ್ದ್ರಾಯ ನ್ಯವೇದಯನ್ ।
ವರಂ ಲಬ್ಧ್ವಾ ಸಹಸ್ರಾಂಶೋಃ ಸಕಾಶಾದಖಿಲಂ ದ್ವಿಜ ||೬||

ಪ್ರಜೆಗಳು ಹೇಳಿದರು :—

೩. ಅಂಧಕಾರವನ್ನು ನಾಶಮಾಡುವವನೇ! ಅಖಂಡೈಶ್ವರ್ಯಸಂಪನ್ನನೇ! ಮತ್ತು ಭಕ್ತವತ್ಸಲನಾದ ಸೂರ್ಯನೇ! ನಮ್ಮ ಭಕ್ತಿಪೂರ್ವಕಸೇವೆಯಿಂದ ನೀನು ಪ್ರಸನ್ನನಾಗಿ ಬಂದಿದ್ದರೆ ನಮ್ಮ ಇಷ್ಟವನ್ನು ಅನುಗ್ರಹಿಸು.

೪. ನೀನು ನಮ್ಮಲ್ಲಿ ಪ್ರಸನ್ನನಾಗಿದ್ದರೆ ನಮ್ಮ ರಾಜನು ಆರೋಗನೂ, ಜಯಿಸಿದ ಶತ್ರುಮಂಡಲವುಳ್ಳವನೂ, ಉತ್ತಮವಾದ ಭಂಡಾರಸಮೃದ್ಧಿಯುಳ್ಳವನೂ ಮತ್ತು ಸ್ಥಿರವಾದ ತಾರುಣ್ಯವುಳ್ಳವನೂ ಆಗಿ ಹತ್ತು ಸಹಸ್ರವರ್ಷಗಳವರೆಗೆ ಬದುಕಿರಲಿ.

ಮಾರ್ಕಂಡೇಯ ಮುನಿಯು ಹೇಳಿದನು :—

೫. ಮಹಾಮುನಿಯಾದ ಕ್ರೌಷ್ಟುಕಿಯೇ! ಸೂರ್ಯದೇವನು ಆ ಬ್ರಾಹ್ಮಣರನ್ನು ಕುರಿತು "ಹಾಗೆ ಆಗಲಿ" ಎಂದು ಹೇಳಿ ವರವನ್ನು ಕೊಟ್ಟು ಅದೃಶ್ಯನಾದನು. ಆ ದ್ವಿಜರು ಹೊಂದಿದ ವರವುಳ್ಳವರೂ ಅತ್ಯಾನಂದ ಹೊಂದಿದವರೂ ಆಗಿ ರಾಜನ ಬಳಿಗೆ ಬಂದರು.

೬. ದ್ವಿಜೋತ್ತಮನೇ! ಸಹಸ್ರ ಕಿರಣಗಳುಳ್ಳ ಸೂರ್ಯದೇವನ ಕೃಪೆಯಿಂದ ವರವನ್ನು ಹೊಂದಿ ಬಂದಿರುವ ಆ ದ್ವಿಜರು ವರವನ್ನು ಗಳಿಸಿದ ವೃತ್ತಾಂತವೆಲ್ಲವನ್ನೂ ನರೇಂದ್ರನಾದ ಆ ರಾಜ್ಯವರ್ಧನನಿಗೆ ಹೇಳಿದರು.

ತಚ್ಛ್ರುತ್ವಾ ಜಹೃಷೇ ತಸ್ಯ ಸಾ ಪತ್ನೀ ಮಾನಿನೀ ದ್ವಿಜ ।
ಪ್ರಹರ್ಷಂ ಪರಮಂ ಯಾತಾ ಹರ್ಷೋದ್ಗತತನೂರುಹಾ ॥೭॥

ಸ ಚ ರಾಜಾ ಚಿರಂ ದಧ್ಯೌ ನಾಹ ಕಿಂಚಿಚ್ಚ ತಂ ಜನಮ್ ॥೮॥

ತತಃ ಸಾ ಮಾನಿನೀ ಭೂಪಂ ಹರ್ಷಾಪೂರಿತಮಾನಸಾ ।
ದಿಷ್ಟ್ಯಾಯುಷಾ ಮಹೀಪಾಲ ವರ್ಧಸ್ವೇತ್ಯಾಹ ತಂ ಪತಿಮ್ ॥೯॥

ತಥಾ ತಯಾ ಮುದಾ ಭರ್ತಾ ಮಾನಿನ್ಯಾಥ ಸಭಾಜಿತಃ ।
ನಾಹ ಕಿಂಚಿನ್ಮಹೀಪಾಲಶ್ಚಿನ್ತಾಜಡಮನಾ ದ್ವಿಜ ॥೧೦॥

---

೭. ವಿಪ್ರರ್ಷಿಯಾದ ಕ್ರೌಷ್ಟುಕಿಯೇ! ಆಗ ರಾಜನ ಪತ್ನಿಯಾದ ಮಾನಿನಿಯು ವರಲಾಭ ವೃತ್ತಾಂತವನ್ನು ಕೇಳಿ ಹರ್ಷಗೊಂಡಳು. ಮತ್ತು ಆನಂದಾತಿರೇಕದಿಂದ ರೋಮಾಂಚವುಂಟಾಗುವಂತೆ ಅತಿಶಯವಾದ ಸಂತೋಷ-ವನ್ನು ಹೊಂದಿದಳು.

೮. ಆದರೆ ರಾಜ್ಯವರ್ಧನನು ಪ್ರಜೆಗಳಿಂದ ವರಲಾಭವೃತ್ತಾಂತವನ್ನು ಕೇಳಿದವನಾದರೂ ಬಹಳ ಹೊತ್ತು ಚಿಂತಾಸಕ್ತನಾದನು. ಆ ಜನರನ್ನು ಕುರಿತು ಯಾವಮಾತನ್ನೂ ಆಡಲಿಲ್ಲ-

೯. ತರುವಾಯ ಮಾನಿನಿಯೆಂಬ ಆ ರಾಜನ ಸತಿಯು ಹರ್ಷದಿಂದ ತುಂಬಿಹೋದ ಮಾನಸವುಳ್ಳವಳಾಗಿ "ಮಹೀಪತಿಯಾದ ಪತಿದೇವನೇ! ಭಾಗ್ಯ-ಬಲದಿಂದ ಪ್ರಾಪ್ತವಾದ ದೀರ್ಘಾಯುಷ್ಯದಿಂದ ಅಭ್ಯುದಯವನ್ನು ಹೊಂದು" ಎಂದು ಪತಿಯಾದ ರಾಜನಿಗೆ ಹೇಳಿದಳು.

೧೦. ವಿಪ್ರನಾದ ಕ್ರೌಷ್ಟುಕಿಯೇ! ಸತಿಯಾದ ಮಾನಿನಿಯಿಂದ ಹಾಗೆ ಅತ್ಯಾನಂದದಿಂದ ಶುಭವನ್ನು ಕೋರಿ ಗೌರವಿಸಲ್ಪಟ್ಟ ಪತಿಯಾದ ರಾಜ್ಯವರ್ಧನ ಮಹಾರಾಜನು ಚಿಂತೆಯಿಂದ ಜಡವಾದ ಮಾನಸವುಳ್ಳವನಾಗಿ ಒಂದುಮಾತನ್ನೂ ಆಡಲಿಲ್ಲ.

ಸಾ ಪುನಃ ಪ್ರಾಹ ಭರ್ತಾರಂ ಚಿನ್ತಯಾನಮಧೋಮುಖಮ್ ।
ಕಸ್ಮಾನ್ನ ಹರ್ಷಮಭ್ಯೇಷಿ ಪರಮಾಭ್ಯುದಯೇ ನೃಪ ॥೧೧॥

ದಶವರ್ಷಸಹಸ್ರಾಣಿ ನೀರುಜಃ ಸ್ಥಿರಯೌವನಃ ।
ಭಾವೀ ತ್ವಮದ್ಯ ಪ್ರಭೃತಿ ಕಿಂ ತಥಾಪಿ ನ ಹೃಷ್ಯಸೇ ॥೧೨॥

ಕಿಂ ತು ತತ್ಕಾರಣಂ ಬ್ರೂಹಿ ಯಚ್ಚಿನ್ತಾಕೃಷ್ಟಮಾನಸಃ ।
ಪರಮಾಭ್ಯುದಯೇಽಪಿ ತ್ವಂ ಸಂಪ್ರಾಪ್ತೇ ಪೃಥಿವೀಪತೇ ॥೧೩॥

ರಾಜೋವಾಚ :—

ಕಥಮಭ್ಯುದಯೋ ಭದ್ರೇ ಕಿಂ ಸಭಾಜಯಸೇ ಚ ಮಾಮ್ ।
ಪ್ರಾಪ್ತೌ ದುಃಖಸಹಸ್ರಾಣಾಂ ಕಿಂ ಸಭಾಜನಮಿಷ್ಯತೇ ॥೧೪॥

---

೧೧. ಮತ್ತೆ ಆ ಸತಿಯಾದ ಮಾನಿನಿಯು ಬಾಗಿಸಿದ ಮುಖವುಳ್ಳವನಾಗಿ ಚಿಂತಿಸುತ್ತಿದ್ದ ಪತಿಯನ್ನು ಕುರಿತು ಹೇಳಿದಳು, ರಾಜನಾದ ಪತಿದೇವನೇ ! ಮಹತ್ತಾದ ಅಭ್ಯುದಯವು ದೊರೆತಿರಲು ನೀನೇಕೆ ಸಂತೋಷಪಡುವುದಿಲ್ಲ ?

೧೨. ನೀನು ನೀರೋಗನೂ, ಸ್ಥಿರವಾದ ಯೌವನವುಳ್ಳವನೂ ಆಗಿ ಇಂದಿನಿಂದ ಹತ್ತುಸಹಸ್ರ ವರ್ಷಗಳಷ್ಟು ದೀರ್ಘಕಾಲ ಆಯುಷ್ಯವನ್ನೂ ಹೊಂದಿದ್ದೀಯೆ, ಆದರೂ ನೀನು ಹರ್ಷಪಡದಿರುವುದೇಕೆ ?

೧೩. ಭೂಪತಿಯೇ ! ಪತಿದೇವನೇ ! ಮಹತ್ತಾದ ಅಭ್ಯುದಯ ಪರಂಪರೆಯು ಪ್ರಾಪ್ತವಾಗಿದ್ದರೂ ನೀನು ಚಿಂತೆಯಿಂದ ಗ್ರಸ್ತವಾದ ಅಂತಃಕರಣವುಳ್ಳವನಾಗಿ ಸಂತೋಷವಿಲ್ಲದೇ ಇರುವೆಯೋ ; ಅಂತಹ ಚಿಂತಾಕಾರಣವನ್ನು ನನಗೆ ಹೇಳು.

ರಾಜನಿಂತೆಂದನು :—

೧೪. ಮಂಗಳಾಂಗಿಯೆ ! ನನಗೇನು ಅಭ್ಯುದಯವುಂಟಾಗಿರುವುದು ? ನನ್ನನ್ನು ಏಕೆ ಶುಭಾಶಂಸನದಿಂದ ಅಭಿನಂದಿಸುತ್ತೀಯೆ. ಸಹಸ್ರಾರು ದುಃಖಗಳು ಪ್ರಾಪ್ತಿಯಾಗಿರುವಾಗ ಅಭಿನಂದನವು ಇಷ್ಟವಾದೀತೆ ?

ದಶವರ್ಷಸಹಸ್ರಾಣಿ ಜೀವಿಷ್ಯಾಮ್ಯಹಮೇಕಕಃ ।
ನ ತ್ವಂ ತವ ವಿಪತ್ತೌ ಮೇ ಕಿಂ ನ ದುಃಖಂ ಭವಿಷ್ಯತಿ ॥೧೫॥

ಪುತ್ರಾನ್ ಪೌತ್ರಾನ್ ಪ್ರಪೌತ್ರಾಂಶ್ಚ ತಥಾನ್ಯಾನಿಷ್ಟಬಾನ್ಧವಾನ್ ।
ಪಶ್ಯತೋ ಮೇ ಮೃತಾನ್ ದುಃಖಂ ಕಿಮಲ್ಪಂ ಹಿ ಭವಿಷ್ಯತಿ ॥೧೬॥

ಭೃತ್ಯೇಷು ಚಾತಿಭಕ್ತೇಷು ಮಿತ್ರವರ್ಗೇ ತಥಾ ಮೃತೇ ।
ಭದ್ರೇ ದುಃಖಮಪಾರಂ ಮೇ ಭವಿಷ್ಯತಿ ತು ಸನ್ತತಮ್ ॥೧೭॥

ಯೈರ್ಮದರ್ಥಂ ತಪಸ್ತಪ್ತಂ ಕೃಶೈರ್ಧಮನಿಸನ್ತತೈಃ ।
ತೇ ಮರಿಷ್ಯನ್ತ್ಯಹಂ ಭೋಗೀ ಜೀವಿಷ್ಯಾಮೀತಿ ಧಿಕ್ಕರಮ್ ॥೧೮॥

ಸೇಯಮಾಪದ್ವರಾರೋಹೇ ಪ್ರಾಪ್ತಾ ನಾಭ್ಯುದಯೋ ಮಮ ।
ಕಥಂ ವಾ ಮನ್ಯಸೇ ನ ತ್ವಂ ಯತ್ಸಭಾಜಯಸೇಽದ್ಯ ಮಾಮ್॥೧೯॥

---

೧೫. ನಾನು ಒಬ್ಬನು ಮಾತ್ರ ಹತ್ತುಸಹಸ್ರ ವರ್ಷಗಳವರೆಗೆ ಬದುಕಿರುವೆನೆಂದು ಭಾವಿಸು. ಅಷ್ಟುಕಾಲ ನೀನು ಬದುಕುವವಳಲ್ಲ. ಹಾಗೆ ನಿನಗೆ ವಿಪತ್ತು ಸಂಭವಿಸುವ ಸಮಯದಲ್ಲಿ ನನಗೆ ದುಃಖವುಂಟಾಗುವುದಿಲ್ಲವೇ ?

೧೬. ಹಾಗು ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು ಮತ್ತು ಇತರ ಆಪ್ತ ಇಷ್ಟಬಂಧುಗಳು ನನ್ನ ಮುಂದೆ ಮರಣಹೊಂದಿದ್ದನ್ನು ಕಾಣುವ ನನಗೆ ಅಲ್ಪಮಾತ್ರ ದುಃಖವುಂಟಾಗುವುದೇ ?

೧೭. ಪ್ರಿಯೆಯೇ ! ಹಾಗು ನನ್ನಲ್ಲಿ ಅತಿಭಕ್ತಿಯನ್ನಿಟ್ಟಿರುವ ಪೋಷ್ಯವರ್ಗ, ಮತ್ತು ನನ್ನ ಮಿತ್ರವರ್ಗ ಮುಂತಾದವರು ಮರಣಹೊಂದುವಾಗ ನನಗೆ ಸಂತತವೂ ಅಪಾರವೂ ಆದ ದುಃಖವುಂಟಾಗುವುದಲ್ಲವೆ ?

೧೮. ಯಾವ ದ್ವಿಜರು ಕೃಶರೂ, ಮೂಳೆಮಾತ್ರವುಳಿದವರೂ ಆಗುವಂತೆ ಕ್ಲೇಶದಿಂದ ನನಗೋಸ್ಕರ ತಪವನ್ನು ಆಚರಿಸಿದರೊ ಅವರು ಮೊದಲು ಸಾಯುವರು. ನಾನು ಸುಖಭೋಗಿಯಾಗಿ ಬದುಕುವೆನೆಂಬುದು ಧಿಕ್ಕಾರದ ಪ್ರಸಂಗವು.

೧೯. ಎಲೈ, ಸುಂದರಾಂಗಿಯೇ ! ಇದೊಂದು ಘೋರವಾದ ಆಪತ್ತು ನನಗೆ ಪ್ರಾಪ್ತವಾಗಿರುವುದು. ನನಗೆ ಇದು ಅಭ್ಯುದಯವಲ್ಲ. ನೀನೇಕೆ ಇದನ್ನು ತಿಳಿದಿಲ್ಲ ? ತಿಳಿಯದೆ ಇದಕ್ಕಾಗಿ ನೀನು ಇಂದು ನನ್ನನ್ನು ಅಭಿನಂದಿಸುತ್ತಿರುವೆ.

ಮಾನಿನ್ಯುವಾಚ :—

ಮಹಾರಾಜ ಯಥಾತ್ಥ ತ್ವಂ ತಥೈತನ್ನಾತ್ರ ಸಂಶಯಃ ।
ಮಯಾ ಪೌರೈಶ್ಚ ದೋಷೋಽಯಂ ಪ್ರೀತ್ಯಾ ನಾಲೋಕಿತಸ್ತವ ॥೨೦॥
ಏವಂ ಗತೇಽತ್ರ ಕಿಂ ಕಾರ್ಯಂ ನರನಾಥ ವಿಚಿನ್ತ್ಯತಾಮ್ ।
ನಾನ್ಯಥಾ ಭಾವಿ ಯತ್ಪ್ರಾಹ ಪ್ರಸನ್ನೋ ಭಗವಾನ್ರವಿಃ ॥೨೧॥

ರಾಜೋವಾಚ :—

ಉಪಕಾರಃ ಕೃತಃ ಪೌರೈಃ ಪ್ರೀತ್ಯಾ ಭೃತ್ಯೈಶ್ಚ ಯೋ ಮಮ ।
ಕಥಂ ಭೋಕ್ಷ್ಯಾಮ್ಯಹಂ ಭೋಗಾನ್ಕೃತ್ವಾ ತೇಷಾಮನಿಷ್ಕೃತಿಮ್ ॥೨೨॥
ಸೋಽಹಮದ್ಯ ಪ್ರಭೃತ್ಯದ್ರಿಂ ಗತ್ವಾ ನಿಯತಮಾನಸಃ ।
ಪೌರಲೋಕಹಿತಾರ್ಥಂ ಚ ತೋಷಯಿಷ್ಯಾಮಿ ಭಾಸ್ಕರಮ್ ॥೨೩॥

ಮಾನಿನಿಯು ಹೀಗೆಂದಳು :—

೨೦. ಮಹಾರಾಜನಾದ ಪತಿಯೇ! ಈ ವಿಷಯದಲ್ಲಿ ನೀನು ಹೇಗೆ ಹೇಳಿರುವೆಯೋ ಅದು ಹಾಗೆಯೇ ಸತ್ಯವಾದುದು; ಇದರಲ್ಲಿ ಸಂಶಯವಿಲ್ಲ. ಆದರೆ ನಿನ್ನಲ್ಲಿರುವ ಪ್ರೀತಿಯಿಂದ ಈ ದೋಷವು ನನಗೂ ಪುರಜನರಿಗೂ ತಿಳಿಯಲಿಲ್ಲ.

೨೧. ಮಹಾರಾಜನೇ! ಹೀಗೆ ಒದಗಿರುವ ಈ ಪ್ರಸಂಗದಲ್ಲಿ ಮುಂದೇನು ಮಾಡುವುದು? ಅದನ್ನು ಯೋಚಿಸು. ಅಖಂಡೈಶ್ವರ್ಯ ಸಂಪನ್ನನಾದ ಸೂರ್ಯ-ದೇವನು ಪ್ರಸನ್ನನಾಗಿ ಏನು ಹೇಳಿರುವನೋ ಅದು ಬದಲಾಯಿಸುವುದಿಲ್ಲ.

ರಾಜನು ಇಂತೆಂದನು :—

೨೨. ಪುರಜನರೂ, ಭೃತ್ಯರೂ ನನ್ನ ಮೇಲಿನ ಪ್ರೀತಿಯಿಂದ ನನಗೆ ಏನು ಉಪಕಾರವನ್ನು ಮಾಡಿರುವರೊ ಹಾಗೆ ಉಪಕಾರಮಾಡಿದವರಲ್ಲಿ ಪ್ರತ್ಯುಪ-ಕಾರದಿಂದ ಕೃತಜ್ಞತೆಯನ್ನು ತೋರಿಸದೆ ನಾನು ಹೇಗೆ ಸುಖಭೋಗಗಳನ್ನು ಅನುಭವಿಸಲಿ?

೨೩. ಹೀಗೆ ಕಷ್ಟಕ್ಕೆ ಒಳಗಾದ ನಾನು ಪಾವನವಾದ ಗಿರಿಪ್ರದೇಶಕ್ಕೆ ಹೋಗಿ ನಿಗ್ರಹಿಸಿದ ಮಾನಸವುಳ್ಳವನಾಗಿ ಪುರವಾಸಿಗಳಾದ ಜನರ ಕಲ್ಯಾಣ-ಕ್ಕೋಸ್ಕರವಾಗಿ ಸೂರ್ಯದೇವನನ್ನು ಆರಾಧಿಸಿ ಸಂತೋಷಪಡಿಸುತ್ತೇನೆ.

ಯಥಾ ಪೌರಾ ಮಮ ಕೃತೇ ಬಾನ್ಧವಾಶ್ಚ ಸಮನ್ತತಃ ।
ಆರಾಧನಾಯ ದೇವೇಶಂ ತಥಾಹಮಪಿ ಸಾಮ್ಪ್ರತಮ್ ॥೨೪॥

ತಪಸ್ತಪ್ಸ್ಯೇ ನಿರಾಹಾರೋ ಭಾನೋರಾರಾಧನೋದ್ಯತಃ ॥೨೫॥

ದಶವರ್ಷಸಹಸ್ರಾಣಿ ಯಥಾಹಂ ಸ್ಥಿರಯೌವನಃ ।
ತಸ್ಯ ಪ್ರಸಾದಾದ್ದೇವಸ್ಯ ಜೀವಿಷ್ಯಾಮಿ ನಿರಾಮಯಃ ॥೨೬॥

ತಥಾ ಯದಿ ಪ್ರಜಾಃ ಸರ್ವಾ ಭೃತ್ಯಾಸ್ತ್ವಂ ಚ ಸುತಾಶ್ಚ ಮೇ ।
ಪುತ್ರಾಃ ಪೌತ್ರಾಃ ಪ್ರಪೌತ್ರಾಶ್ಚ ಸುಹೃದಶ್ಚ ವರಾನನೇ ॥೨೭॥

ಜೀವನ್ತ್ಯೇತಂ ಪ್ರಸಾದಂ ಚ ಕರೋತಿ ಭಗವಾನ್ರವಿಃ ।
ತತೋಽಹಂ ಭವಿತಾ ರಾಜ್ಯೇ ಭೋಕ್ಷ್ಯೇ ಭೋಗಾಂಸ್ತಥಾ ಮುದಾ ॥೨೮॥

---

೨೪. ಪುರಜನರು ಮತ್ತು ಬಂಧುಜನರು ಆದಿಯಾಗಿ ನನ್ನಲ್ಲಿ ಪ್ರೀತಿಯನ್ನಿಟ್ಟು ಸಮಸ್ತಜನರು ಹೇಗೆ ವರ್ತಿಸಿದರೋ ಅದರಂತೆ ಈಗ ನಾನು ದೇವೋತ್ತಮನಾದ ಸೂರ್ಯನನ್ನು ಆರಾಧಿಸುವೆನು.

೨೫. ಹಾಗೆ ಸೂರ್ಯದೇವನ ಆರಾಧನೆಯಲ್ಲಿ ತತ್ಪರನೂ, ನಿರಾಹಾರಿಯೂ ಆಗಿ ನನ್ನ ಮನೋರಥವು ಪೂರ್ತಿಯಾಗಿ ನೆರವೇರುವಂತೆ ಸ್ವಾಮಿಯನ್ನು ಧ್ಯಾನಿಸುತ್ತ ತಪವನ್ನು ಆಚರಿಸುವೆನು.

೨೬. ಪುರಜನರು ಹೊಂದಿರುವ ವರದಂತೆ ನಾನು ಸೂರ್ಯದೇವನ ಅನುಗ್ರಹದಿಂದ ಸ್ಥಿರವಾದ ತಾರುಣ್ಯವುಳ್ಳವನೂ, ಮತ್ತು ನೀರೋಗನೂ ಆಗಿ ಹತ್ತುಸಹಸ್ರ ವರ್ಷಗಳವರೆಗೆ ಜೀವಿಸುವವನಾಗಿದ್ದೇನೆ.

೨೭. ಸುಂದರವಾದ ಮುಖವುಳ್ಳ ಪ್ರೇಯಸಿಯೇ! ಅದರಂತೆ ನನ್ನ ಸಮಸ್ತ ಪ್ರಜೆಗಳು, ಭೃತ್ಯರು, ನೀನು, ಪುತ್ರಿಯರು, ಪುತ್ರರು, ಪೌತ್ರರು, ಪ್ರಪೌತ್ರ ಮತ್ತು ಮಿತ್ರರು—ಎಲ್ಲರೂ ದೀರ್ಘಕಾಲ ಜೀವಿಸುವಂತಾಗಲಿ.

೨೮. ಹಾಗೆ ಸಮಸ್ತಪ್ರಜೆಗಳು ದೀರ್ಘಕಾಲ ಜೀವಿಸಲಿ. ಪೂಜ್ಯನಾದ ಸೂರ್ಯದೇವನು ಹಾಗೆ ಅನುಗ್ರಹಿಸಲಿ. ಹಾಗಾದರೆ ನಾನು ರಾಜ್ಯದಲ್ಲಿದ್ದು ಪ್ರಜಾಪಾಲನೆಯನ್ನು ಮಾಡುತ್ತಿರುವೆನು. ಹಾಗು ಸಂತೋಷದಿಂದ ಭೋಗಗಳನ್ನು ಭುಂಜಿಸುವೆನು.

ನ ಚೇದೇವಂ ಕರೋತ್ಯರ್ಕಸ್ತದಾದ್ರೌ ತತ್ರ ಮಾನಿನಿ ।
ತಪಸ್ತಪ್ಸ್ಯೇ ನಿರಾಹಾರೋ ಯಾವಜ್ಜೀವಿತಸಂಶಯಃ ॥೨೯॥

ಮಾರ್ಕಣ್ಡೇಯ ಉವಾಚ :—

ಇತ್ಯುಕ್ತಾ ಸಾ ತದಾ ತೇನ ತಥೇತ್ಯಾಹ ನರಾಧಿಪಮ್ ।
ಜಗಾಮ ತೇನ ಚ ಸಮಂ ಸಾಪಿ ತಂ ಧರಣೀಧರಮ್ ॥೩೦॥

ಸ ತದಾಯತನಂ ಗತ್ವಾ ಭಾರ್ಯಯಾ ಸಹ ಪಾರ್ಥಿವಃ ।
ಭಾನೋರಾರಾಧನಂ ಚಕ್ರೇ ಶುಶ್ರೂಷಾನಿರತೋ ದ್ವಿಜ ॥೩೧॥

ನಿರಾಹಾರಾ ಕೃಶಾ ಸಾ ಚ ಯಥಾಸೌ ಪೃಥಿವೀಪತಿಃ ।
ತೇಪೇ ತಪಸ್ತಥೈವೋಗ್ರಂ ಶೀತವಾತಾತಪಕ್ಷಮಾ ॥೩೨॥

---

೨೯. ಪ್ರಿಯೆಯಾದ ಮಾನಿನಿಯೇ! ಸೂರ್ಯದೇವನು ಈವಿಧವಾದ ಅನುಗ್ರಹವನ್ನು ತೋರಿಸದಿದ್ದರೆ ಆಗ ಅದೇ ಪರ್ವತದಲ್ಲಿ ಪ್ರಾಣಸಂಶಯ–ವುಂಟಾಗುವವರೆಗೆ ನಿರಾಹಾರಿಯಾಗಿ ತಪಶ್ಚರ್ಯೆಯಲ್ಲಿರುವೆನು.

ಮಾರ್ಕಂಡೇಯ ಮುನಿಯು ಹೀಗೆಂದನು :—

೩೦. ಆಗ ರಾಜ್ಯವರ್ಧನರಾಜನಿಂದ ಈಬಗೆಯಾಗಿ ಹೇಳಲ್ಪಟ್ಟಿರುವ ಆ ಮಾನಿನಿಯು ಪತಿಯನ್ನು ಕುರಿತು "ಹಾಗೆ ಆಗಲಿ" ಎಂದು ಹೇಳಿದಳು. ಮತ್ತು ಪತಿಯೊಡನೆ ತಾನು ಪರ್ವತಭೂಮಿಗೆ ಹೊರಟುಹೋದಳು.

೩೧. ದ್ವಿಜನಾದ ಕ್ರೌಷ್ಟುಕಿಯೇ! ಆಗ ಆ ರಾಜ್ಯವರ್ಧನರಾಜನು ಸತಿಯಾದ ಮಾನಿನಿಯೊಡನೆ ಕಾಮರೂಪಗಿರಿಯ ವಿಶಾಲವನದಲ್ಲಿರುವ ಸೂರ್ಯ-ದೇವಾಲಯಕ್ಕೆ ಹೋಗಿ ಸೇವಾಸಕ್ತನಾಗಿ ಸೂರ್ಯನ ಆರಾಧನೆಯನ್ನು ಮಾಡಿದನು.

೩೨. ಪತಿಯಾದ ರಾಜ್ಯವರ್ಧನನು ತಪಮಾಡಿದಂತೆ ಮಾನಿನಿಯು ನಿರಾಹಾರಳೂ, ಕೃಶಳೂ, ಮತ್ತು ಛಳಿ-ಗಾಳಿ-ಬಿಸಿಲುಗಳನ್ನು ಸಹಿಸುವವಳೂ ಆಗಿ ಉಗ್ರವಾದ ತಪವನ್ನು ಆಚರಿಸಿದಳು.

ತಸ್ಯ ಪೂಜಯತೋ ಭಾನುಂ ತಪ್ಯತಶ್ಚ ತಪೋ ಮಹತ್ ।
ಸಾಗ್ರೇ ಸಂವತ್ಸರೇ ಯಾತೇ ತತಃ ಪ್ರೀತೋ ದಿವಾಕರಃ ॥೩೩॥

ಸಮಸ್ತಭೃತ್ಯಪೌರಾದಿಪುತ್ರಾಣಾಂ ಚ ಕೃತೇ ದ್ವಿಜ ।
ದದೌ ಯಥಾಭಿಲಷಿತಂ ವರಂ ದ್ವಿಜವರೋತ್ತಮ ॥೩೪॥

ಲಬ್ಧ್ವಾ ವರಂ ಸ ನೃಪತಿಃ ಸಮಭ್ಯೇತ್ಯಾತ್ಮನಃ ಪುರಮ್ ।
ಚಕಾರ ಮುದಿತೋ ರಾಜ್ಯಂ ಪ್ರಜಾ ಧರ್ಮೇಣ ಪಾಲಯನ್ ॥೩೫॥

ಈಜೇ ಯಜ್ಞಾನ್ ಸ ಚ ಬಹೂನ್ ದದೌ ದಾನಾನ್ಯಹರ್ನಿಶಮ್ ।
ಮಾನಿನ್ಯಾ ಸಹಿತೋ ಭೋಗಾನ್ ಬುಭುಜೇ ಚ ಸ ಧರ್ಮವಿತ್ ॥೩೬॥

---

೩೩. ಹೀಗೆ ಪತ್ನೀಸಮೇತನಾಗಿ ರಾಜನು ಸೂರ್ಯನನ್ನು ಆರಾಧಿಸುತ್ತಲೂ ಮಹತ್ತಾದ ತಪಸ್ಸನ್ನು ಮಾಡುತ್ತಲೂ ಇರಲು ಹಾಗೆ ಒಂದು ವರ್ಷ ಕಾಲವು ಪೂರ್ತಿಯಾಗಿ ಕಳೆಯಲು ಸೂರ್ಯನು ಅವನಲ್ಲಿ ಪ್ರೀತಿಗೊಂಡನು.

೩೪. ದ್ವಿಜವರರಲ್ಲಿ ಉತ್ತಮನಾದ ಬ್ರಹ್ಮರ್ಷಿಯೇ! ಪ್ರೀತನಾದ ಸೂರ್ಯನು ಆ ರಾಜನ ಪರಿವಾರವಾದ ಪುರಜನ-ಭೃತ್ಯ-ಪುತ್ರ-ಪೌತ್ರ ಮುಂತಾದವರಿಗೆಲ್ಲ ರಾಜನ ಇಷ್ಟದಂತೆ ದೀರ್ಘಕಾಲ ಬಾಳುವ ವರವನ್ನು ಕೊಟ್ಟನು.

೩೫. ತರುವಾಯ ಆ ರಾಜ್ಯವರ್ಧನರಾಜನು ವರವನ್ನು ಹೊಂದಿ ತನ್ನ ನಗರಕ್ಕೆ ಹಿಂದಿರುಗಿ ಬಂದು ಬಹಳ ಸಂತೋಷಗೊಂಡವನಾಗಿ ಪ್ರಜೆಗಳನ್ನು ಧರ್ಮದಿಂದಪಾಲಿಸುತ್ತ ರಾಜ್ಯಭಾರವನ್ನು ನಿರ್ವಹಿಸಿದನು.

೩೬. ಧರ್ಮವೇತ್ತನಾದ ಆ ರಾಜನು ಅನೇಕ ಯಜ್ಞಸಮಾರಂಭಗಳನ್ನು ನಡೆಸಿದನು. ಹಗಲು-ರಾತ್ರಿಯೆನ್ನದೆ ಸಂತತವಾಗಿ ದಾನಗಳನ್ನು ಕೊಟ್ಟನು. ಮತ್ತು ಮಾನಿನಿಯೊಡನೆ ಅನೇಕ ಉತ್ತಮ ಭೋಗಗಳನ್ನು ಅನುಭವಿಸಿದನು.

ದಶವರ್ಷಸಹಸ್ರಾಣಿ ಪುತ್ರಪೌತ್ರಾದಿಭಿಃ ಸಹ ।
ಭೃತ್ಯೈಃ ಪೌತ್ರೈಃ ಪ್ರಮುದಿತಃ ಸೋಽಭವತ್ಸ್ಥಿರಯೌವನಃ ॥೩೭॥

ತಸ್ಯೇತಿ ಚರಿತಂ ದೃಷ್ಟ್ವಾ ಪ್ರಮತಿರ್ನಾಮ ಭಾರ್ಗವಃ ।
ವಿಸ್ಮಯಾಕೃಷ್ಟಹೃದಯೋ ಗಾಥಾಮೇತಾಮಗಾಯತ ॥೩೮॥

ಭಾನುಭಕ್ತೇರಹೋ ಶಕ್ತಿರ್ಯದ್ರಾಜಾ ರಾಜ್ಯವರ್ಧನಃ ।
ಆಯುಷೋ ವರ್ಧನೇ ಜಾತಃ ಸ್ವಜನಸ್ಯ ತಥಾತ್ಮನಃ ॥೩೯॥

ಇತಿ ತೇ ಕಥಿತಂ ವಿಪ್ರ ಯತ್ಪೃಷ್ಟೋಽಹಂ ತ್ವಯಾದಿತಃ ।
ಆದಿದೇವಸ್ಯ ಮಾಹಾತ್ಮ್ಯಮಾದಿತ್ಯಸ್ಯ ವಿವಸ್ವತಃ ॥೪೦॥

---

೩೭. ಹತ್ತುಸಹಸ್ರವರ್ಷಗಳವರೆಗೆ ಸ್ಥಿರವಾದ ಯೌವನವುಳ್ಳವನಾದ ಆ ರಾಜನು ಹಾಗೆಯೇ ದೀರ್ಘಾಯುಷ್ಯವನ್ನು ಹೊಂದಿದ ಭೃತ್ಯ-ಪುತ್ರ-ಪೌತ್ರ ಮುಂತಾದ ಪರಿವಾರದೊಡನೆ ಅತ್ಯಾನಂದವನ್ನು ಹೊಂದಿದನು.

೩೮. ರಾಜ್ಯವರ್ಧನರಾಜನ ಈ ಅದ್ಭುತಚರಿತ್ರೆಯನ್ನು ನೋಡಿ ವಿಸ್ಮಯದಿಂದ ಆಕರ್ಷಿಸಲ್ಪಟ್ಟ ಹೃದಯವುಳ್ಳ, ಪ್ರಮತಿಯೆಂಬ, ಭೃಗು ಮುನಿಯವಂಶದಲ್ಲಿ ಜನಿಸಿದ ಒಬ್ಬ ಮುನಿಯು ಈ ಗಾಥಾಪದ್ಯವನ್ನು ರಚಿಸಿ ಹಾಡಿದನು.

೩೯. ಸೂರ್ಯಪರಮಾತ್ಮನಲ್ಲಿಟ್ಟಿರುವ ಭಕ್ತಿಯ ಮಹಿಮೆಯು ಆಶ್ಚರ್ಯ ಕರವಾದುದು. ರಾಜ್ಯವರ್ಧನರಾಜನು ತನ್ನ ಮತ್ತು ಸ್ವಜನರ ಆಯುಷ್ಯವನ್ನು ಸೂರ್ಯಪರಮಾತ್ಮನ ಅನುಗ್ರಹದಿಂದ ವೃದ್ಧಿಪಡಿಸಿಕೊಂಡನು.

೪೦. ವಿಪ್ರೋತ್ತಮನಾದ ಕ್ರೌಷ್ಟುಕಿಯೇ! ಆದಿದೇವನೂ, ಅನಾದಿ-ಯಾಗಿರುವವನೂ ಆದ ಸೂರ್ಯದೇವನ ಯಾವ ಮಾಹಾತ್ಮ್ಯವನ್ನು ನೀನು ಪ್ರಶ್ನಿಸಿದೆಯೋ ಆ ಮಾಹಾತ್ಮ್ಯವನ್ನು ಆದಿಯಿಂದ ವಿಸ್ತಾರವಾಗಿ ನಿನಗೆ ಹೇಳಿರುವೆನು.

ವಿಪ್ರೈತದಖಿಲಂ ಶ್ರುತ್ವಾ ಭಾನೋರ್ಮಾಹಾತ್ಮ್ಯಮುತ್ತಮಮ್ ।
ಪಠಂಶ್ಚ ಮುಚ್ಯತೇ ಪಾಪೈಃ ಸಪ್ತರಾತ್ರಕೃತೈರ್ನರಃ ॥೪೧॥

ಅರೋಗೀ ಧನವಾನಾಢ್ಯಃ ಕುಲೇ ಮಹತಿ ಧೀಮತಾಮ್ ।
ಜಾಯತೇ ಚ ಮಹಾಪ್ರಾಜ್ಞೋ ಯಶ್ಚೈತದ್ಧಾರಯೇದ್ಬುಧಃ॥೪೨॥

ಯಜತೇ ಚ ಮಹಾಯಜ್ಞೈಃ ಸಮಾಪ್ತವರದಕ್ಷಿಣೈಃ ।
ಶ್ರುತ್ವಾ ಚರಿತಮೇತದ್ಧಿ ಸಮಾನಂ ಲಭತೇ ಫಲಮ್ ॥೪೩॥

ಮನ್ತ್ರಾಶ್ಚ ಯೇಽತ್ರಾಭಿಹಿತಾ ಭಾಸ್ವತೋ ಮುನಿಸತ್ತಮ ।
ಜಪಃ ಪ್ರತ್ಯೇಕಮೇತೇಷಾಂ ತ್ರಿಸನ್ಧ್ಯಂ ಪಾತಕಾಪಹಃ ॥೪೪॥

---

೪೧. ಬ್ರಹ್ಮರ್ಷಿಯಾದ ಕ್ರೌಷ್ಟುಕಿಯೇ! ಮಾನವನು ಸೂರ್ಯ-ಪರಮಾತ್ಮನ ಉತ್ತಮವಾದ ಈ ಮಹಾತ್ಮ್ಯವನ್ನು ಸಮಗ್ರವಾಗಿ ಕೇಳಿ ಅಥವಾ ಪಠಿಸಿ ಏಳು ದಿನಗಳಲ್ಲಿ ನಡೆದ ಸಮಸ್ತಪಾಪಗಳಿಂದ ಮುಕ್ತನಾಗುವನು.

೪೨. ಮತ್ತು ಯಾವ ಮಾನವನು ಸೂರ್ಯನ ಈ ಮಹಿಮೆಯನ್ನು ಬುದ್ಧಿಯಲ್ಲಿ ಧಾರಣಮಾಡುವನೋ ಅವನು ನೀರೋಗನೂ, ಐಶ್ವರ್ಯವಂತನೂ, ಪ್ರಭುಶಕ್ತಿಯುಳ್ಳವನೂ, ಮತ್ತು ಮಹಾಪ್ರಜ್ಞಾಶಾಲಿಯೂ ಆಗಿ ಮಹಾಜ್ಞಾನಿ-ಗಳ ವಂಶದಲ್ಲಿ ಜನಿಸುವನು.

೪೩. ಒಬ್ಬ ಶ್ರೋತ್ರಿಯ ದ್ವಿಜನು ಸಮಗ್ರ ಉತ್ತಮ ದಕ್ಷಿಣಾದಾನ-ದಿಂದ ಕೂಡಿದ ಮಹಾಯಜ್ಞಗಳನ್ನು ಆಚರಿಸಲಿ. ಹಾಗು ಮತ್ತೊಬ್ಬನು ಈ ಚರಿತ್ರೆಯನ್ನು ಶ್ರವಣಮಾಡಲಿ. ಸಮಾನವಾದ ಫಲವು ಲಭಿಸುವುದು.

೪೪. ಮುನಿಶ್ರೇಷ್ಠನಾದ ಕ್ರೌಷ್ಟುಕಿಯೇ! ಈ ಮಾಹಾತ್ಮ್ಯದಲ್ಲಿ ಸೂರ್ಯದೇವನ ಯಾವ ಮಂತ್ರಗಳು ಪಠಿಸಲ್ಪಟ್ಟವೆಯೊ ಆ ಮಂತ್ರಗಳನ್ನು ಮೂರು ಸಂಧ್ಯಾಕಾಲಗಳಲ್ಲಿ ಪ್ರತ್ಯೇಕವಾಗಿ ಜಪಿಸುವುದು ಪಾಪವನ್ನು ನಾಶ-ಮಾಡುವುದಾಗಿದೆ.

ಸಮಸ್ತಮೇತನ್ಮಾಹಾತ್ಮ್ಯಂ ಯತ್ರ ಚಾಯತನೇ ರವೇಃ ।
ಪಠ್ಯತೇ ತತ್ರ ಭಗವಾನ್ ಸಾನ್ನಿಧ್ಯಂ ನ ವಿಮುಞ್ಚತಿ ॥೪೫॥

ತಸ್ಮಾದೇತತ್ತ್ವಯಾ ಬ್ರಹ್ಮನ್ ಭಾನೋರ್ಮಾಹಾತ್ಮ್ಯಮುತ್ತಮಮ್।
ಧಾರ್ಯಂ ಮನಸಿ ಜಾಪ್ಯಂ ಚ ಮಹತ್ಪುಣ್ಯಮಭೀಪ್ಸತಾ ॥೪೬॥

ಸುವರ್ಣಶೃಙ್ಗೀಮತಿಶೋಭನಾಙ್ಗೀಂ
ಪಯಸ್ವಿನೀಂ ಗಾಂ ಪ್ರದದಾತಿ ಯೋ ಹಿ ।
ಶೃಣೋತಿ ಚೈತತ್ತ್ರ್ಯಹಮಾತ್ಮವಾನ್ನರಃ
ಸಮಂ ತಯೋಃ ಪುಣ್ಯಫಲಂ ದ್ವಿಜಾಗ್ರ್ಯ ॥೪೭॥

ಇತಿ ಶ್ರೀ ಮಾರ್ಕಣ್ಡೇಯಮಹಾಪುರಾಣೇ ಭಾನೋರ್ಮಾಹಾತ್ಮ್ಯಂ ನಾಮ ಸಪ್ತಾಧಿಕಶತತಮೋಽಧ್ಯಾಯಃ

---

೪೫. ಯಾವ ಮಂದಿರದಲ್ಲಿ ಸೂರ್ಯದೇವನ ಈ ಸಮಗ್ರ ಮಾಹಾತ್ಮ್ಯ ಚರಿತ್ರೆಯು ಪಠಿಸಲ್ಪಡುವುದೋ ಷಡ್ಗುಣೈಶ್ವರ್ಯಸಂಪನ್ನನಾದ ಸೂರ್ಯ-ದೇವನು ಅಲ್ಲಿ ತನ್ನ ಸಾನ್ನಿಧ್ಯವನ್ನು ದೂರಮಾಡುವುದಿಲ್ಲ.

೪೬. ಬ್ರಹ್ಮರ್ಷಿಯೇ! ಆದಕಾರಣ ಮಹತ್ತಾದ ಪುಣ್ಯರಾಶಿಯನ್ನು ಅಪೇಕ್ಷಿಸುವ ನಿನ್ನಿಂದ ಈ ಸರ್ವೋತ್ತಮವಾದ ಸೂರ್ಯಪರಮಾತ್ಮನ ಮಾಹಾ-ತ್ಮ್ಯವು ಮನಸ್ಸಿನಲ್ಲಿ ಧರಿಸಲ್ಪಡಬೇಕು ಮತ್ತು ಜಪಿಸಲ್ಪಡಬೇಕು.

೪೭. ದಿಜೋತ್ತಮನಾದ ಕ್ರೌಷ್ಟುಕಿಯೇ! ಯಾವ ಮಾನವನು ಸುವರ್ಣಾಲಂಕೃತವಾದ ಶೃಂಗಗಳಿಂದ ಕೂಡಿರುವುದೂ, ಅತಿಸುಂದರವಾದ ಅಂಗವುಳ್ಳದ್ದೂ ಮತ್ತು ಹೆಚ್ಚಾಗಿ ಹಾಲನ್ನು ಕೊಡುವುದೂ ಆದ ಗೋವನ್ನು ದಾನಮಾಡುವನೋ ಅಥವಾ ಇನ್ನಾವ ಮಾನವನು ಏಕಾಗ್ರಚಿತ್ತವುಳ್ಳವನಾಗಿ ಮೂರು ದಿನಗಳಲ್ಲಿ ಈ ಮಾಹಾತ್ಮ್ಯವನ್ನು ಶ್ರವಣಮಾಡುವನೋ ಅವರಿಬ್ಬರಿಗೂ ಲಭಿಸುವ ಪುಣ್ಯಫಲವು ತುಲ್ಯವಾಗಿರುವುದು.

ಮಾರ್ಕಂಡೇಯ ಮಹಾಪುರಾಣದಲ್ಲಿ ನೂರಏಳನೆಯ ಅಧ್ಯಾಯವು ಮುಗಿದುದು.

॥ ಓಂ ಶ್ರೀ ದುರ್ಗಾಯೈ ನಮಃ ॥

ಮಾರ್ಕಂಡೇಯ ಪುರಾಣಂ

ಅಷ್ಟಾಧಿಕಶತತಮೋಽಧ್ಯಾಯಃ

(ವೈವಸ್ವತವಂಶಾನುಕ್ರಮವರ್ಣನಮ್)

ಮಾರ್ಕಣ್ಡೇಯ ಉವಾಚ :—

ಏವಂಪ್ರಭಾವೋ ಭಗವಾನನಾದಿನಿಧನೋ ರವಿಃ ।
ಯಸ್ಯ ತ್ವಂ ಕ್ರೌಷ್ಟುಕೇ ಭಕ್ತ್ಯಾ ಮಾಹಾತ್ಮ್ಯಂ ಮಯಿ ಪೃಚ್ಛಸಿ॥೧॥

ಪರಮಾತ್ಮಾ ಸ ಯೋಗಿನಾಂ ಯುಞ್ಜತಾಂ ಚೇತಸಾಂ ಲಯಮ್ ।
ಕ್ಷೇತ್ರಜ್ಞಃ ಸಾಙ್ಖ್ಯಯೋಗಾನಾಂ ಯಜ್ಞೇಶೋ ಯಜ್ವಿನಾಮಪಿ॥೨॥

ನೂರಎಂಟನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಇಂತೆಂದನು :—

೧. ಕ್ರೌಷ್ಟುಕಿ ಮುನಿಯೇ! ಯಾವ ಸೂರ್ಯಪರಮಾತ್ಮನ ಮಾಹಾತ್ಮ್ಯವನ್ನು ನೀನು ನನ್ನಲ್ಲಿ ಪ್ರಶ್ನಿಸುತ್ತಿರುವೆಯೋ ಅಂತಹ ಸೂರ್ಯದೇವನು ಉತ್ಪತ್ತಿ-ನಾಶಗಳಿಲ್ಲದವನೂ ಅಖಂಡೈಶ್ವರ್ಯಸಂಪನ್ನನೂ ಮತ್ತು ಈ ಬಗೆಯ ಅದ್ಭುತಪ್ರಭಾವವುಳ್ಳವನೂ ಆಗಿದ್ದಾನೆ.

೨. ಆ ಸೂರ್ಯಪರಮಾತ್ಮನು ಯೋಗಾಭ್ಯಾಸಬಲದಿಂದ ಮನಸ್ಸಿನ ಲಯವನ್ನು ಹೊಂದಿರುವ ಯೋಗಿಗಳಿಗೆ ಪರಮಾತ್ಮಸ್ವರೂಪನೂ, ಸಾಂಖ್ಯ-ಯೋಗಬಲದಿಂದ ಸಾಧನಪರರಿಗೆ ಕ್ಷೇತ್ರಜ್ಞಸ್ವರೂಪನೂ ಮತ್ತು ಯಾಗಶೀಲ-ರಾದ ದ್ವಿಜರಿಗೆ ಯಜ್ಞೇಶಸ್ವರೂಪನೂ ಆಗಿದ್ದಾನೆ.

ಸೂರ್ಯಾಧಿಕಾರಂ ವಹತೋ ವಿಷ್ಣೋರೀಶಸ್ಯ ವೇಧಸಃ ।
ಮನುಸ್ತಸ್ಯಾಭವತ್ಪುತ್ರಶ್ಛಿನ್ನಸರ್ವಾರ್ಥಸಂಶಯಃ ॥೩॥

ಮನ್ವನ್ತರಾಧಿಪೋ ವಿಪ್ರ ಯಸ್ಯ ಸಪ್ತಮಮನ್ತರಮ್ ।
ಇಕ್ಷ್ವಾಕುರ್ನಾಭಗೋಽರಿಷ್ಟೋ ಮಹಾಬಲಪರಾಕ್ರಮಃ ॥೪॥

ನರಿಷ್ಯನ್ತೋಽಥ ನಾಭಾಗಃ ಪೃಷಧ್ರೋ ಧೃಷ್ಟ ಏವ ಚ ।
ಏತೇ ಪುತ್ರಾ ಮನೋಸ್ತಸ್ಯ ಪೃಥಗ್ರಾಜ್ಯಸ್ಯ ಪಾಲಕಾಃ ॥೫॥

ವಿಖ್ಯಾತಕೀರ್ತಯಃ ಸರ್ವೇ ಸರ್ವೇ ಶಸ್ತ್ರಾಸ್ತ್ರಪಾರಗಾಃ ॥೬॥

ವಿಶಿಷ್ಟತರಮನ್ವಿಚ್ಛನ್ಮನುಃ ಪುತ್ರಂ ತಥಾ ಪುನಃ ।
ಮಿತ್ರಾವರುಣಯೋರಿಷ್ಟಿಂ ಚಕಾರ ಕೃತಿನಾಂ ವರಃ ॥೭॥

---

೩. ಬ್ರಹ್ಮ-ವಿಷ್ಣು-ಈಶ್ವರ ಎಂಬ ತ್ರಿಮೂರ್ತಿಗಳ ಸ್ವರೂಪನಾಗಿ ಸೂರ್ಯಪದವನ್ನು ನೆರವೇರಿಸುವ ಪರಮಾತ್ಮನಿಗೆ ಪರಿಹರಿಸಿದ ಸರ್ವವಿಷಯಗಳ ಸಂಶಯವುಳ್ಳ ಮನುಪ್ರಜಾಪತಿಯು ಪುತ್ರನಾಗಿ ಜನಿಸಿದನು.

೪. ಸೂರ್ಯನ ಪುತ್ರನಾಗಿ ಜನಿಸಿದ ವೈವಸ್ವತ ಮನುವು ಮನ್ವಂತ-ರಾಧಿಪತಿಯಾದನು. ಅವನು ಆಳಿದ ಮನ್ವಂತರವು ಏಳನೆಯದು. ಮಹಾಬಲ ಪರಾಕ್ರಮಗಳಿಂದ ಕೂಡಿದ ಅವನ ಪುತ್ರರಲ್ಲಿ ಕೆಲವರು ಇಕ್ಷ್ವಾಕು, ನಾಭಗ ಮತ್ತು ಅರಿಷ್ಟ ಎಂದು ಖ್ಯಾತಿಹೊಂದಿರುವರು.

೫. ಮತ್ತು ನರಿಷ್ಯಂತ, ನಾಭಾಗ, ಪೃಷಧ್ರ ಮತ್ತು ಧೃಷ್ಟ ಎಂಬ ನಾಮಾಂಕಿತರಾದ ಪುತ್ರರು ವೈವಸ್ವತ ಮನುವಿನ ಪುತ್ರರಾಗಿ ಜನಿಸಿ ಪ್ರತ್ಯೇಕ-ವಾಗಿ ಎಲ್ಲರೂ ರಾಜ್ಯಪಾಲಕರಾದರು.

೬. ವೈವಸ್ವತ ಮನುವಿನ ಪುತ್ರರಾದ ಇಕ್ಷ್ವಾಕು ಮುಂತಾದವರೆಲ್ಲರೂ ವಿಖ್ಯಾತಿಹೊಂದಿದ ಕೀರ್ತಿಯುಳ್ಳವರೂ ಮತ್ತು ಶಸ್ತ್ರ-ಅಸ್ತ್ರವಿದ್ಯೆಯಲ್ಲಿ ಪಾರಂ-ಗತರೂ ಆಗಿದ್ದರು.

೭. ಪ್ರಜ್ಞಾವಂತರಲ್ಲಿ ಉತ್ತಮನಾದ ಮನುರಾಜನು ಮತ್ತೆ ಅತಿಶಯ ಗುಣಗಳಿಂದ ಕೂಡಿದ ಪುತ್ರನನ್ನು ಅಪೇಕ್ಷಿಸಿದವನಾಗಿ ಮಿತ್ರಾವರುಣ ದೇವತೆಗಳನ್ನು ತೃಪ್ತಿಪಡಿಸುವ ಒಂದು ಇಷ್ಟಿಕರ್ಮವನ್ನು ಆಚರಿಸಿದನು.

ಯತ್ರ ಚಾಪಹುತೇ ಹೋತುರಪಚಾರಾನ್ಮಹಾಮುನೇ ।
ಇಲಾ ನಾಮ ಸಮುತ್ಪನ್ನಾ ಮನೋಃ ಕನ್ಯಾ ಸುಮಧ್ಯಮಾ ॥೮॥

ತಾಂ ದೃಷ್ಟ್ವಾ ಕನ್ಯಕಾಂ ತತ್ರ ಸಮುತ್ಪನ್ನಾಂ ತತೋ ಮನುಃ ।
ತುಷ್ಟಾವ ಮಿತ್ರಾವರುಣೌ ವಾಕ್ಯಂ ಚೇದಮುವಾಚ ಹ ॥೯॥

ಭವತ್ಪ್ರಸಾದಾತ್ತನಯೋ ವಿಶಿಷ್ಟೋ ಮೇ ಭವೇದಿತಿ ।
ಕೃತೇ ಮಖೇ ಸಮುತ್ಪನ್ನಾ ತನಯಾ ಮಮ ಧೀಮತಃ ॥೧೦॥

ಯದಿ ಪ್ರಸನ್ನೌ ವರದೌ ತದಿಯಂ ತನಯಾ ಮಮ ।
ಪ್ರಸಾದಾದ್ಭವತೋಃ ಪುತ್ರೋ ಭವತ್ವತಿಗುಣಾನ್ವಿತಃ ॥೧೧॥

---

೮. ಮಹಾಮುನಿಯಾದ ಕ್ರೌಷ್ಟುಕಿಯೇ ! ಹೋತೃಋತ್ವಿಜನ ಕರ್ಮಲೋಪದಿಂದ ಆ ಕರ್ಮವು ಭ್ರಂಶಹೊಂದಿರಲು ಮನುರಾಜನಿಗೆ ಸುಂದರವಾದ ನಡುವುಳ್ಳವಳೂ, ಇಳಾ ಎಂಬ ನಾಮಾಂಕನವುಳ್ಳವಳೂ ಆದ ಕನ್ಯೆಯು ಜನಿಸಿದಳು.

೯. ಯಜ್ಞಸಮಾಪ್ತಿಯಲ್ಲಿ ಜನಿಸಿದ ಆ ಇಳಾಕನ್ನಿಕೆಯನ್ನು ನೋಡಿ ಮನುರಾಜನು ಮಿತ್ರಾವರುಣ ದೇವತೆಗಳನ್ನು ಸ್ತುತಿಸಿದನು. ಮತ್ತು ಮಿತ್ರಾವರುಣ ದೇವತೆಗಳಲ್ಲಿ ಈ ರೀತಿಯಾಗಿ ಪ್ರಾರ್ಥನಾವಚನವನ್ನು ಆಡಿದನು.

೧೦. ಜ್ಞಾನಪೂರ್ವಕವಾಗಿ ಯಜ್ಞವನ್ನು ಆಚರಿಸಿದ ನನಗೆ ಯಜ್ಞಸಮಾಪ್ತಿಯಲ್ಲಿ ಕನ್ಯೆಯು ಜನಿಸಿರುವಳು. ನಿಮ್ಮ ಅನುಗ್ರಹದಿಂದ ಈ ಕನ್ಯೆಯು ನನಗೆ ಸಕಲಗುಣಗಳಿಂದ ಪ್ರಶಂಸನೀಯನಾದ ಪುತ್ರನು ಆಗಲಿ.

೧೧. ನೀವು ನನ್ನಲ್ಲಿ ಪ್ರಸನ್ನರಾಗಿ ವರವನ್ನು ಕೊಡುವವರಾದರೆ ನನಗೆ ಜನಿಸಿದ ಈ ಪುತ್ರಿಯು ನಿಮ್ಮ ಪ್ರಸಾದದಿಂದ ಅತಿಶಯವಾದ ಗುಣಗಳಿಂದ ಪೂರ್ಣನಾದ ಪುತ್ರನಾಗಲಿ.

ತಥೇತಿ ಚಾಭ್ಯಾಮುಕ್ತೇ ತು ದೇವಾಭ್ಯಾಂ ಸೈವ ಕನ್ಯಕಾ ।
ಇಲಾ ಸಮಭವತ್ಸದ್ಯಃ ಸುದ್ಯುಮ್ನ ಇತಿ ವಿಶ್ರುತಃ ॥೧೨॥

ಪುನಶ್ಚೇಶ್ವರಕೋಪೇನ ಮೃಗಯಾಮಟತಾ ವನೇ ।
ಸ್ತ್ರೀತ್ವಮಾಸಾದಿತಂ ತೇನ ಮನುಪುತ್ರೇಣ ಧೀಮತಾ ॥೧೩॥

ಪುರೂರವಸನಾಮಾನಂ ಚಕ್ರವರ್ತಿನಮೂರ್ಜಿತಮ್ ।
ಜನಯಾಮಾಸ ತನಯಂ ಯತ್ರ ಸೋಮಸುತೋ ಬುಧಃ ॥೧೪॥

ಜಾತೇ ಸುತೇ ಪುನಃ ಕೃತ್ವಾ ಸೋಽಶ್ವಮೇಧಂ ಮಹಾಕ್ರತುಮ್ ।
ಪುರುಷತ್ವಮನುಪ್ರಾಪ್ತಃ ಸುದ್ಯುಮ್ನಃ ಪಾರ್ಥಿವೋಽಭವತ್ ॥೧೫॥

ಸುದ್ಯುಮ್ನಸ್ಯ ತ್ರಯಃ ಪುತ್ರಾ ಉತ್ಕಲೋ ವಿನಯೋ ಗಯಃ ।
ಪುರುಷತ್ವೇ ಮಹಾವೀರ್ಯಾ ಯಜ್ವಿನಃ ಪೃಥುಲೌಜಸಃ ॥೧೬॥

---

೧೨. ಆ ಮಿತ್ರಾವರುಣದೇವತೆಗಳಿಂದ "ಹಾಗೇ ಆಗಲಿ" ಎಂದು ಅನುಗ್ರಹಿಸಲ್ಪಡುತ್ತಿರಲು ಇಲಾ ಎಂಬ ಆ ಕನ್ಯೆಯು ಕೂಡಲೆ ಸುದ್ಯುಮ್ನ ಎಂಬ ನಾಮಾಂಕನದಿಂದ ಪ್ರಖ್ಯಾತಿಹೊಂದಿದ ಪುತ್ರನಾದನು.

೧೩. ಅನಂತರ ಮನುರಾಜನ ಪುತ್ರನೂ ಪ್ರಜ್ಞಾಶಾಲಿಯೂ ಆದ ಸುದ್ಯುಮ್ನನು ಕಾಡಿನಲ್ಲಿ ಬೇಟೆಯನ್ನಾಡುತ್ತಿರಲು ಈಶ್ವರನ ಕೋಪಕ್ಕೆ ಪಾತ್ರನಾಗಿ ಅದರಿಂದ ಮತ್ತೆ ಕನ್ಯಾರೂಪವನ್ನು ಹೊಂದಿದನು.

೧೪. ತರುವಾಯ ಚಂದ್ರನ ಪುತ್ರನಾದ ಬುಧನು ಇಳಾ ಎಂಬ ಕನ್ಯೆಯಲ್ಲಿ ಸಮಸ್ತಗುಣಗಳಿಂದ ಊರ್ಜಿತನೂ ಮತ್ತು ಚಕ್ರವರ್ತಿಯಾಗಿ ಗಣ್ಯನೂ ಆದ ಪುರೂರವ ಎಂಬುವನನ್ನು ಪುತ್ರನನ್ನಾಗಿ ಹೊಂದಿದನು.

೧೫. ಸುದ್ಯುಮ್ನನ ಸ್ತ್ರೀ ಅವಸ್ಥೆಯಲ್ಲಿ ಪುತ್ರನು ಜನಿಸಿದ ತರುವಾಯ ಮತ್ತೆ ಅಶ್ವಮೇಧವೆಂಬ ಮಹಾಯಜ್ಞವನ್ನು ಮಾಡಿ ಪುರುಷತ್ವವನ್ನು ಹೊಂದಿ ರಾಜ್ಯಭಾರವನ್ನು ಕೈಗೊಂಡನು.

೧೬. ಸುದ್ಯುಮ್ನರಾಜನ ಪುರುಷಾವಸ್ಥೆಯಲ್ಲಿ ಮಹತ್ತಾದ ವೀರ್ಯವಂತರೂ, ಯಜ್ಞಾಚರಣೆಯ ಶೀಲವುಳ್ಳವರೂ ಮತ್ತು ಅತಿಶಯವಾದ ತೇಜಸ್ಸುಳ್ಳವರೂ ಆದ ಮೂರು ಮಂದಿ ಪುತ್ರರು ಜನಿಸಿದರು. ಅವರು ಉತ್ಕಲ, ವಿನಯ ಮತ್ತು ಗಯ ಎಂಬ ನಾಮಾಂಕನಗಳನ್ನು ಹೊಂದಿದ್ದರು.

ಪುರುಷತ್ವೇ ತು ಯೋ ಜಾತಾಸ್ತಸ್ಯ ರಾಜ್ಞಸ್ತ್ರಯಃ ಸುತಾಃ ।
ಬುಭುಜುಸ್ತೇ ಮಹೀಮೇತಾಂ ಧರ್ಮೇ ನಿಯತಚೇತಸಃ ॥೧೭॥

ಸ್ತ್ರೀಭೂತಸ್ಯ ತು ಯೋ ಜಾತಸ್ತಸ್ಯ ರಾಜ್ಞಃ ಪುರೂರವಾಃ ।
ನ ಸ ಲೇಭೇ ಮಹೀಭಾಗಂ ಯತೋ ಬುಧಸುತೋ ಹಿ ಸಃ ॥೧೮॥

ತತೋ ವಸಿಷ್ಠವಚನಾತ್ಪ್ರತಿಷ್ಠಾನಂ ಪುರೋತ್ತಮಮ್ ।
ತಸ್ಮೈ ದತ್ತಂ ಸ ರಾಜಾಭೂತ್ತತ್ರಾತೀವ ಮನೋಹರೇ ॥೧೯॥

ಇತಿ ಶ್ರೀಮಾರ್ಕಣ್ಡೇಯ ಮಹಾಪುರಾಣೇ ವಂಶಾನುಕ್ರಮೋ ನಾಮ
ಅಷ್ಟಾಧಿಕಶತತಮೋಽಧ್ಯಾಯಃ

---

೧೭. ಹೀಗೆ ಸುದ್ಯುಮ್ನರಾಜನ ಪುರುಷಾವಸ್ಥೆಯಲ್ಲಿ ಯಾವ ಮೂರು ಮಂದಿ ಪುತ್ರರು ಜನಿಸಿದರೊ ಅವರು ಧರ್ಮದಲ್ಲಿ ಆಸಕ್ತಿ ಹೊಂದಿದ ಮಾನಸವುಳ್ಳವರಾಗಿ ಈ ಭೂಮಿಯನ್ನು ಪಾಲಿಸಿ ರಾಜ್ಯಭೋಗವನ್ನು ಅನುಭವಿಸಿದರು

೧೮. ಸುದ್ಯುಮ್ನರಾಜನ ಸ್ತ್ರೀ ಅವಸ್ಥೆಯಲ್ಲಿ ಪುರೂರವನೆಂಬ ಯಾವ ಪುತ್ರನು ಜನಿಸಿದನೋ ಅವನು ಬುಧನಿಂದ ಜನಿಸಿದವನಾದುದರಿಂದ ಸುದ್ಯುಮ್ನನ ವಂಶಕ್ರಮದಿಂದ ಪ್ರಾಪ್ತವಾದ ರಾಜ್ಯಭಾಗವನ್ನು ಹೊಂದಲಿಲ್ಲ.

೧೯. ತರುವಾಯ ವಸಿಷ್ಠಮುನಿಯ ಆದೇಶದಿಂದ ಆ ಪುರೂರವನಿಗೆ ಪ್ರತಿಷ್ಠಾನವೆಂಬ ಅತ್ಯುತ್ತಮ ನಗರವು ರಾಜನಿಂದ ಅರ್ಪಿಸಲ್ಪಟ್ಟಿತು. ಅತಿ ಸುಂದರವಾದ ಆ ಪ್ರತಿಷ್ಠಾನ ನಗರದಲ್ಲಿ ಪುರೂರವನು ರಾಜನಾಗಿದ್ದನು.

ಮಾರ್ಕಂಡೇಯ ಮಹಾಪುರಾಣದಲ್ಲಿ ನೂರ ಎಂಟನೆಯ ಅಧ್ಯಾಯವು
ಮುಗಿದುದು.

॥ ಓಂ ಶ್ರೀ ದುರ್ಗಾಯೈ ನಮಃ ॥

ಮಾರ್ಕಂಡೇಯ ಪುರಾಣಂ

ನವಾಧಿಕಶತತಮೋಽಧ್ಯಾಯಃ

(ಪೃಷಧ್ರೋಪಾಖ್ಯಾನಮ್)

ಮಾರ್ಕಣ್ಡೇಯ ಉವಾಚ :—

ಪೃಷಧ್ರಾಖ್ಯೋ ಮನೋಃ ಪುತ್ರೋ ಮೃಗಯಾಮುಗಮದ್ವನಮ್ ।
ತತ್ರ ಚಙ್ಕ್ರಮಮಾಣೋಽಸೌ ವಿಪಿನೇ ನಿರ್ಜನೇ ವನೇ ॥೧॥

ನಾಸಸಾದ ಮೃಗಂ ಕಂಚಿದ್ಭಾನುದೀಧಿತಿತಾಪಿತಃ ।
ಕ್ಷುತ್ತೃಟ್ತಾಪಪರೀತಾಙ್ಗ ಇತಶ್ಚೇತಶ್ಚ ಚಙ್ಕ್ರಮನ್ ॥೨॥

ನೂರ ಒಂಭತ್ತನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಹೀಗೆಂದನು :—

೧. ಪೃಷಧ್ರ ಎಂಬ ನಾಮಾಂಕಿತನಾದ ಮನುರಾಜನ ಪುತ್ರನು ಮೃಗಬೇಟೆಗೋಸ್ಕರ ಕಾಡಿಗೆ ಹೋದನು. ಆ ನಿರ್ಜನವಾದ ವನದಲ್ಲಿ ಪೃಷಧ್ರನು ಬೇಟೆಯಾಡುತ್ತ ಅಲ್ಲಲ್ಲಿ ಅಲೆದಾಡಿದನು.

೨. ಅಲ್ಲಿ ಸೂರ್ಯನ ಕಿರಣಗಳ ಬೇಗೆಯಿಂದ ಬೇಸತ್ತು ಅಲೆದರೂ ಒಂದಾದರೂ ಪ್ರಾಣಿಯನ್ನು ಕಾಣಲಿಲ್ಲ. ಹಾಗೆಯೇ ಹಸಿವು-ನೀರಡಿಕೆಗಳಿಂದ ಪೀಡಿತನಾಗಿ ಒಂದೆಡೆಯಿಂದ ಮತ್ತೊಂದೆಡೆಗೆ ತಿರುಗಾಡಿದನು.

ಸ ದದರ್ಶ ತದಾ ತತ್ರ ಹೋಮಧೇನುಂ ಮನೋಹರಾಮ್ ।
ಲತಾನ್ತರ್ದೇಹಚ್ಛನ್ನಾರ್ಧಾಂ ಬ್ರಾಹ್ಮಣಸ್ಯಾಗ್ನಿಹೋತ್ರಿಣಃ ॥೩॥

ಸ ಮನ್ಯಮಾನೋ ಗವಯಮಿಷುಣಾ ತಾಮತಾಡಯತ್ ।
ಪಪಾತ ಸಾಪಿ ತದ್ಬಾಣವಿಭಿನ್ನಹೃದಯಾ ಭುವಿ ॥೪॥

ತತೋಗ್ನಿಹೋತ್ರಿಣಃ ಪುತ್ರೋ ಬ್ರಹ್ಮಚಾರೀ ತಪೋರತಿಃ ।
ಶಪ್ತವಾನ್ಸ ಪಿತುರ್ದೃಷ್ಟ್ವಾ ಹೋಮಧೇನುಂ ನಿಪಾತಿತಾಮ್ ॥೫॥

ಗೋಪಾಲಃ ಪ್ರೇಷಿತಃ ಪುತ್ರೋ ಬಾಭ್ರವ್ಯೋ ನಾಮ ನಾಮತಃ ॥೬॥

ಕೋಪಾಮರ್ಷಪರಾಧೀನಚಿತ್ತವೃತ್ತಿಸ್ತತೋ ಮುನೇ ।
ಚುಕೋಪ ವಿಗಲತ್ಸ್ವೇದಜಲಲೋಲಾವಿಲೇಕ್ಷಣಃ ॥೭॥

---

೩. ಆಗ ಅವನು ಆ ವನದಲ್ಲಿ ಅಗ್ನಿಹೋತ್ರಕರ್ಮವನ್ನು ಆಚರಿಸುತ್ತಿದ್ದ ಒಬ್ಬ ಬ್ರಾಹ್ಮಣನ, ಬಳ್ಳಿಗಳಪೊದೆಯಲ್ಲಿ ಮುಚ್ಚಿಹೋದ ಅರ್ಧದೇಹವುಳ್ಳ ಮತ್ತು ಮನೋಹರವಾದ ಒಂದು ಹೋಮಧೇನುವನ್ನು ಕಂಡನು.

೪. ಆ ರಾಜಕುಮಾರನು ಹೋಮಧೇನುವನ್ನು ಗವಯ ಮೃಗವೆಂದು ಭಾವಿಸಿ ಅದಕ್ಕೆ ಬಾಣವನ್ನು ಹೊಡೆದನು. ಆಗ ಆ ಬಾಣದಿಂದ ಹೊಡೆಯಲ್ಪಟ್ಟ ಹೃದಯವುಳ್ಳ ಹೋಮಧೇನುವು ನೆಲಕ್ಕೆ ಬಿದ್ದಿತು.

೫. ತರುವಾಯ ಆ ಅಗ್ನಿಹೋತ್ರಿಯಾದ ಬ್ರಾಹ್ಮಣನ ತಪೋನಿಷ್ಠನೂ ಬ್ರಹ್ಮಚಾರಿಯೂ ಆದ ಪುತ್ರನೊಬ್ಬನು ತಂದೆಯ ಹೋಮಧೇನುವು ಸತ್ತು ಬಿದ್ದಿರುವುದನ್ನು ಕಂಡು ಅದನ್ನು ಹೊಡೆದ ರಾಜಕುಮಾರನನ್ನು ಶಪಿಸಿದನು.

೬. ಆ ಅಗ್ನಿಹೋತ್ರಿಯಾದ ಬ್ರಾಹ್ಮಣನು ತಪೋನಿಷ್ಠ ಮುಂತಾದ ಗುಣಗಳಿಂದ ಕೂಡಿದ ಬಾಭ್ರವ್ಯನೆಂಬ ಪುತ್ರನನ್ನು ಗೋವಿನ ರಕ್ಷಣೆಗಾಗಿ ಕಳುಹಿಸಿದ್ದನು.

೭. ಕ್ರೌಷ್ಟುಕಿಮುನಿಯೇ ! ಮುನಿಪುತ್ರನಾದ ಬಾಭ್ರವ್ಯನು ಹೋಮಧೇನುವನ್ನು ಹೊಡೆದಿರುವ ರಾಜಕುಮಾರನಲ್ಲಿ ಕೋಪ-ಅಸಹನೆಗಳಿಂದ ತುಂಬಿದ ಚಿತ್ತವೃತ್ತಿಯುಳ್ಳವನೂ, ಸುರಿಯುತ್ತಿರುವ ಬೆವರು, ನೀರು ತುಂಬಿದ ಚಂಚಲವಾದ ಕಣ್ಣುಗಳಿಂದ ಕೂಡಿದವನೂ ಆಗಿ ಅತಿಯಾಗಿ ಕೋಪಮಾಡಿದನು.

ತಂ ಕ್ರುದ್ಧಂ ಪ್ರೇಕ್ಷ್ಯ ಸ ನೃಪಃ ಪೃಷಧ್ರೋ ಮುನಿದಾರಕಮ್ ।
ಪ್ರಸೀದೇತಿ ಜಗೌ ಕಸ್ಮಾಚ್ಛೂದ್ರವತ್ಕುರುಷೇ ರುಷಮ್ ॥೮॥

ನ ಕ್ಷತ್ರಿಯೋ ನ ವಾ ವೈಶ್ಯ ಏವಂ ಕ್ರೋಧಮುಪೈತಿ ವೈ ।
ಯಥಾ ತ್ವಂ ಶೂದ್ರವಜ್ಜಾತೋ ವಿಶಿಷ್ಟೇ ಬ್ರಹ್ಮಣಃ ಕುಲೇ ॥೯॥

ಮಾರ್ಕಣ್ಡೇಯ ಉವಾಚ :—

ಇತಿ ನಿರ್ಭರ್ತ್ಸಿತಸ್ತೇನ ಸ ರಾಜ್ಞಾ ಮೌಲಿನಃ ಸುತಃ ।
ಶಶಾಪ ತಂ ದುರಾತ್ಮಾನಂ ಶೂದ್ರ ಏವ ಭವಿಷ್ಯಸಿ ॥೧೦॥

ಪ್ರಯಾಸ್ಯತಿ ಕ್ಷಯಂ ಬ್ರಹ್ಮ ಯತ್ತೇಽಧೀತಂ ಗುರೋರ್ಮುಖಾತ್ ।
ಹೋಮಧೇನುರ್ಮಮ ಗುರೋರ್ಯದಿಯಂ ಹಿಂಸಿತಾ ತ್ವಯಾ ॥೧೧॥

---

೮. ಆಗ ಪೃಷಧ್ರರಾಜನು ಕೋಪಗೊಂಡ ಆ ಮುನಿಪುತ್ರನನ್ನು ನೋಡಿ "ಕರುಣೆತೋರು" ಎಂದು ಹೇಳುತ್ತ "ಶೂದ್ರನಂತೆ ಇಷ್ಟು ಕೋಪವನ್ನು ತಾಳಿದ್ದೀಯೆ?" ಎಂದು ಆಕ್ಷೇಪಿಸಿದನು.

೯. ಮುನಿಪುತ್ರನೇ! ನೀನೀಗ ಹೇಗೆ ಕೋಪಿಸಿಕೊಂಡಿರುವೆಯೋ ಹಾಗೆ ಕ್ಷತ್ರಿಯನಾಗಲಿ ವೈಶ್ಯನಾಗಲಿ ಕೋಪಮಾಡುವುದಿಲ್ಲ. ಹಾಗೆ ಕೋಪಮಾಡಿದ ನೀನು ಪ್ರಶಸ್ತವಾದ ಬ್ರಾಹ್ಮಣನ ವಂಶದಲ್ಲಿ ಶೂದ್ರನಂತೆ ಜನ್ಮವೆತ್ತಿದ್ದೀಯೆ. ಹೀಗೆಂದು ಹೇಳಿದನು.

ಮಾರ್ಕಂಡೇಯ ಮುನಿಯು ಹೇಳಿದನು :—

೧೦. ಹೀಗೆ ಪೃಷಧ್ರ ರಾಜನಿಂದ ಬೆದರಿಸಲ್ಪಟ್ಟ ಮೌಲಿ ಎಂಬ ದ್ವಿಜನ ಪುತ್ರನಾದ ಆ ಬಾಭ್ರವ್ಯನು ದುರಾತ್ಮನಾದ ರಾಜನನ್ನು ಕುರಿತು "ನೀನು ಶೂದ್ರನೇ ಆಗು" ಎಂದು ಶಾಪವಿತ್ತನು.

೧೧. ನನ್ನ ತಂದೆಯ ಹೋಮಧೇನುವು ನಿನ್ನಿಂದ ಹಿಂಸಿಸಲ್ಪಟ್ಟಿದೆ. ಆದುದರಿಂದ ನಾನು ಕೊಟ್ಟ ಶಾಪಪ್ರಭಾವದಿಂದ ನೀನು ಗುರುಮುಖದಿಂದ ಅಧ್ಯಯನಮಾಡಿರುವ ವೇದರಾಶಿಯು ಸ್ಮರಣೆಯಿಲ್ಲದಂತಾಗುವುದು.

ಏವಂ ಶಪ್ತೋ ನೃಪಃ ಕ್ರುದ್ಧಸ್ತಚ್ಛಾಪಪರಿಪೀಡಿತಃ ।
ಪ್ರತಿಶಾಪಪರೋ ವಿಪ್ರ ತೋಯಂ ಜಗ್ರಾಹ ಪಾಣಿನಾ ॥೧೨॥

ಸೋಽಪಿ ರಾಜ್ಞೋ ವಿನಾಶಾಯ ಕೋಪಂ ಚಕ್ರೇ ದ್ವಿಜೋತ್ತಮಃ ।
ತಮಭ್ಯೇತ್ಯ ತ್ವರಾಯುಕ್ತೋ ವಾರಯಾಮಾಸ ವೈ ಪಿತಾ ॥೧೩॥

ವತ್ಸಾಲಮಲಮತ್ಯರ್ಥಂ ಕೋಪೇನಾತೀವ ವೈರಿಣಾ ।
ಐಹಿಕಾಮುಷ್ಮಿಕಹಿತಃ ಶಮ ಏವ ದ್ವಿಜನ್ಮನಾಮ್ ॥೧೪॥

ಕೋಪಸ್ತಪೋ ನಾಶಯತಿ ಕ್ರುದ್ಧೋ ಭ್ರಶ್ಯತ್ಯಥಾಯುಷಃ ।
ಕ್ರುದ್ಧಸ್ಯ ಗಲತೇ ಜ್ಞಾನಂ ಕ್ರುದ್ಧಶ್ಚಾರ್ಥಾಚ್ಚ ಹೀಯತೇ ॥೧೫॥

---

೧೨. ಬ್ರಹ್ಮರ್ಷಿಯಾದ ಕ್ರೌಷ್ಟುಕಿಯೇ! ಮುನಿಪುತ್ರನಿಂದ ಈ ರೀತಿಯಾಗಿ ಶಪಿಸಲ್ಪಟ್ಟಿರುವವನೂ, ಆ ಶಾಪದಿಂದ ಪೀಡಿಸಲ್ಪಟ್ಟವನೂ ಆದ ನೃಪಧ್ರನು ಮತ್ತೆ ಕೋಪಾವೇಶವುಳ್ಳವನಾಗಿ ಮುನಿಪುತ್ರನಿಗೆ ಪ್ರತಿಶಾಪವನ್ನು ಕೊಡುವವನಾಗಿ ಕೈಯಲ್ಲಿ ನೀರನ್ನು ತೆಗೆದುಕೊಂಡನು.

೧೩. ಅಷ್ಟರಲ್ಲಿ ದ್ವಿಜೋತ್ತಮನಾದ ಮುನಿಪುತ್ರನು ರಾಜನನ್ನು ಸಂಹರಿಸುವ ಹಾಗೆ ಕೋಪತಾಳಿದನು. ಆಗ ಬಹಳ ತ್ವರೆಯಿಂದ ಅಲ್ಲಿಗೆ ಬಂದ ತಂದೆಯು ಪುತ್ರನನ್ನು ತಡೆದನು.

೧೪. ಪುತ್ರನೇ! ಪ್ರಬಲ ಶತ್ರುವಾದ ಅತಿ ಕೋಪವನ್ನು ಯಾವಾಗಲೂ ಹೊಂದಬಾರದು. ಅಂತಹ ಕೋಪವನ್ನು ನೀನು ಮಾಡಬೇಡ. ದ್ವಿಜರಿಗೆ ಐಹಿಕ-ಆಮುಷ್ಮಿಕ ಹಿತಪ್ರಾಪ್ತಿಗೆ ಶಾಂತಿಯು ಮುಖ್ಯಕಾರಣವು.

೧೫. ಕೋಪವು ತಪಸ್ಸಿದ್ಧಿಯನ್ನು ನಾಶಮಾಡುವುದು. ಕೋಪ ಹೊಂದಿದ ಮಾನವನು ಆಯುಷ್ಯಕ್ಷಯವನ್ನು ಹೊಂದುತ್ತಾನೆ. ಕೋಪತಾಳಿದ ಮಾನವನಿಗೆ ಜ್ಞಾನವು ಭಂಗವಾಗುವುದು ಮತ್ತು ಕೋಪಗೊಂಡವನು ಐಶ್ವರ್ಯದಿಂದಲೂ ಭ್ರಷ್ಟನಾಗುವನು.

ನ ಧರ್ಮಃ ಕ್ರೋಧಶೀಲಸ್ಯ ನಾರ್ಥಂ ಚಾಪ್ನೋತಿ ರೋಷಣಃ ।
ನಾಲಂ ಸುಖಾಯ ಕಾಮಾಪ್ತಿಃ ಕೋಪೇನಾವಿಷ್ಟಚೇತಸಾಮ್ ॥೧೬॥

ಯದಿ ರಾಜ್ಞಾ ಹತಾ ಧೇನುರಿಯಂ ವಿಜ್ಞಾನಿನಾ ಸತಾ ।
ಯುಕ್ತಮತ್ರ ದಯಾಂ ಕರ್ತುಮಾತ್ಮನೋ ಹಿತಬೋಧಿನಾ ॥೧೭॥

ಅಥವಾಜಾನತಾ ಧೇನುರಿಯಂ ವ್ಯಾಪಾದಿತಾ ಮುನೇ ।
ತತ್ಕಥಂ ಶಾಪಯೋಗ್ಯೋಽಯಂ ದುಷ್ಟಂ ನಾಸ್ಯ ಮನೋ ಯತಃ ॥೧೮॥

ಆತ್ಮನೋ ಹಿತಮನ್ವಿಚ್ಛನ್ ಬಾಧತೇ ಯೋಽಪರಂ ನರಃ ।
ಕರ್ತವ್ಯಾ ಮೂಢವಿಜ್ಞಾನೇ ದಯಾ ತತ್ರ ದಯಾಲುಭಿಃ ॥೧೯॥

---

೧೬. ಕೋಪಮಾಡುವ ಶೀಲವುಳ್ಳವನಿಗೆ ಧರ್ಮವು ಸಿದ್ಧಿಸಲಾರದು. ಕೋಪಸ್ವಭಾವದವನು ಐಶ್ವರ್ಯವನ್ನು ಹೊಂದುವುದಿಲ್ಲ. ಮತ್ತು ಕೋಪದ ಆವೇಶಕ್ಕೆ ಗುರಿಯಾದ ಮನಸ್ಸುಳ್ಳವರಿಗೆ ಕಾಮಪ್ರಾಪ್ತಿಯು ಸುಖಕರವಾಗುವುದಿಲ್ಲ.

೧೭. ಈ ಹೋಮಧೇನುವು ಒಂದು ಪಕ್ಷ ಜ್ಞಾನಪೂರ್ವಕವಾಗಿ ಈ ರಾಜನಿಂದ ಹೊಡೆಯಲ್ಪಟ್ಟಿದ್ದರೂ ತನಗೆ ಇಹ-ಪರಲೋಕಗಳ ಹಿತವನ್ನು ತಿಳಿದಿರುವ ನಿನ್ನಿಂದ ಇವನಲ್ಲಿ ದಯೆತೋರುವುದು ಯುಕ್ತವು.

೧೮. ಒಂದು ಪಕ್ಷದಲ್ಲಿ ತಿಳಿಯದೆ ಈ ಹೋಮಧೇನುವು ರಾಜನಿಂದ ಹೊಡೆಯಲ್ಪಟ್ಟಿದ್ದರೆ ಆಗ ಈ ರಾಜನು ಹೇಗೆ ತಾನೆ ಶಾಪಕ್ಕೆ ಪಾತ್ರನಾಗುವನು? ಇವನ ಮನಸ್ಸು ದುಷ್ಟವಲ್ಲವಷ್ಟೆ.

೧೯. ತನ್ನ ಹಿತವನ್ನು ಅಪೇಕ್ಷಿಸಿದವನಾಗಿ ಯಾವ ಮಾನವನು ಪರರನ್ನು ಹಿಂಸಿಸುವನೋ ಅವನ ಮೂಢವಿಜ್ಞಾನದ ವಿಷಯದಲ್ಲಿ ದಯಾವಂತರು ಅವಶ್ಯವಾಗಿ ದಯೆತೋರುವುದು ಉಚಿತವು.

ಅಜ್ಞಾನತಃ ಕೃತೇ ದಣ್ಡಂ ಪಾತಯನ್ತಿ ಬುಧಾ ಯದಿ ।
ಬುಧೇಭ್ಯಸ್ತಮಹಂ ಮನ್ಯೇ ವರಮಜ್ಞಾನಿನೋ ನರಾಃ ॥೨೦॥

ನಾದ್ಯ ಶಾಪಸ್ತ್ವಯಾ ದೇಯಃ ಪಾರ್ಥಿವಸ್ಯಾಸ್ಯ ಪುತ್ರಕ ।
ಸ್ವಕರ್ಮಣೈವ ಪತಿತಾ ಗೌರೇಷಾ ದುಃಖಮೃತ್ಯುನಾ ॥೨೧॥

ಮಾರ್ಕಣ್ಡೇಯ ಉವಾಚ :--

ಪೃಷಧ್ರೋಽಪಿ ಮುನೇಃ ಪುತ್ರೇ ಪ್ರಣಮ್ಯಾನಮ್ರಕನ್ಧರಃ ।
ಪ್ರಸೀದೇತಿ ಜಗಾದೋಚ್ಚೈರಜ್ಞಾನಾದ್ಘಾತಿತೇತಿ ಚ ॥೨೨॥

ಮಯಾ ಗವಯಬುದ್ಧ್ಯಾ ಗೌರವಧ್ಯಾ ಘಾತಿತಾ ಮುನೇ ।
ಅಜ್ಞಾನಾದ್ಧೋಮಧೇನುಸ್ತೇ ಪ್ರಸೀದ ತ್ವಂ ಚ ನೋ ಮುನೇ॥೨೩॥

---

೨೦. ಜ್ಞಾನಿಗಳು ಅಜ್ಞಾನದಿಂದ ಅಪರಾಧಮಾಡಿದವರಲ್ಲಿ ದಂಡವನ್ನು ಪ್ರಯೋಗಿಸುವುದಾದರೆ ಹಾಗೆ ದಂಡಿಸುವ ಜ್ಞಾನಿಗಳಿಗಿಂತಲೂ ಅಜ್ಞಾನಿಗಳಾದ ಮಾನವರೇ ಎಷ್ಟೋ ಮೇಲಾದವರೆಂದು ನಾನು ತಿಳಿಯುವೆನು.

೨೧. ಮಗನೇ ! ಈ ರಾಜನಿಗೆ ನೀನು ಇಂದು ಶಾಪವನ್ನು ಕೊಡಲಾಗದು. ಈ ಧೇನುವು ತನ್ನ ಪೂರ್ವಾರ್ಜಿತ ಕರ್ಮಾನುಸಾರವಾಗಿ ದುಃಖಕರವಾದ ಸಾವಿಗೆ ತುತ್ತಾಗಿ ಬಿದ್ದಿರುವುದು.

ಮಾರ್ಕಂಡೇಯ ಮುನಿಯು ಇಂತೆಂದನು :—

೨೨. ಆಗ ಪೃಷಧ್ರ ರಾಜನು ಬಾಗಿಸಿದ ಕತ್ತು ಉಳ್ಳವನಾಗಿ ವಿನಯದಿಂದ ಮುನಿಪುತ್ರನನ್ನು ನಮಸ್ಕಾರಮಾಡಿ “ ಮುನಿಪುತ್ರನೇ ! ಪ್ರಸನ್ನನಾಗು ; ಅಜ್ಞಾನದಿಂದ ಹೋಮಧೇನುವು ವಧಿಸಲ್ಪಟ್ಟಿರುವುದು ” ಎಂದು ಗಟ್ಟಿಯಾಗಿ ಬೇಡಿಕೊಂಡನು.

೨೩. “ ಮುನಿಯೇ ! ಗವಯಮೃಗವೆಂದರಿತು ಅವಧ್ಯವಾದ ಈ ಹೋಮಧೇನುವು ನನ್ನಿಂದ ವಧಿಸಲ್ಪಟ್ಟಿದೆ. ವಿಪ್ರೋತ್ತಮನೇ ! ಅಜ್ಞಾನದಿಂದ ಹೋಮಧೇನುವನ್ನು ವಧಿಸಿರುವೆನು. ತಪ್ಪನ್ನು ಮನ್ನಿಸಿ ನನ್ನಲ್ಲಿ ಪ್ರಸನ್ನನಾಗು ” ಎಂದು ಕೇಳಿಕೊಂಡನು.

ಋಷಿಪುತ್ರ ಉವಾಚ :—

ಆ ಜನ್ಮನೋ ಮಹೀಪಾಲ ನ ಮಯಾ ವ್ಯಾಹೃತಂ ಮೃಷಾ ।
ಕ್ರೋಧಶ್ಚಾದ್ಯ ಮಹಾಭಾಗ ನಾನ್ಯಥಾ ಮೇ ಕದಾಚನ ॥೨೪॥

ತಸ್ಮಾದಹಮೇನಂ ಶಕ್ನೋಮಿ ಶಾಪಂ ಕರ್ತುಂ ನೃಪಾನ್ಯಥಾ ।
ಯಸ್ತೇ ಸಮುದ್ಯತಃ ಶಾಪೋ ದ್ವಿತೀಯಃ ಸ ನಿವರ್ತಿತಃ ॥೨೫॥

ಇತ್ಯುಕ್ತವನ್ತಂ ತಂ ಬಾಲಮಾದಾಯ ಸ ಪಿತಾ ತತಃ ।
ಜಗಾಮ ಸ್ವಾಶ್ರಮಂ ಸೋಽಪಿ ಪೃಷಧ್ರಃ ಶೂದ್ರತಾಮಗಾತ್॥೨೬॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ವಂಶಾನುಚರಿತೇ
ಪೃಷಧ್ರೋಪಾಖ್ಯಾನೇ ನವಾಧಿಕಶತತಮೋಽಧ್ಯಾಯಃ

ಮುನಿಪುತ್ರನಿಂತೆಂದನು ;—

೨೪. ರಾಜನೇ ! ನಾನು ಹುಟ್ಟಿದ ಮೊದಲುಗೊಂಡು ಇದುವರೆಗೂ ಎಂದೂ ಸುಳ್ಳುಮಾತನ್ನು ಆಡಿರುವುದಿಲ್ಲ. ಮಹಾಭಾಗನಾದ ರಾಜನೇ ! ಇಂದು ನನಗೆ ಉಂಟಾದ ಕೋಪವು ಎಂದೆಂದಿಗೂ ಶಾಪದ ಪರಿಣಾಮವನ್ನು ನಿನಗೆ ಕೊಡದೇ ಇರುವುದಿಲ್ಲ.

೨೫. ಎಲೈ, ರಾಜನೇ ! ಈ ಕಾರಣದಿಂದ ನಾನು ಕೊಟ್ಟಿರುವ ಈ ಶಾಪವನ್ನು ಬದಲಾಯಿಸಲು ಶಕ್ತನಾಗಿಲ್ಲ. ಆದರೆ ನಿನಗೆ ಯಾವ ಮತ್ತೊಂದು ಶಾಪವನ್ನು ಕೊಡಲು ನಾನು ಸಿದ್ಧನಾಗಿದ್ದೆನೋ ಆ ಶಾಪಕೊಡುವುದನ್ನು ನಿಲ್ಲಿಸಿರುವೆನು.

೨೬. ಈ ರೀತಿಯಾಗಿ ಹೇಳಿರುವ ಪುತ್ರನನ್ನು ಕರೆದುಕೊಂಡು ತಂದೆಯು ತನ್ನ ಆಶ್ರಮಕ್ಕೆ ತೆರಳಿದನು. ತರುವಾಯ ಆ ಪೃಷಧ್ರರಾಜನು ಮುನಿಕುಮಾರನ ಶಾಪದಂತೆ ಶೂದ್ರತ್ವವನ್ನು ಹೊಂದಿದನು.

ಮಾರ್ಕಂಡೇಯ ಮಹಾಪುರಾಣದಲ್ಲಿ ನೂರಒಂಭತ್ತನೆಯ ಅಧ್ಯಾಯವು
ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ದಶಾಧಿಕಶತತಮೋಽಧ್ಯಾಯಃ

(ನಾಭಾಗಾಖ್ಯಾನಮ್)

ಮಾರ್ಕಣ್ಡೇಯ ಉವಾಚ :—

ಕಾರುಷಾಃ ಕ್ಷತ್ರಿಯಾಃ ಶೂರಾಃ ಕರುಷಸ್ಯಾಭವನ್ ಸುತಾಃ ।
ತೇ ತು ಸಪ್ತಶತಂ ವೀರಾಸ್ತೇಭ್ಯಶ್ಚಾನ್ಯೇ ಸಹಸ್ರಶಃ ||೧||

ದಿಷ್ಟಪುತ್ರಸ್ತು ನಾಭಾಗಃ ಸ್ಥಿತಃ ಪ್ರಥಮಯೌವನೇ ।
ದದರ್ಶ ವೈಶ್ಯತನಯಾಮತೀವ ಸುಮನೋಹರಾಮ್ ||೨||

ನೂರಹತ್ತನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಹೇಳಿದನು :—

೧. ಕರುಷ ಎಂಬುವನಿಗೆ ಶೂರಕ್ಷತ್ರಿಯರೂ ಕಾರುಷ ಎಂಬ ನಾಮಾಂಕಿತರೂ ಆದ ಅನೇಕಮಂದಿ ಪುತ್ರರಿದ್ದರು. ಅವರಲ್ಲಿ ಏಳುನೂರು ಮಂದಿ ವೀರ ಕುಮಾರರು ಗಣ್ಯರಾಗಿದ್ದರು. ಮಿಕ್ಕ ಪುತ್ರರು ಸಾವಿರಾರು ಮಂದಿಯಿದ್ದರು.

೨. ದಿಷ್ಟನೆಂಬುವನ ಪುತ್ರನಾದ ನಾಭಾಗನು ಬಾಲ್ಯವಯಸ್ಸು ಕಳೆದು ಉದಯಿಸಿದ ನವತಾರುಣ್ಯ ವಯಸ್ಸಿನಲ್ಲಿದ್ದಾಗ ಅತಿಸುಂದರಿಯಾದ ಒಬ್ಬಳು ವೈಶ್ಯಕನ್ಯೆಯನ್ನು ಕಂಡನು.

ತಸ್ಯಾಂ ಸಂದೃಷ್ಟಮಾತ್ರಾಯಾಂ ಮದನಾಕ್ಷಿಪ್ತಮಾನಸಃ ।
ಬಭೂವ ಭೂಪತನಯೋ ನಿಶ್ವಾಸಾಕ್ಷೇಪತತ್ಪರಃ ॥೩॥

ತಸ್ಯಾಃ ಸ ಗತ್ವಾ ಜನಕಂ ವವ್ರೇ ತಾಂ ವೈಶ್ಯಕನ್ಯಕಾಮ್ ।
ತತೋಽನಙ್ಗಪರಾಧೀನಮನೋವೃತ್ತಿಂ ನೃಪಾತ್ಮಜಮ್ ॥೪॥

ತಂ ಚಾಹ ಸ ಪಿತಾ ತಸ್ಯಾ ರಾಜಪುತ್ರಂ ಕೃತಾಞ್ಜಲಿಃ ।
ಬಿಭ್ಯತ್ತಸ್ಯ ಪಿತುರ್ವಿಪ್ರ ಪ್ರಶ್ರಯಾವನತಂ ವಚಃ ॥೫॥

ಭವನ್ತೋ ಭೂಭುಜೋ ಭೃತ್ಯಾ ವಯಂ ವಃ ಕರದಾಯಕಾಃ ।
ಕಥಂ ಸಮ್ಬನ್ಧಮಸಮೈರಸ್ಮಾಭಿರಭಿವಾಞ್ಛಸಿ ॥೬॥

---

೩. ಸುಂದರಿಯಾದ ವೈಶ್ಯಕನ್ಯೆಯನ್ನು ಕಂಡೊಡನೆ ಕಾಮವಿಕಾರದಿಂದ ಸೆಳೆಯಲ್ಪಟ್ಟ ಮನಸ್ಸುಳ್ಳ ಆ ರಾಜಕುಮಾರನು ಆ ವೈಶ್ಯಕನ್ಯೆಯು ಸೌಂದರ್ಯಕ್ಕೆ ಮನಸೋತವನಾಗಿ ನಿಶ್ವಾಸ ಬಿಡುವಂತಾದನು.

೪. ತರುವಾಯ ಆ ರಾಜಕುಮಾರನು ಆ ಕನ್ಯೆಯ ತಂದೆಯ ಬಳಿಗೆ ಹೋಗಿ ಆ ವೈಶ್ಯಕನ್ಯೆಯನ್ನು ತನಗೆ ಕೊಡಬೇಕೆಂದು ಕೇಳಿದನು. ಆಗ ರಾಜ-ಕುಮಾರನು ಕಾಮಪೀಡೆಗೆ ಗುರಿಯಾದ ಮನೋವೃತ್ತಿಯುಳ್ಳವನಾಗಿರುವನೆಂದು ವೈಶ್ಯನು ಅರಿತನು.

೫. ಎಲೈ ಬ್ರಹ್ಮರ್ಷಿಯೇ! ಮತ್ತು ಆ ಕನ್ಯೆಯ ತಂದೆಯು ಆ ಕುಮಾರನ ತಂದೆಗೆ ಭಯಪಟ್ಟವನಾಗಿ ಆ ರಾಜಪುತ್ರನನ್ನು ಕುರಿತು ಈ ರೀತಿಯಾಗಿ ವಿನಯದಿಂದ ಕೂಡಿದ ವಚನವನ್ನು ಹೇಳಿದನು.

೬. ನೀವು ರಾಜ್ಯವನ್ನು ಆಳತಕ್ಕವರಾಗಿದ್ದೀರಿ. ನಾವು ನಿಮಗೆ ಪೊಗದಿಯನ್ನು ಕೊಡುವ ಭೃತ್ಯರಾಗಿದ್ದೇವೆ. ಹೀಗಿರಲು ನಿನಗೆ ಸಮಾನರಲ್ಲದ ನಮ್ಮಲ್ಲಿ ಕನ್ಯೆಯನ್ನು ವರಿಸಿ ಸಂಬಂಧವನ್ನು ಬೆಳೆಸಲು ನೀನು ಏಕೆ ಅಪೇಕ್ಷಿಸು-ತ್ತೀಯೆ ?

ರಾಜಪುತ್ರ ಉವಾಚ :—

ಸಾಮ್ಯಂ ಮಾನುಷದೇಹಸ್ಯ ಕಾಮಮೋಹಾದಿಭಿಃ ಕೃತಮ್ ।
ತಥಾಪಿ ಕಾಲೇ ತೈರೇವ ಯೋಜ್ಯತೇ ಮಾನುಷಂ ವಪುಃ ॥೭॥

ತಥೈವ ಚೋಪಕಾರಾಯ ಜಾಯನ್ತೇ ತಸ್ಯ ತಾನ್ಯಪಿ ।
ಅನ್ಯಾನಿ ಚಾನ್ಯೇ ಜೀವನ್ತಿ ಭಿನ್ನಜಾತಿಮತಾಂ ಸತಾಮ್ ॥೮॥

ತಥಾನ್ಯಾನ್ಯಪ್ಯಯೋಗ್ಯಾನಿ ಯೋಗ್ಯತಾಂ ಯಾನ್ತಿ ಕಾಲತಃ ।
ಯೋಗ್ಯಾನ್ಯಯೋಗ್ಯತಾಂ ಯಾನ್ತಿ ಕಾಲವಶ್ಯಾ ಹಿ ಯೋಗ್ಯತಾ ॥೯॥

ಆಪ್ಯಾಯ್ಯತೇ ಯಚ್ಛರೀರಮಾಹಾರಾದಿಭಿರೀಪ್ಸಿತೈಃ ।
ಕಾಲಂ ಜ್ಞಾತ್ವಾ ತಥಾ ಭುಕ್ತಂ ತದೇವ ಪರಿಶಿಷ್ಯತೇ ॥೧೦॥

ರಾಜಪುತ್ರನು ಇಂತೆಂದನು :—

೭. ಮಾನವನ ದೇಹಕ್ಕೆ ಮತ್ತೊಂದರ ಸಾಮ್ಯವು ಕಾಮ-ಮೋಹ ಮುಂತಾದುವುಗಳಿಂದ ಉಂಟಾಗಿರುವುದು. ಒಂದು ಸಮಯದಲ್ಲಿ ಯೋಗ್ಯವೆನಿಸದಿರುವುದಾದರೂ ಒಂದು ದೇಹವು ಕಾಲವಶದಿಂದ ಮತ್ತೊಂದರ ಕೂಡ ಸಂಬಂಧಕ್ಕೆ ಯೋಗ್ಯವೆನಿಸುವಂತಾಗುವುದು.

೮. ಹಾಗೆಯೆ ಯೋಗ್ಯವಾಗಿ ಸೇರಿಕೊಂಡ ಆಯಾಯ ವಸ್ತುಗಳು ಆ ದೇಹಕ್ಕೆ ಭೋಗವನ್ನು ಕೊಟ್ಟು ಉಪಕಾರಮಾಡುವುವು. ಹೀಗೆ ಬೇರೆಯವರು ಬೇರೆ ಜಾತಿಯಲ್ಲಿ ಜನಿಸಿದ ಭೋಗ್ಯವಸ್ತುಗಳನ್ನು ಅನುಭವಿಸುತ್ತ ಜೀವಿಸುವರು.

೯. ಇದೇ ಕ್ರಮದಲ್ಲಿ ಅಯೋಗ್ಯವೆನಿಸಿದ ಎಷ್ಟೋ ಇತರ ವಸ್ತುಗಳು ಕಾಲಕ್ರಮದಿಂದ ಯೋಗ್ಯತ್ವವನ್ನು ಹೊಂದುವುವು; ಯೋಗ್ಯವಸ್ತುಗಳು ಅಯೋಗ್ಯತೆಯನ್ನು ಹೊಂದುವುವು. ಯೋಗ್ಯತೆಯೆಂಬುದು ಕಾಲಕ್ಕೆ ಅಧೀನವಾಗಿರುವುದು.

೧೦. ತನ್ನ ಮನಸ್ಸಿಗೊಪ್ಪುವ ಆಹಾರ ಮುಂತಾದ ವಿಷಯಭೋಗಗಳಿಂದ ಯಾವ ಶರೀರವು ತೃಪ್ತಿಗೊಳಿಸಲ್ಪಡುವುದೋ ಆ ದೇಹವು ಭೋಗಕಾಲವು ಕಳೆದ ಮೇಲೆ ಭುಂಜಿಸಿದ ವಿಷಯಗಳನ್ನು ದೂರಮಾಡಿ ಅದೊಂದು ಮಾತ್ರ ಉಳಿಯುವುದು.

ಇತ್ಥಂ ಮನ್ಮೈಷಾಭಿಮತಾ ತನಯಾ ದೀಯತಾಂ ತ್ವಯಾ ।
ಅನ್ಯಥಾ ಮಚ್ಛರೀರಸ್ಯ ವಿಪತ್ತಿರುಪಲಕ್ಷ್ಯತೇ ॥೧೧॥

ವೈಶ್ಯ ಉವಾಚ :—

ಪರತನ್ತ್ರಾ ವಯಂ ತ್ವಂ ಚ ಪರತನ್ತ್ರೋ ಮಹೀಭುಜಃ ।
ಪಿತ್ರಾ ತೇನಾಭ್ಯನುಜ್ಞಾತಸ್ತ್ವಂ ಗೃಹಾಣ ದದಾಮ್ಯಹಮ್ ॥೧೨॥

ರಾಜಪುತ್ರ ಉವಾಚ :—

ಪ್ರಷ್ಟವ್ಯಾಃ ಸರ್ವಕಾರ್ಯೇಷು ಗುರವೋ ಗುರುವರ್ತಿಭಿಃ ।
ನ ತ್ವೀದೃಶೇಷು ಕಾರ್ಯೇಷು ಗುರೂಣಾಂ ವಾಕ್ಯಗೋಚರಃ ॥೧೩॥

ಕ್ವ ಮನ್ಮಥಕಥಾಲಾಪೋ ಗುರೂಣಾಂ ಶ್ರವಣಂ ಕ್ವ ಚ ।
ವಿರುದ್ಧಮೇತದನ್ಯತ್ರ ಪ್ರಷ್ಟವ್ಯಾ ಗುರವೋ ನೃಭಿಃ ॥೧೪॥

---

೧೧. ಹೀಗೆ ನನ್ನ ಮನಸ್ಸಿಗೆ ಒಪ್ಪುವ ನಿನ್ನ ಮಗಳನ್ನು ನೀನು ನನಗೆ ಕೊಡಬೇಕು. ನೀನು ಕನ್ಯೆಯನ್ನು ಕೊಡದಿರುವುದಾದರೆ ನನ್ನ ದೇಹಕ್ಕೆ ಇದೇ ಕಾರಣದಿಂದ ಮಹತ್ತಾದ ವಿಪತ್ತಿಯು ಉಂಟಾಗುವುದು.

ವೈಶ್ಯನು ಇಂತೆಂದನು :—

೧೨. ನಾವು ರಾಜನಿಗೆ ಪರಾಧೀನರಾಗಿರುವೆವು. ನೀನು ರಾಜನಾದ ತಂದೆಗೆ ಪರತಂತ್ರನಾಗಿದ್ದೀಯೆ. ನಿನ್ನ ತಂದೆಯ ಅನುಮತಿಯನ್ನು ಪಡೆದು ನನ್ನ ಕನ್ಯೆಯನ್ನು ಪರಿಗ್ರಹಿಸು. ಹಾಗಾದರೆ ನಾನು ನಿನಗೆ ಕನ್ಯೆಯನ್ನು ಕೊಡುವೆನು.

ರಾಜಕುಮಾರನು ಹೇಳಿದನು :—

೧೩. ಗುರು ಪರತಂತ್ರರಾಗಿರುವವರು ಎಲ್ಲ ಕಾರ್ಯಗಳಲ್ಲಿಯೂ ಗುರುಗಳ ಅನುಮತಿಯನ್ನು ಹೊಂದಬೇಕೆಂಬುದು ನಿಜ. ಆದರೆ ಇಂತಹ ಕಾರ್ಯಪ್ರಸಂಗಗಳಲ್ಲಿ ಗುರುಗಳ ಅನುಮತಿಯ ಆವಶ್ಯಕತೆಯಿಲ್ಲ.

೧೪. ಕಾಮ ವಿಕಾರಕ್ಕೆ ಸೋತ ಮನಸ್ಸಿನಿಂದ ಆಡುವ ಮಾತುಕಥೆಗಳೆಲ್ಲಿ? ಗುರುಗಳಲ್ಲಿ ವಿನಯದಿಂದ ವರ್ತಿಸಿ ಅವರ ಅನುಮತಿಯ ಶ್ರವಣವೆಲ್ಲಿ? ಇದು ಒಂದಕ್ಕೊಂದು ವಿರುದ್ಧವಾದುದು. ಬೇರೆ ಕಾರ್ಯಗಳಲ್ಲಿ ಗುರುಜನರನ್ನು ಕೇಳುವುದು ಉಚಿತವು.

ವೈಶ್ಯ ಉವಾಚ :—

ಏವಮೇತತ್ಸ್ಫುರಾಲಾಪಸ್ತ್ವಾಯಂ ಪೃಚ್ಛ ಮಾ ಗುರುಮ್ ।
ಅಹಂ ಪೃಚ್ಛಾಮಿ ನಾಲಾಪೋ ಮಮ ಕಾಮುಕಥಾಶ್ರಯಃ ॥೧೫॥

ಮಾರ್ಕಣ್ಡೇಯ ಉವಾಚ :—

ಇತ್ಯುಕ್ತಃ ಸೋಽಭವನ್ಮೌನೀ ರಾಜಪುತ್ರಃ ಸ ಚಾಪಿ ತತ್ ।
ತತ್ಪಿತ್ರೇ ಸರ್ವಮಾಚಷ್ಟ ರಾಜಪುತ್ರಸ್ಯ ಯನ್ಮತಮ್ ॥೧೬॥

ತತಸ್ತಸ್ಯ ಪಿತಾ ವಿಪ್ರಾನ್ನೃಚೀಕಾದೀನ್ ದ್ವಿಜೋತ್ತಮಾನ್ ।
ಪ್ರವೇಶ್ಯ ರಾಜಪುತ್ರಂ ಚ ಯಥಾಖ್ಯಾನಂ ನ್ಯವೇದಯತ್ ॥೧೭॥

ನಿವೇದ್ಯ ಚ ತತಃ ಪ್ರಾಹ ಮುನೀನೇವಂ ವ್ಯವಸ್ಥಿತೇ ।
ಯತ್ಕರ್ತವ್ಯಂ ತದಾದೇಷ್ಟುಮರ್ಹನ್ತಿ ದ್ವಿಜಸತ್ತಮಾಃ ॥೧೮॥

ವೈಶ್ಯನು ಹೀಗೆ ನುಡಿದನು :—

೧೫. ಇದು ನಿಜ; ನೀನಾಡುವ ಮಾತು ಕಾಮುಕಥೆಯಾಗುವುದು. ನೀನು ತಂದೆಯನ್ನು ಕೇಳಬೇಕಾಗಿಲ್ಲ. ನಾನು ನಿನ್ನ ತಂದೆಯನ್ನು ಕೇಳುವೆನು. ನಾನು ಹೇಳುವ ವಚನವು ಕಾಮುಕಥೆಯ ರೂಪವಾಗುವುದಿಲ್ಲ.

ಮಾರ್ಕಂಡೇಯ ಮುನಿಯು ಹೇಳಿದನು :—

೧೬. ವೈಶ್ಯನಿಂದ ಈ ರೀತಿಯಾಗಿ ಹೇಳಲ್ಪಟ್ಟ ರಾಜಪುತ್ರನು ಮೌನ-ತಾಳಿದನು. ಆಗ ವೈಶ್ಯನು ರಾಜನ ಬಳಿಗೆ ಹೋಗಿ ರಾಜಕುಮಾರನ ಇಷ್ಟವನ್ನು ಸಂಪೂರ್ಣವಾಗಿ ಅವನಲ್ಲಿ ಹೇಳಿದನು.

೧೭. ತರುವಾಯ ಆ ಕುಮಾರನ ತಂದೆಯಾದ ರಾಜನು ಋಚೀಕ ಮುಂತಾದ ದ್ವಿಜೋತ್ತಮರಾದ ಮುನಿಗಳನ್ನೂ ಮತ್ತು ತನ್ನ ಪುತ್ರನನ್ನೂ ಕರೆಯಿಸಿ ಮುನಿಗಳ ಎದುರಿನಲ್ಲಿ ವೈಶ್ಯನು ಹೇಳಿರುವ ತನ್ನ ಕುಮಾರನ ಇಷ್ಟವನ್ನು ಹೇಳಿದನು.

೧೮. ಈ ವೃತ್ತಾಂತವನ್ನೆಲ್ಲ ನಿವೇದನ ಮಾಡಿ ತರುವಾಯ ರಾಜನು ಮುನಿಗಳಲ್ಲಿ ಪ್ರಾರ್ಥಿಸಿಕೊಂಡನು. ಹೀಗೆ ಪ್ರಸಂಗವು ಒದಗಿರಲು ನಾನೇನು ಮಾಡುವುದು ಉಚಿತವೋ ಅದನ್ನು ದ್ವಿಜೋತ್ತಮರಾದ ನೀವು ಅಜ್ಞಾಪಿಸಬೇಕು.

ಋಷಯ ಊಚುಃ :—

ರಾಜಪುತ್ರಾನುರಾಗಸ್ತೇ ಯದ್ಯಸ್ಯಾಂ ವೈಶ್ಯಸನ್ತತೌ ।
ತದಸ್ತು ಧರ್ಮ ಏವೈಷ ಕಿಂ ತು ನ್ಯಾಯಕ್ರಮೇಣ ಸಃ ॥೧೯॥

ಮೂರ್ಧಾಭಿಷಿಕ್ತತನಯಾಪಾಣಿಗ್ರಾಹೋತ್ಸವಃ ಪುರಾ ।
ಭವತ್ವನನ್ತರಂ ಚೇಯಂ ತವ ಭಾರ್ಯಾ ಭವಿಷ್ಯತಿ ॥೨೦॥

ಏವಂ ನ ದೋಷೋ ಭವತಿ ತಥೈವಾಮುಪಭುಞ್ಜತಃ ।
ಅನ್ಯಥಾಭ್ಯೇತಿ ತೇ ಜಾತಿರುತ್ಕೃಷ್ಟಾ ಬಾಲಕಾನಯಾತ್ ॥೨೧॥

ಮಾರ್ಕಣ್ಡೇಯ ಉವಾಚ :—

ಇತ್ಯುಕ್ತಸ್ತದಪಾಸ್ಯೈವ ವಚಸ್ತೇಷಾಂ ಮಹಾತ್ಮನಾಮ್ ।
ವಿನಿಷ್ಕ್ರಮ್ಯ ಗೃಹೀತ್ವಾ ತಾಮುದ್ಯತಾಸಿರಥಾಬ್ರವೀತ್ ॥೨೨॥

ಋಷಿಗಳು ಹೀಗೆಂದರು :—

೧೯. ರಾಜಪುತ್ರನೇ ! ವೈಶ್ಯಸಂತತಿಯಲ್ಲಿ ಜನಿಸಿದ ಕನ್ಯೆಯಲ್ಲಿ ನಿನಗೆ ಅನುರಾಗವು ಉದಯಿಸಿರುವುದಾದರೆ ಅದು ನ್ಯಾಯಸಮ್ಮತವಾದ ಕ್ರಮದಿಂದ ನಡೆದು ಧರ್ಮರೂಪವೇ ಆಗಲಿ.

೨೦. ಪಟ್ಟಾಭಿಷೇಕವನ್ನು ಹೊಂದಿರುವ ರಾಜನೊಬ್ಬನ ಕನ್ಯೆಯ ಪಾಣಿಗ್ರಹಣವು ವೈಭವದಿಂದ ಮೊದಲು ನಡೆಯಲಿ. ತರುವಾಯ ಈ ವೈಶ್ಯನ ಕನ್ಯೆಯು ನಿನಗೆ ಭಾರ್ಯೆಯಾಗುವಳು.

೨೧. ಆ ಕ್ರಮದಿಂದ ಮದುವೆಯಾಗಿ ವೈಶ್ಯಕನ್ಯೆಯೊಡನೆ ರತಿಸುಖ-ವನ್ನು ಅನುಭವಿಸುವ ನಿನಗೆ ಅಧರ್ಮವು ಪ್ರಾಪ್ತವಾಗುವುದಿಲ್ಲ. ಕುಮಾರನೆ ! ಹಾಗಿಲ್ಲದಿದ್ದರೆ ಧರ್ಮಾತಿಕ್ರಮದಿಂದ ನಿನ್ನ ಉತ್ಕೃಷ್ಟವಾದ ಜಾತಿಯ ಭ್ರಂಶ-ವಾಗುವುದು.

ಮಾರ್ಕಂಡೇಯ ಮುನಿಯು ಹೇಳಿದನು :—

೨೨. ಹೀಗೆಂದು ಹೇಳಲ್ಪಟ್ಟಿರುವ ರಾಜಕುಮಾರನು ಋಚೀಕ ಮುಂತಾದ ಆ ಮಹಾತ್ಮರ ವಚನವನ್ನು ಅಲಕ್ಷ್ಯಮಾಡಿ ಅಲ್ಲಿಂದ ಹೊರಟು ಹೋಗಿ ವೈಶ್ಯಕನ್ಯೆಯನ್ನು ಪರಿಗ್ರಹಿಸಿ ಕೈಯಲ್ಲಿ ಕತ್ತಿಯನ್ನು ಎತ್ತಿ ತೋರಿಸುತ್ತ ಹೀಗೆಂದನು.

ರಾಕ್ಷಸೇನ ವಿವಾಹೇನ ಮಯಾ ವೈಶ್ಯಸುತಾ ಹೃತಾ ।
ಯಸ್ಯ ಸಾಮರ್ಥ್ಯಮತ್ರಾಸ್ತಿ ಸ ಏತಾಂ ಮೋಚಯತ್ವಿತಿ ॥೨೩॥

ತತಃ ಸ ವೈಶ್ಯಸ್ತಾಂ ದೃಷ್ಟ್ವಾ ಗೃಹೀತಾಂ ತನಯಾಂ ದ್ರುತಮ್ ।
ತ್ರಾಹೀತಿ ಪಿತರಂ ತಸ್ಯ ಪ್ರಯಯೌ ಶರಣಂ ದ್ವಿಜ ॥೨೪॥

ತತಸ್ತಸ್ಯ ಪಿತಾ ಕ್ರುದ್ಧ ಆದಿದೇಶ ಬಲಂ ಮಹತ್ ।
ಹನ್ಯತಾಂ ಹನ್ಯತಾಂ ದುಷ್ಟೋ ನಾಭಾಗೋ ಧರ್ಮದೂಷಕಃ ॥೨೫॥

ತತಸ್ತದ್ಯುಯುಧೇ ಸೈನ್ಯಂ ತೇನ ಭೂಭೃತ್ಸುತೇನ ವೈ ।
ಕೃತಾಸ್ತ್ರೇಣ ತದಾಸ್ತ್ರೇಣ ತತ್ಪ್ರಾಚುರ್ಯೇಣ ಪಾತಿತಮ್ ॥೨೬॥

ಸ ಶ್ರುತ್ವಾ ನಿಹತಂ ಸೈನ್ಯಂ ರಾಜಪುತ್ರೇಣ ಭೂಪತಿಃ ।
ಸ್ವಯಮೇವ ಯಯೌ ಯೋದ್ಧುಂ ಸ್ವಸೈನ್ಯಪರಿವಾರಿತಃ ॥೨೭॥

---

೨೩. ನಾನು ವೈಶ್ಯಕನ್ಯೆಯನ್ನು ರಾಕ್ಷಸ ವಿವಾಹವಿಧಿಯಿಂದ ಮದುವೆಯಾಗಿ ತಂದಿರುವೆನು. ಯಾರಿಗಾದರೂ ಇವಳನ್ನು ಬಿಡಿಸುವ ಸಾಮರ್ಥ್ಯವಿದ್ದರೆ ಅವನು ಬಂದು ಈಕೆಯನ್ನು ಬಿಡಿಸಿಕೊಳ್ಳಲಿ.

೨೪. ದ್ವಿಜೋತ್ತಮನೇ! ತರುವಾಯ ರಾಜಕುಮಾರನು ತನ್ನ ಕನ್ಯೆಯನ್ನು ಅಪಹರಿಸಿರುವುದನ್ನು ನೋಡಿ ವೈಶ್ಯನು "ನನ್ನನ್ನು ಕಾಪಾಡು" ಎಂದು ಕೂಗುತ್ತ ಬೇಗ ಓಡಿಬಂದು ರಾಜನನ್ನು ಶರಣುಹೊಂದಿದನು.

೨೫. ಅನಂತರದಲ್ಲಿ ಅವನ ತಂದೆಯಾದ ರಾಜನು ಕೋಪಗೊಂಡವನಾಗಿ ದುಷ್ಟನೂ ಧರ್ಮಭಂಜಕನೂ ಆದ ನಾಭಾಗನನ್ನು ಕೊಂದುಹಾಕಿರಿ ಎಂದು ತನ್ನ ಸೈನ್ಯಕ್ಕೆ ಆಜ್ಞೆಯಿತ್ತನು.

೨೬. ತರುವಾಯ ಆ ರಾಜನ ಕುಮಾರನೊಡನೆ ರಾಜಸೈನ್ಯವು ಬಿರುಸಿನಿಂದ ಹೋರಾಡಿತು. ಆದರೆ ಅಸ್ತ್ರವಿದ್ಯೆಯಲ್ಲಿ ನಿಷ್ಣಾತನಾದ ರಾಜಪುತ್ರನ ಅಸ್ತ್ರಪ್ರಹಾರದಿಂದ ಬಹುಭಾಗ ಸೈನ್ಯವು ಕೆಡುಹಲ್ಪಟ್ಟಿತು.

೨೭. ಆಗ ರಾಜನು ತನ್ನ ಪುತ್ರನಿಂದ ಸೈನ್ಯವು ಕ್ಷಯಿಸಲ್ಪಟ್ಟಿರುವುದನ್ನು ಕೇಳಿ ತಾನೇ ತನ್ನ ಸೈನ್ಯಪರಿವಾರದಿಂದೊಡಗೂಡಿ ಯುದ್ಧಕ್ಕೆ ಬಂದನು.

ತತೋ ಯುದ್ಧಮಭೂತ್ತಸ್ಯ ಭೂಭುಜಃ ಸ್ವಸುತೇನ ಯುತ್ ।
ರಾಜಪುತ್ರೇಣ ಶಸ್ತ್ರಾಸ್ತ್ರೈಸ್ತತ್ರಾತಿಶಯಿತಃ ಪಿತಾ ॥೨೮॥

ತತೋಽನ್ತರಿಕ್ಷಾದಾಗತ್ಯ ಪರಿವ್ರಾಟ್ಸುಮಹಾಮುನಿಃ ।
ಪ್ರತ್ಯುವಾಚ ಮಹೀಪಾಲಂ ವಿರಮಸ್ವೇತಿ ಸಂಯುಗಾತ್ ॥೨೯॥

ತ್ವತ್ಪುತ್ರಸ್ಯ ಮಹಾಭಾಗ ವಿಧರ್ಮೋಽಯಂ ಮಹಾತ್ಮನಃ ।
ತವಾಪಿ ವೈಶ್ಯೇನ ಸಹ ನ ಯುದ್ಧಂ ಧರ್ಮವನ್ನೃಪ ॥೩೦॥

ಬ್ರಾಹ್ಮಣ್ಯಾ ಬ್ರಾಹ್ಮಣಃ ಪೂರ್ವಂ ಕುರ್ವನ್ ದಾರಪರಿಗ್ರಹಮ್ ।
ಬ್ರಾಹ್ಮಣ್ಯಾತ್ ಸರ್ವವರ್ಣೇಷು ನ ಹಾನಿಮುಪಗಚ್ಛತಿ ॥೩೧॥

ತಥೈವ ಕ್ಷತ್ರಿಯಸುತಾಂ ಕ್ಷತ್ರಿಯಃ ಪೂರ್ವಮುದ್ವಹನ್ ।
ಇತರೇ ಚ ತತೋ ರಾಜಂಶ್ಚ್ಯವತೇ ನ ಸ್ವಧರ್ಮತಃ ॥೩೨॥

---

೨೮. ತರುವಾಯ ಆ ರಾಜನಿಗೆ ತನ್ನ ಪುತ್ರನೊಡನೆ ದೊಡ್ಡ ಸಂಗ್ರಾಮವು ಜರುಗಿತು. ಅತ್ಯಧಿಕವಾದ ಶಸ್ತ್ರಾಸ್ತ್ರಗಳನ್ನು ಪ್ರಯೋಗಿಸುವ ರಾಜಪುತ್ರನು ಯುದ್ಧದಲ್ಲಿ ತಂದೆಯನ್ನು ಮೀರಿಸುವಂತಿದ್ದನು.

೨೯. ಆ ಸಮಯದಲ್ಲಿ ಸರ್ವಸಂಗವನ್ನು ತ್ಯಜಿಸಿದ ಮಹಾಮಹಿಮನಾದ ಒಬ್ಬ ಮುನಿಯು ಆಕಾಶದಿಂದ ಇಳಿದುಬಂದು ರಾಜನನ್ನು ಕುರಿತು ಹೇಳಿದನು. ರಾಜನೇ! ನೀನು ಯುದ್ಧವನ್ನು ನಿಲ್ಲಿಸು.

೩೦. ಮಹಾಭಾಗ್ಯವಂತನಾದ ರಾಜನೇ! ನಿನ್ನ ಪುತ್ರನು ಮಾಡುತ್ತಿರುವ ಈ ಯುದ್ಧವು ಅವನಿಗೆ ವಿಧರ್ಮವಾದುದು. ಮಹಾತ್ಮನಾದ ನಿನಗೆ ವೈಶ್ಯತ್ವವನ್ನು ಹೊಂದಿದ ಪುತ್ರನೊಡನೆ ಯುದ್ಧವು ಧರ್ಮವಲ್ಲ.

೩೧. ಬ್ರಾಹ್ಮಣನಾಗಿ ಜನಿಸಿದವನು ಮೊದಲು ಬ್ರಾಹ್ಮಣಸ್ತ್ರೀಯ ಪಾಣಿಗ್ರಹಣವನ್ನು ಮಾಡಿಕೊಂಡು ಅನಂತರ ಇತರ ವರ್ಣದ ಸ್ತ್ರೀಯರ ಪಾಣಿಗ್ರಹಣವನ್ನು ಮಾಡುವುದರಿಂದ ಬ್ರಾಹ್ಮಣ್ಯಕ್ಕೆ ಕಳಂಕವನ್ನು ಹೊಂದುವುದಿಲ್ಲ.

೩೨. ರಾಜನೇ! ಅಂತೆಯೇ ಕ್ಷತ್ರಿಯನಾಗಿ ಜನಿಸಿದವನು ಮೊದಲು ಕ್ಷತ್ರಿಯ ಜಾತಿಯ ಕನ್ಯೆಯನ್ನು ಮದುವೆಯಾಗಿ ಆಮೇಲೆ ವೈಶ್ಯ-ಶೂದ್ರ ವರ್ಣಗಳಲ್ಲಿ ಜನಿಸಿದ ಕನ್ಯೆಯರನ್ನು ವಿವಾಹಮಾಡಿಕೊಂಡರೆ ಕ್ಷತ್ರಿಯಜಾತಿಯಿಂದ ಭ್ರಂಶಹೊಂದುವುದಿಲ್ಲ.

ಪೂರ್ವಂ ವೈಶ್ಯಸ್ತಥಾ ವೈಶ್ಯಾಂ ಪಶ್ಚಾಚ್ಛೂದ್ರಕುಲೋದ್ಭವಾಮ್ ।
ಸ ಹೀಯತೇ ವೈಶ್ಯಕುಲಾದಯಂ ನ್ಯಾಯಃ ಕ್ರಮೋದಿತಃ ॥೩೩॥

ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಃ ಸವರ್ಣಾಪಾಣಿಸಂಗ್ರಹಮ್ ।
ಅಕೃತ್ವಾನ್ಯಭವಾಪಾಣೇಃ ಪತನ್ತಿ ನೃಪ ಸಂಗ್ರಹಾತ್ ॥೩೪॥

ಯಸ್ಯಾ ಯಸ್ಯಾ ಹಿ ಹೀನಾಯಾಃ ಕುರುತೇ ಪಾಣಿಸಙ್ಗ್ರಹಮ್ ।
ಅಕೃತ್ವಾ ವರ್ಣಸಂಯೋಗಂ ಸೋಽಪಿ ತದ್ವರ್ಣಭಾಗ್ಭವೇತ್ ॥೩೫॥

ಸೋಽಯಂ ವೈಶ್ಯತ್ವಮಾಪನ್ನಸ್ತವ ಪುತ್ರಃ ಸುಮನ್ದಧೀಃ ।
ನಾಸ್ಯಾಧಿಕಾರೋ ಯುದ್ಧಾಯ ಕ್ಷತ್ರಿಯೇಣ ತ್ವಯಾ ಸಹ ॥೩೬॥

---

೩೩. ಹಾಗೆಯೇ ವೈಶ್ಯನು ಮೊದಲು ವೈಶ್ಯಜಾತಿಯ ಸ್ತ್ರೀಯ ಪಾಣಿಗ್ರಹಣವನ್ನು ಮಾಡಿ ಆಮೇಲೆ ಶೂದ್ರಕುಲದಲ್ಲಿ ಜನಿಸಿದ ಕನ್ಯೆಯ ಪಾಣಿಗ್ರಹಣ ಮಾಡುವುದರಿಂದ ವೈಶ್ಯಜಾತಿಯಿಂದ ಬಾಹ್ಯನಾಗುವುದಿಲ್ಲ. ಇದು ಕ್ರಮಬದ್ಧವಾದ ಧರ್ಮಾಚರಣೆಯು.

೩೪. ರಾಜನೇ ! ಹೀಗಿರಲು ಬ್ರಾಹ್ಮಣ-ಕ್ಷತ್ರಿಯ-ವೈಶ್ಯರಲ್ಲಿ ಯಾರೇ ಆಗಲಿ ಸವರ್ಣಳಾದ ಕನ್ಯೆಯ ಪಾಣಿಗ್ರಹಣವಿಲ್ಲದೆ ಅನ್ಯಜಾತಿಯಲ್ಲಿ ಜನಿಸಿದ ಕನ್ಯೆಯನ್ನು ವಿವಾಹಮಾಡಿಕೊಂಡರೆ ಸ್ವಜಾತಿಯಿಂದ ಭ್ರಷ್ಟರಾಗುವರು.

೩೫. ಯಾವ ಮಾನವನು ಸವರ್ಣಕನ್ಯೆಯ ಪಾಣಿಗ್ರಹಣವಿಲ್ಲದೆ ಯಾವ ಯಾವ ಹೀನಜಾತಿಯ ಕನ್ಯೆಯನ್ನು ಪಾಣಿಗ್ರಹಣವನ್ನು ಮಾಡಿಕೊಳ್ಳುವನೋ ಅವನು ಸ್ವಜಾತಿಭ್ರಷ್ಟನಾಗಿ ಅದೇ ಹೀನ ಜಾತಿಯನ್ನು ಹೊಂದುವನು.

೩೬. ಆದುದರಿಂದ ಅಲ್ಪಬುದ್ಧಿಯುಳ್ಳ ನಿನ್ನ ಪುತ್ರನು ಕ್ಷತ್ರಿಯ ಕನ್ಯೆಯನ್ನು ವಿವಾಹಮಾಡಿಕೊಳ್ಳದೇ ವೈಶ್ಯಕನ್ಯಾ ಪಾಣಿಗ್ರಹಣವನ್ನು ಮಾಡಿದುದರಿಂದ ವೈಶ್ಯತ್ವವನ್ನು ಹೊಂದಿರುವನು. ಈಗ ಕ್ಷತ್ರಿಯನಾದ ನಿನ್ನೊಡನೆ ಧರ್ಮಯುದ್ಧವನ್ನು ಮಾಡಲು ಇವನಿಗೆ ಅಧಿಕಾರವಿಲ್ಲ.

ವಯಮೇತನ್ನ ಜಾನೀಮಃ ಕಾರಣಂ ನೃಪನನ್ದನ।
ಯಥಾ ಭವಿಷ್ಯತೀದಂ ಚ ನಿವರ್ತ ರಣಕರ್ಮತಃ ॥೩೭॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ವಂಶಾನುಚರಿತೇ
ನಾಭಾಗಾಖ್ಯಾನಂ ನಾಮ ದಶಾಧಿಕಶತತಮೋಽಧ್ಯಾಯಃ

---

೩೭. ರಾಜಪುತ್ರನೇ! ಹೀಗಾಗಲು ಏನು ಕಾರಣವಿದೆಯೋ ಅದನ್ನು ನಾವು ತಿಳಿದಿಲ್ಲ. ಅಥವಾ ಇದರ ಪರಿಣಾಮವು ಮುಂದೇನಾಗುವುದೋ ಅದು ನಮಗೆ ತಿಳಿಯದು. ನೀನು ಮಾತ್ರ ಈ ಯುದ್ಧವನ್ನು ಬಿಟ್ಟು ಹಿಂತಿರುಗು.

ಮಾರ್ಕಂಡೇಯ ಮಹಾಪುರಾಣದಲ್ಲಿ ಒಂದುನೂರ ಹತ್ತನೆಯ
ಅಧ್ಯಾಯವು ಮುಗಿದುದು.

॥ ಓಂ ಶ್ರೀ ದುರ್ಗಾಯೈ ನಮಃ ॥

ಮಾರ್ಕಂಡೇಯ ಪುರಾಣಂ

ಏಕಾದಶಾಧಿಕಶತತಮೋಽಧ್ಯಾಯಃ

(ನಾಭಾಗಚರಿತನಿರೂಪಣಮ್)

ಮಾರ್ಕಣ್ಡೇಯ ಉವಾಚ :—

ನಿವೃತ್ತೋಽಸೌ ತತೋ ಭೂಪಃ ಸಙ್ಗ್ರಾಮಾತ್ ಸ್ವಸುತೇನ ವೈ ।
ಉಪಯೇಮೇ ಚ ತಾಂ ವೈಶ್ಯತನಯಾಂ ಸೋಽಪಿ ತತ್ಸುತಃ ॥೧॥

ತತಃ ಸ ವೈಶ್ಯತಾಂ ಪ್ರಾಪ್ತಃ ಸಮುಪೇತ್ಯಾಹ ಪಾರ್ಥಿವಮ್ ।
ಭೂಪಾಲ ಯುಸ್ಮಯಾ ಕಾರ್ಯಂ ತತ್ಸಮಾದಿಶ್ಯತಾಂ ಮಮ ॥೨॥

ಒಂದುನೂರ ಹನ್ನೊಂದನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಹೇಳಿದನು :—

೧. ಆಗ ಆ ರಾಜನು ತನ್ನ ಪುತ್ರನೊಡನೆ ಯುದ್ಧಮಾಡುವುದನ್ನು ಬಿಟ್ಟು ಹಿಂತಿರುಗಿದನು. ಆ ರಾಜಪುತ್ರನು ವೈಶ್ಯಕನ್ಯೆಯನ್ನು ತನ್ನ ಇಷ್ಟದಿಂದ ಮದುವೆಯಾದನು.

೨. ತರುವಾಯ ವೈಶ್ಯಜಾತಿಯನ್ನು ಹೊಂದಿರುವ ಆ ರಾಜಪುತ್ರನು ರಾಜನ ಬಳಿಗೆ ಬಂದು ಹೇಳಿದನು. ತಂದೆಯಾದ ರಾಜನೇ ! ನಾನು ಮುಂದೇನು ಮಾಡಬೇಕೋ ಅದನ್ನು ನನಗೆ ಆಜ್ಞಾಪಿಸಬೇಕು.

ರಾಜೋವಾಚ :—

ಧರ್ಮಾಧಿಕರಣೇ ಯುಕ್ತಾ ಬಾಭ್ರವ್ಯಾದ್ಯಾಸ್ತಪಸ್ವಿನಃ ।
ಯದಸ್ಯ ಕರ್ಮ ಧರ್ಮಾಯ ತದ್ವದನ್ತು ತಥಾಚರ ॥೩॥

ಮಾರ್ಕಣ್ಡೇಯ ಉವಾಚ :—

ತತಸ್ತೇ ಮುನಯಸ್ತಸ್ಯ ಪಾಶುಪಾಲ್ಯಂ ತಥಾ ಕೃಷಿಮ್ ।
ವಾಣಿಜ್ಯಂ ಚ ಪರಂ ಧರ್ಮಮೂಚಚಕ್ಷುಃ ಸಭಾಸದಃ ॥೪॥

ತಥೈವ ಚಕ್ರೇ ಸಸುತಸ್ತಸ್ಯ ರಾಜ್ಞೋ ಯಥೋದಿತಮ್ ।
ತೈರ್ಧರ್ಮವಾದಿಭಿರ್ಧರ್ಮಚ್ಯುತಸ್ಯ ನಿಜಧರ್ಮತಃ ॥೫॥

ತಸ್ಯ ಪುತ್ರಸ್ತತೋ ಜಾತೋ ನಾಮ್ನಾ ಖ್ಯಾತೋ ಭಲನ್ದನಃ ।
ಸ ಮಾತ್ರಾ ಪ್ರಹಿತೋಽಗಚ್ಛದ್ಗೋಪಾಲೋ ಭವ ಪುತ್ರಕ ॥೬॥

ರಾಜನಿಂತೆಂದನು ;—

೩. ಮಹಾತಪಸ್ವಿಗಳಾದ ಬಾಭ್ರವ್ಯ ಮುಂತಾದವರು ಧರ್ಮನಿರ್ಣಯದ ಅಧಿಕಾರದಲ್ಲಿ ನಿಯುಕ್ತರಾಗಿರುವರು. ಆದ್ದರಿಂದ ಅವರು ನಿನಗೆ ಧರ್ಮಸಾಧಕವಾದ ಕರ್ತವ್ಯಕರ್ಮವನ್ನು ಬೋಧಿಸಲಿ. ನೀನು ಅವನ್ನು ಆಚರಿಸು.

ಮಾರ್ಕಂಡೇಯ ಮುನಿಯು ಹೇಳಿದನು :—

೪. ತರುವಾಯ ರಾಜನ ಸಭಾಸದರಾದ ಆ ಬಾಭ್ರವ್ಯ ಮುಂತಾದ ಮಹರ್ಷಿಗಳು ವೈಶ್ಯಜಾತಿಯನ್ನು ಹೊಂದಿದ ರಾಜಪುತ್ರನಿಗೆ ಪಶುಪಾಲನೆ, ಕೃಷಿ ಮತ್ತು ವಾಣಿಜ್ಯ ಇವು ಉತ್ತಮಧರ್ಮವೆಂದು ನಿರ್ಣಯವನ್ನು ಹೇಳಿದರು.

೫. ತರುವಾಯ ಆ ರಾಜಪುತ್ರನು ವೈಶ್ಯಕನ್ಯಾಪಾಣಿಗ್ರಹಣದಿಂದ ನಿಜಧರ್ಮದಿಂದ ಚ್ಯುತನಾದ ತನಗೆ ಧರ್ಮವಾದಿಗಳಿಂದ ಬೋಧಿಸಲ್ಪಟ್ಟಿರುವ ಮತ್ತು ತಂದೆಯಾದ ರಾಜನಿಂದ ಸಮ್ಮತಿಸಲ್ಪಟ್ಟಿರುವ ಕೃಷಿ-ವಾಣಿಜ್ಯವೃತ್ತಿಯನ್ನು ಅವಲಂಬಿಸಿದನು.

೬. ತರುವಾಯ ಅವನಿಗೆ ಭಲಂದನನೆಂದು ಹೆಸರಿನಿಂದ ಖ್ಯಾತಿಯನ್ನು ಪಡೆದಿರುವ ಒಬ್ಬ ಪುತ್ರನು ಜನಿಸಿದನು. ಆ ಕುಮಾರನು ಒಂದು ಸಮಯದಲ್ಲಿ ತಾಯಿಯಿಂದ "ಪುತ್ರನೇ ! ನೀನು ಗೋವುಗಳನ್ನು ಪಾಲಿಸುತ್ತ ಗೋಪಾಲಕನಾಗು ; ಹೊರಡು" ಎಂದು ಹೇಳಿ ಕಳುಹಿಸಲ್ಪಟ್ಟನು.

ಮಾತ್ರಾ ತಥಾ ನಿಯುಕ್ತೋಽಥ ಪ್ರಣಿಪತ್ಯ ಸ್ವಮಾತರಮ್ ।
ರಾಜರ್ಷಿಮಗಮನ್ನೀಪಂ ಹಿಮವತ್ಪರ್ವತಾಶ್ರಯಮ್ ॥೭॥

ತಂ ಸಮೇತ್ಯ ಚ ಜಗ್ರಾಹ ತಸ್ಯ ಪಾದೌ ಯಥಾವಿಧಿ ।
ಪ್ರಣಿಪತ್ಯಾಹ ಚೈವೈನಂ ರಾಜರ್ಷಿಂ ಸ ಭಲನ್ದನಃ ॥೮॥

ಆದಿಷ್ಟೋ ಭಗವನ್ಮಾತ್ರಾ ಗೋಪಾಲಸ್ತ್ವಂ ಭವೇತಿ ವೈ ।
ಮಯಾ ಹಿ ಪಾಲನೀಯಾ ಕ್ಷ್ಮಾ ತಸ್ಯಾಃ ಸ್ವೀಕರಣಂ ಕಥಮ್ ॥೯॥

ಮಯಾ ಹಿ ಗೌಃ ಪಾಲನೀಯಾ ಸಾ ಯದಾ ಸ್ವೀಕೃತಾ ಭವೇತ್ ।
ಆಕ್ರಾನ್ತಾ ಬಲವದ್ಭಿಃ ಸಾ ದಾಯಾದ್ಯೈಃ ಪೃಥಿವೀ ಮಮ ॥೧೦॥

---

೭. ಅನಂತರ ತಾಯಿಯಿಂದ ಗೋಪಾಲಕನಾಗಲು ನಿಯೋಗ ಹೊಂದಿರುವ ಭಲಂದನನು ಹಾಗೆಯೇ ತಾಯಿಯನ್ನು ವಂದಿಸಿ ಹಿಮವತ್ಪರ್ವತ-ದಲ್ಲಿ ವಾಸಮಾಡುತ್ತಿರುವ ನೀಪ ಎಂಬ ನಾಮಾಂಕಿತನಾದ ರಾಜರ್ಷಿಯ ಬಳಿಗೆ ಹೋದನು.

೮. ಆ ಭಲಂದನನು ನೀಪರಾಜರ್ಷಿಯ ಬಳಿಗೆ ಹೋಗಿ ಯಥಾವಿಧಿ-ಯಾಗಿ ರಾಜರ್ಷಿಯ ಪಾದಗಳನ್ನು ಹಿಡಿದು ವಂದಿಸಿದನು. ಹಾಗೆ ನಮಸ್ಕಾರ ಮಾಡಿದನಂತರ ನೀಪನೆಂಬ ಆ ರಾಜರ್ಷಿಯನ್ನು ಕುರಿತು ಹೇಳಿಕೊಂಡನು.

೯. ಪೂಜ್ಯನಾದ ಮಹಾಮುನಿಯೇ! ನಾನು ಗೋಪಾಲಕನಾಗ-ಬೇಕೆಂದು ಜನನಿಯಿಂದ ಆದೇಶಹೊಂದಿರುವೆನು. ಆದರೆ ನಾನು ಭೂಮಿಯನ್ನು ಪಾಲಿಸಬೇಕೆಂದು ಇರುವೆನು. ಹಾಗೆ ನನಗೆ ರಾಜ್ಯವು ಪ್ರಾಪ್ತಿಯಾಗುವುದು ಹೇಗೆ?

೧೦. ನನ್ನಿಂದ ರಾಜ್ಯವು ಪಾಲಿಸಲ್ಪಡಬೇಕು. ಆದರೆ ಬಲಿಷ್ಠರಾದ ದಾಯಾದಜನರು ನನ್ನ ಭಾಗದ ಭೂಮಿಯನ್ನು ಆಕ್ರಮಣ ಮಾಡಿರುವರು. ಅಂತಹ ಭೂಮಿಯು ಮತ್ತೆ ನನಗೆ ದೊರಕುವಂತಾಗುವುದು ಹೇಗೆ?

ತಾಂ ಯಥಾ ಪ್ರಾಪ್ನುಯಾಂ ಪೃಥ್ವೀಂ ತ್ವತ್ಪ್ರಸಾದಾದಹಂ ವಿಭೋ।
ತಥಾದಿಶ ಕರಿಷ್ಯಾಮಿ ತವಾಜ್ಞಾಂ ಪ್ರಣತೋಽಸ್ಮಿ ತೇ ॥೧೧॥

ಮಾರ್ಕಣ್ಡೇಯ ಉವಾಚ :—

ತತಃ ಸ ನೀಪೋ ರಾಜರ್ಷಿಸ್ತಸ್ಮೈ ನಿರವಶೇಷತಃ।
ಭಲನ್ದಾಯ ದದೌ ಬ್ರಹ್ಮನ್ನಸ್ತ್ರಗ್ರಾಮಂ ಮಹಾತ್ಮನೇ ॥೧೨॥

ಪ್ರಾಪ್ತಾಸ್ತ್ರವಿದ್ಯಃ ಸ ಯಯೌ ಪಿತೃವ್ಯತನಯಾನ್ ದ್ವಿಜ।
ವಸುರಾತಾದಿಕಾನ್ಪ್ರಾತ್ರಾನಾದಿಷ್ಟಃ ಸ ಮಹಾತ್ಮನಾ ॥೧೩॥

ಅಯಾಚತ ಸ ರಾಜ್ಯಾರ್ಧಂ ಪಿತೃಪೈತಾಮಹೋಚಿತಮ್।
ತೇ ಚೋಚುರ್ವೈಶ್ಯಪುತ್ರಸ್ತ್ವಂ ಕಥಂ ಭೋಕ್ಷ್ಯಸಿ ಮೇದಿನೀಮ್ ॥೧೪॥

---

೧೧. ಸರ್ವಸಮರ್ಥನಾದ ಮುನಿಯೇ! ನಿನ್ನ ಪರಮಾನುಗ್ರಹದಿಂದ ನಾನು ಆ ಭೂಭಾಗವನ್ನು ಯಾವ ಬಗೆಯಿಂದ ಮತ್ತೆ ಹೊಂದುವೆನೊ ಹಾಗೆ ನನಗೆ ಆಜ್ಞೆಯನ್ನೀಯಬೇಕು. ನಿನ್ನ ಆಜ್ಞೆಯಂತೆ ನಡೆದುಕೊಳ್ಳುವೆನು. ನಾನು ನಿನ್ನಲ್ಲಿ ವಿನಯದಿಂದ ನಮಸ್ಕರಿಸುವೆನು.

ಮಾರ್ಕಂಡೇಯ ಮುನಿಯು ಹೇಳಿದನು :—

೧೨. ಬ್ರಹ್ಮರ್ಷಿಯಾದ ಕ್ರೌಷ್ಟುಕಿಯೇ! ತರುವಾಯ ನೀಪನೆಂಬ ಆ ರಾಜರ್ಷಿಯು ಮಹಾತ್ಮನಾದ ಆ ಭಲಂದನನಿಗೆ ರಾಜ್ಯಪ್ರಾಪ್ತಿಗೆ ಸಾಧನವಾದ ಸಮಸ್ತ ಅಸ್ತ್ರವಿದ್ಯಾಸಂಪತ್ತನ್ನು ಕೊಟ್ಟು ಅನುಗ್ರಹಮಾಡಿದನು.

೧೩. ದ್ವಿಜೋತ್ತಮನಾದ ಕ್ರೌಷ್ಟುಕಿಯೇ! ಉಪದೇಶಿಸಲ್ಪಟ್ಟ ಅಸ್ತ್ರವಿದ್ಯೆಯುಳ್ಳ ಆ ಭಲಂದನನು ಮಹಾತ್ಮನೂ ಗುರುವೂ ಆದ ನೀಪರಾಜರ್ಷಿಯಿಂದ ಆಜ್ಞಾಪಿಸಲ್ಪಟ್ಟವನಾಗಿ ತನ್ನ ಪಿತೃವ್ಯಪುತ್ರರಾದ ವಸುರಾತ ಮುಂತಾದವರ ಬಳಿಗೆ ಹೋದನು.

೧೪. ಮತ್ತು ತನ್ನ ಪಿತೃ-ಪಿತಾಮಹವಂಶಾನುಕ್ರಮದಿಂದ ಬಂದ ರಾಜ್ಯದಲ್ಲಿ ಅರ್ಧಭಾಗವನ್ನು ವಸುರಾತ ಮುಂತಾದವರಲ್ಲಿ ಪ್ರಾರ್ಥಿಸಿಕೊಂಡನು. ಆಗ ಅವರು "ವೈಶ್ಯಪುತ್ರನಾದ ನೀನು ರಾಜ್ಯವನ್ನು ಭುಂಜಿಸಲು ಹೇಗೆ ಅರ್ಹನಾಗುವೆ? ಎಂದರು.

ತತಸ್ತೈರ್ಯೋದ್ಧುಮಾರಬ್ಧಂ ಭಲನ್ದಸ್ಯಾತ್ಮವಂಶಜೈಃ ।
ವಸುರಾತಾದಿಭಿಃ ಕ್ರುದ್ಧೈಃ ಕೃತಾಸ್ತ್ರೈಸ್ತ್ಯಾಸ್ತ್ರವರ್ಷಿಭಿಃ ||೧೫||

ಸ ಜಿತ್ವಾ ತಾನಶೇಷಾಂಸ್ತು ಶಸ್ತ್ರವಿಕ್ಷತಸೈನಿಕಾನ್ ।
ಜಹಾರ ಪೃಥಿವೀಂ ತೇಷಾಂ ಧರ್ಮಯುದ್ಧೇನ ಧರ್ಮವಿತ್ ||೧೬||

ಸ ನಿರ್ಜಿತಾರಿಃ ಸಕಲಾಂ ಪೃಥ್ವೀಂ ರಾಜ್ಯಂ ತಥಾ ಪಿತುಃ ।
ನಿವೇದಯಾಮಾಸ ತತಸ್ತತ್ಪಿತಾ ಜಗೃಹೇ ನ ಚ ||೧೭||

ಪ್ರತ್ಯುವಾಚ ಸ ತಂ ಪುತ್ರಂ ಭಾರ್ಯಾಯಾಃ ಪುರತಸ್ತದಾ ||೧೮||

ನಾಭಾಗ ಉವಾಚ :—
ಭಲನ್ದ ರಾಜ್ಯಮೇತತ್ತೇ ಕ್ರಿಯತಾಂ ಪೂರ್ವಜೈಃ ಕೃತಮ್ ||೧೯||

---

೧೫. ಆ ಮೇಲೆ ಅಸ್ತ್ರವಿದ್ಯೆಯಲ್ಲಿ ನಿಷ್ಣಾತನಾದ ಭಲಂದನನಿಗೆ ಅವನು ರಾಜ್ಯಾರ್ಥವನ್ನು ಪ್ರಾರ್ಥಿಸಿದುದಕ್ಕಾಗಿ ಕುಪಿತರೂ, ಶಸ್ತ್ರಾಸ್ತ್ರಗಳನ್ನು ಪ್ರಯೋಗಿಸುವವರೂ ಮತ್ತು ಸ್ವವಂಶದಲ್ಲಿ ಜನಿಸಿದವರೂ ಆದ ವಸುರಾತ ಮುಂತಾದವರೊಡನೆ ಯುದ್ಧವು ಉಂಟಾಯಿತು.

೧೬. ಅನಂತರ ಧರ್ಮವೇತ್ತನಾದ ಭಲಂದನನು ಶಸ್ತ್ರಪ್ರಹಾರದಿಂದ ಕ್ಷಯಹೊಂದಿದ ಸೈನಿಕರುಳ್ಳ ವಸುರಾತ ಮುಂತಾದವರನ್ನು ಎಲ್ಲ ಧರ್ಮಯುದ್ಧದಿಂದ ಗೆದ್ದು ಅವರ ಭೂಮಿಯನ್ನು ತಾನು ಅಪಹರಿಸಿದನು.

೧೭. ಹೀಗೆ ಸೋಲಿಸಿದ ಸಮಸ್ತ ಶತ್ರುಗಳುಳ್ಳ ಆ ಭಲಂದನನು ಸಮಸ್ತ ಪೃಥಿವಿಯನ್ನೂ ಮತ್ತು ರಾಜ್ಯವನ್ನೂ ತಂದೆಯ ಸನ್ನಿಧಿಯಲ್ಲಿ ಒಪ್ಪಿಸಿದನು. ಆಗ ತಂದೆಯು ಮಾತ್ರ ರಾಜ್ಯವನ್ನು ಅಂಗೀಕರಿಸಲಿಲ್ಲ.

೧೮. ಮತ್ತು ಪುತ್ರನು ಧರ್ಮಯುದ್ಧದಿಂದ ಗೆದ್ದ ರಾಜ್ಯವನ್ನು ತಾನು ಅಂಗೀಕರಿಸದೆ ನಾಭಾಗನು ತನ್ನ ಪತ್ನಿಯ ಸಮಕ್ಷದಲ್ಲಿ ತನ್ನ ಪುತ್ರನಾದ ಭಲಂದನನನ್ನು ಕುರಿತು ಹೇಳಿದನು.

ನಾಭಾಗನು ಇಂತೆಂದನು :—

೧೯. ಭಲನ್ದನಕುಮಾರನೇ ! ನಮ್ಮ ಪಿತೃ–ಪಿತಾಮಹ ಮುಂತಾದವರಿಂದ ಕ್ರಮವಾಗಿ ಪಾಲಿಸಲ್ಪಟ್ಟಿರುವ, ವಂಶಾನುಕ್ರಮವಾಗಿ ಬಂದ ರಾಜ್ಯಭಾರವು ನಿನ್ನಿಂದ ಇಷ್ಟಾನುಸಾರವಾಗಿ ನಡೆಯಿಸಲ್ಪಡಲಿ.

ಅಹಂ ನ ಕೃತವಾನ್ ರಾಜ್ಯಂ ನಾಸಾಮರ್ಥ್ಯಯುತಃ ಪುರಾ ।
ವೈಶ್ಯತಾಂ ತು ಪುರಸ್ಕೃತ್ಯ ತಥ್ಯವಾಜ್ಞಾಕರಃ ಪಿತುಃ ॥೨೦॥

ಕೃತ್ವಾಪ್ರೀತಿಂ ಪಿತುರಹಂ ವೈಶ್ಯಕನ್ಯಾಪರಿಗ್ರಹಾತ್ ।
ನ ಪುಣ್ಯಲೋಕಭಾಗ್ರಾಜಾ ಯಾವದಾಭೂತಸಂಪ್ಲವಮ್ ॥೨೧॥

ಉಲ್ಲಙ್ಘ್ಯಾಜ್ಞಾಂ ಪುನಸ್ತಸ್ಯ ಪಾಲಯಾಮಿ ಮಹೀಂ ಯದಿ ।
ನಾಸ್ತಿ ಮೋಕ್ಷಸ್ತತೋ ನೂನಂ ಮಮ ಕಲ್ಪಶತೈರಪಿ ॥೨೨॥

ನ ಚಾಪಿ ಯುಕ್ತಂ ತ್ವದ್ಬಾಹುನಿರ್ಜಿತಂ ಮಮ ಮಾನಿನಃ ।
ರಾಜ್ಯಂ ಭೋಕ್ತುಮನೀಹಸ್ಯ ದುರ್ಬಲಸ್ಯೇವ ಕಸ್ಯಚಿತ್ ॥೨೩॥

---

೨೦. ನಾನು ರಾಜ್ಯಭಾರವನ್ನು ಹಿಂದೆ ಎಂದೂ ಅಂಗೀಕರಿಸಿದವನಲ್ಲ. ಆದರೆ ರಾಜ್ಯಭಾರಮಾಡಲು ಸಾಮರ್ಥ್ಯವಿಲ್ಲದವನಾಗಿರಲಿಲ್ಲ. ನನಗೆ ಒದಗಿದ ವೈಶ್ಯಜಾತಿಯನ್ನು ಗಮನಿಸಿ ಹಾಗು ತಂದೆಯ ಆಜ್ಞೆಗೆ ಬದ್ಧನಾಗಿ ರಾಜ್ಯವನ್ನು ತ್ಯಜಿಸಿದೆನು.

೨೧. ನಾನು ವೈಶ್ಯಕನ್ಯೆಯ ಪಾಣಿಗ್ರಹಣವನ್ನು ಮಾಡಿ ಜನಕನಿಗೆ ಅಪ್ರೀತಿಯನ್ನು ಉಂಟುಮಾಡಿರುವೆನು. ಆ ಕಾರಣ ಕಲ್ಪಾಂತಕಾಲದವರೆಗೂ ರಾಜ್ಯಪಾಲನದ ಪುಣ್ಯದಿಂದ ಲಭಿಸುವ ಸದ್ಗತಿಪ್ರಾಪ್ತಿಗೆ ನಾನು ಅನರ್ಹನಾಗಿರುವೆನು.

೨೨. ತಂದೆಯ ಆಜ್ಞೆಯನ್ನು ಉಲ್ಲಂಘಿಸಿ ಈಗ ಮತ್ತೆ ನಾನು ಭೂಮಿಯನ್ನು ಪಾಲಿಸಲು ಅಂಗೀಕರಿಸಿದರೆ ಪಿತೃಆಜ್ಞೆಯ ಉಲ್ಲಂಘನದ ಪಾತಕದಿಂದ ನನಗೆ ನೂರಾರು ಕಲ್ಪಗಳು ಕಳೆದುಹೋದರೂ ಮುಕ್ತಿಯಾಗಲಾರದು.

೨೩. ಮತ್ತು ರಾಜ್ಯಭೋಗದಲ್ಲಿ ಆಶೆಯಿಲ್ಲದವನೂ, ಮತ್ತು ಮಾನಿಯೂ ಆದ ನನಗೆ ನೀನು ನಿನ್ನ ಭುಜಬಲದಿಂದ ಗೆದ್ದು ತಂದೊಪ್ಪಿಸಿದ ರಾಜ್ಯವನ್ನು ನಿರ್ವೀರ್ಯನಂತಿದ್ದು ಭುಂಜಿಸುವುದು ತರವಲ್ಲ.

ರಾಜ್ಯಂ ಕುರು ಸ್ವಯಂ ಪುತ್ರ ದಾಯಾದೇಭ್ಯೋ ವಿಮುಞ್ಚ ವಾ ।
ಮಮಾಜ್ಞಾಪಾಲನಂ ಶಸ್ತಂ ಪಿತುರ್ನ ಕ್ಷಿತಿಪಾಲನಮ್ ॥೨೪॥

ಮಾರ್ಕಣ್ಡೇಯ ಉವಾಚ :—

ತತಃ ಪ್ರಹಸ್ಯ ತದ್ಭಾರ್ಯಾ ಸುಪ್ರಭಾ ನಾಮ ಭಾಮಿನೀ ।
ಪ್ರತ್ಯುವಾಚ ಪತಿಂ ಭೂಪ ಗೃಹ್ಯತಾಂ ರಾಜ್ಯಮೂರ್ಜಿತಮ್ ॥೨೫॥

ನ ತ್ವಂ ವೈಶ್ಯೋ ನ ಚೈವಾಹಂ ಜಾತಾ ವೈಶ್ಯಕುಲೇ ನೃಪ ।
ಕ್ಷತ್ರಿಯಸ್ತ್ವಂ ತಥೈವಾಹಂ ಕ್ಷತ್ರಿಯಾಣಾಂ ಕುಲೋದ್ಭವಾ ॥೨೬॥

ಪೂರ್ವಮಾಸೀನ್ಮಹೀಪಾಲಃ ಸುದೇವ ಇತಿ ವಿಶ್ರುತಃ ।
ತಸ್ಯಾಭೂಚ್ಚ ಸಖಾ ರಾಜ್ಞೋ ಧೂಮ್ರಾಶ್ವಸ್ಯ ಸುತೋ ನಲಃ ॥೨೭॥

---

೨೪. ಪುತ್ರನೇ! ಆದುದರಿಂದ ನೀನು ಸ್ವತಂತ್ರನಾಗಿ ರಾಜ್ಯವನ್ನು ಶಾಸನಮಾಡು. ಅಥವಾ ದಾಯಾದರಿಗೆ ರಾಜ್ಯವನ್ನು ಬಿಟ್ಟುಬಿಡು. ನನಗಾದರೊ ತಂದೆಯ ಆಜ್ಞಾಪಾಲನವು ಪ್ರಶಸ್ತವಾದುದು, ರಾಜ್ಯಪಾಲನವು ಪ್ರಶಸ್ತವಲ್ಲ.

ಮಾರ್ಕಂಡೇಯ ಮುನಿಯು ಹೇಳಿದನು :—

೨೫. ತರುವಾಯ ಸುಪ್ರಭಾ ಎಂಬ ನಾಮಾಂಕಿತಳೂ, ವರನಾರಿಯೂ ಆದ ನಾಭಾಗನ ಸತಿಯು ನಗುತ್ತ ಪತಿಯನ್ನು ಕುರಿತು " ರಾಜನಾದ ಪತಿಯೆ! ಊರ್ಜಿತವಾದ ರಾಜ್ಯವು ನಿನ್ನಿಂದ ಸ್ವೀಕರಿಸಲ್ಪಡಲಿ.

೨೬. ಎಲೈ ರಾಜನಾದ ಪತಿದೇವನೇ! ನೀನು ವೈಶ್ಯನಲ್ಲ ಹಾಗು ನಾನು ಕೂಡ ವೈಶ್ಯವಂಶದಲ್ಲಿ ಜನ್ಮವೆತ್ತಿದವಳಲ್ಲ, ನೀನು ಕ್ಷತ್ರಿಯ ಜಾತಿಯವನಾಗಿದ್ದೀಯೆ. ಹಾಗು ನಾನು ಕ್ಷತ್ರಿಯವಂಶದಲ್ಲಿ ಜನ್ಮವೆತ್ತಿದವಳಾಗಿರುವೆನು.

೨೭. ಪೂರ್ವಕಾಲದಲ್ಲಿ ಸುದೇವ ಎಂಬ ನಾಮಾಂಕನದಿಂದ ಪ್ರಸಿದ್ಧನಾದ ಒಬ್ಬ ರಾಜನಿದ್ದನು. ಆ ರಾಜನಿಗೆ ಧೂಮ್ರಾಶ್ವ ಎಂಬ ರಾಜನ ಪುತ್ರನಾದ ನಲ ಎಂಬುವನು ಆಪ್ತಮಿತ್ರನಾಗಿದ್ದನು.

ಸ ತೇನ ಸಖ್ಯಾ ಸಹಿತೋ ಜಗಾಮಾಮ್ರವಣಂ ವನಮ್ ।
ಪತ್ನೀಭಿಃ ಸ ಸಮಂ ರನ್ತುಂ ಮಾಧವೇ ಮಾಸಿ ಪಾರ್ಥಿವ ॥೨೮॥

ತತಃ ಪಾನಾನ್ಯನೇಕಾನಿ ಭಕ್ಷ್ಯಾಣಿ ಬುಭುಜೇ ತದಾ ।
ಭಾರ್ಯಾಭಿಃ ಸಹಿತಸ್ತಾಭಿಸ್ತೇನ ಸಖ್ಯಾ ಸಮನ್ವಿತಃ ॥೨೯॥

ತತಃ ಪುಷ್ಕರಿಣೀತೀರೇ ದದರ್ಶಾತಿಮನೋರಮಾಮ್ ।
ಪತ್ನೀಂ ಚ್ಯವನಪುತ್ರಸ್ಯ ಪ್ರಮತೇಃ ಪಾರ್ಥಿವಾತ್ಮಜಾಮ್ ॥೩೦॥

ಸಖಾ ತಸ್ಯ ನಲೋ ಮತ್ತೋ ಜಗೃಹೇ ತಾಂ ಚ ದುರ್ಮತಿಃ ।
ಪಶ್ಯತಸ್ತಸ್ಯ ರಾಜ್ಞಶ್ಚ ತ್ರಾತ ತ್ರಾತೇತಿ ವಾದಿನೀಮ್ ॥೩೧॥

---

೨೮. ಎಲೈ ರಾಜನೇ ! ಆ ಸುದೇವರಾಜನು ಮಿತ್ರನಾದ ನಲನೊಡನೆ ಒಂದು ವಸಂತಮಾಸದಲ್ಲಿ ಕಾಂತೆಯರೊಡನೆ ರತಿ–ವಿಹಾರಸುಖವನ್ನು ಅನುಭವಿಸಲು ಆಮ್ರವಣವೆಂಬ ಒಂದು ವನಕ್ಕೆ ತೆರಳಿದನು.

೨೯. ಅನಂತರ ಆಮ್ರವಣದಲ್ಲಿ ಮಿತ್ರನಾದ ನಲನಿಂದೊಡಗೂಡಿ ಮತ್ತು ತನ್ನ ಕಾಂತಾಜನರಿಂದ ಸಮೇತನಾಗಿ ಅನೇಕವಿಧವಾದ ಭಕ್ಷ್ಯಗಳನ್ನು ಭುಂಜಿಸಿದನು. ಮತ್ತು ವಿಧವಿಧವಾದ ಮದ್ಯಾದಿಪಾನೀಯಗಳನ್ನು ಪಾನ–ಮಾಡಿದನು.

೩೦. ತರುವಾಯ ಅಲ್ಲಿ ಒಂದು ಸರೋವರದ ತೀರದಲ್ಲಿ ಚ್ಯವನ–ಮುನಿಯ ಪುತ್ರನಾದ ಪ್ರಮತಿ ಎಂಬ ಮುನಿಕುಮಾರನ ಪತ್ನಿಯೂ, ಅತಿ ಮನೋಹರಳೂ ಆದ ರಾಜಕುಮಾರಿಯನ್ನು ನೋಡಿದನು.

೩೧. ಆಗ ವಿವೇಕಿಯಾದ ನಲನೆಂಬ ಆ ಸುದೇವನ ಮಿತ್ರನು ಮದ-ವೇರಿದವನಾಗಿ ಸುದೇವರಾಜನು ನೋಡುತ್ತಿರುವ ಹಾಗೆ "ರಕ್ಷಿಸಿ; ರಕ್ಷಿಸಿ" ಎಂದು ಕೂಗಿಕೊಳ್ಳುತ್ತಿದ್ದ ಆ ರಾಜಪುತ್ರಿಯನ್ನು ಪರಿಗ್ರಹಿಸಿದನು.

ಆಕ್ರನ್ದಿತಂ ನಿಶಮ್ಯೈವ ಸ ತಸ್ಯಾಃ ಪ್ರಮತಿಃ ಪತಿಃ ।
ಆಜಗಾಮ ತ್ವರಾಯುಕ್ತಃ ಕಿಮೇತದಿತಿ ವೈ ವದನ್ ॥೩೨॥

ತತೋ ದದರ್ಶ ರಾಜಾನಂ ಸುದೇವಂ ತತ್ರ ಸಂಸ್ಥಿತಮ್ ।
ಗೃಹೀತಾಂ ಚ ತಥಾ ಪತ್ನೀಂ ನಲೇನ ಸುದುರಾತ್ಮನಾ ॥೩೩॥

ತತಃ ಸುದೇವಂ ಪ್ರಮತಿಃ ಪ್ರಾಹಾಯಂ ಶಾಸ್ಯತಾಮಿತಿ ।
ತ್ವಂ ಚ ಶಾಸ್ತಾ ಭವದ್ರಾಜ್ಯೇ ದುಷ್ಟಶ್ಚಾಯಂ ನಲೋ ನೃಪ ॥೩೪॥

ಮಾರ್ಕಣ್ಡೇಯ ಉವಾಚ :—

ತಸ್ಯಾರ್ತಸ್ಯ ವಚಃ ಶ್ರುತ್ವಾ ಸುದೇವೋ ನಲಗೌರವಾತ್ ।
ಪ್ರಾಹ ವೈಶ್ಯೋಽಸ್ಮಿ ಗಚ್ಛಾನ್ಯಂ ಕ್ಷತ್ರಿಯಂ ತ್ರಾಣಕಾರಣಾತ್ ॥೩೫॥

---

೩೨. ಆಗ ಸತಿಯ ಆಕ್ರಂದನ ಧ್ವನಿಯನ್ನು ಕೇಳಿ ಪತಿಯಾದ ಪ್ರಮತಿಯು "ಇದೇನು" ಎಂದು ಗಟ್ಟಿಯಾಗಿ ಹೇಳುತ್ತ ಗಾಬರಿಯಿಂದ ಅಲ್ಲಿಗೆ ಓಡಿಬಂದನು.

೩೩. ಮತ್ತು ಪ್ರಮತಿಯು ಅಲ್ಲಿಯೇ ನಿಂತುಕೊಂಡಿದ್ದ ಸುದೇವ ರಾಜನನ್ನು ನೋಡಿದನು. ಹಾಗು ದುರಾತ್ಮನಾದ ನಲನಿಂದ ಎತ್ತಿಕೊಳ್ಳಲ್ಪಟ್ಟಿದ್ದ ತನ್ನ ಪತ್ನಿಯನ್ನೂ ಕಂಡನು.

೩೪. ತರುವಾಯ ಸುದೇವರಾಜನನ್ನು ಕುರಿತು "ರಾಜನೇ! ಈ ದುರಾತ್ಮನನ್ನು ಶಿಕ್ಷಿಸು, ನೀನು ನಿನ್ನ ಈ ರಾಜ್ಯದಲ್ಲಿ ಶಾಸಕನಾಗಿರುತ್ತೀಯೆ. ನಲನೆಂಬ ಈ ರಾಜಕುಮಾರನು ದುಷ್ಟನಾಗಿರುವನು" ಹೀಗೆಂದು ಪ್ರಮತಿಯು ಹೇಳಿದನು.

ಮಾರ್ಕಂಡೇಯ ಮುನಿಯು ಹೇಳಿದನು :—

೩೫. ಆಗ ಸುದೇವರಾಜನು ದುಃಖಿಯಾದ ಪ್ರಮತಿಯ ವಚನವನ್ನು ಕೇಳಿ ನಲನಲ್ಲಿರುವ ಪ್ರೀತಿ-ಗೌರವಗಳಿಂದ ಅವನನ್ನು ಶಾಸನಮಾಡಲಾಗದೇ ಪ್ರಮತಿಯನ್ನು ಕುರಿತು "ನಾನು ವೈಶ್ಯನಾಗಿರುವೆನು. ನೀನು ನಿನ್ನ ರಕ್ಷಣೆಗೆ ಬೇರೊಬ್ಬ ಕ್ಷತ್ರಿಯನನ್ನು ಆಶ್ರಯಮಾಡು" ಎಂದನು.

ತತಃ ಸ ಪ್ರಮತಿಃ ಕ್ರುದ್ಧಸ್ತೇಜಸಾ ನಿರ್ದಹನ್ನಿವ ।
ಪ್ರತ್ಯುವಾಚಾಥ ರಾಜಾನಂ ವೈಶ್ಯೋಽಸ್ಮೀತ್ಯಭಿಭಾಷಿಣಮ್ ॥೩೬॥

ಪ್ರಮತಿರುವಾಚ :—

ಏವಮಸ್ತು ಭವಾನ್ವೈಶ್ಯಃ ಕ್ಷತ್ರಿಯಃ ಕ್ಷತರಕ್ಷಣಾತ್ ॥೩೭॥

ಕ್ಷತ್ರಿಯೈರ್ಧಾರ್ಯತೇ ಶಸ್ತ್ರಂ ನಾರ್ತಶಬ್ದೋ ಭವೇದಿತಿ ।
ಸ ತ್ವಂ ನ ಕ್ಷತ್ರಿಯೋ ಭಾವೀ ವೈಶ್ಯ ಏವ ಕುಲಾಧಮಃ ॥೩೮॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ನಾಭಾಗಚರಿತ
ಏಕಾದಶಾಧಿಕಶತತಮೋಽಧ್ಯಾಯಃ

---

೩೬. ತರುವಾಯ ಬಲು ಕೋಪಗೊಂಡು ಕೋಪಾಗ್ನಿಜ್ವಾಲೆಯಿಂದ ಸುಟ್ಟುಹಾಕುವಂತೆ ಆದ ಪ್ರಮತಿಯು "ನಾನು ವೈಶ್ಯನಾಗಿದ್ದೇನೆ" ಎಂದು ಹೇಳಿಕೊಳ್ಳುತ್ತಿದ್ದ ಸುದೇವ ರಾಜನನ್ನು ಕುರಿತು ಹೇಳಿದನು.

ಪ್ರಮತಿಯು ಹೀಗೆಂದನು :—

೩೭. ವಂಚಕನೇ! ಹಾಗೇ ಆಗಲಿ ನೀನು ವೈಶ್ಯನೇ ಆಗು, ಕ್ಷತ್ರಿಯನು ಮತ್ತೊಬ್ಬರನ್ನು ಕ್ಷತಿಯಾಗುವ ಪ್ರಸಂಗದಿಂದ ರಕ್ಷಣಮಾಡಿ ಕ್ಷತ್ರಿಯನೆನಿಸುವನು. ನೀನು ಕ್ಷತ್ರಿಯನೆನಿಸಲು ಅರ್ಹನಾಗಿಲ್ಲ.

೩೮. ರಾಜ್ಯದಲ್ಲಿ ಎಲ್ಲಿಯೂ ಆರ್ತಧ್ವನಿಯು ಕೇಳಬಾರದೆಂಬ ಉದ್ದೇಶದಿಂದ ಕ್ಷತ್ರಿಯರು ಶಸ್ತ್ರಧಾರಣವನ್ನು ಮಾಡುವರು. ನೀನು ಅಂತಹ ಕ್ಷತ್ರಿಯನಾಗಿ ಬಾಳಲು ಯೋಗ್ಯನಲ್ಲ. ಕುಲಕಳಂಕಿಯಾದ ವೈಶ್ಯನೇ ಆಗು, ಎಂದು ಹೇಳಿದನು.

ಮಾರ್ಕಂಡೇಯ ಮಹಾಪುರಾಣದಲ್ಲಿ ನೂರ ಹನ್ನೊಂದನೆಯ ಅಧ್ಯಾಯವು
ಮುಗಿದುದು.

॥ ಓಂ ಶ್ರೀ ದುರ್ಗಾಯೈ ನಮಃ ॥

ಮಾರ್ಕಂಡೇಯ ಪುರಾಣಂ

ದ್ವಾದಶಾಧಿಕಶತತಮೋಽಧ್ಯಾಯಃ

(ನಲಶಾಪಪ್ರಾಪ್ತಿಃ)

ಮಾರ್ಕಣ್ಡೇಯ ಉವಾಚ :—

ತಸ್ಮೈ ದತ್ವಾ ತತಃ ಶಾಪಂ ನಲಂ ಕ್ರುದ್ಧೋಽಬ್ರವೀದ್ದ್ವಿಜ ।
ಪ್ರಮತಿರ್ಭಾರ್ಗವಃ ಕೋಪಾತ್ತ್ರೈಲೋಕ್ಯಂ ನಿರ್ದಹನ್ನಿವ ॥೧॥

ಮದೋನ್ಮತ್ತೋ ಯತೋ ಭಾರ್ಯಾಂ ಭವಾನತ್ರ ಮಮಾಶ್ರಮೇ।
ಬಲಾದ್ಗೃಹ್ಣಾತಿ ಭಸ್ಮತ್ವಂ ತಸ್ಮಾದ್ವ್ರಜತು ಮಾ ಚಿರಮ್ ॥೨॥

ನೂರ ಹನ್ನೆರಡನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಹೇಳಿದನು :—

೧. ದ್ವಿಜನಾದ ಕ್ರೌಷ್ಟುಕಿಯೇ! ಪ್ರಮತಿಯು ಸುದೇವರಾಜನಿಗೆ ಹೀಗೆ ಶಾಪವನ್ನು ಕೊಟ್ಟು ತರುವಾಯ ಕೋಪಗೊಂಡವನಾಗಿ ಕೋಪಾಗ್ನಿ-ಜ್ವಾಲೆಯಿಂದ ಮೂರು ಲೋಕಗಳನ್ನು ದಹಿಸುವವನಂತೆ ನಲನಿಗೆ ಹೀಗೆಂದು ಹೇಳಿದನು.

೨. ಮದೋನ್ಮತ್ತನಾದ ನೀನು ಈ ನನ್ನ ಆಶ್ರಮದಲ್ಲಿ ಸತಿಯನ್ನು ಯಾವ ಕಾರಣ ಬಲಾತ್ಕಾರದಿಂದ ಪರಿಗ್ರಹಿಸಲು ಯತ್ನಿಸಿದೆಯೋ ಆ ಕಾರಣ ದಿಂದ ವಿಲಂಬವಿಲ್ಲದ ಹಾಗೆ ಈಗಲೆ ಭಸ್ಮವಾಗಿ ಹೋಗು ಎಂದು ಶಪಿಸಿದನು.

ತೇನೋದಾಹೃತಮಾತ್ರೇ ಚ ವಾಕ್ಯೇ ತಸ್ಮಿಂಸ್ತದಾ ನಲಃ ।
ದೇಹಜೇನಾಗ್ನಿನಾ ಸದ್ಯೋ ಭಸ್ಮಪುಞ್ಜಸ್ತದಾಭವತ್ ॥೩॥

ದೃಷ್ಟ್ವಾ ಪ್ರಭಾವಂ ತಂ ತಸ್ಯ ಸುದೇವೋ ವಿಮದಸ್ತತಃ ।
ಪ್ರಣಾಮನಮ್ರಃ ಪ್ರಾಹೇದಂ ಕ್ಷಮ್ಯತಾಂ ಕ್ಷಮ್ಯತಾಮಿತಿ ॥೪॥

ಯದುಕ್ತವಾಂಸ್ತ್ವಾಂ ಭಗವನ್ ಸುರಾಪಾನಮದಾಕುಲಮ್ ।
ತತ್ಕ್ಷಮ್ಯತಾಂ ಪ್ರಸೀದ ತ್ವಂ ಶಾಪೋಽಯಂ ವಿನಿವರ್ತ್ಯತಾಮ್ ॥೫॥

ಏವಂ ಪ್ರಸಾದಿತಸ್ತೇನ ಪ್ರಮತಿಃ ಪ್ರಾಹ ಭಾರ್ಗವಃ ।
ಗತಕೋಪೋ ನಲೇ ದಗ್ಧೇ ನಾವನೀತೇನ ಚೇತಸಾ ॥೬॥

ನಾನ್ಯಥಾ ಭಾವಿ ತದ್ವಾಕ್ಯಂ ಯನ್ಮಯಾ ಸಮುದೀರಿತಮ್ ।
ತಥಾಪಿ ತೇ ಕರಿಷ್ಯಾಮಿ ಪ್ರಸನ್ನೋಽನುಗ್ರಹಂ ಪರಮ್ ॥೭॥

---

೩. ಪ್ರಮತಿಯು ದಾರುಣವಾದ ಈ ಶಾಪವಚನವನ್ನು ಉಚ್ಚರಿಸುವಷ್ಟರಲ್ಲಿ ನಲನು ತನ್ನ ದೇಹದಲ್ಲಿ ಹುಟ್ಟಿ ಉರಿಯುವ ಅಗ್ನಿಗೆ ಆಹುತಿಯಾಗಿ ಕೂಡಲೆ ಭಸ್ಮರಾಶಿಯಾಗಿ ಬಿದ್ದನು.

೪. ಆಗ ಸುದೇವನು ಆ ಪ್ರಮತಿಯ ಅಪಾರವಾದ ಪ್ರಭಾವವನ್ನು ಕಂಡು ಇಳಿದುಹೋದ ಮದವುಳ್ಳವನಾಗಿ ಪ್ರಮತಿಯನ್ನು ನಮ್ರತೆಯಿಂದ ವಂದಿಸುತ್ತ "ಕ್ಷಮಿಸಬೇಕು" ಎಂದು ಮತ್ತೆ ಮತ್ತೆ ಬೇಡಿಕೊಂಡನು.

೫. ಷಡ್ಗುಣೈಶ್ವರ್ಯಗಳಿಂದ ಸಂಪನ್ನನಾದ ಮುನಿಯೇ! ನಾನು ಸುರಾಪಾನದ ಮದದಿಂದ ವ್ಯಾಕುಲನಾಗಿ ನಿನ್ನಲ್ಲಿ ಯಾವ ಮಾತನ್ನು ಆಡಿರುವೆನೋ, ಅದನ್ನು ಮನ್ನಿಸಬೇಕು. ಈ ಶಾಪದಿಂದ ನನ್ನನ್ನು ಮೋಚನಮಾಡಬೇಕು.

೬. ಹೀಗೆಂದು ಹೇಳಿ ಸುದೇವನಿಂದ ಸಮಾಧಾನಗೊಳಿಸಲ್ಪಟ್ಟ ಭೃಗುವಂಶದಲ್ಲಿ ಜನಿಸಿದ ಪ್ರಮತಿಯು ನಲನು ಭಸ್ಮರಾಶಿಯಾಗಿ ಬಿದ್ದ ಮೇಲೆ ಶಾಂತನಾಗಿ ಬೆಣ್ಣೆಯಂತಿದ್ದ ಮೃದುಮನಸ್ಸಿನಿಂದ ಹೀಗೆ ಹೇಳಿದನು.

೭. ನಾನು ಯಾವ ಶಾಪವಚನವನ್ನು ಉಚ್ಚಾರಮಾಡಿರುವೆನೊ ಆ ವಚನವು ಎಂದಿಗೂ ಬದಲಾಯಿಸುವುದಿಲ್ಲ. ಆದರೂ ನಿನ್ನಲ್ಲಿ ಪ್ರಸನ್ನನಾಗಿ ನಾನು ಹೆಚ್ಚಿನ ಅನುಗ್ರಹವನ್ನು ತೋರಿಸುವೆನು.

ಭವಿತಾ ವೈಶ್ಯಜಾತೀಯೋ ಭವಾನ್ನಾಸ್ತ್ಯತ್ರ ಸಂಶಯಃ ।
ಭವಿತಾ ಕ್ಷತ್ರಿಯೋ ವೈಶ್ಯಸ್ತಸ್ಮಿನ್ನೇವಾಶು ಜನ್ಮನಿ ॥೮॥

ಗ್ರಹೀಷ್ಯತಿ ಬಲಾತ್ಕನ್ಯಾಂ ಯದಾ ತೇ ಕ್ಷತ್ರಸಮ್ಭವಃ ।
ತದಾ ತ್ವಂ ಕ್ಷತ್ರಿಯೋ ವೈಶ್ಯಃ ಸ್ವಗೃಹೀತೋ ಭವಿಷ್ಯಸಿ ॥೯॥

ಏವಂ ಸ ವೈಶ್ಯೋ ಭೂಪಾಲ ಸುದೇವೋಽಸ್ಮತ್ಪಿತಾಭವತ್ ।
ಅಹಂ ಚ ಯಾ ಮಹಾಭಾಗ ತತ್ಸರ್ವಂ ಶ್ರೂಯತಾಂ ತ್ವಯಾ ॥೧೦॥

ಸುರತೋ ನಾಮ ರಾಜರ್ಷಿಃ ಪ್ರಾಗಾಸೀದ್ಗನ್ಧಮಾದನೇ ।
ತಪಸ್ವೀ ನಿಯತಾಹಾರಸ್ತ್ಯಕ್ತಸಙ್ಗೋ ವನಾಶ್ರಯಃ ॥೧೧॥

---

೮. ನೀನು ನನ್ನ ಶಾಪದಂತೆ ವೈಶ್ಯಜಾತಿಯವನಾಗುತ್ತೀಯೆ. ಇದರಲ್ಲಿ ಸಂದೇಹವಿಲ್ಲ. ಹಾಗೆ ವೈಶ್ಯನಾಗಿ ಜನಿಸಿದ ನೀನು ಅದೇ ಜನ್ಮದಲ್ಲಿಯೆ ಬೇಗ ಮತ್ತೆ ಕ್ಷತ್ರಿಯತ್ವವನ್ನು ಹೊಂದುತ್ತೀಯೆ.

೯. ವೈಶ್ಯಜಾತಿಯವನಾಗಿರುವ ಸಮಯದಲ್ಲಿ ಒಬ್ಬ ಕ್ಷತ್ರಿಯನು ಯಾವಾಗ ನಿನ್ನ ಕನ್ಯೆಯನ್ನು ಬಲಾತ್ಕಾರವಾಗಿ ಪಾಣಿಗ್ರಹಣಮಾಡುವನೋ ಆಗ ನೀನು ವೈಶ್ಯಜಾತಿಯಿಂದ ನಿನ್ನ ಕ್ಷತ್ರಿಯಜಾತಿಯನ್ನು ಮತ್ತೆ ಹೊಂದು-ತ್ತೀಯೆ.

೧೦. ಎಲೈ, ರಾಜನೇ! ಹೀಗೆ ಸುದೇವರಾಜನು ಮುನಿಶಾಪದಿಂದ ನನ್ನ ತಂದೆಯಾದ ವೈಶ್ಯನಾದನು. ಮಹಾಭಾಗ್ಯಶಾಲಿಯೇ! ಇನ್ನು "ನಾನು ಯಾರು" ಎಂಬುದನ್ನು ಹೇಳುವೆನು. ಅದನ್ನು ನೀನು ವಿಸ್ತಾರವಾಗಿ ಕೇಳು.

೧೧. ಪೂರ್ವಕಾಲದಲ್ಲಿ ಗಂಧಮಾದನ ಪರ್ವತದಲ್ಲಿ ಸುರತನೆಂಬ ಒಬ್ಬ ರಾಜರ್ಷಿಯಿದ್ದನು. ಅವನು ನಿಯತವಾದ ಆಹಾರವನ್ನು ಸೇವಿಸುವವನೂ, ವರ್ಜಿಸಿದ ಸರ್ವಸಂಗವುಳ್ಳವನೂ ಮತ್ತು ವನವಾಸಿಯೂ ಆದ ದೊಡ್ಡ ತಪಸ್ವಿ-ಯಾಗಿದ್ದನು.

ತತಃ ಶ್ಯೇನಮುಖಭ್ರಷ್ಟಾಂ ದೃಷ್ಟ್ವೈಕಾಂ ಶಾರಿಕಾಂ ಭುವಿ ।
ಕೃಪಾಭೂಜ್ಜನಿತಾ ಮೂರ್ಛಾ ತಥಾ ತಸ್ಯ ಮಹಾತ್ಮನಃ ॥೧೨॥

ತತೋ ಮೂರ್ಛಾವಸಾನೇಽಹಂ ತಸ್ಯೋತ್ಪನ್ನಾ ಶರೀರತಃ ।
ಸ ಮಾಂ ದೃಷ್ಟ್ವಾ ಚ ಜಗ್ರಾಹ ಸ್ನಿಹ್ಯಮಾನೇನ ಚೇತಸಾ ॥೧೩॥

ಯಸ್ಮಾತ್ಕೃಪಾಭಿಭೂತಸ್ಯ ಮಮ ಜಾತೇಯಮಾತ್ಮಜಾ ।
ತಸ್ಮಾತ್ಕೃಪಾವತೀ ನಾಮ್ನಾ ಭವಿಷ್ಯತ್ಯಾಹ ಸ ಪ್ರಭೋ ॥೧೪॥

ತತೋಽಹಮಾಶ್ರಮೇ ತಸ್ಯ ವರ್ಧಮಾನಾ ದಿವಾನಿಶಮ್ ।
ಸಖೀಭಿಃ ಸಹ ತುಲ್ಯಾಭಿರ್ವಿಚರಾಮಿ ವನಾನಿ ಚ ॥೧೫॥

---

೧೨. ಒಂದು ಸಮಯದಲ್ಲಿ ಮಹಾತ್ಮನಾದ ಆ ರಾಜರ್ಷಿಗೆ ಗಿಡಗದ ಮುಖದಿಂದ ನೆಲದ ಮೇಲೆ ಬಿದ್ದ ಒಂದು ಶಾರಿಕೆಯನ್ನು ಕಂಡು ಮನದಲ್ಲಿ ಕೃಪಾರಸವು ಉಕ್ಕಿ ಬಂದು ಹಾಗೆಯೇ ಮೂರ್ಛೆಯುಂಟಾಯಿತು.

೧೩. ತರುವಾಯ ಸ್ವಲ್ಪ ಹೊತ್ತಿನಲ್ಲಿ ಮೂರ್ಛೆಯು ಕಳೆದು ಎಚ್ಚರವುಂಟಾಗಲು ಆ ರಾಜರ್ಷಿಯ ದೇಹದಿಂದ ನಾನು ಜನಿಸಿದೆನು, ಆಗ ಮುನಿಯು ನನ್ನನ್ನು ನೋಡಿ ಸ್ನೇಹಪೂರ್ಣವಾದ ಮನಸ್ಸಿನಿಂದ ಪುತ್ರಿಯಂತೆ ನನ್ನನ್ನು ಸ್ವೀಕರಿಸಿದನು.

೧೪. ಪತಿದೇವನೇ! ಮತ್ತು ಆ ಮುನಿಯು ಕರುಣೆಯಿಂದ ತುಂಬಿರುವ ಸಮಯದಲ್ಲಿ ಈಕೆಯು ನನ್ನಿಂದ ಜನ್ಮವೆತ್ತಿದವಳಾದ್ದರಿಂದ ಇವಳು ಕೃಪಾವತೀ ಎಂಬ ಹೆಸರಿನಿಂದ ಪ್ರಖ್ಯಾತಳಾಗುವಳು ಎಂದು ಹೇಳಿದನು.

೧೫. ತರುವಾಯ ಆ ಮುನಿಯ ಆಶ್ರಮಭೂಮಿಯಲ್ಲಿ ವಾಸಮಾಡುತ್ತ ಹಗಲು ರಾತ್ರಿ ಸಮಯಗಳಲ್ಲಿ ನನ್ನ ಸಮಾನ ವಯಸ್ಸಿನ ಸಖಿಯರೊಡನೆ ವನವಿಹಾರಸುಖವನ್ನು ಅನುಭವಿಸಿ ಕ್ರಮವಾಗಿ ಅಭಿವೃದ್ಧಿಯನ್ನು ಹೊಂದಿದೆನು.

ತತೋ ಮುನೇರಗಸ್ತ್ಯಸ್ಯ ಭ್ರಾತಾಗಸ್ತ್ಯ ಇತಿ ಶ್ರುತಃ ।
ಸ ಚಿನ್ವನ್ ಕಾನನೇ ವನ್ಯಂ ಸಖೀಭಿಃ ಕೋಪಿತೋಽಶಪತ್ ॥೧೬॥

ಯಸ್ಮಾನ್ಮಾಂ ವೈಶ್ಯ ಇತ್ಯಾಹ ಭವತೀ ತೇನ ತೇ ಶಪೇ ।
ವೈಶ್ಯಾ ಭವಿಷ್ಯಸೀತ್ಯುಕ್ತೇ ಪ್ರಸಾದ್ಯೋಕ್ತೋ ಮಯಾ ಮುನಿಃ ॥೧೭॥

ನಾಪರಾಧಂ ಕೃತವತೀ ತವಾಹಂ ದ್ವಿಜಸತ್ತಮ ।
ಅನ್ಯಾಸಾಮಪರಾಧೇನ ಕಿಮರ್ಥಂ ಶಪ್ತವಾನಸಿ ॥೧೮॥

ಋಷಿರುವಾಚ :—

ದುಷ್ಟತಾ ದುಷ್ಟಸಂಸರ್ಗಾದದುಷ್ಟಮಪಿ ಗಚ್ಛತಿ ।
ಸುರಾಬಿನ್ದುನಿಪಾತೇನ ಪಞ್ಚಗವ್ಯಘಟೋ ಯಥಾ ॥೧೯॥

---

೧೬. ಹೀಗಿರಲು ಅಗಸ್ತ್ಯಮುನಿಯ ಸಹೋದರನೂ ಅಗಸ್ತ್ಯ ಎಂಬ ನಾಮಾಂಕನದಿಂದ ಪ್ರಸಿದ್ಧನೂ ಆದ ತಪಸ್ವಿಯು ಕಾಡಿನಲ್ಲಿ ಗಡ್ಡೆ-ಗೆಣಸು ಮುಂತಾದ ವನ್ಯವಸ್ತುವನ್ನು ಹುಡುಕಿಕೊಂಡು ಬಂದು ಸಖಿಯರಿಂದ ಕೋಪಗೊಳಿಸಲ್ಪಟ್ಟು ನನ್ನನ್ನು ಶಪಿಸಿದನು.

೧೭. ನೀನು ಯಾವ ಕಾರಣದಿಂದ ನನ್ನನ್ನು ವೈಶ್ಯನೆಂದು ಕರೆದಿರುವೆಯೋ ಆ ಕಾರಣದಿಂದ ನಾನು ನಿನ್ನನ್ನು ಶಪಿಸುವೆನು. ನೀನು ವೈಶ್ಯಸ್ತ್ರೀಯಾಗುತ್ತೀಯೆ, ಹೀಗೆಂದು ಶಪಿಸಿದ ಮುನಿಯನ್ನು ಸಮಾಧಾನಮಾಡಿ ಪ್ರಾರ್ಥಿಸಿಕೊಂಡೆನು.

೧೮. ಎಲೈ ದ್ವಿಜೋತ್ತಮನೇ ! ನಾನು ನಿನಗೆ ಅಪರಾಧಮಾಡಿರುವುದಿಲ್ಲ. ಬೇರೆಯವರು ಮಾಡಿರುವ ಅಪರಾಧದಿಂದ ನೀನು ನನ್ನನ್ನು ಏಕೆ ಶಪಿಸುತ್ತೀಯೆ ? ಸಖಿಯರು ನಿನ್ನನ್ನು ಹಾಸ್ಯಮಾಡಿದ ಅಪರಾಧಕ್ಕೆ ನನ್ನನ್ನು ಶಪಿಸುವುದು ಉಚಿತವಲ್ಲ.

ಋಷಿಯು ಇಂತೆಂದನು :—

೧೯. ಪಾವನವಾದ ಪಂಚಗವ್ಯವನ್ನು ತುಂಬಿರಿಸಿದ ಬಿಂದಿಗೆಯಲ್ಲಿ ಸುರೆಯ ಬಿಂದುವು ಬಿದ್ದರೆ ಪಂಚಗವ್ಯವು ದುಷ್ಟವಾಗುವುದು. ಅಂತೆಯೇ ದುಷ್ಟರ ಸಹವಾಸದಿಂದ ಅದುಷ್ಟರಲ್ಲಿಯೂ ದೋಷಸಂಪರ್ಕವುಂಟಾಗುವುದು.

ಪ್ರಣಿಪತ್ಯ ಹ್ಯನಿಷ್ಟೋಽಪಿ ಯತ್ತ್ವಯಾಹಂ ಪ್ರಸಾದಿತಃ ।
ತಸ್ಮಾದನುಗ್ರಹಂ ಬಾಲೇ ಶೃಣುಷ್ವ ಚ ಕರೋಮ್ಯಹಮ್ ॥೨೦॥

ವೈಶ್ಯಯೋನೌ ಯದಾ ಜಾತಾ ತ್ವಂ ಪುತ್ರಂ ಬೋಧಯಿಷ್ಯಸಿ ।
ರಾಜ್ಯಾಯ ಜಾತಿಸ್ಮರತಾಂ ತದಾ ತ್ವಂ ಸಮವಾಪ್ಸ್ಯಸಿ ॥೨೧॥

ತತೋ ಭೂಯಃ ಕ್ಷತ್ರಜಾತಿಂ ಪ್ರಾಪ್ತಾ ತ್ವಂ ಪತಿನಾ ಸಹ ।
ದಿವ್ಯಾನವಾಪ್ಸ್ಯಸೇ ಭೋಗಾನ್ ಗಚ್ಛ ಭೀತಿರಪೈತು ತೇ ॥೨೨॥

ಏವಂ ಶಪ್ತಾಸ್ಮಿ ರಾಜೇನ್ದ್ರ ತೇನ ಪೂರ್ವಂ ಮಹರ್ಷಿಣಾ ।
ಪಿತಾ ಚ ಮೇ ಪೂರ್ವಮೇವಂ ಶಪ್ತಃ ಪ್ರಮತಿನಾಭವತ್ ॥೨೩॥

---

೨೦. ಎಲೈ ಬಾಲಕಿಯೆ! ಹೀಗೆ ನಿನಗೆ ಅಹಿತವನ್ನು ಮಾಡಿದವನಾದರೂ ನನ್ನನ್ನು ವಂದಿಸಿ ನೀನು ಶಾಂತಿಯನ್ನು ಪ್ರಾರ್ಥಿಸಿಕೊಂಡಿರುವೆ. ಆದ್ದರಿಂದ ನಿನ್ನಲ್ಲಿ ನಾನು ಅನುಗ್ರಹತೋರುವೆನು. ನನ್ನ ವಚನವನ್ನು ಕೇಳು.

೨೧. ನೀನು ವೈಶ್ಯಯೋನಿಯಲ್ಲಿ ಜನಿಸಿದವಳಾಗಿ ಯಾವ ಸಮಯದಲ್ಲಿ ರಾಜ್ಯವನ್ನು ಪರಿಗ್ರಹಿಸುವಂತೆ ಪುತ್ರನನ್ನು ಬೋಧಿಸುವೆಯೋ ಆಗ ನೀನು ಹಿಂದಿನ ಜನ್ಮಾಂತರ ವೃತ್ತಾಂತವನ್ನು ಸ್ಮರಿಸಿಕೊಳ್ಳುತ್ತೀಯೆ.

೨೨. ಅನಂತರದಲ್ಲಿ ನೀನು ಮತ್ತೆ ಕ್ಷತ್ರಿಯಜಾತಿಯನ್ನು ಹೊಂದಿದವಳಾಗಿ ನಿನ್ನ ಪತಿಯೊಡನೆ ದಿವ್ಯವಾದ ವಿಷಯ ಭೋಗಗಳನ್ನು ಅನುಭವಿಸುತ್ತೀಯೆ. ಇಲ್ಲಿಂದ ನಡೆ; ನೀನು ಭಯಪಡಬೇಡ.

೨೩. ಎಲೈ ರಾಜನೇ! ಪೂರ್ವಕಾಲದಲ್ಲಿ ಅಗಸ್ತ್ಯಮಹರ್ಷಿಯಿಂದ ನಾನು ಈ ರೀತಿಯಾಗಿ ಶಪಿಸಲ್ಪಟ್ಟಿರುವೆನು. ನನ್ನ ತಂದೆಯು ಪ್ರಮತಿಮಹರ್ಷಿಯಿಂದ ಹಿಂದೆ ಶಪಿಸಲ್ಪಟ್ಟವನಾಗಿರುವನು.

ಏವಂ ವೈಶ್ಯೋ ನ ರಾಜಂಸ್ತ್ವಂ ನ ಚ ವೈಶ್ಯಃ ಪಿತಾ ಮಮ ।
ನ ತ್ವಂ ಹಿ ಮಯ್ಯದುಷ್ಟಾಯಾಮದುಷ್ಟೋ ದುಷ್ಯಸೇ ಕಥಮ್ ॥೨೪॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ
ದ್ವಾದಶಾಧಿಕಶತತಮೋಽಧ್ಯಾಯಃ

---

೨೪. ಎಲೈ ಮಹಾರಾಜನೇ! ಈ ಕಾರಣದಿಂದ ನೀನು ವೈಶ್ಯಜಾತಿಯವನಲ್ಲ. ಅಥವಾ ನನ್ನ ತಂದೆಯು ವೈಶ್ಯನಲ್ಲ. ಹೀಗಿರಲು ಅದುಷ್ಟಳಾದ ನನ್ನ ಪಾಣಿಗ್ರಹಣದಿಂದ ನೀನು ದುಷ್ಟನಾಗುವುದು ಹೇಗೆ?

ಮಾರ್ಕಂಡೇಯ ಮಹಾಪುರಾಣದಲ್ಲಿ ನೂರ ಹನ್ನೆರಡನೆಯ ಅಧ್ಯಾಯವು
ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ತ್ರಯೋದಶಾಧಿಕಶತತಮೋಽಧ್ಯಾಯಃ

(ಭಲನ್ದನ-ವತ್ಸಪ್ರೀಚರಿತಮ್)

ಮಾರ್ಕಣ್ಡೇಯ ಉವಾಚ:—

ಇತಿ ತಸ್ಯಾ ವಚಃ ಶ್ರುತ್ವಾ ಪುತ್ರಸ್ಯ ಸ ಚ ಪಾರ್ಥಿವಃ ।
ಪುನಃ ಪ್ರೋವಾಚ ಧರ್ಮಜ್ಞಸ್ತಾಂ ಪತ್ನೀಂ ತನಯಂ ತಥಾ ॥೧॥

ಯನ್ಮಯಾ ಪಿತುರಾದೇಶಾತ್ತ್ಯಕ್ತಂ ರಾಜ್ಯಂ ನ ತತ್ಪುನಃ ।
ಗ್ರಹೀಷ್ಯಾಮಿ ವೃಥೋಕ್ತೇನ ಕಿಮಾತ್ಮಾ ಕ್ಲಿಶ್ಯತೇ ತ್ವಯಾ ॥೨॥

ನೂರ ಹದಿಮೂರನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಇಂತೆಂದನು :—

೧. ರಾಜನಾದ ನಾಭಾಗನು ತನ್ನ ಪತ್ನಿಯ ಮತ್ತು ಪುತ್ರನಾದ ಭಲಂದನನ ವಚನವನ್ನು ಕೇಳಿ ಧರ್ಮರಹಸ್ಯವನ್ನು ಅರಿತ ತಾನು ಮತ್ತೆ ಪತ್ನೀ-ಪುತ್ರರನ್ನು ಕುರಿತು ಹೇಳಿದನು.

೨. ಜನಕನ ಆದೇಶದಂತೆ ಯಾವ ರಾಜ್ಯವನ್ನು ನಾನು ತ್ಯಾಗಮಾಡಿರು-ವೆನೊ; ಆ ರಾಜ್ಯವನ್ನು ಮತ್ತೆ ನಾನು ಸ್ವೀಕರಿಸುವುದಿಲ್ಲ. ಹೀಗಿರಲು ಉಪ-ಯೋಗವಿಲ್ಲದ ಮಾತನ್ನು ಆಡಿ ನೀನು ನಿನ್ನ ಆತ್ಮಕ್ಕೆ ಏಕೆ ಕ್ಲೇಶವನ್ನುಂಟು-ಮಾಡಿಕೊಳ್ಳುತ್ತೀಯೆ?

ಅಹಂ ತೇ ಸಮ್ಪ್ರದಾಸ್ಯಾಮಿ ಕರಂ ವೈಶ್ಯವ್ರತೇ ಸ್ಥಿತಃ ।
ಭುಙ್ಕ್ಷ್ವ ರಾಜ್ಯಮಶೇಷಂ ತ್ವಮಿಚ್ಛಯಾ ವಾ ಪರಿತ್ಯಜ ॥೩॥

ಇತ್ಯುಕ್ತಃ ಸ ತದಾ ಪಿತ್ರಾ ರಾಜಪುತ್ರೋ ಭಲನ್ದನಃ ।
ಚಕಾರ ರಾಜ್ಯಂ ಧರ್ಮೇಣ ತದ್ವದ್ದಾರಪರಿಗ್ರಹಮ್ ॥೪॥

ಅವ್ಯಾಹತಂ ತಸ್ಯ ಚಕ್ರಂ ಪೃಥಿವ್ಯಾಮಭವದ್ದ್ವಿಜ ।
ನ ಚಾಧರ್ಮೇ ಮನೋ ಭೂಪಾಸ್ತಸ್ಯ ಸರ್ವೇಽಭವನ್ವಶೇ ॥೫॥

ತೇನೇಷ್ಟೋ ವಿಧಿವದ್ಯಜ್ಞಃ ಸಮ್ಯಕ್ಶಾಸ್ತಿ ವಸುನ್ಧರಾಮ್ ।
ಸ ಏವೈಕೋಽಭವದ್ಭರ್ತಾ ಪೃಥಿವ್ಯಾಮರಿಶಾಸನಃ ॥೬॥

---

೩. ನಾನು ವೈಶ್ಯಜಾತಿಯ ಮಾನವನ ಕರ್ತವ್ಯಗಳನ್ನು ಮಾಡುತ್ತಲಿದ್ದು ನಿನಗೆ ರಾಜದೇಯವಾದ ಕಪ್ಪ-ಕಂದಾಯಗಳನ್ನು ಕೊಡುವೆನು. ನೀನು ಅಶೇಷವಾದ ರಾಜ್ಯವನ್ನು ಭುಂಜಿಸು, ಅಥವಾ ರಾಜ್ಯತ್ಯಾಗದ ಇಷ್ಟವಿದ್ದರೆ ಅದರಂತೆ ತ್ಯಾಗಮಾಡು.

೪. ರಾಜಪುತ್ರನಾದ ಆ ಭಲಂದನನು ತಂದೆಯಿಂದ ಆ ಸಮಯದಲ್ಲಿ ಹೀಗೆ ಹೇಳಲ್ಪಟ್ಟವನಾಗಿ ಧರ್ಮದಿಂದ ರಾಜ್ಯವನ್ನು ಪಾಲಿಸಿದನು ಮತ್ತು ಪತ್ನೀಪಾಣಿಗ್ರಹಣವನ್ನು ಮಾಡಿಕೊಂಡನು.

೫. ದ್ವಿಜನಾದ ಕ್ರೌಷ್ಟುಕಿಯೇ! ರಾಜ್ಯಾಭಿಷಿಕ್ತನಾದ ಭಲಂದನನ ಚಕ್ರವು ಪೃಥಿವಿಯಲ್ಲಿ ಅಕುಂಠಿತವಾಗಿದ್ದಿತು. ಅಧರ್ಮದಲ್ಲಿ ಯಾರಿಗೂ ಪ್ರವೃತ್ತಿಯಿರಲಿಲ್ಲ ಮತ್ತು ಎಲ್ಲ ರಾಜರು ಅವನ ವಶವರ್ತಿಗಳಾಗಿದ್ದರು.

೬. ಮತ್ತು ಅವನಿಂದ ವಿಧಿವತ್ತಾಗಿ ಯಜ್ಞವು ಆಚರಿಸಲ್ಪಟ್ಟಿತು. ಅವನು ಭೂಮಿಯನ್ನು ಉತ್ತಮರೀತಿಯಲ್ಲಿ ಪಾಲಿಸಿದನು. ಸಕಲ ಭೂಮಂಡಲದಲ್ಲಿ ಶತ್ರುಗಳನ್ನು ಶಾಸನಮಾಡುವ ಭಲಂದನನು ಏಕಮಾತ್ರಪ್ರಭುವಾಗಿದ್ದನು.

ಅಜಾಯತ ಸುತಸ್ತಸ್ಯ ವತ್ಸಪ್ರೀತಿಸ್ತು ನಾಮತಃ ।
ಪಿತಾತಿಶಯಿತೋ ಯೇನ ಗುಣೌಘೇನ ಮಹಾತ್ಮನಾ ॥೭॥

ತಸ್ಯಾಪಿ ಭಾರ್ಯಾ ಸೌನನ್ದಾ ವಿದೂರಥಸುತಾಭವತ್ ॥೮॥

ಪತಿವ್ರತಾ ಮಹಾಭಾಗಾ ಸಾ ಪ್ರಾಪ್ತಾ ತೇನ ಶೌರ್ಯತಃ ।
ಹತ್ವಾ ಪುರನ್ದರರಿಪುಂ ಕುಜೃಮ್ಭಂ ದಿತಿಜೇಶ್ವರಮ್ ॥೯॥

ಕ್ರೌಷ್ಟುಕಿರುವಾಚ :—

ಭಗವಂಸ್ತೇನ ಸಮ್ಪ್ರಾಪ್ತಾ ಕುಜೃಮ್ಭನಿಧನಾತ್ಕಥಮ್ ।
ಏತದಾಖ್ಯಾನಮಾಖ್ಯಾಹಿ ಪ್ರಸನ್ನೇನಾನ್ತರಾತ್ಮನಾ ॥೧೦॥

---

೭. ಆವನಿಗೆ ವತ್ಸಪ್ರೀತಿಯೆಂಬ ನಾಮಾಂಕನದಿಂದ ಪ್ರಸಿದ್ಧನಾಗುವ ಒಬ್ಬ ಪುತ್ರನು ಜನಿಸಿದನು. ಮಹಾತ್ಮನೂ ಮತ್ತು ಸಕಲ ಗುಣರಾಜಿತನೂ ಆದ ಆ ವತ್ಸಪ್ರೀತಿಯಿಂದ ತಂದೆಯು ಮೀರಿಸಲ್ಪಡುವಂತೆ ಇದ್ದನು.

೮. ಹೀಗೆ ಗುಣಗಳಿಂದ ಗಣ್ಯನಾಗಿ ರಾಜಿಸುವ ವತ್ಸಪ್ರೀತಿಗೆ ವಿದೂರಥ ಎಂಬ ರಾಜನ ಪುತ್ರಿಯಾದ ಸೌನಂದಾ ಎಂಬುವಳು ಭಾರ್ಯೆಯಾಗಿದ್ದಳು.

೯. ಮಹಾಮಹಿಮೆಯುಳ್ಳವಳೂ ಮತ್ತು ಪತಿವ್ರತೆಯೂ ಆದ ಸೌನಂದೆಯು ಆ ವತ್ಸಪ್ರೀತಿಯಿಂದ ದೇವೇಂದ್ರನಿಗೆ ಶತ್ರುವೂ ರಾಕ್ಷಸೇಶ್ವರನೂ ಆದ ಕುಜೃಂಭ ಎಂಬ ಅಸುರನನ್ನು ವಧಿಸಿ ಶೌರ್ಯದಿಂದ ಹೊಂದಲ್ಪಟ್ಟಿದ್ದಳು.

ಕ್ರೌಷ್ಟುಕಿಯು ಹೀಗೆಂದನು :—

೧೦. ಪೂಜ್ಯನಾದ ಮಾರ್ಕಂಡೇಯ ಮುನಿಯೇ! ವತ್ಸಪ್ರೀತಿಯು ಕುಜೃಂಭಾಸುರನನ್ನು ಕೊಂದು ಸೌನಂದೆಯನ್ನು ಹೇಗೆ ಹೊಂದಿದನು? ನೀನು ನನ್ನಲ್ಲಿ ಪ್ರಸನ್ನವಾದ ಅಂತಃಕರಣದಿಂದ ಈ ಆಖ್ಯಾನವನ್ನು ಉಪದೇಶಿಸಬೇಕು.

ಮಾರ್ಕಣ್ಡೇಯ ಉವಾಚ :-

ವಿದೂರಥೋ ನಾಮ ನೃಪಃ ಖ್ಯಾತಕೀರ್ತಿರಭೂದ್ಭುವಿ ।
ತಸ್ಯ ಪುತ್ರದ್ವಯಂ ಜಾತಂ ಸುನೀತಿಃ ಸುಮತಿಸ್ತಥಾ ॥೧೧॥

ಏಕದಾ ತು ವನಂ ಯಾತೋ ಮೃಗಯಾಂ ಸ ವಿದೂರಥಃ ।
ದದರ್ಶ ಗರ್ತಂ ಸುಮಹದ್ಭೂಮೇರ್ಮುಖಮಿವೋದ್ಗತಮ್ ॥೧೨॥

ತಂ ದೃಷ್ಟ್ವಾ ಚಿನ್ತಯಾಮಾಸ ಕಿಮೇತದಿತಿ ಭೈರವಮ್ ।
ಪಾತಾಲವಿವರಂ ಮನ್ಯೇ ನೈತದ್ಭೂಮೇಶ್ಚಿರನ್ತನಮ್ ॥೧೩॥

ಚಿನ್ತಯನ್ನಿತಿ ತತ್ರಾಸೌ ದದರ್ಶ ವಿಜನೇ ವನೇ ।
ಬ್ರಾಹ್ಮಣಂ ಸುವ್ರತಂ ನಾಮ ತಪಸ್ವಿನಮುಪಾಗತಮ್ ॥೧೪॥

ಮಾರ್ಕಂಡೇಯ ಮುನಿಯು ಇಂತೆಂದನು :—

೧೧. ಭೂಮಿಯಲ್ಲಿ ಪ್ರಖ್ಯಾತವಾದ ಕೀರ್ತಿಯುಳ್ಳ ವಿದೂರಥನೆಂಬ ನಾಮಾಂಕನವುಳ್ಳ ಒಬ್ಬ ರಾಜನಿದ್ದನು. ಅವನಿಗೆ ಸುನೀತಿ, ಸುಮತಿ ಎಂಬ ನಾಮಾಂಕಿತರಾದ ಇಬ್ಬರು ಪುತ್ರರಿದ್ದರು.

೧೨. ಒಂದು ಸಮಯದಲ್ಲಿ ವಿದೂರಥ ರಾಜನು ಬೇಟೆಗಾಗಿ ಅರಣ್ಯಕ್ಕೆ ತೆರಳಿದನು. ಅಲ್ಲಿ ಭೂಮಿದೇವಿಯ ತೆರೆದ ಮುಖವಂತಿರುವ ಒಂದು ದೊಡ್ಡದಾದ ಹಳ್ಳವನ್ನು ರಾಜನು ಕಂಡನು.

೧೩. ಆ ರಾಜನು ಬಿಲವನ್ನು ನೋಡಿ "ಇದೇನಿರಬಹುದು" ಎಂದು ಚಿಂತಿಸತೊಡಗಿದನು. ಅತಿಭಯಂಕರವಾದ ಈ ಹಳ್ಳವು ಪಾತಾಳಲೋಕದ ದ್ವಾರವೆಂದು ಭಾವಿಸುವಂತೆ ಇದೆ. ಇದು ಪುರಾತನವಾದ ಭೂಮಿಯ ಹಳ್ಳವಲ್ಲ.

೧೪. ನಿರ್ಜನವಾದ ಅರಣ್ಯದಲ್ಲಿ ಹೀಗೆ ಚಿಂತಿಸುತ್ತ ಭ್ರಮಿಸುತ್ತಿದ್ದ ವಿದೂರಥನು ಅಲ್ಲಿಗೆ ಬಂದ ಸುವ್ರತನೆಂಬ ನಾಮಾಂಕಿತನಾದ ತಪಸ್ವಿ ಬ್ರಾಹ್ಮಣನೊಬ್ಬನನ್ನು ಕಂಡನು.

ಸ ತಂ ಪಪ್ರಚ್ಛ ಚ ನೃಪಃ ಕಿಮೇತದಿತಿ ವಿಸ್ಮಿತಃ ।
ಅತಿಗಮ್ಭೀರಮವನೇರ್ದರ್ಶಿತಾನ್ತರ್ಗತೋದರಮ್ ॥೧೫॥

ಋಷಿರುವಾಚ :—

ಕಿಂ ನ ವೇತ್ಸಿ ಮಹೀಪಾಲ ವಾಗರ್ಥಜ್ಞಸ್ತ್ವಂ ಹಿ ಮೇ ಮತಃ ।
ಜ್ಞೇಯಂ ಸರ್ವಂ ನರೇನ್ದ್ರೇಣ ವರ್ತತೇ ಯನ್ಮಹೀತಲೇ ॥೧೬॥

ದಾನವಃ ಸುಮಹಾವೀರ್ಯೋ ವಸತ್ಯುಗ್ರೋ ರಸಾತಲೇ ।
ಸ ಜೃಮ್ಭಯತಿ ಯತ್ಪೃಥ್ವೀಂ ಕುಜೃಮ್ಭಃ ಪ್ರೋಚ್ಯತೇ ತತಃ ॥೧೭॥

ಕ್ರಿಯತೇ ತೇನ ಯತ್ಕಿಞ್ಚಿದ್ರತ್ನಭೂತಂ ಮಹೀತಲೇ ।
ತ್ರಿದಿವೇ ವಾ ನರಪತೇ ತಂ ಕಥಂ ವೇತ್ತಿ ನೋ ಭವಾನ್ ॥೧೮॥

---

೧೫. ಆಗ ವಿಸ್ಮಯಗೊಂಡ ವಿದೂರಥ ರಾಜನು ಸ್ಪಷ್ಟವಾಗಿ ಒಳ ಭಾಗಗಳನ್ನು ತೋರ್ಪಡಿಸುವ ಅತಿ ಗಂಭೀರವಾದ ಭೂಮಿಬಿಲದ ವಿಷಯದಲ್ಲಿ "ಇದೇನು?" ಎಂದು ಆ ಮುನಿಯನ್ನು ಪ್ರಶ್ನಿಸಿದನು.

ಸುವ್ರತ ಮುನಿಯು ಹೇಳಿದನು :—

೧೬. ರಾಜನೇ! ಈ ಬಿಲವು ಏಕೆ ನಿನಗೆ ತಿಳಿಯದು? ನೀನು ಎಲ್ಲ ವಾಕ್ ಮತ್ತು ಅರ್ಥಗಳನ್ನು ತಿಳಿದವನೆಂದು ನಾನು ಭಾವಿಸಿರುವೆನು. ನರೇಂದ್ರನು ಭೂಮಿಯಲ್ಲಿರುವ ಎಲ್ಲ ವಿಷಯವನ್ನೂ ತಿಳಿದಿರಬೇಕಲ್ಲವೇ?

೧೭. ಪಾತಾಲ ಲೋಕದಲ್ಲಿ ಮಹತ್ತಾದ ವೀರ್ಯದಿಂದ ಕೂಡಿದವನೂ, ಮತ್ತು ಉಗ್ರರೂಪಿಯೂ ಆದ ಒಬ್ಬ ದಾನವನು ವಾಸಮಾಡಿಕೊಂಡಿರುವನು. ಅವನು ಭೂಮಿಯನ್ನು ಹಳ್ಳಮಾಡಿ ಬಾಯಿತೆರಸುವನಾದ್ದರಿಂದ ಕುಜೃಂಭನೆಂದು ಅನ್ವರ್ಥನಾಮಾಂಕಿತನಾಗಿರುವನು.

೧೮. ಆ ಕುಜೃಂಭಾಸುರನಿಂದ ಭೂಮಿಯಲ್ಲಿ ಅಥವಾ ದೇವಲೋಕದಲ್ಲಿ ಯತ್ಕಿಂಚಿತ್ತಾದ ವಸ್ತುವು ರತ್ನದಂತೆ ಮಾಡಲ್ಪಡುವುದು. ರಾಜನೇ! ಅಂತಹ ಕುಜೃಂಭಾಸುರನನ್ನು ನೀನು ಏಕೆ ತಿಳಿದಿಲ್ಲ?

ಸುನನ್ದಂ ನಾಮ ಮುಸಲಂ ತ್ವಷ್ಟ್ರಾ ಯನ್ನಿರ್ಮಿತಂ ಪುರಾ ।
ತಜ್ಜಹಾರ ಸುದುಷ್ಟಾತ್ಮಾ ತೇನ ಹನ್ತಿ ರಣೇ ರಿಪೂನ್ ॥೧೯॥

ಪಾತಾಲಾನ್ತರ್ಗತಸ್ತೇನ ಭಿನತ್ತಿ ವಸುಧಾಮಿಮಾಮ್ ।
ತತೋಽಸುರಾಣಾಂ ಸರ್ವೇಷಾಂ ದ್ವಾರಾಣಿ ಕುರುತೇಽಸುರಃ ॥೨೦॥

ತೇನ ಭಿನ್ನಾತ್ರ ವಸುಧಾ ಸುನನ್ದಮುಸಲೇನ ತು ।
ಭೋಕ್ಷ್ಯತೇ ವಸುಧಾಮೇತಾಂ ತಮಜಿತ್ವಾ ಕಥಂ ಭವಾನ್ ॥೨೧॥

ಯಜ್ಞಾನ್ ವಿಧ್ವಂಸಯತ್ಯುಗ್ರೋ ದೇವಾನಾಮುಪರೋಧಕಃ ।
ಆಪ್ಯಾಯಯತಿ ದೈತೇಯಾನ್ ಸ ಬಲೀ ಮುಸಲಾಯುಧಃ ॥೨೨॥

---

೧೯. ಪೂರ್ವಕಾಲದಲ್ಲಿ ತ್ವಷ್ಟ್ರ ಪ್ರಜಾಪತಿಯು ಸುನಂದ ಎಂಬ ಮುಸಲಾಯುಧವನ್ನು ನಿರ್ಮಿಸಿದ್ದನು. ದುಷ್ಟಾತ್ಮನಾದ ಕುಜೃಂಭ ರಾಕ್ಷಸನು ಆ ಮುಸಲಾಯುಧವನ್ನು ಅಪಹರಿಸಿದನು. ಅದರಿಂದ ಯುದ್ಧದಲ್ಲಿ ಶತ್ರುಗಳನ್ನು ಸಂಹರಿಸುವನು.

೨೦. ಪಾತಾಲಲೋಕದ ಒಳಭಾಗದಲ್ಲಿದ್ದು ಆ ರಾಕ್ಷಸನು ಸುನಂದ ಮುಸಲದಿಂದ ಈ ಭೂಮಿಯನ್ನು ಭೇದಿಸುತ್ತಾನೆ. ಹಾಗೆ ಭೇದಿಸುವುದರಿಂದ ಎಲ್ಲ ರಾಕ್ಷಸರಿಗೆ ಪಾತಾಲದಿಂದ ಹೊರಗೆ ಬರಲು ದ್ವಾರಗಳನ್ನು ನಿರ್ಮಿಸುತ್ತಾನೆ.

೨೧. ಆ ಕುಜೃಂಭ ದಾನವನಿಂದ ಈ ಸ್ಥಳದಲ್ಲಿ ತನ್ನ ಸುನಂದ ಮುಸಲದಿಂದ ಭೂಮಿಯು ಭೇದಿಸಲ್ಪಟ್ಟಿದೆ. ನೀನು ಆ ರಾಕ್ಷಸನನ್ನು ವಧಿಸದೇ ಈ ಭೂಮಿಯನ್ನು ಹೇಗೆ ಪಾಲಿಸುತ್ತೀಯೆ ?

೨೨. ಮಹಾ ಬಲಿಷ್ಠನೂ, ಉಗ್ರರೂಪನೂ, ಮುಸಲಾಯುಧವನ್ನು ಧರಿಸಿದವನೂ ಆದ ಕುಜೃಂಭನು ದೇವತೆಗಳಿಗೆ ಪೀಡಾಕರನಾಗಿ ಯಜ್ಞಗಳನ್ನು ಭಂಗಗೊಳಿಸುವನು. ಮತ್ತು ಸಮಸ್ತ ದೈತ್ಯರನ್ನು ಯಜ್ಞಭಾಗಗಳಿಂದ ತೃಪ್ತಿಗೊಳಿಸುವನು.

ಯದ್ಯರಿಂ ಘಾತಯಸ್ಯೇನಂ ಪಾತಾಲಾನ್ತರಗೋಚರಮ್ ।
ತತಃ ಸಮಸ್ತವಸುಧಾಪತಿಸ್ತ್ವಂ ಪರಮೇಶ್ವರಃ ॥೨೩॥

ಮುಸಲಂ ತಸ್ಯ ಬಲಿನಃ ಸೌನನ್ದಂ ಪ್ರೋಚ್ಯತೇ ಜನೈಃ ।
ತಥಾ ಬಲಾಬಲಂ ಚೈವ ತಂ ವದನ್ತಿ ವಿಚಕ್ಷಣಾಃ ॥೨೪॥

ತತ್ತು ನಿರ್ವೀರ್ಯತಾಂ ಯಾತಿ ಸಂಸ್ಪೃಷ್ಟಂ ಯೋಷಿತಾ ನೃಪ ।
ತಸ್ಮಿನ್ದಿನೇ ದ್ವಿತೀಯೇಽಹ್ನಿ ವೀರ್ಯವತ್ತದುದೀರ್ಯತೇ ॥೨೫॥

ನ ಸ ವೇತ್ತಿ ದುರಾಚಾರಃ ಪ್ರಭಾವಂ ಮುಸಲಸ್ಯ ತಮ್ ।
ಯೋಷಿತ್ಕರಾಗ್ರಸಂಸ್ಪರ್ಶೇ ದೋಷಂ ವೀರ್ಯವಿಶಾತನಮ್ ॥೨೬॥

ಏವಂ ತಸ್ಯ ಬಲಂ ಭೂಪ ದಾನವಸ್ಯ ದುರಾತ್ಮನಃ ।
ಮುಸಲಸ್ಯ ಚ ತೇ ಪ್ರೋಕ್ತಂ ಯದ್ಯುಕ್ತಂ ತತ್ಸಮಾಚರ ॥೨೭॥

---

೨೩. ನೀನು ಪಾತಾಲಲೋಕದೊಳಗೆ ವಾಸಮಾಡುವ ಶತ್ರುವಾದ ಕುಜೃಂಭ ರಾಕ್ಷಸನನ್ನು ವಧಿಸುವುದಾದರೆ ಆಗ ಅಖಂಡ ಭೂಮಂಡಲವನ್ನು ಆಳುವ ಪರಮೇಶ್ವರನೇ ಆಗುತ್ತೀಯೆ.

೨೪. ಬಲಶಾಲಿಯಾದ ಆ ಕುಜೃಂಭನ ಮುಸಲಾಯುಧವನ್ನು ಸೌನಂದವೆಂದು ಜನರು ಕರೆಯುವರು. ಮತ್ತು ಪ್ರಾಜ್ಞರು ಆ ಮುಸಲದಲ್ಲಿರುವ ಬಲಾಬಲಗಳನ್ನು ತಿಳಿದು ಹೀಗೆ ಹೇಳುತ್ತಿರುವರು.

೨೫. ರಾಜನೇ! ಆ ಸೌನಂದ ಮುಸಲವು ಸ್ತ್ರೀಸ್ಪರ್ಶವನ್ನು ಹೊಂದಿದರೆ ಹಾಗೆ ಸ್ಪರ್ಶವಾದ ಒಂದು ದಿನ ಮಾತ್ರ ನಿರ್ವೀರ್ಯವಾಗುವುದು. ಮಾರನೆಯ ದಿನ ಮತ್ತೆ ಆ ಮುಸಲವು ವೀರ್ಯವತ್ತಾಗುವುದು, ಎಂದು ಹೇಳಲ್ಪಟ್ಟಿದೆ.

೨೬. ದುರಾಚಾರಪರನಾದ ಕುಜೃಂಭದಾನವನು ಸ್ತ್ರೀಯ ಹಸ್ತಾಗ್ರ ಸ್ಪರ್ಶದಿಂದ ವೀರ್ಯವು ಕುಂದಿಹೋಗುವಂತೆ ಇರುವ ದೋಷದಿಂದ ಕೂಡಿದ ಮುಸಲದಲ್ಲಿದ್ದ ಪ್ರಭಾವವನ್ನು ತಿಳಿದಿರುವುದಿಲ್ಲ.

೨೭. ವಿದೂರಥರಾಜನೇ! ದುರಾತ್ಮನಾದ ಕುಜೃಂಭದಾನವನ ಬಲವನ್ನೂ ಮತ್ತು ಸೌನಂದ ಮುಸಲದಲ್ಲಿದ್ದ ಪ್ರಭಾವವನ್ನೂ ನಾನು ನಿನಗೆ ಹೇಳಿರುವೆನು. ಇನ್ನು ಮುಂದೆ ನಿನಗೆ ಯಾವುದು ಯೋಗ್ಯವೆನಿಸುವುದೋ ಅದನ್ನು ಮಾಡು

ಆಸನ್ನಮೇತದ್ಭುವತಃ ಪುರಸ್ಯ ಪೃಥಿವೀಪತೇ ।
ಕೃತಂ ತೇನ ಮಹಾಖಿಲನ್ಧ್ರಂ ನಿಶ್ಚಿನ್ತಃ ಕಿಂ ಭವಾನ್ ವೃಥಾ ॥೨೮॥

ಇತ್ಯುಕ್ತ್ವಾ ತು ಗತೇ ತಸ್ಮಿನ್ಸ್ವಪುರಂ ಗತ್ವಾ ಮಹೀಪತಿಃ ।
ಮನ್ತ್ರಯಾಮಾಸ ಮನ್ತ್ರಜ್ಞೈಃ ಪುರಮಧ್ಯೇ ತು ಮನ್ತ್ರಿಭಿಃ ॥೨೯॥

ಯಥಾಶ್ರುತಮಶೇಷಂ ತತ್ಕಥಯಾಮಾಸ ಮನ್ತ್ರಿಣಾಮ್ ।
ಮುಸಲಸ್ಯ ಪ್ರಭಾವಂ ಚ ವೀರ್ಯಶಾತನಮೇವ ಚ ॥೩೦॥

ತಂ ಮನ್ತ್ರಂ ಕ್ರಿಯಮಾಣಂ ತು ಮನ್ತ್ರಿಭಿಸ್ತೇನ ಭೂಭೃತಾ ।
ತತ್ಪಾರ್ಶ್ವವರ್ತಿನೀ ಕನ್ಯಾ ಶುಶ್ರಾವಾಥ ಮುದಾವತೀ ॥೩೧॥

ತತಃ ಕತಿಪಯಾಹೇ ತು ತಾಂ ಕನ್ಯಾಂ ವಯಸಾನ್ವಿತಾಮ್ ।
ಜಹಾರೋಪವನಾದ್ದೈತ್ಯಃ ಕುಜೃಮ್ಭಃ ಸ ಸಖೀವೃತಾಮ್ ॥೩೨॥

---

೨೮. ಎಲೈ ರಾಜನೇ! ಈ ಭೂಮಿಬಿಲವು ನಿನ್ನ ನಗರಕ್ಕೆ ಸಮೀಪದ- ಲ್ಲಿರುವುದು. ಈ ಮಹಾರಂಧ್ರವು ಆ ದಾನವನಿಂದ ಮಾಡಲ್ಪಟ್ಟಿದೆ. ಹೀಗಿರಲು ನೀನೇಕೆ ವ್ಯರ್ಥವಾಗಿ ನಿಶ್ಚಿಂತನಾಗಿದ್ದೀಯೆ?

೨೯. ಸುವ್ರತಮುನಿಯು ಹೀಗೆಂದು ಹೇಳಿ ಹೊರಟುಹೋಗಲಾಗಿ ಇತ್ತ ಆ ವಿದೂರಥರಾಜನು ನಗರಕ್ಕೆ ಹೋಗಿ ನಗರದ ಮಧ್ಯದಲ್ಲಿ ಮಂತ್ರ- ವೇತ್ತರಾದ ಮಂತ್ರಿಜನರೊಂದಿಗೆ ಮಂತ್ರಾಲೋಚನೆಯನ್ನು ನಡೆಸಿದನು.

೩೦. ಆ ಸಮಯದಲ್ಲಿ ರಾಜನು ಮಂತ್ರಿಗಳಿಗೆ ತಾನು ಕೇಳಿದ ಎಲ್ಲ ಅಂಶಗಳನ್ನು ಹೇಳಿದನು. ಅವುಗಳಲ್ಲಿ ಮುಸಲಾಯುಧದ ಪ್ರಭಾವ ಮತ್ತು ಅದಕ್ಕೆ ಸಂಭವಿಸುವ ನಿರ್ವೀರ್ಯತೆ ಇವುಗಳನ್ನೂ ತಿಳಿಸಿದನು.

೩೧. ಹೀಗೆ ವಿದೂರಥರಾಜನಿಂದ ಮಂತ್ರಿಗಳೊಡಗೂಡಿ ನಡೆಯಿಸ- ಲ್ಪಡುತ್ತಿರುವ ಮಂತ್ರಾಲೋಚನೆಯನ್ನು ಆ ಸಮಯದಲ್ಲಿ ರಾಜನ ಪಾರ್ಶ್ವದಲ್ಲಿದ್ದ ಮುದಾವತಿಯೆಂಬ ಕನ್ಯೆಯು ಕೇಳಿದಳು.

೩೨. ತರುವಾಯ ಕೆಲವು ದಿವಸಗಳು ಕಳೆದ ಮೇಲೆ ಯೌವನವತಿ- ಯಾದ ಆ ಕನ್ಯೆಯು ಉದ್ಯಾನವನದಲ್ಲಿ ಸಖಿಯರೊಡನೆ ವಿಹರಿಸುತ್ತಿದ್ದಾಗ ಆ ಕುಜೃಂಭದಾನವನು ಆಕೆಯನ್ನು ಅಪಹರಿಸಿದನು.

ತಚ್ಛ್ರುತ್ವಾ ಸ ಮಹೀಪಾಲಃ ಕ್ರೋಧಪರ್ಯಾಕುಲೇಕ್ಷಣಃ ।
ಪುತ್ರಾವುವಾಚ ತ್ವರಿತಂ ಗಚ್ಛತಂ ವನಕೋವಿದೌ ॥೩೩॥

ನಿರ್ವಿನ್ಧ್ಯಾಯಾಸ್ತಟೇ ಗರ್ತಸ್ತೇನ ಗತ್ವಾ ರಸಾತಲಮ್ ।
ಸ ಹನ್ಯತಾಂ ಯೋಽಪಹರ್ತಾ ಮುದಾವತ್ಯಾಃ ಸುದುರ್ಮತಿಃ ॥೩೪॥

ಮಾರ್ಕಣ್ಡೇಯ ಉವಾಚ :—

ತತಸ್ತೌ ತತ್ಸುತೌ ಪ್ರಾಪ್ಯ ತಂ ಗರ್ತಂ ತತ್ಪದಾನುಗೌ ।
ಯುಯುಧಾತೇ ಕುಜೃಮ್ಭೇಣ ಸ್ವಸೈನ್ಯೇನಾತಿಕೋಪಿತೌ ॥೩೫॥

ತತಃ ಪರಿಘನಿಸ್ತ್ರಿಂಶಶಕ್ತಿಶೂಲಪರಶ್ವಧೈಃ ।
ಬಾಣೈಶ್ಚಾವಿರತಂ ಯುದ್ಧಂ ತೇಷಾಮಾಸೀತ್ಸುದಾರುಣಮ್ ॥೩೬॥

---

೩೩. ಆ ಸಮಾಚಾರವನ್ನು ಕೇಳಿದ ವಿದೂರಥರಾಜನು ಕೋಪಾವೇಶದಿಂದ ವಿಕಾರವಾದ ದೃಷ್ಟಿಯುಳ್ಳವನಾಗಿ ವನಪ್ರದೇಶಗಳನ್ನು ಅರಿತ ತನ್ನ ಪುತ್ರರನ್ನು ಕುರಿತು ಬೇಗ ಹೊರಡಿರಿ ಎಂದು ಆಜ್ಞಾಪಿಸಿದನು.

೩೪. ನಿರ್ವಿಂಧ್ಯಾನದಿಯ ತೀರದಲ್ಲಿ ಒಂದು ಭಾರಿಯಾದ ಹಳ್ಳವಿದೆ. ಆ ಹಳ್ಳದಿಂದ ಇಳಿದು ಪಾತಾಳಕ್ಕೆ ಹೋಗಿ ಮುದಾವತಿಯನ್ನು ಅಪಹರಿಸಿದ ಅವಿವೇಕಿಯಾದ ಆ ಕುಜೃಂಭದಾನವನು ನಿಮ್ಮಿಂದ ವಧಿಸಲ್ಪಡಬೇಕು ಹೀಗೆಂದು ಆಜ್ಞೆಯಿತ್ತನು.

ಮಾರ್ಕಂಡೇಯ ಮುನಿಯು ಹೇಳಿದನು :—

೩೫. ತರುವಾಯ ಅತಿಯಾಗಿ ಕೋಪಗೊಂಡ ಆ ರಾಜಪುತ್ರರು ಸೈನ್ಯಸಮೇತರಾಗಿ ಆ ಬಿಲದ ಬಳಿಗೆ ಹೋಗಿ ಮುಂದೆ ಆ ದಾನವನ ಪದವನು ಅನ್ವೇಷಣ ಮಾಡುತ್ತ ಬಿಲದೊಳಗಿನಿಂದ ರಾಕ್ಷಸನ್ನು ಹೊಂದಿ ಅವನೊಡನೆ ಯುದ್ಧಮಾಡಿದರು.

೩೬. ಆಗ ರಾಜಪುತ್ರರು ಮತ್ತು ದಾನವ ಇವರಿಗೆ ಪರಿಘ, ಶಕ್ತಿ, ಶಸ್ತ್ರಾಯುಧ, ಶೂಲ, ಕೊಡಲಿ ಮತ್ತು ಬಾಣ ಮುಂತಾದ ಬಗೆಬಗೆಯ ಆಯುಧಗಳನ್ನು ಉಪಯೋಗಿಸುತ್ತ ಭಯಂಕರವಾದ ಯುದ್ಧವು ಸಂತತವಾಗಿ ನಡೆಯಿತು.

ತತೋ ಮಾಯಾಬಲವತಾ ತೇನ ದೈತ್ಯೇನ ತಾವುಭೌ ।
ರಾಜಪುತ್ರೌ ರಣೇ ಬದ್ಧೌ ನಿಹತಾಶೇಷಸೈನಿಕೌ ॥೩೭॥

ತಚ್ಛ್ರುತ್ವಾ ಸ ಮಹೀಪಾಲಃ ಪ್ರಾಹೇದಂ ಸರ್ವಸೈನಿಕಾನ್ ।
ಬದ್ಧಪುತ್ರಃ ಪರಾಮಾರ್ತಿಮುಪೇತೋ ಮುನಿಸತ್ತಮ ॥೩೮॥

ಯಸ್ತಂ ನಿಹತ್ಯ ದೈತೇಯಂ ಮೋಚಯಿಷ್ಯತಿ ಮೇ ಸುತಾಮ್ ।
ತಸ್ಯಾಹಂ ಸಮ್ಪ್ರದಾಸ್ಯಾಮಿ ತಾಮೇವಾಯತಲೋಚನಾಮ್॥೩೯॥

ಇತ್ಯೇವಂ ಘೋಷಯಾಂಚಕ್ರೇ ಸ ರಾಜಾ ಸ್ವಪುರೇ ತದಾ ।
ನಿರಾಶಃ ಪುತ್ರತನಯಾಬನ್ಧಮೋಕ್ಷಾಯ ವೈ ಮುನೇ ॥೪೦॥

---

೩೭. ಅನಂತರ ಮಾಯಾಬಲವುಳ್ಳ ಆ ಕುಜೃಂಭಾಸುರನಿಂದ ಯುದ್ಧದಲ್ಲಿ ವಧಿಸಲ್ಪಟ್ಟ ಸಮಸ್ತ ಸೈನ್ಯಪರಿವಾರವುಳ್ಳ ಇಬ್ಬರು ರಾಜಪುತ್ರರು ಸೆರೆಹಿಡಿಯಲ್ಪಟ್ಟರು.

೩೮. ಮುನಿಶ್ರೇಷ್ಠನಾದ ಕ್ರೌಷ್ಟುಕಿಯೇ! ಆ ವೃತ್ತಾಂತವನ್ನು ಕೇಳಿ ಬಂಧನಕ್ಕೆ ಸಿಕ್ಕಿದ ಪುತ್ರರುಳ್ಳವನೂ ಮತ್ತು ಅತಿಶಯವಾದ ದುಃಖವನ್ನು ಹೊಂದಿದವನೂ ಆದ ವಿದೂರಥರಾಜನು ತನ್ನ ಸಮಸ್ತ ಸೈನಿಕರಿಗೆ ಹೀಗೆಂದು ಹೇಳಿದನು.

೩೯. ಯಾವನು ಆ ದಾನವನನ್ನು ವಧಿಸಿ ನನ್ನ ಕನ್ಯೆಯಾದ ಮುದಾವತಿಯನ್ನು ಬಿಡಿಸುವನೋ ವಿಶಾಲವಾದ ಕಣ್ಣುಗಳುಳ್ಳ ಸುಂದರಿಯಾದ ಆಕೆಯನ್ನು ಅವನಿಗೆ ಕೊಟ್ಟು ವಿವಾಹ ಮಾಡುವೆನು.

೪೦. ಕ್ರೌಷ್ಟುಕಿಮುನಿಯೇ! ಪುತ್ರರು ಮತ್ತು ಕನ್ಯೆಯರನ್ನು ಬಂಧನದಿಂದ ಮುಕ್ತರನ್ನಾಗಿ ಮಾಡುವ ಆಶೆಯೇ ಇಲ್ಲದಂತಾದ ರಾಜನು ಆಗ ತನ್ನ ನಗರದಲ್ಲಿ ಹೀಗೆಂದು ಘೋಷಣೆಮಾಡಿಸಿದನು.

ತತಃ ಶುಶ್ರಾವ ವತ್ಸಪ್ರೀರ್ಭಲನ್ದನಸುತೋ ಹಿ ತತ್ ।
ಆಘೋಷ್ಯಮಾಣಂ ಬಲವಾನ್ ಕೃತಾಸ್ತ್ರಃ ಶೌರ್ಯಸಂಯುತಃ॥೪೧

ಸ ಚಾಗಮ್ಯಾಭಿವಾದ್ಯೈನಂ ಪ್ರಾಹ ಪಾರ್ಥಿವಸತ್ತಮಮ್ ।
ವಿನಯಾವನತೋ ಭೂತ್ವಾ ಪಿತುರ್ಮಿತ್ರಮನುತ್ತಮಮ್ ॥೪೨॥

ಆಜ್ಞಾಪಯಾಶು ಮಾಮೇವ ತನಯೌ ಮೋಚಯಾಮಿ ತೇ ।
ತವೈವ ತೇಜಸಾ ಹತ್ವಾ ತಂ ದೈತ್ಯಂ ತನಯಾಂ ಚ ತೇ ॥೪೩॥

ಮಾರ್ಕಣ್ಡೇಯ ಉವಾಚ :—

ಸ ತಂ ಮುದಾ ಪರಿಷ್ವಜ್ಯ ಪ್ರಿಯಸಖ್ಯುರಥಾತ್ಮಜಮ್ ।
ಗಮ್ಯತಾಮಿತಿ ಸಂಸಿದ್ಧ್ಯೈ ವತ್ಸೇತ್ಯಾಹ ಸ ಪಾರ್ಥಿವಃ ॥೪೪॥

೪೧. ಈ ಸಮಯದಲ್ಲಿ ಶೌರ್ಯದಿಂದ ಕೂಡಿದವನೂ, ಶಸ್ತ್ರವಿದ್ಯಾಭ್ಯಾಸಿಯೂ, ಬಲಿಷ್ಠನೂ ಮತ್ತು ಭಲಂದನನ ಪುತ್ರನೂ ಆದ ವತ್ಸಪ್ರೀ ಎಂಬುವನು ನಗರದಲ್ಲಿ ಸಾರಿಹೇಳಲ್ಪಡುತ್ತಿದ್ದ ಈ ವಿಷಯವನ್ನು ಕೇಳಿದನು.

೪೨. ವತ್ಸಪ್ರೀತಿಯು ತನ್ನ ತಂದೆಯ ಮಿತ್ರನೂ, ನಿರುಪಮನೂ ಮತ್ತು ರಾಜೋತ್ತಮನೂ ಆದ ವಿದೂರಥನ ಬಳಿಗೆ ಹೋಗಿ ವಿನಯದಿಂದ ನಮಸ್ಕಾರ ಮಾಡಿದವನಾಗಿ ಅವನಲ್ಲಿ ಹೀಗೆ ಹೇಳಿದನು.

೪೩. ಈ ಕಾರ್ಯದಲ್ಲಿ ನೀನು ನನ್ನನ್ನೇ ಆಜ್ಞಾಪಿಸು. ನಿನ್ನ ಪ್ರಭಾವದಿಂದಲೇ ಆ ದೈತ್ಯನನ್ನು ಸಂಹರಿಸಿ ನಿನ್ನ ಇಬ್ಬರು ಪುತ್ರರನ್ನೂ ಹಾಗು ಕನ್ಯೆಯನ್ನೂ ಬಿಡಿಸಿಕೊಂಡು ಬರುವೆನು.

ಮಾರ್ಕಂಡೇಯ ಮುನಿಯು ಹೇಳಿದನು :—

೪೪. ತರುವಾಯ ವಿದೂರಥರಾಜನು ತನ್ನ ಪ್ರಿಯಮಿತ್ರನ ಪುತ್ರನಾದ ಆ ವತ್ಸಪ್ರೀತಿಯನ್ನು ಸಂತೋಷದಿಂದ ಆಲಿಂಗಿಸಿಕೊಂಡನು ಮತ್ತು ಆ ರಾಜನು “ವತ್ಸನೇ! ಕಾರ್ಯಸಾಧನೆಗೆ ನೀನು ಪ್ರಯಾಣಮಾಡು” ಎಂದು ಹರಸಿ ಹೇಳಿದನು.

ಸ್ಥಾನೇ ಸ್ಥಾಸ್ಯತಿ ಮೇ ವತ್ಸೋ ಯದ್ಯೇವಂ ಕುರುತೇ ವಿಧಿಮ್ ।
ವತ್ಸ ತತ್ಕ್ರಿಯತಾಮಾಶು ಯದ್ಯುತ್ಸಾಹಿ ಮನಸ್ತವ ॥೪೫॥

ಮಾರ್ಕಣ್ಡೇಯ ಉವಾಚ :—

ತತಃ ಸಖಡ್ಗಃ ಸಧನುರ್ಬದ್ಧಗೋಧಾಙ್ಗುಲಿತ್ರವಾನ್ ।
ಜಗಾಮ ವೀರಃ ಪಾತಾಲಂ ತೇನ ಗರ್ತೇನ ಸತ್ವರಃ ॥೪೬॥

ತತೋ ಜ್ಯಾಸ್ವನಮತ್ಯುಗ್ರಂ ಸ ಚಕ್ರೇ ಪಾರ್ಥಿವಾತ್ಮಜಃ ।
ಯೇನ ಪಾತಾಲಮಖಿಲಮಾಸೀದಾಪೂರಿತಾನ್ತರಮ್ ॥೪೭॥

ತತೋ ಜ್ಯಾಸ್ವನಮಾಕರ್ಣ್ಯ ಕುಜೃಮ್ಭೋ ದಾನವೇಶ್ವರಃ ।
ಆಜಗಾಮಾತಿಕೋಪೇನ ಸ್ವಸೈನ್ಯಪರಿವಾರಿತಃ ॥೪೮॥

---

೪೫. ವತ್ಸನಾದ ನೀನು ನನ್ನ ಪುತ್ರರನ್ನು ಬಂಧಮುಕ್ತರನ್ನಾಗಿ ಮಾಡುವ ಈ ಕಾರ್ಯವನ್ನು ಸಾಧಿಸಿದರೆ ನನ್ನ ಸ್ಥಾನದಲ್ಲಿ ಇರುತ್ತೀಯೆ. ವತ್ಸನೇ! ಆದುದರಿಂದ ನಿನ್ನ ಮನಸ್ಸು ಉತ್ಸಾಹಪೂರ್ಣವಾಗಿದ್ದರೆ ಈ ಕಾರ್ಯವನ್ನು ಬೇಗ ಸಾಧಿಸು.

ಮಾರ್ಕಂಡೇಯ ಮುನಿಯು ಹೇಳಿದನು :—

೪೬. ತರುವಾಯ ಖಡ್ಗ, ಬಿಲ್ಲು, ಬಾಣ, ಹಸ್ತತ್ರಾಣ, ಮತ್ತು ಅಂಗುಲಿತ್ರಾಣರೂಪವಾದ ಸಕಲ ಉಪಕರಣಗಳಿಂದ ಕೂಡಿದ ವೀರನಾದ ವತ್ಸಪ್ರೀತಿಯು ತ್ವರೆಯಿಂದ ಆ ಬಿಲದ ಮೂಲಕವಾಗಿ ಪಾತಾಲಕ್ಕೆ ಹೋದನು.

೪೭. ಅನಂತರದಲ್ಲಿ ಭಲಂದನನ ಪುತ್ರನಾದ ವತ್ಸಪ್ರೀತಿಯು ಕರ್ಣಕಠೋರವಾದ ಬಿಲ್ಲಿನ ಟಂಕಾರಶಬ್ದವನ್ನು ಮಾಡಿದನು. ಆ ಟಂಕಾರಶಬ್ದದಿಂದ ಪಾತಾಳಲೋಕವೆಲ್ಲ ತುಂಬಿಹೋದ ಮಧ್ಯಭಾಗವುಳ್ಳದ್ದಾಯಿತು.

೪೮. ತರುವಾಯ ದಾನವೇಶ್ವರನಾದ ಕುಜೃಂಭಾಸುರನು ಮೌರ್ವೀ-ಹುರಿಯಿಂದ ಆದ ಬಿಲ್ಲಿನ ಶಬ್ದವನ್ನು ಕೇಳಿ ಬಲು ಕೋಪತಾಳಿದವನಾಗಿ ತನ್ನ ಸೈನ್ಯಸಮೇತನಾಗಿ ಓಡಿಬಂದನು.

ತತೋ ಯುದ್ಧಮಭೂತ್ತಸ್ಯ ತೇನ ಪಾರ್ಥಿವಸೂನುನಾ ।
ಸಸೈನ್ಯಸ್ಯ ಸಸೈನ್ಯೇನ ಬಲಿನೋ ಬಲಶಾಲಿನಾ ॥೪೯॥

ದಿನಾನಿ ತ್ರೀಣಿ ಸ ಯದಾ ಯೋಧಿತಸ್ತೇನ ದಾನವಃ ।
ತತಃ ಕೋಪಪರೀತಾತ್ಮಾ ಮುಸಲಾಯಾಭ್ಯಧಾವತ ॥೫೦॥

ಗನ್ಧೈರ್ಮಾಲ್ಯೈಸ್ತಥಾ ಧೂಪೈಃ ಪೂಜ್ಯಮಾನಃ ಸ ತಿಷ್ಠತಿ ।
ಅನ್ತಃಪುರೇ ಮಹಾಭಾಗ ಪ್ರಜಾಪತಿವಿನಿರ್ಮಿತಃ ॥೫೧॥

ತತೋ ವಿಜ್ಞಾತಮುಸಲಪ್ರಭಾವಾ ಸಾ ಮುದಾವತೀ ।
ಪಸ್ಪರ್ಶ ಮುಸಲಶ್ರೇಷ್ಠಮತಿನಮ್ರಶಿರೋಧರಾ ॥೫೨॥

ಪುನರ್ಯಾವತ್ಸ ಗೃಹ್ಣಾತಿ ಮುಸಲಂ ತಂ ಮಹಾಸುರಃ ।
ತಾವತ್ಸಾ ವನ್ದನವ್ಯಾಜಾತ್ ಪಸ್ಪರ್ಶಾನೇಕಶಃ ಶುಭಾ ॥೫೩॥

---

೪೯. ಅನಂತರದಲ್ಲಿ ಸೈನ್ಯಪರಿವಾರಸಮೇತನೂ, ಬಲಶಾಲಿಯೂ ಮತ್ತು ರಾಜಪುತ್ರನೂ ಆದ ವತ್ಸಪ್ರೀತಿಗೂ ಹಾಗೆಯೇ ಸೇನಾಸಮೇತನೂ ಮತ್ತು ವಿಕ್ರಮಶಾಲಿಯೂ ಆದ ಕುಜೃಂಭಾಸುರನಿಗೂ ಘೋರವಾದ ಕದನವು ಜರುಗಿತು.

೫೦. ರಾಜಕುಮಾರನೊಡನೆ ಆ ದಾನವೇಶ್ವರನು ಯಾವಾಗ ಮೂರು ದಿನಗಳವರೆಗೆ ಹೋರಾಡಿವರೂ ಜಯಗಳಿಸಲಶಕ್ತನಾದನೋ ಆಗ ಕೋಪದಿಂದ ತುಂಬಿಹೋದ ಕುಜೃಂಭನು ಮುಸಲಾಯುಧವನ್ನು ತರಲು ಧಾವಿಸಿದನು.

೫೧. ಮಹಾಭಾಗ್ಯಶಾಲಿಯಾದ ಕ್ರೌಷ್ಟುಕಿಯೇ ! ತ್ವಷ್ಟೃಪ್ರಜಾಪತಿಯಿಂದ ನಿರ್ಮಿಸಲ್ಪಟ್ಟ ಆ ಮುಸಲಾಯುಧವು ಅಂತಃಪುರದಲ್ಲಿ ಗಂಧ-ಮಾಲ್ಯ-ಧೂಪ ಮುಂತಾದ ಉಪಚಾರಗಳಿಂದ ಪೂಜಿಸಲ್ಪಡುತ್ತಿದೆ.

೫೨. ಆ ಸಮಯದಲ್ಲಿ ತಿಳಿದ ಮುಸಲಾಯುಧದ ಪ್ರಭಾವವುಳ್ಳ ಮುದಾವತಿಯು ವಿನಯದಿಂದ ಬಾಗಿದ ಶಿರವುಳ್ಳವಳಾಗಿ ಶ್ರೇಷ್ಠವಾದ ಆ ಮುಸಲಾಯುಧವನ್ನು ಸ್ಪರ್ಶಿಸಿದಳು.

೫೩. ಮಹಾಸುರನಾದ ಆ ಕುಜೃಂಭನು ಯಾವಾಗ ಮತ್ತೆ ಮುಸಲವನ್ನು ಪರಿಗ್ರಹಿಸಲು ಬಂದನೋ ಆಗ ಮಂಗಳಾಂಗಿಯಾದ ಮುದಾವತಿಯು ನಮಸ್ಕರಿಸುವ ನೆಪದಿಂದ ಅನೇಕಸಲ ಮುಸಲವನ್ನು ಸ್ಪರ್ಶಮಾಡಿದಳು.

ತತಃ ಸ ಗತ್ವಾ ಯುಯುಧೇ ಮುಸಲೇನಾಸುರೇಶ್ವರಃ ।
ವ್ಯರ್ಥಾ ಮುಸಲಪಾತಾಸ್ತೇ ಸಂಜಗ್ಮುಸ್ತೇಷು ಶತ್ರುಷು ॥೫೪॥

ಪರಮಾಸ್ತ್ರೇ ತು ನಿರ್ವೀರ್ಯೇ ಸೌನನ್ದೇ ಮುಸಲೇ ಮುನೇ ।
ಅಸ್ತ್ರೈಃ ಶಸ್ತ್ರೈಶ್ಚ ದೈತೇಯಃ ಸೋಽಯುಧ್ಯತ ರಣೇಽರಿಣಾ ॥೫೫॥

ಶಸ್ತ್ರಾಸ್ತ್ರೈರ್ನ ಸಮಸ್ತಸ್ಯ ರಾಜಪುತ್ರಸ್ಯ ಸೋಽಸುರಃ ।
ಮುಸಲೇನ ಬಲಂ ತಸ್ಯ ತಚ್ಚ ತನ್ವ್ಯಾ ನಿರಾಕೃತಮ್ ॥೫೬॥

ತತಃ ಪರಾಜಿತ್ಯ ಸ ಭೂಪಸೂನು-
ರಸ್ತ್ರಾಣಿ ಶಸ್ತ್ರಾಣಿ ಚ ದಾನವಸ್ಯ ।
ಚಕಾರ ಸದ್ಯೋ ವಿರಥಂ ತತಶ್ಚ
ಸಚರ್ಮಖಡ್ಗಃ ಪುನರಪ್ಯಧಾವತ್ ॥೫೭॥

---

೫೪. ತರುವಾಯ ದೈತ್ಯೇಶ್ವರನಾದ ಕುಜೃಂಭನು ರಣರಂಗಕ್ಕೆ ಹೋಗಿ ಆ ಮುಸಲದಿಂದ ಯುದ್ಧಮಾಡಿದನು. ಆದರೆ ಆಗ ಶತ್ರುಗಳಲ್ಲಿ ಅಸುರನು ಮಾಡಿದ ಮುಸಲಪ್ರಹಾರಗಳು ವ್ಯರ್ಥವಾದುವು.

೫೫. ಮುನಿಯಾದ ಕ್ರೌಷ್ಟುಕಿಯೇ! ತನ್ನ ಅಸ್ತ್ರಗಳಲ್ಲೆಲ್ಲ ಉತ್ತಮವಾದ ಸೌನಂದವೆಂಬ ಮುಸಲಾಯುಧವು ನಿರ್ವೀರ್ಯವಾಗಲು ಆ ಕುಜೃಂಭಾಸುರನು ರಣದಲ್ಲಿ ಇತರ ಶಸ್ತ್ರಾಸ್ತ್ರಗಳಿಂದ ಯುದ್ಧಮಾಡಿದನು.

೫೬. ಕುಜೃಂಭಾಸುರನು ಶಸ್ತ್ರಾಸ್ತ್ರಗಳ ವಿಷಯದಲ್ಲಿ ಆ ರಾಜಪುತ್ರನಿಗೆ ತುಲ್ಯನಾಗಿ ವಿಕ್ರಮಿಯಾಗಿರಲಿಲ್ಲ. ಅವನಿಗೆ ಮುಸಲಾಯುಧದಿಂದ ಮಾತ್ರ ವಿಶೇಷವಾದ ಬಲವಿದ್ದಿತು. ಆ ಬಲವು ತನ್ವಿಯಾದ ಮುದಾವತಿಯಿಂದ ಭಂಗಗೊಳಿಸಲ್ಪಟ್ಟಿತು.

೫೭. ತರುವಾಯ ರಾಜಪುತ್ರನಾದ ವತ್ಸಪ್ರೀತಿಯು ದಾನವನು ಪ್ರಯೋಗಿಸಿದ ಶಸ್ತ್ರ-ಅಸ್ತ್ರಗಳನ್ನು ವ್ಯರ್ಥಗೊಳಿಸಿ ಆ ಅಸುರನನ್ನು ರಥಶೂನ್ಯನನ್ನಾಗಿ ಮಾಡಿದನು. ಆಮೇಲೆ ಮತ್ತೆ ಅಸುರನು ಚರ್ಮ-ಖಡ್ಗಗಳನ್ನು ಹಿಡಿದು ಯುದ್ಧಕ್ಕೆ ಓಡಿಬಂದನು.

ತಮಾಪತನ್ತಂ ರಭಸಾಭ್ಯುದೀರ್ಣಂ
　　ವಿಸ್ಪಷ್ಟಕೋಪಂ ತ್ರಿದಶೇನ್ದ್ರಶತ್ರುಮ್ ।
ಶಸ್ತ್ರೇಣ ವಹ್ನೇರ್ಭುವಿ ರಾಜಪುತ್ರೋ
　　ಜಘಾನ ಕಾಲಾನಲಸಪ್ರಭೇಣ　　　॥೫೮॥

ಸ ಪಾವಕಾಸ್ತ್ರೇಣ ಹೃದಿ ಕ್ಷತೋ ಭೃಶಂ
　　ತತ್ಯಾಜ ದೇಹಂ ತ್ರಿದಶಾರಿರಾತ್ಮನಃ ।
ಬಭೂವ ಸದ್ಯಶ್ಚ ಮಹೋರಗಾಣಾಂ
　　ರಸಾತಲಾನ್ತೇಷು ಮಹಾನಥೋತ್ಸವಃ　　　॥೫೯॥

ತತೋಽಪತತ್ಪುಷ್ಪವೃಷ್ಟಿರ್ಮಹೀಪಾಲಸುತೋಪರಿ ।
ಜಗುರ್ಗನ್ಧರ್ವಪತಯೋ ದೇವವಾದ್ಯಾನಿ ಸಸ್ವನುಃ　　　॥೬೦॥

---

೫೮. ಹೀಗೆ ದೇವರಾಜನಾದ ಇಂದ್ರನಿಗೆ ಶತ್ರುವಾದ ಕುಜೃಂಭಾಸುರನು ಪ್ರಕಾಶವಾದ ಕೋಪವುಳ್ಳವನೂ, ವೇಗದಿಂದ ಆರ್ಭಟಿಸುವವನೂ ಆಗಿ ಮೇಲೆರಗುತ್ತಿರುವುದನ್ನು ಕಂಡು ರಾಜಪುತ್ರನಾದ ವತ್ಸಪ್ರೀತಿಯು ಕಾಲಾಗ್ನಿ-ಸಮಾನವಾದ ಆಗ್ನೇಯಶಸ್ತ್ರದಿಂದ ನೆಲದಲ್ಲಿದ್ದ ಅಸುರನನ್ನು ಹೊಡೆದನು.

೫೯. ಆಗ ಆಗ್ನೇಯಾಸ್ತ್ರದಿಂದ ವಕ್ಷಸ್ಥಳದಲ್ಲಿ ಬಲವಾಗಿ ಹೊಡೆಯಲ್ಪಟ್ಟ ದೇವಕಂಟಕನಾದ ಕುಜೃಂಭಾಸುರನು ತನ್ನ ದೇಹವನ್ನು ತ್ಯಜಿಸಿದನು. ಅದರಿಂದ ಭೂಮಿಯಕೆಳಗಣ ಲೋಕಗಳಲ್ಲಿ ಇರುವ ಮಹಾನಾಗಗಳಿಗೆ ಕೂಡಲೆ ಅತಿಶಯ-ವಾದ ಉತ್ಸವವುಂಟಾಯಿತು.

೬೦. ತರುವಾಯ ರಾಜಕುಮಾರನಾದ ವತ್ಸಪ್ರೀತಿಯ ಮೇಲೆ ಆಕಾಶದಿಂದ ಪುಷ್ಪವೃಷ್ಟಿಯು ಸುರಿಯಿತು. ಅನೇಕ ಗಂಧರ್ವರಾಜರು ಗಾನ-ಮಾಡಿದರು. ಜೊತೆಯಲ್ಲಿ ದೇವಲೋಕದ ವಾದ್ಯಗಳು ಭೋರ್ಗರೆದುವು.

ಸ ಚಾಪಿ ರಾಜಪುತ್ರಸ್ತು ಹತ್ವಾ ತೌ ನೃಪತೇಃ ಸುತೌ ।
ಮೋಚಯಾಮಾಸ ತನ್ವಙ್ಗೀಂ ತಾಂ ಚ ಕನ್ಯಾಂ ಮುದಾವತೀಮ್ ॥೬೧॥

ತಚ್ಚಾಪಿ ಮುಸಲಂ ತಸ್ಮಿನ್ ಕುಜ್ಜೃಮ್ಭೇ ವಿನಿಪಾತಿತೇ ।
ಜಗ್ರಾಹ ನಾಗಾಧಿಪತಿರನನ್ತಃ ಶೇಷಸಞ್ಜ್ಞಿತಃ ॥೬೨॥

ತಸ್ಯಾಶ್ಚ ಪರಿತುಷ್ಟೋಽಸೌ ಶೇಷಃ ಸರ್ವೋರಗೇಶ್ವರಃ ।
ಮುದಾವತ್ಯಾ ಮುದಾಧ್ಯಾತಮನೋವೃತ್ತಿಸ್ತಪೋಧನಃ ॥೬೩॥

ಸುನನ್ದಮುಸಲಸ್ಪರ್ಶಂ ಯಚ್ಚಕಾರ ಪುನಃ ಪುನಃ ।
ಯೋಷಿತ್ಕರತಲಸ್ಪರ್ಶಪ್ರಭಾವಜ್ಞಾತಿಶೋಭನಾ ॥೬೪॥

---

೬೧. ಅಷ್ಟರಲ್ಲಿ ರಾಜಕುವರನಾದ ವತ್ಸಪ್ರೀತಿಯು ದುಷ್ಟದಾನವನನ್ನು ವಧಿಸಿ ಬದ್ಧರಾಗಿದ್ದ ಆ ಇಬ್ಬರು ರಾಜಪುತ್ರರನ್ನು ಬಂಧಮುಕ್ತರನ್ನಾಗಿ ಮಾಡಿದನು. ಹಾಗು ಕೃಶಾಂಗಿಯಾದ ಮುದಾವತಿಯೆಂಬ ಕನ್ಯೆಯನ್ನೂ ಅಲ್ಲಿಂದ ಬಿಡಿಸಿದನು.

೬೨. ಹೀಗೆ ಆ ಕುಜ್ಜೃಂಭನೆಂಬ ಅಸುರನು ಹತನಾಗಿ ಹೋಗಲು ಆ ಮುಸಲಾಯುಧವನ್ನು ಶೇಷನೆಂಬ ಸಂಜ್ಞೆಯಿಂದ ಅಂಕಿತನಾದ ಅನಂತನೆಂಬ ನಾಗರಾಜನು ವಶಕ್ಕೆ ತೆಗೆದುಕೊಂಡನು.

೬೩. ಸಮಸ್ತ ಸರ್ಪಗಳಿಗೆ ಈಶ್ವರನೂ, ಮಹಾತಪಸ್ವಿಯೂ ಮತ್ತು ಧ್ಯಾನಿಸಲ್ಪಟ್ಟ ಮುದಾವತಿಯ ಮನೋವೃತ್ತಿಯುಳ್ಳವನೂ ಆದ ಆದಿಶೇಷನು ಆ ಮುದಾವತಿಯ ವಿಷಯದಲ್ಲಿ ವಿಶೇಷವಾಗಿ ಸಂತುಷ್ಟನಾದನು.

೬೪. ಸ್ತ್ರೀ ಕರಸ್ಪರ್ಶದಿಂದ ಆಗುವ ವ್ಯತ್ಯಾಸವುಳ್ಳ ಮುಸಲ ಪ್ರಭಾವವನ್ನು ಅರಿತವಳೂ, ಅತ್ಯಂತ ಶುಭಕರಳೂ ಆದ ಮುದಾವತಿಯು ಸುನಂದ ಮುಸಲದ ಸ್ಪರ್ಶವನ್ನು ಮತ್ತೆ ಮತ್ತೆ ಮಾಡಿದಳು.

ಮುದಾವತ್ಯಾಸ್ತತೋ ನಾಮ ನಾಗರಾಜಸ್ತದಾಕರೋತ್ ।
ಸುನನ್ದಾಮಿತಿ ಸಾನನ್ದಂ ಸೌನನ್ದಗುಣಜಂ ದ್ವಿಜ ॥೬೫॥

ಸ ಚಾಪಿ ರಾಜಪುತ್ರಸ್ತಾಂ ಭ್ರಾತೃಭ್ಯಾಂ ಸಹಿತಾಂ ಪಿತುಃ ।
ಸಮೀಪಮಾನಿನಾಯಾಶು ಪ್ರಣಿಪತ್ಯಾಹ ಚೈವ ತಮ್ ॥೬೬॥

ಆನೀತೌ ತನಯೌ ತಾತ ತಥೈವೇಯಂ ಮುದಾವತೀ ।
ತವಾಜ್ಞಯಾ ಮಯಾನ್ಯದ್ಯತ್ಕರ್ತವ್ಯಂ ತತ್ಸಮಾದಿಶ ॥೬೭॥

ಮಾರ್ಕಣ್ಡೇಯ ಉವಾಚ :—

ತತಃ ಪ್ರಹರ್ಷಸಂಪೂರ್ಣಹೃದಯಃ ಸ ಮಹೀಪತಿಃ ।
ಸಾಧು ಸಾಧ್ವಿತ್ಯಥಾಹೋಚ್ಚೈರ್ವತ್ಸ ವತ್ಸೇತಿ ಶೋಭನಮ್ ॥೬೮॥

---

೬೫. ದ್ವಿಜೋತ್ತಮನಾದ ಕ್ರೌಷ್ಟುಕಿಯೇ ! ತರುವಾಯ ನಾಗರಾಜನು ಮುದಾವತಿಗೆ ಸೌನಂದ ಮುಸಲವನ್ನು ಮುಟ್ಟಿ ರಾಕ್ಷಸವೀರ್ಯವನ್ನು ಅಡಗಿಸಿದ ಗುಣದ ಚಿಹ್ನೆಯಾಗಿ ಸುನಂದಾ ಎಂಬ ಹೆಸರನ್ನು ಇಟ್ಟನು.

೬೬. ಅನಂತರ ರಾಜಪುತ್ರನಾದ ವತ್ಸಪ್ರೀತಿಯು ಸಹೋದರರೊಡನೆ ಆ ಸುನಂದಾ ಎಂಬ ಕನ್ಯೆಯನ್ನು ಬಂಧನದಿಂದ ಮುಕ್ತರನ್ನಾಗಿ ಮಾಡಿ ತಂದೆಯ ಸಮೀಪಕ್ಕೆ ಕರೆತಂದನು. ಮತ್ತು ವಿದೂರಥ ರಾಜನನ್ನು ವಂದಿಸಿ ಹೇಳಿದನು.

೬೭. ತಂದೆಯೆ ! ನಿನ್ನ ಆಜ್ಞಾವಚನದಂತೆ ನಿನ್ನ ಇಬ್ಬರು ಪುತ್ರರನೂ ಮತ್ತು ಮುದಾವತಿಯೆಂಬ ಈ ಕನ್ಯೆಯನ್ನೂ ಕರೆತಂದಿರುವೆನು. ಇನ್ನು ಮುಂದೆ ನಾನೇನು ಮಾಡಬೇಕೋ ಆ ಕರ್ತವ್ಯವನ್ನು ಆಜ್ಞಾಪಿಸು.

ಮಾರ್ಕಂಡೇಯ ಮುನಿಯು ಹೀಗೆಂದನು :—

೬೮. ಅನಂತರದಲ್ಲಿ ಆನಂದದಿಂದ ತುಂಬಿಹೋದ ಹೃದಯವುಳ್ಳ ಆ ವಿದೂರಥ ಮಹಾರಾಜನು " ವತ್ಸನೇ ! ವತ್ಸನೇ ! ಭಲಾ ! ಭಲಾ ! ಎಂತಹ ಸಾಹಸವನ್ನು ಮಾಡಿರುವೆಯೆಂದು ಗಟ್ಟಿಯಾಗಿ ಕೂಗಿದನು.

ಸಭಾಜಿತೋಽಸ್ಮಿ ತ್ರಿದಶೈರ್ವತ್ಸಾಹಂ ಕಾರಣೈಸ್ತ್ರಿಭಿಃ ।
ತ್ವಂ ಜಾಮಾತಾ ಚ ಯತ್ಪ್ರಾಪ್ತೋ ಯಚ್ಚಾರಿರ್ವಿನಿಪಾತಿತಃ ॥೧೯॥

ಆಗತಾನ್ಯಕ್ಷತಾನ್ಯತ್ರ ಯಚ್ಚಾಪತ್ಯಾನಿ ಮೇ ಪುನಃ ।
ತದ್ಗೃಹಾಣಾದ್ಯ ಶಸ್ತೇಽಹ್ನಿ ಪಾಣಿಮಸ್ಯಾ ಮಯೋದಿತಮ್ ॥೨೦॥

ತ್ವಂ ರಾಜಪುತ್ರ ಚಾರ್ವಙ್ಗ್ಯಾಃ ಕನ್ಯಾಯಾ ದುಹಿತುರ್ಮಮ ।
ಮುದಾವತ್ಯಾ ಮುದಾ ಯುಕ್ತಃ ಸತ್ಯವಾಕ್ಯಂ ಕುರುಷ್ವ ಮಾಮ್ ॥೨೧॥

ರಾಜಪುತ್ರ ಉವಾಚ :—

ತಾತಸ್ಯಾಜ್ಞಾ ಮಯಾ ಕಾರ್ಯಾ ಯದ್ಬ್ರವೀಷಿ ಕರೋಮಿ ತತ್ ।
ತ್ವಮೇವ ತಾತ ಜಾನೀಷೇ ನೈವಾತ್ರಾಧಿಕೃತಾ ವಯಮ್ ॥೨೨॥

---

೧೯. ವತ್ಸನೇ! ಇಂದಿನಿಂದ ನಾನು ಮೂರು ನಿಮಿತ್ತಗಳಿಂದ ದೇವತೆಗಳಿಂದಲೂ ಅಭಿನಂದಿಸಲ್ಪಟ್ಟಿರುವೆನು. ಈ ಸಾಹಸವನ್ನು ತೋರಿಸಿ ನೀನು ನನಗೆ ಅಳಿಯನಾಗಿ ಲಭಿಸಿರುವೆ, ಮತ್ತು ಶತ್ರುವಾದ ಕುಜೃಂಭನನ್ನು ವಧಿಸಿದ್ದೀಯೆ.

೨೦. ಹಾಗು ನನ್ನ ಪುತ್ರರಿಬ್ಬರು ಮತ್ತು ಪುತ್ರಿಯಾದ ಮುದಾವತಿಯು ಏನೊಂದು ಅಪಾಯವೂ ಇಲ್ಲದ ಹಾಗೆ ಇಲ್ಲಿಗೆ ಬಂದಿರುವರು. ಆದುದರಿಂದ ಪ್ರಶಸ್ತವಾದ ಈ ದಿನದಲ್ಲಿ ನೀನು ನನ್ನ ಅನುಮತಿಯಂತೆ ಈಕೆಯ ಪಾಣಿಯನ್ನು ಗ್ರಹಿಸು.

೨೧. ರಾಜಪುತ್ರನಾದ ವತ್ಸಪ್ರೀತಿಯೆ! ನೀನು ಸಂತೋಷಗೊಂಡವನಾಗಿ ಸುಂದರಾಂಗಿಯೂ ನನ್ನ ಪುತ್ರಿಯೂ ಆದ ಈ ಮುದಾವತೀಕನ್ಯೆಯನ್ನು ಪಾಣಿಗ್ರಹಣ ಮಾಡು. ಹಾಗು ನನ್ನನ್ನು ಸತ್ಯವಂತನನ್ನಾಗಿ ಮಾಡು.

ರಾಜಪುತ್ರನಿಂತೆಂದನು :—

೨೨. ತಂದೆಯಂತಿರುವ ನಿನ್ನ ಆಜ್ಞೆಯನ್ನು ನಾನು ಪಾಲಿಸಬೇಕು. ನೀನು ಹೇಗೆ ಆಜ್ಞಾಪಿಸುವೆಯೋ ನಾನು ಅದರಂತೆ ವರ್ತಿಸುವೆನು. ನೀನು ಇದನ್ನು ತಿಳಿದವನಾಗಿದ್ದೀಯೆ. ನಾವು ಯಾವುದಕ್ಕೂ ಸ್ವತಂತ್ರಾಧಿಕಾರವನ್ನು ಹೊಂದಿಲ್ಲ.

ಮಾರ್ಕಣ್ಡೇಯ ಉವಾಚ :—

ತತಸ್ತಯೋಃ ಸ ರಾಜೇನ್ದ್ರಶ್ಚಕ್ರೇ ವೈವಾಹಿಕಂ ಕ್ರಮಮ್ ।
ಮುದಾವತ್ಯಾಶ್ಚ ದುಹಿತುರ್ಭಲನ್ದನಸುತಸ್ಯ ವೈ ॥೭೩॥

ತತಃ ಸಹ ತಯಾ ರೇಮೇ ವತ್ಸಪ್ರೀರ್ನವಯೌವನಃ ।
ರಮಣೀಯೇಷು ದೇಶೇಷು ಪ್ರಾಸಾದಶಿಖರೇಷು ಚ ॥೭೪॥

ಕಾಲೇನ ಗಚ್ಛತಾ ವೃದ್ಧಃ ಪಿತಾ ತಸ್ಯ ಭಲನ್ದನಃ ।
ವನಂ ಜಗಾಮ ವತ್ಸಪ್ರೀಃ ಸ ಬಭೂವ ಮಹೀಪತಿಃ ॥೭೫॥

ಇಯಾಜ ಯಜ್ಞಾನ್ ಸತತಂ ಪ್ರಜಾ ಧರ್ಮೇಣ ಪಾಲಯನ್ ।
ಪುತ್ರವತ್ಪಾಲ್ಯಮಾನಾಸ್ತು ಪ್ರಜಾಸ್ತೇನ ಮಹಾತ್ಮನಾ ॥೭೬॥

ಮಾರ್ಕಂಡೇಯ ಮುನಿಯು ಹೇಳಿದನು :—

೭೩. ತರುವಾಯ ರಾಜೇಂದ್ರನಾದ ವಿದೂರಥನು ತನ್ನ ಮಗಳಾದ ಮುದಾವತಿ, ಮತ್ತು ಭಲಂದನನ ಪುತ್ರನಾದ ವತ್ಸ ಪ್ರೀತಿ ಇವರಿಬ್ಬರ ವೈವಾಹಿಕ ಮಂಗಲ ಕರ್ಮವನ್ನು ನೆರವೇರಿಸಿದನು.

೭೪. ಅನಂತರ ನವ ಯೌವನದಿಂದ ಕೂಡಿದ ವತ್ಸಪ್ರೀತಿಯು ಸರ್ವೋತ್ತಮಳಾದ ಮುದಾವತಿಯೊಡನೆ ರಮಣೀಯವಾದ ಅನೇಕ ಪ್ರದೇಶಗಳ-ಲ್ಲಿಯೂ ಮತ್ತು ಅನೇಕ ಪ್ರಾಸಾದಗಳ ಶಿಖರಗಳಲ್ಲಿಯೂ ರಮಿಸಿದನು.

೭೫. ಹೀಗೆ ಕೆಲವು ಕಾಲವು ಕಳೆದ ತರುವಾಯ ವೃದ್ಧನಾದ ತಂದೆ ಭಲಂದನನು ವೈರಾಗ್ಯದಿಂದ ಅರಣ್ಯಕ್ಕೆ ತೆರಳಿದನು. ಆಗ ಪುತ್ರನಾದ ವತ್ಸ-ಪ್ರೀತಿಯು ರಾಜ್ಯವನ್ನು ಆಳುವ ದೊರೆಯಾದನು.

೭೬. ವತ್ಸಪ್ರೀತಿ ರಾಜನು ಅನೇಕ ಯಜ್ಞಸಮಾರಂಭಗಳನ್ನು ನಡೆ-ಯಿಸಿದನು. ಪ್ರಜೆಗಳನ್ನು ಧರ್ಮದಿಂದ ರಕ್ಷಿಸಿದನು. ಆಗ ಮಹಾತ್ಮನಾದ ವತ್ಸಪ್ರೀತಿಯಿಂದ ಪ್ರಜೆಗಳು ಪುತ್ರರಂತೆ ಪಾಲಿಸಲ್ಪಟ್ಟರು.

ನವೃಧುರ್ವಿಷಯೋ ತಸ್ಯ ನ ಚಾಭೂದ್ವರ್ಣಸಂಕರಃ ।
ನ ದಸ್ಯುವ್ಯಾಲದುರ್ವೃತ್ತಭಯಮಾಸೀಚ್ಚ ಕಸ್ಯಚಿತ್ ॥೭೭॥

ನೋಪಸರ್ಗಭಯಂ ಚೈವ ತಸ್ಮಿನ್ಶಾಸತಿ ಭೂಪತೌ ॥೭೮॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಭಲನ್ದನವತ್ಸಪ್ರೀಚರಿತಂ ನಾಮ ತ್ರಯೋದಶಾಧಿಕಶತತಮೋಽಧ್ಯಾಯಃ

---

೭೭. ಹಾಗೆ ರಕ್ಷಿಸಲ್ಪಟ್ಟ ಪ್ರಜೆಗಳು ವೃದ್ಧಿಹೊಂದಿದರು. ಅವನ ರಾಜ್ಯದಲ್ಲಿ ವರ್ಣಸಂಕರ ದೋಷವು ಇರಲಿಲ್ಲ. ಮತ್ತು ಆ ರಾಜ್ಯದಲ್ಲಿರುವ ಒಂದು ವ್ಯಕ್ತಿಗೂ ಶತ್ರು, ದುಷ್ಟಜಂತು, ನೀಚಜನ ಮುಂತಾದವರ ಭಯವಿರಲಿಲ್ಲ.

೭೮. ಹಾಗು ಆಧಿದೈವಿಕ, ಆಧಿಭೌತಿಕ ಮತ್ತು ಆಧ್ಯಾತ್ಮಿಕ ರೂಪವಾದ ಯಾವ ಉಪಸರ್ಗಬಾಧೆಯೂ ವತ್ಸಪ್ರೀತಿಯ ರಾಜ್ಯಭಾರ ಸಮಯದಲ್ಲಿ ಇರಲಿಲ್ಲ.

ಮಾರ್ಕಂಡೇಯ ಮಹಾಪುರಾಣದಲ್ಲಿ ನೂರ ಹದಿಮೂರನೆಯ ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಚತುರ್ದಶಾಧಿಕಶತತಮೋಽಧ್ಯಾಯಃ

(ಖನಿತ್ರಚರಿತನಿರೂಪಣಮ್)

ಮಾರ್ಕಣ್ಡೇಯ ಉವಾಚ :—

ತಸ್ಯ ತಸ್ಯಾಂ ಸುನನ್ದಾಯಾಂ ಪುತ್ರಾ ದ್ವಾದಶ ಜಜ್ಞಿರೇ ।
ಪ್ರಾಂಶುಃ ಪ್ರವೀರಃ ಶೂರಶ್ಚ ಸುಚಕ್ರೋ ವಿಕ್ರಮಃ ಕ್ರಮಃ ||೧||

ಬಲೀ ಬಲಾಕಶ್ಚಣ್ಡಶ್ಚ ಪ್ರಚಣ್ಡಶ್ಚ ಸುವಿಕ್ರಮಃ ।
ಸುನಯಶ್ಚ ಮಹಾಭಾಗಃ ಸರ್ವೇ ಸಙ್ಗ್ರಾಮಜಿತ್ತಮಾಃ ||೨||

ನೂರ ಹದಿನಾಲ್ಕನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಹೇಳಿದನು :—

೧. ಮುಂದೆ ಆ ವತ್ಸಪ್ರೀತಿಗೆ ಸುನಂದಾ ಎಂಬ ಪುತ್ರಿಯಲ್ಲಿ ಹನ್ನೆರಡು ಮಂದಿ ಪುತ್ರರು ಜನಿಸಿದರು. ಅವರಲ್ಲಿ ಕೆಲವರು ಪ್ರಾಂಶು, ಪ್ರವೀರ, ಶೂರ, ಸುಚಕ್ರ, ವಿಕ್ರಮ ಮತ್ತು ಕ್ರಮ ಎಂಬ ನಾಮಾಂಕನಗಳನ್ನು ಹೊಂದಿದ್ದರು.

೨. ಮತ್ತೆ ಕೆಲವರು ಬಲಿ, ಬಲಾಕ, ಚಂಡ, ಪ್ರಚಂಡ, ಸುವಿಕ್ರಮ ಮತ್ತು ಸುನಯ ಎಂಬ ನಾಮಾಂಕನಗಳನ್ನು ಹೊಂದಿದ್ದರು. ಎಲ್ಲರೂ ಮಹಾಭಾಗ್ಯವಂತರೂ ಮತ್ತು ಸಂಗ್ರಾಮದಲ್ಲಿ ಜಯಗಳಿಸುವವರೂ ಆಗಿದ್ದರು.

ತೇಷಾಂ ಜ್ಯೇಷ್ಠೋ ಮಹಾವೀರ್ಯಃ ಪ್ರಾಂಶುರಾಸೀನ್ನರಾಧಿಪಃ ।
ಇತರೇ ಭೃತ್ಯವತ್ತಸ್ಯ ಬಭೂವುರ್ವಶವರ್ತಿನಃ ॥೩॥

ತಸ್ಯ ಯಜ್ಞೇ ದ್ವಿಜತ್ಯಕ್ತೈರನೇಕೈರ್ದ್ರವ್ಯರಾಶಿಭಿಃ ।
ನ್ಯೂನವರ್ಣವಿಸೃಷ್ಟೈಶ್ಚ ಸತ್ಯನಾಮಾ ವಸುನ್ಧರಾ ॥೪॥

ಸಮ್ಯಕ್ಪಾಲಯತಸ್ತಸ್ಯ ಪ್ರಜಾಃ ಪುತ್ರಾನಿವೌರಸಾನ್ ।
ಯೋಽಭೂದ್ಧನಚಯಃ ಕೋಶೇ ತೇನ ನಿಷ್ಪಾದಿತಾಸ್ತು ಯೇ ॥೫॥

ಕ್ರತವಃ ಶತಂ ಸಹಸ್ರಾಸ್ತೇ ತೇಷಾಂ ಸಙ್ಖ್ಯಾ ನ ವಿದ್ಯತೇ ।
ಅಯುತಾದ್ಯೇನ ಕೋಟೀಭಿರ್ನ ಚ ಪದ್ಮಾದಿಭಿರ್ಮುನೇ ॥೬॥

---

೩. ಮಹಾ ವೀರ್ಯಸಂಪನ್ನನೂ, ಆ ಕುಮಾರರಲ್ಲಿ ಜ್ಯೇಷ್ಠನೂ ಆದ ಪ್ರಾಂಶು ಎಂಬುವನು ರಾಜ್ಯಪಾಲಕನಾದನು. ಇತರ ಕುಮಾರರು ಭೃತ್ಯರಂತೆ ಅವನ ಆಜ್ಞಾಧಾರಕರಾಗಿ ವರ್ತಿಸಿದರು.

೪. ಪ್ರಾಂಶುರಾಜನು ಆಚರಿಸಿದ ಅನೇಕ ಯಜ್ಞ ಸಮಾರಂಭಗಳಲ್ಲಿ ದ್ವಿಜರಿಗೆ ಹೆಚ್ಚಾಗಿ ಅವರಿಂದ ತ್ಯಜಿಸಲ್ಪಟ್ಟ ಅನೇಕ ಬಗೆಯ ದ್ರವ್ಯರಾಶಿಗಳಿಂದಲೂ, ಹೀನ ವರ್ಣರು ತ್ಯಜಿಸಿದ ವಸ್ತುಗಳಿಂದಲೂ ಭೂಮಿಯು ತನ್ನ ವಸುಂಧರಾ ಎಂಬ ನಾಮವನ್ನು ಸಾರ್ಥಕಗೊಳಿಸಿತು.

೫. ಆ ರಾಜೋತ್ತಮನು ತನ್ನ ರಾಜ್ಯದಲ್ಲಿದ್ದ ಪ್ರಜೆಗಳನ್ನು ತನ್ನ ಔರಸಪುತ್ರರಂತೆ ಉತ್ತಮ ರೀತಿಯಲ್ಲಿ ಪಾಲಿಸುತ್ತ ಯಾವ ಧನರಾಶಿಯನ್ನು ಸಂಪಾದಿಸಿದನೊ ಆ ಧನರಾಶಿಯಿಂದ ಅನೇಕ ಯಜ್ಞಕರ್ಮಗಳನ್ನು ಆಚರಿಸಿದನು.

೬. ಕ್ರೌಷ್ಟುಕಿ ಮುನಿಯೇ! ಆ ಧನದ ವಿನಿಯೋಗದಿಂದ ನೂರು ಸಹಸ್ರ ಸಂಖ್ಯೆಗಿಂತಲೂ ಹೆಚ್ಚು ಯಜ್ಞಗಳು ಅವನಿಂದ ಆಚರಿಸಲ್ಪಟ್ಟುವು. ಆ ಯಜ್ಞಗಳ ಸಂಖ್ಯೆಯನ್ನು ಹೇಳಲು ಸಾಧ್ಯವಿಲ್ಲ. ಅಯುತ, ಕೋಟಿ, ಪದ್ಮ ಮುಂತಾದ ಸಂಖ್ಯಾಶಬ್ದಗಳು ಯಜ್ಞಗಳನ್ನು ಎಣಿಸಲು ಸಾಲದಾಗಿವೆ.

ಅವಾಪ್ಯ ತೃಪ್ತಿಮತುಲಾಂ ಯಜ್ಞಭಾಗೈಃ ಸುರೈಃ ಸಹ ||೭||
ದಾನವಾನಾಂ ಸುವೀರ್ಯಾಣಾಂ ಜಘಾನ ನವತೀರ್ನವ |

ಬಲಂ ಚ ಬಲಿನಾಂ ಶ್ರೇಷ್ಠೋ ಜಮ್ಭಂ ಚಾಸುರಸತ್ತಮಮ್ ||೮||
ಅನ್ಯಾಂಶ್ಚ ಸುಮಹಾವೀರ್ಯಾನಾಜಘಾನಾಸುರದ್ವಿಷಃ |

ಪ್ರಜಾತೇಸ್ತನಯಾಃ ಪಞ್ಚ ಖನಿತ್ರಪ್ರಮುಖಾ ಮುನೇ ||೯||

ತೇಷಾಂ ಖನಿತ್ರೋ ರಾಜಾಭೂತ್ಪ್ರಖ್ಯಾತೋ ನಿಜವಿಕ್ರಮೈಃ |
ಸ ಶಾನ್ತಃ ಸತ್ಯವಾಕ್ ಶೂರಃ ಸರ್ವಪ್ರಾಣಿಹಿತೇ ರತಃ ||೧೦||

೭. ಪ್ರಾಂಶು ರಾಜನಿಗೆ ಪ್ರಜಾತಿ ಎಂಬ ಪುತ್ರನು ಜನಿಸಿದನು. ಅವನ ಯಜ್ಞಾನುಷ್ಠಾನದಲ್ಲಿ ದೇವೇಂದ್ರನು ಇತರ ದೇವತೆಗಳೊಂದಿಗೆ ಬಂದು ಯಜ್ಞಭಾಗವನ್ನು ಸ್ವೀಕರಿಸಿ ತೃಪ್ತಿಯನ್ನು ಹೊಂದಿದನು.

೮. ಮತ್ತು ಆ ಯಜ್ಞಭಾಗದ ತೃಪ್ತಿಯಿಂದ ಬಲಗೊಂಡ ದೇವೇಂದ್ರನು ಬಲಿಷ್ಠರಲ್ಲಿ ಹೆಚ್ಚಿನವನಾಗಿ ಮಹಾವೀರ್ಯ ಸಂಪನ್ನರಾದ ತೊಂಭತ್ತೊಂಭತ್ತು ಮಂದಿ ದಾನವರನ್ನು ಮತ್ತು ಅಸುರ ಶ್ರೇಷ್ಠರಾದ ಬಲಾಸುರ, ಜಂಭಾಸುರರನ್ನು ವಧಿಸಿದನು.

೯. ಮುನಿಯೆ! ಹಾಗು ದೇವಶತ್ರುಗಳಾದ ಇನ್ನೂ ಅನೇಕ ಮಂದಿ ರಾಕ್ಷಸರನ್ನು ಯಜ್ಞದ ಹವಿರ್ಭೋಗದ ಬಲದಿಂದ ಸಂಹರಿಸಿದನು. ಆ ಪ್ರಜಾತಿ ಎಂಬುವನಿಗೆ ಖನಿತ್ರ ಎಂಬುವನು ಆದಿಯಾಗಿ ಐದು ಮಂದಿ ಪುತ್ರರು ಜನಿಸಿದರು.

೧೦. ಅವರಲ್ಲಿ ಖನಿತ್ರ ಎಂಬುವನು ತನ್ನ ವಿಕ್ರಮಗಳಿಂದ ಎಲ್ಲೆಡೆಗಳಲ್ಲಿ ಖ್ಯಾತಿಯನ್ನು ಗಳಿಸಿದವನಾಗಿ ಅವನೇ ರಾಜನಾದನು. ಖನಿತ್ರರಾಜನು ಶಾಂತಸ್ವಭಾವವುಳ್ಳವನೂ ಸತ್ಯವಂತನೂ, ಶೂರನೂ ಮತ್ತು ಸರ್ವ ಪ್ರಾಣಿಗಳ ಹಿತತತ್ಪರನೂ ಆಗಿದ್ದನು.

ಸ್ವಧರ್ಮಾಭಿರತೋ ನಿತ್ಯಂ ವೃದ್ಧಸೇವೀ ಬಹುಶ್ರುತಃ ।
ವಾಗ್ಮೀ ವಿನಯಸಂಪನ್ನಃ ಕೃತಾಸ್ತ್ರೋऽಪ್ಯವಿಕತ್ಥನಃ ॥೧೧॥

ಸರ್ವಲೋಕಪ್ರಿಯೋ ನಿತ್ಯಮುವಾಚೈತದಹರ್ನಿಶಮ್ ।
ನನ್ದನ್ತು ಸರ್ವಭೂತಾನಿ ಸ್ನಿಹ್ಯನ್ತು ವಿಜನೇಷ್ವಪಿ ॥೧೨॥

ಸ್ವಸ್ತ್ಯಸ್ತು ಸರ್ವಭೂತೇಷು ನಿರಾತಙ್ಕಾನಿ ಸನ್ತು ಚ ।
ಮಾ ವ್ಯಾಧಿರಸ್ತು ಭೂತಾನಾಮಾಧಯೋ ನ ಭವನ್ತು ಚ ॥೧೩॥

ಮೈತ್ರೀಮಶೇಷಭೂತಾನಿ ಪುಷ್ಯನ್ತು ಸಕಲೇ ಜನೇ ।
ಶಿವಮಸ್ತು ದ್ವಿಜಾತೀನಾಂ ಪ್ರೀತಿರಸ್ತು ಪರಸ್ಪರಮ್ ॥೧೪॥

---

೧೧. ಮತ್ತು ಖನಿತ್ರರಾಜನು ಸ್ವಧರ್ಮಾಚರಣೆಯಲ್ಲಿ ಆಸಕ್ತಿಯುಳ್ಳವನೂ, ಸಮಯದಲ್ಲಿ ವೃದ್ಧರನ್ನು ಸೇವಿಸುವವನೂ, ದೊಡ್ಡ ವಿದ್ಯಾವಂತನೂ, ವಾಗ್ಮಿಯೂ, ವಿನಯ ಸಂಪನ್ನನೂ ಮತ್ತು ಅಸ್ತ್ರವಿದ್ಯಾಪ್ರವೀಣನಾದರೂ ಆತ್ಮಪ್ರಶಂಸೆಗೆ ದೂರನೂ ಆಗಿದ್ದನು.

೧೨. ಸಮಸ್ತ ಲೋಕಗಳಿಗೆ ಪ್ರಿಯನೂ ಹಿತೈಷಿಯೂ ಆಗಿ ಹಗಲು-ರಾತ್ರಿ ವೇಳೆಗಳಲ್ಲಿ ಎಲ್ಲ ಹೀಗೆ ಹೇಳುತ್ತಿದ್ದನು ; ಸಮಸ್ತ ಪ್ರಾಣಿಗಳು ಆನಂದದಲ್ಲಿ ಮುಳುಗಿರಲಿ. ಹಾಗು ಬಾಂಧವ್ಯಾದಿಗಳಿಲ್ಲದ ಇತರ ಜನಾಂಗದಲ್ಲಿಯೂ ಸ್ನೇಹದಿಂದ ಇರಲಿ.

೧೩. ಸರ್ವ ಪ್ರಾಣಿಗಳಿಗೆ ಕಲ್ಯಾಣವಾಗಲಿ, ಸರ್ವ ಭೂತಗಳು ನಿರಾತಂಕವಾಗಿ ಜೀವಿಸಲಿ, ಸಮಸ್ತ ಜಂತುಗಳಿಗೆ ವ್ಯಾಧಿಪೀಡೆಯುಂಟಾಗದಿರಲಿ. ಮತ್ತು ಪಿಪ್ಪಕ್ಕ ಮನೋರೋಗಗಳು ಉಂಟಾಗದಿರಲಿ.

೧೪. ಸರ್ವ ಪ್ರಾಣಿಗಳು ಸಮಸ್ತ ಜನಾಂಗಗಳಲ್ಲಿಯೂ ಅಕೃತ್ರಿಮವಾದ ಮೈತ್ರಿಯನ್ನು ಪೋಷಿಸಲಿ. ಸರ್ವ ಭೂತಗಳಿಗೆ ಮಂಗಳವುಂಟಾಗಲಿ. ಮತ್ತು ದ್ವಿಜ ವರ್ಗಕ್ಕೆ ಪರಸ್ಪರ ಪ್ರೀತಿಯು ಅತಿಶಯವಾಗಿ ಬೆಳೆಯಲಿ.

ಸಮೃದ್ಧಿಃ ಸರ್ವವರ್ಣಾನಾಂ ಸಿದ್ಧಿರಸ್ತು ಚ ಕರ್ಮಣಾಮ್ ।
ಭೋ ಲೋಕಾಃ ಸರ್ವಭೂತೇಷು ಶಿವಾ ವೋಽಸ್ತು ಸದಾ ಮತಿಃ ॥೧೫॥

ಯಥಾತ್ಮನಿ ಯಥಾ ಪುತ್ರೇ ಹಿತಮಿಚ್ಛಥ ಸರ್ವದಾ ।
ತಥಾ ಸಮಸ್ತಭೂತೇಷು ವರ್ತಧ್ವಂ ಹಿತಬುದ್ಧಯಃ ॥೧೬॥

ಏತದ್ವೋ ಹಿತಮತ್ಯನ್ತಂ ಕೋ ವಾ ಕಸ್ಯಾಪರಾಧ್ಯತೇ ॥೧೭॥

ಯತ್ಕರೋತ್ಯಹಿತಂ ಕಿಂಚಿತ್ಕಸ್ಯಚಿನ್ಮೂಢಮಾನಸಃ ।
ತಂ ಸಮಭ್ಯೇತಿ ತನ್ನೂನಂ ಕರ್ತೃಗಾಮಿ ಫಲಂ ಯತಃ ॥೧೮॥

ಇತಿ ಮತ್ವಾ ಸಮಸ್ತೇಷು ಭೋ ಲೋಕಾ ಹಿತಬುದ್ಧಯಃ ।
ಸನ್ತು ಮಾ ಲೌಕಿಕಂ ಪಾಪಂ ಲೋಕಾಃ ಪ್ರಾಪ್ಸ್ಯಥ ವೈ ಬುಧಾಃ ॥೧೯॥

---

೧೫. ಸರ್ವ ವರ್ಣಗಳಲ್ಲಿ ಜನಿಸಿದ ಪ್ರಜೆಗಳೆಲ್ಲರೂ ಸಮೃದ್ಧಿಯನ್ನು ಹೊಂದಲಿ. ಅವರು ಆಚರಿಸಿದ ಪುಣ್ಯಕರ್ಮಗಳ ಸಿದ್ಧಿಯು ದೊರೆಯಲಿ. ಎಲೈ ಮಾನವರೇ ! ನಿಮಗೆ ಸರ್ವಭೂತಗಳಲ್ಲಿಯೂ ಮಂಗಳವನ್ನು ಹಾರೈಸುವ ಬುದ್ಧಿಯು ಯಾವಾಗಲೂ ಇರಲಿ.

೧೬. ನೀವು ಎಲ್ಲರೂ ನಿಮ್ಮ ಸ್ವವಿಷಯದಲ್ಲಿ ಮತ್ತು ಪುತ್ರರ ವಿಷಯದಲ್ಲಿ ಹೇಗೆ ಯಾವಾಗಲೂ ಹಿತವನ್ನು ಬಯಸುತ್ತೀರೋ, ಹಾಗೆ ಸರ್ವ ಭೂತಗಳಲ್ಲಿ ಹಿತಬುದ್ಧಿಯುಳ್ಳವರಾಗಿ ವರ್ತಿಸಿರಿ.

೧೭. ಈ ರೀತಿಯಲ್ಲಿ ನೀವೆಲ್ಲರೂ ವರ್ತಿಸುವುದು ಎಲ್ಲರಿಗೂ ಹಿತಕರವಾದ ಮಾರ್ಗವು. ಈ ವಿಧಾನದಿಂದ ಯಾರು ಯಾರಿಗೆ ತಾನೆ ಅಪರಾಧವೆಸಗುವನು ? ಈ ವರ್ತನೆಯಿಂದ ಒಬ್ಬರಿಂದೊಬ್ಬರಿಗೆ ಅಪರಾಧವಾಗುವುದಿಲ್ಲ.

೧೮. ಮೂಢ ಬುದ್ಧಿಯುಳ್ಳ ಮಾನವನು ಯಾರೇ ಆಗಲಿ ಪರನೊಬ್ಬನಿಗೆ ಅಹಿತವನ್ನು ಮಾಡಿದರೆ ಆ ಪಾಪಕರ್ಮವು ಅವನಲ್ಲಿಯೇ ಬಂದು ದುಃಖ ಕಾರಣವಾಗಿ ಪರಿಣಮಿಸುವುದು. ಕರ್ಮಫಲವು ಕರ್ತೃವಿನಲ್ಲಿ ಉಂಟಾಗುವುದು.

೧೯. ಎಲೈ ಮಾನವರೇ ! ನೀವು ಈ ತತ್ತ್ವವನ್ನು ತಿಳಿದು ಸಮಸ್ತ ಭೂತಗಳಲ್ಲಿ ಹಿತಬುದ್ಧಿಯುಳ್ಳವರಾಗಿ ವರ್ತಿಸಿರಿ. ಪ್ರಾಜ್ಞರೇ ! ನೀವು ಪರರಿಗೆ ಅಹಿತವನ್ನು ಮಾಡಿ ಆ ಲೌಕಿಕವಾದ ಪಾಪಕ್ಕೆ ಗುರಿಯಾಗಬೇಡಿ.

ಯೋ ಮೇಽದ್ಯ ಸ್ನಿಹ್ಯತೇ ತಸ್ಯ ಶಿವಮಸ್ತು ಸದಾ ಭುವಿ ।
ಯಶ್ಚ ಮಾಂ ದ್ವೇಷ್ಟಿ ಲೋಕೇಽಸ್ಮಿನ್ ಸೋಽಪಿ ಭದ್ರಾಣಿ ಪಶ್ಯತು ॥೨೦॥

ಏವಂಸ್ವರೂಪಃ ಪುತ್ರೋಽಭೂತ್ಖನಿತ್ರಸ್ತಸ್ಯ ಭೂಪತೇಃ ।
ಸಮಸ್ತಗುಣಸಮ್ಪನ್ನಃ ಶ್ರೀಮಾನಬ್ಜದಲೇಕ್ಷಣಃ ॥೨೧॥

ತೇನ ತೇ ಭ್ರಾತರಃ ಪ್ರೀತ್ಯಾ ಪೃಥಗ್ರಾಜ್ಯೇಷು ಯೋಜಿತಾಃ ।
ಸ್ವಯಂ ಚ ಪೃಥಿವೀಮೇತಾಂ ಬುಭುಜೇ ಸಾಗರಾಮ್ಬರಾಮ್ ॥೨೨॥

ಪ್ರಾಚ್ಯಾಂ ತೇನ ಕೃತಃ ಶೌರಿರ್ದಕ್ಷಿಣಸ್ಯಾಮುದಾವಸುಃ ।
ದಿಶಿ ಪ್ರತೀಚ್ಯಾಂ ಸುನಯ ಉತ್ತರಸ್ಯಾಂ ಮಹಾರಥಃ ॥೨೩॥

---

೨೦. ಯಾವ ಮಾನವನು ಇಂದು ನನ್ನಲ್ಲಿ ಸ್ನೇಹದಿಂದಿರುವನೋ ಅವನಿಗೆ ಭೂಮಿಯಲ್ಲಿ ಯಾವಾಗಲೂ ಕಲ್ಯಾಣವುಂಟಾಗಲಿ. ಮತ್ತು ಯಾವನು ನನ್ನನ್ನು ದ್ವೇಷಿಸುತ್ತಿರುವನೋ ಅವನು ಈ ಲೋಕದಲ್ಲಿ ಮಂಗಳಗಳನ್ನು ಅನುಭವಿಸಲಿ.

೨೧. ಪ್ರಜಾತಿರಾಜನಿಗೆ ಸಕಲಗುಣಗಳಿಂದ ರಾಜಿತನೂ, ಕಾಂತಿವಂತನೂ, ಕಮಲದಲದಂತೆ ಸುಂದರವಾದ ದೃಷ್ಟಿಯುಳ್ಳವನೂ ಮತ್ತು ಸರ್ವಭೂತಹಿತೈಷಿತ್ವಾದಿಸ್ವರೂಪದಿಂದ ಕೂಡಿದವನೂ ಆದ ಖನಿತ್ರನು ಪುತ್ರನಾಗಿದ್ದನು.

೨೨. ಆ ಖನಿತ್ರನಿಂದ ಇತರ ಸಹೋದರರು ಪ್ರೀತಿಯಿಂದ ಬೇರೆಬೇರೆಯಾಗಿ ಖಂಡರಾಜ್ಯಗಳಲ್ಲಿ ಇರಿಸಲ್ಪಟ್ಟರು. ತಾನು ಸಮುದ್ರದ ಅವಧಿಯಿಂದ ಕೂಡಿದ ಅಖಂಡ ಭೂಮಿಯನ್ನು ಪಾಲಿಸಿದನು.

೨೩. ಶೌರಿ ಎಂಬ ಸಹೋದರನು ಖನಿತ್ರನಿಂದ ಪೂರ್ವದಿಕ್ಕಿನ ರಾಜ್ಯದಲ್ಲಿ ಇರಿಸಲ್ಪಟ್ಟನು. ಉದಾವಸು ಎಂಬುವನು ದಕ್ಷಿಣದಿಕ್ಕಿನಲ್ಲಿ ಸ್ಥಾಪಿಸಲ್ಪಟ್ಟನು. ಪಶ್ಚಿಮದಿಕ್ಕಿನಲ್ಲಿ ಸುನಯ ಎಂಬುವನು ನಿಯೋಜಿಸಲ್ಪಟ್ಟನು ಮತ್ತು ಉತ್ತರದಿಕ್ಕಿನಲ್ಲಿ ಮಹಾರಥನೆಂಬುವನು ಇರಿಸಲ್ಪಟ್ಟನು.

ತೇಷಾಂ ತಸ್ಯ ಚ ಭೂಪಸ್ಯ ಪೃಥಗ್ಗೋತ್ರಾಃ ಪುರೋಹಿತಾಃ ।
ಬಭೂವುರ್ಮನಯಶ್ಚೈವ ಮನ್ತ್ರಿವಂಶಕ್ರಮಾಗತಾಃ ॥೨೪॥

ಶೌರೇರತ್ರಿಕುಲೋದ್ಭೂತಃ ಸುಹೋತ್ರೋ ನಾಮ ವೈ ದ್ವಿಜಃ ।
ಉದಾವಸೋಃ ಕುಶಾವರ್ತೋ ಗೌತಮಾನ್ವಯಜೋಽಭವತ್॥೨೫॥

ಕಾಶ್ಯಪಃ ಪ್ರಮತಿರ್ನಾಮ ಸುನಯಸ್ಯ ಪುರೋಹಿತಃ ।
ಮಹಾರಥಸ್ಯ ವಾಸಿಷ್ಠಃ ಪುರೋಧಾಭೂನ್ಮಹೀಭೃತಃ ॥೨೬॥

ಬುಭುಜುಸ್ತೇ ಸ್ವರಾಜ್ಯಾನಿ ಚತ್ವಾರೋಽಪಿ ನರಾಧಿಪಾಃ ।
ಖನಿತ್ರಶ್ಚಾಧಿಪಸ್ತೇಷಾಮಶೇಷವಸುಧಾಧಿಪಃ ॥೨೭॥

---

೨೪. ಶೌರಿ ಮುಂತಾದ ಆಯಾಯ ದಿಕ್ಕುಗಳಲ್ಲಿರುವ ರಾಜರಿಗೂ ಮತ್ತು ಖನಿತ್ರನಿಗೂ ಬೇರೆ ಬೇರೆ ಗೋತ್ರಗಳಲ್ಲಿ ಜನಿಸಿದ ಮುನಿಗಳು ಪುರೋಹಿತರಾಗಿದ್ದರು. ಹಾಗು ಮಂತ್ರಿವಂಶ ಕ್ರಮದಿಂದ ಬಂದಿರುವವರು ಬೇರೆ ಬೇರೆಯಾಗಿ ಮಂತ್ರಿಗಳಾಗಿದ್ದರು.

೨೫. ಶೌರಿರಾಜನಿಗೆ ಅತ್ರಿಮುನಿಯ ವಂಶದಲ್ಲಿ ಜನಿಸಿದ ಸುಹೋತ್ರನೆಂಬ ಬ್ರಹ್ಮರ್ಷಿಯು ಪುರೋಹಿತನಾಗಿದ್ದನು. ಉದಾವಸು ಎಂಬುವನಿಗೆ ಗೌತಮಮುನಿಯ ವಂಶದಲ್ಲಿ ಜನಿಸಿದ ಕುಶಾವರ್ತ ಮುನಿಯು ಪುರೋಹಿತನಾಗಿದ್ದನು.

೨೬. ಸುನಯ ಎಂಬ ರಾಜನಿಗೆ ಕಶ್ಯಪಮುನಿಯ ವಂಶದಲ್ಲಿ ಹುಟ್ಟಿದ ಪ್ರಮತಿ ಎಂಬುವನು ಪುರೋಹಿತನು. ಮತ್ತು ಮಹಾರಥ ಎಂಬ ರಾಜನಿಗೆ ವಸಿಷ್ಠಮುನಿಯ ಗೋತ್ರದಲ್ಲಿ ಜನಿಸಿದ ಮುನಿಯೊಬ್ಬನು ಪುರೋಹಿತನು.

೨೭. ಹೀಗೆ ಶೌರಿ ಮುಂತಾದ ನಾಲ್ಕುಮಂದಿಯು ತಮ್ಮ ತಮ್ಮ ರಾಜ್ಯಗಳನ್ನು ಪಾಲಿಸುತ್ತ ರಾಜಭೋಗವನ್ನು ಅನುಭವಿಸಿದರು. ಖನಿತ್ರನು ಅವರೆಲ್ಲರಿಗೆ ಅಧಿಪತಿಯಾಗಿ ಅಶೇಷಭೂಮಿಗೆ ಅಧಿಪತಿಯಾಗಿದ್ದನು.

ತೇಷು ಭ್ರಾತೃಷ್ವಶೇಷೇಷು ಖನಿತ್ರಃ ಸ ಮಹೀಪತಿಃ ।
ಪ್ರಜಾಸು ಚ ಸಮಸ್ತಾಸು ಪುತ್ರೇಷ್ವಿವ ಸದಾ ಹಿತಃ ॥೨೮॥

ಏಕದಾ ಮನ್ತ್ರಿಣಾ ಶೌರಿಃ ಸ ಪ್ರೋಕ್ತೋ ವಿಶ್ವವೇದಿನಾ ।
ವಿವಿಕ್ತೇ ಪೃಥಿವೀಪಾಲ ಕಿಂಚಿದ್ವಕ್ತವ್ಯಮಸ್ತಿ ನಃ ॥೨೯॥

ಯಸ್ಯೇಯಂ ಪೃಥಿವೀ ಕೃತ್ಸ್ನಾ ಯಸ್ಯ ಭೂಪಾ ವಶಾನುಗಾಃ ।
ಸ ರಾಜಾ ತಸ್ಯ ಪುತ್ರಶ್ಚ ತತ್ಪೌತ್ರಾಶ್ಚಾನ್ವಯಸ್ತತಃ ॥೩೦॥

ಇತರೇ ಭ್ರಾತರಸ್ತಸ್ಯ ಪ್ರಾಕ್ ಸ್ವಲ್ಪವಿಷಯಾಧಿಪಾಃ ।
ತತ್ಪುತ್ರಾಶ್ಚಾಲ್ಪಕಾಸ್ತಸ್ಮಾತ್ತತ್ಪೌತ್ರಾಶ್ಚಾಲ್ಪಕಾಲ್ಪಕಾಃ ॥೩೧॥

ಕಾಲೇನ ಹ್ರಾಸಮಾಸಾದ್ಯ ಪುರುಷಾತ್ಪುರುಷಾನ್ತರಮ್ ।
ಕೃಷ್ಯೋಪಜೀವಿನೋ ಭೂಪ ಭವನ್ತೀತಿ ತದನ್ವಯಾಃ ॥೩೨॥

---

೨೮. ಆ ಎಲ್ಲ ಭ್ರಾತೃವರ್ಗದಲ್ಲಿ ಖನಿತ್ರನೆಂಬ ರಾಜನು ಸಮಸ್ತ ಪ್ರಜೆಗಳಲ್ಲಿ ಪುತ್ರಪ್ರೀತಿಯಿಂದ ಯಾವಾಗಲೂ ಅವರ ಹಿತವನ್ನು ಬಯಸುವವನಾಗಿ ರಾಜ್ಯಪಾಲನೆಯನ್ನು ಮಾಡಿದನು.

೨೯. ಹೀಗಿರಲು ಒಂದು ಸಮಯದಲ್ಲಿ ವಿಶ್ವವೇದಿ ಎಂಬ ಒಬ್ಬ ಮಂತ್ರಿಯಿಂದ ಶೌರಿ ಎಂಬ ತನ್ನ ರಾಜನು ಏಕಾಂತದಲ್ಲಿ ಹೀಗೆ ಬೋಧಿಸಲ್ಪಟ್ಟನು. ಎಲೈ, ರಾಜನೇ! ನಿನಗೆ ನಾನುಹೇಳಬೇಕಾದುದೊಂದು ವಿಷಯವಿದೆ.

೩೦. ಯಾರಿಗೆ ಸಂಪೂರ್ಣ ಪೃಥಿವಿಯ ಆಧಿಪತ್ಯವು ಲಭಿಸುವುದೋ, ಯಾರಿಗೆ ಇತರ ರಾಜರು ವಶರಾಗಿರುವರೋ ಅವನು ರಾಜನಾಗುವನು. ಮುಂದೆ ಅವನ ಪುತ್ರನೂ ಪ್ರಪೌತ್ರರೂ ರಾಜರಾಗಿ ಆ ವಂಶವು ರಾಜವಂಶವಾಗುವುದು.

೩೧. ಅಂತಹ ರಾಜನ ಇತರ ಸಹೋದರರು ಮೊದಲು ಮೊದಲು ಸ್ವಲ್ಪಭಾಗ ರಾಜ್ಯಕ್ಕೆ ಅಧಿಪತಿಯಾಗುವರು. ಕ್ರಮವಾಗಿ ಅವರ ಪುತ್ರರು ಇನ್ನೂ ಅಲ್ಪರಾಜರೂ ಪೌತ್ರರು ಮತ್ತಷ್ಟು ಅಲ್ಪಾಲ್ಪ ರಾಜರೂ ಆಗುವರು.

೩೨. ಹಾಗೆ ಅಲ್ಪಾಲ್ಪ ರಾಜರಾಗುವವರು ಕಾಲಕ್ರಮದಿಂದ ಒಬ್ಬನಿಂದ ಮತ್ತೊಬ್ಬನ ಅಂತರದಲ್ಲಿ ಎಷ್ಟೋ ಹ್ರಾಸವನ್ನು ಹೊಂದಿ ಆ ವಂಶದವರು ಕೃಷಿ ಮುಂತಾದ ಜೀವನೋಪಾಯವನ್ನು ಕೈಗೊಳ್ಳುವಂತೆ ಆಗುವುದು.

ನೋದ್ಧಾರಂ ಕುರುತೇ ಭ್ರಾತಾ ಭ್ರಾತೃಸ್ನೇಹಬಲಾರ್ಪಣಃ ।
ಸ್ನೇಹಃ ಕಃ ಪೃಥಿವೀಪಾಲಪರಯೋರ್ಭ್ರಾತೃಪುತ್ರಯೋಃ ॥೩೩॥

ತತ್ಪುತ್ರಯೋಃ ಪರತರಾ ಮತಿರ್ಭವತಿ ಪಾರ್ಥಿವ ।
ತತ್ಪುತ್ರಃ ಕೇನ ಕಾರ್ಯೇಣ ಪ್ರೀತಿಯುಕ್ತೋ ಭವಿಷ್ಯತಿ ॥೩೪॥

ಅಥವಾ ಯೇನ ತೇನೈವ ಸನ್ತೋಷಂ ಕುರುತೇ ನೃಪಃ ।
ಕ್ರಿಯತೇ ತತ್ಕಿಮರ್ಥಂ ತು ಭೂಪೈರ್ಮನ್ತ್ರಿಪರಿಗ್ರಹಃ ॥೩೫॥

ಭುಜ್ಯತೇ ಸಕಲಂ ರಾಜ್ಯಂ ಮಯಾ ತೇ ಮನ್ತ್ರಿಣಾ ಸತಾ ।
ತತ್ಕಿಂ ಮುಧಾ ಧಾರಯಸೇ ಸನ್ತೋಷಂ ಕುರುತೇ ಯದಿ ॥೩೬॥

---

೩೩. ವಾಸ್ತವವಾಗಿ ಭ್ರಾತೃವಾಗಿ ಜನಿಸಿದ ರಾಜನು ಮತ್ತೊಬ್ಬನಲ್ಲಿ ಭ್ರಾತೃಸ್ನೇಹದ ಬಲದಿಂದ ಅವನ ಉದ್ಧಾರಕ್ಕಾಗಿ ಯತ್ನಿಸುವುದಿಲ್ಲ. ಪೃಥಿವೀ ಪಾಲನದಲ್ಲಿ ಆಸಕ್ತರಾದ ಭ್ರಾತೃಪುತ್ರರಿಬ್ಬರಿಗೆ ಅನ್ಯೋನ್ಯ ಪ್ರೀತಿಯೆಂಬುದು ಎಲ್ಲಿದೆ ?

೩೪. ರಾಜನೇ ! ಅವರವರ ಪುತ್ರರಿಗೆ ಮತ್ತಷ್ಟು "ತಾನು ಬೇರೆ, ಅವನು ಬೇರೆ" ಎಂಬ ಭೇದಬುದ್ಧಿಯು ಉಂಟಾಗುವುದು. ಹೀಗಿರಲು ಅವನ ಪುತ್ರನು ಯಾವ ನಿಮಿತ್ತದಿಂದ ಪ್ರೀತಿವಂತನಾಗಿರಬೇಕು ?

೩೫. ಒಂದು ಪಕ್ಷದಲ್ಲಿ ರಾಜನು ಎಷ್ಟಿದೆಯೊ ಅಷ್ಟೇ ಅಂಶದಿಂದ ತೃಪ್ತಿಯಿಂದ ಇರುವುದಾದರೆ ಆಗ ಅಂತಹ ರಾಜರು ತಮ್ಮ ಬಳಿಯಲ್ಲಿ ಮಂತ್ರಿಗಳನ್ನು ನಿಯಮಿಸಿಕೊಂಡಿರುವುದೇಕೆ ?

೩೬. ನಾನು ನಿನ್ನಲ್ಲಿ ಮಂತ್ರಿಯಾಗಿರುವೆನು. ನೀನು ಸಮಸ್ತ ರಾಜ್ಯವನ್ನೂ ಭುಂಜಿಸುವವನಾಗುತ್ತೀಯೆ. ಹೀಗಿರಲು ನೀನು ಈಗ ವ್ಯರ್ಥನಾಗಿ ತೃಪ್ತಿಯಿಂದ ಇರುವುದೇಕೆ ? ಯತ್ನಮಾಡಿ ಸಕಲ ರಾಜ್ಯಕ್ಕೆ ನೀನು ಅಧಿಪತಿಯಾಗು.

ಕಾರ್ಯನಿಷ್ಪಾದಕಂ ರಾಜ್ಯಂ ಕರಣಂ ಕರ್ತುರಿಷ್ಯತೇ ।
ರಾಜ್ಯಲಬ್ಧಿಶ್ಚ ತೇ ಕಾರ್ಯಂ ತ್ವಂ ಕರ್ತಾ ಕರಣಂ ವಯಮ್ ॥೩೭॥

ಸೋಽಸ್ಮಾಭಿಃ ಕರಣೈ ರಾಜ್ಯಂ ಪಿತೃಪೈತಾಮಹಂ ಕುರು ।
ಫಲಪ್ರದಾ ಭವಿಷ್ಯಾಮಃ ಪರಲೋಕೇ ನ ತೇ ವಯಮ್ ॥೩೮॥

ರಾಜೋವಾಚ :—

ಜ್ಯೇಷ್ಠೋ ಭ್ರಾತಾ ಮಹೀಪಾಲೋ ವಯಂ ತಸ್ಯಾನುಜಾ ಯತಃ ।
ತತಃ ಸ ಭುಙ್ಕ್ತೇ ಪೃಥಿವೀಂ ವಯಂ ಚಾಲ್ಪವಸುನ್ಧರಾಮ್ ॥೩೯॥

ವಯಂ ತು ಭ್ರಾತರಃ ಪಞ್ಚ ಪೃಥ್ವೀ ಚೈಕಾ ಮಹಾಮತೇ ।
ಅತೋಽಸ್ಮಾಕಂ ಪೃಥಗೈಶ್ವರ್ಯಂ ಕಥಂ ಕೃತ್ಸ್ನಂ ಭವಿಷ್ಯತಿ ॥೪೦॥

---

೩೭. ರಾಜ್ಯವೆಂಬುದು ಕಾರ್ಯದಲ್ಲಿ ತೊಡಗುವವನಿಗೆ ಒಂದು ಸಾಧನವು. ಅದು ಸಂತೋಷವನ್ನುಂಟುಮಾಡುವ ಸಿದ್ಧಿಯಲ್ಲ. ಸ್ವಲ್ಪ ರಾಜ್ಯವನ್ನು ಹೊಂದಿದವನು ಅದರ ವಿಸ್ತರಣೆಯನ್ನು ಮಾಡಬೇಕು. ಮಂತ್ರಿಗಳಾದ ನಾವು ಅದಕ್ಕೆ ಸಹಾಯಕರು.

೩೮. ಆದುದರಿಂದ ನೀನು ನಮ್ಮ ಸಹಾಯದಿಂದ ಪಿತೃ-ಪಿತಾಮಹ ವಂಶಕ್ರಮದಿಂದ ಬಂದ ಅಖಿಲ ರಾಜ್ಯವನ್ನು ಪಾಲಿಸು. ನಾವು ನಿನಗೆ ಪರಲೋಕದಲ್ಲಿ ಸಹಾಯ ಮಾಡುವವರಲ್ಲ. ಈಗ ರಾಜ್ಯವೃದ್ಧಿಯಲ್ಲಿ ಮಾತ್ರ ನಾವು ಸಹಾಯಕರಾಗಿರುವೆವು.

ಶೌರಿರಾಜನಿಂತೆಂದನು :—

೩೯. ನಮಗೆ ಜ್ಯೇಷ್ಠನಾಗಿ ಜನಿಸಿದ ಖನಿತ್ರನು ಭೂಪಾಲಕನಾಗಿರುವನು. ನಾವು ಅವನ ಅನುಜರಲ್ಲವೆ? ಆದ್ದರಿಂದ ಅವನು ಸಕಲ ಭೂಮಿಯನ್ನು ಪಾಲಿಸುವನು. ನಾವು ಅಲ್ಪಭೂಮಿಗೆ ಪಾಲಕರಾಗಿರುವೆವು. ಇದರಲ್ಲಿ ತಪ್ಪೇನು?

೪೦. ಮಹಾಪ್ರಜ್ಞಾನಿಯಾದ ಮಂತ್ರಿಯೇ! ನಾವು ಸಹೋದರರು ಐದು ಮಂದಿಯಿರುವೆವು. ಭೂಮಿಯು ಒಂದಾಗಿದೆ. ಹೀಗಿರಲು ಐದು ಮಂದಿಗೆ ಒಂದೇ ಪೃಥಕ್ವಾಗಿ ಅಖಂಡ ಭೂಮಂಡಲದ ಆಧಿಪತ್ಯವು ಹೇಗೆ ಲಭಿಸುವುದು?

ವಿಶ್ವವೇದ್ಯುವಾಚ :—

ಏವಮೇತದ್ಭವತ್ವತ್ರ ಯದ್ಯೇಕಾ ವಸುಧಾ ನೃಪ ।
ತಾಂ ತ್ವಮೇವಾಭಿಪದ್ಯಸ್ವ ಜ್ಯೇಷ್ಠಃ ಶಾಸ್ತು ಯಥಾ ಭವಾನ್ ॥೪೧॥

ಸರ್ವಾಧಿಪತ್ಯಃ ಸರ್ವೇಭ್ಯೋ ಭವ ತ್ವಮಖಿಲೇಶ್ವರಃ ।
ಯತನ್ತೇ ಚ ಯಥಾಹಂ ತೇ ತೇಷಾಮಪಿ ಹಿ ಮನ್ತ್ರಿಣಃ ॥೪೨॥

ರಾಜೋವಾಚ :—

ಜ್ಯೇಷ್ಠೋ ರಾಜಾ ಯಥಾ ಪ್ರೀತ್ಯಾ ಭಜತೇಽಸ್ಮಾನ್ ಸುತಾನಿವ ।
ಕಥಂ ತಸ್ಯ ಕರಿಷ್ಯಾಮಿ ಮಮತ್ವಂ ಜಗತೀಗತಮ್ ॥೪೩॥

ವಿಶ್ವವೇದಿಯು ಹೇಳಿದನು :—

೪೧. ಎಲೈ ರಾಜನೇ ! ನೀನು ಹೇಳಿರುವುದು ಸತ್ಯ. ಭೂಮಿಯು ಒಂದೇ ಆಗಿದೆ. ಹಾಗೆ ಇರಲಿ. ಒಂದೇ ಆದ ಭೂಮಿಯನ್ನು ಸಮಗ್ರವಾಗಿ ನೀನೇ ಶಾಸನಮಾಡು. ಈಗ ನೀನು ಹೇಗೆ ಇರುವೆಯೋ ಹಾಗೆ ನಿನ್ನ ಜ್ಯೇಷ್ಠನು ಖಂಡಾಧಿಪತಿಯಾಗಲಿ.

೪೨. ನೀನು ಎಲ್ಲಕ್ಕೂ ಈಶ್ವರನಾಗಿ ಎಲ್ಲರಿಗಿಂತಲೂ ವಿಶೇಷವಾದ ಸರ್ವಾಧಿಪತ್ಯವನ್ನು ಅನುಭವಿಸು. ಈ ಸಂಕಲ್ಪದಿಂದ ನನ್ನಂತೆ ಅವರವರ ಮಂತ್ರಿಗಳು ಕೂಡ ಸಂತತವಾಗಿ ಪ್ರಯತ್ನಿಸುತ್ತಿರುವರು.

ರಾಜನಿಂತೆಂದನು :—

೪೩. ನಮಗೆ ಜ್ಯೇಷ್ಠನಾಗಿ ಜನಿಸಿದವನು ರಾಜನಾಗಿ ನಮ್ಮನ್ನು ಪುತ್ರರಂತೆ ಪ್ರೀತಿಯಿಂದ ಸಲಹುತ್ತಿರುವನು. ಹೀಗಿರಲು ಅವನಿಗೆ ಪೃಥಿವಿಯಲ್ಲಿ-ರುವ ಮಮತ್ವವನ್ನು ನಾನು ಹೇಗೆ ಹೊಂದಲಿ ? ಮತ್ತು ಅವನನ್ನು ಹೇಗೆ ನಾನು ಗೌರವಿಸಲಿ ?

ವಿಶ್ವವೇದ್ಯುವಾಚ :—

ರಾಜ್ಯೇ ಸ್ಥಿತಃ ಪೂಜಯೇಥಾ ಜ್ಯೇಷ್ಠಂ ಭೂಪಾರ್ಹಣೈರ್ಧನೈಃ ।
ಕನಿಷ್ಠಜ್ಯೇಷ್ಠತಾ ಕೇಯಂ ರಾಜ್ಯಂ ಪ್ರಾರ್ಥಯತಾಂ ನೃಣಾಮ್ ॥೪೪॥

ಮಾರ್ಕಣ್ಡೇಯ ಉವಾಚ :—

ತಥೇತಿ ಚ ಪ್ರತಿಜ್ಞಾತೇ ಭೂಭುಜಾ ತೇನ ಸತ್ತಮ ।
ವಿಶ್ವವೇದೀ ತತೋ ಮನ್ತ್ರೀ ತದಾಪ್ತ್ಯಾನನಯದ್ವಶಮ್ ॥೪೫॥

ತೇಷಾಂ ಪುರೋಹಿತಾಂಶ್ಚೈವ ಆತ್ಮನಃ ಶಾನ್ತಿಕಾದಿಷು ।
ನಿಯೋಜಯಾಮಾಸ ತತಃ ಖನಿತ್ರಸ್ಯಾಭಿಚಾರಕೇ ॥೪೬॥

ಬಿಭೇದ ತಸ್ಯ ನಿಭೃತಾನ್ ಸಾಮದಾನಾದಿಭಿಸ್ತಥಾ ।
ಚಕ್ರೇ ಚ ಪರಮೋದ್ಯೋಗಂ ನಿಜದಣ್ಡಪ್ರಭಾವನೇ ॥೪೭॥

ವಿಶ್ವವೇದಿಯು ಹೇಳಿದನು :--

೪೪. ಎಲೈ, ರಾಜನೇ! ನೀನು ರಾಜ್ಯವನ್ನಾಳುವ ಪದವಲ್ಲಿ ಇದ್ದು ಜ್ಯೇಷ್ಠನನ್ನು ಯೋಗ್ಯವಾದ ಸತ್ಕಾರ ಧನಾರ್ಪಣಗಳಿಂದ ಗೌರವಿಸು. ರಾಜ್ಯವನ್ನು ಪ್ರಾರ್ಥಿಸುವ ಮಾನವರಲ್ಲಿ ಕನಿಷ್ಠ-ಜ್ಯೇಷ್ಠ ಎಂಬ ತಾರತಮ್ಯವು ಸಮಂಜಸವಲ್ಲ.

ಮಾರ್ಕಂಡೇಯ ಮುನಿಯು ಹೇಳಿದನು :- -

೪೫. ಸಾಧೂತ್ತಮನಾದ ಕ್ರೌಷ್ಟುಕಿಯೇ! ಆ ಶೌರಿರಾಜನು ಇದನ್ನು ಕೇಳಿ "ಹಾಗೆ ಆಗಲಿ" ಎಂದು ಪ್ರತಿಜ್ಞೆಮಾಡಿದನು. ತರುವಾಯ ವಿಶ್ವವೇದಿಯೆಂಬ ಅವನ ಮಂತ್ರಿಯು ಅವನ ಇತರ ಭಾತೃಜನರನ್ನು ವಶಮಾಡಿಕೊಂಡನು.

೪೬. ಮತ್ತು ಆಯಾಯ ರಾಜರ ಆತ್ಮಶಾಂತಿ ಕರ್ಮಗಳಲ್ಲಿ ತತ್ಪರರಾದ ಎಲ್ಲ ಪುರೋಹಿತರನ್ನು ಖನಿತ್ರನ ಆಭಿಚಾರಿಕಕರ್ಮದಲ್ಲಿ ನಿಯೋಜಿಸಿದನು. ಆ ಪುರೋಹಿತರಿಂದ ಖನಿತ್ರನಿಗೆ ಶೂನ್ಯಕರ್ಮಗಳನ್ನು ಮಾಡಿಸಿದನು.

೪೭. ಮತ್ತು ಖನಿತ್ರನಿಗೆ ಅಂತರಂಗರಾಗಿದ್ದ ಮುಖ್ಯ ಜನರನ್ನು ಸಾಮ-ದಾನ ಮುಂತಾದ ಉಪಾಯಗಳಿಂದ ಭೇದಿಸಿದನು. ಹಾಗು ತನ್ನ ಸೇನಾಬಲವನ್ನು ಹೆಚ್ಚಿಸಿಕೊಳ್ಳುವುದರಲ್ಲಿ ವಿಶೇಷ ಉದ್ಯಮವನ್ನು ಕೈಗೊಂಡನು.

ಆಭಿಚಾರಿಕಮತ್ಯುಗ್ರಮಹನ್ಯಹನಿ ಕುರ್ವತಾಮ್ ।
ಪುರೋಧಸಾಂ ಚತುರ್ಣಾಂ ಚ ಜಜ್ಞೇ ಕೃತ್ಯಾಚತುಷ್ಟಯಮ್ ॥೪೮॥

ವಿಕರಾಲಂ ಮಹಾವಕ್ತ್ರಮತಿಭೀಷಣದರ್ಶನಮ್ ।
ಸಮುದ್ಯತಮಹಾಶೂಲಂ ಪ್ರಭೂತಮತಿದಾರುಣಮ್ ॥೪೯॥

ತತಸ್ತದಾಗತಂ ತತ್ರ ಖನಿತ್ರೋ ಯತ್ರ ಪಾರ್ಥಿವಃ ।
ನಿರಸ್ತಂ ಚಾಪ್ಯದುಷ್ಟಸ್ಯ ತಸ್ಯ ಪುಣ್ಯಚಯೇನ ತತ್ ॥೫೦॥

ಕೃತ್ಯಾಚತುಷ್ಟಯಂ ತೇಷು ನಿಪಪಾತ ದುರಾತ್ಮಸು ।
ಪುರೋಹಿತೇಷು ಭೂಪಾನಾಂ ತಥಾ ವೈ ವಿಶ್ವವೇದಿನಿ ॥೫೧॥

---

೪೮. ಇತ್ತ ನಾಲ್ಕು ಮಂದಿ ಪುರೋಹಿತರು ಖನಿತ್ರನ ವಿಷಯದಲ್ಲಿ ಪ್ರತಿದಿನವೂ ಉಗ್ರವಾದ ಶೂನ್ಯಕರ್ಮಗಳನ್ನು ಮಾಡುತ್ತಿದ್ದರು. ಅದರ ಪರಿಣಾಮವಾಗಿ ನಾಲ್ಕು ಶೂನ್ಯಮೂರ್ತಿಗಳು ಜನಿಸಿದುವು.

೪೯. ಆ ಶೂನ್ಯಮೂರ್ತಿಗಳು ಬಲು ಭಯಂಕರರೂಪವುಳ್ಳವುಗಳೂ, ಮಹತ್ತಾದ ಮುಖವುಳ್ಳವುಗಳೂ, ಎತ್ತಿಹಿಡಿದ ಮಹಾಶೂಲವುಳ್ಳವುಗಳೂ, ಅತಿ-ದಾರುಣವೂ ಮತ್ತು ಭಯಗೊಳಿಸುವ ದರ್ಶನವುಳ್ಳವುಗಳೂ ಆಗಿದ್ದುವು.

೫೦. ತರುವಾಯ ಅಂತಹ ಕರಾಲಶೂನ್ಯಗಳು ಖನಿತ್ರರಾಜನಿರುವ ಎಡೆಗೆ ಬಂದುವು. ಆದರೆ ನಿರ್ದೋಷನಾದ ಆ ಖನಿತ್ರರಾಜನಲ್ಲಿದ್ದ ಪುಣ್ಯ-ಪ್ರಭಾವದಿಂದ ಹಿಂದಕ್ಕೆ ತಿರುಗಿಸಲ್ಪಟ್ಟುವು.

೫೧. ಹಾಗೆ ಹಿಮ್ಮುಖಗಳಾದ ನಾಲ್ಕು ಶೂನ್ಯಮೂರ್ತಿಗಳು ಇತರ ರಾಜರ ಪುರೋಹಿತರಾದ ದುರಾತ್ಮರಲ್ಲಿ ಮತ್ತು ಇದಕ್ಕೆ ಕಾರಣನಾದ ವಿಶ್ವ-ವೇದಿಯಲ್ಲಿ ಹೋಗಿ ಆಕ್ರಮಿಸಿದುವು.

ತತೋ ನಿಹನ್ತ್ಯಾ ನಿರ್ದಗ್ಧಾಃ ಕೃತ್ಯಯಾ ತೇ ಪುರೋಹಿತಾಃ ।
ವಿಶ್ವವೇದೀ ತಥಾ ಮನ್ತ್ರೀ ಸ ಶೌರೇರ್ದುಷ್ಟಮನ್ತ್ರದಃ ॥೫೨॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಖನಿತ್ರಚರಿತ್ರೇ ಚತುರ್ದಶಾಧಿಕಶತತಮೋಽಧ್ಯಾಯಃ

---

೫೨. ಅನಂತರ ಮರಣವನ್ನು ಉಂಟುಮಾಡುವ ಆ ಶೂನ್ಯಕರ್ಮದ ಬಲದಿಂದ ಶೌರಿರಾಜನಿಗೆ ಮರ್ಮಂತ್ರವನ್ನು ಉಪದೇಶಿಸಿದ ಮಂತ್ರಿಯಾದ ವಿಶ್ವವೇದಿಯೂ ಮತ್ತು ಪುರೋಹಿತರೂ ಸುಟ್ಟುಹೋದರು.

ಮಾರ್ಕಂಡೇಯ ಮಹಾಪುರಾಣದಲ್ಲಿ ನೂರಹದಿನಾಲ್ಕನೆಯ ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಪಞ್ಚದಶಾಧಿಕಶತತಮೋಽಧ್ಯಾಯಃ

(ಖನಿತ್ರಚರಿತ್ರೋಪಸಂಹಾರಃ)

ಮಾರ್ಕಣ್ಡೇಯ ಉವಾಚ :—

ತತಃ ಸಮಸ್ತಲೋಕಸ್ಯ ವಿಸ್ಮಯಃ ಸೋಽಭವನ್ಮಹಾನ್ ।
ಯದೇಕಕಾಲಂ ನೇಶುಸ್ತೇ ಪೃಥಕ್ಪುರನಿವಾಸಿನಃ ||೧||

ತತಃ ಶುಶ್ರಾವ ನಿಧನಂ ಯಾತಾನ್ ಭ್ರಾತೃಪುರೋಹಿತಾನ್ ।
ಮನ್ತ್ರಿಣಶ್ಚ ತಥಾ ಭ್ರಾತುರ್ದಗ್ಧಂ ತಂ ವಿಶ್ವವೇದಿನಮ್ ||೨||

ನೂರಹದಿನೈದನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಇಂತೆಂದನು :- -

೧. ತರುವಾಯ ಪ್ರತ್ಯೇಕವಾದ ನಗರಗಳಲ್ಲಿ ವಾಸಮಾಡುತ್ತಿದ್ದ ಆ ಪುರೋಹಿತರು ಮತ್ತು ಮಂತ್ರಿಯಾದ ವಿಶ್ವವೇದಿಯು ಏಕಕಾಲದಲ್ಲಿ ನಾಶಹೊಂದಿರುವುದನ್ನು ತಿಳಿದು ಸಮಸ್ತಲೋಕಕ್ಕೆ ಮಹತ್ತಾದ ವಿಸ್ಮಯವುಂಟಾಯಿತು.

೨. ಅನಂತರ ಖನಿತ್ರರಾಜನು ತನ್ನ ಭ್ರಾತೃಗಳ ಪುರೋಹಿತರು ಏಕಕಾಲದಲ್ಲಿ ಮರಣಹೊಂದಿರುವುದನ್ನು ಕೇಳಿದನು. ಹಾಗು ತನ್ನ ಭ್ರಾತೃವಾದ ಶೌರಿರಾಜನ ಮಂತ್ರಿಯಾದ ವಿಶ್ವವೇದಿಯು ನಿಧನಹೊಂದಿದುದನ್ನು ತಿಳಿದನು.

ಕಿಮೇತದಿತಿ ಸೋಽತೀವ ವಿಸ್ಮಿತೋ ಮುನಿಸತ್ತಮ ।
ಖನಿತ್ರೋಽಭೂನ್ಮಹಾರಾಜೋ ನಾಜಾನಾತ್ತಚ್ಚ ಕಾರಣಮ್ ॥೩॥

ತತೋ ವಸಿಷ್ಠಂ ಪಪ್ರಚ್ಛ ಸ ರಾಜಾ ಗೃಹಮಾಗತಮ್ ।
ಯತ್ಕಾರಣಂ ವಿನೇಶುಸ್ತೇ ಭ್ರಾತೃಮನ್ತ್ರಿಪುರೋಹಿತಾಃ ॥೪॥

ತೇನ ಪೃಷ್ಟಸ್ತದಾ ಪ್ರಾಹ ಯಥಾವೃತ್ತಂ ಮಹಾಮುನಿಃ ।
ಯಚ್ಛೌರಿಮನ್ತ್ರಿಣಾ ಪ್ರೋಕ್ತಂ ಯಚ್ಚ ಶೌರಿರುವಾಚ ತಮ್ ॥೫॥

ಯಥಾ ಚಾನುಷ್ಠಿತಂ ತೇನ ಭ್ರಾತೄಣಾಂ ಭೇದಕಾರಿ ವೈ ।
ಮನ್ತ್ರಿಣಾ ತೇನ ದುಷ್ಟೇನ ಯಚ್ಚಕ್ರುಶ್ಚ ಪುರೋಹಿತಾಃ ॥೬॥

---

೩. ಮುನಿಶ್ರೇಷ್ಠನಾದ ಕ್ರೌಷ್ಟುಕಿಯೇ ! ಮಹಾರಾಜನಾದ ಖನಿತ್ರನು ಏಕಕಾಲದಲ್ಲಿ ಸಂಭವಿಸಿದ ಇವರ ಮರಣವೃತ್ತಾಂತವನ್ನು ಕೇಳಿ “ ಇದೇನು ” ಎಂದು ಬಹಳ ಆಶ್ಚರ್ಯಗೊಂಡನು. ಆದರೆ ಇದರ ಕಾರಣವನ್ನು ಅವನು ತಿಳಿಯಲಿಲ್ಲ.

೪. ತರುವಾಯ ಅಕಸ್ಮಾತ್ತಾಗಿ ತನ್ನ ಮಂದಿರಕ್ಕೆ ದಯಮಾಡಿ ಬಂದಿರುವ ವಸಿಷ್ಠಮುನಿಯನ್ನು ಕುರಿತು ಖನಿತ್ರರಾಜನು ಪ್ರಶ್ನಿಸಿದನು. ನನ್ನ ಭ್ರಾತೃಗಳ ಮಂತ್ರಿಪುರೋಹಿತರು ಹೀಗೇಕೆ ಮರಣಹೊಂದಿದರು ?

೫. ಹೀಗೆ ಖನಿತ್ರರಾಜನಿಂದ ಪ್ರಶ್ನಿಸಲ್ಪಟ್ಟ ಮಹಾಮುನಿಯಾದ ವಸಿಷ್ಠಋಷಿಯು ಆಗ ನಡೆದಿರುವ ಘಟನೆಯನ್ನು ಹೇಳಿದನು. ಶೌರಿರಾಜನ ಮಂತ್ರಿಯು ಉಪದೇಶಿಸಿದ ದುರ್ಮಂತ್ರವನ್ನೂ ಆಗ ಶೌರಿರಾಜನು ಹೇಳಿದ ವಚನವನ್ನೂ ಸಮಗ್ರವಾಗಿ ವಿವರಿಸಿದನು.

೬. ದುಷ್ಟಬುದ್ಧಿಯಿಂದ ಕೂಡಿದ ಮಂತ್ರಿಯಾದ ವಿಶ್ವವೇದಿಯು ಭ್ರಾತೃವರ್ಗದಲ್ಲಿ ಭೇದಬುದ್ಧಿಯನ್ನು ಹುಟ್ಟಿಸಲು ಮಾಡಿದ ಉಪಾಯಗಳನ್ನೂ ಮತ್ತು ಅವನಿಗೆ ವಶರಾದ ಎಲ್ಲ ರಾಜರ ಪುರೋಹಿತರು ಮಾಡಿದ ಶೂನ್ಯಕರ್ಮಗಳನ್ನೂ ಬೋಧಿಸಿದನು.

ಯನ್ನಿಮಿತ್ತಂ ವಿನೇಶುಸ್ತೇ ಅಪಾಪಸ್ಯಾಪಕಾರಿಣಃ ।
ಪುರೋಹಿತಾಸ್ತಸ್ಯ ರಾಜ್ಞಃ ಶತ್ರಾವಪಿ ದಯಾವತಃ ॥೭॥

ಸ ತಚ್ಛ್ರುತ್ವಾ ತತೋ ರಾಜಾ ಹಾ ಹತೋಽಸ್ಮೀತಿ ವೈ ವದನ್ ।
ನಿನಿನ್ದಾತ್ಮಾನಮತ್ಯರ್ಥಂ ವಸಿಷ್ಠಸ್ಯಾಗ್ರತೋ ದ್ವಿಜ ॥೮॥

ರಾಜೋವಾಚ :—

ಧಿಙ್ಮಾಮಪುಣ್ಯಸಂಸ್ಥಾನಮಲ್ಪಭಾಗ್ಯಮಶೋಭನಮ್ ।
ದೈವದೋಷಕೃತಂ ಪಾಪಂ ಸರ್ವಲೋಕವಿಗರ್ಹಿತಮ್ ॥೯॥

ಮನ್ನಿಮಿತ್ತಂ ವಿನಷ್ಟಂ ತತ್ತದ್ಬ್ರಾಹ್ಮಣಚತುಷ್ಟಯಮ್ ।
ಮತ್ತಃ ಕೋಽನ್ಯಃ ಪಾಪತರೋ ಭವಿಷ್ಯತಿ ಪುಮಾನ್ ಭುವಿ ॥೧೦॥

---

೭. ಸ್ವಲ್ಪವೂ ಪಾಪ-ಕಳಂಕವಿಲ್ಲದವನೂ ಮತ್ತು ಶತ್ರುಜನರಲ್ಲಿಯೂ ದಯಾವಂತನೂ ಆದ ಖನಿತ್ರರಾಜನ ವಿಷಯದಲ್ಲಿ ಅಪಕಾರಮಾಡತೊಡಗಿದ ಆ ದುರ್ಮಂತ್ರಿ ಮತ್ತು ರಾಜಪುರೋಹಿತರು ಏಕಕಾಲದಲ್ಲಿ ನಿಧನ ಹೊಂದಿರುವ ಕಾರಣವನ್ನು ತಿಳಿಸಿದನು.

೮. ದ್ವಿಜನಾದ ಕ್ರೌಷ್ಟುಕಿಯೇ ! ಆಗ ಖನಿತ್ರರಾಜನು ವಸಿಷ್ಠಮುನಿಯಿಂದ ಈ ವೃತ್ತಾಂತವನ್ನು ಕೇಳಿ ಮುನಿಯ ಎದುರಿನಲ್ಲಿಯೇ " ಅಯ್ಯೋ ನಾನು ಹಾಳಾದೆನು " ಎಂದು ಘಟ್ಟಿಯಾಗಿ ಕೂಗಿಕೊಳ್ಳುತ್ತ ತನ್ನನ್ನು ತಾನು ಅತಿಯಾಗಿ ನಿಂದಿಸಿಕೊಂಡನು.

ರಾಜನಿಂತೆಂದನು :—

೯. ಪಾಪಪುಂಜದಂತಿರುವವನೂ, ನಿರ್ಭಾಗ್ಯನೂ ಮತ್ತು ಅಮಂಗಳರೂಪನೂ ಆದ ನನಗೆ ಧಿಕ್ಕಾರವು. ದುರ್ದೈವ ದೋಷದಿಂದ ಸಮಸ್ತಲೋಕವೂ ನಿಂದಿಸುವಂತಹ ಪಾಪವು ನನ್ನಲ್ಲಿ ಬಂದು ನೆಲಸಿತೆ ? ನನಗೆ ಧಿಕ್ಕಾರವು.

೧೦. ಆಯಾಯ ರಾಜರ ಪುರೋಹಿತರಾಗಿದ್ದ ನಾಲ್ಕು ಮಂದಿ ಬ್ರಾಹ್ಮಣರು ನನ್ನ ನಿಮಿತ್ತದಿಂದ ವಿನಾಶ ಹೊಂದಿದರು. ಹೀಗೆ ಬ್ರಹ್ಮಹತ್ಯೆಗೆ ಕಾರಣನಾದ ನನಗಿಂತ ಬೇರೆ ಅತಿ ಪಾಪಿಗಳು ಭೂಲೋಕದಲ್ಲಿ ಇರುವರೆ ? ಇಲ್ಲ.

ನಾಭವಿಷ್ಯಂ ಯದಿ ಪುಮಾನಹಮತ್ರ ಮಹೀತಲೇ ।
ತತಸ್ತೇ ನ ವಿನಶ್ಯೇಯುರ್ಮಮ ಭ್ರಾತೃಪುರೋಹಿತಾಃ ॥೧೧॥

ಧಿಗ್ರಾಜ್ಯಂ ಧಿಕ್ಚ ಮೇ ಜನ್ಮ ಭೂಭುಜಾಂ ಮಹತಾಂ ಕುಲೇ ।
ಕಾರಣತ್ವಂ ಗತೋ ಯೋಽಹಂ ವಿನಾಶಸ್ಯ ದ್ವಿಜನ್ಮನಾಮ್ ॥೧೨॥

ಕುರ್ವನ್ತಃ ಸ್ವಾಮಿನಾಂ ತೇಽರ್ಥಂ ಭ್ರಾತೄಣಾಂ ಮಮ ಯಾಜಕಾಃ ।
ನಾಶಂ ಯಯುರ್ನ ದುಷ್ಟಾಸ್ತೇ ದುಷ್ಟೋಽಹಂ ನಾಶಕಾರಣೇ॥೧೩॥

ಕಿಂ ಕರೋಮಿ ಕ್ವ ಗಚ್ಛಾಮಿ ನಾನ್ಯೋ ಮತ್ತೋ ಹಿ ಪಾಪಕೃತ್ ।
ಪೃಥಿವ್ಯಾಮಸ್ತಿ ಹೇತುತ್ವಂ ದ್ವಿಜನಾಶಸ್ಯ ಯೋ ಗತಃ ॥೧೪॥

ಇತ್ಥಮುದ್ವಿಗ್ನಹೃದಯಃ ಖನಿತ್ರಃ ಪೃಥಿವೀಪತಿಃ ।
ವನಂ ಯಿಯಾಸುಃ ಪುತ್ರಸ್ಯ ಕೃತವಾನಭಿಷೇಚನಮ್ ॥೧೫॥

---

೧೧. ನಾನು ಈ ಮರ್ತ್ಯಲೋಕದಲ್ಲಿ ಒಬ್ಬ ಮಾನವನಾಗಿ ಜನ್ಮವೆತ್ತದೆ ಇದ್ದಿದ್ದರೆ ಆಗ ನನ್ನ ಭ್ರಾತೃಗಳ ರಾಜಪುರೋಹಿತರು ಈರೀತಿಯಾಗಿ ಮರಣ ಹೊಂದುತ್ತಿರಲಿಲ್ಲ.

೧೨. ಯಾವ ನಾನು ಹೀಗೆ ದ್ವಿಜನ್ಮವ್ಯಕ್ತಿಗಳ ಮರಣಕ್ಕೆ ಕಾರಣನಾದೆನೋ ಅಂತಹ ನನಗೆ ಧಿಕ್ಕಾರವು. ನನ್ನ ರಾಜತ್ವಕ್ಕೆ ಧಿಕ್ಕಾರವು. ಮತ್ತು ಮಹಾತ್ಮರಾದ ರಾಜರ ವಂಶದಲ್ಲಿ ಸಂಭವಿಸಿದ ನನ್ನ ಜನ್ಮಕ್ಕೆ ಧಿಕ್ಕಾರವು.

೧೩. ನನ್ನ ಭ್ರಾತೃಗಳ ಸನ್ನಿಧಿಯಲ್ಲಿದ್ದ ಪುರೋಹಿತರು ಅವರವರ ಸ್ವಾಮಿಕಾರ್ಯವನ್ನು ನಿಷ್ಠೆಯಿಂದ ಮಾಡುತ್ತಿದ್ದುದರಿಂದ ಮರಣಕ್ಕೆ ಈಡಾದರು. ಅವರು ದುಷ್ಟರಲ್ಲ. ಅವರ ನಿಧನಕ್ಕೆ ಕಾರಣನಾದ ನಾನು ದುಷ್ಟನಾಗಿರುವೆನು.

೧೪. ಹೀಗೆ ನಾನು ದ್ವಿಜಜನರ ನಾಶಕ್ಕೆ ಕಾರಣನಾದೆನು. ನಾನು ಮುಂದೇನುಮಾಡಲಿ? ನಾನೆಲ್ಲಿಗೆ ಹೋಗಲಿ? ಈ ಅಖಂಡ ಭೂಲೋಕದಲ್ಲಿ ನನ್ನಂತೆ ದ್ವಿಜರ ನಾಶಕ್ಕೆ ಕಾರಣನಾದ ಪಾಪಿಯು ಎಲ್ಲಿಲ್ಲಿಯೂ ಇಲ್ಲ.

೧೫. ಖನಿತ್ರ ಮಹಾರಾಜನು ಪುರೋಹಿತರ ಮರಣದಿಂದ ಹೀಗೆ ಬಹಳ ಕಳವಳಗೊಂಡ ಹೃದಯವುಳ್ಳವನಾದನು. ಮತ್ತು ಇದೇ ಜುಗುಪ್ಸೆಯಿಂದ ವನಕ್ಕೆ ತೆರಳುವ ಸಂಕಲ್ಪವುಳ್ಳವನಾಗಿ ಪುತ್ರನಿಗೆ ರಾಜ್ಯ ಪಟ್ಟಾಭಿಷೇಕವನ್ನು ಮಾಡಿದನು.

ಅಭಿಷಿಚ್ಯ ಸುತಂ ರಾಜ್ಯೇ ಕ್ಷುಪಸಞ್ಜ್ಞಂ ಮಹೀಪತಿಃ ।
ಭಾರ್ಯಾಭಿಸ್ತಿಸೃಭಿಃ ಸಾರ್ಧಂ ತಪಸೇ ಸ ವನಂ ಯಯೌ ॥೧೬॥

ತತ್ರ ಗತ್ವಾ ತಪಸ್ತೇಪೇ ವಾನಪ್ರಸ್ಥವಿಧಾನವಿತ್ ।
ಶತಾನಿ ತ್ರೀಣಿ ವರ್ಷಾಣಾಂ ಸಾರ್ಧಾನಿ ನೃಪಸತ್ತಮಃ ॥೧೭॥

ತಪಸಾ ಕ್ಷೀಣದೇಹಸ್ತು ರಾಜವರ್ಯೋ ದ್ವಿಜೋತ್ತಮ ।
ನಿಗೃಹ್ಯ ಸರ್ವಸ್ರೋತಾಂಸಿ ತತ್ಯಾಜಾಸೂನ್ವನೇಚರಃ ॥೧೮॥

ತತಃ ಪುಣ್ಯಾನ್ ಯಯೌ ಲೋಕಾನ್ ಸರ್ವಕಾಮದುಹೋಽ-
ಕ್ಷಯಾನ್ ।
ಅಶ್ವಮೇಧಾದಿಭಿರ್ಯಜ್ಞೈರವಾಪ್ಯಾ ಯೇ ನರಾಧಿಪೈಃ ॥೧೯॥

---

೧೬. ಖನಿತ್ರ ಮಹಾರಾಜನು ಕ್ಷುಪ ಎಂಬ ನಾಮಾಂಕಿತನಾದ ತನ್ನ ಪುತ್ರನಿಗೆ ರಾಜ್ಯಪಟ್ಟಾಭಿಷೇಕವನ್ನು ಮಾಡಿ ತನ್ನ ಮೂರು ಮಂದಿ ಮಡದಿಯರೊಂದಿಗೆ ತಪಶ್ಚರ್ಯೆಯಿಂದ ತನ್ನನ್ನು ಪಾವನಗೊಳಿಸಲು ಅರಣ್ಯಕ್ಕೆ ತೆರಳಿದನು.

೧೭. ವಾನಪ್ರಸ್ಥಾಶ್ರಮಧರ್ಮಗಳನ್ನು ಅರಿತ ಖನಿತ್ರರಾಜನು ತಪೋವನಕ್ಕೆ ಹೋಗಿ ರಾಜೋತ್ತಮನಾಗಿ ಅನುಭವಿಸಿದ ಭೋಗಗಳನ್ನು ದೂರಮಾಡಿ ಮೂರುನೂರ ಐವತ್ತು ವರ್ಷಗಳವರೆಗೆ ತಪಸ್ಸನ್ನು ಆಚರಿಸಿದನು.

೧೮. ಕ್ರೌಷ್ಟುಕಿಮುನಿಯೇ! ದೀರ್ಘಕಾಲ ತಪಸ್ಸಿನಿಂದ ಕ್ಷಯಿಸಿಹೋದ ದೇಹವುಳ್ಳವನೂ ಮತ್ತು ವನವಾಸಿಯೂ ಆದ ಖನಿತ್ರರಾಜೋತ್ತಮನು ತನ್ನ ಸಮಸ್ತ ಪ್ರವೃತ್ತಿಗಳನ್ನು ತಡೆಗಟ್ಟಿ ಪ್ರಾಣಗಳನ್ನು ತ್ಯಜಿಸಿದನು.

೧೯. ತರುವಾಯ ಪುಣ್ಯಾತ್ಮರಾದ ರಾಜರಿಗೆ ಅಶ್ವಮೇಧ ಮುಂತಾದ ಮಹಾಯಜ್ಞಗಳಿಂದ ಲಭಿಸಬಹುದಾದ, ಸಮಸ್ತ ಕಾಮಭೋಗಗಳನ್ನು ಸಮರ್ಪಿಸುವ ಮತ್ತು ಅಕ್ಷಯವಾದ ಪುಣ್ಯಲೋಕಗಳನ್ನು ಖನಿತ್ರಮಹಾರಾಜನು ಹೊಂದಿದನು.

ಭಾರ್ಯಾಶ್ಚ ತಸ್ಯ ತಾಸ್ತಿಸ್ರಃ ಸಮಂ ತೇನೈವ ತತ್ಯಜುಃ ।
ಪ್ರಾಣಾನವಾಪುಃ ಸಾಲೋಕ್ಯಂ ತೇನೈವ ಸುಮಹಾತ್ಮನಾ ॥೨೦॥

ಏತತ್ಖನಿತ್ರಚರಿತಂ ಶ್ರುತಂ ಕಲ್ಮಷನಾಶನಮ್ ।
ಪಠತಾಂ ಚ ಮಹಾಭಾಗ ಕ್ಷುಪಸ್ಯಾತೋ ನಿಶಾಮಯ ॥೨೧॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಖನಿತ್ರಚರಿತ್ರ-
ಸಮಾಪ್ತಿರ್ನಾಮ ಪಞ್ಚದಶಾಧಿಕಶತತಮೋಽಧ್ಯಾಯಃ

---

೨೦. ಖನಿತ್ರ ಮಹಾರಾಜನ ಆ ಮೂರು ಮಂದಿ ಪತ್ನಿಯರು ತನ್ನ ಪತಿದೇವನೊಡನೆ ಪ್ರಾಣಗಳನ್ನು ತ್ಯಜಿಸಿದರು. ಮತ್ತು ಆ ಪುಣ್ಯಪ್ರಭಾವದಿಂದ ಮಹಾತ್ಮನಾದ ತಮ್ಮ ಪತಿದೇವನ ಸಾಲೋಕ್ಯವನ್ನು ಗಳಿಸಿದರು.

೨೧. ಈ ವಿಧವಾದ ಖನಿತ್ರ ಮಹಾರಾಜನ ಪುಣ್ಯಚರಿತ್ರದ ಶ್ರವಣವು ಸಮಸ್ತ ಪಾಪಗಳನ್ನು ನಾಶಮಾಡುವುದು. ಹಾಗು ಪಠನವು ಪಾಪಭಂಜನ-ಮಾಡುವುದು. ಮಹಾಭಾಗನಾದ ಕ್ರೌಷ್ಟುಕಿಯೇ! ಮುಂದೆ ಕ್ಷುಪನ ಚರಿತ್ರ-ವನ್ನು ಕೇಳು.

ಮಾರ್ಕಂಡೇಯ ಮಹಾಪುರಾಣದಲ್ಲಿ ನೂರಹದಿನೈದನೆಯ ಅಧ್ಯಾಯವು
ಮುಗಿದುದು.

॥ ಓಂ ಶ್ರೀ ದುರ್ಗಾಯೈ ನಮಃ ॥

ಮಾರ್ಕಂಡೇಯ ಪುರಾಣಂ

ಷೋಡಶಾಧಿಕಶತತಮೋಽಧ್ಯಾಯಃ

(ವಿವಿಂಶಚರಿತನಿರೂಪಣಮ್)

ಮಾರ್ಕಣ್ಡೇಯ ಉವಾಚ :—

ಕ್ಷುಪಃ ಖನಿತ್ರಪುತ್ರಸ್ತು ಪ್ರಾಪ್ಯ ರಾಜ್ಯಂ ಯಥಾ ಪಿತಾ ।
ತಥೈವ ಪಾಲಯಾಮಾಸ ಪ್ರಜಾ ಧರ್ಮೇಣ ರಞ್ಜಯನ್ ॥೧॥

ಸ ದಾನಶೀಲೋ ಯಷ್ಟಾ ಚ ಯಜ್ಞಾನಾಮವನೀಪತಿಃ ।
ಸಮಃ ಶತ್ರೌ ಚ ಮಿತ್ರೇ ಚ ವ್ಯವಹಾರಾದಿವರ್ತ್ಮನಿ ॥೨॥

ನೂರ ಹದಿನಾರನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಹೇಳಿದನು :

೧. ಖನಿತ್ರನ ಪುತ್ರನಾದ ಕ್ಷುಪ ಎಂಬುವನು ರಾಜ್ಯಶಾಸನಾಧಿಕಾರವನ್ನು ಹೊಂದಿ ಧರ್ಮದಿಂದ ಪ್ರಜೆಗಳನ್ನು ರಂಜನಗೊಳಿಸುತ್ತ ತಂದೆಯಂತೆಯೇ ರಾಜ್ಯವನ್ನು ಪಾಲಿಸಿದನು.

೨. ಆ ಕ್ಷುಪಮಹಾರಾಜನು ವಿಶೇಷವಾಗಿ ದಾನಮಾಡುವ ಶೀಲವುಳ್ಳವನೂ ಅನೇಕ ಯಜ್ಞಕರ್ಮಗಳನ್ನು ಆಚರಿಸುವವನೂ ಮತ್ತು ನಾನಾವಿಧವಾದ ವ್ಯವಹಾರಮಾರ್ಗದಲ್ಲಿ ಶತ್ರು ಅಥವಾ ಮಿತ್ರರಲ್ಲಿ ನಿಷ್ಪಕ್ಷವಾದ ದೃಷ್ಟಿಯುಳ್ಳವನೂ ಆಗಿದ್ದನು.

ಏಕದಾ ಸ ಮಹೀಪಾಲೋ ನಿಜಸ್ಥಾನಗತೋ ಮುನೇ ।
ಸೂತೈರುಕ್ತೋ ಯಥಾಪೂರ್ವಂ ಕ್ಷುಪೋ ರಾಜಾ ತಥಾಭವತ್ ॥೩॥

ಬ್ರಹ್ಮಣಸ್ತನಯಃ ಪೂರ್ವಂ ಕ್ಷುಪೋಽಭೂತ್ಪೃಥಿವೀಪತಿಃ ।
ಯಾದೃಕ್ಚರಿತಮಸ್ಯಾಸೀತ್ತಾದೃಕ್ತಸ್ಯೈವ ಚೇಷ್ಟಿತಮ್ ॥೪॥

ರಾಜೋವಾಚ :—

ಶ್ರೋತುಮಿಚ್ಛಾಮಿ ಚರಿತಂ ಕ್ಷುಪಸ್ಯ ಸುಮಹಾತ್ಮನಃ ।
ಯದಿ ತಾದೃಙ್ಮಯಾ ಶಕ್ಯಂ ಚೇಷ್ಟಿತುಂ ತತ್ಕರೋಮ್ಯಹಮ್ ॥೫॥

ಸೂತಾ ಊಚುಃ :—

ಸ ಚಕಾರಾಕರಾನ್ಭೂಪ ರಾಜಾ ಗೋಬ್ರಾಹ್ಮಣಾನ್ಪುರಾ ।
ಷಷ್ಠಾಂಶೇನ ಕೃತಾ ಚೋರ್ವ್ಯಾಮಿಷ್ಟಿಸ್ತೇನ ಮಹಾತ್ಮನಾ ॥೬॥

---

೩. ಕ್ರೌಷ್ಟುಕಿಮುನಿಯೇ! ಒಂದು ಸಮಯದಲ್ಲಿ ತನ್ನ ಆಸ್ಥಾನ ಸಭೆಯನ್ನು ಮಂಡಿಸಿದ್ದ ಕ್ಷುಪಮಹಾರಾಜನ ಸೂತಜನರಿಂದ ಹೀಗೆ ವಿಜ್ಞಾಪಿಸಲ್ಪಟ್ಟನು. ಹಿಂದಿನಕಾಲದಲ್ಲಿ ಒಬ್ಬ ಕ್ಷುಪನೆಂಬ ದೊರೆಯಿದ್ದನು.

೪. ಪೂರ್ವಕಾಲದಲ್ಲಿ ಬ್ರಹ್ಮದೇವನ ಪುತ್ರನಾದ ಕ್ಷುಪನೆಂಬ ಒಬ್ಬ ರಾಜನು ಇದ್ದನು. ಅವನಲ್ಲಿ ಯಾವ ಉತ್ತಮವಾದ ಚರಿತವಿದ್ದಿತೊ ಅದು ಅವನಲ್ಲಿ ಮಾತ್ರ ಅಸಾಧಾರಣವಾಗಿತ್ತು. ಅವನಂತೆ ಬೇರೊಬ್ಬ ಸಚ್ಚರಿತ್ರ ರಾಜನಿಲ್ಲ.

ರಾಜನಿಂತೆಂದನು :—

೫. ಮಹಾತ್ಮನಾದ ಆ ಕ್ಷುಪಮಹಾರಾಜನ ಚರಿತ್ರವನ್ನು ಕೇಳಲು ಇಷ್ಟಪಡುತ್ತಿರುವೆನು. ಆ ಮಹಾತ್ಮನಂತೆ ನಡೆದುಕೊಳ್ಳಲು ನನಗೆ ಸಾಧ್ಯವಿದ್ದರೆ ನಾನು ಅವನಂತೆ ವರ್ತಿಸಬೇಕೆಂದು ಇರುವೆನು.

ಸೂತರು ಹೀಗೆಂದರು :—

೬. ಮಹಾರಾಜನೇ! ಆ ಕ್ಷುಪರಾಜನು ಹಿಂದೆ ಗೋ-ಬ್ರಾಹ್ಮಣರ ವಿಷಯದಲ್ಲಿ ಕಪ್ಪಕಂದಾಯಗಳನ್ನು ಸ್ವೀಕರಿಸುತ್ತಿರಲಿಲ್ಲ ಮತ್ತು ಆ ಮಹಾತ್ಮನು ಭೂಮಿಯಲ್ಲಿ ಷಷ್ಠಾಂಶವನ್ನು ತೆಗೆದುಕೊಂಡು ಆ ಧನವನ್ನು ವಿನಿಯೋಜಿಸಿ ಯಜ್ಞಗಳನ್ನು ಮಾಡಿದನು.

ರಾಜೋವಾಚ :—

ತೇಷಾಂ ಮಹಾತ್ಮನಾಂ ರಾಜ್ಞಾಂ ಕೋಽನುಯಾಸ್ಯತಿ ಮದ್ವಿಧಃ ।
ತಥಾಪ್ಯುತ್ಕೃಷ್ಟಚೇತಾನಾಂ ಚೇಷ್ಟಾಸೂದ್ಯಮವಾನ್ಭವೇತ್ ॥೭॥

ತಚ್ಛ್ರೂಯತಾಂ ಪ್ರತಿಜ್ಞಾ ಯಾ ಸಾಮ್ಪ್ರತಂ ಕ್ರಿಯತೇ ಮಯಾ।
ಕ್ಷುಪಸ್ಯಾನುಕರಿಷ್ಯಾಮಿ ಮಹಾರಾಜಸ್ಯ ಚೇಷ್ಟಿತಮ್ ॥೮॥

ತ್ರೀಂಸ್ತ್ರೀನ್ಯಜ್ಞಾನ್ ಕರಿಷ್ಯಾಮಿ ಸಸ್ಯಾಪಾತೇ ಗತಾಗತೇ ।
ಪೃಥಿವ್ಯಾಂ ಚತುರನ್ತಾಯಾಂ ಪ್ರತಿಜ್ಞೇಯಂ ಕೃತಾ ಮಯಾ ॥೯॥

ಯಚ್ಚ ಗೋಬ್ರಾಹ್ಮಣಾಃ ಪೂರ್ವಮದದನ್ ಭೂಭೃತೇ ಕರಮ್ ।
ತಮೇವ ಪ್ರತಿದಾಸ್ಯಾಮಿ ಬ್ರಾಹ್ಮಣಾನಾಂ ತಥಾ ಗವಾಮ್ ॥೧೦॥

ಕ್ಷುಪರಾಜನಿಂತೆಂದನು : —

೭. ಅಂತಹ ಮಹಾತ್ಮರಾದ ರಾಜರನ್ನು ನನ್ನಂತಹವರು ಅನುಕರಿಸಲು ಸಾಧ್ಯವುಂಟೆ? ಆದರೂ ಉತ್ಕೃಷ್ಟವಾದ ಚರಿತೆಯುಳ್ಳ ಮಹಾತ್ಮರ ವರ್ತನೆಗಳನ್ನು ಅನುಕರಿಸಲು ಯತ್ನಿಸುವುದು ಕರ್ತವ್ಯವು.

೮. ಆದುದರಿಂದ ಇಂದು ನಾನು ಯಾವ ಪ್ರತಿಜ್ಞೆಯನ್ನು ಕೈಗೊಳ್ಳಲಿರುವೆನೊ ಅದನ್ನು ನೀವು ಕೇಳಿರಿ. ಇನ್ನು ಮುಂದೆ ಹಿಂದಿನ ಕ್ಷುಪಮಹಾರಾಜನ ನಡತೆಯನ್ನು ನಾನು ಅನುಕರಿಸುವೆನು.

೯. ಭೂಮಿಯಲ್ಲಿ ಸಸ್ಯವರ್ಗವು ಫಲವನ್ನು ಕೊಡುವ ಬಯಾಯ ಋತುಸಮಯದಲ್ಲಿ ತಪ್ಪದೆ ಮೂರು ಮೂರು ದೊಡ್ಡ ಯಜ್ಞಗಳನ್ನು ಆಚರಿಸುವೆನು. ನಾಲ್ಕು ಸಮುದ್ರಗಳ ನಡುವೆಯಿರುವ ಸಕಲ ಪೃಥಿವಿಗೂ ಅನ್ವಯಿಸುವಂತೆ ನನ್ನಿಂದ ಪ್ರತಿಜ್ಞೆ ಮಾಡಲ್ಪಟ್ಟಿದೆ.

೧೦. ಹಿಂದೆ ಗೋಬ್ರಾಹ್ಮಣರು ರಾಜನಿಗೆ ಯಾವ ದೇಯಭಾಗವನ್ನು ಕೊಟ್ಟಿರುವರೋ ಆ ಕಂದಾಯದ ಧನವನ್ನು ಗೋಬ್ರಾಹ್ಮಣರಿಗೆ ಹಿಂದಕ್ಕೆ ಕೊಡುವೆನು.

ಮಾರ್ಕಣ್ಡೇಯ ಉವಾಚ :—

ಇತಿ ಪ್ರತಿಜ್ಞಾಯ ವಚಃ ಕ್ಷುಪಸ್ತತ್ಕೃತವಾಂಸ್ತಥಾ ।
ಸಸ್ಯಾಪಾತೇ ಸ ಯಜ್ಞಾಂಸ್ತ್ರೀನಯಜದ್ಯಜತಾಂ ವರಃ ॥೧೧॥

ಗೋಬ್ರಾಹ್ಮಣಾಃ ಪುರಾ ರಾಜ್ಞಾಮದದದ್ಯಂ ಚ ವೈ ಕರಮ್ ।
ತಾವತ್ಸಙ್ಖ್ಯಮದಾದ್ವಿತ್ತಮನ್ಯದ್ಗೋಬ್ರಾಹ್ಮಣಾಯ ಸಃ ॥೧೨॥

ತಸ್ಯ ಪುತ್ರೋಽಭವದ್ವೀರಃ ಪ್ರಮಥಾಯಾಮನಿನ್ದಿತಃ ।
ಯಸ್ಯ ಪ್ರತಾಪಶೌರ್ಯಾಭ್ಯಾಂ ಕೃತಾ ವಶ್ಯಾ ಮಹೀಭೃತಃ ॥೧೩॥

ತಸ್ಯಾಪಿ ನನ್ದಿನೀ ನಾಮ ವೈದರ್ಭೀ ದಯಿತಾಭವತ್ ।
ವಿವಿಂಶಂ ತನಯಂ ತಸ್ಯಾಂ ಜನಯಾಮಾಸ ಸ ಪ್ರಭುಃ ॥೧೪॥

ಮಾರ್ಕಂಡೇಯ ಮುನಿಯು ಹೇಳಿದನು :—

೧೧. ಕ್ಷುಪಮಹಾರಾಜನು ಹೀಗೆಂದು ಪ್ರತಿಜ್ಞೆಮಾಡಿ ಹಾಗೆಯೆ ವರ್ತಿಸಿ ಅದನ್ನು ಸಾರ್ಥಕಗೊಳಿಸಿದನು. ಸಸ್ಯಪ್ರಾದುರ್ಭಾವಸಮಯದಲ್ಲಿ ಯಾಜ್ಞಿಕರಲ್ಲಿ ಶ್ರೇಷ್ಠನಾದ ರಾಜನು ಮೂರು ಮೂರು ಯಾಗಗಳನ್ನು ಆಚರಿಸಿದನು.

೧೨. ಹಿಂದೆ ಗೋ-ಬ್ರಾಹ್ಮಣರು ರಾಜದೇಯವನ್ನಾಗಿ ರಾಜನಿಗೆ ಎಷ್ಟು ಧನವನ್ನು ಕೊಟ್ಟಿದ್ದರೋ ಅಷ್ಟು ಸಂಖ್ಯೆಯ ಬೇರೆ ಧನವನ್ನು ಮತ್ತೆ ಗೋ-ಬ್ರಾಹ್ಮಣರಿಗೆ ಕೊಟ್ಟು ವಿನಿಯೋಗ ಮಾಡಿದನು.

೧೩. ಆ ಕ್ಷುಪಮಹಾರಾಜನಿಗೆ ಪ್ರಮಥಾ ಎಂಬ ಪತ್ನಿಯಲ್ಲಿ ನಿಂದಾಸ್ಪದನಲ್ಲದ ವೀರನೆಂಬ ಒಬ್ಬ ಸಾಧು ಪುತ್ರನು ಜನಿಸಿದನು. ಅವನ ಪ್ರತಾಪ, ಶೌರ್ಯಗಳಿಂದ ಸಕಲ ರಾಜರು ವಶಗೊಳಿಸಲ್ಪಟ್ಟರು.

೧೪. ವೀರಪುತ್ರನಿಗೆ ವಿದರ್ಭದೇಶಾಧಿಪತಿಯ ಪುತ್ರಿಯಾದ ನಂದಿನಿ ಎಂಬುವಳು ಪತ್ನಿಯಾಗಿದ್ದಳು. ಪ್ರಭುವಾದ ವೀರರಾಜನಿಗೆ ಆಕೆಯಲ್ಲಿ ವಿವಿಂಶ ಎಂಬ ನಾಮಾಂಕಿತನಾದ ಪುತ್ರನು ಜನಿಸಿದನು.

ವಿವಿಂಶೇ ಶಾಸತಿ ಮಹೀಂ ಮಹೀಪಾಲೇ ಮಹೌಜಸಿ ।
ಮಹೀತಲಮಭೂದ್ವ್ಯಾಪ್ತಂ ನಿರನ್ತರತಯಾ ನರೈಃ ॥೧೫॥

ವವರ್ಷ ಕಾಲೇ ಪರ್ಜನ್ಯೋ ಮಹೀ ಸಸ್ಯವತೀ ತಥಾ ।
ಸುಫಲಾನಿ ಚ ಸಸ್ಯಾನಿ ರಸವನ್ತಿ ಫಲಾನಿ ಚ ॥೧೬॥

ರಸಾಃ ಪುಷ್ಟಿಕರಾಶ್ಚಾಸನ್ ಪುಷ್ಟಿರ್ನೋನ್ಮಾದಕಾರಿಣೀ ।
ನ ವಿತ್ತನಿಚಯಾ ನೃಣಾಂ ಪ್ರಭೂತಾ ಮದಹೇತವಃ ॥೧೭॥

ತತ್ಪ್ರತಾಪೇನ ರಿಪವೋ ಭಯಮಾಪುರ್ಮಹಾಮುನೇ ।
ಸ್ವಾಸ್ಥ್ಯಂ ಜನಃ ಸುಹೃದ್ವರ್ಗೋ ಮುದಮಾಪ ಸುಪೂಜಿತಃ ॥೧೮॥

---

೧೫. ಮಹತ್ತಾದ ಪ್ರಭಾವಶಾಲಿಯಾದ ಆ ವಿವಿಂಶಮಹಾರಾಜನು ಧರ್ಮದಿಂದ ರಾಜ್ಯವನ್ನು ಪಾಲಿಸುತ್ತಿರಲು ಪ್ರಜಾವರ್ಗವು ತುಂಬಿ ಭೂತಲವು ಜನಸ್ತೋಮದಿಂದ ವ್ಯಾಪಿಸಲ್ಪಟ್ಟಿತು.

೧೬. ಮತ್ತು ಅವನ ರಾಜ್ಯಭಾರಕ್ರಮದಲ್ಲಿ ಪರ್ಜನ್ಯವು ಸಕಾಲದಲ್ಲಿ ಮಳೆಯನ್ನು ಕೊಟ್ಟಿತು. ಭೂಮಿಯು ಸಸ್ಯಸಮೃದ್ಧಿಯಿಂದ ತುಂಬಿತು. ಸಸ್ಯವರ್ಗವು ಯಥೇಚ್ಛವಾಗಿ ಫಲಿಸಿತು. ಮತ್ತು ಫಲಸಮೃದ್ಧಿಯು ರಸವತ್ತಾಗಿ ಬೆಳೆಯಿತು.

೧೭. ರಸವಸ್ತುಗಳು ಜನರಿಗೆ ಪುಷ್ಟಿಯನ್ನು ಕೊಡುತ್ತಿದ್ದುವು. ಆ ಪಥವಾದ ಪುಷ್ಟಿಯು ಉನ್ಮಾದವನ್ನುಂಟುಮಾಡಲಿಲ್ಲ. ಮತ್ತು ಜನರಲ್ಲಿ ತುಂಬಿ ತುಳುಕುವ ಧನರಾಶಿಯು ಧನಮದವನ್ನು ಹುಟ್ಟಿಸುತ್ತಿರಲಿಲ್ಲ.

೧೮. ಮಹಾಮುನಿಯಾದ ಕ್ರೌಷ್ಟುಕಿಯೇ! ಅವನ ಪ್ರತಾಪದಿಂದ ಶತ್ರುಗಳು ಭಯಪಟ್ಟು ಅಡಗಿಹೋದರು. ಪ್ರಜೆಗಳು ನಿರಾತಂಕವಾಗಿ ಸ್ವಸ್ಥತೆಯಿಂದ ಇದ್ದರು. ಮತ್ತು ಉಚಿತ ಸತ್ಕಾರದಿಂದ ಕೂಡಿದ ಮಿತ್ರವರ್ಗವು ಸಂತೋಷವನ್ನು ಹೊಂದಿತು.

ಇಷ್ಟ್ವಾ ಚ ಸ ಯಜ್ಞಾನ್ ಸುಬಹೂನ್ ಸಮ್ಯಕ್ ಸಮ್ಪಾಲ್ಯ
ಮೇದಿನೀಮ್ ।
ಸಜ್ಗ್ರಾಮೇ ನಿಧನಂ ಪ್ರಾಪ್ಯ ಶಕ್ರಲೋಕಮಿತೋ ಗತಃ ॥೧೯॥

ಇತಿ ಮಾರ್ಕಣ್ಡೇಯ ಮಹಾಪುರಾಣೇ ವಿವಿಂಶಚರಿತಂ ನಾಮ
ಷೋಡಶಾಧಿಕಶತತಮೋಽಧ್ಯಾಯಃ

---

೧೯. ಅಂತಹ ವಿವಿಂಶರಾಜನು ಅನೇಕ ಯಜ್ಞಕರ್ಮಗಳನ್ನು ಆಚರಿಸಿ ಭೂಮಿಯನ್ನು ನ್ಯಾಯಮಾರ್ಗದಿಂದ ಪಾಲಿಸಿ ತರುವಾಯ ಸಂಗ್ರಾಮದಲ್ಲಿ ಶಸ್ತ್ರಕ್ಷತಿಯಿಂದ ನಿಧನವನ್ನು ಹೊಂದಿ ಇಂದ್ರಲೋಕಕ್ಕೆ ಹೋದನು.

ಮಾರ್ಕಂಡೇಯ ಮಹಾಪುರಾಣದಲ್ಲಿ ನೂರಹದಿನಾರನೆಯ ಅಧ್ಯಾಯವು
ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಸಪ್ತದಶಾಧಿಕಶತತಮೋಽಧ್ಯಾಯಃ

(ಖನೀನೇತ್ರಚರಿತ್ರಮ್)

ಮಾರ್ಕಣ್ಡೇಯ ಉವಾಚ :—

ತಸ್ಯ ಪುತ್ರಃ ಖನೀನೇತ್ರೋ ಮಹಾಬಲಪರಾಕ್ರಮಃ ।
ಯಸ್ಯ ಯಜ್ಞೇಷ್ವಗಾಯನ್ತ ಗನ್ಧರ್ವಾ ವಿಸ್ಮಯಾನ್ವಿತಾಃ ||೧||

ಖನೀನೇತ್ರಸಮೋ ನಾನ್ಯೋ ಭುವಿ ಯಜ್ವಾ ಭವಿಷ್ಯತಿ ।
ತೇನ ಯಜ್ವಾಯುತೇ ಪೂರ್ಣೇ ದತ್ತಾ ಪೃಥ್ವೀ ಸಸಾಗರಾ ||೨||

ನೂರಹದಿನೇಳನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಇಂತೆಂದನು :—

೧. ವಿವಿಂಶನಿಗೆ ಖನೀನೇತ್ರನೆಂಬ ಪುತ್ರನಿದ್ದನು. ಅವನು ಮಹತ್ತಾದ ಬಲ-ಪರಾಕ್ರಮಗಳಿಂದ ಶೋಭಿತನಾಗಿದ್ದನು. ಅವನ ಯಜ್ಞಸಮಾರಂಭಗಳನ್ನು ನೋಡಿ ಗಂಧರ್ವರು ವಿಸ್ಮಯಗೊಂಡವರಾಗಿ ಹೀಗೆ ಗಾನಮಾಡಿ ಪ್ರಶಂಸಿಸಿದರು.

೨. ಮರ್ತ್ಯಲೋಕದಲ್ಲಿ ಖನೀನೇತ್ರನಿಗೆ ಸಮಾನನಾದ ಬೇರೊಬ್ಬ ಯಾಗಶೀಲನು ಹುಟ್ಟುವುದಿಲ್ಲ. ಖನೀನೇತ್ರನು ಸಹಸ್ರಾರು ಯಜ್ಞಗಳನ್ನು ಪೂರ್ತಿಗೊಳಿಸಿ ಸಮುದ್ರಗಳಿಂದ ಸುತ್ತಲ್ಪಟ್ಟ ಸಮಸ್ತ ಭೂಮಿಯನ್ನು ದಾನಮಾಡಿರುವನು,

ದತ್ತ್ವಾ ಚ ಸಕಲಾಂ ಪೃಥ್ವೀಂ ಬ್ರಾಹ್ಮಣಾನಾಂ ಮಹಾತ್ಮನಾಮ್ ।
ತಪಸಾ ದ್ರವ್ಯಮಾಸಾದ್ಯ ಮೋದಯನ್ ಸಾಧಿತೇನ ಯಃ ॥೩॥

ಯತಶ್ಚ ಪ್ರಾಪ್ಯ ವಿತ್ತರ್ಧಿಮತುಲಾಂ ದಾತೃಸತ್ತಮಾತ್ ।
ಜಗೃಹುರ್ಬ್ರಾಹ್ಮಣಾ ವಿಪ್ರ ನಾನ್ಯರಾಜ್ಞಃ ಪ್ರತಿಗ್ರಹಮ್ ॥೪॥

ಸಪ್ತಷಷ್ಟಿಸಹಸ್ರಾಣಿ ಸಪ್ತಷಷ್ಟಿಶತಾನಿ ಚ ।
ಸಪ್ತಷಷ್ಟಿಂ ಚ ಯೋ ಯಜ್ಞಾನ್ ಅಯಜದ್ಭೂರಿದಕ್ಷಿಣಾನ್ ॥೫॥

ಅಪುತ್ರಃ ಸ ಮಹೀಪಾಲೋ ಮೃಗಯಾಮುಪಚಕ್ರಮೇ ।
ಪುತ್ರಾರ್ಥಂ ಪಿತೃಯಜ್ಞಾಯ ಮಾಂಸಕಾಮೋ ಮಹಾಮುನೇ ॥೬॥

---

೩. ಮತ್ತು ತನ್ನ ಸಮಸ್ತ ಭೂಮಿಯನ್ನು ಮಹಾತ್ಮರಾದ ಬ್ರಾಹ್ಮಣರಿಗೆ ದಾನಮಾಡಿ ಮತ್ತೆ ತಪಸ್ಸಿನಿಂದ ದ್ರವ್ಯಸಂಪತ್ತಿಯನ್ನು ಹೊಂದಿ ಆ ಖನೀನೇತ್ರನು ಹಾಗೆ ಸಾಧಿಸಿದ ದ್ರವ್ಯದಿಂದ ರಾಜ್ಯವನ್ನು ಪಾಲಿಸಿದನು.

೪. ವಿಪ್ರನಾದ ಕ್ರೌಷ್ಟುಕಿಯೇ ! ನಿರುಪಮದಾತೃಪುರುಷನಾದ ಖನೀನೇತ್ರನಿಂದ ಅಪಾರವಾದ ದ್ರವ್ಯಸಮೃದ್ಧಿಯನ್ನು ಪ್ರತಿಗ್ರಹಿಸಿದ ವಿಪ್ರೋತ್ತಮರು ಅದರಿಂದ ತೃಪ್ತರಾಗಿ ಬೇರೆ ರಾಜನಿಂದ ದಾನವನ್ನು ಸ್ವೀಕರಿಸಲಿಲ್ಲ.

೫. ಮತ್ತು ಯಜ್ಞಶೀಲನಾದ ಖನೀನೇತ್ರನು ಹೆಚ್ಚಾದ ದಕ್ಷಿಣಾ-ದಾನದಿಂದ ಕೂಡಿದ ಎಪ್ಪತ್ತೇಳು ಸಹಸ್ರ ಎಪ್ಪತ್ತೇಳು ಶತ ಮತ್ತು ಎಪ್ಪತ್ತೇಳು ಸಂಖ್ಯೆಯ ಯಜ್ಞಗಳನ್ನು ವೈಭವದಿಂದ ಆಚರಿಸಿದನು.

೬. ಮಹಾಮುನಿಯಾದ ಕ್ರೌಷ್ಟುಕಿಯೇ ! ಪುತ್ರಸಂತತಿಯಿಲ್ಲದ ಆ ಖನೀನೇತ್ರ ಮಹಾರಾಜನು ಪುತ್ರರನ್ನು ಹೊಂದಲೋಸ್ಕರ ಮಾಡಬೇಕೆಂದಿದ್ದ ಪಿತೃಯಜ್ಞಕ್ಕೋಸ್ಕರ ಹವಿಸ್ಸಿನ ಮಾಂಸವನ್ನು ಆರ್ಜಿಸಲು ಬೇಟೆಯಾಡಲು ಉಪಕ್ರಮಿಸಿದನು.

ಅಶ್ವಾರೂಢೋ ವಿನಾ ಸೈನ್ಯನೋಽಕ ಏವ ಮಹಾವನೇ ।
ಬದ್ಧಗೋಧಾಙ್ಗುಲಿತ್ರಾಣೋ ಬಾಣಖಡ್ಗಧನುರ್ಧರಃ ॥೭॥

ತಂ ವಾಹಯನ್ತಂ ತುರಗಮನ್ಯತೋ ಗಹನಾದ್ವನಾತ್ ।
ವಿನಿಷ್ಕ್ರಮ್ಯ ಮೃಗಃ ಪ್ರಾಹ ಮಾಂ ಹತ್ವಾಭಿಮತಂ ಕುರು ॥೮॥

ರಾಜೋವಾಚ :—

ಅನ್ಯೇ ಮೃಗಾಃ ಪಲಾಯನ್ತೇ ಮಹಾಭೀತ್ಯಾ ವಿಲೋಕ್ಯ ಮಾಮ್ ।
ಕಥಮಾತ್ಮಪ್ರದಾನಂ ತ್ವಂ ಮೃತ್ಯವೇ ಕರ್ತುಮಿಚ್ಛಸಿ ॥೯॥

ಮೃಗ ಉವಾಚ :—

ಅಪುತ್ರೋಽಹಂ ಮಹಾರಾಜ ವೃಥಾ ಜನ್ಮಪ್ರಯೋಜನಮ್ ।
ವಿಚಾರಯನ್ನ ಪಶ್ಯಾಮಿ ಪ್ರಾಣಾನಾಮಿಹ ಧಾರಣಮ್ ॥೧೦॥

---

೭. ಬೇಟೆಯಾಡಲು ಹೊರಟಿರುವ ಖನೀನೇತ್ರರಾಜನು ಬಾಣ-ಖಡ್ಗ-ಬಿಲ್ಲುಗಳನ್ನು ಧರಿಸಿದವನೂ, ಚರ್ಮ-ಅಂಗುಲಿತ್ರಾಣಗಳನ್ನು ಕಟ್ಟಿಕೊಂಡವನೂ ಮತ್ತು ಕುದುರೆಯನ್ನು ಆರೋಹಣಮಾಡಿದವನೂ ಆಗಿ ಸೈನ್ಯವಿಲ್ಲದೆ ಏಕಾಕಿಯಾಗಿ ಅರಣ್ಯಕ್ಕೆ ಹೋದನು.

೮. ಅವನು ಮತ್ತೊಂದು ಕಡೆಗೆ ಕುದುರೆಯನ್ನು ಓಡಿಸುತ್ತಿರಲು ಒಂದು ಜಿಂಕೆಯು ಗಹನವಾದ ಒಂದು ವನಪ್ರದೇಶದಿಂದ ಹೊರಕ್ಕೆ ಬಂದು ರಾಜನನ್ನು ಕುರಿತು "ರಾಜನೇ ನನ್ನನ್ನು ಕೊಂದು ನಿನ್ನ ಇಷ್ಟವನ್ನು ಸಾಧಿಸಿಕೋ" ಎಂದು ಹೇಳಿತು.

ರಾಜನು ಹೇಳಿದನು :—

೯. ಇತರ ಮೃಗಗಳು ನನ್ನನ್ನು ನೋಡಿ ಮಹಾಭಯದಿಂದ ದೂರ ಓಡಿಹೋಗುತ್ತಿವೆ. ಹೀಗಿರಲು ನೀನು ಮಾತ್ರ ನಿರ್ಭಯನಾಗಿ ಮೃತ್ಯುವಿಗೆ ನಿನ್ನ ಆತ್ಮವನ್ನು ಕೊಡಲು ಏಕೆ ಇಷ್ಟಪಡುತ್ತೀಯೆ?

ಮೃಗವು ಹೀಗೆ ಹೇಳಿತು :—

೧೦. ಮಹಾರಾಜನೇ! ನಾನು ಅಪುತ್ರನಾಗಿದ್ದೇನೆ. ನನ್ನ ಜನ್ಮವು ವ್ಯರ್ಥವಾದುದು. ಎಷ್ಟು ವಿಚಾರಮಾಡಿದರೂ ನಾನು ಇಂತಹ ನನ್ನ ಪ್ರಾಣ-ಗಳನ್ನು ಧರಿಸಿಕೊಂಡು ಜೀವಿಸಿರುವುದಕ್ಕೆ ಪ್ರಯೋಜನವನ್ನು ತಿಳಿಯಲಾರೆನು.

ಮಾರ್ಕಣ್ಡೇಯ ಉವಾಚ :—

ಅಥಾಭ್ಯೇತ್ಯ ಮೃಗಃ ಪ್ರಾಹ ತಮನ್ಯೋ ವಸುಧಾಧಿಪಮ್ ।
ಮೃಗಸ್ಯ ತಸ್ಯ ಪ್ರತ್ಯಕ್ಷಮಲಮೇತೇನ ಪಾರ್ಥಿವ ॥೧೧॥

ಘಾತಯಸ್ವೇತಿ ಮಾಂ ಮಾಂಸೈರ್ಮಮ ಕರ್ಮ ಸಮಾಚರ ।
ಯಥಾ ಕೃತಾರ್ಥತಾ ತೇ ಸ್ಯಾನ್ಮಮ ಚಾಪ್ಯುಪಕಾರಿ ತತ್ ॥೧೨॥

ಪುತ್ರಾರ್ಥಂ ತ್ವಂ ಮಹಾರಾಜ ಸ್ವಪಿತೄನ್ಯಷ್ಟುಮಿಚ್ಛಸಿ ।
ಅಪುತ್ರಸ್ಯಾಸ್ಯ ಮಾಂಸೇನ ಲಪ್ಸ್ಯಸೇ ವಾಞ್ಛಿತಂ ಕಥಮ್ ॥೧೩॥

ಯಾದೃಕ್ಕರ್ಮ ವಿನಿಷ್ಪಾದ್ಯಂ ತಾದೃಗ್ದ್ರವ್ಯಮುಪಾಹರೇತ್ ।
ದುರ್ಗನ್ಧೈರ್ನ ಸುಗನ್ಧಾನಾಂ ಗನ್ಧಜ್ಞಾನವಿನಿರ್ಣಯಃ ॥೧೪॥

ಮಾರ್ಕಂಡೇಯ ಮುನಿಯು ಹೇಳಿದನು :—

೧೧. ಅನಂತರದಲ್ಲಿ ಮತ್ತೊಂದು ಮೃಗವು ಅಲ್ಲಿಗೆ ಓಡಿಬಂದು ಮೊದಲಿನ ಮೃಗದ ಮುಂದುಗಡೆಯಲ್ಲಿಯೇ ರಾಜನಿಗೆ ಹೇಳಿತು. ರಾಜನೇ! ಈ ಮೃಗವು ನಿನಗೆ ಬೇಡ.

೧೨. ನನ್ನನ್ನು ಸಂಹರಿಸು, ನನ್ನ ಮಾಂಸಗಳಿಂದ ನೀನು ನಿನ್ನ ಇಷ್ಟಕರ್ಮವನ್ನು ಆಚರಿಸು. ನನ್ನ ಮಾಂಸಗಳಿಂದ ನಿನಗೆ ಕೃತಾರ್ಥತೆ-ಯುಂಟಾಗುವುದು ನನಗೆ ದೊಡ್ಡ ಉಪಕಾರವಾಗುವುದು.

೧೩. ಮಹಾರಾಜನೇ! ನೀನು ಪುತ್ರಸಂತತಿಯನ್ನು ಹೊಂದಲು ಪಿತೃಯಜ್ಞವನ್ನು ಆಚರಿಸುವುದಕ್ಕೆ ಇಷ್ಟಪಡುತ್ತಿದ್ದೀಯೆ. ಹೀಗಿರಲು ಅಪುತ್ರ-ವಾದ ಈ ಮೃಗದ ಮಾಂಸದಿಂದ ನಿನ್ನ ಇಷ್ಟವನ್ನು ಹೇಗೆ ಸಾಧಿಸುತ್ತೀಯೆ?

೧೪. ಯಾವ ಪ್ರಯೋಜನಕ್ಕೆ ಎಂತಹ ಕರ್ಮವು ಆಚರಿಸಲ್ಪಡುವುದೊ ಆ ಕರ್ಮವು ಆ ಪ್ರಯೋಜನಸಿದ್ಧಿಗೆ ಅನುರೂಪವಾಗಿರಬೇಕು. ಸುಗಂಧ ವಸ್ತುಗಳ ಗಂಧಜ್ಞಾನ ನಿರ್ಣಯವು ದುರ್ಗಂಧಗಳಿಂದ ಉಂಟಾಗಲಾರದು.

ರಾಜೋವಾಚ :--

ವೈರಾಗ್ಯಕಾರಣಂ ಪ್ರೋಕ್ತಮನೇನಾಪುತ್ರತಾ ಮಮ ।
ಕಥ್ಯತಾಂ ಪ್ರಾಣಸನ್ತ್ಯಾಗೇ ಯತ್ತೇ ವೈರಾಗ್ಯಕಾರಣಮ್ ॥೧೫॥

ಮೃಗ ಉವಾಚ :—

ಬಹವೋ ಮೇ ಸುತಾ ಭೂಪ ಬಹ್ವ್ಯೋ ದುಹಿತರಸ್ತಥಾ ।
ಯಚ್ಚಿನ್ತಾದುಃಖದಾವಾಗ್ನಿಜ್ವಾಲಾಮಧ್ಯೇ ವಸಾಮ್ಯಹಮ್ ॥೧೬॥

ಸರ್ವಸಾಧ್ಯಾ ನರೇನ್ದ್ರೇಯಂ ಮೃಗಜಾತಿಃ ಸುಕಾತರಾ ।
ತೇಷ್ವಪತ್ಯೇಷು ಮೇ ಚಾತಿ ಮಮತ್ವಂ ತೇನ ದುಃಖಿತಃ ॥೧೭॥

ರಾಜನಿಂತೆಂದನು :—

೧೫. ಮೊದಲು ಬಂದಿರುವ ಈ ಮೃಗವು ತನ್ನ ಜೀವನದಲ್ಲಿ ವೈರಾಗ್ಯ-ವುಂಟಾಗುವುದಕ್ಕೆ ಅಪುತ್ರತೆಯು ಕಾರಣವೆಂದು ನನಗೆ ಹೇಳಿತು. ನೀನು ಪ್ರಾಣತ್ಯಾಗಕ್ಕೆ ಸಿದ್ಧನಾಗುವಂತೆ ನಿನಗೆ ವೈರಾಗ್ಯವು ಉದಯಿಸಲು ಏನು ಕಾರಣವೋ ಅದನ್ನು ಹೇಳು.

ಮೃಗವು ಹೇಳಿತು :—

೧೬. ಎಲೈ ರಾಜನೇ! ನನಗೆ ಅನೇಕ ಮಂದಿ ಪುತ್ರರಿರುವರು. ಹಾಗು ಅನೇಕ ಪುತ್ರಿಯರು ಇರುವರು. ಆ ಪುತ್ರ-ಪುತ್ರಿಯರ ವಿಷಯವಾದ ಚಿಂತೆಯು ದುಃಖವೆಂಬ ಕಾಡುಕಿಚ್ಚಿನ ಜ್ವಾಲೆಗಳ ಮಧ್ಯದಲ್ಲಿ ನಾನು ವಾಸಮಾಡುತ್ತಿರುವೆನು.

೧೭. ಎಲೈ ನರೇಂದ್ರನೇ! ಜಿಂಕೆಯ ಜಾತಿಯೆಂಬುದು ಎಲ್ಲ ಪ್ರಾಣಿ ಜಾತಿಯಿಂದಲೂ ಬಾಧಿಸಲ್ಪಡುವುದೂ ದುರ್ಬಲವೂ ಮತ್ತು ಬಲು ಭಯವುಳ್ಳದ್ದೂ ಆದ ಪ್ರಾಣಿಜಾತಿಯು. ಆ ನನ್ನ ಮರಿಗಳಲ್ಲಿ ನನಗೆ ಪ್ರಬಲವಾದ ಮಮತ್ವವುಂಟಾಗಿರುವುದು, ಆದುದರಿಂದ ನಾನು ದುಃಖಿಯಾಗಿರುವೆನು,

ಮನುಷ್ಯಸಿಹ್ಮಶಾರ್ದೂಲವೃಕಾದಿಭ್ಯೋ ಬಿಭೇಮ್ಯಹಮ್ ।
ವಿಹೀನಾತ್ಸರ್ವಸತ್ತ್ವೇಭ್ಯಃ ಶ್ವಶೃಗಾಲಾದಪಿ ಪ್ರಭೋ ॥೧೮॥

ಸೋಽಹಂ ನಿಮಿತ್ತಂ ಬನ್ಧೂನಾಮಿಮಾಂ ಶೂನ್ಯಾಂ ವಸುನ್ಧರಾಮ್ ।
ನೃಸಿಹ್ಮಾದಿಭಯಾತ್ಸರ್ವಾಮಿಚ್ಛಾಮಿ ಸುನೃಶಂಸಕೃತ್ ॥೧೯॥

ತೃಣಾನ್ಯನ್ಯೇಽಪಿ ಖಾದನ್ತಿ ಗೋಽಜಾವಿತುರಗಾದಿಕಾಃ ।
ತಾಂಸ್ತೇಷಾಂ ಪೋಷಣಾಯಾಹಮಿಚ್ಛಾಮಿ ನಿಧನಂ ಗತಾನ್ ॥೨೦॥

ನಿಷ್ಕ್ರಾನ್ತೇಷು ತತಸ್ತೇಷು ಮಮಾಪತ್ಯೇಷು ವೈ ಪೃಥಕ್ ।
ಭವನ್ತಿ ಚಿನ್ತಾಃ ಶತಶೋ ಮಮತ್ವಾವೃತಚೇತಸಃ ॥೨೧॥

---

೧೮. ಪ್ರಭುವೇ! ಮನುಷ್ಯ-ಸಿಂಹ-ಶಾರ್ದೂಲ-ತೋಳ ಮುಂತಾದ ದುಷ್ಟಜಂತುಗಳಿಗೆ ನಾನು ಭಯಪಡುವೆನು. ಇಷ್ಟೇ ಅಲ್ಲ. ಸರ್ವಪ್ರಾಣಿಗಳಲ್ಲಿ ಹೀನವಾದ ನಾಯಿ-ನರಿಗಳಿಂದಲೂ ನಾನು ಭಯಪಡುವೆನು.

೧೯. ನಾನು ನನ್ನ ಬಂಧುಗಳ ನಿಮಿತ್ತವಾಗಿ ಮನುಷ್ಯ-ಸಿಂಹ ಮುಂತಾದ ಪ್ರಾಣಿಗಳ ಭಯವಿಲ್ಲದಂತಿರಲು ಭೂಮಿಯಲ್ಲಿ ಅಂತಹ ಪ್ರಾಣಿಗಳಿಲ್ಲ-ದಂತೆ ಆಗುವುದನ್ನು ಇಷ್ಟಪಡುತ್ತೇನೆ. ಹಾಗೆ ಸಸಗೋಸ್ಕರ ಇತರ ಪ್ರಾಣಿಗಳ ಅಭಾವವನ್ನು ಬಯಸುವ ಕ್ರೂರನು ನಾನಾಗಿರುವೆನು.

೨೦. ಮತ್ತು ನನ್ನ ಆಹಾರವಾದ ಹುಲ್ಲನ್ನು ಹಸು, ಆಡು, ಕುರಿ, ಕುದುರೆ ಮುಂತಾದ ಇತರ ಪ್ರಾಣಿಗಳು ತಿನ್ನುತ್ತಿವೆ. ನನ್ನ ಪುತ್ರರ ಪೋಷಣೆಯ ದೃಷ್ಟಿಯಿಂದ ಹಾಗೆ ಹುಲ್ಲನ್ನು ತಿಂದು ಮುಗಿಸುವ ಇತರ ಪ್ರಾಣಿಗಳ ನಿಧನವನ್ನು ಕೋರುವೆನು.

೨೧. ಒಂದು ಸಮಯದಲ್ಲಿ ನನ್ನ ಮರಿಗಳು ಬೇರೆ ಬೇರೆಯಾಗಿ ಹೊರಟು ಹೋದರೆ ಆಗ ಅವುಗಳಲ್ಲಿ ಮಮತ್ವ ಭಾವನೆಯಿಂದ ತುಂಬಿದ ಮಾನಸವುಳ್ಳ ನನಗೆ ನೂರಾರು ಚಿಂತೆಗಳು ಉದಯಿಸುತ್ತವೆ.

ಕಿಂ ಕೂಟಪಾಶಂ ಕಿಂ ವಜ್ರಂ ವಾಗುರಾಂ ಕಿಂ ಸುತೋ ಮಮ ।
ಪ್ರಾಪ್ತಶ್ಚರನ್ ವನೇ ಕಿಂ ವಾ ನೃಸಿಹ್ಮಾದಿವಶಂಗತಃ ॥೨೨॥

ಪ್ರಾಪ್ತೋಽಯಮೇಕಃ ಸಮ್ಪ್ರಾಪ್ತಾಸ್ತೇಽವಸ್ಥಾಂ ಕೀದೃಶೀಂ ಮಮ
ಸಾಮ್ಪ್ರತಂ ತೇ ಚಿರಾಯನ್ತೇ ಯೇ ಗತಾಃ ಸುಮಹಾವನಮ್ ॥೨೩॥

ದೃಷ್ಟ್ವಾ ಪ್ರಾಪ್ತಾನ್ಮಮಾಭ್ಯಾಶಮಹಂ ತಾನಾತ್ಮಜಾನ್ನೃಪ ।
ಈಷದುಚ್ಛ್ವಸಿತಃ ಕ್ಷೇಮಮಿಚ್ಛಾಮಿ ರಜನೀಂ ಪುನಃ ॥೨೪॥

ಪ್ರಭಾತೇ ದಿವಸಂ ಕ್ಷೇಮಮಸ್ತಗೇಽರ್ಕೇ ನಿಶಾಮಪಿ ।
ವಾಞ್ಛಾಮ್ಯಹಂ ಕದಾ ಕ್ಷೇಮಂ ಸರ್ವಕಾಲಂ ಭವಿಷ್ಯತಿ ॥೨೫॥

---

೨೨. ಹೊರಗೆ ಹೋದ ನನ್ನ ಪುತ್ರನು ಎಲ್ಲಿ ಬೋನಿಗೆ ಬೀಳುವುದೋ, ವಜ್ರಘಾತಕ್ಕೆ ಸಿಕ್ಕುವುದೋ ಅಥವಾ ಬಲೆಗೆ ಬೀಳುವುದೋ ಅಥವಾ ವನದಲ್ಲಿ ಅಲ್ಲಲ್ಲಿ ಅಲೆದಾಡುತ್ತ ಸಿಂಹ ಮುಂತಾದ ಪ್ರಾಣಿಗಳಿಗೆ ವಶವಾಗುವುದೋ ? ಎಂಬ ಚಿಂತೆಯುಂಟಾಗುವುದು.

೨೩. ಒಂದು ಮರಿಯು ಹಿಂತಿರುಗಿ ಬಂದಾಗಲೂ ಇದೊಂದು ಬಂದಿರುವುದು. ಮಿಕ್ಕ ನನ್ನ ಪುತ್ರ-ಪುತ್ರಿಯರು ಯಾವ ದುರವಸ್ಥೆಗೆ ಈಡಾಗಿರುವರೊ, ದೊಡ್ಡ ಗೊಂಡಾರಣ್ಯಕ್ಕೆ ಹೋದ ಮರಿಗಳು ಇನ್ನೂ ಹಿಂದಕ್ಕೆ ಬಂದಿಲ್ಲ. ಏಕೋ ವಿಳಂಬ ಮಾಡುತ್ತಿವೆ.

೨೪. ರಾಜನ್ನೇ ! ನನ್ನ ಸಮೀಪಕ್ಕೆ ಬಂದಿರುವ ಆ ಎಲ್ಲ ನನ್ನ ಪುತ್ರ-ಪುತ್ರಿಯರನ್ನು ನೋಡಿದ ಮೇಲೆ ನಾನು ಸ್ವಲ್ಪ ಚೇತರಿಸಿಕೊಂಡವನಂತೆ ಆಗ ರಾತ್ರಿವೇಳೆಯಲ್ಲಿ ಕ್ಷೇಮವಾಗಿರುವುದನ್ನು ಆಶಿಸುತ್ತೇನೆ.

೨೫. ಮತ್ತೆ ಬೆಳಗಾದರೆ ರಾತ್ರಿಯವರೆಗೆ ಕ್ಷೇಮದಿಂದಿರುವ ಚಿಂತೆ, ಹಾಗು ಸೂರ್ಯಾಸ್ತಮಯವಾದರೆ ಮತ್ತೆ ಬೆಳಗಾಗುವವರೆಗೆ ಕ್ಷೇಮದಿಂದಿರುವ ಚಿಂತೆಗಳು ನನ್ನನ್ನು ತಪಿಸುತ್ತಿವೆ. ನಿಶ್ಚಿಂತೆಯಾಗಿ ಯಾವಾಗಲೂ ಕ್ಷೇಮವಾಗಿರುವುದನ್ನು ನಾನು ಕೋರುತ್ತೇನೆ.

ಏತತ್ತೇ ಕಥಿತಂ ಭೂಪ ಮನೋದ್ವೇಗಸ್ಯ ಕಾರಣಮ್ ।
ಅತಃ ಪ್ರಸಾದಂ ಕುರು ಮೇ ಬಾಣೋಽಯಂ ಪಾತ್ಯತಾಂ ಮಯಿ ॥೨೬॥

ಇತಿ ದುಃಖಶತಾವಿಷ್ಟಃ ಪ್ರಾಣಾನ್ನಾಹಂ ತ್ಯಜಾಮಿ ಯತ್ ।
ತತ್ಕಾರಣಂ ನಿಬೋಧ ತ್ವಂ ಬ್ರುವತೋ ಮಮ ಪಾರ್ಥಿವ ॥೨೭॥

ಅಸೂರ್ಯಾ ನಾಮ ತೇ ಲೋಕಾ ಯಾನ್ ಗಚ್ಛನ್ತ್ಯಾತ್ಮಘಾತಕಾಃ।
ಯಜ್ಞೋಪಯುಕ್ತಾಃ ಪಶವಃ ಸಮ್ಪ್ರಯಾನ್ತ್ಯುಚ್ಛ್ರಿತೀಃ ಪ್ರಭೋ ॥೨೮॥

ಅಗ್ನಿಃ ಪಶುರಭೂತ್ಪೂರ್ವಂ ಪಶುರಾಸೀಜ್ಜಲಾಧಿಪಃ ।
ಭಾಸ್ವಾನಥೋಚ್ಛ್ರಿತೀಃ ಪ್ರಾಪ್ತಾ ಯಜ್ಞೇ ನಿಷ್ಠಾಮುಪಾಗತಾಃ ॥೨೯॥

---

೨೬. ಮಹಾರಾಜನೇ! ನನ್ನ ವೈರಾಗ್ಯಕ್ಕೆ ಇದೇ ಕಾರಣವು. ಈ ಕಾರಣವು ನನ್ನಿಂದ ನಿನಗೆ ಹೇಳಲ್ಪಟ್ಟಿರುವುದು. ಆದುದರಿಂದ ನೀನು ನನ್ನಲ್ಲಿ ಅನುಗ್ರಹತೋರು. ಈ ಬಾಣವನ್ನು ನನ್ನಲ್ಲಿ ಪ್ರಯೋಗಿಸು.

೨೭. ಎಲೈ ರಾಜನೇ! ನಾನು ಹೀಗೆ ನೂರಾರು ದುಃಖಗಳಿಂದ ಪೀಡಿತನಾಗಿರುವೆನು. ಆದರೆ ನಾನು ಪ್ರಾಣಗಳನ್ನು ತ್ಯಜಿಸಿಲ್ಲ. ಹಾಗೆ ಪ್ರಾಣ-ತ್ಯಾಗವನ್ನು ಮಾಡದೇ ಇರುವ ಕಾರಣವನ್ನು ಹೇಳುವೆನು, ಅದನ್ನು ಕೇಳು.

೨೮. ಆತ್ಮಹತ್ಯೆಯನ್ನು ಮಾಡಿಕೊಂಡ ಜಂತುಗಳು ಆ ಪಾತಕದಿಂದ ಯಾವ ಪಾಪಲೋಕಕ್ಕೆ ಹೋಗುವುವೋ ಆ ಲೋಕಗಳು ಅಸೂರ್ಯಲೋಕ-ವೆಂದು ಪ್ರಸಿದ್ಧವಾಗಿವೆ. ಪ್ರಭುವೇ! ಯಜ್ಞಗಳಲ್ಲಿ ಉಪಯೋಗ ಹೊಂದಿದ ಪಶುಗಳು ಉನ್ನತಪದವನ್ನು ಹೊಂದುವುವು.

೨೯. ಪೂರ್ವಕಾಲದಲ್ಲಿ ಅಗ್ನಿಯು ಪಶುವಾಗಿದ್ದನು. ಜಲಾಧಿಪತಿ-ಯಾದ ವರುಣನು ಪಶುವಾಗಿದ್ದನು. ಹಾಗು ಸೂರ್ಯನು ಪಶುವಾಗಿದ್ದನು. ಅವರೆಲ್ಲರೂ ಯಜ್ಞಕರ್ಮಗಳಲ್ಲಿ ಅಂತವನ್ನು ಹೊಂದಿ ಉನ್ನತ ಪದಗಳನ್ನು ಹೊಂದಿರುವರು.

ತನ್ಮನ್ಯೈತಾಂ ಕೃಪಾಂ ಕೃತ್ವಾ ನಯ ಮಾಮುಚ್ಛ್ರಿತಿಂ ನೃಪ ।
ಅತ್ಮನಶ್ಚೇಪ್ಸಿತಂ ಕಾಮಂ ಪುತ್ರಲಾಭಾದವಾಪ್ಸ್ಯಸಿ ॥೩೦॥

ಪೂರ್ವಮೃಗ ಉವಾಚ :—

ರಾಜೇನ್ದ್ರ ನೈಷ ಹನ್ತವ್ಯೋ ಧನ್ಯೋಽಯಂ ಸುಕೃತೀ ಮೃಗಃ ।
ಬಹವಸ್ತನಯಾ ಹ್ಯಸ್ಯ ಹನ್ತವ್ಯೋಽಹಮಸನ್ತತಿಃ ॥೩೧॥

ಉತ್ತರಮೃಗ ಉವಾಚ :—

ಏಕದೇಹಭವಂ ಯಸ್ಯ ದುಃಖಂ ಧನ್ಯಃ ಸ ವೈ ಭವಾನ್ ।
ಬಹೂನಿ ಯಸ್ಯ ದೇಹಾನಿ ತಸ್ಯ ದುಃಖಾನ್ಯನೇಕಧಾ ॥೩೨॥

ಏಕೋ ಯದಾಹಮಾಸಂ ತು ಪ್ರಾಕ್ತದಾ ದೇಹಜಂ ಮಮ ।
ದುಃಖಮಾಸೀನ್ಮಮತ್ವೇ ತು ಭಾರ್ಯಾಯಾಸ್ತದಭೂದ್ದ್ವಿಧಾ ॥೩೩॥

---

೩೦. ಮಹಾರಾಜನೇ! ಆದ್ದರಿಂದ ನನ್ನ ದುಃಖವನ್ನು ತಿಳಿದಿರುವ ನೀನು ನನ್ನಲ್ಲಿ ದಯೆಯಿಟ್ಟು ನನ್ನನ್ನು ಸದ್ಗತಿಗೆ ಕಳುಹಿಸು. ಮತ್ತು ನನ್ನನ್ನು ಉಪಯೋಗಿಸಿ ಪಿತೃಯಜ್ಞವನ್ನು ಮಾಡಿ ಪುತ್ರಲಾಭದಿಂದ ನಿನ್ನ ಇಷ್ಟವನ್ನು ನೀನು ಹೊಂದುತ್ತೀಯೆ.

ಮೊದಲನೆಯ ಮೃಗವು ಹೇಳಿತು :-

೩೧. ರಾಜೇಂದ್ರನೇ! ಈ ಮೃಗಕ್ಕೆ ಅನೇಕ ಪುತ್ರ-ಪುತ್ರಿಯರು ಇರುವರು. ಈ ಮೃಗವು ಧನ್ಯವಾದುದು. ಇದು ಪುಣ್ಯಶಾಲಿಯು, ಇದನ್ನು ನೀನು ಕೊಲ್ಲಬಾರದು. ಸಂತತಿಯಿಲ್ಲದ ನನ್ನನ್ನು ನೀನು ಸಂಹರಿಸು.

ಎರಡನೆಯ ಮೃಗವು ಹೇಳಿತು :--

೩೨. ಯಾವ ನೀನು ನಿನ್ನ ಒಂದು ದೇಹದ ವಿಷಯವಾಗಿ ಉಂಟಾಗುವ ದುಃಖಕ್ಕೆ ಭಾಗಿಯಾಗಿರುವೆಯೊ ಅಂತಹ ನೀನು ಧನ್ಯನಾಗಿದ್ದೀಯೆ. ಯಾರಿಗೆ ಅನೇಕ ದೇಹಗಳಿರುವುವೂ ಅವರಿಗೆ ಅನೇಕದುಃಖಗಳು ಉಂಟಾಗುವುವು.

೩೩. ಹಿಂದೆ ಯಾವಾಗ ನಾನು ಒಂಟಿಯಾಗಿದ್ದೆನೋ ಆಗ ನನಗೆ ನನ್ನ ಒಂದು ದೇಹದ ಸಂಬಂಧವಾದ ದುಃಖವು ಮಾತ್ರ ಉಂಟಾಗುತ್ತಿತ್ತು. ನನಗೆ ಭಾರ್ಯೆಯಲ್ಲಿ ಮಮತ್ವವು ಉದಯಿಸಿದ ಮೇಲೆ ದುಃಖವು ದ್ವಿಗುಣವಾಯಿತು.

ಯದಾ ಜಾತಾನ್ಯಪತ್ಯಾನಿ ತದಾ ಯಾವನ್ತಿ ತಾನಿ ವೈ ।
ತಾವಚ್ಛರೀರಭೂಮಿಾನಿ ಮಮ ದುಃಖಾನ್ಯಥಾಭವನ್ ॥೩೪॥

ನ ಕೃತಾರ್ಥೋಽಭವಾಮ್ಯಸ್ಯ ನಾತಿದುಃಖಾಯ ಸಮ್ಭವಃ ।
ಇಹ ದುಃಖಾಯ ಮತ್ಪ್ರಾಪ್ತಿಃ ಪರತ್ರ ಚ ವಿರೋಧಿನೀ ॥೩೫॥

ಯತೋ ರಕ್ಷಣಪೋಷಾರ್ಥಮಪತ್ಯಾನಾಂ ಕರೋಮಿ ತತ್ ।
ಚಿನ್ತಯಾಮಿ ಚ ಸಮ್ಭೂತಿಸ್ತೇನ ಮೇ ನರಕೇ ಧ್ರುವಮ್ ॥೩೬॥

ರಾಜೋವಾಚ :—

ನ ವೇದ್ಮಿ ಕಿಂ ಸನ್ತತಿಮಾನ್ ಧನ್ಯೋಽಪುತ್ರೋಽತ್ರ ಕಿಂ ಮೃಗ ।
ಪುತ್ರಾರ್ಥಶ್ಚಾಯಮಾರಮ್ಭೋ ಮಮ ದೋಲಾಯತೇ ಮನಃ॥೩೭॥

---

೩೪. ಯಾವಾಗ ನನಗೆ ಮಕ್ಕಳು ಹುಟ್ಟಿದರೋ ಆಗ ಎಷ್ಟು ಮಕ್ಕಳು ಜನಿಸಿದರೋ ಅಷ್ಟು ಮಕ್ಕಳ ಶರೀರಗಳ ವಿಷಯವಾಗಿ ನನಗೆ ಅನೇಕ ದುಃಖಗಳು ಉಂಟಾದುವು. ಮಮತೆಯು ವಿಸ್ತಾರ ಹೊಂದಿದಂತೆ ದುಃಖಗಳು ಹೆಚ್ಚಿದುವು.

೩೫. ಆದುದರಿಂದ ನಾನು ಕೃತಾರ್ಥನಲ್ಲ. ಈ ಮೃಗದ ಜನ್ಮವು ಅಷ್ಟೊಂದು ದುಃಖದಾಯಕವಾಗಿಲ್ಲ. ನನಗೆ ಜನಿಸಿರುವ ಈ ಸಂತತಿಯು ದುಃಖಕ್ಕೆ ಕಾರಣವಾಗಿದೆ. ಇದರಿಂದ ಪರಲೋಕದಲ್ಲಿ ಯೂ ಹಿತವಿಲ್ಲ.

೩೬. ಯಾವ ಕಾರಣದಿಂದ ನಾನು ಈ ಮಕ್ಕಳ ರಕ್ಷಣ ಪೋಷಣಗಳಿಗೆ ಅನೇಕ ಬಗೆಯಾಗಿ ಪಾಪಗಳನ್ನು ಚಿಂತಿಸುವೆನೋ ಮತ್ತು ಹಾಗೆ ಸಾಧ್ಯವಾದುದನ್ನು ಮಾಡುವೆನೋ ಆ ಕಾರಣದಿಂದ ನನಗೆ ನರಕದಲ್ಲಿ ಸಂಭವವು ತಪ್ಪದು.

ರಾಜನಿಂತೆಂದನು :

೩೭. ಮೃಗವೇ ! ಸಂತತಿಯುಳ್ಳ ಮೃಗವು ಧನ್ಯವಾದುದೊ ಅಥವಾ ಅಪುತ್ರವಾದ ಮೃಗವು ಧನ್ಯವಾದುದೊ ? ಇದನ್ನು ನಾನರಿಯೆನು. ನನ್ನ ಈ ಉದ್ಯಮವು ಪುತ್ರಸಂತತಿಯನ್ನು ಹೊಂದುವುದಕ್ಕಾಗಿ ಆರಂಭಿಸಲ್ಪಟ್ಟಿದೆ. ನನ್ನ ಮನಸ್ಸು ಈಗ ಸಂಶಯದಲ್ಲಿ ತೂಗಾಡುತ್ತಿದೆ.

ದುಃಖಾಯ ಸನ್ತತಿಃ ಸತ್ಯಮೈಹಿಕಾಮುಷ್ಮಿಕಾಯ ತತ್ ।
ತಥಾಪ್ಯತನಯಾನ್ನಾನ್ತಿ ಋಣಾನೀತಿ ಶ್ರುತಂ ಮಯಾ ॥೩೮॥

ಸೋಽಹಂ ಯತಿಷ್ಯೇ ಪುತ್ರಾರ್ಥಮೃತೇ ಪ್ರಾಣಿವಧಂ ಮೃಗ ।
ತಪಸ್ಯೈವ ಪ್ರಚಣ್ಡೇನ ಯಥಾ ಪೂರ್ವಂ ಮಹೀಪತಿಃ ॥೩೯॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಖನೀಪುತ್ರಚರಿತ್ರೇ ಸಪ್ತದಶಾಧಿಕಶತತಮೋಽಧ್ಯಾಯಃ

---

೩೮. ಸಂತತಿಲಾಭವು ಐಹಿಕ ಮತ್ತು ಪಾರಲೌಕಿಕವಾದ ದುಃಖ-ಪ್ರಾಪ್ತಿಗೆ ಕಾರಣವೆಂಬುದು ನಿಜ. ಆದರೂ ಅಪುತ್ರರಿಗೆ ದೇವರ್ಷಿಪಿತೃಋಣ-ಗಳು ಪರಿಹಾರವಾಗುವುದಿಲ್ಲವೆಂದು ನಾನು ಕೇಳಿರುವೆನು.

೩೯. ಮೃಗವೇ ! ಹೀಗೆ ಸಂಶಯದಲ್ಲಿ ಮುಳುಗಿದ ನಾನು ಪ್ರಾಣಿವಧ-ವಿಲ್ಲದ ಹಾಗೆ ಪುತ್ರ ಸಂತತಿಯನ್ನು ಹೊಂದಲು ಯತ್ನಿಸುವೆನು. ನನ್ನ ಪೂರ್ವಿಕನಾದ ರಾಜನು ಮಾಡಿದಂತೆ ನಾನು ಪ್ರಚಂಡವಾದ ತಪಸ್ಸನ್ನು ಮಾಡುವೆನು.

ಮಾರ್ಕಂಡೇಯ ಮಹಾಪುರಾಣದಲ್ಲಿ ನೂರಹದಿನೇಳನೆಯ ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಅಷ್ಟಾದಶಾಧಿಕಶತತಮೋಽಧ್ಯಾಯಃ

ಮಾರ್ಕಣ್ಡೇಯ ಉವಾಚ :—

ತತಃ ಸ ನೃಪತಿರ್ಗತ್ವಾ ಗೋಮತೀಂ ಪಾಪನಾಶಿನೀಮ್ ।
ತತ್ರ ತುಷ್ಟಾವ ನಿಯತೋ ಭೂತ್ವಾ ದೇವಂ ಪುರನ್ದರಮ್ ॥೧॥

ತಪ್ಯಮಾನಸ್ತಪಶ್ಚೋಗ್ರಂ ಯತವಾಕ್ಕಾಯಮಾನಸಃ ।
ತುಷ್ಟಾವ ಪ್ರಯತಃ ಶಕ್ರಮಪತ್ಯಾರ್ಥಂ ಮಹೀಪತಿಃ ॥೨॥

ನೂರಹದಿನೆಂಟನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಇಂತೆಂದನು :—

೧. ತರುವಾಯ ಆ ಖನೀನೇತ್ರರಾಜನು ಸಮಸ್ತಪಾಪಗಳನ್ನು ಕಳೆಯುವ ಪಾವನವಾದ ಗೋಮತೀ ನದೀತೀರಕ್ಕೆ ಹೋಗಿ ಅಲ್ಲಿ ಶುದ್ಧವಾದ ತ್ರಿಕರಣಗಳುಳ್ಳವನಾಗಿ ಇಂದ್ರದೇವನನ್ನು ಸ್ತೋತ್ರಮಾಡಿದನು.

೨. ಕಠಿನವಾದ ತಪಸ್ಸನ್ನು ಮಾಡುವವನೂ ಮತ್ತು ನಿಗ್ರಹಿಸಿದ ವಾಕ್-ಕಾಯ-ಮಾನಸವೆಂಬ ತ್ರಿಕರಣಗಳುಳ್ಳವನೂ ಆದ ರಾಜನು ಸಂತತಿ-ಲಾಭಕ್ಕೋಸ್ಕರ ಶುದ್ಧಚಿತ್ತದಿಂದ ಇಂದ್ರನನ್ನು ಸ್ತೋತ್ರಮಾಡಿದನು.

ತಸ್ಯ ಸ್ತೋತ್ರೇಣ ತಪಸಾ ಭಕ್ತ್ಯಾ ಚಾಪಿ ಸುರೇಶ್ವರಃ ।
ತುತೋಷ ಭಗವಾನಿನ್ದ್ರಃ ಪ್ರಾಹ ಚೈನಂ ಮಹಾಮುನೇ ॥೩॥

ಅನೇನ ತಪಸಾ ಭಕ್ತ್ಯಾ ಸ್ತೋತ್ರೇಣೋಚ್ಚಾರಿತೇನ ಚ ।
ಪರಿತುಷ್ಟೋಽಸ್ಮಿ ತೇ ಭೂಪ ವ್ರಿಯತಾಂ ಭವತಾ ವರಃ ॥೪॥

ರಾಜೋವಾಚ :—

ಅಪುತ್ರಸ್ಯ ಸುತೋ ಮೇಽಸ್ತು ಸರ್ವಶಸ್ತ್ರಭೃತಾಂ ವರಃ ।
ಸದಾ ಚಾವ್ಯಾಹತೈಶ್ವರ್ಯೋ ಧರ್ಮಕೃದ್ಧರ್ಮವಿತ್ಕೃತೀ ॥೫॥

ಮಾರ್ಕಣ್ಡೇಯ ಉವಾಚ :—

ತಥೇತಿ ಚೋಕ್ತಃ ಶಕ್ರೇಣ ರಾಜಾ ಪ್ರಾಪ್ತಮನೋರಥಃ ।
ಪ್ರಜಾಃ ಪಾಲಯಿತುಂ ಭೂಪ ಆಜಗಾಮ ನಿಜಂ ಪುರಮ್ ॥೬॥

---

೩. ಮಹಾಮುನಿಯಾದ ಕ್ರೌಷ್ಟುಕಿಯೇ! ಆ ರಾಜನ ಸ್ತೋತ್ರ, ತಪಶ್ಚರ್ಯೆ ಮತ್ತು ಭಕ್ತಿಯೋಗಗಳಿಂದ ದೇವರಾಜನಾದ ಇಂದ್ರನು ಸಂತುಷ್ಟನಾಗಿ ಬಂದು ರಾಜನಿಗೆ ಹೀಗೆ ಹೇಳಿದನು.

೪. ಮಹಾರಾಜನೇ! ಈ ನಿನ್ನ ತಪಶ್ಚರ್ಯೆ, ಭಕ್ತಿ ಮತ್ತು ಪಠಿಸಿದ ಸ್ತೋತ್ರಗಳಿಂದ ನಾನು ಸಂತುಷ್ಟನಾಗಿರುವೆನು. ನೀನು ನನ್ನಲ್ಲಿ ಇಷ್ಟವಾದ ವರವನ್ನು ಪ್ರಾರ್ಥಿಸು.

ರಾಜನಿಂತೆಂದನು :—

೫. ಪುತ್ರರಿಲ್ಲದ ನನಗೆ ಪುತ್ರನು ಜನಿಸಲಿ ಮತ್ತು ನಿನ್ನ ಪ್ರಸಾದದಿಂದ ಜನಿಸುವ ಪುತ್ರನು ಸಮಸ್ತ ಶಸ್ತ್ರಧಾರಿಗಳಲ್ಲಿ ಶ್ರೇಷ್ಠನೂ, ಯಾವಾಗಲೂ ಭಂಗಹೊಂದದಿರುವ ಈಶ್ವರತ್ವವುಳ್ಳವನೂ, ಧರ್ಮಾನುಷ್ಠಾನಪರನೂ, ಧರ್ಮವೇತ್ತನೂ ಮತ್ತು ಕೃತಕೃತ್ಯನೂ ಆಗಿರಲಿ.

ಮಾರ್ಕಂಡೇಯ ಮುನಿಯು ಹೇಳಿದನು :—

೬. ದೇವೇಂದ್ರನಿಂದ ಹಾಗೇ ಆಗಲಿ ಎಂದು ಅನುಗ್ರಹಿಸಲ್ಪಟ್ಟು ಹೊಂದಿದ ಮನೋರಥವುಳ್ಳ ರಾಜನು ಮೊದಲಿನಂತೆ ಪ್ರಜೆಗಳನ್ನು ಪಾಲಿಸಲು ತನ್ನ ರಾಜಧಾನಿಗೆ ಬಂದನು.

ತತ್ರಾಸ್ಯ ಕುರ್ವತೋ ಯಜ್ಞಂ ಸಮ್ಯಕ್ಪಾಲಯತಃ ಪ್ರಜಾಃ ।
ಅಜಾಯತ ಸುತೋ ವಿಪ್ರ ತದಾ ಶಕ್ರಪ್ರಸಾದತಃ ॥೭॥

ತಸ್ಯ ನಾಮ ಪಿತಾ ಚಕ್ರೇ ಬಲಾಶ್ವ ಇತಿ ಭೂಪತಿಃ ।
ಅಸ್ತ್ರಗ್ರಾಮಮಶೇಷಂ ಚ ಗ್ರಾಹಯಾಮಾಸ ತಂ ಸುತಮ್ ॥೮॥

ಪಿತರ್ಯುಪರತೇ ವಿಪ್ರ ಸೋಽಧಿರಾಜ್ಯೇ ಸ್ಥಿತೋ ನೃಪಃ ।
ಸ ಬಲಾಶ್ವೋ ವಶಂ ನಿನ್ಯೇ ಭುವಿ ಸರ್ವಮಹೀಕ್ಷಿತಃ ॥೯॥

ಕರಂ ಚ ದಾಪಯಾಮಾಸ ಸಾರಗ್ರಹಣಪೂರ್ವಕಮ್ ।
ಸ ಸರ್ವಭೂಮಿಪಾನ್ರಾಜಾ ಪಾಲಯಾಮಾಸ ಚ ಪ್ರಜಾಃ ॥೧೦॥

ಅಥಾಖಿಲನರೇನ್ದ್ರಾಸ್ತೇ ದಾಯಾದಾಸ್ತಸ್ಯ ದುರ್ಮದಾಃ ।
ಸ ಚಾಭ್ಯುತ್ಥಾಯ ಸತತಂ ತೇ ಚಾಸ್ಮೈ ಪ್ರದದುಃ ಕರಾನ್ ॥೧೧॥

---

೭. ವಿಪ್ರೋತ್ತಮನಾದ ಕ್ರೌಷ್ಟುಕಿಯೇ! ತನ್ನ ರಾಜ್ಯದಲ್ಲಿ ಯಜ್ಞಗಳನ್ನು ಆಚರಿಸುತ್ತಲೂ, ಧರ್ಮದಿಂದ ಪ್ರಜೆಗಳನ್ನು ಪಾಲಿಸುತ್ತಲೂ ಇರುವ ರಾಜನಿಗೆ ಆಗ ದೇವೇಂದ್ರನ ಪ್ರಸಾದದಿಂದ ಪುತ್ರನು ಜನಿಸಿದನು.

೮. ರಾಜನು ತನ್ನ ಕುಮಾರನಿಗೆ ಬಲಾಶ್ವ ಎಂಬ ಹೆಸರನ್ನಿಟ್ಟನು. ಮತ್ತು ಕ್ರಮವಾಗಿ ಆ ಕುಮಾರನಿಗೆ ಅಸ್ತ್ರವಿದ್ಯಾಭ್ಯಾಸ ಪ್ರಾರಂಭವನ್ನು ಮಾಡಿಸಿ ಸಮಗ್ರವಾದ ಅಸ್ತ್ರವಿದ್ಯೆಯನ್ನು ಉಪದೇಶ ಮಾಡಿಸಿದನು.

೯. ವಿಪ್ರೋತ್ತಮನಾದ ಕ್ರೌಷ್ಟುಕಿಯೇ! ಬಲಾಶ್ವನೆಂಬ ಆ ರಾಜಕುಮಾರನು ತಂದೆಯು ಮರಣಹೊಂದಿದ ಮೇಲೆ ತಾನು ರಾಜಾಸನದಲ್ಲಿ ಕುಳಿತುಕೊಂಡವನಾಗಿ ಭೂಮಿಯಲ್ಲಿದ್ದ ಸಮಸ್ತ ರಾಜರನ್ನು ತನಗೆ ವಶಮಾಡಿಕೊಂಡನು.

೧೦. ಮತ್ತು ಆ ಬಲಾಶ್ವರಾಜನು ಸಮಸ್ತ ರಾಜರಿಂದ ಸಾರವತ್ತಾದ ವಸ್ತುಗಳನ್ನು ಸ್ವೀಕರಿಸುತ್ತ ಕಪ್ಪ-ಕಾಣಿಕೆಗಳನ್ನು ತೆಗೆದುಕೊಂಡನು. ಮತ್ತು ಧರ್ಮದಿಂದ ಪ್ರಜೆಗಳನ್ನು ಪಾಲಿಸಿದನು.

೧೧. ತರುವಾಯ ಮದೋನ್ಮತ್ತರಾದ ಎಲ್ಲ ರಾಜರು ಅವನಿಗೆ ಶತ್ರುಗಳಾಗಿ ಯಾವಾಗಲೂ ಅವನನ್ನು ಎದುರಿಸುವವರಾಗಿ ಅವನಿಗೆ ಅರ್ಪಿಸಬೇಕಾದ ಕಪ್ಪವನ್ನು ಕೊಡಲಿಲ್ಲ.

ವ್ಯುತ್ಥಿತಾಃ ಸ್ವೇಷು ರಾಷ್ಟ್ರೇಷು ನ ಸನ್ತೋಷಪರಾಸ್ತತಃ ।
ಭುವಂ ತಸ್ಯ ನರೇನ್ದ್ರಸ್ಯ ಜಗೃಹುಸ್ತೇ ನರಾಧಿಪಾಃ ॥೧೨॥

ಸ ಗೃಹೀತ್ವಾ ಸ್ವಕಂ ರಾಜ್ಯಂ ಪೃಥಿವೀಶೋ ಬಲಾಸ್ಮನೇ ।
ತಸ್ಥೌ ಸ್ವನಗರೇ ಭೂಪೈರ್ವಿರೋಧೋ ಬಹುಭಿಃ ಕೃತಃ ॥೧೩॥

ಸಮೇತ್ಯ ಸುಮಹಾವೀರ್ಯಾಃ ಸಸಾಧನಧನಾಸ್ತತಃ ।
ರುರುಧುಸ್ತಂ ಮಹೀಪಾಲಂ ಪುರೇ ತತ್ರ ನರೇಶ್ವರಾಃ ॥೧೪॥

ಪುರರೋಧೇನ ತೇನಾಥ ಕುಪಿತಃ ಸ ಮಹೀಪತಿಃ ।
ಸ್ವಲ್ಪಕೋಶೋಽಲ್ಪದಣ್ಡಶ್ಚ ವೈಕ್ಲವ್ಯಂ ಪರಮಂ ಗತಃ ॥೧೫॥

ಅಪಶ್ಯಮಾನಃ ಶರಣಂ ಸಬಲೋ ದ್ವಿಜಸತ್ತಮ ।
ಕರೌ ಮುಖಾಗ್ರತಃ ಕೃತ್ವಾ ನಿಶಶ್ವಾಸಾರ್ತಮಾನಸಃ ॥೧೬॥

---

೧೨. ಮತ್ತು ಆ ಎಲ್ಲ ರಾಜರು ತಮ್ಮ ತಮ್ಮ ರಾಷ್ಟ್ರಗಳ ಲಾಭದಲ್ಲಿ ಸಂತೋಷವಿಲ್ಲದವರಾಗಿ ಎಲ್ಲರೂ ಸೇರಿ ಮೇಲೆ ಬಿದ್ದು ಆ ಬಲಾಶ್ವರಾಜನ ಭೂಮಿಯನ್ನು ಕಿತ್ತುಕೊಂಡರು.

೧೩. ಕ್ರೌಷ್ಟುಕಿಮುನಿಯೇ ! ಆ ಬಲಾಶ್ವರಾಜನು ತನ್ನ ರಾಜ್ಯವನ್ನು ತೆಗೆದುಕೊಂಡಕೂಡಲೆ ಪೃಥಿವೀಪತಿಯಾಗಿ ತನ್ನ ನಗರದಲ್ಲಿ ವಾಸಮಾಡುತ್ತ ಬಹುಮಂದಿ ರಾಜರೊಡನೆ ವಿರೋಧವನ್ನು ಮಾಡಿದನು.

೧೪. ಅತಿಶಯವಾದ ವೀರ್ಯವುಳ್ಳವರೂ ಮತ್ತು ಧನ-ಸೈನ್ಯ ಸಂಪತ್ತಿಯಿಂದ ಕೂಡಿದವರೂ ಆದ ಆ ರಾಜರು ಎಲ್ಲರೂ ಒಟ್ಟುಗೂಡಿ ಆ ನಗರದಲ್ಲಿ ಬಲಾಶ್ವರಾಜನನ್ನು ಮುತ್ತಿದರು.

೧೫. ಹಾಗೆ ಶತ್ರುಗಳು ನಗರವನ್ನು ಮುತ್ತಿದ್ದರಿಂದ ಕೋಪತಾಳಿದ ಆ ಬಲಾಶ್ವರಾಜನು ಶತ್ರುಗಳಿಗಿಂತಲೂ ಅಲ್ಪವಾದ ಭಂಡಾರ ಮತ್ತು ಸೈನ್ಯ ಪರಿವಾರವುಳ್ಳವನಾದುದರಿಂದ ಅಧಿಕವಾಗಿ ಕಳವಳಗೊಂಡನು.

೧೬. ದ್ವಿಜೋತ್ತಮನಾದ ಕ್ರೌಷ್ಟುಕಿಯೇ ! ಆಗ ಬಲಾಶ್ವರಾಜನು ಆ ವಿಷಮಾವಸ್ಥೆಯಲ್ಲಿ ಶರಣವನ್ನು ಕಾಣದಂತಾಗಿ ದುಃಖಗೊಂಡ ಮಾನಸವುಳ್ಳ-ವನಾಗಿ ಬಾಯಿಯ ಮೇಲೆ ಎರಡು ಕೈಗಳನ್ನಿಟ್ಟುಕೊಂಡು ನಿಶ್ವಾಸ ಬಿಟ್ಟನು.

ತತೋಽಸ್ಯ ಹಸ್ತವಿವರಾನ್ಮುಖಾನಿಲಸಮಾಹತಾಃ ।
ನಿರ್ಜಗ್ಮುಃ ಶತಶೋ ಯೋಧಾ ರಥನಾಗತುರಙ್ಗಮಾಃ ॥೧೭॥

ತತಃ ಕ್ಷಣೇನ ತತ್ಸರ್ವಂ ನಗರಂ ತಸ್ಯ ಭೂಪತೇಃ ।
ವ್ಯಾಪ್ತಮಾಸೀದ್ಬಲೌಘೇನ ಸಾರೇಣಾತಿಬಲಾನ್ಮುನೇ ॥೧೮॥

ಅಥ ಸೋಽತಿಬಲೌಘೇನ ಮಹತಾ ತೇನ ಸಂವೃತಃ ।
ನಿರ್ಮಥ್ಯ ನಗರಾತ್ತಸ್ಮಾತ್ತಾನ್ನಿಜಿಗ್ಯೇ ನರಾಧಿಪಃ ॥೧೯॥

ಜಿತ್ವಾ ಚ ವಶಮಾನೀಯ ಚಕಾರ ಕರದಾನ್ ಪುನಃ ।
ಯಥಾಪೂರ್ವಂ ಮಹಾಭಾಗ ಮಹಾಭಾಗ್ಯೋ ನರೇಶ್ವರಃ ॥೨೦॥

---

೧೭. ತರುವಾಯ ಬಲಾಶ್ವರಾಜನ ಹಸ್ತರಂಧ್ರಗಳಿಂದ ಮುಖದ ನಿಶ್ವಾಸಮಾರುತದ ಹೊಡೆತದಿಂದ ನೂರಾರು ಮಂದಿ ಯೋಧರೂ ಅನೇಕ ರಥ ಗಜ-ಅಶ್ವಗಳೂ ಹುಟ್ಟಿಬಂದರು.

೧೮. ಕ್ರೌಷ್ಟುಕಿ ಮುನಿಯೇ! ತರುವಾಯ ಒಂದು ಕ್ಷಣಮಾತ್ರದಲ್ಲಿ ಹಾಗೆ ಹುಟ್ಟಿಬಂದ ಬಲಿಷ್ಠವಾದ ಸೈನ್ಯಪ್ರವಾಹದಿಂದ ಬಲಾತ್ಕಾರವಾಗಿ ಇತರ ರಾಜರನ್ನು ಹಿಮ್ಮೆಟ್ಟಿಸಿ ಆ ಬಲಾಶ್ವರಾಜನ ನಗರವು ವ್ಯಾಪಿಸಲ್ಪಟ್ಟಿತು.

೧೯. ಅನಂತರದಲ್ಲಿ ಆ ಬಲಾಶ್ವರಾಜನು ಅಪಾರವಾದ ಆ ಸೈನ್ಯ-ಸಮೂಹದಿಂದ ಕೂಡಿದವನಾಗಿ ಯುದ್ಧಮಾಡುತ್ತ ಶತ್ರುರಾಜನನ್ನು ಆ ನಗರ-ದಿಂದ ಓಡಿಸುತ್ತ ತಾನು ಜಯಶಾಲಿಯಾದನು.

೨೦. ಮಹಾಭಾಗ್ಯನಾದ ಕ್ರೌಷ್ಟುಕಿ ಮುನಿಯೇ! ಮಹಾಭಾಗ್ಯಶಾಲಿ-ಯಾದ ಆ ರಾಜನು ಹೀಗೆ ಸಕಲ ಶತ್ರುರಾಜರನ್ನು ಗೆದ್ದು ಎಲ್ಲರನ್ನೂ ತನ್ನ ಅಧೀನರನ್ನಾಗಿ ಮಾಡಿ ಮೊದಲಿನಂತೆ ಮತ್ತೆ ಅವರು ತನಗೆ ಕಪ್ಪ-ಕಾಣಿಕೆಗಳನ್ನು ಒಪ್ಪಿಸುವವರನ್ನಾಗಿ ಮಾಡಿದನು.

ಧುತಯೋಃ ಕರಯೋರ್ಜಜ್ಞೇ ಯತಸ್ತಸ್ಯಾರಿವಾಹದಮ್ ।
ಬಲಂ ಕರನ್ಧಮಸ್ತಸ್ಮಾತ್ಸ ಬಲಾಶ್ವೋಽಭಿಧೀಯತೇ ॥೨೧॥

ಸ ಧರ್ಮಾತ್ಮಾ ಮಹಾತ್ಮಾ ಚ ಸ ಮೈತ್ರಃ ಸರ್ವಜನ್ತುಷು ।
ಕರನ್ಧಮೋಽಭವದ್ಭೂಪಸ್ತ್ರಿಷು ಲೋಕೇಷು ವಿಶ್ರುತಃ ॥೨೨॥

ಸಮ್ಪ್ರಾಪ್ತಸ್ಯ ಪರಾಮಾರ್ತಿಂ ದದಾವರಿವಿನಾಶನಮ್ ।
ಬಲಂ ಧರ್ಮೇಣ ಚಾಕ್ಷಿಪ್ತಮಭ್ಯುಪೇತ್ಯ ಸ್ವಯಂ ನೃಪಮ್ ॥೨೩॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಕರನ್ಧಮಚರಿತಂ
ನಾಮಾಷ್ಟಾದಶಾಧಿಕಶತತಮೋಽಧ್ಯಾಯಃ

---

೨೧. ಯಾವ ಕಾರಣದಿಂದ ಕೈಗಳನ್ನು ಕೊಡವುತ್ತಿರಲು ಶತ್ರುಗಳನ್ನು ವಹಿಸುವಂತಹ ಶಕ್ತಿಯುಳ್ಳ ಸೈನ್ಯವು ಜನಿಸಿತೋ ಆ ಕಾರಣದಿಂದ ಆ ಬಲಾಶ್ವ-ರಾಜನು ಅನ್ವರ್ಥವಾದ ಕರಂಧಮ ಎಂಬ ಹೆಸರಿನಿಂದ ಕರೆಯಲ್ಪಡುತ್ತಿರುವನು.

೨೨. ಧರ್ಮಾತ್ಮನೂ, ಮಹಾತ್ಮನೂ, ಸರ್ವಭೂತಗಳಲ್ಲಿ ದಯೆ ಮುಂತಾದ ಗುಣಗಳಿಂದ ಕೂಡಿದವನೂ ಆದ ಕರಂಧಮರಾಜನು ತನ್ನ ವಿಕ್ರಮ-ದಿಂದ ಮೂರು ಲೋಕಗಳಲ್ಲಿ ಖ್ಯಾತಿಯನ್ನು ಗಳಿಸಿದನು.

೨೩. ಶತ್ರುಜನರಿಂದ ಅಧಿಕ ಪೀಡೆಯನ್ನು ಹೊಂದಿರುವವರಿಗೆ ಸಹಾಯಕನಾದ ಕರಂಧಮರಾಜನು ಧರ್ಮದಿಂದ ತಾನಾಗಿ ಒದಗಿ ಬಂದ ಸೈನ್ಯವನ್ನು ಇಟ್ಟುಕೊಂಡು ಶತ್ರುಗಳನ್ನು ನಾಶಮಾಡಿದನು.

ಮಾರ್ಕಂಡೇಯ ಮಹಾಪುರಾಣದಲ್ಲಿ ನೂರ ಹದಿನೆಂಟನೆಯ ಅಧ್ಯಾಯವು
ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಏಕೋನವಿಂಶತ್ಯಧಿಕಶತತಮೋಽಧ್ಯಾಯಃ

(ಅವಿಕ್ಷಿಚ್ಚರಿತೋಪಕ್ರಮಃ)

ಮಾರ್ಕಣ್ಡೇಯ ಉವಾಚ : –

ವೀರ್ಯಚನ್ದ್ರಸುತಾ ಸುಭ್ರೂರ್ವೀರಾ ನಾಮ ಶುಭವ್ರತಾ ।
ಸ್ವಯಂವರೇ ಸಾ ಜಗೃಹೇ ಮಹಾರಾಜಂ ಕರನ್ಧಮಮ್ ||೧||

ತಸ್ಯಾಂ ಪುತ್ರಂ ಸ ರಾಜೇನ್ದ್ರೋ ಜನಯಾಮಾಸ ವೀರ್ಯವಾನ್ ।
ಅವಿಕ್ಷಿತಮಿತಿ ಖ್ಯಾತಿಮುಪೇತಂ ಜಗತೀತಲೇ ||೨||

ನೂರ ಹತ್ತೊಂಭತ್ತನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಹೇಳಿದನು :–

೧. ಮಂಗಳಕರವಾದ ನಿಯಮಗಳನ್ನು ಧರಿಸಿದವಳೂ, ವೀರಾ ಎಂಬ ನಾಮಾಂಕಿತಳೂ ಮತ್ತು ವೀರಚಂದ್ರ ಎಂಬುವನ ಪುತ್ರಿಯೂ ಆದ ಸುಂದರ ಕನ್ಯೆಯು ಸ್ವಯಂವರದಲ್ಲಿ ಆ ಕರಂಧಮರಾಜನನ್ನು ಪತಿಯನ್ನಾಗಿ ವರಿಸಿದಳು.

೨. ವೀರ್ಯಶಾಲಿಯಾದ ಆ ಕರಂಧಮರಾಜನು ವೀರಾ ಎಂಬ ತನ್ನ ಧರ್ಮಪತ್ನಿಯಲ್ಲಿ ಭೂಮಂಡಲದಲ್ಲಿ ಅವಿಕ್ಷಿತ್ ಎಂಬ ನಾಮಾಂಕನದಿಂದ ಪ್ರಸಿದ್ಧಿ ಹೊಂದಿದ ಒಬ್ಬ ಪುತ್ರನನ್ನು ಹೊಂದಿದನು.

ಜಾತೇ ತಸ್ಮಿನ್ ಸುತೇ ರಾಜಾ ಸ ದೈವಜ್ಞಾನಪೃಚ್ಛತ ।
ಕಚ್ಚಿತ್ಪ್ರಶಸ್ತನಕ್ಷತ್ರೇ ಶಸ್ತಲಗ್ನೇ ಸುತೋ ಮಮ ॥೩॥

ಕಚ್ಚಿಚ್ಚಾಲೋಕಿತಂ ಜನ್ಮ ಮಮ ಪುತ್ರಸ್ಯ ಶೋಭನೈಃ ।
ಗ್ರಹೈಃ ಕಚ್ಚಿನ್ನ ದುಷ್ಟಾನಾಂ ಗ್ರಹಾಣಾಂ ದೃಕ್ಪಥಂ ಗತವಾನ್ ॥೪॥

ಇತ್ಯುಕ್ತಾಸ್ತೇನ ದೈವಜ್ಞಾಸ್ತಮೂಚುರ್ನೃಪತಿಂ ತತಃ ।
ಶಸ್ತೇ ಮುಹೂರ್ತೇ ನಕ್ಷತ್ರೇ ಲಗ್ನೇ ಚೈವ ಸುತಸ್ತವ ॥೫॥

ಸಮುತ್ಪನ್ನೋ ಮಹಾವೀರ್ಯೋ ಮಹಾಭಾಗೋ ಮಹಾಬಲಃ ।
ಭವಿಷ್ಯತಿ ಮಹಾರಾಜ ಮಹಾರಾಜಸ್ತವಾತ್ಮಜಃ ॥೬॥

ಅವೈಕ್ಷತೇಮಂ ದೇವಾನಾಂ ಗುರುಃ ಶುಕ್ರಶ್ಚ ಸಪ್ತಮಃ ।
ಸೋಮಶ್ಚತುರ್ಥಸ್ತನಯಂ ತವೈಸಂ ಸಮುವೈಕ್ಷತ ॥೭॥

---

೩. ಕರಂಧಮ ಮಹಾರಾಜನು ಅವಿಕ್ಷಿತನೆಂಬ ಆ ಕುಮಾರನು ಜನಿಸಿದ ಕೂಡಲೆ ಜ್ಯೋತಿಷ್ಕರನ್ನು ಪ್ರಶ್ನಿಸಿದನು. ಈ ನನ್ನ ಪುತ್ರನು ಶ್ರೇಷ್ಠವಾದ ನಕ್ಷತ್ರದಲ್ಲಿಯೂ ಮತ್ತು ಪ್ರಶಸ್ತವಾದ ಲಗ್ನದಲ್ಲಿಯೂ ಜನಿಸಿರುವನೇ ?

೪. ಮತ್ತು ನನ್ನ ಈ ಪುತ್ರನ ಜನ್ಮಲಗ್ನವು ಶುಭಗ್ರಹಗಳಿಂದ ನೋಡಲ್ಪಟ್ಟಿರುವುದೇ ? ಹಾಗು ದುಷ್ಟಗ್ರಹಗಳ ದೃಷ್ಟಿಗೆ ಪುತ್ರನ ಜನ್ಮಲಗ್ನವು ಗೋಚರವಾಗದೇ ಇದೆಯೇ ?

೫. ರಾಜನಿಂದ ಈ ರೀತಿಯಾಗಿ ಪ್ರಶ್ನಿಸಲ್ಪಟ್ಟ ಆ ದೈವಜ್ಞರು ತರುವಾಯ ರಾಜನಿಗೆ ಈ ರೀತಿಯಾಗಿ ಉತ್ತರವಿತ್ತರು. ಮಹಾರಾಜನೇ ! ನಿನ್ನ ಪುತ್ರನು ಪ್ರಶಸ್ತವಾದ ನಕ್ಷತ್ರ, ಮುಹೂರ್ತ ಮತ್ತು ಲಗ್ನಗಳಲ್ಲಿ ಜನ್ಮವೆತ್ತಿರುವನು.

೬. ಮಹಾರಾಜನೇ ! ಶುಭಲಗ್ನದಲ್ಲಿ ಜನಿಸಿದ ನಿನ್ನ ಪುತ್ರನು ಮಹಾವೀರ್ಯ ಸಂಪನ್ನನೂ, ಮಹಾಮಹಿಮೆಯುಳ್ಳವನೂ ಮತ್ತು ಮಹಾ ಬಲಿಷ್ಠನೂ ಆದ ಮಹಾರಾಜನಾಗಿ ರಾಜ್ಯವನ್ನು ಪಾಲಿಸುವನು.

೭. ದೇವತೆಗಳ ಗುರುವಾದ ಬೃಹಸ್ಪತಿ ಮತ್ತು ಶುಕ್ರಗ್ರಹಗಳು ಸಪ್ತಮಸ್ಥಾನದಲ್ಲಿದ್ದು ನಿನ್ನ ಪುತ್ರನ ಜನ್ಮಲಗ್ನವನ್ನು ನೋಡುತ್ತಿರುವರು. ಹಾಗು ಚಂದ್ರನು ಚತುರ್ಥ ಸ್ಥಾನದಿಂದ ನಿನ್ನ ಪುತ್ರನನ್ನು ನೋಡುತ್ತಿರುವನು.

ಉಪಾನ್ತಸಂಸ್ಥಿತಶ್ಚೈವ ಸೋಮಪುತ್ರೋऽಸ್ಯವೈಕ್ಷತ ।
ನಾನ್ವೈಕ್ಷತೇಮಂ ಸವಿತಾ ನ ಭೌಮೋ ನ ಶನೈಶ್ಚರಃ ॥೮॥

ತವ ಪುತ್ರಂ ಮಹಾರಾಜ ಧನ್ಯೋऽಯಂ ತನಯಸ್ತವ ।
ಸರ್ವಕಲ್ಯಾಣಸಮ್ಪತ್ತಿಸಮವೇತೋ ಭವಿಷ್ಯತಿ ॥೯॥

ಮಾರ್ಕಣ್ಡೇಯ ಉವಾಚ :—

ಇತಿ ದೈವಜ್ಞವಚನಂ ನಿಶಮ್ಯ ವಸುಧಾಧಿಪಃ ।
ಹರ್ಷಪೂರ್ಣಮನಾಃ ಪ್ರಾಹ ನಿಜಸ್ಥಾನಗತಸ್ತದಾ ॥೧೦॥

ಅನ್ವೈಕ್ಷತೇಮಂ ದೇವಾನಾಂ ಗುರುಃ ಸೋಮಃ ಸಿತೋ ಬುಧಃ ।
ನಾನ್ವೈಕ್ಷತೈನಮಾದಿತ್ಯೋ ನಾರ್ಕಸೂನುರ್ನ ಭೂಮಿಜಃ ॥೧೧॥

---

೮. ಹಾಗು ಚಂದ್ರಪುತ್ರನಾದ ಬುಧನು ಸುಸ್ಥಾನದಲ್ಲಿದ್ದು ಜನ್ಮಲಗ್ನವನ್ನು ನೋಡುತ್ತಿರುವನು. ದುಷ್ಟಗ್ರಹಗಳಾದ ಸೂರ್ಯ, ಅಂಗಾರಕ ಮತ್ತು ಶನೈಶ್ಚರರ ದುಷ್ಟ ದೃಷ್ಟಿಗೆ ಜನ್ಮಲಗ್ನವು ಗೋಚರವಾಗಿಲ್ಲ.

೯. ಮಹಾರಾಜನೇ! ಹೀಗೆ ನಿನ್ನ ಪುತ್ರನಲ್ಲಿ ಶುಭಗ್ರಹ ದೃಷ್ಟಿಯು ಇರುವುದು. ಅಶುಭಗ್ರಹ ದೃಷ್ಟಿಯಿಲ್ಲ. ಆದುದರಿಂದ ನಿನ್ನ ಪುತ್ರನು ಧನ್ಯನಾಗಿರುವನು. ಇವನು ಸಮಸ್ತ ಕಲ್ಯಾಣಕರವಾದ ಸಂಪತ್ತಿಯಿಂದ ಕೂಡಿದವನಾಗುತ್ತಾನೆ.

ಮಾರ್ಕಂಡೇಯ ಮುನಿಯು ಇಂತೆಂದನು :—

೧೦. ಭೂಮಿಗೆ ಅಧಿಪತಿಯಾದ ಕರಂಧಮ ರಾಜನು ತನ್ನ ಆಸ್ಥಾನದಲ್ಲಿ ಕುಳಿತುಕೊಂಡವನಾಗಿ ದೈವಜ್ಞರು ಹೇಳಿದ ಈ ವಚನವನ್ನು ಕೇಳಿ ಆಗ ಹರ್ಷದಿಂದ ತುಂಬಿದ ಹೃದಯವುಳ್ಳವನಾಗಿ ಹೇಳಿದನು.

೧೧. ನನ್ನ ಪುತ್ರನ ಜನ್ಮವನ್ನು ದೇವಗುರು, ಚಂದ್ರ, ಶುಕ್ರ ಮತ್ತು ಬುಧ ಎಂಬ ಶುಭಗ್ರಹಗಳು ನೋಡುತ್ತಿರುವರಲ್ಲವೆ? ಹಾಗೆಯೆ ಸೂರ್ಯ, ಶನೈಶ್ಚರ ಮತ್ತು ಅಂಗಾರಕ ಗ್ರಹಗಳ ದೃಷ್ಟಿಗೆ ಜನ್ಮಲಗ್ನವು ಗೋಚರವಲ್ಲವಷ್ಟೆ?

ಅನ್ವೈಕ್ಷತೇತಿ ಯತ್ಪ್ರೋಕ್ತಂ ಭವದ್ಭಿರ್ಬಹುಶೋ ವಚಃ ।
ಅವಿಕ್ಷಿತೇತಿ ತೇನಾಸ್ಯ ಖ್ಯಾತಂ ನಾಮ ಭವಿಷ್ಯತಿ ॥೧೨॥

ಮಾರ್ಕಣ್ಡೇಯ ಉವಾಚ :—

ಅವಿಕ್ಷಿತಃ ಸುತಸ್ತಸ್ಯ ವೇದವೇದಾಙ್ಗಪಾರಗಃ ।
ಅಸ್ತ್ರಗ್ರಾಮಮಶೇಷಂ ಸ ಕಣ್ವಪುತ್ರಾದಥಾಗ್ರಹೀತ್ ॥೧೩॥

ಸ ರೂಪೇಣಾತಿಭಿಷಜೌ ದೇವಾನಾಂ ಪಾರ್ಥಿವಾತ್ಮಜಃ ।
ಬುದ್ಧ್ಯಾ ವಾಚಸ್ಪತಿಂ ಕಾನ್ತ್ಯಾ ಶಶಾಙ್ಕಂ ತೇಜಸಾ ರವಿಮ್ ॥೧೪॥

ಧೈರ್ಯೇಣಾಬ್ಧಿಂ ತಥೋರ್ವೀಂ ಚ ಸಹಿಷ್ಣುತ್ವೇನ ವೀರ್ಯವಾನ್ ।
ಶೌರ್ಯೇಣ ನ ಸಮಸ್ತಸ್ಯ ಕಶ್ಚಿದಾಸೀನ್ಮಹಾತ್ಮನಃ ॥೧೫॥

---

೧೨. ಹೀಗೆ ಜಾತಕ ಫಲವನ್ನು ಹೇಳುತ್ತಿರುವ ನಿಮ್ಮಿಂದ ಶುಭಗ್ರಹಗಳು ನೋಡುತ್ತಿರುವರು ಎಂಬ ಅರ್ಥದಲ್ಲಿ ಅನೇಕಸಲ “ಅನ್ವೈಕ್ಷತ” ಎಂದು ಹೇಳಿದ್ದರಿಂದ ಈ ಕುಮಾರನಿಗೆ “ಅವಿಕ್ಷಿತ” ಎಂಬ ನಾಮಧೇಯವು ಪ್ರಖ್ಯಾತವಾಗುವುದು.

ಮಾರ್ಕಂಡೇಯ ಮುನಿಯು ಹೇಳಿದನು :—

೧೩. ಕರಂಧಮ ರಾಜನ ಕುಮಾರನಾದ ಅವಿಕ್ಷಿತನು ವೇದವೇದಾಂಗಗಳಲ್ಲಿ ಪಾರಂಗತನಾಗಿ ಕಣ್ವಮಹರ್ಷಿಯ ಪುತ್ರನಿಂದ ಸಮಗ್ರವಾದ ಅಸ್ತ್ರವಿದ್ಯೆಯನ್ನು ಕಲಿತನು.

೧೪. ಮತ್ತು ಆ ರಾಜಕುಮಾರನು ಸೌಂದರ್ಯದಲ್ಲಿ ದೇವತೆಗಳ ವೈದ್ಯರಾದ ಅಶ್ವಿನೀಕುಮಾರರನ್ನೂ, ಬುದ್ಧಿಯಲ್ಲಿ ದೇವಗುರುವನ್ನೂ, ಕಾಂತಿಯಲ್ಲಿ ಚಂದ್ರನನ್ನೂ ಮತ್ತು ತೇಜಸ್ಸಿನಲ್ಲಿ ಸೂರ್ಯನನ್ನೂ ಮೀರಿಸಿದವನಾಗಿದ್ದನು.

೧೫. ಹಾಗು ವೀರ್ಯಸಂಪನ್ನನಾದ ಅವಿಕ್ಷಿತನು ಧೈರ್ಯಗುಣದಿಂದ ಸಮುದ್ರಕ್ಕೆ ತುಲ್ಯನೂ, ಕ್ಷಮಾಗುಣದಿಂದ ಭೂಮಿಗೆ ತುಲ್ಯನೂ ಆಗಿದ್ದನು. ಆ ಮಹಾತ್ಮನಿಗೆ ಶೌರ್ಯದಲ್ಲಿ ತುಲ್ಯನಾದವನು ಬೇರೊಬ್ಬನು ಇರಲಿಲ್ಲ.

ಸ್ವಯಂವರೇ ತಂ ಜಗೃಹೇ ಹೇಮಧರ್ಮಾತ್ಮಜಾ ವರಾ ।
ಸುದೇವತನಯಾ ಗೌರೀ ಸುಭದ್ರಾ ಬಲಿನಃ ಸುತಾ ॥೧೬॥

ಲೀಲಾವತೀ ವೀರಸುತಾ ವೀರಭದ್ರಸುತಾ ನಿಭಾ ।
ಭೀಮಾತ್ಮಜಾ ಮಾನ್ಯವತೀ ದಮ್ಭಪುತ್ರೀ ಕುಮುದ್ವತೀ ॥೧೭॥

ಯಾಶ್ಚೈನಂ ನಾಭಿನನ್ದನ್ತಿ ಸ್ವಯಂವರಕೃತಕ್ಷಣಾಃ ।
ತಾಶ್ಚಾಪಿ ಸ ಬಲಾದ್ವೀರೋ ಜಗ್ರಾಹ ನೃಪತೇಃ ಸುತಃ ॥೧೮॥

ನಿರಾಕೃತ್ಯ ನೃಪಾನ್ ಸರ್ವಾಂಸ್ತಾಸಾಂ ಪಿತೃಕುಲಾನಿ ಚ ।
ಸ್ವಯಂ ಹಿ ವೀರ್ಯಮಾಶ್ರಿತ್ಯ ಬಲವಾನ್ ಸ ಬಲೋದ್ಧತಃ ॥೧೯॥

---

೧೬. ಹೇಮಧರ್ಮ ಎಂಬುವನ ಪುತ್ರಿಯಾದ ವರಾ, ಸುದೇವ ಎಂಬುವನ ಪುತ್ರಿಯಾದ ಗೌರೀ, ಮತ್ತು ಬಲಿ ಎಂಬುವನ ಪುತ್ರಿಯಾದ ಸುಭದ್ರಾ ಎಂಬೀಕನ್ಯೆಯರು ಸ್ವಯಂವರದಲ್ಲಿ ಅವಿಕ್ಷಿತನನ್ನು ವರಿಸಿದರು.

೧೭. ಹಾಗು ವೀರನ ಪುತ್ರಿಯಾದ ಲೀಲಾವತೀ, ವೀರಭದ್ರನ ಪುತ್ರಿಯಾದ ನಿಭಾ, ಭೀಮನ ಪುತ್ರಿಯಾದ ಮಾನ್ಯವತೀ ಮತ್ತು ದಂಭನ ಪುತ್ರಿಯಾದ ಕುಮುದ್ವತೀ ಎಂಬ ಕನ್ಯೆಯರು ಅವಿಕ್ಷಿತನನ್ನು ವರಿಸಿದರು.

೧೮. ಮತ್ತು ಸ್ವಯಂವರದಲ್ಲಿ ಒಪ್ಪಿಗೆಯ ಬುದ್ಧಿಯುಳ್ಳ ಯಾವ ಇತರ ಕನ್ಯೆಯರು ಇವನನ್ನು ವರಿಸಿ ಅಭಿನಂದಿಸಲಿಲ್ಲವೊ ಆ ಕನ್ಯೆಯರನ್ನು ಕೂಡ ವೀರನೂ ರಾಜಪುತ್ರನೂ ಆದ ಅವಿಕ್ಷಿತನು ಬಲಾತ್ಕಾರವಾಗಿ ಗ್ರಹಿಸಿದನು.

೧೯. ಅತಿಶಯವಾದ ಬಲವುಳ್ಳವನೂ ಮತ್ತು ಬಲದಿಂದ ಉದ್ಧತನೂ ಆದ ಅವಿಕ್ಷಿತನು ಸ್ವಯಂವರಕ್ಕಾಗಿ ಸಿದ್ಧರಾದ ಇತರ ಅನೇಕ ರಾಜರನ್ನೂ ಮತ್ತು ಆಯಾಯ ಕನ್ಯೆಯರ ಪಿತೃಪರಿವಾರವನ್ನೂ ಅಲಕ್ಷ್ಯಮಾಡಿ ವೀರ್ಯ-ಪ್ರಭಾವದಿಂದ ಕನ್ಯೆಯರನ್ನು ಬಲಾತ್ಕಾರವಾಗಿ ಅಪಹರಿಸಿದನು.

ಏಕದಾ ತು ವಿಶಾಲಸ್ಯ ವಿಶಾಲಾಧಿಪತೇಃ ಸುತಾಮ್ ।
ವೈಶಾಲಿನೀಂ ಸ ಮುದತೀಂ ಸ್ವಯಂವರಕೃತಕ್ಷಣಾಮ್ ॥೨೦॥

ಪರಿಭೂಯಾಖಿಲಾನ್ಭೂಪಾನ್ ಸ್ವೇಚ್ಛಯಾ ನ ವೃತಸ್ತಯಾ ।
ಬಲಾಜ್ಜಗ್ರಾಹ ವಿಪ್ರರ್ಷೇ ಯಥಾನ್ಯಾ ಬಲಗರ್ವಿತಃ ॥೨೧॥

ತತಸ್ತೇ ಭೂಭೃತಃ ಸರ್ವೇ ಬಹುಶಸ್ತೇನ ಮಾನಿನಾ ।
ನಿರಾಕೃತಾಃ ಸುನಿರ್ವಿಣ್ಣಾಃ ಪ್ರೋಚುರನ್ಯೋಽನ್ಯಮಾಕುಲಾಃ ॥೨೨॥

ಕ್ಷಮತಾಂ ವಞ್ಚನಾಮೇತಾಮೇಕಸ್ಮಾದ್ಬಲಶಾಲಿನಾಮ್ ।
ಬಹೂನಾಮೇಕವರ್ಣಾನಾಂ ಜನ್ಮ ಧಿಗ್ವೋ ಮಹೀಭೃತಾಮ್ ॥೨೩॥

---

೨೦. ಹೀಗೆ ಒಂದು ಸಮಯದಲ್ಲಿ ವಿಶಾಲಾನಗರಾಧಿಪತಿಯಾದ ವಿಶಾಲರಾಜನ ಪುತ್ರಿಯೂ ವೈಶಾಲಿನೀ ಮತ್ತು ಮುದತೀ ಎಂಬ ನಾಮಾಂಕಿತಳೂ ಆದ ಕನ್ಯೆಯು ಸ್ವಯಂವರ ಸಮಾರಂಭದಲ್ಲಿ ಸಿದ್ಧಳಾಗಿದ್ದಳು.

೨೧. ವಿಪ್ರರ್ಷಿಯಾದ ಕ್ರೌಷ್ಟುಕಿಯೇ! ಆ ಸ್ವಯಂವರದಲ್ಲಿ ಮುದತೀ ಕನ್ಯೆಯಿಂದ ತಾನಾಗಿ ವರಿಸಲ್ಪಡದಿರುವ ಅವಿಕ್ಷಿತರಾಜನು ತನ್ನ ಬಲದಿಂದ ಅಹಂಕಾರಪಡುತ್ತ ಎಲ್ಲ ರಾಜರನ್ನೂ ಅವಮಾನಮಾಡಿ ಇತರ ಕನ್ಯೆಯರಂತೆ ಮುದತೀಕನ್ಯೆಯನ್ನು ಗ್ರಹಿಸಿದನು.

೨೨. ತರುವಾಯ ಮಾನಿಯಾದ ಅವಿಕ್ಷಿತ ರಾಜನಿಂದ ಅನೇಕಸಲ ಅವಮಾನಗೊಳಿಸಲ್ಪಟ್ಟ ಎಲ್ಲ ಇತರ ರಾಜರು ಬಲು ದುಃಖಗೊಂಡವರೂ ಮತ್ತು ವ್ಯಾಕುಲಬುದ್ಧಿಯುಳ್ಳವರೂ ಆಗಿ ಅನ್ಯೋಽನ್ಯವಾಗಿ ಹೀಗೆ ಮಾತನಾಡಿಕೊಂಡರು.

೨೩. ಏಕಮಾತ್ರ ವೀರನಿಂದ ಸಂಭವಿಸಿದ ಈ ವಂಚನೆಯನ್ನು ಸಹಿಸಿಕೊಂಡಿರುವ, ಬಲಶಾಲಿಗಳೂ, ಕ್ಷತ್ರಿಯವರ್ಣಕ್ಕೆ ಸೇರಿದವರೂ, ರಾಜರೆನಿಸಿದವರೂ ಮತ್ತು ಅನೇಕ ಮಂದಿಯೂ ಆದ ನಿಮ್ಮ ಜನ್ಮಕ್ಕೆ ಧಿಕ್ಕಾರವು.

ಕ್ಷತ್ರಿಯೋ ಯಃ ಕ್ಷತಾತ್ತ್ರಾಣಂ ವಧ್ಯಮಾನಸ್ಯ ದುರ್ವರ್ಗಷ್ಟೈಃ ।
ಕರೋತಿ ತಸ್ಯ ತನ್ನಾಮ ವೃಥೈವಾನ್ಯೇ ಹಿ ಬಿಭ್ರತಿ ॥೨೪॥

ಆತ್ಮನೋಽಪಿ ಕ್ಷತತ್ರಾಣಂ ದುಷ್ಟಾದಸ್ಮಾದಕುರ್ವತಾಮ್ ।
ಭವತಾಂ ಕ್ಷತ್ರಿಯಕುಲೇ ಜಾತಾನಾಂ ಕೀದೃಶೀ ಮತಿಃ ॥೨೫॥

ಉಚ್ಚಾರ್ಯತೇ ಸ್ತುತಿರ್ಯಾ ವಃ ಸೂತಮಾಗಧವನ್ದಿಭಿಃ ।
ಸಾ ಸತ್ಯಾ ಮಾ ವೃಥಾ ವೀರಾ ಭವತ್ವರಿವಿನಾಶನಾತ್ ॥೨೬॥

ಚರತಾಂ ಸಾ ತಥೈವೈಷಾ ಭೂಪಾಶ್ಚಾರೈರ್ದಿಗನ್ತರೇ ।
ಪೌರುಷಾಶ್ರಯಿಣಃ ಸರ್ವೇ ವಿಶಿಷ್ಟಕುಲಸಮ್ಭವಾಃ ॥೨೭॥

---

೨೪. ಮದೋನ್ಮತ್ತರಾದ ದುಷ್ಟರಿಂದ ಪೀಡಿಸಲ್ಪಡುತ್ತಿರುವ ದುರ್ಬಲನನ್ನು ಯಾರು ಕ್ಷತದಿಂದ ತ್ರಾಣಮಾಡುವನೋ ಅವನು ಕ್ಷತ್ರಿಯನು. ಅವನಿಗೆ ಆ ಹೆಸರು ಒಪ್ಪುವುದು. ಇತರರು ಆ ಹೆಸರನ್ನು ಇಟ್ಟುಕೊಂಡಿರುವುದು ವ್ಯರ್ಥವು.

೨೫. ಹೀಗಿರಲು ದುಷ್ಟನಾದ ಈ ಅವಿಕ್ಷಿತನಿಂದ ಒದಗಿದ ತಮ್ಮ ತಮ್ಮ ಕ್ಷತದ ತ್ರಾಣವನ್ನು ಮಾಡಿಕೊಳ್ಳಲು ನೀವು ಅಶಕ್ತರಾಗಿದ್ದೀರಿ. ಕ್ಷತ್ರಿಯ ಕುಲದಲ್ಲಿ ಹುಟ್ಟಿದ ನಿಮ್ಮ ಬುದ್ಧಿಯು ಈಗ ಯಾವ ಅಭಿಪ್ರಾಯದಲ್ಲಿದೆ?

೨೬. ಎಲೈ, ವೀರ ರಾಜರೇ! ಸೂತ-ಮಾಗಧ-ವಂದಿಗಳಿಂದ ನಿಮ್ಮ ಎದುರಿನಲ್ಲಿ ಯಾವ ವೀರಸ್ತುತಿ ವಚನಗಳು ಉಚ್ಚರಿಸಲ್ಪಡುತ್ತಿವೆಯೋ ಅವು ಈ ಶತ್ರುವನ್ನು ನೀವು ನಿಗ್ರಹಿಸುವುದರಿಂದ ಸತ್ಯವಾಗುವಂತೆ ಮಾಡಿರಿ. ಅದು ವ್ಯರ್ಥವಾಗುವುದು ಬೇಡ.

೨೭. ಪೌರುಷಾವಲಂಬಿಗಳೂ, ಶ್ರೇಷ್ಠವಾದ ವಂಶದಲ್ಲಿ ಜನಿಸಿದವರೂ ಆದ ಸಮಸ್ತ ವೀರ ರಾಜರೇ! ನಿಮ್ಮ ವೀರ್ಯ ಬಿರುದಾವಳಿಯ ಸ್ತುತಿಯು ಸಾರ್ಥಕವಾಗಿ ಚಾರರಿಂದ ದೇಶಾಂತರಗಳಲ್ಲಿಯೂ ವ್ಯಾಪಿಸಲಿ,

ಬಿಭೇತಿ ಕೋ ನ ಮರಣಾತ್ ಕೋ ಯುದ್ಧೇನ ವಿನಾಮರಃ ।
ವಿಚಿನ್ತ್ಯೈತನ್ನ ಹಾತವ್ಯಂ ಪೌರುಷಂ ಶಸ್ತ್ರವೃತ್ತಿಭಿಃ ॥೨೮॥

ಏತನ್ನಿಶಮ್ಯ ತೇ ಭೂಪಾ ವಿಸ್ಪಷ್ಟಾಮರ್ಷಪೂರಿತಾಃ ।
ಊಚುಃ ಪರಸ್ಪರಂ ಸರ್ವೇ ಸಮುತ್ತಸ್ಥುಶ್ಚ ಸಾಯುಧಾಃ ॥೨೯॥

ಕೇಚಿದ್ರಥಾನಾರುರುಹುಃ ಕೇಚಿನ್ನಾಗಾಂಸ್ತಥಾ ಹಯಾನ್ ।
ಅನ್ಯೇಽಮರ್ಷಪರಾಧೀನಾಸ್ತಮುಪೇತಾಃ ಪದಾತಯಃ ॥೩೦॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಅವಿಕ್ಷಿಚ್ಚರಿತಂ
ನಾಮೈಕೋನವಿಂಶತ್ಯಧಿಕಶತತಮೋಽಧ್ಯಾಯಃ

---

೨೮. ಮರಣಕ್ಕೆ ಭಯಪಡದವನು ಯಾರಿರುವನು? ಅಥವಾ ಅದನ್ನು ತಪ್ಪಿಸಿಕೊಳ್ಳುವುದು ಸಾಧ್ಯವುಂಟೆ? ಯುದ್ಧವನ್ನು ಬಿಟ್ಟಮಾತ್ರಕ್ಕೆ ಅಮರ-ನಾಗುವನೆ? ಇದನ್ನು ಯೋಚಿಸಿ ಶಸ್ತ್ರವನ್ನು ವೃತ್ತಿಯನ್ನಾಗಿ ಉಪಯೋಗಿಸುವ ಕ್ಷತ್ರಿಯರು ಪೌರುಷವನ್ನು ಎಂದೂ ಬಿಡಲಾಗದು.

೨೯. ಈ ವಚನವನ್ನು ಕೇಳಿದ ಎಲ್ಲ ರಾಜರು ಉದ್ರೇಕಗೊಂಡ ಕೋಪಾಗ್ನಿಯುಳ್ಳವರಾಗಿ ಪರಸ್ಪರವಾಗಿ ಇದೇ ಸರಿಯೆಂದು ಹೇಳಿಕೊಂಡರು ಮತ್ತು ಆಯುಧಧಾರಿಗಳಾಗಿ ಎಲ್ಲರೂ ಮೇಲಕ್ಕೆ ಎದ್ದರು.

೩೦. ಆ ಅವಸ್ಥೆಯಲ್ಲಿ ಕೆಲವರು ರಥವನ್ನು ಏರಿದರು. ಮತ್ತೆ ಕೆಲವರು ಆನೆಗಳನ್ನು ಹತ್ತಿದರು. ಇನ್ನು ಕೆಲವರು ಕುದುರೆಯ ಮೇಲೆ ಕುಳಿತುಕೊಂಡರು. ಮತ್ತೆ ಕೆಲವರು ಕೋಪಾವೇಶವುಳ್ಳವರಾಗಿ ಪದಾತಿಗಳಾಗಿ ಅವನ ಬಳಿಗೆ ಹೋದರು.

ಮಾರ್ಕಂಡೇಯ ಮಹಾಪುರಾಣದಲ್ಲಿ ನೂರ ಹತ್ತೊಂಭತ್ತನೆಯ ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ವಿಂಶತ್ಯಧಿಕಶತತಮೋಽಧ್ಯಾಯಃ

(ಸಙ್ಗ್ರಾಮೇ ಅವಿಕ್ಷಿತೋ ಬನ್ಧನಮ್)

ಮಾರ್ಕಣ್ಡೇಯ ಉವಾಚ :—

ಇತಿ ಸಙ್ಗ್ರಾಮಸಜ್ಜಾಸ್ತೇ ಭೂಪಾ ಭೂಪಸುತಾಸ್ತಥಾ ।
ನಿರಾಕೃತಾಃ ಸುಬಹುಶಸ್ತತ್ಕಾಲಂ ಚಾಪ್ಯವಿಕ್ಷಿತಾ ||೧||

ತತೋ ಬಭೂವ ಸಙ್ಗ್ರಾಮಸ್ತಸ್ಯ ತೈಃ ಸಹ ದಾರುಣಃ ।
ಏಕಸ್ಯ ಬಹುಭಿರ್ಭೂಪೈರ್ಭೂಪಪುತ್ರವರೈರ್ಮುನೇ ||೨||

ನೂರ ಇಪ್ಪತ್ತನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಹೇಳಿದನು :—

೧. ಅವಿಕ್ಷಿತನಿಂದ ಹಿಂದೆ ಅನೇಕ ಸಂದರ್ಭಗಳಲ್ಲಿಯೂ, ಮುದತೀ ಸ್ವಯಂವರದಲ್ಲಿಯೂ ಪರಾಜಯಗೊಳಿಸಲ್ಪಟ್ಟ ಆ ಎಲ್ಲ ರಾಜರು ಮತ್ತು ರಾಜಪುತ್ರರು ಒಟ್ಟುಗೂಡಿ ಸಂಗ್ರಾಮಕ್ಕೆ ಸಿದ್ಧರಾದರು.

೨. ಕ್ರೌಷ್ಟುಕಿ ಮುನಿಯೇ! ತರುವಾಯ ಆ ಅವಿಕ್ಷಿತ ರಾಜಕುಮಾರನೊಬ್ಬನಿಗೂ ಮತ್ತು ರಾಜ–ರಾಜಪುತ್ರರು ಅನೇಕ ಮಂದಿಗೂ ಬಹಳ ಭಯಂಕರವಾದ ಸಂಗ್ರಾಮವು ಜರುಗಿತು.

ತೇಽಸಿಶಕ್ತಿಗದಾಬಾಣಪಾಣಯಸ್ತಂ ಸುದುರ್ಮದಾಃ ।
ಅಭಿಘ್ನನ್ತೋ ಯುಯುಧಿರೇ ತೈಃ ಸಮಸ್ತೈರಸಾವಪಿ ॥೩॥

ಸ ತಾನ್ಶರಶತೈರುಗ್ರೈರ್ಬಿಭೇದ ನೃಪನನ್ದನಃ ।
ಕೃತಾಸ್ತ್ರೋ ಬಲವಾನ್ ಬಾಣೈಸ್ತೇ ಚ ತಂ ಬಿಭಿದುಃ ಶಿತೈಃ ॥೪॥

ಕಸ್ಯಚಿಚ್ಚಿಚ್ಛಿದೇ ಬಾಹುಮನ್ಯಸ್ಯ ಚ ಶಿರೋಧರಾಮ್ ।
ಹೃದಿ ವಿವ್ಯಾಧ ಚೈವಾನ್ಯಮನ್ಯಂ ವಕ್ಷಸ್ಯತಾಡಯತ್ ॥೫॥

ಕರಂ ಚಿಚ್ಛೇದ ಕರಿಣಸ್ತುರಗಸ್ಯ ತಥಾ ಶಿರಃ ।
ರಥಸ್ಯೇಷಾಂ ತಥೈವಾಶ್ವಾನ್ರಥಸ್ಯಾನ್ಯಸ್ಯ ಸಾರಥಿಮ್ ॥೬॥

---

೩. ರಾಜ ರಾಜಪುತ್ರರು ಕತ್ತಿ-ಶಕ್ತಿಆಯುಧ-ಗದಾ-ಬಾಣ ಮುಂತಾದ ಆಯುಧಗಳನ್ನು ಕೈಯಲ್ಲಿ ಧರಿಸಿ ಯುದ್ಧೋನ್ಮತ್ತರಾಗಿ ಪ್ರಹರಿಸುತ್ತ ಯುದ್ಧ ಮಾಡಿದರು ; ಅವರೆಲ್ಲರೊಡನೆ ಅವಿಕ್ಷಿತನೂ ಹಾಗೆಯೇ ಯುದ್ಧ ಮಾಡಿದನು.

೪. ಅಸ್ತ್ರವಿದ್ಯೆಯಲ್ಲಿ ಸುಶಿಕ್ಷಿತನೂ, ಬಲಿಷ್ಠನೂ ಆದ ಅವಿಕ್ಷಿತ ರಾಜಕುಮಾರನು ಉಗ್ರವಾದ ನೂರಾರು ಬಾಣಗಳಿಂದ ಆ ಶತ್ರುಗಳನ್ನು ಭೇದಿಸಿದನು.

೫. ಅವಿಕ್ಷಿತನು ಯುದ್ಧಮಾಡುತ್ತ ಒಬ್ಬ ಶತ್ರುವಿನ ಬಾಹುವನ್ನು ಕತ್ತರಿಸಿದನು. ಮತ್ತೊಬ್ಬ ಶತ್ರುರಾಜನ ಕತ್ತನ್ನು ಭೇದಿಸಿದನು. ಬೇರೊಬ್ಬನ ಹೃದಯಕ್ಕೆ ಹೊಡೆದನು. ಮತ್ತು ಮತ್ತೊಬ್ಬ ಶತ್ರುವನ್ನು ವಕ್ಷಸ್ಥಳದಲ್ಲಿ ಪ್ರಹರಿಸಿದನು.

೬. ಮತ್ತು ಒಂದು ಮದ್ದಾನೆಯ ಸೊಂಡಿಲನ್ನು ಕತ್ತರಿಸಿದನು. ಒಂದು ಕುದುರೆಯ ಶಿರವನ್ನು ಉರುಳಿಸಿದನು. ಮತ್ತು ಒಂದು ರಥದ ನೊಗವನ್ನೂ ಮತ್ತೊಂದು ರಥದ ಕುದುರೆಗಳನ್ನೂ ಬೇರೊಂದು ರಥದ ಸಾರಥಿಯನ್ನೂ ಭೇದಿಸಿದನು.

ಬಾಣಾನಾಪತತಸ್ತಚ್ಚಕ್ರೇ ದ್ವಿಧಾ ಬಾಣೈಸ್ತಥಾ ದ್ವಿಷಾಮ್ ।
ಚಿಚ್ಛೇದಾನ್ಯಸ್ಯ ಖಡ್ಗಂ ಚ ಧನುರನ್ಯಸ್ಯ ಲಾಘವಾತ್ ॥೭॥

ತನುತ್ರೇಽಪಹೃತೇ ತೇನ ನನಾಶಾನ್ಯೋ ನೃಪಾತ್ಮಜಃ ।
ಅವಿಕ್ಷಿತಾ ಹತಶ್ಚಾನ್ಯಃ ಪದಾತಿಃ ಪ್ರಜಹೌ ರಣಮ್ ॥೮॥

ಇತ್ಯಾಕುಲೀಕೃತೇ ತಸ್ಮಿನ್ ಸಮಗ್ರೇ ರಾಜಮಣ್ಡಲೇ ।
ತಸ್ಥುಃ ಸಪ್ತಶತಂ ವೀರಾ ಮರಣೇ ಕೃತನಿಶ್ಚಯಾಃ ॥೯॥

ಆಭಿಜಾತ್ಯವಯಃಶೌರ್ಯಲಜ್ಜಾಭಾರಸಮನ್ವಿತಾಃ ।
ನಿರ್ಜಿತೇ ಸಕಲೇ ಸೈನ್ಯೇ ಪಲಾಯನಪರಾಯಣೇ ॥೧೦॥

---

೭. ಹಾಗು ತನ್ನ ಬಳಿಗೆ ಬರುತ್ತಿದ್ದ ಶತ್ರುಗಳು ಪ್ರಯೋಗಿಸಿದ ಬಾಣಗಳನ್ನು ತನ್ನ ಬಾಣಗಳಿಂದ ತುಂಡು ಮಾಡಿದನು. ಒಬ್ಬನು ಹಿಡಿದಿರುವ ಖಡ್ಗವನ್ನು ಭೇದಿಸಿದನು. ಮತ್ತು ಬೇರೊಬ್ಬನ ಬಿಲ್ಲನ್ನು ಲಾಘವದಿಂದ ಕತ್ತರಿಸಿದನು.

೮. ಅವಿಕ್ಷಿತನಿಂದ ಕವಚವು ಭಿನ್ನವಾದುದರಿಂದ ಒಬ್ಬ ಶತ್ರುವಾದ ರಾಜಕುಮಾರನು ಹತನಾದನು. ಮತ್ತು ಅವಿಕ್ಷಿತನ ಪ್ರಹಾರಕ್ಕೆ ಗುರಿಯಾದ ಒಬ್ಬ ಪದಾತಿಯು ರಣರಂಗವನ್ನು ಬಿಟ್ಟನು.

೯. ಹೀಗೆ ಆ ಸಮಸ್ತ ರಾಜರ ಮಂಡಲವು ಅಸ್ತವ್ಯಸ್ತವಾಗಿ ಮಾಡಲ್ಪಡುತ್ತಿರಲು ಅವರಲ್ಲಿ ಏಳು ನೂರು ಮಂದಿ ವೀರ ರಾಜರು ಮರಣದಲ್ಲಿ ಸ್ಥಿರವಾದ ನಿಶ್ಚಯವುಳ್ಳವರಾಗಿ ಯುದ್ಧ ಮಾಡಲು ನಿಂತರು.

೧೦. ತಮ್ಮ ಅಪಾರವಾದ ಸೈನ್ಯಪರಿವಾರವು ಒಬ್ಬ ರಾಜಪುತ್ರನಿಂದ ಸೋತು ಓಡಿಹೋಗುತ್ತಿರುವುದನ್ನು ಕಂಡು ವೀರ ರಾಜರು ತಮ್ಮ ಸದ್ವಂಶ, ವಯಸ್ಸು, ಶೌರ್ಯ, ಲಜ್ಜಾಭಾರ—ಮುಂತಾದ ಗುಣಗಳನ್ನು ಸ್ಮರಿಸಿಕೊಂಡು ಯುದ್ಧ ಮಾಡಲು ಸ್ಥಿರರಾಗಿ ನಿಂತರು.

ತೈಃ ಸಮೇತ್ಯ ಮಹೀಪಾಲೈಃ ಸ ತು ಪುತ್ರೋ ಮಹೀಭೃತಃ ।
ಯುಯುಧೇ ಧರ್ಮಯುದ್ಧೇನ ತೇನ ತೇನಾತಿಕೋಪಿತಃ ॥೧೧॥

ವಿಚ್ಛಿನ್ನಯನ್ತ್ರಕವಚಾನ್ಸ ತಾನಪಿ ಮಹಾಬಲಃ ।
ಕರ್ತುಂ ವ್ಯವಸ್ಥಿತಸ್ತೇ ಚ ತತಃ ಕ್ರುದ್ಧಾ ಮಹಾಮುನೇ ॥೧೨॥

ಧರ್ಮಮುತ್ಸೃಜ್ಯ ಯುಯುಧುರ್ಯುಧ್ಯಮಾನೇನ ಧರ್ಮತಃ ।
ನರೇನ್ದ್ರಪುತ್ರಾಃ ಪ್ರಸ್ವೇದಜಲಕ್ಲಿನ್ನಾನನಾಃ ಸಮಮ್ ॥೧೩॥

ವಿವ್ಯಾಧ ಕಶ್ಚಿದ್ಬಾಣೌಘೈಃ ಕಶ್ಚಿಚ್ಛಿಚ್ಛೇದ ಕಾರ್ಮುಕಮ್ ।
ಧ್ವಜಮಸ್ಯಾಪರೋ ಬಾಣೈಶ್ಛಿತ್ವಾ ಭೂಮಾವಪಾತಯತ್ ॥೧೪॥

---

೧೧. ರಾಜಪುತ್ರನಾದ ಆ ಅವಿಕ್ಷಿತನು ಯುದ್ಧಕ್ಕೆ ಸಿದ್ಧರಾದ ರಾಜರೊಡನೆ ಸೇರಿ ಬಲು ಕೋಪ ತಾಳಿದವನಾಗಿ ಆಯಾಯ ವೀರ ಶತ್ರುವಿನೊಡನೆ ಧರ್ಮಯುದ್ಧಪರನಾಗಿ ಯುದ್ಧಮಾಡಿದನು.

೧೨. ಮಹಾಮುನಿಯಾದ ಕ್ರೌಷ್ಟುಕಿಯೇ! ಮಹತ್ತಾದ ಬಲದಿಂದ ಕೂಡಿದ ರಾಜಪುತ್ರನು ಆ ಶತ್ರುರಾಜರನ್ನು ಯಂತ್ರದಂತೆ ಅಭೇದ್ಯವಾದ ಕವಚವು ಛಿನ್ನವಾಗಿ ಕವಚಶೂನ್ಯರನ್ನಾಗಿ ಮಾಡಲು ವ್ಯವಸ್ಥೆಯಿಂದ ಯುದ್ಧಮಾಡಿದನು. ಆಗ ಶತ್ರುಗಳು ಕೋಪತಾಳಿದರು.

೧೩. ಆಗ ಶತ್ರುಗಳಾದ ರಾಜಕುಮಾರರು ಆಯಾಸದಿಂದ ಉಂಟಾದ ಬೆವರಿನ ಪ್ರವಾಹದಿಂದ ಒದ್ದೆಯಾದ ಮುಖವುಳ್ಳವರಾಗಿ ಧರ್ಮದಿಂದ ಯುದ್ಧಮಾಡುತ್ತಿರುವ ಅವಿಕ್ಷಿತನೊಡನೆ ಅಸಹನೆಯಿಂದ ಅಧರ್ಮಯುದ್ಧವನ್ನು ಮಾಡಲಾರಂಭಿಸಿದರು.

೧೪. ಶತ್ರುರಾಜರ ಗುಂಪು ಅವಿಕ್ಷಿತನೊಬ್ಬನ ಮೇಲೆ ಬಿದ್ದು ಯುದ್ಧಮಾಡುತ್ತಿರಲು ಒಬ್ಬನು ಬಾಣರಾಶಿಯಿಂದ ಅವಿಕ್ಷಿತನನ್ನು ಪ್ರಹರಿಸಿದನು. ಮತ್ತೊಬ್ಬನು ಇವನ ಬಿಲ್ಲನ್ನು ಕತ್ತರಿಸಿದನು. ಮತ್ತು ಬೇರೊಬ್ಬನು ಬಾಣಗಳಿಂದ ಇವನ ಧ್ವಜವನ್ನು ನೆಲಕ್ಕೆ ಕೆಡವಿದನು.

ಜಘ್ನುರನ್ಯೇ ತಥೈವಾಶ್ವಾನ್ಬಭಞ್ಜುಶ್ಚಾಪರೇ ರಥಮ್ ।
ಗದಾಪಾತೇನಾಥ ಚಾನ್ಯೇ ಬಾಣೈಃ ಪೃಷ್ಠಮತಾಡಯನ್ ॥೧೫॥

ಛಿನ್ನೇ ಧನುಷಿ ಸಕ್ರೋಧಃ ಸ ತದಾ ನೃಪತೇಃ ಸುತಃ ।
ಜಗ್ರಾಹಾಸಿಂ ತಥಾ ಚರ್ಮ ತದಪ್ಯನ್ಯೋಽನ್ವಪಾತಯತ್ ॥೧೬॥

ಛಿನ್ನಾಸಿಚರ್ಮಾ ಜಗ್ರಾಹ ಸ ಗದಾಂ ಗದಿನಾಂ ವರಃ ।
ತಾಮಪ್ಯಸ್ಯ ಕ್ಷುರಪ್ರೇಣ ಚಿಚ್ಛೇದ ಕೃತಹಸ್ತವತ್ ॥೧೭॥

ಅನ್ಯೇ ಶರಸಹಸ್ರೇಣ ಶತೇನಾನ್ಯೇ ನರಾಧಿಪಾಃ ।
ವಿವ್ಯಧುಃ ಕೋಷ್ಠಕೀಕೃತ್ಯ ಧರ್ಮಯುದ್ಧಪರಾಙ್ಮುಖಾಃ ॥೧೮॥

---

೧೫. ಕೆಲವರು ಇವನ ರಥದ ಕುದುರೆಗಳನ್ನು ಕೊಂದರು. ಇನ್ನು ಕೆಲವರು ಗದಾಪ್ರಹಾರದಿಂದ ರಥವನ್ನು ಭಂಗಗೊಳಿಸಿದರು. ಮತ್ತೆ ಕೆಲವರು ಅನೇಕ ಬಾಣಗಳಿಂದ ಅವಿಕ್ಷಿತನ ಪೃಷ್ಠಭಾಗದ ಮೇಲೆ ಹೊಡೆದರು.

೧೬. ಆಗ ತನ್ನ ಬಿಲ್ಲು ಕತ್ತರಿಸಿಹೋಗಲು ಕೋಪಾವೇಶದಿಂದ ಕೂಡಿದ ರಾಜಪುತ್ರನಾದ ಅವಿಕ್ಷಿತನು ಖಡ್ಗ-ಚರ್ಮಗಳನ್ನು ಹಿಡಿದುಕೊಂಡನು. ಅಷ್ಟರಲ್ಲಿ ಬೇರೊಬ್ಬನು ಯುದ್ಧಮಾಡಿ ಖಡ್ಗ-ಚರ್ಮಗಳನ್ನು ಕೆಳಕ್ಕೆ ಕೆಡವಿದನು.

೧೭. ತರುವಾಯ ಚರ್ಮ-ಖಡ್ಗಗಳು ಛಿನ್ನವಾಗಿ ಬಿದ್ದುದರಿಂದ ಗದಾಯುದ್ಧದಲ್ಲಿ ನಿಸ್ಸೀಮನಾದ ಆ ಅವಿಕ್ಷಿತನು ಗದೆಯನ್ನು ತೆಗೆದುಕೊಂಡನು. ಆಗ ಒಬ್ಬ ಶತ್ರುರಾಜನು ಸುಶಿಕ್ಷಿತನಂತೆ ಕ್ಷುರಪ್ರವೆಂಬ ಆಯುಧದಿಂದ ಗದೆಯನ್ನು ಛೇದಿಸಿದನು.

೧೮. ಹೀಗೆ ಏಕಾಕಿಯಾದ ರಾಜಪುತ್ರನ ಮೇಲೆ ಕೆಲವರು ಸಹಸ್ರಾರು ಬಾಣಗಳನ್ನೂ ಮತ್ತೆ ಕೆಲವರು ನೂರಾರು ಬಾಣಗಳನ್ನೂ ಪ್ರಯೋಗಿಸುತ್ತ ಎಲ್ಲ ಶತ್ರುರಾಜರು ಧರ್ಮಯುದ್ಧದಿಂದ ಬಾಹ್ಯರಾಗಿ ಅವನನ್ನು ನಡುವೆ ಸಿಕ್ಕಿಸಿಕೊಂಡು ಹೊಡೆದಾಡಿದರು.

ಸ ವಿಹ್ವಲಃ ಪಪಾತೋರ್ವ್ಯಾಮನೇಕೋ ಬಹುಭಿರರ್ದಿತಃ |
ರಾಜಪುತ್ರಾ ಮಹಾಭಾಗಾ ಬಬನ್ಧುಸ್ತೇ ಚ ತಂ ತತಃ ||೧೯||

ತಮಧರ್ಮೇಣ ತೇ ಸರ್ವೇ ಗೃಹೀತ್ವಾ ನೃಪತೇಃ ಸುತಮ್ |
ವಿಶಾಲೇನ ಸಮಂ ರಾಜ್ಞಾ ವೈದಿಶಂ ವಿವಿಶುಃ ಪುರಮ್ ||೨೦||

ಹೃಷ್ಟಾಃ ಪ್ರಮುದಿತಾ ಬದ್ಧಂ ಸಮಾದಾಯ ನೃಪಾತ್ಮಜಮ್ |
ಸ್ವಯಂವರಾ ಚ ಸಾ ಕನ್ಯಾ ನ್ಯಸ್ತಾ ತೇನ ತತಃ ಪುರಃ ||೨೧||

ಪುನಃ ಪುನಶ್ಚ ಪಿತ್ರೋಕ್ತಾ ತಥಾಪಿ ಚ ಪುರೋಧಸಾ |
ಆಲಮ್ಬ್ಯತಾಮಿತಿ ವರೋ ಯಸ್ತೇ ರಾಜಸು ರೋಚತೇ ||೨೨||

---

೧೯. ಹೀಗಿರಲು ಅನೇಕಮಂದಿಯಿಂದ ಆಕ್ರಮಿಸಿ ಪೀಡಿಸಲ್ಪಟ್ಟು ಏಕಾಕಿಯಾದ ಅವಿಕ್ಷಿತನು ಕಳವಳಗೊಂಡು ನೆಲಕ್ಕೆ ಬಿದ್ದನು. ಆಗ ಮಹಾಭಾಗ್ಯಶಾಲಿಗಳಾದ ರಾಜಕುಮಾರರು ಅವನನ್ನು ಬಂಧಿಸಿದರು.

೨೦. ತರುವಾಯ ಎಲ್ಲ ಶತ್ರುರಾಜರು ರಾಜಪುತ್ರನಾದ ಅವಿಕ್ಷಿತನನ್ನು ಅಧರ್ಮದಿಂದ ಬಂಧಿಸಿ ವಶಮಾಡಿಕೊಂಡು ವಿಶಾಲರಾಜನೊಡನೆ ವಿದಿಶಾನಗರವನ್ನು ಪ್ರವೇಶಿಸಿದರು.

೨೧. ಆ ಶತ್ರುರಾಜರು ಅವಿಕ್ಷಿತನನ್ನು ಸೆರೆಹಿಡಿದುದರಿಂದ ಅತಿ ಹರ್ಷಪುಷ್ಟರೂ, ಆನಂದದಲ್ಲಿ ಮುಳುಗಿದವರೂ ಆಗಿ ಬಂಧಿಸಿದ ರಾಜಪುತ್ರನೊಡನೆ ನಗರಕ್ಕೆ ಬಂದರು. ತರುವಾಯ ಶತ್ರುರಾಜರ ಸಮಕ್ಷದಲ್ಲಿ ಸ್ವಯಂವರ ಕನ್ಯೆಯನ್ನು ವಿಶಾಲರಾಜನು ತಂದಿರಿಸಿದನು.

೨೨. ಆಗ ತಂದೆಯಿಂದಲೂ ಮತ್ತು ಪುರೋಹಿತನಿಂದಲೂ ಆ ಸ್ವಯಂವರ ಕನ್ಯೆಯು "ಈ ರಾಜಮಂಡಲದಲ್ಲಿ ಯಾವ ವ್ಯಕ್ತಿಯು ನಿನಗೆ ರುಚಿಸುವನೋ ಅವನನ್ನು ವರಿಸು" ಎಂದು ಮತ್ತೆ ಮತ್ತೆ ಹೇಳಲ್ಪಟ್ಟಳು.

ಯದಾ ಸಾ ಮಾನಿನೀ ಕಂಚಿನ್ನ ಜಗ್ರಾಹ ವರಂ ಮುನೇ ।
ತದಾ ಪಪ್ರಚ್ಛ ದೈವಜ್ಞಂ ವಿವಾಹಾರ್ಥಂ ನರೇಶ್ವರಃ ॥೨೩॥

ವಿಶಿಷ್ಟತರಮೇತಸ್ಯಾ ವಿವಾಹಾಯ ದಿನಂ ವದ ।
ಅದ್ಯೈತದೀದೃಕ್ ಸಂಜಾತಂ ಯುದ್ಧಂ ವಿಘ್ನೋಪಪಾದಕಮ್ ॥೨೪॥

ಮಾರ್ಕಣ್ಡೇಯ ಉವಾಚ :—

ಇತಿ ಪೃಷ್ಟೋ ನರೇನ್ದ್ರೇಣ ಸ ದೈವಜ್ಞೋ ವಿಮೃಶ್ಯ ತತ್ ।
ದುರ್ಮನಾಃ ಪ್ರಾಹ ವಿಜ್ಞಾತಪರಮಾರ್ಥೋ ಮಹೀಪತಿಮ್ ॥೨೫॥

ಭವಿಷ್ಯನ್ತ್ಯಪರಾಣೀಹ ದಿನಾನಿ ಪೃಥಿವೀಪತೇ ।
ಪ್ರಶಸ್ತಲಗ್ನಯುಕ್ತಾನಿ ಶೋಭನಾನ್ಯಚಿರೇಣ ವೈ ॥೨೬॥

---

೨೩. ಕ್ರೌಷ್ಟುಕಿ ಮುನಿಯೇ! ಹೀಗೆ ಪ್ರೇರೇಪಿಸಲ್ಪಟ್ಟರೂ ಮಾನಿನಿಯಾದ ಆ ಸ್ವಯಂವರ ಕನ್ಯೆಯು ಯಾವಾಗ ಬೇರೊಬ್ಬ ಪತಿಯನ್ನು ವರಿಸಲಿಲ್ಲವೊ ಆಗ ಮಹಾರಾಜನಾದ ವಿಶಾಲನರಪತಿಯು ಆಕೆಯ ವಿವಾಹಕ್ಕೆ ದೈವಜ್ಞನನ್ನು ಪ್ರಶ್ನಿಸಿದನು.

೨೪. ಈ ಕನ್ಯೆಯ ವಿವಾಹಕ್ಕೆ ಮಂಗಳಕರವೂ ಪ್ರಶಸ್ತವೂ ಆದ ಒಂದು ದಿನವನ್ನು ಹೇಳು. ಇಂದು ವಿವಾಹಕ್ಕೆ ವಿಘ್ನವನ್ನುಂಟುಮಾಡುವ ಈ ಪ್ರಸಂಗವು ಒದಗಿತು. ಎಂದು ರಾಜನು ದೈವಜ್ಞನನ್ನು ಕುರಿತು ಪ್ರಶ್ನೆಮಾಡಿದನು.

ಮಾರ್ಕಂಡೇಯ ಮುನಿಯು ಹೇಳಿದನು :—

೨೫. ನರೇಂದ್ರನಾದ ವಿಶಾಲನಿಂದ ಈ ರೀತಿಯಾಗಿ ಪ್ರಶ್ನಿಸಲ್ಪಟ್ಟ ದೈವಜ್ಞನು ಆ ಪ್ರಸಂಗವನ್ನು ಸಮಗ್ರವಾಗಿ ವಿಮರ್ಶಮಾಡಿ ತಿಳಿದುಕೊಂಡ ಭವಿಷ್ಯತತ್ತ್ವವುಳ್ಳವನೂ ಬಹಳ ನೊಂದಿರುವ ಮನವುಳ್ಳವನೂ ಆಗಿ ಹೀಗೆ ಹೇಳಿದನು.

೨೬. ಭೂಮಿಯ ಅಧಿಪತಿಯಾದ ರಾಜನೇ! ಪ್ರಶಸ್ತವಾದ ಲಗ್ನದಿಂದ ಕೂಡಿರುವುದೂ, ಶುಭಕರವೂ ಮತ್ತು ವಿವಾಹಕ್ಕೆ ಯೋಗ್ಯವೂ ಆದ ಬೇರೆ ಸುದಿವಸಗಳು ಶೀಘ್ರದಲ್ಲಿಯೇ ಲಭಿಸುವುವು.

ಕರಿಷ್ಯಸಿ ವಿವಾಹಂ ತ್ವಂ ತೇಷು ಪ್ರಾಪ್ತೇಷು ಮಾನದ ।
ಅಲಮೇತೇನ ಯತ್ರಾಯಂ ಮಹಾವಿಘ್ನ ಉಪಸ್ಥಿತಃ ॥೨೭॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇಽವಿಕ್ಷಿಚ್ಚರಿತಂ ನಾಮ ವಿಂಶತ್ಯಧಿಕಶತತಮೋಽಧ್ಯಾಯಃ

---

೨೭. ಸನ್ಮಾನವನ್ನು ಕೊಡುವ ಶೀಲವುಳ್ಳ ರಾಜನೇ ! ಹಾಗೆ ಒದಗಿದ ಶುಭದಿನಗಳಲ್ಲಿ ನೀನು ನಿನ್ನ ಪುತ್ರಿಯ ವಿವಾಹವನ್ನು ಮಾಡುತ್ತೀಯೆ. ಇಂದು ಆ ವಿಚಾರವನ್ನು ಬಿಡು. ಇಂದು ಎಲ್ಲಕ್ಕೂ ಮಹತ್ತಾದ ವಿಘ್ನವು ಪ್ರಾಪ್ತವಾಗಿರುವುದು.

ಮಾರ್ಕಂಡೇಯ ಮಹಾಪುರಾಣದಲ್ಲಿ ನೂರಇಪ್ಪತ್ತನೆಯ ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಏಕವಿಂಶತ್ಯಧಿಕಶತತಮೋಽಧ್ಯಾಯಃ

(ಅವಿಕ್ಷಿತಃ ಕನ್ಯಾತ್ಯಾಗಃ)

ಮಾರ್ಕಣ್ಡೇಯ ಉವಾಚ :—

ತತಃ ಶುಶ್ರಾವ ತಂ ಬದ್ಧಂ ತನಯಂ ಸ ಕರನ್ಧಮಃ ।
ತಸ್ಯ ಪತ್ನೀ ತಥಾ ವೀರಾ ಅನ್ಯೇ ಚಾಪಿ ಮಹೀಭೃತಃ ॥೧॥

ತಮಧರ್ಮೇಣ ತನಯಂ ಬದ್ಧಂ ಶ್ರುತ್ವಾ ಮಹೀಪತಿಃ ।
ಸಮಂ ತೈಃ ಪೃಥಿವೀಪಾಲೈಶ್ಚಿರಂ ದಧ್ಯೌ ಮಹಾಮುನೇ ॥೨॥

ನೂರ ಇಪ್ಪತ್ತೊಂದನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಹೇಳಿದನು :-

೧. ತರುವಾಯ ಆ ಕರಂಧಮರಾಜನು ತನ್ನ ಪುತ್ರನು ಬದ್ಧನಾಗಿರುವುದನ್ನು ಕೇಳಿದನು. ಹಾಗು ಅವನ ಪತ್ನಿಯಾದ ವೀರಾ ಎಂಬುವಳಿಗೂ ಮತ್ತು ಇತರ ರಾಜರಿಗೂ ಈ ವೃತ್ತಾಂತವು ತಿಳಿಯಿತು.

೨. ಮಹಾಮುನಿಯಾದ ಕ್ರೌಷ್ಟುಕಿಯೇ ! ಕರಂಧಮರಾಜನು ಅಧರ್ಮಯುದ್ಧದಲ್ಲಿ ಪ್ರವರ್ತಿಸಿದ ರಾಜರಿಂದ ತನ್ನ ಪುತ್ರನು ಬದ್ಧನಾದುದನ್ನು ಕೇಳಿ ತನ್ನ ಆಪ್ತರಾಜರೊಡನೆ ಈ ವಿಷಯವಾಗಿ ಬಹಳಹೊತ್ತು ಚಿಂತಿಸಿದನು.

ಕೇಚಿದೂಚುರ್ಮಹೀಪಾಲಾ ವಧ್ಯಾಃ ಸರ್ವೇ ಮಹೀಭೃತಃ ।
ಯೈರೇಕಃ ಸಂಯುಗೇ ಬದ್ಧಃ ಸಮಸ್ತೈಸ್ತೈರಧರ್ಮಿಕಃ ॥೩॥

ಯುಜ್ಯತಾಂ ವಾಹಿನೀ ಶೀಘ್ರಮೂಚುರನ್ಯೇ ಕಿಮಾಸ್ಯತೇ ।
ವಿಶಾಲೋ ಬಧ್ಯತಾಂ ದುಷ್ಟಸ್ತತ್ರ ಯೇಽನ್ಯೇ ಸಮಾಗತಾಃ ॥೪॥

ಅನ್ಯೇ ತಥೋಚುರ್ಧರ್ಮೋಽತ್ರ ತ್ಯಕ್ತಃ ಪೂರ್ವಂ ಮಹೀಕ್ಷಿತಾ ।
ಅನ್ಯಾಯೇನ ಬಲಾದ್ಯೇನ ಗೃಹೀತಾ ತಮನಾಞ್ಛತೀ ॥೫॥

ಸ್ವಯಂವರೇಷ್ವಶೇಷೇಷು ತೇನ ರಾಜಸುತಾಸ್ತದಾ ।
ಖಿಲೀಕೃತಾಸ್ತತಃ ಸರ್ವೇ ಸನ್ಮೇತ್ಯ ಸ ವಶೀಕೃತಃ ॥೬॥

---

೩. ಆಗ ಕೆಲವರು ರಾಜರು ಇಂತೆಂದರು. ಏಕಾಕಿಯಾದ ರಾಜಪುತ್ರನ ಮೇಲೆ ಯಾವ ರಾಜರು ಅನೇಕ ಮಂದಿ ಓಟ್ಟುಗೂಡಿ ಮೇಲೆರಗಿ ಯುದ್ಧಮಾಡಿ ಅಧರ್ಮದಿಂದ ಅವನನ್ನು ಸೆರೆಹಿಡಿದಿರುವರೊ ಆ ಎಲ್ಲ ರಾಜರು ವಧಾರ್ಹ-ರಾಗಿರುವರು.

೪. ಮತ್ತೆ ಕೆಲವರು ಹೀಗೆಂದರು. ಬೇಗ ಸೈನ್ಯವು ಶೇಖರಿಸಲ್ಪಡಲಿ. ಈಗ ಸುಮ್ಮನೆ ಇರುವುದುಂಟೆ ? ದುಷ್ಟನಾದ ವಿಶಾಲರಾಜನು ಬಂಧಿಸಲ್ಪಡ-ಬೇಕು. ಹಾಗು ಅಲ್ಲಿಗೆ ಬಂದಿದ್ದ ಇತರ ರಾಜರು ಬಂಧಿಸಲ್ಪಡಬೇಕು.

೫. ಆಗ ಕೆಲವರು ಈ ರೀತಿಯಾಗಿ ಹೇಳಿದರು. ರಾಜಪುತ್ರನಾದ ಅವಿಕ್ಷಿತನಿಂದ ಮೊದಲು ಧರ್ಮವು ಉಲ್ಲಂಘಿಸಲ್ಪಟ್ಟಿತು. ಅನ್ಯಾಯಮಾರ್ಗದಲ್ಲಿ ಪ್ರವರ್ತಿಸಿದ ರಾಜಪುತ್ರನು ತನ್ನನ್ನು ಕಾಮಿಸದಿರುವ ಕನ್ಯೆಯನ್ನು ಬಲಾತ್ಕಾರದಿಂದ ಗ್ರಹಿಸಿದನು.

೬. ಮತ್ತು ಅನೇಕ ಸ್ವಯಂವರ ಮಂಟಪಗಳಲ್ಲಿ ಸೇರಿದ ರಾಜಪುತ್ರರು ಅವಿಕ್ಷಿತನಿಂದ ಅಪಜಯದಿಂದ ತಿರಸ್ಕರಿಸಲ್ಪಟ್ಟಿರುವರು. ಆದರಿಂದ ಸೋತು-ಹೋದ ಎಲ್ಲ ರಾಜಪುತ್ರರು ಸೇರಿ ಅಧರ್ಮದಿಂದ ಇವನನ್ನು ಬಂಧಿಸಿರುವರು.

ತೇಷಾಮೇತದ್ವಚಃ ಶ್ರುತ್ವಾ ವೀರಾ ವೀರಪ್ರಜಾವತೀ ।
ವೀರಗೋತ್ರಸಮುದ್ಭೂತಾ ವೀರಪತ್ನೀ ಪ್ರಹರ್ಷಿತಾ ॥೭॥

ಉವಾಚ ಭರ್ತುಃ ಪ್ರತ್ಯಕ್ಷಮನ್ಯೇಷಾಂ ಚ ಮಹೀಕ್ಷಿತಾಮ್ ।
ಭದ್ರಂ ಕೃತಂ ಭದ್ರಭುಜಾ ಮಮ ಪುತ್ರೇಣ ಪಾರ್ಥಿವಾಃ ॥೮॥

ಗೃಹೀತಾ ಯದ್ಬಲಾತ್ಕನ್ಯಾ ಜಿತ್ವಾ ಸರ್ವಮಹೀಕ್ಷಿತಃ ।
ತದರ್ಥಂ ಯುಧ್ಯಮಾನೋಽಯಂ ಬದ್ಧ ಏಕೋ ನ ಧರ್ಮತಃ ॥೯॥

ತದಪ್ಯಸ್ಮತ್ಸುತಸ್ಯಾಜೌ ಮನ್ಯೇ ನಾಪಚಯಪ್ರದಮ್ ॥೧೦॥

ಏತದೇವ ಹಿ ಪೌರುಷ್ಯಂ ಯದಮರ್ಷವಶಾನ್ನರಃ ।
ನೀತಿಂ ನ ಗಣಯತ್ಯೇವಂ ಜಿಘಾಂಸುರಿವ ಕೇಸರೀ ॥೧೧॥

---

೭. ಸ್ವಯಂ ವೀರಳೂ, ವೀರಾ ಎಂಬ ನಾಮಾಂಕಿತಳೂ, ವೀರ ಪ್ರಜೆಯನ್ನು ಹೊಂದಿದವಳೂ ಮತ್ತು ವೀರ ರಾಜಕುಲದಲ್ಲಿ ಜನಿಸಿದವಳೂ ಆದ ಕರಂಧಮನ ಪತ್ನಿಯು ಈ ಮಾತನ್ನು ಕೇಳಿ ಬಹಳ ಸಂತೋಷಪಟ್ಟಳು.

೮. ಮತ್ತು ತನ್ನ ಪತಿದೇವನ ಮತ್ತು ಅಲ್ಲಿ ನೆರೆದಿರುವ ಇತರ ರಾಜರ ಎದುರಿನಲ್ಲಿ ತಾನು ಹೀಗೆಂದು ಹೇಳಿದಳು. ಎಲೈ, ರಾಜರೇ ! ಕಲ್ಯಾಣ-ಭೋಗಿಯಾದ ನನ್ನ ಪುತ್ರನು ಮಂಗಳಮಾರ್ಗದಲ್ಲಿ ನಡೆದಿರುವನು.

೯. ಸ್ವಯಂವರಕ್ಕೆ ಬಂದಿರುವ ಅನೇಕ ರಾಜರನ್ನು ಗೆದ್ದು ಕನ್ಯೆಯನ್ನು ಬಲಾತ್ಕಾರವಾಗಿ ಅಪಹರಿಸಿದನು. ಮತ್ತು ಅದೇ ನಿಮಿತ್ತದಿಂದ ಅಧರ್ಮದಿಂದ ಯುದ್ಧಮಾಡುತ್ತಲಿದ್ದ ಅನೇಕ ಮಂದಿಯೊಡನೆ ಏಕಾಕಿಯಾಗಿ ಹೋರಾಡಿ ಬದ್ಧನಾಗಿರುವನು.

೧೦. ನನ್ನ ಪುತ್ರನು ಬದ್ಧನಾಗಿದ್ದರೂ ಅನೇಕರಿಂದ ಏಕಾಕಿಗೆ ಒದಗಿರುವ ಈ ಬಂಧನವು ಅವನಿಗೆ ಯುದ್ಧದಲ್ಲಿ ಅಪಕರ್ಷವನ್ನುಂಟು-ಮಾಡುವುದು ಅಲ್ಲವೆಂದು ನಾನು ತಿಳಿದಿರುವೆನು.

೧೧. ಮಾನವನು ಅಸಹನೆ-ಅಧರ್ಮವಶದಿಂದ ಆರ್ಭಟಿಸುತ್ತ ಕೊಲ್ಲಲು ಬಂದ ಸಿಂಹದಂತೆ ನೀತಿಯನ್ನು ಗಣಿಸದೆ ಮುಂದೆ ನುಗ್ಗುವುದೇ ಪೌರುಷವೆಂ-ದೆನಿಸುವುದಲ್ಲವೆ !

ಸ್ವಯಂವರಾಯ ವಿನ್ಯಸ್ತಾ ಮಮ ಪುತ್ರೇಣ ಕನ್ಯಕಾ ।
ಬಹ್ವ್ಯೋ ಗೃಹೀತಾ ಭೂಪಾನಾಂ ಪಶ್ಯತಾಮತಿಮಾನಿನಾಮ್ ॥೧೨॥

ಕ್ವ ಕ್ಷತ್ರಿಯಕುಲೇ ಜನ್ಮ ಕ್ವ ಯಾಚ್ಞಾ ಹೀನಸೇವಿತಾ ।
ಬಲಾದೇವ ಸಮಾದತ್ತೇ ಕ್ಷತ್ರಿಯೋ ಬಲಿನಾಂ ಪುರಃ ॥೧೩॥

ಲೋಹಶೃಙ್ಖಲಬದ್ಧಾ ವಾ ನ ವಶಂ ಯಾನ್ತಿ ಕಾತರಾಃ ।
ಪ್ರಸಹ್ಯಕಾರಿಣೋ ಯಾನ್ತಿ ರಾಜಾನೋ ಧರ್ಮಶಾಲಿನಃ ॥೧೪॥

ತದಲಂ ದೌರ್ಮನಸ್ಯೇನ ಶ್ಲಾಘ್ಯಮೇವಾಸ್ಯ ಬನ್ಧನಮ್ ।
ಯುಷ್ಮಾಕಮಪಿ ಯೇ ಪೂರ್ವೇ ಕೃತ್ವಾರೀಣಾಂ ನಿಪಾತನಮ್ ॥೧೫॥

---

೧೨. ಸ್ವಯಂವರವಿಧಾನದಿಂದ ವರಿಸಲು ಗೊತ್ತುಮಾಡಿರುವ ಅನೇಕ ಕನ್ನಿಕೆಯರನ್ನು ನನ್ನ ಪುತ್ರನು ಅನೇಕ ಮಂದಿ ವೀರರಾಜರು ನೋಡುತ್ತಿರುವ ಹಾಗೆ ಅವರನ್ನು ಅಲಕ್ಷಿಸಿ ಪರಿಗ್ರಹಿಸಿರುವನು.

೧೩. ವೀರ ಕ್ಷತ್ರಿಯವಂಶದಲ್ಲಿ ಗಣ್ಯವಾದ ಜನ್ಮವೆಲ್ಲಿ? ಹೀನಜನರ ಸೇವೆಮಾಡಿ ಒಲಿಸಿಕೊಂಡು ಅವರಲ್ಲಿ ಮಾಡುವ ಪ್ರಾರ್ಥನೆಯೆಲ್ಲಿ? ಕ್ಷತ್ರಿಯನು ಬಲಿಷ್ಠರ ಪ್ರತ್ಯಕ್ಷದಲ್ಲಿ ಬಲಾತ್ಕಾರದಿಂದ ವಶಪಡಿಸಿಕೊಳ್ಳುವುದೇ ಉಚಿತವು.

೧೪. ವೀರ ಕ್ಷತ್ರಿಯರು ಲೋಹದ ಶೃಂಖಲೆಯಿಂದ ಬದ್ಧರಾದರೂ ಭಯಗೊಂಡು ಎಂದಿಗೂ ವಶರಾಗುವವರಲ್ಲ. ರಾಜಧರ್ಮದಿಂದ ಶೋಭಿಸುವ ಕ್ಷತ್ರಿಯರು ಬಲಾತ್ಕಾರದಿಂದ ಮುನ್ನುಗ್ಗಿ ಹೋಗುತ್ತಿರುವರು.

೧೫. ಆದುದರಿಂದ ನೀವೀಗ ಮನಸ್ಸಿನಲ್ಲಿ ಕೊರಗುವುದು ಬೇಡ. ನನ್ನ ಪುತ್ರನಿಗೆ ಉಂಟಾದ ಬಂಧನವು ಶ್ಲಾಘ್ಯವಾಗಿರುವುದು. ನಿಮ್ಮ ವಂಶದ ಪೂರ್ವಿಕರಾದ ರಾಜರು ಹೀಗೆ ಬಲಾತ್ಕಾರದಿಂದ ಮುಂದೆ ನುಗ್ಗಿ ಶತ್ರುಗಳನ್ನು ಸದೆಬಡಿದಿರುವರಲ್ಲವೆ?

ಧೃತ್ಯೈವ ಪೃಥಿವೀಶಾನಾಂ ಪೃಥ್ವೀಪುತ್ರಾದಿಕಂ ವಸು ।
ಭಾರ್ಯಾವೀರ್ಯನಿಮಿತ್ತಾನಿ ತತೋ ಯಾತಾತಿಗೌರವಮ್ ॥೧೬॥

ತತ್ತ್ವರ್ಯತಾಂ ರಣಾಯಾಶು ಸ್ಯನ್ದನಾನ್ಯಧಿರೋಹತ ।
ಸಜ್ಜೀಕುರುತ ನಾಗಾಶ್ವಮಚಿರೇಣ ಸಸಾರಥಿಮ್ ॥೧೭॥

ಮನ್ಯಧ್ವಂ ಕಿಂ ಮಹೀಪಾಲೈರ್ಬಹುಭಿಃ ಸಹ ವಿಗ್ರಹಮ್ ।
ಪ್ರಭೂತಾ ಏವ ತೋಷಾಯ ಶೂರಸ್ಯಾಲ್ಪರಣೇ ಕ್ರಿಯಾಃ ॥೧೮॥

ಕಸ್ಯ ನಾಲ್ಪೇಷು ಸಾಮರ್ಥ್ಯಂ ನರೇನ್ದ್ರಾದಿಷು ಜಾಯತೇ ।
ಯೇಭ್ಯೋ ನ ವಿದ್ಯತೇ ಭೀತಿರ್ವಿಕ್ರಾನ್ತಸ್ಯಾಪಿ ಶತ್ರುಷು ॥೧೯॥

---

೧೬. ಮತ್ತು ನಿಮ್ಮ ಪೂರ್ವಿಕರು ವಿಕ್ರಮದಿಂದ ಶತ್ರುಗಳಾದ ರಾಜಾಧಿರಾಜರ ಭೂಮಿ, ಪುತ್ರ, ಪುತ್ರೀ ಮತ್ತು ಅಖಂಡೈಶ್ವರ್ಯಗಳನ್ನು ಗೆದ್ದು ವೀರ್ಯದಿಂದ ಸಂಪಾದಿಸಿದ ಭಾರ್ಯೆಯರ ಸಂಗದಿಂದ ಅಧಿಕಗೌರವವನ್ನು ಗಳಿಸಿಲ್ಲವೆ ?

೧೭. ಆದ್ದರಿಂದ ಆ ಶತ್ರುವಿನೊಡನೆ ಯುದ್ಧಮಾಡಿ ಜಯಗಳಿಸಲು ತ್ವರೆಪಡಿರಿ. ಅದಕ್ಕಾಗಿ ಬೇಗ ನೀವು ರಥವನ್ನು ಏರಿರಿ. ಮತ್ತು ಬೇಗ ಸಾರಥಿ, ಕುದುರೆ, ಆನೆ ಮುಂತಾದ ಸಕಲ ಯುದ್ಧೋಪಕರಣಗಳನ್ನು ಸಜ್ಜುಗೊಳಿಸಿರಿ.

೧೮. "ಅನೇಕಮಂದಿ ರಾಜರೊಡನೆ ಯುದ್ಧಮಾಡುವುದು ಹೇಗೆ" ಎಂದು ಏಕೆ ಯೋಚಿಸುತ್ತೀರಿ ? ಶೂರಪುರುಷನಿಗೆ ಅನೇಕಮಂದಿ ಅಲ್ಪಬಲದ ಯೋಧರೊಡನೆ ಯುದ್ಧಮಾಡುತ್ತ ತನ್ನ ವಿಕ್ರಮವನ್ನು ತೋರಿಸುವುದು ಸಂತೋಷಕರವಲ್ಲವೆ ?

೧೯. ಶತ್ರುಗಳಲ್ಲಿ ವಿಕ್ರಮದಿಂದ ಹೋರಾಡುತ್ತಿರುವಾಗ ಯಾವ ವೀರನಿಗೆ ಶತ್ರುಗಳಿಂದ ಎಳ್ಳಷ್ಟೂ ಭಯವಿಲ್ಲವೋ ಅಂತಹ ಯಾವ ವೀರನಿಗೆ ತಾನೆ ಅಲ್ಪಶಕ್ತಿಯುಳ್ಳ ನರೇಂದ್ರರ ವಿಷಯದಲ್ಲಿ ಸಾಮರ್ಥ್ಯವು ಕುಗ್ಗಿಹೋಗುವುದು ?

ವ್ಯಾಪ್ಯ ಲೋಕಾನ್ ಸಮುಸ್ತಾನ್ಯೋ ಹ್ಯಭಿಭೂಯ ತತೋ ನರಃ ।
ವ್ಯರೋಚತೇತಿ ಶೂರಃ ಸ ತಮಾಂಸೀವ ದಿವಾಕರಃ ॥೨೦॥

ಮಾರ್ಕಣ್ಡೇಯ ಉವಾಚ :—

ಇತ್ಥಮುದ್ಧರ್ಷಿತೋ ರಾಜಾ ನಯಾ ಪತ್ನ್ಯಾ ಕರನ್ಧಮಃ ।
ಚಕಾರ ಸ ಬಲೋದ್ಯೋಗಂ ಹನ್ತುಂ ಪುತ್ರಾಹಿತಾನ್ಮನೇ ॥೨೧॥

ತತಸ್ತಸ್ಯ ಸಮಂ ಭೂಪೈರ್ವಿಶಾಲೇನ ಚ ಸಙ್ಗರಃ ।
ಬಭೂವ ಬದ್ಧಪುತ್ರಸ್ಯ ತೈರಶೇಷೈರ್ಮಹಾಮುನೇ ॥೨೨॥

ದಿನತ್ರಯಮಭೂದ್ಯುದ್ಧಂ ತೇನ ರಾಜ್ಞಾ ಸಮಂ ತದಾ ।
ಕರನ್ಧಮೇನ ಭೂಪಾನಾಂ ವಿಶಾಲಸ್ಯಾನುಕುರ್ವತಾಮ್ ॥೨೩॥

---

೨೦. ಯಾವ ಶೂರನು ವಿಕ್ರಮದಿಂದ ಸಮಸ್ತಲೋಕಗಳನ್ನು ವ್ಯಾಪಿಸಿ ಸೂರ್ಯನು ಕತ್ತಲೆಯನ್ನು ನಾಶಪಡಿಸುವಂತೆ ಶತ್ರುಗಳನ್ನು ನಾಶಪಡಿಸುವನೋ ಅವನು ಶೂರನೆಂದು ಎಲ್ಲೆಡೆಗಳಲ್ಲಿಯೂ ಖ್ಯಾತಿಗೊಳ್ಳುವನು.

ಮಾರ್ಕಂಡೇಯ ಮುನಿಯು ಹೇಳಿದನು :—

೨೧. ಕ್ರೌಷ್ಟುಕಿಮುನಿಯೇ ! ಕರಂಧಮರಾಜನು ತನ್ನ ಪತ್ನಿಯಿಂದ ಈ ರೀತಿಯಾಗಿ ಎಚ್ಚರಿಸಿ ಹರ್ಷಗೊಳಿಸಲ್ಪಟ್ಟನು. ತರುವಾಯ ಪುತ್ರನ ಶತ್ರುಗಳನ್ನು ಸಂಹಾರಮಾಡಲು ತನ್ನ ಸೈನ್ಯಸನ್ನಾಹವನ್ನು ಬಲಗೊಳಿಸಿದನು.

೨೨. ಕ್ರೌಷ್ಟುಕಿಮಹಾಮುನಿಯೇ ! ತರುವಾಯ ಬದ್ಧನಾದ ಪುತ್ರನುಳ್ಳ ಕರಂಧಮರಾಜನಿಗೆ ಆ ಎಲ್ಲ ಶತ್ರುರಾಜರು ಮತ್ತು ವಿಶಾಲರಾಜನೊಡನೆ ಭಯಂಕರವಾದ ಕದನವು ಜರುಗಿತು.

೨೩. ವಿಶಾಲರಾಜನನ್ನು ಹಿಂಬಾಲಿಸಿ ಹೋರಾಡುತ್ತಿದ್ದ ಇತರ ರಾಜರಿಗೂ ಮತ್ತು ಕರಂಧಮರಾಜನಿಗೂ ಮೂರು ದಿನಗಳು ಸ್ಫೂರ್ತಿಯಾಗಿ ಸಂತತವಾಗಿ ಯುದ್ಧವು ನಡೆಯಿತು.

ಯದಾ ಪರಾಜಿತಪ್ರಾಯಂ ತತ್ಸರ್ವಂ ಭೂಪಮಣ್ಡಲಮ್ ।
ತದಾ ವಿಶಾಲೋಽರ್ಘ್ಯಕರಃ ಕರನ್ಧಮಮುಪಸ್ಥಿತಃ ॥೨೪॥

ಕರನ್ಧಮೋಽಪಿ ಸಮ್ಪ್ರೀತ್ಯಾ ತೇನ ರಾಜ್ಞಾಭಿಪೂಜಿತಃ ।
ವಿಮುಕ್ತೇ ತನಯೇ ತತ್ರ ನಿಶಾಂ ತಾಂ ಸುಖಮಾವಸತ್ ॥೨೫॥

ತಾಂ ಚ ಕನ್ಯಾಮುಪಾದಾಯ ವಿಶಾಲಂ ಸಮುಪಸ್ಥಿತಮ್ ।
ಅವಿಕ್ಷಿತ್ಪ್ರಾಹ ವಿಪ್ರರ್ಷೇ ವಿವಾಹಾರ್ಥಂ ಪಿತುಃ ಪುರಃ ॥೨೬॥

ನಾಹಮೇತಾಂ ಗ್ರಹೀಷ್ಯಾಮಿ ನ ಚಾನ್ಯಾಂ ಯೋಷಿತಂ ನೃಪ ।
ಪರೈರ್ಯಸ್ಯಾ ನಿರೀಕ್ಷನ್ತ್ಯಾಃ ಸಙ್ಗ್ರಾಮೇಽಹಂ ಪರಾಜಿತಃ ॥೨೭॥

---

೨೪. ಆ ಯುದ್ಧದಲ್ಲಿ ಯಾವಾಗ ಸಮಸ್ತರಾಜರ ಮಂಡಲವು ಪರಾಜಯ ಹೊಂದಿದಂತೆ ಆಯಿತೋ ಆಗ ವಿಶಾಲರಾಜನು ಪೂಜಾಉಪಕರಣಗಳನ್ನು ತೆಗೆದುಕೊಂಡು ಕರಂಧಮರಾಜನ ಬಳಿಗೆ ಬಂದನು.

೨೫. ಮತ್ತು ಹಾಗೆ ಬಂದ ವಿಶಾಲರಾಜನಿಂದ ಪ್ರೀತಿಯಿಂದ ಗೌರವಿಸಲ್ಪಟ್ಟ ಕರಂಧಮರಾಜನು ತನ್ನ ಪುತ್ರನು ಬಂಧನದಿಂದ ವಿಮುಕ್ತನಾದುದರಿಂದ ಆ ರಾತ್ರಿಯನ್ನು ಸುಖವಾಗಿ ಕಳೆದನು.

೨೬. ಬ್ರಹ್ಮರ್ಷಿಯಾದ ಕ್ರೌಷ್ಟುಕಿಯೇ! ತನ್ನ ಕನ್ಯೆಯನ್ನು ವಿವಾಹವಿಧಿಯಿಂದ ತನಗೆ ಒಪ್ಪಿಸುವುದಕ್ಕೋಸ್ಕರ ಆಕೆಯನ್ನು ಕರೆದುಕೊಂಡು ಬಂದ ವಿಶಾಲರಾಜನನ್ನು ನೋಡಿ ಅವಿಕ್ಷಿತಕುಮಾರನು ತನ್ನ ಜನಕನ ಎದುರಿನಲ್ಲಿ ಹೀಗೆ ಹೇಳಿದನು.

೨೭. ಮಹಾರಾಜನೇ! ನಾನು ಈ ಕನ್ಯೆಯನ್ನು ಪರಿಗ್ರಹಿಸುವುದಿಲ್ಲ. ಹಾಗು ಬೇರೆ ಯಾವ ನಾರಿಯನ್ನು ನಾನು ಸ್ವೀಕರಿಸುವುದಿಲ್ಲ. ಈ ಕನ್ಯೆಯು ನೋಡುತ್ತಿದ್ದ ಹಾಗೆ ನಾನು ಶತ್ರುಗಳಿಂದ ಸಂಗ್ರಾಮದಲ್ಲಿ ಅಪಜಯವನ್ನು ಹೊಂದಿರುವೆನು.

ಅನ್ಯಸ್ಮೈ ಸಂಪ್ರಯಚ್ಛೇಮಾಮಿಯಂ ಚಾನ್ಯಂ ವೃಣೋತು ತಮ್ ।
ಅಖಣ್ಡಿತಯಶೋವೀರ್ಯೋ ಯಃ ಪರೈರ್ನಾವಮಾನಿತಃ ॥೨೮॥

ಪರೈಃ ಪರಾಜಿತೋಽಹಂ ಯತ್ಕಾತರೇಯಂ ಯಥಾಬಲಾ ।
ಕಿಮತ್ರ ಮಾನುಷತ್ವಂ ಮೇ ನೈತಸ್ಯಾ ಮಮ ಚಾನ್ತರಮ್ ॥೨೯॥

ಸ್ವತನ್ತ್ರತಾ ಮನುಷ್ಯಾಣಾಂ ಪರತನ್ತ್ರಾ ಸದಾಬಲಾ ।
ನರೋಽಪಿ ಪರತನ್ತ್ರೋ ಯಸ್ತಸ್ಯ ಕೀದೃಙ್ಮನುಷ್ಯತಾ ॥೩೦॥

ಸೋಽಹಮಸ್ಯಾ ಮುಖಂ ಭೂಯೋ ದೃಷ್ಟಂ ದರ್ಶಯಿತಾ ಕಥಮ್ ।
ಯೋಽಹಮಸ್ಯಾಃ ಪುರೋ ಭೂಮೌ ಪರೈರ್ಭೂಪೈಃ ಖಿಲೀಕೃತಃ ॥೩೧॥

---

೨೮. ಯಾವ ಕುಮಾರನು ಶತ್ರುಗಳಿಂದ ಅವಮಾನಗೊಳಿಸಲ್ಪಡದೆ ಅಖಂಡಿತವಾದ ಯಶಸ್ಸು ವೀರ್ಯಗಳಿಂದ ಸಂಪನ್ನನಾಗಿರುವನೊ ಅಂತಹವನೊಬ್ಬನಿಗೆ ನೀನು ಈಕೆಯನ್ನು ದಾನಮಾಡು. ಇವಳು ಅಂತಹವನನ್ನು ವರಿಸಲಿ.

೨೯. ಈ ಅಬಲೆಯು ಭಯಗೊಂಡಿರುವಂತೆ ನಾನು ದುರ್ಬಲನಾಗಿ ಪರರಿಂದ ಅಪಜಯವನ್ನು ಹೊಂದಿ ಬದ್ಧನಾದೆನು. ಹೀಗಿರಲು ನನ್ನಲ್ಲಿ ಮನುಷ್ಯತ್ವವು ಉಳಿದಿದೆಯೆ ? ಈ ಅಬಲೆಗೂ ನನಗೂ ಅಂತರವಿದೆಯೇ ?

೩೦. ಪುರುಷರಲ್ಲಿ ಯಾವಾಗಲೂ ಸ್ವತಂತ್ರತೆಯು ಇರಬೇಕಾದುದು. ಅಬಲೆಯು ಯಾವಾಗಲೂ ಪರತಂತ್ರಳಾಗಿರುವಳು. ಪುರುಷನಾಗಿ ಜನಿಸಿ ಅವನು ಪರತಂತ್ರನಾದರೆ ಅವನಲ್ಲಿ ಮನುಷ್ಯತ್ವವು ತಾನೆ ಹೇಗೆ ಉಳಿಯುವುದು ?

೩೧. ನಾನು ಇವಳ ಪ್ರತ್ಯಕ್ಷದಲ್ಲಿ ನೆಲಕ್ಕೆ ಉರುಳಿಸಿ ಶತ್ರುರಾಜರಿಂದ ನಾನಾಬಗೆಯಲ್ಲಿ ತಿರಸ್ಕರಿಸಲ್ಪಟ್ಟಿರುವೆನು. ಆ ಅವಸ್ಥೆಯಲ್ಲಿ ಈಕೆಯು ನೋಡಿರುವ ನನ್ನ ಮುಖವನ್ನು ಮತ್ತೆ ನಾನು ಇವಳಿಗೆ ಪತಿಯಾಗಿ ಹೇಗೆ ತೋರಿಸಲಿ ?

ಇತ್ಯುಕ್ತೇ ತೇನ ತನಯಾಮುವಾಚ ಜಗತೀಪತಿಃ ।
ಶ್ರುತಂ ತೇ ವಚನಂ ವತ್ಸೇ ವದತೋಽಸ್ಯ ಮಹಾತ್ಮನಃ ॥೩೨॥

ವರಯಾನ್ಯಂ ಪತಿಂ ಯತ್ರ ಮನಸ್ತೇ ರಮತೇ ಶುಭೇ ।
ವಯಂ ವಾ ಸಂಪ್ರಯಚ್ಛಾಮೋ ಯಸ್ಮಿಂಸ್ತಸ್ಮಿಂಸ್ತವಾದೃತಿಃ ॥೩೩॥

ಏತಯೋರ್ಹ್ಯೇಕಮಾತಿಷ್ಠ ಮಾರ್ಗಯೋ ರುಚಿರಾನನೇ ॥೩೪॥

ಕನ್ಯೋವಾಚ :—

ಪರಾಜಿತೋಽಯಂ ಬಹುಭಿರ್ನ ಸಮ್ಯಕ್ ಸಮ್ಯಗಾಚರನ್ ।
ಸಙ್ಗ್ರಾಮೇ ತದ್ಯಶೋವೀರ್ಯಹಾನಿಕಾರಿ ನ ಪಾರ್ಥಿವ ॥೩೫॥

---

೩೨. ಅವಿಕ್ಷಿತಕುಮಾರನು ಈರೀತಿಯಾಗಿ ಹೇಳುತ್ತಿರಲು ರಾಜನಾದ ವಿಶಾಲಭೂಪಾಲಕನು ಮಗಳಿಗೆ ಹೇಗೆಂದನು. ಪುತ್ರಿಯೆ! ಮಹಾತ್ಮನಾದ ಇವನು ಆಡಿರುವ ವಚನವನ್ನು ನೀನು ಕೇಳಿದೆಯೊ ?

೩೩. ಎಲೈ, ಮಂಗಳಾಂಗಿಯೇ! ನಿನಗೆ ಯಾರಲ್ಲಿ ಮನಸ್ಸು ರಮಿಸು- ವುದೊ ಅಂತಹ ನಿನ್ನ ಮನಸ್ಸೊಪ್ಪುವ ಒಬ್ಬ ವರನನ್ನು ವರಿಸು. ಅಥವಾ ನಿನಗೆ ಪ್ರೀತ್ಯಾದರಗಳು ಹುಟ್ಟುವಂತಹ ಒಬ್ಬ ವರನಿಗೆ ನಾವೇ ನಿನ್ನನ್ನು ಕೊಡುವೆವು.

೩೪. ಸುಂದರವಾದ ಮುಖವುಳ್ಳ ಪುತ್ರಿಯೇ! ನೀನು ಸ್ವತಂತ್ರಳಾಗಿ ವರಿಸುವುದಾಗಲಿ, ನಾವು ಗೊತ್ತುಮಾಡಿದ ವರನನ್ನು ಒಪ್ಪಿಕೊಳ್ಳುವುದಾಗಲಿ ಎರಡು ಮಾರ್ಗಗಳಲ್ಲಿ ಒಂದನ್ನು ಅವಲಂಬಿಸು.

ಕನ್ಯೆಯು ಇಂತೆಂದಳು :—

೩೫. ಮಹಾರಾಜನಾದ ತಂದೆಯೇ! ಧರ್ಮದಿಂದ ಯುದ್ಧಮಾಡು- ತ್ತಿದ್ದ ಏಕಾಕಿಯಾದ ಈ ವೀರನು ಅಧರ್ಮದಿಂದ ಅನೇಕರಿಂದ ಪರಾಜಯ- ಗೊಳಿಸಲ್ಪಟ್ಟನು. ಇದು ಉಚಿತವಲ್ಲ. ಆ ಅಪಜಯವು ಯುದ್ಧದಲ್ಲಿ ಇವನ ಕೀರ್ತಿ-ವೀರ್ಯಗಳಿಗೆ ಕಲಂಕಕಾರಿಯಾದುದಲ್ಲ.

ಏಕೋ ಬಹೂನಾಂ ಯುದ್ಧಾಯ ಗಜಾನಾಮಿವ ಕೇಸರೀ ।
ಯತ್ಸಂಸ್ಥಿತಃ ಪರಂ ಶೌರ್ಯಂ ತೇನಾಸ್ಯ ಪ್ರಕಟೀಕೃತಮ್ ॥೩೬॥

ನ ಕೇವಲಮಯಂ ತಸ್ಥೌ ಯುದ್ಧೇ ತೇಽಪ್ಯಖಿಲಾ ಜಿತಾಃ ।
ಬಹುಶೋಽನೇನ ಯತ್ನೇನ ವಿಕ್ರಮೋಽಪಿ ಪ್ರಕಾಶಿತಃ ॥೩೭॥

ಶೌರ್ಯವಿಕ್ರಮಸಂಯುಕ್ತಮಿಮಂ ಸರ್ವಮಹೀಕ್ಷಿತಮ್ ।
ಧರ್ಮಯುದ್ಧಮಧರ್ಮೇಣ ಜಿತವನ್ತೋಽತ್ರ ಕಾ ತ್ರಪಾ ॥೩೮॥

ನ ಚಾಪಿ ರೂಪಮಾತ್ರೇಽಹಂ ಲೋಭಮಸ್ಯ ಗತಾ ಪಿತಃ ।
ಶೌರ್ಯವಿಕ್ರಮಧೈರ್ಯಾಣಿ ಹರನ್ತ್ಯಸ್ಯ ಮನೋ ಮಮ ॥೩೯॥

ತತ್ಕಿಮುಕ್ತೇನ ಬಹುನಾ ಯಾಚ್ಯತಾಂ ಮತ್ಕೃತೇ ನೃಪಃ ।
ತ್ವಯಾ ಮಹಾನುಭಾವೋಽಯಂ ನಾನ್ಯೋ ಮೇ ಭವಿತಾ ಪತಿಃ ॥೪೦॥

---

೩೬. ಸಿಂಹವು ಆನೆಗಳ ಹಿಂಡಿನಮುಂದೆ ನಿಂತಂತೆ ಏಕಾಕಿಯಾದ ಈ ಶೂರನು ಯಾವ ಕಾರಣ ಅನೇಕ ಶತ್ರುಗಳ ಎದುರಿನಲ್ಲಿ ಯುದ್ಧಕ್ಕೆ ನಿಂತುಕೊಂಡನೋ ಅದರಿಂದ ಇವನು ತನ್ನ ಶೌರ್ಯವನ್ನು ಪ್ರಕಾಶಗೊಳಿಸಿದಂತೆ ಆಯಿತು.

೩೭. ಇವನು ಯುದ್ಧಕ್ಕೆ ನಿಂತನೆಂಬುದು ಮಾತ್ರವಲ್ಲ. ಯುದ್ಧದಲ್ಲಿ ಆ ಶತ್ರುಗಳೆಲ್ಲರೂ ಪರಾಜಯವನ್ನೂ ಹೊಂದಿದರು. ಇವನು ಅನೇಕವಿಧವಾಗಿ ಪ್ರಯತ್ನಿಸಿ ತನ್ನ ಅಪಾರ ವಿಕ್ರಮವನ್ನು ಪ್ರಕಾಶಗೊಳಿಸಿದನು.

೩೮. ಸಹಜವಾದ ಶೌರ್ಯ-ವಿಕ್ರಮಗಳಿಂದ ಕೂಡಿ ಧರ್ಮದಿಂದ ಯುದ್ಧಮಾಡುತ್ತಿದ್ದ ಈ ರಾಜಪುತ್ರನನ್ನು ಎಲ್ಲ ರಾಜರು ಸೇರಿ ಅಧರ್ಮದಿಂದ ಸೋಲಿಸಿದರು. ಈ ವಿಷಯದಲ್ಲಿ ನಾಚಿಕೆಯೇನು ?

೩೯. ಜನಕನೇ ! ಈ ಕುಮಾರನ ರೂಪಮಾತ್ರವನ್ನು ನೋಡಿ ನಾನು ಲೋಭವನ್ನು ಹೊಂದಿಲ್ಲ. ಇವನ ಶೌರ್ಯ-ವಿಕ್ರಮ ಮತ್ತು ಧೈರ್ಯಗಳು ಹೆಚ್ಚಾಗಿ ನನ್ನ ಮನಸ್ಸನ್ನು ಅಪಹರಿಸುತ್ತಿವೆ.

೪೦. ಆದುದರಿಂದ ಇನ್ನು ಹೆಚ್ಚು ಮಾತನಾಡುವುದೇಕೆ? ನಿನ್ನಿಂದ ಮಹಾನುಭಾವ ರಾಜನು ನನಗೋಸ್ಕರ ಪ್ರಾರ್ಥಿಸಲ್ಪಡಲಿ. ನಾನು ಇವನನ್ನು ಬಿಟ್ಟು ಬೇರೆ ಪತಿಯನ್ನು ವರಿಸುವುದಿಲ್ಲ.

ವಿಶಾಲ ಉವಾಚ :—

ರಾಜಪುತ್ರ ಸುತಾ ಪ್ರಾಹ ಮನ್ಯೈತಚ್ಛೋಭನಂ ವಚಃ ।
ಏವಂ ಚೈವ ತ್ವಯಾ ತುಲ್ಯಃ ಕುಮಾರೋ ನ ಮಹೀತಲೇ ||೪೧||

ಅವಿಸಂವಾದಿ ತೇ ಶೌರ್ಯಮತೀವ ಚ ಪರಾಕ್ರಮಃ ।
ಪಾವಯಾಸ್ಮತ್ಕುಲಂ ವೀರ ದುಹಿತುರ್ಮೇ ಪರಿಗ್ರಹಾತ್ ||೪೨||

ರಾಜಪುತ್ರ ಉವಾಚ :—

ನಾಹಮೇತಾಂ ಗ್ರಹೀಷ್ಯಾಮಿ ನ ಚಾನ್ಯಾಂ ಯೋಷಿತಂ ನೃಪ ।
ಆತ್ಮನ್ಯೇವ ಹಿ ಮೇ ಬುದ್ಧಿಃ ಸ್ತ್ರೀಮಯೀ ಮನುಜೇಶ್ವರ ||೪೩||

ವಿಶಾಲರಾಜನು ಇಂತೆಂದನು :--

೪೧. ರಾಜಪುತ್ರನೇ! ನನ್ನ ಪುತ್ರಿಯು ಹೀಗೆಂದಳು. ಆ ವಚನವು ನನಗೆ ಸಾಧುವಾಗಿ ತೋರುವುದು. ಅವಳು ಹೇಳುವಂತೆ ನಿನಗೆ ಸಮಾನನಾದ ಬೇರೊಬ್ಬ ಕುಮಾರನು ಭೂಮಂಡಲದಲ್ಲಿ ಎಲ್ಲಿಯೂ ಇಲ್ಲ.

೪೨. ನಿನ್ನ ಶೌರ್ಯಗುಣವು ಎಲ್ಲರನ್ನೂ ಮೆಚ್ಚಿಸುವುದಾಗಿದೆ. ನಿನ್ನ ಪರಾಕ್ರಮವು ಅತ್ಯಧಿಕವಾಗಿರುವುದು. ಎಲೈ ವೀರನೇ! ನನ್ನ ಕನ್ಯೆಯನ್ನು ಪರಿಗ್ರಹಿಸಿ ನನ್ನ ವಂಶವನ್ನು ಪಾವನವನ್ನಾಗಿಮಾಡು.

ರಾಜಪುತ್ರನು ಇಂತೆಂದನು :—

೪೩. ಮಹಾರಾಜನೇ! ನಾನು ಈ ಕನ್ಯೆಯನ್ನು ಪರಿಗ್ರಹಿಸುವುದಿಲ್ಲ, ಅಥವಾ ಮತ್ತಾವಕನ್ಯೆಯನ್ನೂ ನಾನು ವಿವಾಹಮಾಡಿಕೊಳ್ಳುವುದಿಲ್ಲ. ವಿಶಾಲ ಭೂಪತಿಯೆ! ನನಗೆ ನನ್ನಲ್ಲಿ ನಾರಿಯಂತೆ ಅಚಲತೆಯಬುದ್ಧಿಯುಂಟಾಗಿರುವುದು.

ಮಾರ್ಕಣ್ಡೇಯ ಉವಾಚ :—

ತತಃ ಕರನ್ಧಮಃ ಪ್ರಾಹ ಪುತ್ರೇಯಂ ಗೃಹ್ಯತಾಂ ತ್ವಯಾ ।
ವಿಶಾಲತನಯಾ ಸುಭ್ರೂ ಸ್ತ್ವಯಿ ಹಾರ್ದವತೀ ದೃಢಮ್ ॥೪೪॥

ರಾಜಪುತ್ರ ಉವಾಚ :—

ನಾಜ್ಞಾಭಙ್ಗಃ ಕದಾಚಿತ್ತೇ ಕೃತಃ ಪೂರ್ವಂ ಮಯಾ ಪ್ರಭೋ ।
ತಥಾಜ್ಞಾಪಯ ಮಾಂ ತಾತ ಯಥಾಜ್ಞಾಂ ಕರವಾಣಿ ತೇ ॥೪೫॥

ಮಾರ್ಕಣ್ಡೇಯ ಉವಾಚ :—

ಅತ್ಯನ್ತನಿಶ್ಚಿತಮತೌ ತಸ್ಮಿನ್ ರಾಜಸುತೇ ಸುತಾಮ್ ।
ತಾಮುವಾಚ ವಿಶಾಲೋಽಪಿ ವ್ಯಾಕುಲೀಕೃತಮಾನಸಃ ॥೪೬॥

ಮಾರ್ಕಂಡೇಯ ಮುನಿಯು ಹೇಳಿದನು :—

೪೪. ತರುವಾಯ ತಂದೆಯಾದ ಕರಂಧಮನು ಅವಿಕ್ಷಿತ ಕುಮಾರನಿಗೆ ಹೇಳಿದನು. ಪುತ್ರನೇ! ನೀನು ಈ ಕನ್ಯೆಯನ್ನು ಪರಿಗ್ರಹಿಸು. ವಿಶಾಲರಾಜನ ಪುತ್ರಿಯೂ ಸುಂದರಿಯೂ ಆದ ಈಕೆಯು ನಿನ್ನಲ್ಲಿ ದೃಢವಾದ ಪ್ರೀತಿಯನ್ನು ಹೊಂದಿರುವಳು.

ರಾಜಪುತ್ರನು ಹೀಗೆ ಹೇಳಿದನು :—

೪೫. ಪ್ರಭುವಾದ ಜನಕನೇ! ನನ್ನಿಂದ ನಿನ್ನ ಆಜ್ಞೆಯ ಭಂಗವು ಹಿಂದೆ ಎಂದೂ ಮಾಡಲ್ಪಡಲಿಲ್ಲ. ತಂದೆಯೆ! ನಾನು ಹೇಗೆ ನಿನ್ನ ಆಜ್ಞೆಯನ್ನು ತಪ್ಪದೇ ನೆರವೇರಿಸಬಲ್ಲೆನೊ ಹಾಗೆ ಆಜ್ಞೆಯನ್ನು ಕೊಡು.

ಮಾರ್ಕಂಡೇಯ ಮುನಿಯು ಹೇಳಿದನು :—

೪೬. ಹೀಗೆ ರಾಜಕುಮಾರನಾದ ಅವಿಕ್ಷಿತನು ರಾಜಪುತ್ರಿಯ ವಿವಾಹದಲ್ಲಿ ದೃಢವಾದ ಅಸಮ್ಮತಿಯುಳ್ಳವನಾಗಿರಲು ವಿಶಾಲ ಭೂಪಾಲಕನು ವ್ಯಾಕುಲವಾದ ಮಾನಸವುಳ್ಳವನಾಗಿ ತನ್ನ ಪುತ್ರಿಗೆ ಹೇಳಿದನು.

ನಿವರ್ತ್ಯತಾಂ ಮನಃ ಪುತ್ರಿ ಏತಸ್ಮಾಚ್ಚ ಪ್ರಯೋಜನಾತ್ ।
ಅನ್ಯಂ ವರಯ ಭರ್ತಾರಂ ಸನ್ತ್ಯನೇಕೇ ನೃಪಾತ್ಮಜಾಃ ॥೪೭॥

ಕನ್ಯೋವಾಚ :—

ವರಂ ವೃಣೋಮ್ಯಹಂ ತಾತ ಮಾಮೇಷ ಯದಿ ನೇಚ್ಛತಿ ।
ತಪಸಾನ್ಯೋ ನ ಮೇ ಭರ್ತಾ ಜನ್ಮನ್ಯಸ್ಮಿನ್ಭವಿಷ್ಯತಿ ॥೪೮॥

ಮಾರ್ಕಣ್ಡೇಯ ಉವಾಚ :—

ತತಃ ಕರನ್ಧಮೋ ರಾಜಾ ವಿಶಾಲೇನ ಸಮಂ ಮುದಾ ।
ಸ್ಥಿತ್ವಾ ದಿನತ್ರಯಂ ತತ್ರ ನಿಜಮಭ್ಯಾಯಯೌ ಪುರಮ್ ॥೪೯॥

ಅವಿಕ್ಷಿತೋಽಪಿ ತೇನೈವ ಪಿತ್ರಾನ್ಯೈಶ್ಚ ನರಾಧಿಪೈಃ ।
ನಿದರ್ಶನೈಃ ಪುರಾವೃತ್ತೈಃ ಸಾನ್ತ್ವಿತೋಽಭ್ಯಾಗಮತ್ಪುರಮ್ ॥೫೦॥

---

೪೭. ಪುತ್ರಿಯೇ ! ಈ ರಾಜಪುತ್ರನು ಪಾಣಿಗ್ರಹಣದಲ್ಲಿ ವಿರಕ್ತನಾದುದರಿಂದ ನೀನು ಇವನಲ್ಲಿಟ್ಟಿರುವ ಮನಸ್ಸಿನ ಪ್ರೀತಿಯನ್ನು ಬದಲಾಯಿಸು. ಇನ್ನೂ ಅನೇಕ ರಾಜಪುತ್ರರು ಇರುವರು. ಅವರಲ್ಲಿ ಯಾರಾದರೊಬ್ಬನನ್ನು ವರಿಸು.

ಕನ್ಯೆಯು ಹೇಳಿದಳು :—

೪೮. ಜನಕನೇ ! ಈ ರಾಜಪುತ್ರನು ನನ್ನನ್ನು ಮದುವೆಯಾಗಲು ಇಷ್ಟವಿಲ್ಲದವನಾದರೆ ನಾನು ತಪೋಬಲದಿಂದ ವರನನ್ನು ವರಿಸುವೆನು. ನನಗೆ ಈ ಜನ್ಮದಲ್ಲಿ ಇವನನ್ನು ಬಿಟ್ಟು ಬೇರೊಬ್ಬನು ಪತಿಯಾಗುವುದಿಲ್ಲ.

ಮಾರ್ಕಂಡೇಯ ಮುನಿಯು ಹೇಳಿದನು :—

೪೯. ತರುವಾಯ ಕರಂಧಮ ರಾಜನು ವಿಶಾಲ ಭೂಪಾಲಕನೊಡನೆ ಸಂತೋಷದಿಂದ ಮೂರು ದಿನಗಳವರೆಗೆ ಅಲ್ಲಿದ್ದು ಅನಂತರ ತನ್ನ ನಗರಕ್ಕೆ ಹಿಂದಿರುಗಿ ಬಂದನು.

೫೦. ಹಾಗು ಅವಿಕ್ಷಿತ ಕುಮಾರನು ತಂದೆ ಮತ್ತು ಇತರ ರಾಜರಿಂದ ಹಿಂದೆ ನಡೆದ ಅನೇಕ ಜಯಾಪಜಯ ಕಥೆಗಳ ನಿದರ್ಶನದಿಂದ ಸಮಾಧಾನಗೊಳಿಸಲ್ಪಟ್ಟು ನಗರಕ್ಕೆ ಸೇರಿದನು.

ಸಾಪಿ ಕನ್ಯಾ ವನಂ ಗತ್ವಾ ನಿಸ್ಸೃಷ್ಟಾ ನಿಜಬಾನ್ಧವೈಃ ।
ತಪಸ್ತೇಪೇ ನಿರಾಹಾರಾ ವೈರಾಗ್ಯಂ ಪರಮಾಸ್ಥಿತಾ ॥೫೧॥

ನಿರಾಹಾರಾ ಯದಾ ಸಾ ತು ಮಾಸತ್ರಯಮುಪಸ್ಥಿತಾ ।
ಸಮ್ಪ್ರಾಪ ಪರಮಾಮಾರ್ತಿಂ ಕೃಶಾ ಧಮನಿಸನ್ತತಾ ॥೫೨॥

ಮನ್ದೋತ್ಸಾಹಾತಿತನ್ವಙ್ಗೀ ಮುಮೂರ್ಷುರಪಿ ಬಾಲಿಕಾ ।
ದೇಹತ್ಯಾಗಾಯ ಸಾ ಚಕ್ರೇ ತದಾ ಬುದ್ಧಿಂ ನೃಪಾತ್ಮಜಾ ॥೫೩॥

ಆತ್ಮತ್ಯಾಗಾಯ ತಾಂ ಜ್ಞಾತ್ವಾ ಕೃತಬುದ್ಧಿಂ ಸುರಾಸ್ತತಃ ।
ಸಮೇತ್ಯ ಪ್ರೇಷಯಾಮಾಸುರ್ದೇವದೂತಂ ತದನ್ತಿಕಮ್ ॥೫೪॥

---

೫೧. ಆ ಕನ್ಯೆಯು ಎಲ್ಲ ತನ್ನ ಬಂಧುಜನರಿಂದ ಬಿಡಲ್ಪಟ್ಟವಳಾಗಿ ಕಾಡಿಗೆ ಹೋದಳು. ಮತ್ತು ಅಲ್ಲಿ ಅತಿಶಯವಾದ ವೈರಾಗ್ಯವನ್ನು ಹೊಂದಿದವಳೂ ನಿರಾಹಾರಳೂ ಆಗಿ ಕಠಿನವಾದ ತಪವನ್ನು ಆಚರಿಸಿದಳು.

೫೨. ತಪಮಾಡುತ್ತಿದ್ದ ಆ ಕನ್ಯೆಯು ಹಾಗೆಯೇ ಯಾವಾಗ ಮೂರು ಮಾಸಗಳವರೆಗೆ ನಿರಾಹಾರಳಾಗಿ ಇದ್ದಳೋ ಆಗ ಬಹಳ ಕೃಶಳೂ, ಮೈತುಂಬ ಎದ್ದು ಕಾಣುವ ನಾಡಿಗಳುಳ್ಳವಳೂ ಆದಳು.

೫೩. ಮತ್ತು ಬಾಲಿಕೆಯಾದ ಆ ರಾಜಕನ್ಯೆಯು ಕಠಿನವಾದ ತಪಶ್ಚರ್ಯೆಯಿಂದ ಕೃಶಾಂಗಿಯೂ, ಮರಣಾವಸ್ಥೆಗೆ ಸಮೀಪಿಸಿದವಳೂ ಅವಳೂ ಇಷ್ಟಸಿದ್ಧಿಯಿಲ್ಲ ಮಂದೋತ್ಸಾಹಳಾದುದರಿಂದ ಆಗ ದೇಹತ್ಯಾಗವನ್ನು ಮಾಡುವ ಬುದ್ಧಿಯನ್ನು ಹೊಂದಿದಳು.

೫೪. ತರುವಾಯ ಆ ಕನ್ಯೆಯು ದೇಹತ್ಯಾಗಕ್ಕೆ ಸಿದ್ಧವಾದ ಸ್ಥಿರಬುದ್ಧಿಯುಳ್ಳವಳೆಂಬುದನ್ನು ತಿಳಿದು ದೇವತೆಗಳು ಒಟ್ಟುಗೂಡಿ ಆಗ ಅವಳ ಬಳಿಗೆ ಒಬ್ಬ ದೇವದೂತನನ್ನು ಕಳುಹಿಸಿದರು.

ಸಮುಪೇತ್ಯ ಸ ತಾಂ ಪ್ರಾಹ ದೂತೋಽಹಂ ಪಾರ್ಥಿವಾತ್ಮಜೇ ।
ಪ್ರೇಷಿತಸ್ತ್ರಿದಶೈಸ್ತುಭ್ಯಂ ಯತ್ಕಾರ್ಯಂ ತನ್ನಿಶಾಮಯ ॥೩೩॥

ಸ ಭವತ್ಯಾ ಪರಿತ್ಯಾಜ್ಯಂ ಶರೀರಮತಿದುರ್ಲಭಮ್ ।
ತ್ವಂ ಭವಿಷ್ಯಸಿ ಕಲ್ಯಾಣಿ ಜನನೀ ಚಕ್ರವರ್ತಿನಃ ॥೩೬॥

ಪುತ್ರೇಣ ಚ ಮಹಾಭಾಗೇ ಭೋಕ್ತ್ರಾ ನಿಹತಾರಿಣಾ ।
ಅವ್ಯಾಹತಾಜ್ಞೇನ ಚಿರಂ ಸಪ್ತದ್ವೀಪವತೀ ಮಹೀ ॥೩೭॥

ಹನ್ತವ್ಯಸ್ತೇನ ತರುಜಿದ್ದೇವಾನಾಂ ಪುರತೋ ರಿಪುಃ ।
ಅಯಃಶಂಕುಸ್ತಥಾ ಕ್ರೂರೋ ಧರ್ಮೇ ಸ್ಥಾಪ್ಯಾಸ್ತತಃ ಪ್ರಜಾಃ॥೩೮॥

---

೩೫. ಆ ದೇವದೂತನು ಅವಳ ಬಳಿಗೆ ಬಂದು ಹೀಗೆಂದನು. ರಾಜಕುಮಾರಿಯೇ! ನಾನು ದೇವದೂತನಾಗಿರುವೆನು. ದೇವತೆಗಳಿಂದ ನಾನು ನಿನ್ನ ಬಳಿಗೆ ಕಳುಹಿಸಲ್ಪಟ್ಟಿದ್ದೇನೆ ನಾನು ಬಂದ ನಿಮಿತ್ತವನ್ನು ಕೇಳು.

೩೬. ಅತ್ಯಂತ ದುರ್ಲಭವಾದ ಈ ಶರೀರವು ನಿನ್ನಿಂದ ತ್ಯಜಿಸಲ್ಪಡಬಾರದು. ಮಂಗಳ ಭಾಜನಳೇ! ನೀನು ಚಕ್ರವರ್ತಿಯಾಗಿ ಆಳುವ ಪುತ್ರನಿಗೆ ಜನನಿಯಾಗುವವಳಾಗಿದ್ದೀಯೆ.

೩೭. ಮಹಾಭಾಗ್ಯವತಿಯೇ: ಸಂಹರಿಸಿದ ಸಮಸ್ತ ಶತ್ರುಜನರುಳ್ಳವನೂ ಮತ್ತು ತಡೆಯಿಲ್ಲದ ಆಜ್ಞಾಪ್ರಸಾರವುಳ್ಳವನೂ ಆದ ನಿನ್ನ ಪುತ್ರನಿಂದ ಸಪ್ತದ್ವೀಪಗಳಿಂದ ಕೂಡಿದ ಅಖಂಡ ಭೂಮಿಯು ಪಾಲಿಸಲ್ಪಡಬೇಕು.

೩೮. ಮತ್ತು ನಿನ್ನ ಪುತ್ರನಿಂದ ದೇವತೆಗಳ ಮುಂದುಗಡೆಯಲ್ಲಿ ತರುಜಿತ್ ಎಂಬ ಶತ್ರುವು ವಧಿಸಲ್ಪಡುವನು. ಹಾಗು ಕ್ರೂರನಾದ ಅಯಃಶಂಕು ಎಂಬುವನು ಸಂಹರಿಸಲ್ಪಡುವನು. ಪ್ರಜೆಗಳು ಧರ್ಮಾನುಷ್ಠಾನದಲ್ಲಿ ನಿಯೋಜಿಸಲ್ಪಡುವರು.

ಪರಿಪಾಲನೀಯಮಖಿಲಂ ಚಾತುರ್ವರ್ಣ್ಯಂ ಸ್ವಧರ್ಮತಃ ।
ಹನ್ತವ್ಯಾ ದಸ್ಯವೋ ಮ್ಲೇಚ್ಛಾ ಯೇ ಚಾನ್ಯೇ ದುಷ್ಟಚೇಷ್ಟಿತಾಃ ||೫೯||

ಯಷ್ಟವ್ಯಂ ವಿವಿಧೈರ್ಯಜ್ಞೈಃ ಸಮಾಪ್ತವರದಕ್ಷಿಣೈಃ ।
ವಾಜಿಮೇಧಾದಿಭಿರ್ಭದ್ರೇ ಷಟ್ಸಹಸ್ರೈಶ್ಚ ಸಙ್ಖ್ಯಯಾ ||೬೦||

ಮಾರ್ಕಣ್ಡೇಯ ಉವಾಚ :—

ತಂ ದೃಷ್ಟ್ವಾ ಸಾನ್ತರಿಕ್ಷಸ್ಥಂ ದಿವ್ಯಸ್ರಗನುಲೇಪನಮ್ ।
ದೇವದೂತಮುವಾಚೇದಂ ರಾಜಪುತ್ರೀ ತತೋ ಮೃದು ||೬೧||

ಸತ್ಯಂ ತ್ವಮಾಗತಃ ಸ್ವರ್ಗಾದ್ದೇವದೂತೋ ನ ಸಂಶಯಃ ।
ಕಿಂ ತು ಭರ್ತ್ರಾ ವಿನಾ ಪುತ್ರಃ ಸ ಕಥಂ ಮೇ ಭವಿಷ್ಯತಿ ||೬೨||

---

೫೯. ಸಕಲ ಚಾತುರ್ವರ್ಣ್ಯವು ಆಯಾಯ ವರ್ಣಧರ್ಮದಿಂದ ಪಾಲಿಸಲ್ಪಡಬೇಕು. ಶತ್ರುಗಳು, ಮ್ಲೇಚ್ಛರು ಅಥವಾ ದುರ್ವರ್ತನೆಯುಳ್ಳ ಇತರ ನೀಚಜನರು ಎಲ್ಲರೂ ನಿನ್ನ ಪುತ್ರನಿಂದ ವಧಿಸಲ್ಪಡಬೇಕು.

೬೦. ಮತ್ತು ನಿನ್ನ ಪುತ್ರನು ಸಮಗ್ರವಾಗಿ ದಾನಮಾಡಿದ ಉತ್ತಮ ದಕ್ಷಿಣಾದ್ರವ್ಯವುಳ್ಳ ಅನೇಕ ಬಗೆಯ ಯಾಗಗಳನ್ನು ಆಚರಿಸಬೇಕು. ಹಾಗು ಆರುಸಹಸ್ರ ಸಂಖ್ಯೆಯಷ್ಟು ಅಶ್ವಮೇಧ ಮುಂತಾದ ಮಹಾಯಜ್ಞಗಳನ್ನು ನಡೆಸಬೇಕು.

ಮಾರ್ಕಂಡೇಯ ಮುನಿಯು ಇಂತೆಂದನು :—

೬೧. ತರುವಾಯ ಆ ರಾಜಪುತ್ರಿಯು ಅಂತರಿಕ್ಷದಲ್ಲಿ ನಿಂತಿದ್ದ ದಿವ್ಯವಾದ ಗಂಧಾನುಲೇಪನ-ಮಾಲ್ಯಧಾರಣಗಳಿಂದ ಕೂಡಿದ ದೇವದೂತನನ್ನು ನೋಡಿ ಮೃದುಸ್ವರದಿಂದ ಈ ವಚನವನ್ನು ಹೇಳಿದಳು.

೬೨. ದೇವದೂತನಾದ ನೀನು ಸ್ವರ್ಗದಿಂದ ನನ್ನ ಬಳಿಗೆ ಬಂದಿರುವುದು ಸತ್ಯವು. ಇದರಲ್ಲಿ ಸಂದೇಹವಿಲ್ಲ. ಆದರೆ ನನಗೆ ಪತಿಲಾಭವಿಲ್ಲದೆ ನೀನು ಹೇಳಿದ ಗುಣಗಳಿಂದ ಕೂಡಿದ ಪುತ್ರನು ನನ್ನಲ್ಲಿ ಜನಿಸುವುದು ಹೇಗೆ?

ಅವಿಕ್ಷಿತಮೃತೇ ಭರ್ತಾ ಮಮ ನಾನ್ಯೋಽತ್ರ ಜನ್ಮನಿ ।
ಭವಿತೇತಿ ಪ್ರತಿಜ್ಞಾತಂ ಮಯೈತತ್ಸನ್ನಿಧೌ ಪಿತುಃ ||೬೩||

ಸ ಚ ನೇಚ್ಛತಿ ಮಾಂ ಪ್ರೋಕ್ತೋ ಮತ್ಪಿತ್ರಾ ಜನಕೇನ ಚ ।
ಕರನ್ಧಮೇನಾಥ ಸಮ್ಯಗ್ಯಾಚಿತಶ್ಚ ಮಯಾ ತಥಾ ||೬೪||

ದೇವದೂತ ಉವಾಚ :—

ಕಿಮನೇನ ಮಹಾಭಾಗೇ ಬಹುನೋಕ್ತೇನ ತೇ ಸುತಃ ।
ಸಮುತ್ಪತ್ಸ್ಯತಿ ಮಾ ತ್ಯಾಕ್ಷೀಸ್ತ್ವಮಾತ್ಮಾನಮಧರ್ಮತಃ ||೬೫||

ಅತ್ರೈವ ಕಾನನೇ ತಿಷ್ಠ ತನುಂ ಕ್ಷೀಣಾಂ ಚ ಪೋಷಯ ।
ತಪಃಪ್ರಭಾವಾದೇತತ್ತೇ ಸರ್ವಂ ಸಾಧು ಭವಿಷ್ಯತಿ ||೬೬||

---

೬೩. ನನಗಾದರೋ ಈ ಜನ್ಮದಲ್ಲಿ ಅವಿಕ್ಷಿತನೆಂಬ ರಾಜಕುಮಾರನನ್ನು ಬಿಟ್ಟು ಬೇರೊಬ್ಬನು ಪತಿಯಾಗಲಾರನು. ಹೀಗೆಂದು ನಾನು ನನ್ನ ಜನಕನ ಸನ್ನಿಧಿಯಲ್ಲಿ ಪ್ರತಿಜ್ಞೆಮಾಡಿರುವೆನು.

೬೪. ಆದರೆ ಆ ಅವಿಕ್ಷಿತನು ನನ್ನ ತಂದೆ, ಜನಕನಾದ ಕರಂಧಮರಾಜ ಮತ್ತು ನನ್ನಿಂದ ಉಚಿತರೀತಿಯಿಂದ ಹೇಳಿಕೊಂಡು ಪ್ರಾರ್ಥಿಸಲ್ಪಟ್ಟಿದ್ದರೂ ನನ್ನನ್ನು ಮದುವೆಯಾಗಲು ಇಷ್ಟವನ್ನು ಹೊಂದಿಲ್ಲ.

ದೇವದೂತನಿಂತೆಂದನು :--

೬೫. ಮಹಾಭಾಗ್ಯವತಿಯೇ! ಇವನ್ನು ಅನೇಕಸಲ ಹೇಳಿ ಆಗುವ ಪ್ರಯೋಜನವೇನಿದೆ? ನಿನ್ನಲ್ಲಿ ಪುತ್ರನು ಜನಿಸುವನು. ಅಧರ್ಮದಿಂದ ನೀನು ನಿನ್ನ ದೇಹವನ್ನು ತ್ಯಜಿಸಬೇಡ.

೬೬. ನೀನು ಇನ್ನು ಮುಂದೆ ಇದೇ ವನದಲ್ಲಿ ವಾಸಮಾಡು. ತಪಸ್ಸಿನಿಂದ ಕೃಶವಾದ ಈ ದೇಹವನ್ನು ಪೋಷಣಮಾಡು. ನಿನ್ನ ತಪಸ್ಸಿನ ಪ್ರಭಾವದಿಂದ ಇದೆಲ್ಲವೂ ನಿನಗೆಸಾಧುವಾಗಿ ಘಟನೆಯಾಗುವುದು,

ಮಾರ್ಕಣ್ಡೇಯ ಉವಾಚ :—

ಇತ್ಯುಕ್ತ್ವಾ ದೇವದೂತೋಽಸೌ ಯಥಾಗತಮಗಚ್ಛತ ।
ಚಕಾರಾನುದಿನಂ ಸುಭ್ರೂಃ ಸಾಪ್ಯಾತ್ಮತನುಪೋಷಣಮ್ ॥೬೭॥

ಇತಿ ಶ್ರೀಮಾರ್ಕಣ್ಡೇಯ ಮಹಾಪುರಾಣೇಽವಿಕ್ಷಿಚ್ಚರಿತಂ
ನಾಮೈಕವಿಂಶತ್ಯಧಿಕಶತತಮೋಽಧ್ಯಾಯಃ

ಮಾರ್ಕಂಡೇಯ ಮುನಿಯು ಹೇಳಿದನು :--

೬೭. ದೇವದೂತನು ರಾಜಪುತ್ರಿಗೆ ಹೀಗೆಂದು ಹೇಳಿ ತಾನು ಬಂದಿರುವ ಹಾಗೆ ಹಿಂತಿರುಗಿ ಹೋದನು. ಮುಂದೆ ಸುಂದರಿಯಾದ ಆ ರಾಜಪುತ್ರಿಯು ಪ್ರತಿದಿನವೂ ಆದರದಿಂದ ತನ್ನ ದೇಹದ ಪೋಷಣೆಯನ್ನು ಮಾಡಿಕೊಂಡಳು.

ಮಾರ್ಕಂಡೇಯ ಮಹಾಪುರಾಣದಲ್ಲಿ ನೂರ ಇಪ್ಪತ್ತೊಂದನೆಯ
ಅಧ್ಯಾಯವು ಮುಗಿದುದು.

॥ ಓಂ ಶ್ರೀ ದುರ್ಗಾಯೈ ನಮಃ ॥

ಮಾರ್ಕಂಡೇಯ ಪುರಾಣಂ

ದ್ವಾವಿಂಶತ್ಯಧಿಕಶತತಮೋಽಧ್ಯಾಯಃ

(ಅವಿಕ್ಷಿತಃ ಪತ್ನೀಪಾಣಿಗ್ರಹಣಾಙ್ಗೀಕಾರಃ)

ಮಾರ್ಕಣ್ಡೇಯ ಉವಾಚ :—

ಅಥ ಸಾವಿಕ್ಷಿತೋ ಮಾತಾ ವೀರಾ ವೀರಪ್ರಜಾವತೀ ।
ಪುಣ್ಯೇಽಹನಿ ಸಮಾಹೂಯ ಪ್ರಾಹ ಪುತ್ರಮವಿಕ್ಷಿತಮ್ ॥೧॥

ಪುತ್ರಾಹಮಭ್ಯನುಜ್ಞಾತಾ ತವ ಪಿತ್ರಾ ಮಹಾತ್ಮನಾ ।
ಉಪವಾಸಂ ಕರಿಷ್ಯಾಮಿ ದುಷ್ಕರೋಽಯಂ ಕಿಮಿಚ್ಛಕಃ ॥೨॥

ನೂರ ಇಪ್ಪತ್ತೆರಡನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಹೇಳಿದನು :—

೧. ತರುವಾಯ ವೀರ ಪ್ರಜೆಯನ್ನು ಹೊಂದಿದ ಅವಿಕ್ಷಿತ ಕುಮಾರನ ಆ ವೀರ ಮಾತೆಯು ಒಂದು ಶುಭದಿನದಲ್ಲಿ ಅವಿಕ್ಷಿತನನ್ನು ತನ್ನ ಸನ್ನಿಧಿಗೆ ಕರೆದು ಹೇಳಿದಳು.

೨. ಪುತ್ರನೇ! ನಾನು ಒಂದು ವ್ರತಾಂಗವಾಗಿ ಉಪವಾಸ ನಿಯಮವನ್ನು ಆಚರಿಸುವೆನು. ಕಿಮಿಚ್ಛಕವೆಂಬ ಆ ವ್ರತವು ಬಹಳ ಕಷ್ಟಸಾಧ್ಯವು. ಆ ವ್ರತವನ್ನು ಆಚರಿಸುವಂತೆ ಮಹಾತ್ಮನಾದ ನಿನ್ನ ತಂದೆಯಿಂದ ನಾನು ಸಮ್ಮತಿಸಲ್ಪಟ್ಟಿರುವೆನು.

ಸ ಚಾಯತ್ತಸ್ತವ ಪಿತುಸ್ತ್ವಯಾ ಸಾಧ್ಯೋ ಮಯಾಪಿ ಚ ।
ಪ್ರತಿಜ್ಞಾತೇ ತ್ವಯಾ ಪುತ್ರ ತತಸ್ತತ್ರ ಯತಾಮ್ಯಹಮ್ ॥೩॥

ದ್ರವ್ಯಸ್ಯಾರ್ಧಂ ಮಹಾಕೋಶಾತ್ತವ ದಾಸ್ಯಾಮ್ಯಹಂ ಪಿತುಃ ।
ಧನಂ ತೇ ಪಿತುರಾಯತ್ತಮನುಜ್ಞಾತಾಸ್ಮಿ ತೇನ ಚ ॥೪॥

ಕ್ಲೇಶಸಾಧ್ಯೋ ಮದಾಯತ್ತಃ ಸ ಹಿ ಶ್ರೇಯೋ ಭವಿಷ್ಯತಿ ।
ಸಾಧ್ಯೋ ಭವೇದ್ವಾ ಯದಿ ತೇ ಕಶ್ಚಿದ್ಬಲಪರಾಕ್ರಮ್ಯೈಃ ॥೫॥

ಸ ತೇಽಸಾಧ್ಯೋ ಹ್ಯನ್ಯಥಾ ವಾ ದುಃಖಸಾಧ್ಯೋ ಭವಿಷ್ಯತಿ ॥೬॥

---

೩. ಕಿಮಿಚ್ಛಕವೆಂಬ ವ್ರತಾನುಷ್ಠಾನವು ನಿನ್ನ ತಂದೆಗೆ ಸೇರಿದುದ್ದು-ದಾಗಿದೆ. ಹಾಗು ನಿನ್ನಿಂದಲೂ ಮತ್ತು ನನ್ನಿಂದಲೂ ಸಾಧಿಸಲ್ಪಡಬೇಕು. ಪುತ್ರನೇ! ನೀನು ಸಾಧಿಸುವುದಾಗಿ ಪ್ರತಿಜ್ಞೆಮಾಡಿದರೆ ಆಗ ನಾನು ಆ ವ್ರತನಿಯಮದಲ್ಲಿ ಯತ್ನಿಸುವೆನು.

೪. ಆ ವ್ರತಕ್ಕೆ ಅಂಗವಾಗಿ ನಿನ್ನ ತಂದೆಯ ಅಪಾರವಾದ ಭಂಡಾರದಿಂದ ಅರ್ಧಭಾಗದ ಧನವನ್ನು ನಾನು ವಿತರಣಮಾಡುತ್ತೇನೆ. ಈಗ ಧನರಾಶಿಯು ನಿನ್ನ ತಂದೆಗೆ ಅಧೀನವಾಗಿದೆ. ನಿನ್ನ ತಂದೆಯಿಂದ ನಾನು ಸಮ್ಮತಿಯನ್ನು ಹೊಂದಿರುವೆನು.

೫. ಕಾಯಕ್ಲೇಶದಿಂದ ಸಾಧಿಸಬೇಕಾದ ವ್ರತವಿಧಾನವು ನನಗೆ ಸೇರಿದೆ. ಅದು ನನ್ನಿಂದ ಸಾಂಗವಾಗಿ ನಡೆಯುವುದು. ಇನ್ನು ನಿನ್ನಿಂದ ಬಲ-ಪರಾಕ್ರಮಗಳಿಂದ ಸಾಧಿಸಲ್ಪಡಬೇಕಾದ ಅಂಶವು ಸಾಧ್ಯವಾದೀತೆ?

೬. ಅದೊಂದು ಭಾಗವು ನಿನಗೆ ಸಾಧ್ಯವಾಗಬಹುದೆ? ಕಷ್ಟದಿಂದ ಸಾಧಿಸುವೆಯಾ? ಅಥವಾ ಆ ಸಹಾಯವು ನಿನಗೆ ಅಸಾಧ್ಯವಾಗಿ ಪರಿಣಮಿ-ಸುವುದೇ?

ತತ್ತ್ವಂ ಪ್ರತಿಜ್ಞಾಂ ಕುರುಷೇ ಯದಿ ಪುತ್ರಾತ್ರ ಚೈವ ತೇ ।
ತದೈತದಹಮಾವಾಪ್ಸ್ಯೇ ಕಥ್ಯತಾಂ ಯನ್ಮತಂ ತವ ॥೭॥

ಅವಿಕ್ಷಿದುವಾಚ :—

ವಿತ್ತಂ ಮೇ ಪಿತುರಾಯತ್ತಂ ಮತ್ಸ್ವಾಮಿತ್ವಂ ನ ತತ್ರ ವೈ ।
ಯನ್ಮಚ್ಛರೀರನಿಷ್ಪಾದ್ಯಂ ತತ್ಕರಿಷ್ಯೇ ತ್ವಯೋದಿತಮ್ ॥೮॥

ಕಿಮಿಚ್ಛಕಂ ವ್ರತಂ ಮಾತರ್ನಿಶ್ಚಿನ್ತಾ ಭವ ನಿರ್ವ್ಯಥಾ ।
ರಾಜ್ಞಾ ಪಿತ್ರಾಭ್ಯನುಜ್ಞಾತಂ ಯದಿ ವಿತ್ತೇಶ್ವರೇಣ ಮೇ ॥೯॥

ಮಾರ್ಕಣ್ಡೇಯ ಉವಾಚ :—

ತತಃ ಸಾ ರಾಜಮಹಿಷೀ ತದ್ವ್ರತಂ ಸಮುಪೋಷಿತಾ ।
ಯಥೋಕ್ತಂ ಸಾಕರೋತ್ಪೂಜಾಂ ರಾಜರಾಜಸ್ಯ ಸಂಯತಾ ॥೧೦॥

---

೭. ಪುತ್ರನೇ! ಬಲ-ಪರಾಕ್ರಮಗಳಿಂದ ಸಾಧಿಸಬೇಕಾದ ಅಂಶವನ್ನು ಸಾಧಿಸುವಂತೆ ನೀನು ಪ್ರತಿಜ್ಞೆಯನ್ನು ಮಾಡುವುದಾದರೆ ಆಗ ನಾನು ಉಪವಾಸ-ವ್ರತವನ್ನು ಕೈಗೊಳ್ಳುವೆನು. ನಿನ್ನ ಇಷ್ಟವೇನಿದೆಯೋ, ಅದನ್ನು ಹೇಳು.

ಅವಿಕ್ಷಿತನು ಹೇಳಿದನು :-

೮. ಧನರಾಶಿಯು ನನ್ನ ತಂದೆಗೆ ಸೇರಿದುದಾಗಿದೆ. ಅದರಲ್ಲಿ ನನ್ನ ಸ್ವಾಮಿತ್ವವೇನೂ ಇಲ್ಲ. ನನ್ನ ಶರೀರಶ್ರಮದಿಂದ ಏನಾಗಬೇಕೋ, ನೀನು ಆಜ್ಞಾಪಿಸುವ ಆ ಕಾರ್ಯವನ್ನು ನಾನು ನೆರವೇರಿಸುವೆನು.

೯. ಜನನಿಯೆ! ಭಂಡಾರಕ್ಕೆ ಪ್ರಭುವೂ, ರಾಜ್ಯಾಧಿಪತಿಯೂ ಆದ ನನ್ನ ಜನಕನ ಅನುಮತಿಯನ್ನು ನೀನು ಹೊಂದಿರುವೆಯಾದರೆ ನನ್ನಿಂದ ಆಗಬೇಕೆಂದಿರುವ ಕಿಮಿಚ್ಛಕವ್ರತದ ಕಾರ್ಯವನ್ನು ನಾನು ನೆರವೇರಿಸುವೆನು. ನೀನು ನಿಶ್ಚಿಂತಳೂ ಮತ್ತು ವ್ಯಥೆಯಿಲ್ಲದವಳೂ ಆಗು.

ಮಾರ್ಕಂಡೇಯ ಮುನಿಯು ಹೇಳಿದನು :--

೧೦. ತರುವಾಯ ರಾಜಮಹಿಷಿಯು ವ್ರತಾನುಷ್ಠಾನದ ಅಂಗವಾಗಿ ಉಪವಾಸವನ್ನು ಕೈಗೊಂಡಳು. ಮತ್ತು ಯಥಾವಿಧಿಯಾಗಿ ಶುದ್ಧಾಂತಃಕರಣ-ವುಳ್ಳವಳಾಗಿ ಕುಬೇರದೇವತೆಯ ಪೂಜೆಯನ್ನು ಮಾಡಿದಳು.

ನಿಧೀನಾಮುಪ್ಯಶೇಷಾಣಾಂ ನಿಧಿಪಾಲಗಣಸ್ಯ ಚ ।
ಲಕ್ಷ್ಮ್ಯಾಶ್ಚ ಪರಯಾ ಭಕ್ತ್ಯಾ ಯತವಾಕ್ಕಾಯಮಾನಸಾ ॥೧೧॥

ವಿವಿಕ್ತೇ ತು ಗೃಹಸ್ಥೋಽಯಮಥ ರಾಜಾ ಕರನ್ಧಮಃ ।
ಆಸೀನ ಉಕ್ತಃ ಸಚಿವೈರ್ನೀತಿಶಾಸ್ತ್ರವಿಶಾರದೈಃ ॥೧೨॥

ಸಚಿವಾ ಊಚುಃ :—

ರಾಜನ್ ವಯಃ ಪರಿಣತಂ ತವೈತಚ್ಛಾಸತೋ ಮಹೀಮ್ ।
ಏಕಸ್ತೇ ತನಯೋಽವಿಕ್ಷಿತ್ತ್ಯಕ್ತದಾರಪರಿಗ್ರಹಃ ॥೧೩॥

ಅಪುತ್ರಃ ಸ ಚ ತೇ ನಿಷ್ಠಾಂ ಯದಾ ಭೂಪ ಗಮಿಷ್ಯತಿ ।
ತದಾರಿಪಕ್ಷಂ ಪೃಥಿವೀ ನಿಶ್ಚಿತಂ ತವ ಯಾಸ್ಯತಿ ॥೧೪॥

---

೧೧. ಮತ್ತು ನಿಗ್ರಹಿಸಿದ ವಾಕ್-ಕಾಯ-ಮಾನಸವೆಂಬ ತ್ರಿಕರಣ-ಗಳುಳ್ಳವಳಾಗಿ ಎಲ್ಲ ನಿಧಿದೇವತೆ, ನಿಧಿಗಳನ್ನು ರಕ್ಷಿಸುವ ದೇವತೆ ಹಾಗು ಲಕ್ಷ್ಮೀ—ಈ ದೇವತೆಗಳ ಪೂಜೆಯನ್ನು ಅತಿಶಯವಾದ ಭಕ್ತಿಯಿಂದ ಆಚರಿಸಿದಳು.

೧೨. ಅನಂತರ ಒಂದು ಸಮಯದಲ್ಲಿ ರಾಜಮಂದಿರದಲ್ಲಿ ಏಕಾಂತ-ಸ್ಥಳದಲ್ಲಿ ಕುಳಿತಿದ್ದ ಕರಂಧಮರಾಜನ ಬಳಿಗೆ ನೀತಿಶಾಸ್ತ್ರದಲ್ಲಿ ವಿಶಾರದರೆನಿಸಿದ ಸಚಿವರು ಬಂದು ಹೇಳಿದರು.

ಸಚಿವರು ಹೀಗೆಂದರು :—

೧೩. ಮಹಾರಾಜನೇ! ಭೂಮಿಯನ್ನು ಶಾಸನಮಾಡುತ್ತಿದ್ದ ನಿನಗೆ ಈಗ ವಯಸ್ಸು ಕಳೆದುಹೋಗುವಂತೆ ಪರಿಣಮಿಸಿದೆ. ನಿನಗೆ ಅವಿಕ್ಷಿತನೆಂಬ ಏಕಮಾತ್ರಪುತ್ರನಿರುವನು. ಆವನು ಪತ್ನೀಪಾಣಿಗ್ರಹಣ ಕಥೆಯನ್ನು ಬಿಟ್ಟಿರುವನು.

೧೪. ಕರಂಧಮರಾಜನೇ! ಪುತ್ರಸಂತಾನವಿಲ್ಲದ ನಿನ್ನ ಪುತ್ರನೂ ಎಂದು ಕಾಲಧರ್ಮವನ್ನು ಹೊಂದುವನೊ, ಆಗ ನಿನ್ನ ಭೂಮಿಯು ನಿಜವಾಗಿ ನಿನ್ನ ಶತ್ರುಪಕ್ಷದ ಅಧೀನವಾಗುವುದು.

ವಂಶಕ್ಷಯಸ್ತೇ ಭವಿತಾ ಪಿತೃಪಿಣ್ಡೋದಕಕ್ಷಯಃ ।
ಏತನ್ಮಹತ್ತೇಽರಿಭಯಂ ಕ್ರಿಯಾಹಾನ್ಯಾ ಭವಿಷ್ಯತಿ ॥೧೫॥

ತಸ್ಮಾತ್ಕುರು ತಥಾ ಭೂಪ ಯಥಾ ತೇ ತನಯಃ ಪುನಃ ।
ಕರೋತಿ ಸತತಂ ಬುದ್ಧಿಂ ಪಿತೄಣಾಮುಪಕಾರಿಣೀಮ್ ॥೧೬॥

ಮಾರ್ಕಣ್ಡೇಯ ಉವಾಚ :—

ಏತಸ್ಮಿನ್ನನ್ತರೇ ಶಬ್ದಂ ಶುಶ್ರಾವ ಜಗತೀಪತಿಃ ।
ಪುರೋಹಿತಸ್ಯ ವೀರಾಯಾ ಗದತೋ ಹ್ಯರ್ಥಿನಂ ಪ್ರತಿ ॥೧೭॥

ಕಃ ಕಿಮಿಚ್ಛತಿ ದುಃಸಾಧ್ಯಂ ಕಸ್ಯ ಕಿಂ ಸಾಧ್ಯತಾಮಿತಿ ।
ಕರನ್ಧಮಸ್ಯ ಮಹಿಷೀ ಕಿಮಿಚ್ಛಕಮುಪೋಷಿತಾ ॥೧೮॥

---

೧೫. ಮತ್ತು ನಿನ್ನ ವಂಶವು ಕ್ಷಯಿಸಿಹೋಗುವುದು. ನಿನ್ನ ಪೂರ್ವಿಕರಾದ ಪಿತೃಗಳಿಗೆ ಪಿಂಡ-ಜಲದಾನಗಳಿಗೆ ಲೋಪವುಂಟಾಗುವುದು. ಹೀಗೆ ನಿನ್ನ ಕರ್ತವ್ಯದ ಲೋಪದಿಂದ ಅನೇಕ ಬಗೆಯ ಶತ್ರುಪೀಡಾಭಯವು ಉಂಟಾಗುವುದು.

೧೬. ರಾಜನೇ ! ಆದುದರಿಂದ ನೀನಿಂದು ಹಾಗೆ ಯತ್ನಿಸು. ನಿನ್ನ ಪುತ್ರನು ಇನ್ನಾದರೂ ಪಿತೃಗಳಿಗೆ ಉಪಕಾರವಾಗುವಂತಹ ಸಂಕಲ್ಪವನ್ನು ಯಾವಾಗಲೂ ಹೊಂದಿರುವಂತೆ ಆಗಲಿ.

ಮಾರ್ಕಂಡೇಯ ಮುನಿಯು ಹೇಳಿದನು :—

೧೭. ಹೀಗೆ ಮಂತ್ರಿಗಳು ಹೇಳುತ್ತಿರುವ ಪ್ರಸಂಗದಲ್ಲಿ ರಾಜಮಹಿಷಿಯಾದ ವೀರಾದೇವಿಯ ಪುರೋಹಿತನು ಅರ್ಥಿಜನರನ್ನು ಕುರಿತು ಕೂಗಿಹೇಳುತ್ತಿದ್ದ ಮಾತಿನ ಶಬ್ದವನ್ನು ಕರಂಧಮರಾಜನು ಕೇಳಿದನು.

೧೮. ಯಾವ ಅರ್ಥಿಯು ಯಾವ ಅಸಾಧ್ಯವಾದ ಇಷ್ಟವನ್ನು ಸಾಧಿಸಲು ಇಷ್ಟವುಳ್ಳವನಾಗಿದ್ದಾನೆ ? ಯಾರಿಗೆ ಏನನ್ನು ಸಾಧಿಸಿಕೊಡಬೇಕು? ಕರಂಧಮಮಹಾರಾಜನ ಪಟ್ಟದರಸಿಯು ಕಿಮಿಚ್ಛಕವ್ರತೋಪವಾಸವನ್ನು ಆಚರಿಸುತ್ತಿರುವಳು.

ರಾಜಪುತ್ರೋಽಪ್ಯವಿಕ್ಷಿತ್ತು ಶ್ರುತ್ವಾ ಪೌರೋಹಿತಂ ವಚಃ ।
ಪ್ರತ್ಯುವಾಚಾರ್ಥಿನಃ ಸರ್ವಾನ್ ರಾಜದ್ವಾರಮುಪಾಗತಾನ್ ॥೧೯॥

ಮಯಾ ಸಾಧ್ಯಂ ಶರೀರೇಣ ಯಸ್ಯ ಕಿಂಚಿದ್ಬ್ರವೀತು ಸಃ ।
ಮಮ ಮಾತಾ ಮಹಾಭಾಗಾ ಕಿಮಿಚ್ಛಕಮುಪೋಷಿತಾ ॥೨೦॥

ಶೃಣ್ವಂತ್ತು ಮೇಽರ್ಥಿನಃ ಸರ್ವೇ ಪ್ರತಿಜ್ಞಾತಂ ಮಯಾ ತದಾ ।
ಕಿಮಿಚ್ಛಥ ದದಾಮ್ಯೇಷ ಕ್ರಿಯಮಾಣೇ ಕಿಮಿಚ್ಛಕೇ ॥೨೧॥

ಮಾರ್ಕಣ್ಡೇಯ ಉವಾಚ :—

ತತೋ ರಾಜಾ ನಿಶಮ್ಯೈತದ್ವಾಕ್ಯಂ ಪುತ್ರಮುಖಾಚ್ಚ್ಯುತಮ್ ।
ಸಮುತ್ಪತ್ಯಾಬ್ರವೀತ್ಪುತ್ರಮಹಮರ್ಥೀ ಪ್ರಯಚ್ಛ ಮೇ ॥೨೨॥

---

೧೯. ಇಷ್ಟರಲ್ಲಿ ರಾಜಪುತ್ರನಾದ ಅವಿಕ್ಷಿತನು ಪುರೋಹಿತನು ಘೋಷಿಸಿದ ವಚನವನ್ನು ಕೇಳಿ ತಾನು ರಾಜಭವನದ್ವಾರದಲ್ಲಿ ಬಂದು ನೆರೆದ ಎಲ್ಲ ಅರ್ಥಿಗಳನ್ನು ಕುರಿತು ಹೇಳಿದನು.

೨೦. ಮಹಾಭಾಗ್ಯಸಂಪೂರ್ಣಳಾದ ನನ್ನ ಜನನಿಯು ಕಿಮಿಚ್ಛಕ-ವ್ರತಾಂಗವಾಗಿ ಉಪವಾಸವನ್ನು ಕೈಗೊಂಡಿರುವಳು. ನಾನು ನನ್ನ ಶರೀರ-ಶ್ರಮದಿಂದ ಸಾಧಿಸಿಕೊಡಬೇಕಾದಂತಹ ಇಷ್ಟವನ್ನು ಯಾರಾದರೂ ಹೊಂದಿದ್ದರೆ ಅವನು ಆ ಇಷ್ಟವನ್ನು ಹೇಳಲಿ.

೨೧. ಸಮಸ್ತ ಅರ್ಥಿಗಳು ನನ್ನ ವಚನವನ್ನು ಕೇಳುವವರಾಗಲಿ. ಆಗಲೇ ನನ್ನಿಂದ ಪ್ರತಿಜ್ಞೆಮಾಡಲ್ಪಟ್ಟಿದೆ. ಕಿಮಿಚ್ಛಕವ್ರತವು ನಡೆಯುತ್ತಿದ್ದುದ-ರಿಂದ ಯಾರು ಏನನ್ನು ಅಪೇಕ್ಷಿಸಿದರೂ ಅದನ್ನು ಅವನಿಗೆ ಮಾಡಿಕೊಡುವೆನು.

ಮಾರ್ಕಂಡೇಯ ಮುನಿಯು ಹೇಳಿದನು :—

೨೨. ತರುವಾಯ ಪುತ್ರನ ಮುಖದಿಂದ ಬಂದ ಈ ವಚನವನ್ನು ಕೇಳಿ ಕರಂಧಮರಾಜನು ಕೂಡಲೆ ಪುತ್ರನ ಎದುರು ಬಂದು "ನಾನು ಅರ್ಥಿಯಾ-ಗಿರುವೆನು. ನನ್ನ ಇಷ್ಟವನ್ನು ಕೊಡು" ಎಂದು ಹೇಳಿದನು.

ಅವಿಕ್ಷಿದುವಾಚ :—

ದಾತವ್ಯಂ ಯನ್ಮಯಾ ತಾತ ಭವತೇ ತದ್ಬ್ರವೀಹಿ ಮಾಮ್ ।
ಕರ್ತವ್ಯಂ ದುಷ್ಕರಂ ವಾ ತೇ ಸಾಧ್ಯಂ ದುಃಸಾಧ್ಯಮೇವ ವಾ ॥೨೩॥

ರಾಜೋವಾಚ :—

ಯದಿ ಸತ್ಯಪ್ರತಿಜ್ಞಸ್ತ್ವಂ ದದಾಸಿ ಚ ಕಿಮಿಚ್ಛಕಮ್ ।
ಪೌತ್ರಸ್ಯ ದರ್ಶಯ ಮುಖಂ ಮಮೋತ್ಸಙ್ಗಗತಸ್ಯ ತತ್ ॥೨೪॥

ಅವಿಕ್ಷಿದುವಾಚ :—

ಅಹಂ ತವೈಕಸ್ತನಯೋ ಬ್ರಹ್ಮಚರ್ಯಂ ಚ ಮೇ ನೃಪ ।
ನ ಮೇ ಪುತ್ರೋಽಸ್ತಿ ಪೌತ್ರಸ್ಯ ದರ್ಶಯಾಮಿ ಕಥಂ ಮುಖಮ್ ॥೨೫॥

ಅವಿಕ್ಷಿತಕುಮಾರನು ಹೇಳಿದನು :—

೨೩. ತಾತನೇ! ನನ್ನಿಂದ ನಿನಗೆ ಏನು ಅರ್ಪಿಸಲ್ಪಡಬೇಕೋ ಅದನ್ನೀಗ ನನಗೆ ಹೇಳು. ನಿನ್ನ ಇಷ್ಟವು ಒಂದುವೇಳೆ ಸಾಧ್ಯವೇ, ಅಸಾಧ್ಯವೇ ಅಥವಾ ಕಷ್ಟಸಾಧ್ಯವೇ ಏನೇ ಆದರೂ ಅದನ್ನು ಹೇಳು.

ರಾಜನು ಹೇಳಿದನು :—

೨೪. ಪುತ್ರನೇ! ನೀನು ಸತ್ಯಪ್ರತಿಜ್ಞೆಯುಳ್ಳವನಾದರೆ ಮತ್ತು ಕಿಮಿಚ್ಛಕ ವ್ರತವಿಧಾನದಂತೆ ಅರ್ಥಿಗಳ ಇಷ್ಟವನ್ನು ಕೊಡುವೆಯಾದರೆ ನನ್ನ ತೊಡೆಯಲ್ಲಿ ಮಲಗಿದ ಪೌತ್ರನ ಮುಖವನ್ನು ನನಗೆ ತೋರಿಸು.

ಅವಿಕ್ಷಿತನು ಹೇಳಿದನು :—

೨೫. ತಂದೆಯೆ! ನಿನಗೆ ನಾನೊಬ್ಬನೇ ಪುತ್ರನಿರುವೆನು. ರಾಜನೇ! ನಾನು ಬ್ರಹ್ಮಚರ್ಯವನ್ನಾಚರಿಸುವವನಾಗಿದ್ದೇನೆ. ನನಗೆ ಪುತ್ರನಿಲ್ಲ. ಪೌತ್ರನ ಮುಖವನ್ನು ನಾನು ನಿನಗೆ ಹೇಗೆ ತೋರಿಸಲಿ?

ರಾಜೋವಾಚ :—

ಪಾಪಾಯ ಬ್ರಹ್ಮಚರ್ಯಂ ತೇ ಯದಿದಂ ಧಾರ್ಯತೇ ತ್ವಯಾ ।
ತಸ್ಮಾತ್ತ್ವಂ ಮೋಚಯಾತ್ಮಾನಂ ಮಮ ಪೌತ್ರಂ ಚ ದರ್ಶಯ॥೨೬॥

ಅವಿಕ್ಷಿದುವಾಚ :—

ವಿಷಮಂ ಸ್ಯಾನ್ಮಹಾರಾಜ ಯದನ್ಯತ್ತತ್ಸಮಾದಿಶ ।
ವೈರಾಗ್ಯೇಣ ಮಯಾ ತ್ಯಕ್ತಃ ಸ್ತ್ರೀ ಸಮ್ಭೋಗಸ್ತಥಾಸ್ತು ಸಃ ॥೨೭॥

ರಾಜೋವಾಚ :—

ಬಹುಭಿರ್ಯುಧ್ಯಮಾನಾನಾಂ ದೃಷ್ಟೋ ವೈ ವೈರಿಣಾಂ ಜಯಃ ।
ತತ್ರಾಪಿ ಯದಿ ವೈರಾಗ್ಯಮುಪೈಷಿ ತದಪಣ್ಡಿತಃ ॥೨೮॥

ರಾಜನಿಂತೆಂದನು :—

೨೬. ಪುತ್ರನೇ ! ನೀನು ಯಾವ ಈ ಬ್ರಹ್ಮಚರ್ಯವನ್ನು ಧಾರಣ ಮಾಡಿದ್ದೀಯೋ, ಇದು ಪಾಪಕರವಾದುದು. ಆದ್ದರಿಂದ ಆ ಪಾಪದಿಂದ ನೀನು ನಿನ್ನನ್ನು ಬಿಡುಗಡೆಮಾಡು. ಮತ್ತು ನನಗೆ ಪೌತ್ರನ ಮುಖವನ್ನು ತೋರಿಸು.

ಅವಿಕ್ಷಿತನು ಹೇಳಿದನು :—

೨೭. ಮಹಾರಾಜನೇ ! ಈ ಪ್ರಸಂಗವು ವಿಷಮವಾಗಿರುವುದು. ಇನ್ನಾವುದಾದರೊಂದನ್ನು ಆಜ್ಞಾಪಿಸು. ವೈರಾಗ್ಯವನ್ನು ಹೊಂದಿದ ನಾನು ಸ್ತ್ರೀಸಂಗಸುಖವನ್ನು ವರ್ಜಿಸಿರುವೆನು. ಅದು ಅಂತೆಯೇ ನೆರವೇರಲಿ.

ರಾಜನು ಇಂತೆಂದನು :—

೨೮. ಅನೇಕ ಮಂದಿಯೊಡನೆ ಏಕಾಕಿಯಾದ ನೀನು ಯುದ್ಧಮಾಡುತ್ತಿರುವ ಸನ್ನಿವೇಶದಲ್ಲಿ ವೈರಿಗಳಿಗೆ ಜಯವುಂಟಾದುದು ಕಂಡುಬಂದಿರುವುದು. ಆ ನಿಮಿತ್ತದಿಂದ ನೀನು ವೈರಾಗ್ಯವನ್ನು ಹೊಂದುವೆಯಾದರೆ ನೀನು ವಿವೇಕಿಯಲ್ಲದವನೆಂದು ತೋರುವುದು.

ಕಿಂ ವಾ ನೋ ಬಹುನೋಕ್ತೇನ ಬ್ರಹ್ಮಚರ್ಯಂ ಪರಿತ್ಯಜ |
ಮಾತುಸ್ತ್ವಮಿಚ್ಛಯಾ ವಕ್ತ್ರಂ ಮಮ ಪೌತ್ರಸ್ಯ ದರ್ಶಯ ||೨೯||

ಮಾರ್ಕಣ್ಡೇಯ ಉವಾಚ :—

ಯದಾ ಸ ಬಹುಶಸ್ತೇನ ಪ್ರೋಕ್ತಃ ಪುತ್ರೇಣ ಪಾರ್ಥಿವಃ |
ನಾನ್ಯತ್ಪ್ರಾರ್ಥಯತೇ ಕಿಂಚಿತ್ತದಾ ಪುತ್ರೋಽಬ್ರವೀತ್ಪುನಃ ||೩೦||

ದತ್ತ್ವಾ ಕಿಮಿಚ್ಛಕಂ ತುಭ್ಯಂ ಪ್ರಾಪ್ತೋಽಹಂ ತಾತ ಸಙ್ಕಟಮ್ |
ತತ್ಕರಿಷ್ಯಾಮಿ ನಿರ್ಲಜ್ಜೋ ಭೂಯೋ ದಾರಪರಿಗ್ರಹಮ್ ||೩೧||

ಸ್ತ್ರಿಯಾಃ ಸಮಕ್ಷಂ ವಿಜಿತಃ ಪತಿತೋ ಧರಣೀತಲೇ |
ಸ್ತ್ರೀಪತಿರ್ಭವಿತಾ ಭೂಯಸ್ತಾತೈತದತಿದುಷ್ಕರಮ್ ||೩೨||

---

೨೯. ಇನ್ನು ನಿನ್ನ ಮುಂದೆ ನಮ್ಮ ಹೆಚ್ಚಾದ ಮಾತಿನಿಂದ ಪ್ರಯೋಜನವೇನಿದೆ? ನೀನು ಬ್ರಹ್ಮಚರ್ಯವನ್ನು ತ್ಯಜಿಸು. ಮತ್ತು ಜನನಿಯ ಇಷ್ಟವನ್ನು ನೆರವೇರಿಸುತ್ತ ನನಗೆ ಪೌತ್ರನ ಮುಖವನ್ನು ತೋರಿಸುವಂತೆ ಮಾಡು.

ಮಾರ್ಕಂಡೇಯ ಮುನಿಯು ಹೇಳಿದನು :—

೩೦. ಆ ಅವಿಕ್ಷಿತಪುತ್ರನಿಂದ ಅನೇಕ ಸಲ ಪ್ರಾರ್ಥಿಸಲ್ಪಟ್ಟರೂ ಆ ಕರಂಧಮರಾಜನು ಯಾವಾಗ ಆ ಮನೋರಥವನ್ನು ಬಿಟ್ಟು ಬೇರೊಂದನ್ನು ಕೇಳಲಿಲ್ಲವೋ ಆಗ ಪುತ್ರನಾದ ಅವಿಕ್ಷಿತನು ಮತ್ತೆ ಹೀಗೆಂದನು.

೩೧. ಜನಕನೇ! ನಾನು ಕಿಮಿಚ್ಛಕವ್ರತಾಂಗವಾಗಿ ನಿನ್ನ ಇಷ್ಟವನ್ನು ವಾಗ್ದಾನಮಾಡಿ ಈಗ ದೊಡ್ಡ ಸಂಕಟಕ್ಕೆ ಒಳಗಾಗಿರುವೆನು. ಅದ್ದರಿಂದ ನಾನೀಗ ನಾಚಿಕೆಯಿಲ್ಲದವನಂತಾಗಿ ಮತ್ತೆ ಪತ್ನೀಪಾಣಿಗ್ರಹಣವನ್ನು ಮಾಡಿಕೊಳ್ಳುವೆನು.

೩೨. ತಂದೆಯೇ! ನಾನು ಸ್ತ್ರೀಯ ಪ್ರತ್ಯಕ್ಷದಲ್ಲಿ ಶತ್ರುಗಳಿಂದ ಸೋತು ನೆಲದಲ್ಲಿ ಬಿದ್ದೆನು. ಈಗ ಮತ್ತೆ ಸ್ತ್ರೀಗೆ ಪತಿಯಾಗಬೇಕಾಗಿದೆ. ಇದು ಬಹಳ ವಿಷಮವಾದ ಪ್ರಸಂಗವಾಗಿರುವುದು.

ತಥಾಪಿ ಕಿಂ ಕರೋಮ್ಯೇಷ ಸತ್ಯಪಾಶವಶಂಗತಃ ।
ಕರಿಷ್ಯಾಮಿ ಯಥಾತ್ಥ ತ್ವಂ ಭುಜ್ಯತಾಂ ನಿಜಶಾಸನಮ್ ॥೩೩॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇಽವಿಕ್ಷಿಚ್ಚರಿತೇ ದ್ವಾವಿಂಶತ್ಯಧಿಕಶತತಮೋಽಧ್ಯಾಯಃ

---

೩೩. ಆದರೂ ನಾನೀಗ ಮಾಡುವುದೇನು? ಸತ್ಯವೆಂಬ ಪಾಶಕ್ಕೆ ಸಿಲುಕಿದ ನಾನು ನೀನು ಆಜ್ಞಾಪಿಸುತ್ತಿರುವಂತೆ ಪತ್ನೀ ಪಾಣಿಗ್ರಹಣವನ್ನು ಮಾಡಿಕೊಳ್ಳುವೆನು. ಆದ್ದರಿಂದ ನಿನ್ನಿಂದ ನಿನ್ನ ಶಾಸನವಿಷಯವು ಭುಂಜಿಸಲ್ಪಡಲಿ.

ಮಾರ್ಕಂಡೇಯ ಮಹಾಪುರಾಣದಲ್ಲಿ ನೂರ ಇಪ್ಪತ್ತೆರಡನೆಯ ಅಧ್ಯಾಯವು ಮುಗಿದುದು.

॥ ಓಂ ಶ್ರೀ ದುರ್ಗಾಯೈ ನಮಃ ॥

ಮಾರ್ಕಂಡೇಯ ಪುರಾಣಂ

ತ್ರಯೋವಿಂಶತ್ಯಧಿಕಶತತಮೋಽಧ್ಯಾಯಃ

(ಅವಿಕ್ಷಿತೇ ದೇವ್ಯೈರ್ವರದಾನಮ್)

ಮಾರ್ಕಣ್ಡೇಯ ಉವಾಚ :—

ಕದಾಚಿದ್ರಾಜಪುತ್ರೋಽಸೌ ಮೃಗಯಾಮಚರದ್ವನೇ ।
ಮೃಗಾನ್ವಿಧ್ಯನ್ವರಾಹಾಂಶ್ಚ ಶಾರ್ದೂಲಾದೀಂಶ್ಚ ದಂಷ್ಟ್ರಿಣಃ ॥೧॥

ಶುಶ್ರಾವ ಸಹಸಾ ಶಬ್ದಂ ತ್ರಾಹಿ ತ್ರಾಹೀತಿ ಯೋಷಿತಃ ।
ವಿಕ್ರೋಶನ್ತ್ಯಾಃ ಸುಬಹುಶೋ ಭಯಗದ್ಗದಮುಚ್ಚಕೈಃ ॥೨॥

ನೂರಇಪ್ಪತ್ತಮೂರನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಹೇಳಿದನು :—

೧. ಒಂದು ಸಮಯದಲ್ಲಿ ರಾಜಕುಮಾರನಾದ ಅವಿಕ್ಷಿತನು ಜಿಂಕೆ, ಕಾಡುಹಂದಿ ಮತ್ತು ಕೋರೆಹಲ್ಲುಗಳಿಂದ ಕೂಡಿದ ಶಾರ್ದೂಲ ಮುಂತಾದ ಪ್ರಾಣಿಗಳನ್ನು ವಧಿಸುತ್ತ ಕಾಡಿನಲ್ಲಿ ಬೇಟೆಯನ್ನಾಡಿದನು.

೨. ಆಗ ಭಯ ಗದ್ಗದಗಳಿಂದ ಕೂಡಿ ಗಟ್ಟಿಯಾಗಿ ಮೇಲೆ ಮೇಲೆ ಅನೇಕ ಸಲ ಕೂಗಿಕೊಳ್ಳುತ್ತಿದ್ದ ಒಬ್ಬಳು ನಾರಿಯು " ಕಾಪಾಡು, ಕಾಪಾಡು " ಎಂಬ ಆರ್ತನಾದವನ್ನು ಆಕಸ್ಮಿಕವಾಗಿ ಕೇಳಿದನು.

ಮಾ ಭೈರ್ಮಾ ಭೈರಿತಿ ವದನ್ರಾಜಪುತ್ರಃ ಸ ವೇಗಿತಃ ।
ಚೋದಯಾಮಾಸ ತುರಗಂ ಯತಃ ಶಬ್ದಃ ಸಮಾಗತಃ ॥೩॥

ತತಶ್ಚ ಸಾಪಿ ಚುಕ್ರೋಶ ಕನ್ಯಕಾ ವಿಜನೇ ವನೇ ।
ಗೃಹೀತಾ ದನುಪುತ್ರೇಣ ದೃಢಕೇಶೇನ ಮಾನಿನೀ ॥೪॥

ಕರನ್ಧಮಸುತಸ್ಯಾಹಂ ಭಾರ್ಯಾ ಚಾಹಮವಿಕ್ಷಿತಃ ।
ಹರತ್ಯನಾರ್ಯೋ ವಿಪಿನೇ ಪೃಥಿವೀಶಸ್ಯ ಧೀಮತಃ ॥೫॥

ಯಸ್ಯ ಸರ್ವೇ ಮಹೀಪಾಲಾಸ್ತಥಾ ಗನ್ಧರ್ವಗುಹ್ಯಕಾಃ ।
ನ ಸಮರ್ಥಾಃ ಪುರಃ ಸ್ಥಾತುಂ ತಸ್ಯ ಭಾರ್ಯಾ ಹೃತಾಸ್ಮ್ಯಹಮ್ ॥೬॥

ಯಸ್ಯ ಮೃತ್ಯೋರಿವ ಕ್ರೋಧಃ ಶಕ್ರಸ್ಯೇವ ಪರಾಕ್ರಮಃ ।
ಕರನ್ಧಮಸುತಸ್ಯೈಷಾ ತಸ್ಯ ಭಾರ್ಯಾ ಹೃತಾಸ್ಮ್ಯಹಮ್ ॥೭॥

---

೩. ಆಗ ರಾಜಕುಮಾರನು "ಹೆದರಬೇಡ, ಹೆದರಬೇಡ" ಎನ್ನುತ್ತ ಹೆಚ್ಚಾದ ವೇಗವನ್ನು ತೆಗೆದುಕೊಂಡವನಾಗಿ ಯಾವ ದಿಕ್ಕಿನಲ್ಲಿ ಆ ಆರ್ತನಾದವು ಕೇಳಿಸಿತೋ ಆ ಕಡೆಗೆ ಕುದುರೆಯನ್ನು ಓಡಿಸಿದನು.

೪. ತರುವಾಯ ನಿರ್ಜನವಾದ ಅರಣ್ಯದಲ್ಲಿ ದನುವಿನ ಪುತ್ರನಾದ ದೃಢಕೇಶ ಎಂಬುವನಿಂದ ಬಲಾತ್ಕಾರವಾಗಿ ಗ್ರಹಿಸಲ್ಪಟ್ಟ ಮಾನವತಿಯಾದ ಆ ಕನ್ನಿಕೆಯು ಹಾಗೆಯೇ ಮತ್ತೆ ಕೂಗಿದಳು.

೫. ಪೃಥಿವೀಶಾಸಕನೂ, ಪ್ರಜ್ಞಾವಂತನೂ ಮತ್ತು ಕರಂಧಮರಾಜನ ಪುತ್ರನೂ ಆದ ಅವಿಕ್ಷಿತನ ಭಾರ್ಯೆಯು ನಾನು. ಈ ನಿರ್ಜನ ಅರಣ್ಯದಲ್ಲಿ ಅನಾಥೆಯಂತಿದ್ದ ನನ್ನನ್ನು ನೀಚನು ಅಪಹರಿಸುತ್ತಿರುವನು.

೬. ಯಾವ ವೀರನ ಎದುರಿನಲ್ಲಿ ಎಲ್ಲ ರಾಜರು, ಗಂಧರ್ವರು ಮತ್ತು ಗುಹ್ಯಕರು ಕೂಡ ಯುದ್ಧಕ್ಕೆ ನಿಲ್ಲಲು ಸಮರ್ಥರಾಗಿಲ್ಲವೋ, ಅಂತಹ ವೀರ-ಪುರುಷನ ಭಾರ್ಯೆಯಾದ ನಾನು ಅಪಹರಿಸಲ್ಪಟ್ಟಿರುವೆನು.

೭. ಯಾವ ವೀರನಲ್ಲಿ ಮೃತ್ಯುವಿನಂತೆ ಅಮೋಘವಾದ ಕೋಪವಿರುವುದೋ; ಯಾವ ವೀರನಲ್ಲಿ ಇಂದ್ರನಿಗೆ ಸಮಾನವಾದ ಪರಾಕ್ರಮವಿರುವುದೋ, ಅಂತಹ ಕರಂಧಮನ ಪುತ್ರನಾದ ಅವಿಕ್ಷಿತಕುಮಾರನ ಪತ್ನಿಯಾದ ನಾನು ಅಪಹರಿಸಲ್ಪಡುತ್ತಿರುವೆನು.

ಮಾರ್ಕಣ್ಡೇಯ ಉವಾಚ :—

ಇತ್ಯಾಕರ್ಣ್ಯ ಮಹೀಪಾಲತನಯಃ ಸ ಶರಾಸನೀ ।
ಚಿನ್ತಯಾಮಾಸ ಕಿಮಿದಂ ಮಮ ಭಾರ್ಯಾತ್ರ ಕಾನನೇ ॥೮॥

ಮಾಯೇಯಂ ರಕ್ಷಸಾಂ ನೂನಂ ದುಷ್ಟಾನಾಂ ಕಾನನೌಕಸಾಮ್ ।
ಅಥವಾ ಗತ ಏವಾಹಂ ಸರ್ವಂ ವೇತ್ಸ್ಯಾಮಿ ಕಾರಣಮ್ ॥೯॥

ಮಾರ್ಕಣ್ಡೇಯ ಉವಾಚ :—

ತ್ವರಿತಃ ಸ ತತೋ ಗತ್ವಾ ದದರ್ಶಾತಿಮನೋರಮಾಮ್ ।
ಕಾನನೇ ಕನ್ಯಕಾಮೇಕಾಂ ಸರ್ವಾಲಙ್ಕಾರಭೂಷಿತಾಮ್ ॥೧೦॥

ಗೃಹೀತಾಂ ದನುಪುತ್ರೇಣ ದೃಢಕೇಶೇನ ದಣ್ಡಿನಾ ।
ತ್ರಾಹಿ ತ್ರಾಹೀತಿ ಕರುಣಂ ವಿಕ್ರೋಶನ್ತೀಂ ಪುನಃ ಪುನಃ ॥೧೧॥

ಮಾರ್ಕಂಡೇಯ ಮುನಿಯು ಹೇಳಿದನು :—

೮. ಕರಂಧಮರಾಜನ ಪುತ್ರನೂ, ಬಿಲ್ಲನ್ನು ಧರಿಸಿದವನೂ ಆದ ಅವಿಕ್ಷಿತನು ಈ ವಚನವನ್ನು ಕೇಳಿ " ಇದೇನಿರಬಹುದು ! ಈ ಕಾಡಿನಲ್ಲಿ ನನ್ನ ಭಾರ್ಯೆಯು ಯಾರಿರುವಳು ! ಎಂದು ಚಿಂತಿಸಿದನು.

೯. ಅರಣ್ಯದಲ್ಲಿ ವಾಸಮಾಡುವ ದುಷ್ಟರಾಕ್ಷಸರ ಮಾಯೆಯಾಗಿರಬಹುದು ! ಇದು ನಿಜ ! ಅಥವಾ ನಾನು ಅಲ್ಲಿಗೆ ಹೋದವನು ಇದೆಲ್ಲದರ ಕಾರಣವನ್ನು ಅರಿಯುವೆನು, ಈಗೇಕೆ ಚಿಂತೆಯು.

ಮಾರ್ಕಂಡೇಯ ಮುನಿಯು ಹೇಳಿದನು :—

೧೦. ತರುವಾಯ ರಾಜಕುಮಾರನು ಬಹಳ ತ್ವರೆಯಿಂದ ಅಲ್ಲಿಗೆ ಹೋಗಿ ಕಾಡಿನಲ್ಲಿ ಅತ್ಯಂತ ಮನೋಹರಳೂ ಸಮಸ್ತ ಅಲಂಕಾರಗಳಿಂದ ಶೋಭಿತಳೂ ಆದ ಒಬ್ಬಳು ಕನ್ನಿಕೆಯನ್ನು ಕಂಡನು.

೧೧. ಆಗ ದಂಡಧಾರಿಯೂ ಮತ್ತು ದನುವಿನ ಪುತ್ರನೂ ಆದ ದೃಢಕೇಶ ಎಂಬುವನಿಂದ ಗ್ರಹಿಸಲ್ಪಟ್ಟ ಆ ಕನ್ಯೆಯು " ಕಾಪಾಡು, ಕಾಪಾಡು " ಎಂದು ಮತ್ತೆ ಮತ್ತೆ ಬಲು ದೈನ್ಯದಿಂದ ಕೂಗುತ್ತಿದ್ದಳು.

ಮಾ ಭೈರಿತಿ ಸ ತಾಮಾಹ ಹತೋಽಸೀತಿ ಚ ತಂ ವದನ್ ।
ಶಾಸತೀಮಾಂ ಮಹೀಂ ದುಷ್ಟಃ ಕೋ ದೂಯೇತ ಕರನ್ಧಮೇ ॥೧೨॥

ಯಸ್ಯ ಪ್ರತಾಪಾವನತಾ ಭುವಿ ಸರ್ವೇ ಮಹೀಕ್ಷಿತಃ ॥೧೩॥

ತತಸ್ತಮಾಗತಂ ದೃಷ್ಟ್ವಾ ಗೃಹೀತವರಕಾರ್ಮುಕಮ್ ।
ಮಾಂ ತ್ರಾಹೀತ್ಯಾಹ ತನ್ವಙ್ಗೀ ಹತಾಸ್ಮ್ಯೇಷೇತಿ ಚಾಸಕೃತ್ ॥೧೪॥

ರಾಜ್ಞಃ ಕರನ್ಧಮಸ್ಯಾಹಂ ಸ್ನುಷಾ ಭಾರ್ಯಾಪ್ಯವಿಕ್ಷಿತಃ ।
ಹೃತಾಸ್ಮ್ಯೇತೇನ ದುಷ್ಟೇನ ಸನಾಥಾನಾಥವದ್ವನೇ ॥೧೫॥

---

೧೨. ಅವಿಕ್ಷಿತನು ಆ ಕನ್ಯೆಗೆ “ ಭಯಪಡಬೇಡ ” ಎನ್ನುತ್ತ ಅಭಯವನ್ನಿತ್ತನು. ಮತ್ತು ರಾಕ್ಷಸನನ್ನು ಕುರಿತು “ ದುಷ್ಟನೇ ! ಕರಂಧಮರಾಜನು ಭೂಮಂಡಲವನ್ನು ಆಳುತ್ತಿರಲು ಯಾರು ದುಃಖಪಡುವನು ? ನೀಚನೇ ! ನೀನು ಹತನಾದೆ ” ಎಂದು ಹೇಳಿದನು.

೧೩. ನೀಚರಾಕ್ಷಸನೇ ! ಭೂಮಿಯಲ್ಲಿರುವ ಸಮಸ್ತ ರಾಜರು ಯಾವ ಕರಂಧಮರಾಜನ ಪ್ರತಾಪಕ್ಕೆ ತಗ್ಗಿ ನಡೆಯುವರೋ ಅಂತಹ ಕರಂಧಮನ ರಾಜ್ಯಶಾಸನದಲ್ಲಿ ಯಾರು ತಾನೇ ದುಃಖಭಾಗಿಗಳಾಗುವರು ?

೧೪. ತರುವಾಯ ದೃಢವಾದ ಬಿಲ್ಲನ್ನು ಧರಿಸಿಕೊಂಡು ಬಂದಿರುವ ಅವಿಕ್ಷಿತನನ್ನು ಕಂಡು ಕೃಶಾಂಗಿಯಾದ ಕನ್ಯೆಯು “ ಈ ನೀಚನಿಂದ ನಾನು ಅಪಹರಿಸಲ್ಪಟ್ಟಿದ್ದೇನೆ, ನನ್ನನ್ನು ರಕ್ಷಿಸು ” ಎಂದು ಮತ್ತೆ ಮತ್ತೆ ಬೇಡಿಕೊಂಡಳು.

೧೫. ನಾನು ಮಹಾರಾಜನಾದ ಕರಂಧಮನ ಸೊಸೆಯೂ ಅವಿಕ್ಷಿತನ ಪತ್ನಿಯೂ ಆಗಿರುವೆನು. ಹೀಗೆ ಸನಾಥಳಾದ ನಾನು ಈ ಕಾಡಿನಲ್ಲಿ ಅನಾಥಳಂತೆ ಈ ದುಷ್ಟರಾಕ್ಷಸನಿಂದ ಅಪಹರಿಸಲ್ಪಟ್ಟಿರುವೆನು.

ಮಾರ್ಕಣ್ಡೇಯ ಉವಾಚ :—

ತತೋ ವಿಮಮೃಶೇ ವಾಕ್ಯಮವಿಕ್ಷಿತ್ಸ ತಥೋದಿತಮ್ ।
ಕಥಮೇಷಾ ಹಿ ಮೇ ಭಾರ್ಯಾ ಸ್ನುಷಾ ತಾತಸ್ಯ ವಾ ಕಥಮ್ ॥೧೬॥

ಅಥವಾ ಮೋಚಯಾಮ್ಯೇತಾಂ ತನ್ವೀಂ ವೇತ್ಸ್ಯಾಮಿ ತತ್ಪುನಃ ।
ಕ್ಷತ್ರಿಯೈರ್ಧಾರ್ಯತೇ ಶಸ್ತ್ರಮಾರ್ತಾನಾಂ ತ್ರಾಣಕಾರಣಾತ್ ॥೧೭॥

ತತಃ ಕ್ರುದ್ಧೋಽಬ್ರವೀದ್ವೀರೋ ದಾನವಂ ತಂ ಸುದುರ್ಮತಿಮ್ ।
ಜೀವನ್ಗಚ್ಛ ವಿಮುಚ್ಯೈನಾಮನ್ಯಥಾ ನ ಭವಿಷ್ಯಸಿ ॥೧೮॥

ತತಃ ಸ ತಾಂ ವಿಹಾಯೋಚ್ಚೈರ್ದಣ್ಡಮುತ್ಕ್ಷಿಪ್ಯ ದಾನವಃ ।
ತಮಭ್ಯಧಾವತ್ಸೋಽಪ್ಯೇನಂ ಶರವರ್ಷೈರವಾಕಿರತ್ ॥೧೯॥

ಮಾರ್ಕಂಡೇಯ ಮುನಿಯು ಹೇಳಿದನು :—

೧೬. ತರುವಾಯ ಆ ಅವಿಕ್ಷಿತಕುಮಾರನು ಕನ್ಯೆಯಿಂದ ನುಡಿಯಲ್ಪಟ್ಟ ಆ ವಾಕ್ಯವನ್ನು ವಿಮರ್ಶಿಸಿದನು. ಈಕೆಯು ನನ್ನ ಭಾರ್ಯೆಯೆಂಬುದು ಹೇಗೆ? ಅಥವಾ ನನ್ನ ತಂದೆಗೆ ಸೊಸೆಯು ಹೇಗೆ?

೧೭. ಅಥವಾ ಮೊದಲು ಈ ತನ್ವಿಯನ್ನು ರಾಕ್ಷಸನಿಂದ ಬಿಡಿಸುವೆನು. ಮತ್ತೆ ಈ ಎಲ್ಲ ಸಂಗತಿಯನ್ನು ತಿಳಿದುಕೊಳ್ಳುವೆನು. ನೊಂದವರನ್ನು ರಕ್ಷಿಸುವ ಸಲುವಾಗಿಯೇ ಕ್ಷತ್ರಿಯರಿಂದ ಶಸ್ತ್ರವು ಧರಿಸಲ್ಪಡುವುದು.

೧೮. ಅನಂತರದಲ್ಲಿ ವೀರನಾದ ಅವಿಕ್ಷಿತನು ಕೋಪತಾಳಿದವನಾಗಿ ಅವಿವೇಕದಿಂದಿದ್ದ ಆ ದಾನವನನ್ನು ಕುರಿತು " ನೀಚನೇ! ಇವಳನ್ನು ಬಿಟ್ಟು ಜೀವಂತನಾಗಿ ಹಿಂದಕ್ಕೆ ಹೋಗು, ಇಲ್ಲದಿದ್ದರೆ ನೀನು ಬದುಕಲಾರೆ " ಎಂದು ಹೇಳಿದನು.

೧೯. ಆಮೇಲೆ ದೃಢಕೇಶದಾನವನು ಆ ತನ್ವಿಯನ್ನು ಬಿಟ್ಟು ಕೈಯ್ಯಲ್ಲಿದ್ದ ದಂಡವನ್ನು ಮೇಲಕ್ಕೆ ಎತ್ತಿಕೊಂಡು ಅವಿಕ್ಷಿತರಾಜಕುಮಾರನನ್ನು ಅಟ್ಟಿಕೊಂಡು ಹೋದನು. ಅವಿಕ್ಷಿತನು ದಾನವನನ್ನು ಬಾಣವೃಷ್ಟಿಯಿಂದ ಮುಚ್ಚಿಹಾಕಿದ

ಸ ವಾರ್ಯಮಾಣೋ ಬಾಣೌಘೈರ್ದಾನವೋಽತಿಮದಾನ್ವಿತಃ ।
ರಾಜಪುತ್ರಾಯ ಚಿಕ್ಷೇಪ ದಣ್ಡಂ ಶಙ್ಕುಶತಾವೃತಮ್ ॥೨೦॥

ತಮಾಪತನ್ತಂ ಚಿಚ್ಛೇದ ಶರೈರ್ಭೂಪಸುತಸ್ತತಃ ।
ಸೋಽಪ್ಯಾಸನ್ನಂ ಗೃಹೀತ್ವೋಚ್ಚೈರ್ದ್ರುಮಮಾಜೌ ವ್ಯವಸ್ಥಿತಃ ॥೨೧॥

ಸೃಜತಃ ಶರವರ್ಷಾಣಿ ತಂ ಚಿಕ್ಷೇಪ ತತೋ ದ್ರುಮಮ್ ।
ಸ ಚ ತಂ ತಿಲಶಶ್ಚಕ್ರೇ ಭಲ್ಲೈಃ ಕಾರ್ಮುಕನೋಽಚಿತೈಃ ॥೨೨॥

ತತಶ್ಚಿಕ್ಷೇಪ ಚ ಶಿಲಾಂ ರಾಜಪುತ್ರಾಯ ದಾನವಃ ।
ಸಾಪಿ ಮೋಘಾ ಪಪಾತೋರ್ವ್ಯಾಮುಜ್ಝಿತಾ ತೇನ ಲಾಘವಾತ್ ॥೨೩॥

---

೨೦. ಅತಿಯಾದ ಮದದಿಂದ ಕೂಡಿದ ವೃಥಕೇಶದಾನವನು ಬಾಣ-ರಾಶಿಯಿಂದ ತಡೆಯಲ್ಪಟ್ಟವನಾಗಿ ನೂರಾರು ಮುಳ್ಳುಗಳಿಂದ ಕೂಡಿದ ದಂಡಾಯುಧವನ್ನು ರಾಜಪುತ್ರನ ಮೇಲೆ ಎಸೆದನು.

೨೧. ಆಗ ರಾಜಕುಮಾರನು ತನ್ನ ಮೇಲೆ ಬರುತ್ತಿದ್ದ ದಂಡವನ್ನು ತನ್ನ ಬಾಣಗಳಿಂದ ಕತ್ತರಿಸಿದನು ರಾಕ್ಷಸನು ಮತ್ತೆ ಹತ್ತಿರದಲ್ಲಿದ್ದ ಎತ್ತರವಾದ ಒಂದು ಮರವನ್ನು ಕಿತ್ತುಕೊಂಡು ಯುದ್ಧಕ್ಕೆ ನಿಂತನು.

೨೨. ಮತ್ತು ತನ್ನ ಮೇಲೆ ಬಾಣಗಳ ಮಳೆಯನ್ನು ಕರೆಯುತ್ತಿದ್ದ ರಾಜಕುಮಾರನ ಮೇಲೆ ಮರವನ್ನು ಪ್ರಯೋಗಿಸಿದನು. ಆಗ ರಾಜಕುಮಾರನು ಬಿಲ್ಲಿನ ಮೂಲಕವಾಗಿ ಬಿಟ್ಟ ಭಲ್ಲಾಯುಧದಿಂದ ವೃಕ್ಷವನ್ನು ಚೂರು ಚೂರು ಮಾಡಿದನು.

೨೩. ತರುವಾಯ ದಾನವನು ಅವಿಕ್ಷಿತನ ಮೇಲೆ ಒಂದು ಬಂಡೆಯನ್ನು ಎತ್ತಿಹಾಕಿದನು. ಅದು ಅವಿಕ್ಷಿತನಿಂದ ಬಲುಲಾಘವದಿಂದ ಗುರಿತಪ್ಪಿಸಲ್ಪಟ್ಟದ್ದಾಗಿ ವ್ಯರ್ಥವಾಗಿ ನೆಲದ ಮೇಲೆ ಬಿದ್ದಿತು.

ರಾಜಪುತ್ರಾಯ ಕುಪಿತೋ ಯದ್ಯಚ್ಛಿಕ್ಷೇಪ ದಾನವಃ ।
ತತ್ತಚ್ಚಿಚ್ಛೇದ ಬಾಣೌಘೈರ್ಭೃತ್ಸೂನುಃ ಸ್ವಲೀಲಯಾ ॥೨೪॥

ತತೋ ವಿಚ್ಛಿನ್ನದಣ್ಡೋಽಸೌ ವಿಚ್ಛಿನ್ನಸಕಲಾಯುಧಃ ।
ಮುಷ್ಟಿಮುದ್ಯಮ್ಯ ಸಕ್ರೋಧೋ ರಾಜಪುತ್ರಮಧಾವತ ॥೨೫॥

ತಸ್ಯಾಪತತ ಏವಾಸೌ ಕರನ್ಧಮಸುತಃ ಶಿರಃ ।
ಛಿತ್ವಾ ವೇತಸಪತ್ರೇಣ ಪಾತಯಾಮಾಸ ವೈ ಭುವಿ ॥೨೬॥

ತಸ್ಮಿನ್ನಿಹತೇ ದೇವೈರ್ದಾನವೇ ದುಷ್ಟಚೇಷ್ಟಿತೇ ।
ಕರನ್ಧಮಸುತಃ ಸರ್ವೈಃ ಸಾಧು ಸಾಧ್ವಿತಿ ಭಾಷಿತಃ ॥೨೭॥

ವರಂ ವೃಣೀಷ್ವೇತಿ ತದಾ ದೇವೈರುಕ್ತೋ ನೃಪಾತ್ಮಜಃ ।
ವವ್ರೇ ಪುತ್ರಂ ಮಹಾವೀರ್ಯಂ ಪಿತುಃ ಪ್ರಿಯಚಿಕೀರ್ಷಯಾ ॥೨೮॥

---

೨೪. ಮತ್ತೆ ಮತ್ತೆ ಕೋಪಗೊಂಡ ದಾನವನು ರಾಜಪುತ್ರನ ಮೇಲೆ ಯಾವ ಯಾವ ಆಯುಧವನ್ನು ಪ್ರಯೋಗಿಸಿದನೋ ಆಯಾಯ ಆಯುಧವನ್ನು ರಾಜಪುತ್ರನು ಲೀಲೆಯಿಂದ ಬಿಟ್ಟ ತನ್ನ ಬಾಣಗಳಿಂದ ಕತ್ತರಿಸಿದನು.

೨೫. ತರುವಾಯ ಛಿನ್ನವಾದ ದಂಡಾಯುಧವುಳ್ಳವನೂ, ಭಂಗ-ಹೊಂದಿದ ಸಕಲ ಆಯುಧಗಳುಳ್ಳವನೂ ಆದ ದಾನವನು ಕೋಪಾವೇಶ-ವುಳ್ಳವನಾಗಿ ಬಿಗಿಮುಷ್ಟಿಯನ್ನು ಧರಿಸಿ ರಾಜಪುತ್ರನ ಮೇಲೆ ಓಡಿಬಂದನು.

೨೬. ಹಾಗೆ ದಾನವನು ತನ್ನ ಬಳಿಗೆ ಓಡಿಬರುತ್ತಿರುವಷ್ಟರಲ್ಲಿ ಕರಂಧಮನ ಪುತ್ರನಾದ ಅವಿಕ್ಷಿತನು ವೇತಸಪತ್ರವೆಂಬ ಆಯುಧದಿಂದ ದಾನವನ ಶಿರವನ್ನು ಕತ್ತರಿಸಿ ನೆಲಕ್ಕೆ ಉರುಳಿಸಿದನು.

೨೭. ಹೀಗೆ ನೀಚವಾದ ವರ್ತನೆಯುಳ್ಳ, ದುಷ್ಟನಾದ ಆ ದೃಢಕೇಶ-ರಾಕ್ಷಸನು ಹತನಾಗಲು ಕರಂಧಮಪುತ್ರನಾದ ಅವಿಕ್ಷಿತನು ಸಮಸ್ತ ದೇವತೆಗಳಿಂದ "ಭಲಾ ! ಭಲಾ ! " ಎಂದು ಶ್ಲಾಘಿಸಲ್ಪಟ್ಟನು.

೨೮. ಮತ್ತು ರಾಜಪುತ್ರನು ಸಕಲ ದೇವತೆಗಳಿಂದ "ಇಷ್ಟವಾದ ವರವನ್ನು ಪ್ರಾರ್ಥಿಸು" ಎಂದು ಹೇಳಲ್ಪಟ್ಟನು. ಆಗ ಅವನು ತಂದೆಗೆ ಪ್ರಿಯವನ್ನುಂಟುಮಾಡುವ ನಿಮಿತ್ತದಿಂದ ಮಹಾವೀರ್ಯಸಂಪನ್ನನಾದ ಪುತ್ರನನ್ನು ವರಿಸಿದನು.

ದೇವಾ ಊಚುಃ :—

ಭವಿಷ್ಯತಿ ಹಿ ತೇ ಪುತ್ರಶ್ಚಕ್ರವರ್ತೀ ಮಹಾಬಲಃ ।
ಅಸ್ಯಾಮೇವ ಹಿ ಕನ್ಯಾಯಾಂ ಮೋಕ್ಷಿತಾಯಾಂ ತ್ವಯಾನಘ ॥೨೯॥

ರಾಜಪುತ್ರ ಉವಾಚ :—

ಪಿತ್ರಾಹಂ ಸತ್ಯಪಾಶೇನ ಬದ್ಧ ಇಚ್ಛಾಮ್ಯಹಂ ಸುತಮ್ ।
ರಾಜಭಿರ್ನಿರ್ಜಿತೇನಾಜೌ ತ್ಯಕ್ತೋ ಮೇ ದಾರಸಙ್ಗ್ರಹಃ ॥೩೦॥

ಸಾ ಚ ಮೇ ಯಾವತಾ ತ್ಯಕ್ತಾ ವಿಶಾಲನೃಪತೇಃ ಸುತಾ ।
ತಯಾ ಚ ಮತ್ಕೃತೇ ತ್ಯಕ್ತೋ ಮಾಮೃತೇ ನರಸಙ್ಗಮಃ ॥೩೧॥

ತತ್ಕಥಂ ತಾಮುಪಾಸ್ಯಾದ್ಯ ವಿಶಾಲತನಯಾಮಹಮ್ ।
ನೃಶಂಸಾತ್ಮಾ ಕರಿಷ್ಯಾಮಿ ಅನ್ಯನಾರೀಪರಿಗ್ರಹಮ್ ॥೩೨॥

ದೇವತೆಗಳು ಇಂತೆಂದರು :—

೨೯. ನಿಷ್ಕಲಂಕನಾದ ರಾಜಕುಮಾರನೇ ! ನಿನ್ನಿಂದ ಬಿಡಿಸಲ್ಪಟ್ಟಿರುವ ಈ ಕನ್ಯೆಯಲ್ಲಿ ಮಹಾಬಲಿಷ್ಠನೂ, ಚಕ್ರವರ್ತಿಯಾಗುವಂತಹವನೂ ಆದ ಸುಪುತ್ರನು ನಿನಗೆ ಜನಿಸುವನು.

ರಾಜಪುತ್ರನು ಹೇಳಿದನು :—

೩೦. ನನ್ನ ಜನಕನೆದುರಿನಲ್ಲಿ ಸತ್ಯವಚನಪಾಶದಿಂದ ಬದ್ಧನಾದ ನಾನು ಈಗ ಪುತ್ರನನ್ನು ಬಯಸುತ್ತಿರುವೆನು. ರಣರಂಗದಲ್ಲಿ ಶತ್ರುರಾಜರಿಂದ ಸೋತುಹೋದ ನಾನು ಪತ್ನೀಪಾಣಿಗ್ರಹಣವನ್ನು ತ್ಯಜಿಸಿರುವೆನು.

೩೧. ವಿಶಾಲಭೂಪಾಲಕನ ಪುತ್ರಿಯು ಯಾವ ಕಾರಣದಿಂದ ನನ್ನಿಂದ ತ್ಯಜಿಸಲ್ಪಟ್ಟಳೋ ಅದೇ ಕಾರಣದಿಂದ ನನಗೋಸ್ಕರ ಆಕೆಯು ನನ್ನನ್ನು ಬಿಟ್ಟು ಬೇರೆಯಾದ ಪತಿಯನ್ನು ವರಿಸಿ ವಿವಾಹವಾಗುವುದನ್ನು ತ್ಯಜಿಸಿರುವಳು.

೩೨. ಆದುದರಿಂದ ವಿಶಾಲರಾಜನ ಪುತ್ರಿಯಾದ ಆ ಕನ್ಯೆಯನ್ನು ಬಿಟ್ಟು ನಾನು ನಿರ್ದಯವಾದ ಕ್ರೂರಸ್ವಭಾವವುಳ್ಳವನಂತಾಗಿ ಹೇಗೆ ತಾನೇ ಅನ್ಯನಾರಿಯ ಪಾಣಿಗ್ರಹಣವನ್ನು ಮಾಡಿಕೊಳ್ಳಲಿ?

ದೇವಾ ಊಚುಃ :—

ಇಯಮೇವ ಹಿ ತೇ ಭಾರ್ಯಾ ಶ್ಲಾಘ್ಯತೇ ಯಾ ತ್ವಯಾ ಸದಾ ।
ವಿಶಾಲಸ್ಯ ಸುತಾ ಸುಭ್ರೂಸ್ತ್ವತ್ಕೃತೇ ಯಾಶ್ರಿತಾ ತಪಃ ॥೩೩॥

ಅಸ್ಯಾಮುತ್ಪತ್ಸ್ಯತೇ ವೀರಃ ಸಪ್ತದ್ವೀಪಪ್ರಸಾಧಕಃ ।
ಯಷ್ಟಾ ಯಜ್ಞಸಹಸ್ರಾಣಾಂ ಚಕ್ರವರ್ತೀ ಸುತಸ್ತವ ॥೩೪॥

ಮಾರ್ಕಣ್ಡೇಯ ಉವಾಚ :—

ಇತ್ಯುಚ್ಚಾರ್ಯ ಯಯುರ್ದೇವಾಃ ಕರನ್ಧಮಸುತಂ ದ್ವಿಜ ।
ಸೋಽಪ್ಯಾಹ ತಾಂ ತದಾ ಪತ್ನೀಂ ಕಥ್ಯತಾಂ ಭೀರು ಕಿಂ ತ್ವಿದಮ್ ॥೩೫॥

ಸಾ ಚಾಸ್ಮೈ ಕಥಯಾಮಾಸ ತ್ಯಕ್ತಾಹಂ ಭವತಾ ಯದಾ ।
ತ್ಯಕ್ತಬನ್ಧುಜನಾರಣ್ಯಂ ನಿರ್ವೇದಾತ್ಸಮುಪಾಗತಾ ॥೩೬॥

ದೇವತೆಗಳು ಇಂತೆಂದರು :—

೩೩. ನಿನ್ನಿಂದ ಯಾವಾಗಲೂ ಯಾವ ತರುಣಿಯು ಪ್ರಶಂಸಿಸಲ್ಪಡುವಳೋ ಅಂತಹ ವಿಶಾಲರಾಜನ ಪುತ್ರಿಯಾದ ಸುಂದರಿಯು ಇವಳೇ ಆಗಿರುವಳು. ಇವಳೇ ನಿನ್ನ ಭಾರ್ಯೆಯಾಗುವಳು. ಇವಳು ನಿನಗೋಸ್ಕರ ತಪವನ್ನು ಆಚರಿಸುತ್ತಿರುವಳು.

೩೪. ನಿನಗೆ ಈಕೆಯಲ್ಲಿ ವೀರ್ಯವಂತನೂ, ಏಳು ದ್ವೀಪಗಳನ್ನು ಆಳುವವನೂ, ಸಹಸ್ರಾರು ಯಜ್ಞಸಮಾರಂಭಗಳನ್ನು ಆಚರಿಸುವವನೂ ಆದ ಚಕ್ರವರ್ತಿಯಾಗುವಂತಹ ಪುತ್ರನು ಜನಿಸುವನು.

ಮಾರ್ಕಂಡೇಯ ಮುನಿಯು ಹೇಳಿದನು :—

೩೫. ದ್ವಿಜೋತ್ತಮನಾದ ಕ್ರೌಷ್ಟುಕಿಯೇ! ದೇವತೆಗಳು ಕರಂಧಮ ಪುತ್ರನಾದ ಅವಿಕ್ಷಿತನ ಸಂಗಡ ಈ ರೀತಿಯಾಗಿ ಹೇಳಿ ಹಿಂದಕ್ಕೆ ಹೊರಟುಹೋದರು. ಇತ್ತ ಅವಿಕ್ಷಿತನು ಪತ್ನಿಯನ್ನು ಕುರಿತು ಹೇಳಿದನು. ಭಯಶೀಲಳೆ! ಇದೇನು? ಹೇಳು.

೩೬. ಆಗ ಮುದತೀಕನ್ಯೆಯು ರಾಜಪುತ್ರನಿಗೆ ಹೇಳಿದಳು. ನಾನು ನಿನ್ನಿಂದ ಯಾವಾಗ ತ್ಯಜಿಸಲ್ಪಟ್ಟೆನೋ, ಆಗ ತ್ಯಜಿಸಿದ ಸಮಸ್ತ ಬಂಧು ಜನರುಳ್ಳವಳಾಗಿ ವೈರಾಗ್ಯದಿಂದ ಅರಣ್ಯಕ್ಕೆ ಬಂದೆನು.

ಅತ್ರಾಽಹಂ ತಪಸಾ ವೀರ ಕ್ಷೀಣಪ್ರಾಯಂ ಕಲೇಬರಮ್ ।
ತ್ಯಕ್ತುಕಾಮಾ ಸಮಭ್ಯೇತ್ಯ ದೇವದೂತೇನ ವಾರಿತಾ ॥೩೭॥

ಭವಿಷ್ಯತಿ ಚ ಪುತ್ರಸ್ತೇ ಚಕ್ರವರ್ತೀ ಮಹಾಬಲಃ ।
ಪ್ರೀಣಯಿಷ್ಯತಿ ಯೋ ದೇವಾನಸುರಾಂಶ್ಚ ಹನಿಷ್ಯತಿ ॥೩೮॥

ಇತಿ ದೇವಾಜ್ಞಯಾ ತೇನ ದೇವದೂತೇನ ವಾರಿತಾ ।
ನ ಸನ್ತ್ಯಕ್ತವತೀ ದೇಹಂ ತ್ವತ್ಸಙ್ಗಮಮನೋರಥಾ ॥೩೯॥

ಪರಶ್ವಶ್ಚ ಮಹಾಭಾಗ ಸ್ನಾತುಂ ಗಙ್ಗಾಹ್ರದಂ ಗತಾ ।
ಅವತೀರ್ಣಾ ವಿಕೃಷ್ಟಾಸ್ಮಿ ವೃದ್ಧನಾಗೇನ ಕೇನಚಿತ್ ॥೪೦॥

---

೩೭. ವೀರಕುಮಾರನೇ ! ಈ ಅರಣ್ಯದಲ್ಲಿ ನಾನು ತಪಶ್ಚರ್ಯೆಯಿಂದ ದುರ್ಬಲವೂ ಜೀರ್ಣವೂ ಆದ ದೇಹವನ್ನು ತ್ಯಜಿಸಲು ಇಷ್ಟಹೊಂದಿದೆನು. ಆಗ ದೇವದೂತನೊಬ್ಬನು ಬಂದು ದೇಹತ್ಯಾಗಮಾಡದಂತೆ ನನ್ನನ್ನು ತಡೆದನು.

೩೮. ಆಗ ದೇವದೂತನು ನನ್ನೆದುರು ಹೀಗೆ ಹೇಳಿ ನನ್ನನ್ನು ತಡೆದನು, ಯಾವ ಕುಮಾರನು ದೇವತೆಗಳನ್ನು ತೃಪ್ತಿಪಡಿಸುವನೋ, ಅಸುರರನ್ನು ಸಂಹರಿಸುವನೋ ಮತ್ತು ಮಹಾಬಲಿಷ್ಠನಾದ ಚಕ್ರವರ್ತಿಯಾಗುವನೋ ಅಂತಹವನು ನಿನಗೆ ಪುತ್ರನಾಗಿ ಜನಿಸುವನು.

೩೯. ಹೀಗೆಂದು ದೇವತೆಗಳು ಇತ್ತಿರುವ ಆಜ್ಞೆಯನ್ನು ನಿವೇದಿಸಿ ನಾನು ದೇವದೂತನಿಂದ ದೇಹತ್ಯಾಗವ್ಯಾಪಾರದಿಂದ ತಡೆಯಲ್ಪಟ್ಟೆನು. ಅದರಿಂದ ನಿನ್ನ ಸಂಗಮವು ದೊರೆಯುವ ಮನೋರಥವುಳ್ಳವಳಾಗಿ ದೇಹವನ್ನು ತ್ಯಜಿಸಲಿಲ್ಲ.

೪೦. ಎಲೈ ಮಹಾತ್ಮನೇ ! ದೇವದೂತನು ಹೊರಟುಹೋದ ಮಾರನೆಯ ದಿನ ಸ್ನಾನ ಮಾಡಲು ಗಂಗಾನದಿಯ ಮಡುವಿಗೆ ಇಳಿದ ನಾನು ಯಾವುದೋ ಒಂದು ಮುದಿಸರ್ಪದಿಂದ ಸೆಳೆಯಲ್ಪಟ್ಟೆನು.

ತತೋ ರಸಾತಲಂ ನೀತಾ ತೇನ ತತ್ರ ಚ ಮೇ ಪುರಃ ।
ನಾಗಾಃ ಸಹಸ್ರಶಸ್ತಸ್ಥುರ್ನಾಗಪತ್ನ್ಯಃ ಕುಮಾರಕಾಃ ॥೪೧॥

ತುಷ್ಟುವುರ್ಮಾಂ ಸಮಭ್ಯೇತ್ಯ ಮಾಮನ್ಯೇಽಪೂಜಯಂಸ್ತಥಾ ।
ಯಯಾಚಿರೇ ಸವಿನಯಂ ನಾಗಾ ಮಾಮಙ್ಗನಾಸ್ತಥಾ ॥೪೨॥

ಪ್ರಸಾದಂ ಕುರು ಸರ್ವೇಷಾಂ ತ್ವಮಸ್ಮಾಕಂ ಸುತಸ್ತ್ವಯಾ ।
ಅಪರಾಧಮುಪೇತಾನಾಂ ಸನ್ನಿವಾರ್ಯೋ ವಧೋನ್ಮುಖಃ ॥೪೩॥

ಅಪರಾಧಂ ಕರಿಷ್ಯನ್ತಿ ತ್ವತ್ಪುತ್ರಸ್ಯಾನಿಲಾಶನಾಃ ।
ತನ್ನಿಮಿತ್ತಂ ನಿವಾರ್ಯೋಽಸೌ ಪ್ರಸಾದಃ ಕ್ರಿಯತಾಮಿತಿ ॥೪೪॥

ತಥೇತಿ ಚ ಮಯಾ ಪ್ರೋಕ್ತೇ ದಿವ್ಯೈಃ ಪಾತಾಲಭೂಷಣೈಃ ।
ಭೂಷಿತಾಹಂ ತಥಾ ಪುಷ್ಪೈರ್ಗನ್ಧವಾಸೋಭಿರುತ್ತಮೈಃ ॥೪೫॥

---

೪೧. ನನ್ನನ್ನು ಸೆಳೆದ ಮುದಿ ಸರ್ಪವು ನನ್ನನ್ನು ಪಾತಾಳಕ್ಕೆ ತೆಗೆದುಕೊಂಡುಹೋಯಿತು. ಪಾತಾಳಲೋಕಕ್ಕೆ ಸೇರಿದ ನನ್ನ ಮುಂದೆ ಅನೇಕ ಸಹಸ್ರಾರು ನಾಗ, ನಾಗಕುಮಾರ ಮತ್ತು ನಾಗಪತ್ನಿಯರು ಕಾಣಿಸಿಕೊಂಡರು.

೪೨. ಆಗ ನನ್ನ ಬಳಿಗೆ ಬಂದು ನನ್ನನ್ನು ಸ್ತುತಿಮಾಡಿದರು. ಕೆಲವರು ನನ್ನನ್ನು ಪೂಜಿಸಿದರು. ಮತ್ತು ಕೆಲವರು ನಾಗ-ನಾಗಪತ್ನಿಯರು ಹಾಗೆ ನನ್ನ ಬಳಿಗೆ ಬಂದು ವಿನಯಪೂರ್ವಕವಾಗಿ ಪ್ರಾರ್ಥಿಸಿದರು.

೪೩. ನೀನು ನಮ್ಮೆಲ್ಲರಲ್ಲಿಯೂ ಅನುಗ್ರಹತೋರು. ನಿನ್ನ ಪುತ್ರನು ಅವನ ವಿಷಯದಲ್ಲಿ ಅಪರಾಧವೆಸಗುವ ನಮ್ಮೆಲ್ಲರನ್ನು ವಧಿಸಲು ಯತ್ನಮಾಡುವಾಗ ನೀನು ಅವನನ್ನು ತಡೆಯಬೇಕು.

೪೪. ವಾಯ್ವಾಹಾರಿಗಳಾದ ಸರ್ಪಗಳು ನಿನ್ನ ಪುತ್ರನ ವಿಷಯದಲ್ಲಿ ಅಪರಾಧವನ್ನು ಮಾಡುವುವು. ಆ ನಿಮಿತ್ತದಿಂದ ನಿನ್ನ ಪುತ್ರನು ಅವನ್ನು ವಧಿಸಲು ಹೊರಟಿರುವಾಗ ಅವನನ್ನು ತಡೆದು ನಮ್ಮಲ್ಲಿ ಅನುಗ್ರಹ ತೋರಿಸಬೇಕು.

೪೫. ಆಗ ನಾನು “ ಹಾಗೇ ಆಗಲಿ ” ಎಂದು ಅವರ ಪ್ರಾರ್ಥನೆಯನ್ನು ಒಪ್ಪಿಕೊಳ್ಳಲು ಅವರಿಂದ ಪಾತಾಳಲೋಕದ ದಿವ್ಯಭೂಷಣಗಳಿಂದಲೂ, ಉತ್ತಮವಾದ ಗಂಧ-ಮಾಲ್ಯ-ವಸ್ತ್ರಗಳಿಂದಲೂ ಅಲಂಕರಿಸಲ್ಪಟ್ಟೆನು.

ಸಮಾನೀತಾ ತಥಾ ಲೋಕಮಿಮಂ ತೇನಾನಿಲಾಶಿನಾ ।
ಪುರಾ ಯಥಾ ಕಾನ್ತಿಮತೀ ಪೂರ್ವವದ್ರೂಪಶಾಲಿನೀ ॥೪೬॥

ಇತಿ ರೂಪವತೀಂ ದೃಷ್ಟ್ವಾ ಸರ್ವಾಲಙ್ಕಾರಭೂಷಿತಾಮ್ ।
ಜಗ್ರಾಹ ದೃಢಕೇಶೋಽಯಂ ಹರ್ತುಕಾಮಃ ಸುದುರ್ಮತಿಃ ॥೪೭॥

ಯುಷ್ಮದ್ಬಾಹುಬಲೇನಾಹಂ ರಾಜಪುತ್ರ ವಿಮೋಕ್ಷಿತಾ ॥೪೮॥

ತತ್ಪ್ರಸೀದ ಮಹಾಬಾಹೋ ಮಾ ಪ್ರತೀಚ್ಛ ತ್ವಯಾ ಸಮಃ ।
ಭೂಲೋಕೇ ರಾಜಪುತ್ರೋಽನ್ಯೋ ನಾಸ್ತಿ ಸತ್ಯಂ ಬ್ರವೀಮ್ಯಹಮ್ ॥೪೯॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇಽವಿಕ್ಷಿಚ್ಚರಿತಂ ನಾಮ
ತ್ರಯೋವಿಂಶತ್ಯಧಿಕಶತತಮೋಽಧ್ಯಾಯಃ

---

೪೬. ಮತ್ತೆ ಆ ವೃದ್ಧನಾಗನಿಂದ ಅಲ್ಲಿಂದ ಈ ಲೋಕಕ್ಕೆ ತರಲ್ಪಟ್ಟೆನು. ಮತ್ತು ಪಾತಾಳಲೋಕದ ಭೂಷಣಗಳಿಂದ ಶೃಂಗರಿಸಲ್ಪಟ್ಟ ನಾನು ಹಿಂದೆ ಇದ್ದ ಕಾಂತಿ ಮತ್ತು ಒಪ್ಪುವ ರೂಪಗಳಿಂದ ಶೋಭಿಸುವವಳಾದೆನು.

೪೭. ಹೀಗೆ ರೂಪವತಿಯೂ ಸಕಲ ಅಲಂಕಾರಗಳಿಂದ ಭೂಷಿಸಲ್ಪಟ್ಟ-ವಳೂ ಆದ ನನ್ನನ್ನು ನೋಡಿ ವಿವೇಕಶೂನ್ಯನಾದ ಈ ದೃಢಕೇಶನೆಂಬ ದಾನವನು ಅಪಹರಿಸುವ ಇಷ್ಟದಿಂದ ನನ್ನನ್ನು ಗ್ರಹಿಸಿದನು.

೪೮. ರಾಜಪುತ್ರನೇ! ಹಾಗೆ ದೃಢಕೇಶದಾನವನ ಬಲಾತ್ಕಾರಕ್ಕೆ ಸಿಲುಕಿದ ನಾನು ನಿನ್ನ ಬಾಹುಬಲ ಪ್ರಭಾವದಿಂದ ಬಿಡಿಸಲ್ಪಟ್ಟಿರುವೆನು.

೪೯. ಮಹತ್ತಾದ ಬಾಹುಬಲದಿಂದ ಸಂಪನ್ನನಾದವನೇ! ಆದ್ದರಿಂದ ನೀನು ನನ್ನನ್ನು ಪರಿಗ್ರಹಿಸು. ನನ್ನಲ್ಲಿ ಕರುಣೆಯಿಡು. ನಿನಗೆ ಸಮಾನನಾದ ರಾಜಪುತ್ರನು ಭೂಲೋಕದಲ್ಲಿ ಬೇರೆ ಯಾರೂ ಇಲ್ಲ. ಇದು ಸತ್ಯವೆಂದು ನಾನು ಹೇಳುವೆನು.

ಮಾರ್ಕಂಡೇಯ ಮಹಾಪುರಾಣದಲ್ಲಿ ನೂರ ಇಪತ್ತಮೂರನೆಯ ಅಧ್ಯಾಯವು
ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಚತುರ್ವಿಂಶತ್ಯಧಿಕಶತತಮೋಽಧ್ಯಾಯಃ

(ಮರುತ್ತನಾಮಕ ಪುತ್ರೋತ್ಪತ್ತಿಃ)

ಮಾರ್ಕಣ್ಡೇಯ ಉವಾಚ :—

ಇತಿ ತಸ್ಯಾ ವಚಃ ಶ್ರುತ್ವಾ ಸ್ಮೃತ್ವಾ ಪಿತೃವಚಃ ಶುಭಮ್ |
ಕಿಮಿಚ್ಛಕೇ ಪ್ರತಿಜ್ಞಾತೇ ಯದುಕ್ತಂ ತೇನ ಭೂಭೃತಾ ||೧||

ಪ್ರತ್ಯುವಾಚ ಸ ತಾಂ ಕನ್ಯಾಮವಿಕ್ಷಿನ್ನೃಪತೇಃ ಸುತಃ |
ಸಾನುರಾಗಮನಾಃ ಕನ್ಯಾಂ ತ್ಯಕ್ತಭೋಗಾಂ ಚ ತತ್ಕೃತೇ ||೨||

ನೂರ ಇಪ್ಪತ್ತನಾಲ್ಕನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಹೇಳಿದನು :—

೧. ಹೀಗೆಂಬ ರಾಜಪುತ್ರಿಯ ವಚನವನ್ನು ಕೇಳಿದ ಅವಿಕ್ಷಿತ-ಕುಮಾರನು ಜನನಿಯ ಕಿಮಿಚ್ಛಕ ವ್ರತಾಂಗವಾಗಿ ಅರ್ಥಿಗಳಿಗೆ ಇಷ್ಟದಾನ ಪ್ರತಿಜ್ಞೆಯನ್ನು ತಾನು ಮಾಡುತ್ತಿರಲು ರಾಜನಾದ ಜನಕನು ಆಡಿದ ವಚನವನ್ನು ಸ್ಮರಿಸಿಕೊಂಡನು.

೨. ಮತ್ತು ಕರಂಧಮರಾಜನ ಪುತ್ರನಾದ ಅವಿಕ್ಷಿತಕುಮಾರನು ತನಗೋಸ್ಕರ ಸಕಲ ಭೋಗಗಳನ್ನು ತ್ಯಜಿಸಿದ ಆ ಕನ್ಯೆಯಲ್ಲಿ ಅನುರಾಗ-ಹೊಂದಿದ ಮಾನಸವುಳ್ಳವನಾಗಿ ಅವಳನ್ನು ಕುರಿತು ಹೇಳಿದನು.

ಯದಾಹಂ ತ್ಯಕ್ತವಾಂಸ್ತ್ವಂ ತ್ವಾಮರಾತಿಪರಾಜಿತಃ ।
ವಿಜಿತ್ಯ ಶತ್ರೂನ್ ಸಮ್ಪ್ರಾಪ್ತಾ ತ್ವಂ ಮಯಾತ್ರ ಕರೋಮಿ ಕಿಮ್॥೩॥

ಕನ್ಯೋವಾಚ :—

ಮಮ ಪಾಣಿಂ ಗೃಹಾಣ ತ್ವಂ ರಮಣೀಯೋಽತ್ರ ಕಾನನೇ ।
ಸಕಾಮಾಯಾಃ ಸಕಾಮೇನ ಸಙ್ಗಮೋ ಗುಣವಾನ್ಭವೇತ್ ॥೪॥

ರಾಜಪುತ್ರ ಉವಾಚ :—

ಏವಂ ಭವತು ಭದ್ರಂ ತೇ ವಿಧಿರೇವಾತ್ರ ಕಾರಣಮ್ ।
ಅನ್ಯಥಾ ಕಥಮನ್ಯತ್ರ ತ್ವಾಮಹಂ ಚ ಸಮಾಗತಃ ॥೫॥

---

೩. ನಾನು ಶತ್ರುಗಳಿಂದ ಅಪಜಯಹೊಂದಿ ಅವಮಾನಿತನಾದುದರಿಂದ ನಿನ್ನನ್ನು ತ್ಯಜಿಸಿದೆನು. ಆದರೆ ಈಗ ಶತ್ರುಗಳನ್ನು ಗೆದ್ದು ಮತ್ತೆ ನಿನ್ನನ್ನು ಹೊಂದುವಂತಾಗಿದೆ. ಈ ವಿಷಯದಲ್ಲಿ ನಾನೇನು ಮಾಡಲಿ?

ಕನ್ಯೆಯು ಇಂತೆಂದಳು :-

೪. ಮಹಾತ್ಮನೇ! ರಮಣೀಯವಾದ ಈ ಅರಣ್ಯಪ್ರದೇಶದಲ್ಲಿ ನೀನು ನನ್ನ ಪಾಣಿಗ್ರಹಣವನ್ನು ಮಾಡು. ನಿನ್ನನ್ನು ಕಾಮಿಸುತ್ತಿರುವ ನನ್ನಲ್ಲಿ ಅಂತೆಯೆ ಪ್ರೀತಿಯಿಂದ ಕೂಡಿದ ನಿನ್ನ ಸಂಗಮವು ಸುಪರಿಣಾಮವನ್ನುಂಟು-ಮಾಡುವುದು.

ರಾಜಪುತ್ರನು ಹೇಳಿದನು :—

೫. ಹಾಗಾಗಲಿ, ನಿನಗೆ ಮಂಗಳವು ದೊರೆಯಲಿ, ಇದೆಲ್ಲಕ್ಕೂ ವಿಧಿಯೇ ಕಾರಣವಾದುದು. ವಿಧಿಯ ಪ್ರೇರಣೆಯಿಲ್ಲದಿದ್ದರೆ ನಿನ್ನನ್ನು ತ್ಯಜಿಸಿದ ನಾನು ಬೇರೊಂದು ಕಡೆಯಲ್ಲಿ ಹೀಗೆ ಸೇರಿರುವುದು ಹೇಗೆ?

ಮಾರ್ಕಣ್ಡೇಯ ಉವಾಚ :—

ಏತಸ್ಮಿನ್ನನ್ತರೇ ಪ್ರಾಪ್ತೋ ಗನ್ಧರ್ವತನಯೋ ಮುನೇ ।
ವರಾಪ್ಸರೋಭಿಃ ಸಹಿತೋ ಗನ್ಧರ್ವೈರಪರೈರ್ವೃತಃ ॥೭॥

ಗನ್ಧರ್ವ ಉವಾಚ :—

ರಾಜಪುತ್ರ ಸುತೇಯಂ ಮೇ ಭಾಮಿನೀ ನಾಮ ಮಾನಿನೀ ।
ಅಭಿಶಾಪಾದಗಸ್ತ್ಯಸ್ಯ ವಿಶಾಲತನಯಾಭವತ್ ॥೭॥

ಬಾಲಭಾವೇನ ಯೋಽಗಸ್ತ್ಯಃ ಕೋಪಿತಃ ಕ್ರೀಡಮಾನಯಾ ।
ತತಸ್ತೇನ ತದಾ ಶಪ್ತಾ ಮಾನುಷೀ ತ್ವಂ ಭವಿಷ್ಯಸಿ ॥೮॥

ಪ್ರಸಾದಿತಃ ಸ ಚಾಸ್ಮಾಭಿರ್ಬಾಲೇಯಮವಿವೇಕಿನೀ ।
ತವಾಪರಾದ್ಧಾ ವಿಪ್ರರ್ಷೇ ಪ್ರಸಾದಃ ಕ್ರಿಯತಾಮಿತಿ ॥೯॥

ಮಾರ್ಕಂಡೇಯ ಮುನಿಯು ಹೇಳಿದನು :-

೭. ಕ್ರೌಷ್ಟುಕಿಮಹರ್ಷಿಯೆ! ಈ ಪ್ರಸಂಗದಲ್ಲಿ ಅನೇಕ ಮಂದಿ ಸುಂದರಿಯರಾದ ಅಪ್ಸರಃಸ್ತ್ರೀಯರಿಂದಲೂ ಇತರ ಗಂಧರ್ವರಿಂದಲೂ ಸಮೇತನಾದ ಒಬ್ಬ ಗಂಧರ್ವಕುಮಾರನು ಅಲ್ಲಿಗೆ ಬಂದನು.

ಗಂಧರ್ವನು ಹೀಗೆಂದನು :-

೭. ರಾಜಪುತ್ರನೇ! ಮಾನವತಿಯೂ ಭಾಮಿನೀ ಎಂಬ ನಾಮಾಂಕಿತಳೂ ಆದ ಈ ಕನ್ಯೆಯು ನನ್ನ ಪುತ್ರಿಯು. ಈಕೆಯು ಮಾಡಿದ ಅಪರಾಧದಿಂದ ಕುಪಿತನಾದ ಅಗಸ್ತ್ಯಮುನಿಯ ಶಾಪದಿಂದ ವಿಶಾಲರಾಜನ ಪುತ್ರಿಯಾಗಿ ಜನಿಸಿದಳು.

೮. ಬಾಲ್ಯಾವಸ್ಥೆಯಿಂದ ಸಹಜವಾಗಿ ಆಟವಾಡುತ್ತಿದ್ದ ಈ ಕನ್ಯೆಯಿಂದ ಅಗಸ್ತ್ಯಮುನಿಯು ಕೋಪಗೊಳಿಸಲ್ಪಟ್ಟು ಆ ಮುನಿಯಿಂದ ಈಕೆಯು " ನೀನು ಮನುಷ್ಯಯೋನಿಯಲ್ಲಿ ಜನಿಸುತ್ತೀಯೆ " ಎಂದು ಶಪಿಸಲ್ಪಟ್ಟಳು.

೯. ಆಗ ಅಗಸ್ತ್ಯಮುನಿಯು ಪ್ರಸನ್ನನಾಗಬೇಕೆಂದು ನಮ್ಮಿಂದ ಪ್ರಾರ್ಥಿಸಲ್ಪಟ್ಟನು. ಬ್ರಹ್ಮರ್ಷಿಯೆ! ಇವಳು ವಿವೇಕವಿಲ್ಲದ ಬಾಲಿಕೆಯು. ತಿಳಿಯದೆ ನಿನ್ನಲ್ಲಿ ಅಪರಾಧ ಮಾಡಿರುವಳು. ಇವಳ ವಿಷಯದಲ್ಲಿ ಅನುಗ್ರಹ ಮಾಡಬೇಕು.

ಪ್ರಸಾದ್ಯಮಾನಃ ಸೋಽಸ್ಮಾಭಿರಿದಮಾಹ ಮಹಾಮುನಿಃ ।
ಬಾಲೇತಿ ಮತ್ವಾ ಶಾಪೋಽಲ್ಪೋ ದತ್ತೋಽಸ್ಯಾ ನಾನ್ಯಥೈವ ತತ್ ॥೧೦॥

ಇತಿ ಶಾಪಾದಗಸ್ತ್ಯಸ್ಯ ವಿಶಾಲಭವನೇ ಶುಭಾ ।
ಜಾತೇಯಂ ಮತ್ಸುತಾ ಸುಭ್ರೂರ್ಭಾಮಿನೀ ನಾಮ ನಾಮತಃ ॥೧೧॥

ತದಸ್ಯಾಹಂ ಕೃತೇ ಪ್ರಾಪ್ತೋ ಗೃಹಾಣೇಮಾಂ ನೃಪಾತ್ಮಜಾಮ್ ।
ಮಮಾತ್ಮಜಾಂ ಸುತಸ್ತೇಽತ್ರ ಚಕ್ರವರ್ತೀ ಭವಿಷ್ಯತಿ ॥೧೨॥

ಮಾರ್ಕಣ್ಡೇಯ ಉವಾಚ :—

ತಥೇತ್ಯುಕ್ತ್ವೇತಿ ತಸ್ಯಾಶ್ಚ ಸ ಪಾಣಿಂ ಪಾರ್ಥಿವಾತ್ಮಜಃ ।
ಜಗ್ರಾಹ ವಿಧಿವದ್ಧೋಮಂ ಚಕ್ರೇ ತತ್ರ ಚ ತುಮ್ಬುರುಃ ॥೧೩॥

---

೧೦. ಹೀಗೆ ನಮ್ಮಿಂದ ಅನುಗ್ರಹ ಮಾಡಬೇಕೆಂದು ಪ್ರಾರ್ಥಿಸಲ್ಪಟ್ಟರೂ ಆ ಮುನಿಯು ಹೀಗೆ ಹೇಳಿದನು. ಅಪರಾಧಮಾಡಿದ ಈಕೆಯು ಬಾಲಿಕೆಯೆಂದು ತಿಳಿದು ನನ್ನಿಂದ ಸಣ್ಣ ಶಾಪವು ಕೊಡಲ್ಪಟ್ಟಿದೆ. ಆ ಶಾಪವು ಎಂದಿಗೂ ತಪ್ಪುವುದಲ್ಲ.

೧೧. ಈ ವಿಧವಾದ ಅಗಸ್ತ್ಯಮುನಿಯ ಶಾಪದಿಂದ ಭಾಮಿನಿ ಎಂಬ ನಾಮಾಂಕನದಿಂದ ಅಂಕಿತಳೂ ಸುಂದರಿಯೂ ಆದ ನನ್ನ ಮಗಳು ವಿಶಾಲರಾಜನ ಮಂದಿರದಲ್ಲಿ ಶುಭಕನ್ಯೆಯಾಗಿ ಜನ್ಮವೆತ್ತಿದಳು.

೧೨. ಆದುದರಿಂದ ನಾನೀಗ ಇವಳಿಗೋಸ್ಕರ ಇಲ್ಲಿಗೆ ಬಂದಿರುವೆನು. ಈ ರಾಜಪುತ್ರಿಯಾಗಿ ಜನ್ಮವೆತ್ತಿದ ನನ್ನ ಪುತ್ರಿಯನ್ನು ನೀನು ಪರಿಗ್ರಹಿಸು. ನಿನಗೆ ಈಕೆಯಲ್ಲಿ ಚಕ್ರವರ್ತಿಯಾಗುವಂತಹ ಪುತ್ರನು ಹುಟ್ಟುವನು.

ಮಾರ್ಕಂಡೇಯ ಮುನಿಯು ಹೇಳಿದನು :—

೧೩. ರಾಜಪುತ್ರನಾದ ಅವಿಕ್ಷಿತಕುಮಾರನು "ಹಾಗೆ ಆಗಲಿ" ಎಂದು ಹೇಳಿ ಗಂಧರ್ವನ ವಚನವನ್ನು ಒಪ್ಪಿಕೊಂಡು ಆ ಕನ್ಯೆಯ ಪಾಣಿಯನ್ನು ಗ್ರಹಿಸಿದನು. ತುಂಬುರುವು ಅಲ್ಲಿ ವಿಧಿವತ್ತಾಗಿ ವಿವಾಹಹೋಮವನ್ನು ನೆರವೇರಿಸಿದನು.

ಪ್ರಜಗುರ್ದೇವಗನ್ಧರ್ವಾ ನನೃತುಶ್ಚಾಪ್ಸರೋಗಣಾಃ ।
ಪುಷ್ಪಾಣಿ ಸಸೃಜುರ್ಮೇಘಾ ದೇವವಾದ್ಯಾನಿ ಸಸ್ವನುಃ ॥೧೪॥

ವಿವಾಹೇ ರಾಜಪುತ್ರಸ್ಯ ತಯಾ ತತ್ರ ಸಮೋಯುಷಃ ।
ಸಮಸ್ತವಸುಧಾತ್ರಾಣಕರ್ತೃಕಾರಣಭೂತಯಾ ॥೧೫॥

ತತೋ ಗನ್ಧರ್ವಲೋಕಂ ತೇ ಸಹ ತೇನ ಮಹಾತ್ಮನಾ ।
ನಿಃಶೇಷೇಣ ಯಯುಃ ಸಾ ಚ ಸ ಚ ರಾಜಸುತೋ ಮುನೇ ॥೧೬॥

ಭಾಮಿನ್ಯಾ ಮುಮುದೇ ಸಾರ್ಧಮವಿಕ್ಷಿನ್ನೃಪನನ್ದನಃ ।
ಸಾ ಚ ತೇನ ಸಮಂ ತತ್ರ ಭೋಗಸಮ್ಪತ್ಸಮನ್ವಿತಾ ॥೧೭॥

---

೧೪. ವಿವಾಹಸಮಯದಲ್ಲಿ ದೇವತೆ-ಗಂಧರ್ವರು ಗಾಯನಮಾಡಿದರು. ಅಪ್ಸರಾಂಗನೆಯರು ನರ್ತನಮಾಡಿದರು. ಮೇಘಗಳು ಪುಷ್ಪವೃಷ್ಟಿಯನ್ನು ಕರೆದುವು. ಮತ್ತು ದೇವಲೋಕದ ವಾದ್ಯಗಳು ಭೋರ್ಗರೆದುವು.

೧೫. ಸಂಪೂರ್ಣ ಭೂಮಂಡಲವನ್ನು ರಕ್ಷಿಸುವ ಅಧಿಕಾರವನ್ನು ಹೊಂದಿರುವ ಪುತ್ರನ ಉತ್ಪತ್ತಿಗೆ ಕಾರಣಳಾದ ಆ ಕನ್ಯೆಯನ್ನು ಪರಿಗ್ರಹಿಸಿದ ರಾಜಪುತ್ರನಾದ ಅವಿಕ್ಷಿತಕುಮಾರನ ವಿವಾಹಸಮಾರಂಭದಲ್ಲಿ ಅನೇಕ ಶುಭ ಶಕುನಗಳಾದುವು.

೧೬. ಕ್ರೌಷ್ಟುಕಿಮುನಿಯೇ! ತರುವಾಯ ಎಲ್ಲ ಗಂಧರ್ವರು ಮಹಾತ್ಮನಾದ ಅವಿಕ್ಷಿತಕುಮಾರನೊಡನೆ ಗಂಧರ್ವಲೋಕಕ್ಕೆ ತೆರಳಿದರು. ಜೊತೆಯಲ್ಲಿ ದಂಪತಿಗಳು ಆನಂದದಿಂದ ಗಂಧರ್ವಲೋಕವನ್ನು ಹೊಂದಿದರು.

೧೭. ರಾಜಪುತ್ರನಾದ ಅವಿಕ್ಷಿತಕುಮಾರನು ಪ್ರಿಯೆಯಾದ ಭಾಮಿನಿಯೊಡನೆ ಆನಂದವನ್ನು ಅನುಭವಿಸಿದನು. ಹಾಗು ಗಂಧರ್ವಪುತ್ರಿಯಾದ ಭಾಮಿನಿಯು ಅಪಾರವಾದ ಭೋಗಸಂಪತ್ತಿನಿಂದ ಕೂಡಿದವಳಾಗಿ ಪ್ರಿಯನೊಡನೆ ಆನಂದವನ್ನು ಹೊಂದಿದಳು.

ಕದಾಚಿದತಿರಮ್ಯೇಽಸೌ ಗಗನೋಪವನೇ ತಯಾ ।
ವಿಕ್ರೀಡತಿ ಸಮಂ ತನ್ವ್ಯಾ ಕದಾಚಿದುಪಪರ್ವತೇ ॥೧೮॥

ಕದಾಚಿತ್ಪುಲಿನೇ ನದ್ಯಾ ಹಂಸಸಾರಸಶೋಭಿತೇ ।
ಕದಾಚಿದ್ಭವನಸ್ಯಾನ್ತೇ ಪ್ರಾಸಾದೇ ಚಾತಿಶೋಭನೇ ॥೧೯॥

ವಿಹಾರದೇಶೇಷ್ವನ್ಯೇಷು ರಮಣೀಯೇಷ್ವಹರ್ನಿಶಮ್ ।
ಸ ರೇಮೇ ಸಹಿತಸ್ತನ್ವ್ಯಾ ಸಾ ಚ ತೇನ ಮಹಾತ್ಮನಾ ॥೨೦॥

ಭಕ್ಷ್ಯಾನುಲೇಪನಂ ವಸ್ತ್ರಂ ಸ್ರಕ್ಪಾನಾದಿಕಮುತ್ತಮಮ್ ।
ಉಪಾಜಹ್ರುಸ್ತಯೋಸ್ತತ್ರ ಮುನಿಗನ್ಧರ್ವಕಿನ್ನರಾಃ ॥೨೧॥

---

೧೮. ನಿರವಧಿಯಾದ ಭೋಗಸುಖವನ್ನು ಅನುಭವಿಸುತ್ತಿದ್ದ ರಾಜಪುತ್ರನು ಒಂದುವೇಳೆಯಲ್ಲಿ ಮೆಚ್ಚಿನ ಪ್ರಿಯೆಯೊಡನೆ ಅಂತರಿಕ್ಷಲೋಕದ ಉಪವನದಲ್ಲಿ ವಿಹರಿಸಿದನು. ಒಂದುವೇಳೆ ಉಪಪರ್ವತದಲ್ಲಿ ಅವಳೊಡನೆ ರಮಿಸಿದನು.

೧೯. ಒಂದು ಸಮಯದಲ್ಲಿ ಹಂಸ–ಸಾರಸ ಪಕ್ಷಿಗಳಿಂದ ಶೋಭಾಯಮಾನವಾದ ನದಿಗಳ ತೀರದಲ್ಲಿದ್ದ ಮರಳು ದಿಣ್ಣೆಗಳಲ್ಲಿಯೂ ಮತ್ತೊಂದು ಸಮಯದಲ್ಲಿ ಮಂಗಳಕರವಾದ ರಾಜಭವನದ ಪ್ರಾಸಾದದಲ್ಲಿಯೂ ಪ್ರಿಯೆಯೊಡನೆ ವಿಹರಿಸಿದನು.

೨೦. ಹೀಗೆ ಆ ರಾಜಪುತ್ರನು ಮನಮೆಚ್ಚಿನ ಆ ತರುಣಿಯೊಡನೆಯೂ, ಆ ತರುಣಿಯು ಪ್ರಿಯತಮನೊಡನೆಯೂ ಸೇರಿ ಇನ್ನೂ ಅನೇಕ ರಮಣೀಯವಾದ ವಿಹಾರಸ್ಥಳಗಳಲ್ಲಿ ಹಗಲು ರಾತ್ರಿವೇಳೆಗಳಲ್ಲೆಲ್ಲ ಸಂತತವಾಗಿ ರಮಿಸಿದರು.

೨೧. ಅಲ್ಲಿ ಪ್ರೀತಿಯಿಂದ ವಿಹರಿಸುತ್ತಿದ್ದ ಆ ಪ್ರೇಯಸೀ-ಪ್ರಿಯತಮರಿಗೆ ಮುನಿ–ಗಂಧರ್ವ-ಕಿನ್ನರರು ಭಕ್ಷ್ಯ, ಅನುಲೇಪನ, ವಸ್ತ್ರ, ಪುಷ್ಪಮಾಲ್ಯ, ಪಾನೀಯ ಮುಂತಾದ ಉತ್ತಮವಾದ ಭೋಗವಸ್ತುಗಳನ್ನು ತಂದು ಒಪ್ಪಿಸಿದರು.

ತಯಾ ಚ ರಮತಸ್ತಸ್ಯ ಭಾಮಿನ್ಯಾ ಸಹ ದುರ್ಲಭೇ ।
ಗನ್ಧರ್ವಲೋಕೇ ವೀರಸ್ಯ ಪುತ್ರಂ ಸಾ ಸುಷುವೇ ಶುಭಾ ॥೨೨॥

ತಸ್ಮಿಞ್ಜಾತೇ ಮಹಾವೀರ್ಯೇ ಗನ್ಧರ್ವಾಣಾಂ ಮಹೋತ್ಸವಃ ।
ಬಭೂವ ಮನುಜವ್ಯಾಘ್ರೇ ತೇನ ಕಾರ್ಯಮವೇಕ್ಷತಾಮ್ ॥೨೩॥

ಜಗುಃ ಕೇಚಿತ್ತಥೈವಾನ್ಯೇ ಮೃದಙ್ಗಪಟಹಾನಕಾನ್ ।
ಅವಾದಯನ್ತ ಚೈವಾನ್ಯೇ ವೇಣುವೀಣಾದಿಕಾಂಸ್ತಥಾ ॥೨೪॥

ನನೃತುಶ್ಚ ತಥಾ ತತ್ರ ಬಹವೋಽಪ್ಸರಸಾಂ ಗಣಾಃ ।
ಪುಷ್ಪವೃಷ್ಟಿಮುಚೋ ಮೇಘಾ ಜಗರ್ಜುರ್ಮೃದುನಿಸ್ವನಾಃ ॥೨೫॥

ತಥಾ ಕೋಲಾಹಲೇ ತಸ್ಮಿನ್ವರ್ತಮಾನೇಽಥ ತುಮ್ಬುರುಃ ।
ಪ್ರಣಯೇನ ಸ್ಮೃತೋಽಭ್ಯೇತ್ಯ ಜಾತಕರ್ಮಾಕರೋನ್ಮುನಿಃ ॥೨೬॥

---

೨೨. ಮಾನವರಿಗೆ ದುರ್ಲಭವಾದ ಗಂಧರ್ವಲೋಕದಲ್ಲಿ ಭಾಮಿನಿಯೆಂಬ ಪ್ರಿಯೆಯೊಡನೆ ವೀರನಾದ ಅವಿಕ್ಷಿತನು ರಮಿಸುತ್ತಿರಲು ಮಂಗಳಾಂಗಿಯಾದ ಆ ಗಂಧರ್ವಪುತ್ರಿಯು ವೀರಕುಮಾರನನ್ನು ಪ್ರಸವಿಸಿದಳು.

೨೩. ಮಹಾವೀರ್ಯಸಂಪನ್ನನೂ, ಮಾನವರಲ್ಲಿ ಉತ್ತಮನೂ ಆದ ಕುಮಾರನು ಜನ್ಮವೆತ್ತಲು ಆ ಕುಮಾರನಿಂದ ಮುಂದಿನ ಭವಿಷ್ಯವನ್ನು ಅರಿತಿರುವ ಗಂಧರ್ವರಿಗೆ ಮನವನ್ನು ರಂಜಿಸುವ ದೊಡ್ಡ ಉತ್ಸವದಂತಾಯಿತು.

೨೪. ಆ ಸಮಯದಲ್ಲಿ ಕೆಲವರು ಗಾನಮಾಡಿದರು. ಮತ್ತೆ ಕೆಲವರು ಮೃದಂಗ-ಪಟಹ-ಆನಕ ಮುಂತಾದ ವಾದ್ಯಗಳನ್ನು ಬಾರಿಸಿದರು. ಮತ್ತು ಇನ್ನು ಕೆಲವರು ವೀಣೆ-ಕೊಳಲು ಮುಂತಾದುವುಗಳನ್ನು ನುಡಿಸಿದರು.

೨೫. ಹಾಗು ಆ ಜನ್ಮೋತ್ಸವದ ಸಂದರ್ಭದಲ್ಲಿ ಅನೇಕಮಂದಿ ಅಪ್ಸರಸ್ತ್ರೀಯರ ತಂಡಗಳು ಸಂತೋಷದಿಂದ ನರ್ತನಮಾಡಿದರು. ಮೃದುವಾದ ಗರ್ಜನೆಯಿಂದ ಕೂಡಿ ಮೋಡಗಳು ಪುಷ್ಪವೃಷ್ಟಿಯನ್ನು ಕರೆದುವು.

೨೬. ಹಾಗೆ ಜನ್ಮೋತ್ಸವಾಂಗವಾದ ಆನಂದದ ಕೋಲಾಹಲವು ನಡೆಯುತ್ತಿರಲು ಸ್ಮರಣಮಾತ್ರದಿಂದ ಪ್ರೀತಿಯಿಂದ ಅಲ್ಲಿಗೆ ಬಂದು ಸೇರಿದ ತುಂಬುರುಮುನಿಯು ಆ ಕುಮಾರನಿಗೆ ಜಾತಕರ್ಮಸಂಸ್ಕಾರವನ್ನು ನೆರವೇರಿಸಿದನು.

ದೇವಾಃ ಸಮಾಯಯುಃ ಸರ್ವೇ ತಥಾ ದೇವರ್ಷಯೋಽಮಲಾಃ ।
ಪಾತಾಲಾತ್ಪನ್ನಗೇನ್ದ್ರಾಶ್ಚ ಶೇಷವಾಸುಕಿತಕ್ಷಕಾಃ ॥೨೭॥

ತಥಾ ದೇವಾಸುರಾಣಾಂ ಚ ಯೇ ಪ್ರಧಾನಾ ದ್ವಿಜೋತ್ತಮ ।
ಯಕ್ಷಾಣಾಂ ಗುಹ್ಯಕಾನಾಂ ಚ ವಾಯವಶ್ಚ ತಥಾಖಿಲಾಃ ॥೨೮॥

ತದಾಗತೈರಶೇಷರ್ಷಿದೇವದಾನವಪನ್ನಗೈಃ ।
ಮುನಿಭಿಶ್ಚಾಕುಲಮಭೂತ್ ಗನ್ಧರ್ವಾಣಾಂ ಮಹತ್ಪುರಮ್ ॥೨೯॥

ತತಃ ಸ ತುಮ್ಬುರುಃ ಕೃತ್ವಾ ಜಾತಕರ್ಮಾದಿಕಾಃ ಕ್ರಿಯಾಃ ।
ಚಕ್ರೇ ಸ್ವಸ್ತ್ಯಯನಂ ತಸ್ಯ ಬಾಲಸ್ಯ ಸ್ತುತಿಪೂರ್ವಕಮ್ ॥೩೦॥

ಚಕ್ರವರ್ತೀ ಮಹಾವೀರ್ಯೋ ಮಹಾಬಾಹುರ್ಮಹಾಬಲಃ ।
ಮಹಾನ್ತಂ ಕಾಲಮಾಶಿತ್ವಮಶೇಷಾಯಾಃ ಕ್ಷಿತೇಃ ಕುರು ॥೩೧॥

---

೨೭. ಆಗ ಅಲ್ಲಿಗೆ ಸಮಸ್ತ ದೇವತೆಗಳು, ಎಲ್ಲ ತೇಜಸ್ವಿಗಳಾದ ದೇವರ್ಷಿಗಳು ಮತ್ತು ಪಾತಾಳಲೋಕದಿಂದ ಆದಿಶೇಷ-ವಾಸುಕಿ-ತಕ್ಷಕ ಮುಂತಾದ ನಾಗರಾಜರು ಬಂದು ಸೇರಿ ಆನಂದದಲ್ಲಿ ಭಾಗವಹಿಸಿದರು.

೨೮. ದ್ವಿಜೋತ್ತಮನಾದ ಕ್ರೌಷ್ಟುಕಿಯೇ! ಹಾಗು ದೇವವರ್ಗ-ಅಸುರವರ್ಗಗಳಲ್ಲಿ ಪ್ರಧಾನರೂ, ಯಕ್ಷ-ಗುಹ್ಯಕರಲ್ಲಿ ಶ್ರೇಷ್ಠರೂ ಮತ್ತು ಸಮಸ್ತ ವಾಯುವರ್ಗಕ್ಕೆ ಸೇರಿದವರೂ ಬಂದು ಸೇರಿದರು.

೨೯. ಆ ಸಮಯದಲ್ಲಿ ಬಂದು ನೆರೆದ ಎಲ್ಲ ಋಷಿ, ದೇವ, ದಾನವ, ನಾಗ ಮತ್ತು ಬ್ರಹ್ಮರ್ಷಿಗಳಿಂದ ಗಂಧರ್ವರ ವಿಶಾಲವಾದ ನಗರವು ತುಂಬಿ-ಹೋಯಿತು.

೩೦. ತರುವಾಯ ಆ ತುಂಬುರುಮುನಿಯು ಕುಮಾರನಿಗೆ ಜಾತಕರ್ಮ ಮುಂತಾದ ಸಂಸ್ಕಾರಕರ್ಮಗಳನ್ನು ಪೂರೈಸಿ ಆ ಬಾಲಕನಿಗೆ ಸ್ತುತಿಪೂರ್ವಕ-ವಾಗಿ ಅನೇಕ ಮಂಗಳಾರ್ಥವಾದ ರಕ್ಷೆಗಳನ್ನು ಮಾಡಿದನು.

೩೧. ಕುಮಾರನೇ! ನೀನು ಮಹಾವೀರ್ಯಸಂಪನ್ನನೂ, ಅತಿಶಯ ಬಾಹುಬಲದಿಂದ ಕೂಡಿದವನೂ ಮತ್ತು ಹೆಚ್ಚಾಗಿ ಬಲಿಷ್ಠನೂ ಆದ ಚಕ್ರವರ್ತಿ-ಯಾಗಿ ಬಹು ದೀರ್ಘಕಾಲ ಸಂಪೂರ್ಣಭೂಮಿಯ ಆಧಿಪತ್ಯವನ್ನು ನೆರವೇರಿಸು.

ಇಮೇ ಶಕ್ರಾದಯಃ ಸರ್ವೇ ಲೋಕಪಾಲಾಸ್ತಥರ್ಷಯಃ ।
ಸ್ವಸ್ತಿ ಕುರ್ವನ್ತು ತೇ ವೀರ ವೀರ್ಯಂ ಚಾರಿವಿನಾಶನಮ್ ॥೩೨॥

ಮರುತ್ತವ ಶಿವಾಯಾಸ್ತು ವಾತಿ ಪೂರ್ವೇಣ ಯೋಽರಜಾಃ ।
ಮರುತ್ತೇ ವಿಮಲೋಽಕ್ಷೀಣೋಽವೈಷಮ್ಯಾಯಾಸ್ತು ದಕ್ಷಿಣಃ ॥೩೩॥

ಪಶ್ಚಿಮಸ್ತೇ ಮರುದ್ವೀರ್ಯಮುತ್ತಮಂ ತೇ ಪ್ರಯಚ್ಛತು ।
ಬಲಂ ಯಚ್ಛತು ಚೋತ್ಕೃಷ್ಟಂ ಮರುತ್ತೇ ಚ ತಥೋತ್ತರಃ ॥೩೪॥

ಇತಿ ಸ್ವಸ್ತ್ಯಯನಸ್ಯಾನ್ತೇ ವಾಗುವಾಚಾಶರೀರಿಣೀ ॥೩೫॥

---

೩೨. ವೀರಕುಮಾರನೇ! ಇಂದ್ರನು ಮೊದಲಾದ ಈ ಎಲ್ಲ ಲೋಕಪಾಲಕರು ಮತ್ತು ಮಹರ್ಷಿಗಳು ನಿನಗೆ ಮಂಗಳವನ್ನು ಕೊಡಲಿ. ಹಾಗು ಶತ್ರುಗಳನ್ನು ನಾಶಮಾಡುವಂತಹ ವೀರ್ಯವನ್ನು ಕೊಡಲಿ.

೩೩. ಧೂಳೀಕಲಂಕವಿಲ್ಲದೆ ನಿರ್ಮಲವಾಗಿ ಪೂರ್ವದಿಕ್ಕಿನಲ್ಲಿ ಬೀಸುವ ಗಾಳಿಯು ನಿನಗೆ ಕಲ್ಯಾಣಪ್ರದನಾಗಲಿ. ನಿರ್ಮಲವೂ ಸಮೃದ್ಧವೂ ಆದ ದಕ್ಷಿಣದಿಕ್ಕಿನಲ್ಲಿ ಬೀಸುವ ಗಾಳಿಯು ನಿನಗೆ ವೈಷಮ್ಯವಿಲ್ಲದಂತೆ ಮಾಡಲಿ.

೩೪. ಪಶ್ಚಿಮದಿಕ್ಕಿನಲ್ಲಿ ಬೀಸುವ ಗಾಳಿಯು ನಿನಗೆ ಉತ್ತಮವಾದ ವೀರ್ಯವನ್ನು ಕರುಣಿಸಲಿ. ಹಾಗು ಉತ್ತರದಿಕ್ಕಿನಲ್ಲಿ ಬೀಸುತ್ತಿರುವ ಗಾಳಿಯು ನಿನಗೆ ಉತ್ಕೃಷ್ಟವಾದ ಬಲವನ್ನು ಕೊಡಲಿ.

೩೫. ತುಂಬುರು ಮುನಿಯು ಕುಮಾರನಿಗೆ ಜಾತಕರ್ಮಾದಿಸಂಸ್ಕಾರಗಳನ್ನು ಮಾಡಿ ರಕ್ಷೆಯನ್ನು ಮಾಡಿ ಈ ರೀತಿಯಾಗಿ ಹಾರೈಸಿದ ತರುವಾಯ ಒಂದು ಅಶರೀರವಾಣಿಯು ಈ ರೀತಿಯಾಗಿ ನುಡಿಯಿತು.

ಮರುತ್ತವೇತಿ ಬಹುಶೋ ಯದಿದಂ ಗುರುರಬ್ರವೀತ್ ।
ಮರುತ್ತ ಇತಿ ತೇನಾಯಂ ಭುವಿ ಖ್ಯಾತೋ ಭವಿಷ್ಯತಿ ॥೩೬॥

ಭುವಿ ಚಾಸ್ಯ ಮಹೀಪಾಲಾ ಯಾಸ್ಯನ್ತ್ಯಾಜ್ಞಾವಶಾ ಯತಃ ।
ಏಷ ಸರ್ವಕ್ಷಿತೀಶಾನಾಂ ವೀರಃ ಸ್ಥಾಸ್ಯತಿ ಮೂರ್ಧನಿ ॥೩೭॥

ಚಕ್ರವರ್ತೀ ಮಹಾವೀರ್ಯಃ ಸಪ್ತದ್ವೀಪವತೀಂ ಮಹೀಮ್ ।
ಆಕ್ರಮ್ಯ ಪೃಥಿವೀಪಾಲಾನಯಂ ಭೋಕ್ಷ್ಯತ್ಯವಾರಿತಃ ॥೩೮॥

ಪ್ರಧಾನಃ ಪೃಥಿವೀಶಾನಾಂ ಭವಿಷ್ಯತ್ಯೇಷ ಯಜ್ವಿನಾಮ್ ।
ಆಧಿಕ್ಯಂ ಶೌರ್ಯವೀರ್ಯೇಣ ಭವಿಷ್ಯತ್ಯಸ್ಯ ರಾಜಸು ॥೩೯॥

---

೩೬. ಆಚಾರ್ಯನು ಈ ಕುಮಾರನನ್ನು ಹರಸುವಾಗ "ಗಾಳಿಯು ನಿನಗೆ ಕಲ್ಯಾಣಮಾಡಲಿ" ಎಂಬ ಅರ್ಥವಲ್ಲಿ ಅನೇಕ ಸಲ "ಮರುತ್-ತವ" ಎಂದು ನುಡಿದಿರುವುದರಿಂದ ಮರುತ್ತ ಎಂಬ ನಾಮಾಂಕನದಿಂದ ಈ ಕುಮಾರನು ಭೂಮಿಯಲ್ಲಿ ಖ್ಯಾತಿಗಳಿಸುವನು.

೩೭. ಯಾವ ಕಾರಣದಿಂದ ಭೂಮಿಯಲ್ಲಿದ್ದ ಅಶೇಷರಾಜರು ಇವನ ಆಜ್ಞಾಧಾರಕರಾಗಿರುವರೊ ಆ ಕಾರಣದಿಂದ ಈ ವೀರಕುಮಾರನು ಎಲ್ಲ ರಾಜರ ತಲೆಯಮೇಲೆ ನಿಂತಂತೆ ಸರ್ವ ಸ್ವಾಮಿಯಾಗಿರುವನು.

೩೮. ಮಹಾವೀರ್ಯಸಂಪನ್ನನಾದ ಈ ಕುಮಾರನು ಚಕ್ರವರ್ತಿಯಾಗಿ ಸಕಲ ರಾಜಮಂಡಲವನ್ನು ವಿಕ್ರಮದಿಂದ ಆಕ್ರಮಿಸಿ ಸಪ್ತದ್ವೀಪಗಳಿಂದ ಕೂಡಿದ ಸಮಸ್ತ ಭೂಮಿಯನ್ನು ತಡೆಯಿಲ್ಲದ ಹಾಗೆ ಭುಂಜಿಸುವನು.

೩೯. ಸಮಸ್ತ ರಾಜಮಂಡಲದಲ್ಲಿ ಇವನು ಪ್ರಧಾನನಾಗುವನು. ಯಾಗಶೀಲರಲ್ಲೆಲ್ಲ ಉತ್ತಮನಾಗುವನು. ಮತ್ತು ಸಮಸ್ತ ರಾಜರಿಗಿಂತಲೂ ಇವನಲ್ಲಿ ಶೌರ್ಯವೀರ್ಯಗಳ ಅತಿಶಯವು ಉಂಟಾಗುವುದು.

ಮಾರ್ಕಣ್ಡೇಯ ಉವಾಚ :—

ಇತ್ಯಾಕರ್ಣ್ಯ ವಚಃ ಸರ್ವೇ ಕೇನಾಪ್ಯುಕ್ತಂ ದಿವೌಕಸಾಮ್ ।
ತುತುಷುರ್ವಿಪ್ರ ಗನ್ಧರ್ವಾಶ್ಚಾಸ್ಯ ಮಾತಾ ತಥಾ ಪಿತಾ ॥೪೦॥

ಇತಿ ಶ್ರೀಮಾರ್ಕಣ್ಡೇಯ ಮಹಾಪುರಾಣೇಽವಿಕ್ಷಿತೋ ಮರುತ್ತ-
ಪುತ್ರೋತ್ಪತ್ತಿವರ್ಣನಂ ನಾಮ ಚತುರ್ವಿಂಶತ್ಯಧಿಕಶತತಮೋಽಧ್ಯಾಯಃ

ಮಾರ್ಕಂಡೇಯ ಮುನಿಯು ಹೇಳಿದನು :—

೪೦. ಬ್ರಹ್ಮರ್ಷಿಯಾದ ಕ್ರೌಷ್ಟುಕಿಯೇ ! ದೇವತೆಗಳಲ್ಲಿ ಯಾರೋ ಒಬ್ಬನು ಅದೃಶ್ಯನಾಗಿ ನುಡಿದ ಈ ವಾಣಿಯನ್ನು ಕೇಳಿ ಗಂಧರ್ವರೆಲ್ಲರೂ ಸಂತೋಷಪಟ್ಟರು. ಮತ್ತು ಈ ಕುಮಾರನ ಮಾತಾಪಿತೃಗಳೂ ಪ್ರೀತಿಯಿಂದ ಅಭಿನಂದಿಸಿದರು.

ಮಾರ್ಕಂಡೇಯ ಮಹಾಪುರಾಣದಲ್ಲಿ ನೂರ ಇಪ್ಪತ್ತನಾಲ್ಕನೆಯ
ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಪಞ್ಚವಿಂಶತ್ಯಧಿಕಶತತಮೋಽಧ್ಯಾಯಃ

(ಮರುತ್ತಚರಿತಮ್)

ಮಾರ್ಕಣ್ಡೇಯ ಉವಾಚ :—

ತತಃ ಸ ರಾಜಪುತ್ರಸ್ತಮಾದಾಯ ದಯಿತಂ ಸುತಮ್ ।
ಪತ್ನೀಂ ಚಾನುಗತೋ ವಿಪ್ರ ಗನ್ಧರ್ವೈರಾಯಯೌ ಪುರಮ್ ॥೧॥

ಸ ಪಿತುರ್ಭವನಂ ಪ್ರಾಪ್ಯ ವವನ್ದೇ ಪಿತುರಾದರಾತ್ ।
ಚರಣೌ ಸಾ ಚ ತನ್ವಙ್ಗೀ ಹ್ರೀಮತೀ ನೃಪತೇಃ ಸುತಾ ॥೨॥

ನೂರ ಇಪ್ಪತ್ತೈದನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಹೇಳಿದನು :--

೧. ಬ್ರಹ್ಮರ್ಷಿಯಾದ ಕ್ರೌಷ್ಟುಕಿಯೇ! ತರುವಾಯ ಅವಿಕ್ಷಿತನು ತನ್ನ ಪ್ರಿಯಪುತ್ರನನ್ನೂ ಮತ್ತು ಧರ್ಮಪತ್ನಿಯನ್ನೂ ಕರೆದುಕೊಂಡು ಅನೇಕ ಮಂದಿ ಗಂಧರ್ವರಿಂದ ಹಿಂಬಾಲಿಸಲ್ಪಟ್ಟವನಾಗಿ ತನ್ನ ನಗರಕ್ಕೆ ಬಂದನು.

೨. ಅವಿಕ್ಷಿತನು ತಂದೆಯ ಭವನಕ್ಕೆ ಬಂದು ಭಕ್ತಿ-ಆದರಗಳಿಂದ ತಂದೆಯ ಚರಣಗಳಿಗೆ ವಂದಿಸಿದನು. ಹಾಗೆಯೇ ವಿಶಾಲರಾಜನ ಪುತ್ರಿಯೂ ಲಜ್ಜಾಸಂಪನ್ನಳೂ ಮತ್ತು ಕೃಶಾಂಗಿಯೂ ಆದ ಅವನ ಪತ್ನಿಯೂ ವಂದಿಸಿದಳು,

ತಥಾಹ ರಾಜಪುತ್ರೋಽಸೌ ಗೃಹೀತ್ವಾ ಬಾಲಕಂ ಸುತಮ್ ।
ಧರ್ಮಾಸನಗತಂ ಭೂಪಂ ರಾಜ್ಞಾಂ ಮಧ್ಯೇ ಕರನ್ಧಮಮ್ ॥೩॥

ಮುಖಂ ಪೌತ್ರಸ್ಯ ಪಶ್ಯೈತದುತ್ಸಙ್ಗಸ್ಥಸ್ಯ ಯನ್ಮಯಾ ।
ಕಿಮಿಚ್ಛಕೇ ಪ್ರತಿಜ್ಞಾತಂ ತುಭ್ಯಂ ಮಾತುಃ ಕೃತೇ ಪುರಾ ॥೪॥

ಇತ್ಯುಕ್ತ್ವಾ ಪಿತುರುತ್ಸಙ್ಗೇ ತಂ ಕೃತ್ವಾ ತನಯಂ ತತಃ ।
ಯಥಾವೃತ್ತಮಶೇಷಂ ಸ ಕಥಯಾಮಾಸ ತಸ್ಯ ತತ್ ॥೫॥

ಸ ಪರಿಷ್ವಜ್ಯ ತಂ ಪೌತ್ರಮಾನನ್ದಾಸ್ರಾವಿಲೇಕ್ಷಣಃ ।
ಸಭಾಗ್ಯೋಽಸ್ಮೀತ್ಯಥಾತ್ಮಾನಂ ಪ್ರಶಶಂಸ ಪುನಃ ಪುನಃ ॥೬॥

ತತಃ ಸೋಽರ್ಘ್ಯಾದಿನಾ ಸಮ್ಯಗ್ಗನ್ಧರ್ವಾನ್ ಸಮುಪಾಗತಾನ್ ।
ಸಮ್ಮಾನಯಾಮಾಸ ಮುದಾ ವಿಸ್ಮೃತಾನ್ಯಪ್ರಯೋಜನಃ ॥೭॥

---

೩. ತರುವಾಯ ರಾಜಕುಮಾರನಾದ ಅವಿಕ್ಷಿತನು ಬಾಲ್ಯದಶೆಯಲ್ಲಿದ್ದ ತನ್ನ ಮಗುವನ್ನು ಎತ್ತಿಕೊಂಡು ಅನೇಕ ರಾಜರ ಮಧ್ಯದಲ್ಲಿ ಧರ್ಮಾಸನದಲ್ಲಿ ಕುಳಿತುಕೊಂಡಿದ್ದ ತನ್ನ ತಂದೆಯಾದ ಕರಂಧಮರಾಜನಿಗೆ ಹೇಳಿದನು.

೪. ಹಿಂದೆ ಜನನಿಯು ಸಂಕಲ್ಪಿಸಿದ ಕಿಮಿಚ್ಛಕವ್ರತದ ಅಂಗವಾಗಿ ನನ್ನಿಂದ ನಿನ್ನ ಮುಂದೆ ಯಾವ ಪ್ರತಿಜ್ಞೆಯು ಸ್ವೀಕರಿಸಲ್ಪಟ್ಟಿತ್ತೋ ಅದರಂತೆ ನೀನು ಇಂದು ನಿನ್ನ ತೊಡೆಯಲ್ಲಿ ಇರಿಸಿದ ಪೌತ್ರನ ಮುಖವನ್ನು ನೋಡು.

೫. ಹೀಗೆಂದು ಹೇಳಿ ತರುವಾಯ ಮಗುವನ್ನು ಕರಂಧಮರಾಜನ ತೊಡೆಯಲ್ಲಿ ಇರಿಸಿ ಅನಂತರದಲ್ಲಿ ಅವಿಕ್ಷಿತನು ತಂದೆಗೆ ಎಲ್ಲ ವೃತ್ತಾಂತವನ್ನು ನಡೆದಿರುವಹಾಗೆ ವಿವರಿಸಿ ಹೇಳಿದನು.

೬. ಆಗ ಕರಂಧಮರಾಜನು ಆ ಪೌತ್ರನನ್ನು ಅಪ್ಪಿಕೊಂಡು ಆನಂದ-ಬಾಷ್ಪದಿಂದ ತುಂಬಿದ ದೃಷ್ಟಿಯುಳ್ಳವನಾಗಿ " ನಾನು ಮಹಾಭಾಗ್ಯಶಾಲಿ-ಯಾಗಿರುವೆನು " ಹೀಗೆಂದು ಮತ್ತೆ ಮತ್ತೆ ತನ್ನನ್ನು ಶ್ಲಾಘಿಸಿಕೊಂಡನು.

೭. ತರುವಾಯ ಕರಂಧಮರಾಜನು ಮರೆತಿರುವ ಬೇರೆಯ ಕರ್ತವ್ಯವುಳ್ಳವನಾಗಿ ಅವಿಕ್ಷಿತನ ಸಂಗಡ ಬಂದಿರುವ ಗಂಧರ್ವ ಮುಂತಾದವರನು ಅರ್ಘ್ಯ ಮುಂತಾದುದನ್ನು ಒಪ್ಪಿಸಿ ಆನಂದದಿಂದ ಸನ್ಮಾನಿಸಿದನು.

ತತಃ ಪುರೇ ಮಹಾನಾಸೀದಾನನ್ದಃ ಪೌರವೇಶ್ಮಸು ।
ಅಸ್ಮಾಕಂ ಸನ್ತತಿರ್ಜಾತಾ ನಾಥಸ್ಯೇತಿ ಮಹಾಮುನೇ ॥೮॥

ಹೃಷ್ಟಪುಷ್ಟೇ ಪುರೇ ತಸ್ಮಿನ್ನೀತವಾದ್ಯೈರ್ವರಾಙ್ಗನಾಃ ।
ವಿಲಾಸಿನ್ಯೋಽತಿಚಾರ್ವಙ್ಗ್ಯೋ ನನೃತುರ್ಲಾಸ್ಯಮುತ್ತಮಮ್ ॥೯॥

ರಾಜಾ ಚ ದ್ವಿಜಮುಖ್ಯೇಭ್ಯೋ ರತ್ನಾನಿ ಚ ವಸೂನಿ ಚ ।
ಗಾವೋ ವಸ್ತ್ರಾಣ್ಯಲಙ್ಕಾರಾನದದದ್ಧೃಷ್ಟಮಾನಸಃ ॥೧೦॥

ತತಃ ಸ ಬಾಲೋ ವವೃಧೇ ಶುಕ್ಲಪಕ್ಷೇ ಯಥಾ ಶಶೀ ।
ಪಿತ್ರೂಣಾಂ ಪ್ರೀತಿಜನಕೋ ಜನಸ್ಯೇಷ್ಟಶ್ಚ ಸೋಽಭವತ್ ॥೧೧॥

ಆಚಾರ್ಯಾಣಾಂ ಸಕಾಶಾತ್ಸ ಪ್ರಾಗ್ವೇದಾಞ್ಜಗೃಹೇ ಮುನೇ ।
ತತಃ ಶಾಸ್ತ್ರಾಣ್ಯಶೇಷಾಣಿ ಧನುರ್ವೇದಂ ತತಃ ಪರಮ್ ॥೧೨॥

---

೮. ಮಹಾಮುನಿಯಾದ ಕ್ರೌಷ್ಟುಕಿಯೇ ! ತರುವಾಯ ಆ ನಗರದಲ್ಲಿರುವ ಪುರಜನರ ಪ್ರತಿಯೊಂದು ಮನೆಯಲ್ಲಿಯೂ "ನಮ್ಮ ಪ್ರಭುವಿಗೆ ಸಂತತಿಯು ಜನಿಸಿತು" ಎಂದು ಅಧಿಕವಾದ ಆನಂದವುಂಟಾಯಿತು.

೯. ಹೀಗೆ ಅಧಿಕವಾದ ಹರ್ಷ, ಪುಷ್ಟಿಗಳಿಂದ ಕೂಡಿದ ಆ ನಗರದಲ್ಲಿ ವಿಲಾಸವತಿಯರೂ, ಅತಿ ಸುಂದರವಾದ ದೇಹವುಳ್ಳವರೂ ಆದ ಉತ್ತಮಾಂಗನೆಯರು ಉತ್ತಮವಾದ ನರ್ತನವನ್ನು ಮಾಡಿದರು.

೧೦. ಕರಂಧಮರಾಜನು ಸಂತೋಷಗೊಂಡ ಮಾನಸವುಳ್ಳವನಾಗಿ ಮುಖ್ಯರಾದ ಶ್ರೋತ್ರಿಯ ದ್ವಿಜರಿಗೆ ರತ್ನ-ಐಶ್ವರ್ಯ-ಗೋವು-ವಸ್ತ್ರ-ಅಲಂಕಾರ ಮುಂತಾದ ವಸ್ತುಗಳನ್ನು ದಾನಮಾಡಿದನು.

೧೧. ಅನಂತರ ಆ ಬಾಲಕನು ಶುಕ್ಲಪಕ್ಷದಲ್ಲಿ ಚಂದ್ರನು ಪ್ರತಿದಿನ ಬೆಳೆವಂತೆ ಬೆಳೆಯುತ್ತ ಬಂದನು. ಮತ್ತು ಆ ಬಾಲಕನು ಪಿತೃಗಳಿಗೆ ಪ್ರೀತಿಯನ್ನು ಉಂಟುಮಾಡುವವನೂ ಸಮಸ್ತ ಜನರಿಗೆ ಇಷ್ಟನೂ ಆಗಿದ್ದನು.

೧೨. ಕ್ರೌಷ್ಟುಕಿಮುನಿಯೆ ! ಕ್ರಮವಾಗಿ ಬೆಳೆಯುತ್ತ ಬಂದ ಬಾಲಕನು ಮೊದಲು ಆಚಾರ್ಯರ ಸಮೀಪದಲ್ಲಿ ವೇದಗಳನ್ನು ಕಲಿತನು. ಅನಂತರ ಸಕಲ ಶಾಸ್ತ್ರಗ್ರಂಥಗಳನ್ನು ಅಧ್ಯಯನ ಮಾಡಿದನು. ಮತ್ತು ಆಮೇಲೆ ಧನುರ್ವೇದವನ್ನು ಪಠಿಸಿದನು.

ಕೃತೋದ್ಯೋಗೋ ಯದಾ ಸೋಽಭೂತ್ ಖಡ್ಗಕಾರ್ಮುಕಕರ್ಮಣಿ।
ಅನ್ಯೇಷು ಚ ತಥಾ ವೀರಃ ಶಸ್ತ್ರೇಷು ವಿಜಿತಶ್ರಮಃ ॥೧೩॥

ತತೋಽಸ್ತ್ರಾಣಿ ಸ ಜಗ್ರಾಹ ಭಾರ್ಗವಾದ್ಭೃಗುಸಮ್ಭವಾತ್ ।
ವಿನಯಾವನತೋ ವಿಪ್ರ ಗುರೋಃ ಪ್ರೀತಿಪರಾಯಣಃ ॥೧೪॥

ಗೃಹೀತಾಸ್ತ್ರಃ ಕೃತೀ ವೇದೇ ಧನುರ್ವೇದಸ್ಯ ಪಾರಗಃ ।
ನಿಷ್ಣಾತಃ ಸರ್ವವಿದ್ಯಾಸು ನ ಬಭೂವ ತತಃ ಪರಃ ॥೧೫॥

ವಿಶಾಲೋಽಪಿ ಸುತಾವಾರ್ತಾಮುಪಲಭ್ಯಾಖಿಲಾಮಿಮಾಮ್ ।
ಹರ್ಷನಿರ್ಭರಚಿತ್ತೋಽಭೂದ್ದೌಹಿತ್ರಸ್ಯ ಚ ಯೋಗ್ಯತಾಮ್ ॥೧೬॥

---

೧೩. ಹೀಗೆ ವೀರನಾದ ಬಾಲಕನು ಖಡ್ಗ-ಬಿಲ್ಲು-ಬಾಣ ಮುಂತಾದುವುಗಳ ಪ್ರಯೋಗದಲ್ಲಿ ಮಾಡಿದ ಅಭ್ಯಾಸವುಳ್ಳವನೂ ಮತ್ತು ಇತರ ಸಕಲ ಶಾಸ್ತ್ರ ವಿದ್ಯೆಯಲ್ಲಿ ತೋರಿಸಿದ ಶ್ರಮವುಳ್ಳವನೂ ಆದನು.

೧೪. ವಿಪ್ರೋತ್ತಮನಾದ ಕ್ರೌಷ್ಟುಕಿಯೇ! ಅನಂತರದಲ್ಲಿ ಆ ಮರುತ್ತ-ಕುಮಾರನು ವಿನಯದಿಂದ ತುಂಬಿದವನೂ, ಗುರುವಿಗೆ ಪ್ರೀತಿಯನ್ನುಂಟು-ಮಾಡುವ ಆಸಕ್ತಿಯುಳ್ಳವನೂ ಆಗಿ ಭೃಗುಮುನಿಯ ಪುತ್ರನಾದ ಭಾರ್ಗವ-ಮುನಿಯಿಂದ ಅಸ್ತ್ರವಿದ್ಯೆಯನ್ನು ಅಭ್ಯಾಸಮಾಡಿದನು.

೧೫. ಸಕಲ ವಿದ್ಯಾಪಾರಂಗತನಾದ ಮರುತ್ತಕುಮಾರನನ್ನು ಬಿಟ್ಟು ಕಲಿತಿರುವ ಅಸ್ತ್ರವಿದ್ಯೆಯುಳ್ಳವನೂ, ವೇದವಿದ್ಯೆಯಲ್ಲಿ ನಿಷ್ಣಾತನೂ, ಧನುರ್ವೇದದಲ್ಲಿ ಪಾರಂಗತನೂ ಮತ್ತು ಸಕಲ ವಿದ್ಯೆಗಳಲ್ಲಿ ಪ್ರಾಜ್ಞನೂ ಆದ ಬೇರೊಬ್ಬನು ಇರಲಿಲ್ಲ.

೧೬. ವಿಶಾಲರಾಜನು ಕೂಡ ತನ್ನ ಮಗಳಿಗೆ ಸಂಬಂಧಿಸಿದ ಎಲ್ಲ ವೃತ್ತಾಂತವನ್ನು ಹಾಗು ದೌಹಿತ್ರನಾದ ಮರುತ್ತಕುಮಾರನ ಅತಿಶಯವಾದ ಯೋಗ್ಯತೆಯನ್ನು ತಿಳಿದು ಆನಂದದಿಂದ ತುಂಬಿದ ಹೃದಯವುಳ್ಳವನಾದನು.

ಅಥ ರಾಜಾ ಸುತಸುತಂ ದೃಷ್ಟ್ವಾ ಪ್ರಾಪ್ತಮನೋರಥಃ ।
ಯಜ್ಞಾನನೇಕಾನ್ನಿಷ್ಟ್ವಾದ್ಯ ದತ್ತ್ವಾ ದಾನಾನಿ ಚಾರ್ಥಿನಾಮ್ ॥೧೭॥

ಕೃತಶೇಷಕ್ರಿಯೋ ಯುಕ್ತಃ ಸ ವರ್ಣೈರ್ಧರ್ಮತೋ ಮಹೀಮ್ ।
ಪರಿಪಾಲ್ಯಾರಿವಿಜಯೀ ಬಲಬುದ್ಧಿಸಮನ್ವಿತಃ ॥೧೮॥

ಸ ಯಿಯಾಸುರ್ವನಂ ಪುತ್ರಮವಿಕ್ಷಿತಮಭಾಷತ ।
ಪುತ್ರ ವೃದ್ಧೋಽಸ್ಮಿ ಗಚ್ಛಾಮಿ ವನಂ ರಾಜ್ಯಂ ಗೃಹಾಣ ಮೇ ॥೧೯॥

ಕೃತಕೃತ್ಯೋಽಸ್ಮಿ ನಾಸ್ತ್ಯನ್ಯತ್ ಕಿಂಚಿತ್ತ್ವದಭಿಷೇಚನಾತ್ ।
ಸುನಿಷ್ಪನ್ನಮತೋ ರಾಜ್ಯಂ ತ್ವಂ ಗೃಹಾಣ ಮಯಾರ್ಪಿತಮ್ ॥೨೦॥

---

೧೭. ಅನಂತರದಲ್ಲಿ ಅನೇಕ ಯಜ್ಞಗಳನ್ನು ಆಚರಿಸಿದವನೂ, ಅರ್ಥಿಜನರಿಗೆ ಅನೇಕ ದಾನಗಳನ್ನು ಕೊಟ್ಟವನೂ ಆದ ರಾಜನು ಅಧಿಕ-ಯೋಗ್ಯತೆಯಿಂದ ಕೂಡಿದ ಪೌತ್ರನನ್ನು ನೋಡಿ ಹೊಂದಿದ ಸಕಲ ಮನೋರಥ-ವುಳ್ಳವನಾದನು.

೧೮. ಬಲ-ಪ್ರಜ್ಞೆಗಳಿಂದ ಕೂಡಿದವನೂ, ಶತ್ರುವಿಜಯವನ್ನು ಹೊಂದಿದವನೂ ಆದ ಕರಂಧಮರಾಜನು ತತ್ಪರತೆಯಿಂದ ವರ್ಣಸಂಕರವಿಲ್ಲದಂತೆ ಧರ್ಮದಿಂದ ರಾಜ್ಯವನ್ನು ಪಾಲಿಸಿ ಪೂರ್ತಿಗೊಳಿಸಿದ ಸಕಲ ಕರ್ತವ್ಯವುಳ್ಳವ-ನಾದನು.

೧೯. ಅನಂತರ ತಪಸ್ಸಿಗಾಗಿ ಅರಣ್ಯಕ್ಕೆ ಹೋಗಬೇಕೆಂಬ ಇಷ್ಟವುಳ್ಳ ರಾಜನು ಅವಿಕ್ಷಿತ ಪುತ್ರನನ್ನು ಕುರಿತು ಹೀಗೆ ಹೇಳಿದನು. ಪುತ್ರನೇ ! ನಾನು ವೃದ್ಧನಾಗಿರುವೆನು. ವನಕ್ಕೆ ತೆರಳುತ್ತೇನೆ. ನೀನು ನನ್ನ ರಾಜ್ಯವನ್ನು ತೆಗೆದುಕೊ.

೨೦. ನಾನು ನನ್ನ ಕರ್ತವ್ಯಗಳನ್ನು ಮುಗಿಸಿ ಕೃತಕೃತ್ಯನಾಗಿರುವೆನು. ಇನ್ನು ನಿನ್ನ ಪಟ್ಟಾಭಿಷೇಕದ ಹೊರತು ಇನ್ನಾವುದೂ ಕರ್ತವ್ಯವಿಲ್ಲ. ಆದುದ-ರಿಂದ ಸಮೃದ್ಧವಾದ ಈ ರಾಜ್ಯವನ್ನು ನಿನ್ನಲ್ಲಿ ಅರ್ಪಿಸುವೆನು. ನೀನು ಇದನ್ನು ಸ್ವೀಕರಿಸು.

ಇತ್ಯುಕ್ತಃ ಪಿತರಂ ಪ್ರಾಹ ಸೋಽವಿಕ್ಷಿನ್ನೃಪನನ್ದನಃ ।
ಪ್ರಶ್ರಯಾವನತೋ ಭೂತ್ವಾ ಯಿಯಾಸುಸ್ತಪಸೇ ವನಮ್ ॥೨೧॥

ನಾಹಂ ತಾತ ಕರಿಷ್ಯಾಮಿ ಪೃಥಿವ್ಯಾಃ ಪರಿಪಾಲನಮ್ ।
ನಾಪೈತಿ ಹ್ರೀರ್ಮೇ ಮನಸಿ ರಾಜ್ಯೇಽನ್ಯಂ ತ್ವಂ ನಿಯೋಜಯ ॥೨೨॥

ತಾತೇನ ಮೋಕ್ಷಿತೋ ಬದ್ಧೋ ನ ಸ್ವವೀರ್ಯಾದಹಂ ಯತಃ ।
ತತಃ ಕಿಯತ್ಪೌರುಷಂ ಮೇ ಪುರುಷೈಃ ಪಾಲ್ಯತೇ ಮಹೀ ॥೨೩॥

ಯೋಽಹಂ ನ ಪಾಲನಾಯಾಲಮಾತ್ಮನೋಽಪಿ ವಸುನ್ಧರಾಮ್ ।
ಸ ಕಥಂ ಪಾಲಯಿಷ್ಯಾಮಿ ರಾಜ್ಯಮನ್ಯತ್ರ ನಿಕ್ಷಿಪ ॥೨೪॥

ಸ ಸ್ತ್ರೀಸಧರ್ಮಾ ಪುರುಷೋ ಯಶ್ಚಾನ್ಯೇನಾವಮೃಹ್ಯತೇ ।
ಆತ್ಮಾಮೋಹಾಯ ಭವತಾ ಬನ್ಧನಾದ್ಯೇನ ಮೋಕ್ಷಿತಃ ॥೨೫॥

---

೨೧. ತಂದೆಯಿಂದ ಈ ರೀತಿಯಾಗಿ ಬೋಧಿಸಲ್ಪಟ್ಟ ರಾಜಪುತ್ರನಾದ ಅವಿಕ್ಷಿತನು ವಿನಯದಿಂದ ತಗ್ಗಿದವನೂ, ತಪವನ್ನಾಚರಿಸಲು ತಾನು ವನಕ್ಕೆ ಹೋಗುವ ಇಷ್ಟವುಳ್ಳವನೂ ಆಗಿ ತಂದೆಯನ್ನು ಕುರಿತು ಹೀಗೆಂದನು.

೨೨. ತಂದೆಯೇ ! ನಾನು ರಾಜ್ಯದ ಪರಿಪಾಲನೆಯನ್ನು ಮಾಡುವುದಿಲ್ಲ. ನನಗೆ ಹಿಂದೆ ಉಂಟಾದ ನಾಚಿಕೆಯು ಇಂದು ಕೂಡ ನನ್ನ ಮನಸ್ಸಿನಿಂದ ಹೋಗುವುದಿಲ್ಲ. ನೀನು ರಾಜ್ಯದಲ್ಲಿ ಇನ್ನಾರನ್ನಾದರೂ ನಿಯೋಜಿಸು.

೨೩. ಶತ್ರುಗಳಿಂದ ಬದ್ಧನಾದ ನಾನು ಸ್ವವೀರ್ಯದಿಂದ ಮುಕ್ತನಾಗಲಿಲ್ಲ. ತಂದೆಯಿಂದ ಬಿಡಿಸಲ್ಪಟ್ಟಿರುವೆನು. ಈ ಕಾರಣದಿಂದ ನನ್ನಲ್ಲಿ ಗಣ್ಯವಾದ ಪೌರುಷವೇನು ಉಳಿಯಿತು ? ಪೌರುಷವಂತರಿಂದ ಭೂಮಿಯು ರಕ್ಷಿಸಲ್ಪಡಬೇಕು.

೨೪. ಯಾವ ನಾನು ತನ್ನ ಆತ್ಮರಕ್ಷಣೆಯಲ್ಲಿ ಕೂಡ ಸಮರ್ಥನಾಗಲಿಲ್ಲವೊ ಅಂತಹವನು ಅಖಂಡಭೂಮಿಯನ್ನು ಪಾಲಿಸುವುದೆಂತು ? ಆದ್ದರಿಂದ ನನಗೆ ರಾಜ್ಯವು ಬೇಡ. ರಾಜ್ಯವನ್ನು ಬೇರೊಬ್ಬನಲ್ಲಿ ಇರಿಸು.

೨೫. ಯಾವನು ಶತ್ರುಗಳಿಂದ ದ್ರೋಹಮಾಡಿ ತಿರಸ್ಕರಿಸಲ್ಪಡುವನೊ ಅವನು ಸ್ತ್ರೀಗೆ ಸಮಾನನಾದವನು. ನಾನು ಅಂತಹವನಾಗಿದ್ದೇನೆ. ಶತ್ರುಗಳ ಬಂಧನಕ್ಕೆ ಸಿಲುಕಿದ ನಾನು ನಿನ್ನಿಂದ ನಿನ್ನ ಕರ್ತವ್ಯ ಭ್ರಂಶವಾಗದ ಹಾಗೆ ಬಂಧನದಿಂದ ಬಿಡಿಸಲ್ಪಟ್ಟಿರುವೆನು.

ಸೋಽಹಂ ಕಥಂ ಭವಿಷ್ಯಾಮಿ ಸ್ತ್ರೀಸಧರ್ಮಾ ಮಹೀಪತಿಃ ।
ಸ್ತ್ರಿಯಃ ಪುಮಾನ್ಭವೇದ್ಭರ್ತಾ ಯಃ ಶೂರಃ ಸ ಮಹೀಪತಿಃ ॥೨೬॥

ಪಿತೋವಾಚ :—

ನ ಭಿನ್ನ ಏವ ಪುತ್ರಸ್ಯ ಪಿತಾ ಪುತ್ರಸ್ತಥಾ ಪಿತುಃ ।
ನಾನ್ಯೇನ ಮೋಕ್ಷಿತೋ ವೀರ ಯಸ್ತ್ವಂ ಪಿತ್ರಾ ವಿಮೋಕ್ಷಿತಃ ॥೨೭॥

ಪುತ್ರ ಉವಾಚ :—

ಹೃದಯಂ ನಾನ್ಯಥಾ ನೇತುಂ ಮಯಾ ಶಕ್ಯಂ ನರೇಶ್ವರ ।
ಹೃದಯೇ ಹ್ರೀರ್ಮಮಾತೀವ ಯಸ್ತ್ವಹಂ ಮೋಕ್ಷಿತಸ್ತ್ವಯಾ॥೨೮॥

ಪಿತ್ರೋಪಾತ್ತಾಂ ಶ್ರಿಯಂ ಭುಙ್ಕ್ತೇ ಪಿತ್ರಾ ಕೃಚ್ಛ್ರಾತ್ಸಮುದ್ಧೃತಃ
ವಿಜ್ಞಾಯತೇ ಚ ಯಃ ಪಿತ್ರಾ ಮಾನವಃ ಸೋಽಸ್ತು ನೋ ಕುಲೇ ॥೨೯॥

---

೨೬. ಹೀಗೆ ಸ್ತ್ರೀಯಂತಿರುವ ನಾನು ರಾಜ್ಯವನ್ನಾಳುವ ದೊರೆಯು ಹೇಗಾಗಲಿ? ಪೌರುಷವಂತನಾದ ಮಾನವನು ಸ್ತ್ರೀಗೆ ಪತಿಯಾಗಿರಬೇಕು. ಹಾಗು ಶೂರನಾದ ಮಾನವನು ರಾಜ್ಯಪಾಲಕನಾಗಿರಬೇಕು.

ತಂದೆಯು ಹೇಳಿದನು :—

೨೭. ಪುತ್ರನಿಗೆ ತಂದೆಯು ಬೇರೆಯಾದವನಲ್ಲ. ಹಾಗು ತಂದೆಗೆ ಪುತ್ರನು ಬೇರೆಯಲ್ಲ. ವೀರಕುಮಾರನೇ! ಆದ್ದರಿಂದ ತಂದೆಯಿಂದ ಬಂಧನ-ಮುಕ್ತನಾದ ನೀನು ಬೇರೆಯವನಿಂದ ಮುಕ್ತನಾದಂತೆ ಅಲ್ಲ.

ಪುತ್ರನಿಂತೆಂದನು :—

೨೮. ಮಹಾರಾಜನಾದ ತಂದೆಯೇ! ನಿನ್ನಿಂದ ನನ್ನ ಹೃದಯವನ್ನು ಬೇರೆ ವಿಧವಾಗಿ ಪರಿವರ್ತನ ಮಾಡಲಾಗುವುದಿಲ್ಲ. ನಾನು ನಿನ್ನಿಂದ ಬಂಧನ-ಮುಕ್ತನಾಗಿರುವೆನೆಂಬ ಕಾರಣದಿಂದ ನನ್ನ ಹೃದಯದಲ್ಲಿ ಅತಿಯಾದ ನಾಚಿಕೆಯು ಆವರಿಸಿರುವುದು.

೨೯. ಯಾವ ಮಾನವನು ತಂದೆಯಿಂದ ಆರ್ಜಿತವಾದ ಐಶ್ವರ್ಯವನ್ನು ಭುಂಜಿಸುವನೋ, ಯಾವನು ತಂದೆಯಿಂದ ಕಷ್ಟದಿಂದ ಪಾರಾಗುವನೋ ಮತ್ತು ಯಾವನು ತಂದೆಯ ಪ್ರಭಾವದಿಂದ ಹೆಸರುವಾಸಿಯಾಗುವನೋ ಅಂತಹವನು ನಮ್ಮ ವಂಶದಲ್ಲಿ ಜನಿಸುವುದು ಬೇಡ.

ಸ್ವಯಮರ್ಜಿತವಿತ್ತಾನಾಂ ಖ್ಯಾತಿಂ ಸ್ವಯಮುಪೇಯುಷಾಮ್ ।
ಸ್ವಯಂ ನಿಸ್ತೀರ್ಣಕೃಚ್ಛ್ರಾಣಾಂ ಯಾ ಗತಿಃ ಸಾಸ್ತು ಮೇಗತಿಃ॥೩೦॥

ಮಾರ್ಕಣ್ಡೇಯ ಉವಾಚ :—

ಇತ್ಯಾಹ ಬಹುಶಃ ಪಿತ್ರಾ ಯದಾಪ್ಯುಕ್ತೋಽಸ್ಯಸೌ ಮುನೇ ।
ತದಾ ತಸ್ಯ ಸುತಂ ರಾಜ್ಯೇ ಮರುತ್ತಮಕರೋನ್ನೃಪಃ ॥೩೧॥

ಸ ಪಿತ್ರಾ ಸಮನುಜ್ಞಾತಂ ರಾಜ್ಯಂ ಪ್ರಾಪ್ಯ ಪಿತಾಮಹಾತ್ ।
ಚಕಾರ ಸಮ್ಯಕ್ ಸುಹೃದಾಮಾನನ್ದಮುಪಪಾದಯನ್ ॥೩೨॥

ರಾಜಾ ಕರನ್ಧಮಶ್ಚಾಪಿ ವೀರಾಮಾದಾಯ ತಾಂ ತಥಾ ।
ವನಂ ಜಗಾಮ ತಪಸೇ ಯತವಾಕ್ಕಾಯಮಾನಸಃ ॥೩೩॥

---

೩೦. ಸ್ವಂತವಾಗಿ ಆರ್ಜಿಸಿದ ಐಶ್ವರ್ಯವುಳ್ಳವರೂ, ಸ್ವಂತವಾಗಿ ಖ್ಯಾತಿಯನ್ನು ಗಳಿಸಿದವರೂ ಮತ್ತು ಸ್ವಪ್ರಯತ್ನದಿಂದ ಕಳೆದುಕೊಂಡ ಕಷ್ಟ-ವುಳ್ಳವರೂ ಆದ ಮಾನವರಿಗೆ ಲಭಿಸುವ ಗತಿಯು ನನಗೆ ದೊರಕಲಿ.

ಮಾರ್ಕಂಡೇಯ ಮುನಿಯು ಹೇಳಿದನು :—

೩೧. ಕ್ರೌಷ್ಟುಕಿಮುನಿಯೇ! ತಂದೆಯಿಂದ ಅನೇಕ ಸಲ ರಾಜ್ಯಭಾರ ಮಾಡುವಂತೆ ಹೇಳಲ್ಪಟ್ಟರೂ ಅವಿಕ್ಷಿತನು ಯಾವಾಗ ಹೀಗೆ ಅಸಮ್ಮತಿಯಿಂದ ಮಾತನಾಡಿದನೊ ಆಗ ಕರಂಧಮರಾಜನು ಪೌತ್ರನಾದ ಮರುತ್ತಕುಮಾರನನ್ನು ರಾಜ್ಯದಲ್ಲಿ ಪಟ್ಟಗಟ್ಟಿದನು.

೩೨. ಮರುತ್ತರಾಜನು ಪಿತಾಮಹನಿಂದ ಅರ್ಪಿಸಲ್ಪಟ್ಟ ರಾಜ್ಯವನ್ನು ತಂದೆಯ ಅನುಮತಿಯಿಂದ ಪಡೆದು ತನ್ನ ಮಿತ್ರವರ್ಗಕ್ಕೆ ಆನಂದವನ್ನು ಉಂಟು-ಮಾಡುತ್ತ ಚೆನ್ನಾಗಿ ರಾಜ್ಯಭಾರವನ್ನು ನಡೆಸಿದನು.

೩೩. ಇತ್ತ ಕರಂಧಮ ಮಹಾರಾಜನು ತನ್ನ ಧರ್ಮಪತ್ನಿಯಾದ ವೀರಾದೇವಿಯನ್ನು ಕರೆದುಕೊಂಡು ನಿಗ್ರಹಿಸಿದ ವಾಕ್-ಕಾಯ-ಮಾನಸವೆಂಬ ತ್ರಿಕರಣಗಳುಳ್ಳವನಾಗಿ ತಪವನ್ನಾಚರಿಸಲು ಅರಣ್ಯಕ್ಕೆ ಹೋದನು.

ತತ್ರ ವರ್ಷಸಹಸ್ರಂ ಸ ತಪಸ್ತಪ್ತ್ವಾ ಸುದುಶ್ಚರಮ್ ।
ವಿಹಾಯ ದೇಹಂ ನೃಪತಿಃ ಶಕ್ರಸ್ಯಾಪ ಸಲೋಕತಾಮ್ ॥೩೪॥

ಸಾಸ್ಯ ಪತ್ನೀ ತದಾ ವೀರಾ ವರ್ಷಾಣಾಮುಪರಂ ಶತಮ್ ।
ತಪಶ್ಚಚಾರ ವಿಪ್ರರ್ಷೇ ಜಟಿಲಾ ಮಲಪಙ್ಕಿನೀ ॥೩೫॥

ಸಾಲೋಕ್ಯಮಿಚ್ಛತೀ ಭರ್ತುಃ ಸ್ವರ್ಗತಸ್ಯ ಮಹಾತ್ಮನಃ ॥೩೬॥

ಫಲಮೂಲಕೃತಾಹಾರಾ ಭಾರ್ಗವಾಶ್ರಮಸಂಶ್ರಯಾ ।
ದ್ವಿಜಾತಿಪತ್ನೀಮಧ್ಯಸ್ಥಾ ದ್ವಿಜಶುಶ್ರೂಷಣಾದೃತಾ ॥೩೭॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಮರುತ್ತಚರಿತೇ
ಪಞ್ಚವಿಂಶತ್ಯಧಿಕಶತತಮೋಽಧ್ಯಾಯಃ

---

೩೪. ಕರಂಧಮರಾಜನು ವನದಲ್ಲಿ ಸಹಸ್ರಾರು ವರ್ಷಗಳ ವರೆಗೆ ಕಠಿನವಾದ ತಪವನ್ನು ಮಾಡಿ ಆಯುಷ್ಯಾವಸಾನದಲ್ಲಿ ದೇಹವನ್ನು ತ್ಯಜಿಸಿ ದೇವೇಂದ್ರನ ಲೋಕವನ್ನು ಹೊಂದಿದನು.

೩೫. ಬ್ರಹ್ಮರ್ಷಿಯಾದ ಕ್ರೌಷ್ಟುಕಿಯೇ! ಕರಂಧಮರಾಜನ ಪತ್ನಿಯಾದ ಆ ವೀರಾದೇವಿಯು ಜಟಾಧಾರಿಣಿಯೂ, ಮಲ-ಧೂಳಿಗಳು ತುಂಬುವಂತೆ ದೇಹಾಭಿಮಾನವನ್ನು ಬಿಟ್ಟವಳೂ ಆಗಿ ಮತ್ತೆ ಒಂದುನೂರು ವರ್ಷಗಳ ವರೆಗೆ ತಪವನ್ನಾಚರಿಸಿದಳು.

೩೬. ಕರಂಧಮ ಮಹಾರಾಜನ ಪಟ್ಟದರಸಿಯಾದ ವೀರಾದೇವಿಯು ಸ್ವರ್ಗಲೋಕವನ್ನೈದಿದ ಮಹಾತ್ಮನಾದ ತನ್ನ ಪತಿದೇವನ ಸಾಲೋಕ್ಯವನ್ನು ಬಯಸಿ ದೀರ್ಘಕಾಲ ತಪವನ್ನು ಮಾಡಿದಳು.

೩೭. ವೀರಾದೇವಿಯು ಭಾರ್ಗವ ಮುನಿಯ ಆಶ್ರಮದಲ್ಲಿ ವಾಸಮಾಡುವವಳೂ, ದ್ವಿಜಪತ್ನಿಯರ ಮಧ್ಯದಲ್ಲಿರುವವಳೂ, ದ್ವಿಜರ ಶುಶ್ರೂಷೆಯಲ್ಲಿ ಆತ್ಯಾದರವುಳ್ಳವಳೂ ಮತ್ತು ಫಲ-ಕಂದ-ಮೂಲ ಆಹಾರವನ್ನು ಸೇವಿಸುವವಳೂ ಆಗಿ ತಪಸ್ಸನ್ನು ಮಾಡಿದಳು.

ಮಾರ್ಕಂಡೇಯ ಮಹಾಪುರಾಣದಲ್ಲಿ ನೂರ ಇಪ್ಪತ್ತೈದನೆಯ ಅಧ್ಯಾಯ ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಷಡ್ವಿಂಶತ್ಯಧಿಕಶತತಮೋಽಧ್ಯಾಯಃ

(ಮರುತ್ತಾಯ ಪಿತಾಮಹ್ಯಾ ಉಪದೇಶಃ)

ಕ್ರೌಷ್ಟುಕಿರುವಾಚ :—

ಭಗವನ್ವಿಸ್ತರಾತ್ಸರ್ವಂ ಮಮೈತತ್ಕಥಿತಂ ತ್ವಯಾ ।
ಕರನ್ಧಮಸ್ಯ ಚರಿತಮವಿಕ್ಷಿಚ್ಚರಿತಂ ಚ ಯತ್ ॥೧॥

ಅವಿಕ್ಷಿತಸ್ಯ ನೃಪತೇರ್ಮರುತ್ತಸ್ಯ ಮಹಾತ್ಮನಃ ।
ಶ್ರೋತುಮಿಚ್ಛಾಮಿ ಚರಿತಂ ಶ್ರೂಯತೇ ಸೋಽತಿಚೇಷ್ಟಿತಃ ॥೨॥

ನೂರ ಇಪ್ಪತ್ತಾರನೆಯ ಅಧ್ಯಾಯ

ಕ್ರೌಷ್ಟುಕಿ ಮುನಿಯು ಹೇಳಿದನು :—

೧. ಪೂಜ್ಯನಾದ ಮಾರ್ಕಂಡೇಯ ಮುನಿಯೆ! ಕರಂಧಮ ಮಹಾರಾಜನ ಚರಿತ್ರ ಮತ್ತು ಅವಿಕ್ಷಿತನ ಚರಿತ್ರ—ಇವು ನಿನ್ನಿಂದ ನನಗೆ ವಿಸ್ತಾರವಾಗಿ ಹೇಳಲ್ಪಟ್ಟವೆ.

೨. ಇನ್ನು ಮುಂದೆ ಅವಿಕ್ಷಿತರಾಜನ ಪುತ್ರನೂ ಮಹಾತ್ಮನೂ ಆದ ಮರುತ್ತರಾಜನ ಪುಣ್ಯ ಚರಿತ್ರೆಯನ್ನು ನಾನು ಕೇಳಲು ಆಸೆಯುಳ್ಳವನಾಗಿದ್ದೇನೆ. ಆ ಮರುತ್ತ ಮಹಾರಾಜನು ಅದ್ಭುತಚರಿತ್ರೆಯುಳ್ಳವನೆಂದು ಕೇಳಿರುತ್ತೇನೆ.

ಚಕ್ರವರ್ತೀ ಮಹಾಭಾಗಃ ಶೂರಃ ಕಾನ್ತೋ ಮಹಾಮತಿಃ ।
ಧರ್ಮವಿದ್ಧರ್ಮಕೃಚ್ಚೈವ ಸಮ್ಯಕ್ಪಾಲಯಿತಾ ಭುವಃ ॥೩॥

ಮಾರ್ಕಣ್ಡೇಯ ಉವಾಚ :—

ಸ ಪಿತ್ರಾ ಸಮನುಜ್ಞಾತಂ ರಾಜ್ಯಂ ಪ್ರಾಪ್ಯ ಪಿತಾಮಹಾತ್ ।
ಧರ್ಮತಃ ಪಾಲಯಾಮಾಸ ಪಿತಾ ಪುತ್ರಾನಿವೌರಸಾನ್ ॥೪॥

ಇಯಾಜ ಸುಬಹೂನ್ಯಜ್ಞಾನ್ಯಥಾವತ್ಸ್ವಾಪ್ತದಕ್ಷಿಣಾನ್ ।
ಋತ್ವಿಕ್ಪುರೋಹಿತಾದೇಶಾದನಿರ್ವಿಣ್ಣೋ ಮಹೀಪತಿಃ ॥೫॥

ತಸ್ಯಾಪ್ರತಿಹತಂ ಚಕ್ರಮಾಸೀದ್ದ್ವೀಪೇಷು ಸಪ್ತಸು ।
ಗತಿಶ್ಚಾಪ್ಯನವಚ್ಛಿನ್ನಾ ಸ್ವಃಪಾತಾಲಜಲಾದಿಷು ॥೬॥

---

೩. ಆ ಮರುತ್ತಕುಮಾರನು ಮಹಾಭಾಗ್ಯವಂತನೂ, ಶೂರನೂ, ಸುಂದರನೂ, ಮಹಾಪ್ರಜ್ಞಾಶಾಲಿಯೂ, ಧರ್ಮವೇತ್ತನೂ, ಧರ್ಮಪರನೂ ಮತ್ತು ಭೂಮಿಯನ್ನು ನ್ಯಾಯವಾಗಿ ರಕ್ಷಿಸುವವನೂ ಆದ ಚಕ್ರವರ್ತಿಯಾಗಿದ್ದನೆಂದು ನಾನು ಬಲ್ಲೆನು.

ಮಾರ್ಕಂಡೇಯ ಮುನಿಯು ಹೇಳಿದನು :—

೪. ಮರುತ್ತ ಮಹಾರಾಜನು ತಂದೆಯಾದ ಅವಿಕ್ಷಿತನ ಅನುಮತಿಯಂತೆ ಪಿತಾಮಹನಿಂದ ಕೊಡಲ್ಪಟ್ಟಿದ್ದ ರಾಜ್ಯಭಾರವನ್ನು ಹೊಂದಿ ತಂದೆಯು ತನ್ನ ಔರಸಪುತ್ರರನ್ನು ಸಲಹಿದಂತೆ ಧರ್ಮದಿಂದ ರಾಜ್ಯಪಾಲನೆಯನ್ನು ಮಾಡಿದನು.

೫. ಬೇಸರವಿಲ್ಲದೆಯೆ ಉತ್ಸಾಹವಂತನಾದ ಮರುತ್ತರಾಜನು ಋತ್ವಿಜ-ಪುರೋಹಿತರ ಆದೇಶದಂತೆ ಸಂಪೂರ್ಣ ದಕ್ಷಿಣಾದಾನದಿಂದ ಕೂಡಿದ ಅನೇಕ ಯಜ್ಞಗಳನ್ನು ಯಥಾವಿಧಿಯಾಗಿ ನೆರವೇರಿಸಿದನು.

೬. ಆ ಮರುತ್ತ ಮಹಾರಾಜನ ರಥಚಕ್ರವು ಏಳು ದ್ವೀಪಗಳಲ್ಲಿಯೂ ತಡೆಯಿಲ್ಲದಂತೆ ಸಂಚಾರಮಾಡಬಲ್ಲುದಾಗಿತ್ತು. ಹಾಗು ಸ್ವರ್ಗ-ಪಾತಾಲಲೋಕಗಳಲ್ಲಿಯೂ, ನೀರಿನಲ್ಲಿಯೂ ಭಂಗವಿಲ್ಲದ ಗಮನವುಳ್ಳದ್ದಾಗಿತ್ತು.

ತತಃ ಪ್ರಾಪ್ಯ ಧನಂ ವಿಪ್ರ ಯಥಾವತ್ಸ್ವಕ್ರಿಯಾಪರಃ ।
ಅಯಜತ್ಸ ಮಹಾಯಜ್ಞೈರ್ದೇವಾನಿನ್ದ್ರಪುರೋಗಮಾನ್ ॥೭॥

ಇತರೇ ಚ ಯಥಾ ವರ್ಣಾಃ ಸ್ವೇ ಸ್ವೇ ಕರ್ಮಣ್ಯತನ್ದ್ರಿತಾಃ ।
ತದುಪಾತ್ತಧನಾಶ್ಚಕ್ರು ರಿಷ್ಟಾಪೂರ್ತಾದಿಕಾಃ ಕ್ರಿಯಾಃ ॥೮॥

ಪಾಲ್ಯಮಾನಾ ಮಹೀ ತೇನ ಮರುತ್ತೇನ ಮಹಾತ್ಮನಾ ।
ಯೋಽಸ್ಪರ್ಧತ್ತ್ರಿದಶಾವಾಸವಾಸಿಭಿರ್ದ್ವಿಜಸತ್ತಮ ॥೯॥

ತೇನಾತಿಶಯಿತಾಃ ಸರ್ವೇ ಕೇವಲಂ ನ ಮಹೀಕ್ಷಿತಃ ।
ಯಜ್ವಿನಾ ದೇವರಾಜೋಽಪಿ ಶತಯಜ್ಞಾಭಿಸನ್ಧಿನಾ ॥೧೦॥

---

೭. ಬ್ರಹ್ಮರ್ಷಿಯಾದ ಕ್ರೌಷ್ಟುಕಿಯೇ! ತರುವಾಯ ಸ್ವಕರ್ಮಾಚರಣೆಯಲ್ಲಿ ತತ್ಪರನಾದ ಮರುತ್ತನು ಧನರಾಶಿಯನ್ನು ಹೊಂದಿ ಮಹಾಯಜ್ಞಸಮಾರಂಭಗಳಿಂದ ಇಂದ್ರ ಮುಂತಾದ ದೇವತೆಗಳನ್ನು ಸಂತೋಷಪಡಿಸಿದನು.

೮. ಹಾಗು ಇತರ ವರ್ಣದ ಪ್ರಜೆಗಳು ಸ್ವಕರ್ಮಾಚರಣೆಯಲ್ಲಿ ಔದಾಸೀನ್ಯವಿಲ್ಲದವರೂ, ರಾಜನಿಂದ ಹೊಂದಿದ ಧನವುಳ್ಳವರೂ ಆಗಿ ಇಷ್ಟಕರ್ಮ ಪೂರ್ತಕರ್ಮಗಳನ್ನು ಮಾಡುತ್ತಿರುವಂತೆ ಏರ್ಪಡಿಸಿದನು.

೯. ದ್ವಿಜೋತ್ತಮನಾದ ಕ್ರೌಷ್ಟುಕಿಯೇ! ಮಹಾತ್ಮನಾದ ಮರುತ್ತರಾಜನಿಂದ ಭೂಮಿಯು ಹಾಗೆ ಪಾಲಿಸಲ್ಪಟ್ಟಿತು. ಅವನ ರಾಜ್ಯದಲ್ಲಿ ಸುಖಭೋಗಿಯಾದ ವ್ಯಕ್ತಿಯು ದೇವಲೋಕದಲ್ಲಿ ವಾಸಮಾಡುವವರೊಡನೆ ಸ್ಪರ್ಧಿಸುವಂತೆ ಇತ್ತು.

೧೦. ಅಂತಹ ಮರುತ್ತರಾಜನಿಂದ ಭೂಮಿಯಲ್ಲಿದ್ದ ಇತರ ಸಮಸ್ತ ರಾಜರು ಮಾತ್ರ ಮೀರಿಸಲ್ಪಟ್ಟಿದ್ದರೆಂದಲ್ಲ, ನೂರಾರು ಯಜ್ಞಾನುಷ್ಠಾನದ ಸಂಕಲ್ಪವುಳ್ಳವನಾಗಿ ಹಾಗೆ ಯಜ್ಞಗಳನ್ನು ಮಾಡಿದ ರಾಜನಿಂದ ದೇವರಾಜನು ಮೀರಿಸಲ್ಪಟ್ಟಿದ್ದನು.

ಋತ್ವಿಕ್ತಸ್ಯ ತು ಸಂವರ್ತೋ ಬಭೂವಾಙ್ಗಿರಸಃ ಸುತಃ ।
ಭ್ರಾತಾ ಬೃಹಸ್ಪತೇರ್ವಿಪ್ರ ಮಹಾತ್ಮಾ ತಪಸಾಂ ನಿಧಿಃ ॥೧೧॥

ಸೌವರ್ಣೋ ಮುಞ್ಜವಾನ್ನಾಮ ಪರ್ವತಃ ಸುರಸೇವಿತಃ ।
ಪಾತಿತಂ ತೇನ ತಚ್ಛೃಙ್ಗಂ ಕೃತೇ ತಸ್ಯ ಮಹೀಪತೇಃ ॥೧೨॥

ತೇನ ಯಸ್ಯಾಖಿಲಂ ಯಜ್ಞೇ ಭೂಮಿಭಾಗಾದಿಕಂ ದ್ವಿಜ ।
ಪ್ರಾಸಾದಾಶ್ಚ ಕೃತಾಃ ಶುಭ್ರಾಸ್ತಪಸಾ ಸರ್ವಕಾಞ್ಚನಾಃ ॥೧೩॥

ಗಾಥಾಶ್ಚಾಪ್ಯತ್ರ ಗಾಯನ್ತಿ ಮರುತ್ತಚರಿತಾಶ್ರಯಾಃ ।
ಸಾತತ್ಯೇನರ್ಷಯಃ ಸರ್ವೇ ಕುರ್ವನ್ತೋಽಧ್ಯಯನಂ ಯಥಾ ॥೧೪॥

---

೧೧. ವಿಪ್ರರ್ಷಿಯೆ! ಆ ಮರುತ್ತರಾಜನಿಗೆ ಮಹಾತ್ಮನೂ, ತಪಸ್ಸಿಗೆ ನಿಧಿಯೂ, ಬೃಹಸ್ಪತಿಯ ಸಹೋದರನೂ ಮತ್ತು ಅಂಗಿರಮುನಿಯ ಪುತ್ರನೂ ಆದ ಸಂವರ್ತ ಎಂಬುವನು ಋತ್ವಿಜನಾಗಿದ್ದನು.

೧೨. ದೇವತೆಗಳಿಂದ ಆಶ್ರಯಿಸಲ್ಪಟ್ಟ ಮುಂಜವಾನ್ ಎಂಬುದೊಂದು ಚಿನ್ನದ ಪರ್ವತವು ಇರುವುದು. ಸಂವರ್ತ ಋತ್ವಿಜನಿಂದ ಮರುತ್ತರಾಜನಿಗೋಸ್ಕರ ಆ ಮುಂಜವತ್ ಪರ್ವತದ ಒಂದು ಶಿಖರವು ಉರುಳಿಸಲ್ಪಟ್ಟಿತು.

೧೩. ಹಾಗೆ ಸಂವರ್ತಋತ್ವಿಜನ ತಪಶ್ಶಕ್ತಿಯಿಂದ ಬಿದ್ದ ಸುವರ್ಣ-ಶಿಖರದಿಂದ ರಾಜನ ಯಜ್ಞಶಾಲೆಯ ಭೂಮಿಭಾಗವೆಲ್ಲವೂ ಸುವರ್ಣಮಯವಾಗಿ ರಚಿಸಲ್ಪಟ್ಟಿತು. ಹಾಗು ನಿರ್ಮಲವೂ ಸುವರ್ಣಮಯವೂ ಆದ ಅನೇಕ ಪ್ರಾಸಾದಗಳು ನಿರ್ಮಿಸಲ್ಪಟ್ಟುವು.

೧೪. ಸಂತತವಾಗಿ ವೇದಾಧ್ಯಯನವನ್ನು ಮಾಡುತ್ತಿದ್ದ ಸಮಸ್ತ ಮಹರ್ಷಿಗಳು ಮರುತ್ತ ಮಹಾರಾಜನ ಚರಿತ್ರೆಯ ವಿಷಯದಲ್ಲಿ ಅನೇಕ ಗಾಥಾ-ಶ್ಲೋಕಗಳನ್ನು ಗಾನಮಾಡುತ್ತಿರುವರು.

ಮರುತ್ತೇನ ಸಮೋ ನಾಭೂದ್ಯಜಮಾನೋ ಮಹೀತಲೇ ।
ಸದಃ ಸಮಸ್ತಂ ಯದ್ಯಜ್ಞೇ ಪ್ರಾಸಾದಾಶ್ಚೈವ ಕಾಞ್ಚನಾಃ ॥೧೫॥

ಅಮಾದ್ಯದಿನ್ದ್ರಃ ಸೋಮೇನ ದಕ್ಷಿಣಾಭಿರ್ದ್ವಿಜಾತಯಃ ।
ವಿಪ್ರಾಣಾಂ ಪರಿವೇಷ್ಟಾರಃ ಶಕ್ರಾದ್ಯಾಸ್ತ್ರಿದಶೋತ್ತಮಾಃ ॥೧೬॥

ಯಥಾ ಯಜ್ಞೇ ಮರುತ್ತಸ್ಯ ತೃಪ್ತಾಃ ಸರ್ವೇ ಮಹೀಪತೇಃ ।
ಸುವರ್ಣಮಖಿಲಂ ತ್ಯಕ್ತಂ ರತ್ನಪೂರ್ಣಗೃಹೇ ದ್ವಿಜೈಃ ॥೧೭॥

ಪ್ರಾಸಾದಾದಿ ಸಮಸ್ತಂ ಚ ಸೌವರ್ಣಂ ತಸ್ಯ ಯತ್ಕ್ರತೌ ।
ತ್ರಯೋ ವರ್ಣಾ ಹ್ಯಲಭ್ಯನ್ತ ತಸ್ಮಾತ್ಕೇಚಿತ್ತಥಾ ದದುಃ ॥೧೮॥

---

೧೫. ಋಷಿಗಳು ಗಾನಮಾಡುವ ಗಾಥಾಶ್ಲೋಕಗಳು ಹೀಗೆ ಅರ್ಥವನ್ನು ಪ್ರಕಾಶಪಡಿಸುವುವು—ಭೂಲೋಕದಲ್ಲಿ ಮರುತ್ತರಾಜನಂತೆ ಯಜ್ಞಗಳನ್ನು ಮಾಡಿದವನು ಬೇರೊಬ್ಬನಿಲ್ಲ. ಮರುತ್ತರಾಜನ ಯಜ್ಞ ಸಮಾರಂಭದಲ್ಲಿ ಸದಸ್ಸು ಮತ್ತು ಪ್ರಾಸಾದ–ಇವೆಲ್ಲವೂ ಸಂಪೂರ್ಣ ಸುವರ್ಣಮಯವಾಗಿವೆ.

೧೬. ಯಜ್ಞದಲ್ಲಿ ಅರ್ಪಿಸಿದ ಸೋಮರಸದಿಂದ ಇಂದ್ರನು ಸಂತೋಷ ಹೊಂದಿದನು. ದಕ್ಷಿಣಾದ್ರವ್ಯದಿಂದ ದ್ವಿಜೋತ್ತಮರು ತೃಪ್ತಿಹೊಂದಿದರು. ಮತ್ತು ಯಜ್ಞಸಮಯದಲ್ಲಿ ಇಂದ್ರ ಮುಂತಾದ ದೇವೋತ್ತಮರು ಬ್ರಾಹ್ಮಣರಿಗೆ ಬಡಿಸುವವರಾಗಿದ್ದರು.

೧೭. ಮರುತ್ತ ಮಹಾರಾಜನ ಯಜ್ಞದಲ್ಲಿ ಎಲ್ಲರೂ ಅತಿಶಯವಾದ ತೃಪ್ತಿಯನ್ನು ಹೊಂದಿದರು. ಅದರ ಫಲವಾಗಿ ದ್ವಿಜರು ರತ್ನಪೂರ್ಣವಾದ ತಮ್ಮ ಮನೆಯಲ್ಲಿ ಎಲ್ಲ ಸುವರ್ಣವನ್ನು ಅಲ್ಲಲ್ಲಿ ಚೆಲ್ಲುವಂತೆ ಆಯಿತು.

೧೮. ಆ ಮರುತ್ತ ಮಹಾರಾಜನ ಯಜ್ಞವೈಭವದಲ್ಲಿ ಪ್ರಾಸಾದಾದಿಗಳೆಲ್ಲ ಸುವರ್ಣಮಯವಾಗಿತ್ತು. ಮತ್ತು ರಾಜನಿಂದ ಹೊಂದಿದ ಸಮೃದ್ಧಿಯಿಂದ ತ್ರೈವರ್ಣಿಕರು ದಾನಾದಿ ಕರ್ಮಗಳನ್ನು ಆಚರಿಸಿದರು.

ತೇನ ತ್ಯಕ್ತೇನ ಶಿಷ್ಟಾ ಯೇ ಜನಾಃ ಪೂರ್ಣಮನೋರಥಾಃ ।
ತೇಽಪಿ ಯಜ್ಞಾನ್ಯಜನ್ತೇ ಸ್ಮ ದೇಶೇ ದೇಶೇ ಪೃಥಕ್ ಪೃಥಕ್ ॥೧೯॥

ತಸ್ಯೈವಂ ಕುರ್ವತೋ ರಾಜ್ಯಂ ಸಮ್ಯಕ್ಪಾಲಯತಃ ಪ್ರಜಾಃ ।
ತಪಸ್ವೀ ಕಶ್ಚಿದಭ್ಯೇತ್ಯ ತಮಾಹ ಮುನಿಸತ್ತಮ ॥೨೦॥

ಪಿತುರ್ಮಾತಾ ತವಾಹೇದಂ ದೃಷ್ಟ್ವಾ ತಾಪಸಮಣ್ಡಲಮ್ ।
ವಿಷಾಭಿಭೂತಮುರಗೈರ್ಮದೋನ್ಮತ್ತೈರ್ನರೇಶ್ವರ ॥೨೧॥

ಪಿತಾಮಹಸ್ತೇ ಸ್ವರ್ಯಾತಃ ಸಮ್ಯಕ್ ಸಂಪಾಲ್ಯ ಮೇದಿನೀಮ್ ।
ಪಿತಾ ತವ ತಥಾ ಶಕ್ತೋ ಹಿತ್ವಾ ಗ್ರಾಮಂ ವನಂ ಗತಃ ॥೨೨॥

---

೧೯. ತ್ಯಾಗಶಾಲಿಯಾದ ರಾಜನಿಂದ ಸಂಪೂರ್ಣಮನೋರಥವುಳ್ಳ ಇತರ ಆಸ್ತಿಕ ಜನರು ಆಯಾಯ ದೇಶದೇಶಗಳಲ್ಲಿ ಬೇರೆ ಬೇರೆಯಾಗಿ ಅನೇಕ ಯಜ್ಞಗಳನ್ನು ಮಾಡಿದರು.

೨೦. ಮುನಿಶ್ರೇಷ್ಠನಾದ ಕ್ರೌಷ್ಟುಕಿಯೇ! ಮರುತ್ತ ಮಹಾರಾಜನು ಹೀಗೆ ರಾಜ್ಯಭಾರವನ್ನು ನಿರ್ವಹಿಸುತ್ತ ಪ್ರಜೆಗಳನ್ನು ಧರ್ಮದಿಂದ ಪಾಲಿಸು-ತ್ತಿರಲು ಒಬ್ಬ ತಪಸ್ವಿಯು ಅವನ ಬಳಿಗೆ ಬಂದು ಹೀಗೆ ಹೇಳಿದನು.

೨೧. ಮಹಾರಾಜನೇ! ಮದೋನ್ಮತ್ತವಾದ ಸರ್ಪಗಳು ಕಡಿದು ವಿಷವೇರಿರುವ ತಪಸ್ವಿಗಳ ಸಮೂಹವನ್ನು ನೋಡಿ ನಿನ್ನ ಪಿತಾಮಹಿಯಾದ ವೀರಾದೇವಿಯು ನಿನಗೆ ಸಂದೇಶವನ್ನು ಹೇಳಿಕಳುಹಿಸಿರುವಳು.

೨೨. ಶ್ರೇಷ್ಠರೀತಿಯಿಂದ ಭೂಮಿಯನ್ನು ಪಾಲಿಸಿ ವನಕ್ಕೆ ಬಂದ ನಿನ್ನ ಪಿತಾಮಹನು ಸ್ವರ್ಗಲೋಕವನ್ನೈದಿದನು. ಹಾಗು ತನ್ನನ್ನು ಅಶಕ್ತನೆಂದು ತಿಳಿದ ನಿನ್ನ ತಂದೆ ಅವಿಕ್ಷಿತನು ರಾಜ್ಯವನ್ನು ಬಿಟ್ಟು ವನಕ್ಕೆ ತೆರಳಿದನು.

ತಪಶ್ಚರಣಶಕ್ತಾಹಮಿಹ ಚೌರ್ವಾಶ್ರಮೇ ಸ್ಥಿತಾ ॥೨೩॥

ಸಾಹಂ ಪಶ್ಯಾಮಿ ವೈಕಲ್ಯಂ ತವ ರಾಜ್ಯಂ ಪ್ರಶಾಸತಃ ।
ಪಿತಾಮಹಸ್ಯ ತೇನಾಭೂದ್ಯತ್ಪೂರ್ವೇಷಾಂ ಚ ತೇ ನೃಪ ॥೨೪॥

ನೂನಂ ಪ್ರಮತ್ತೋ ಭೋಗೇಷು ಸಕ್ತೋ ವಾವಿಜಿತೇನ್ದ್ರಿಯಃ ।
ಚಾರಾನ್ಧತಾ ಯತೋಽಸ್ತೀಯಂ ದುಷ್ಟಾದುಷ್ಟಂ ನ ವೇತ್ಸಿ ಯತ್ ॥೨೫॥

ಪಾತಾಲಾದಭ್ಯುಪೇತೈಸ್ತು ಭುಜಗೈರ್ದಂಶಶಾಲಿಭಿಃ ।
ದಷ್ಟಾ ಮುನಿಸುತಾಃ ಸಪ್ತ ದೂಷಿತಾಶ್ಚ ಜಲಾಶಯಾಃ ॥೨೬॥

---

೨೩. ನನ್ನ ಪತಿದೇವನೊಡನೆ ವನಕ್ಕೆ ಬಂದಿರುವ ನಾನು ತಪಸ್ಸನ್ನು ಮಾಡುವ ಶಕ್ತಿಯನ್ನು ಹೊಂದಿರುವ ದೇಹವನ್ನು ಧರಿಸಿದವಳಾಗಿ ಔರ್ವ ಮುನಿಯ ಆಶ್ರಮದಲ್ಲಿ ಇರುವೆನು.

೨೪. ಇಲ್ಲಿ ವಾಸಮಾಡಿಕೊಂಡಿರುವ ನಾನು ರಾಜ್ಯವನ್ನಾಳುತ್ತಿರುವ ನಿನ್ನಲ್ಲಿ ಕರ್ತವ್ಯಲೋಪವನ್ನು ನೋಡುತ್ತಿರುವೆನು. ಎಲೈ ರಾಜನೇ! ನಿನ್ನ ಪಿತಾಮಹನು ಅಥವಾ ಇನ್ನೂ ಪೂರ್ವಿಕ ರಾಜರ ರಾಜ್ಯಭಾರಸಮಯದಲ್ಲಿ ಕಾಣದಿರುವ ಲೋಪವು ನಿನ್ನಲ್ಲಿದೆ.

೨೫. ನೀನು ಪ್ರಮಾದಹೊಂದಿದ್ದೀಯಾ? ಅಥವಾ ಇಂದ್ರಿಯಗಳನ್ನು ಜಯಿಸಲಾಗದೆ ವಿಷಯಸುಖಭೋಗದಲ್ಲಿ ಆಸಕ್ತನಾಗಿರುವೆಯಾ? ಹೀಗೇಕೆ ನೀನು ಚಾರದೃಷ್ಟಿಯಿಲ್ಲದವನಾದೆ? ರಾಜ್ಯದಲ್ಲಿ ದುಷ್ಟ-ಅದುಷ್ಟ ವಿಭಾಗವನ್ನು ಏಕೆ ತಿಳಿದಿಲ್ಲ?

೨೬. ಪಾತಾಲಲೋಕದಿಂದ ಮೇಲಕ್ಕೆ ಬಂದ, ವಿಷದ ಹಲ್ಲುಗಳಿಂದ ಕೂಡಿದ ಸರ್ಪಗಳಿಂದ ಏಳುಮಂದಿ ಮುನಿಕುಮಾರರು ಕಡಿಯಲ್ಪಟ್ಟಿದ್ದಾರೆ. ಮತ್ತು ತಪಸ್ವಿಗಳಿಗೆ ಆಧಾರವಾದ ಜಲಾಶಯಗಳು ವಿಷದಿಂದ ಕೆಡಿಸಲ್ಪಟ್ಟಿವೆ.

ಸ್ವೇದಮೂತ್ರಪುರೀಷೇಣ ದೂಷಿತಂ ಸುಶೃತಂ ಹವಿಃ ।
ಅಪರಾಧಂ ಸಮುದ್ದಿಶ್ಯ ದತ್ತೋ ನಾಗಬಲಿಶ್ಚಿರಾತ್ ॥೨೭॥

ಏತೇ ಸಮರ್ಥಾ ಮುನಯೋ ಭಸ್ಮೀಕರ್ತುಂ ಭುಜಙ್ಗಮಾನ್ ।
ಕಿಂ ತ್ವೇಷಾಂ ನಾಧಿಕಾರೋಽತ್ರ ತ್ವಮೇವಾತ್ರಾಧಿಕಾರವಾನ್ ॥೨೮॥

ತಾವತ್ಸುಖಂ ಭೂಪತಿಜೈರ್ಭೋಗಜಂ ಪ್ರಾಪ್ಯತೇ ನೃಪ ।
ಅಭಿಷೇಕಜಲಂ ಯಾವನ್ನ ಮೂರ್ಧ್ನಿ ವಿನಿಪಾತ್ಯತೇ ॥೨೯॥

ಕಾನಿ ಮಿತ್ರಾಣಿ ಕಃ ಶತ್ರುರ್ಮಮ ಶತ್ರೋರ್ಬಲಂ ಕಿಯತ್ ।
ಕೋಽಹಂ ಕೇ ಮನ್ತ್ರಿಣಃ ಪಕ್ಷೇ ಕೇ ವಾ ಭೂಪತಯೋ ಮಮ ॥೩೦॥

---

೨೭. ಕರ್ಮಾಂಗವಾಗಿ ಪಚನಮಾಡಿದ ಹವಿಸ್ಸನ್ನು ಸರ್ಪಗಳು ಬೆವರು-ಮಲಮೂತ್ರಗಳಿಂದ ಕೆಡಿಸುತ್ತಿವೆ. ಅಪರಾಧದ ಪರಿಹಾರವನ್ನು ಉದ್ದೇಶಮಾಡಿ ನಾಗಬಲಿ ಎಂಬ ಕರ್ಮಮಾಡಿ ಶಾಂತಿಯು ಮಾಡಲ್ಪಟ್ಟದೆ.

೨೮. ಸರ್ಪಗಳಿಂದ ಪೀಡಿತರಾದ ಮುನಿಗಳು ಸರ್ಪಗಳನ್ನು ಸುಟ್ಟು ಬೂದಿಮಾಡಲು ಸಮರ್ಥರಾಗಿರುವರು. ಆದರೆ ದುಷ್ಟರನ್ನು ನಿಗ್ರಹಿಸಲು ಮುನಿಗಳಿಗೆ ಅಧಿಕಾರವಿಲ್ಲ. ದುಷ್ಟನಿಗ್ರಹದ ಅಧಿಕಾರವು ನಿನ್ನಲ್ಲಿರುವುದು.

೨೯. ಎಲೈ ರಾಜನೇ! ರಾಜ್ಯಪಟ್ಟಾಭಿಷೇಕ ಸಂಸ್ಕಾರವು ನಡೆದು ಆ ಅಭಿಷೇಕದ ಜಲಬಿಂದು ಎಲ್ಲಿಯವರೆಗೆ ತಲೆಯಲ್ಲಿ ಬೀಳುವುದಿಲ್ಲವೋ ಅದುವರೆಗೆ ರಾಜವಂಶದಲ್ಲಿ ಜನಿಸಿದ ಕುಮಾರರಿಂದ ಭೋಗಸುಖವು ಅನುಭವಿಸಲ್ಪಡುವುದು.

೩೦. ಪಟ್ಟಾಭಿಷೇಕವಾದ ಮೇಲೆ ರಾಜನಿಗೆ ಯಾವಾಗಲೂ ಇಂತಹ ವಿಚಾರದೃಷ್ಟಿಯು ಇರಬೇಕಾದುದು. ನನಗೆ ಮಿತ್ರರಾರು? ಶತ್ರು ಯಾರು? ಶತ್ರುವಿನ ಬಲವೆಷ್ಟು? ನಾನು ಎಷ್ಟು ಬಲವುಳ್ಳವನು? ಮಂತ್ರಿಗಳ ಶಕ್ತಿಯೆಷ್ಟು? ಮತ್ತು ನನ್ನ ಪಕ್ಷಕ್ಕೆ ಒಲಿಯುವ ರಾಜರು ಯಾರು?

ಕಿಯಾನ್ ಕೋಶೋ ಬಲಂ ಕಿಂ ವಾ ಕೋಽನುರಕ್ತೋ ಜನೋ ಮಮ ।
ವಿರಕ್ತೋ ವಾ ಪರೈರ್ಭಿನ್ನಃ ಪರೇಷಾಮಪಿ ಕೀದೃಶಃ ॥೩೧॥

ಕಃ ಸಮ್ಯಗತ್ರ ನಗರೇ ವಿಷಯೇ ವಾ ಜನೋ ಮಮ ॥೩೨॥

ಧರ್ಮಕರ್ಮಾಶ್ರಯೋ ಮೂಢಃ ಕಃ ಸಮ್ಯಗಪಿ ವರ್ತತೇ ।
ಕೋ ದಣ್ಡ್ಯಃ ಪರಿಪಾಲ್ಯಃ ಕಃ ಕೇ ಚೋಪೇಕ್ಷ್ಯಾ ನರಾ ಮಯಾ ॥೩೩॥

ಸಾಮಭೇದತಯಾ ದಮ್ಯಾ ದೇಶಕಾಲಮವೇಕ್ಷತಾ ।
ಚಾರಾಂಶ್ಚ ಚಾರಯೇದನ್ಯೈರಜ್ಞಾತಾನ್ಭೂಪತಿಶ್ಚರೈಃ ॥೩೪॥

ಸಚಿವಾದಿಷು ಸರ್ವೇಷು ಚಾರಾನ್ದದ್ಯಾನ್ಮಹೀಪತಿಃ ॥೩೫॥

---

೩೧. ನನ್ನ ಭಂಡಾರಸ್ಥಿತಿಯು ಹೇಗಿದೆ? ಸೈನ್ಯವು ಎಷ್ಟಿದೆ? ನನ್ನಲ್ಲಿ ಅನುರಾಗವನ್ನು ಇಟ್ಟಿರುವ ಜನರು ಯಾರು? ಪರರಿಂದ ಭೇದಿಸಲ್ಪಟ್ಟು ನನ್ನಲ್ಲಿ ಅಪ್ರೀತಿಯನ್ನು ಹೊಂದಿದವರು ಯಾರು? ಪರರಲ್ಲಿ ಯಾರು ಹೇಗಿರುವರು?

೩೨. ನನ್ನ ನಗರದಲ್ಲಿ ನನ್ನಲ್ಲಿ ಸಾಧುರೀತಿಯಿಂದ ವರ್ತಿಸುವವರು ಯಾರು? ಅಥವಾ ನನ್ನ ರಾಷ್ಟ್ರದಲ್ಲಿ ನನ್ನ ಹಿತೈಷಿಗಳು ಯಾರು? ಮತ್ತು ನನ್ನಲ್ಲಿ ಪ್ರತಿಕೂಲರು ಯಾರು?

೩೩. ಧರ್ಮಕರ್ಮಗಳನ್ನು ಅವಲಂಬಿಸಿರುವವನು ಯಾರು? ಮೂಢನು ಯಾರು? ಸಾಧುತನದಿಂದ ಇರುವವನು ಯಾರು? ಶಿಕ್ಷಾರ್ಹನು ಯಾರು? ಪಾಲಿಸಲು ಅರ್ಹನು ಯಾರು? ಅಥವಾ ಉಪೇಕ್ಷೆಯಿಂದ ಇರಬೇಕಾದಂತಹವರು ಯಾರು?

೩೪. ಹಾಗು ದೇಶ-ಕಾಲಗಳನ್ನು ಗಮನಿಸಿ ಉಚಿತವಾದ ಸಾಮ-ಭೇದೋಪಾಯಗಳಿಂದ ಶಿಕ್ಷಿಸಲ್ಪಡಬೇಕಾದವರು ಯಾರು? ಇದನ್ನೆಲ್ಲ ತಿಳಿಯಲು ರಾಜನು ಶತ್ರುರಾಜರ ಚಾರರಿಗೆ ತಿಳಿಯದ ಹಾಗೆ ತನ್ನ ಗೂಢಚಾರರನ್ನು ನಿಯೋಜಿಸಬೇಕು.

೩೫. ಭೂಮಿಯನ್ನು ಪಾಲಿಸುವ ರಾಜನು ತನ್ನ ಪರಿವಾರದಲ್ಲಿ ಸೇರಿದ ಮಂತ್ರಿ ಮುಂತಾದವರ ಶೀಲವನ್ನು ಗೂಢಚಾರರಿಂದ ತಿಳಿಯುತ್ತಿರಬೇಕು.

ಇತ್ಯಾದೌ ಭೂಪತಿರ್ನಿತ್ಯಂ ಕರ್ಮಣ್ಯಾಸಕ್ತಮಾನಸಃ ।
ನಯೇದ್ದಿನಂ ತಥಾ ರಾತ್ರಿಂ ನ ತು ಭೋಗಪರಾಯಣಃ ॥೩೬॥

ರಾಜ್ಞಾಂ ಶರೀರಗ್ರಹಣಂ ನ ಭೋಗಾಯ ಮಹೀಪತೇ ।
ಕ್ಲೇಶಾಯ ಮಹತೇ ಪೃಥ್ವೀಸ್ವಧರ್ಮಪರಿಪಾಲನೇ ॥೩೭॥

ಸಮ್ಯಕ್ಪಾಲಯತಃ ಪೃಥ್ವೀಂ ಸ್ವಧರ್ಮಂ ಚ ಮಹೀಪತೇಃ ।
ಇಹ ಕ್ಲೇಶೋ ಮಹಾನ್ ಸ್ವರ್ಗೇ ಪರಮಂ ಸುಖಮಕ್ಷಯಮ್ ॥೩೮॥

ತದೇತದವಬುಧ್ಯಸ್ವ ಹಿತ್ವಾ ಭೋಗಾನ್ನರೇಶ್ವರ ।
ಪಾಲನಾಯ ಕ್ಷಿತೇಃ ಕ್ಲೇಶಮಙ್ಗೀಕರ್ತುಮಿಹಾರ್ಹಸಿ ॥೩೯॥

ಇತಿ ವೃತ್ತಮೃಷೀಣಾಂ ಯದ್ವ್ಯಸನಂ ತ್ವಯಿ ಶಾಸತಿ ।
ಭುಜಙ್ಗಹೇತುಕಂ ಭೂಪ ಚಾರಾನ್ಧೋ ನಾಪಿ ವೇತ್ಸಿ ತತ್ ॥೪೦॥

---

೩೬. ರಾಜನು ಹೀಗೆ ಸಾಧು ಅಸಾಧು ಜನರನ್ನು ತಿಳಿಯುವ ವಿಚಾರ-ಕರ್ಮವಲ್ಲಿ ಸಂತತವಾಗಿ ಆಸಕ್ತನಾಗಿದ್ದು ಶ್ರಮದಿಂದ ರಾತ್ರಿ ಮತ್ತು ಹಗಲನ್ನು ಕಳೆಯಬೇಕು. ಭೋಗಲಂಪಟನಾಗಿ ಸಮಯವನ್ನು ಕಳೆಯಬಾರದು.

೩೭. ರಾಜ್ಯವನ್ನಾಳುವ ರಾಜನೇ! ರಾಜರು ದೇಹವನ್ನು ಸ್ವೀಕರಿಸು-ವುದು ಭೋಗವನ್ನು ಅನುಭವಿಸುವುದಕ್ಕೆ ಅಲ್ಲ; ರಾಜ್ಯವನ್ನು ರಕ್ಷಿಸಿ ಸ್ವಧರ್ಮ-ವನ್ನು ಪಾಲಿಸುವ ಕ್ಲೇಶಕ್ಕಾಗಿ ರಾಜರಿಗೆ ದೇಹಗ್ರಹಣವು.

೩೮. ರಾಜ್ಯವನ್ನು ಶ್ರೇಷ್ಠರೀತಿಯಲ್ಲಿ ಪಾಲಿಸುವ ಮತ್ತು ಸ್ವಧರ್ಮ-ವನ್ನು ಆಚರಿಸುವ ರಾಜನಿಗೆ ಇಹಲೋಕದಲ್ಲಿ ಅತಿಯಾದ ಕ್ಲೇಶವುಂಟಾಗುವುದು ಹಾಗು ಸ್ವರ್ಗದಲ್ಲಿ ಅಕ್ಷಯವಾದ ಉತ್ತಮ ಸುಖವು ದೊರಕುವುದು.

೩೯. ಮಹಾರಾಜನೇ! ನೀನು ಭೋಗಸುಖವನ್ನು ಬಿಟ್ಟು ಇದೇ ಕರ್ತವ್ಯವೆಂದು ತಿಳಿ. ರಾಜ್ಯಪರಿಪಾಲನೆಗೋಸ್ಕರ ಕ್ಲೇಶವನ್ನು ಅನುಭವಿಸು-ತ್ತೇನೆಂದು ಸ್ಥಿರನಾಗು.

೪೦. ಎಲೈ, ಮಹಾರಾಜನೇ! ನೀನು ರಾಜ್ಯವನ್ನಾಳುತ್ತಿರುವಾಗ ಋಷಿಜನರಲ್ಲಿ ಈ ದುರವಸ್ಥೆಯುಂಟಾಗಿರುವುದು. ಗೂಢಚಾರರಿಂದ ದೃಷ್ಟಿ-ಯಿಲ್ಲದ ನೀನು ಸರ್ಪಗಳಿಂದ ಒದಗಿದ ಕಷ್ಟವನ್ನು ಅರಿಯದವನಾಗಿದ್ದೀಯೆ.

ಬಹುನಾತ್ರ ಕಿಮುಕ್ತೇನ ದುಷ್ಟೇ ದಣ್ಡೋ ನಿಪಾತ್ಯತಾಮ್ ।
ಶಿಷ್ಟಾನ್ಪಾಲಯ ರಾಜಂಸ್ತ್ವಂ ಧರ್ಮಷಡ್ಭಾಗಮಾಪ್ಸ್ಯಸಿ ॥೪೧॥

ಅರಕ್ಷನ್ಪಾಪಮಖಿಲಂ ದುಷ್ಟೈರವಿನಯಾತ್ಕೃತಮ್ ।
ಸಮವಾಪ್ಸ್ಯಸ್ಯಸನ್ದಿಗ್ಧಂ ಯದಿಚ್ಛಸಿ ಕುರುಷ್ವ ತತ್ ॥೪೨॥

ಏತನ್ಮಯೋಕ್ತಂ ಸಕಲಂ ಯತ್ತವಾಹಂ ಪಿತಾಮಹೀ ।
ಕುರುಷ್ವೈವಂ ಸ್ಥಿತೇ ಯತ್ತೇ ರೋಚತೇ ವಸುಧಾಧಿಪ ॥೪೩॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಮರುತ್ತಚರಿತೇ
ಷಡ್ವಿಂಶತ್ಯಧಿಕಶತತಮೋಽಧ್ಯಾಯಃ

---

೪೧. ಭೂಪಾಲಕನೇ! ಹೆಚ್ಚು ಮಾತನಾಡುವುದೇಕೆ? ದುಷ್ಟರಲ್ಲಿ ನೀನು ದಂಡವನ್ನು ಪ್ರಯೋಗಿಸು. ಹಾಗು ಶಿಷ್ಟಜನರನ್ನು ಉದ್ಧಾರಮಾಡು. ಈ ನಿನ್ನ ಸ್ವಧರ್ಮದಿಂದ ಧಾರ್ಮಿಕರ ಪುಣ್ಯದಲ್ಲಿ ಆರನೆಯ ಒಂದುಭಾಗವನ್ನು ಅರ್ಜಿಸುತ್ತೀಯೆ.

೪೨. ಹಾಗೆ ಶಿಷ್ಟಜನರನ್ನು ರಕ್ಷಿಸದಿದ್ದರೆ ದುಷ್ಟರು ಅವಿನಯದಿಂದ ಮಾಡುವ ಸಮಸ್ತ ಪಾತಕವನ್ನು ನಿಸ್ಸಂದೇಹವಾಗಿ ಹೊಂದುತ್ತೀಯೆ. ಹೇಳ-ಬೇಕಾದುವನ್ನು ಹೇಳಿರುವೆನು, ನೀನು ಹೇಗೆ ಇಷ್ಟಪಡುವೆಯೋ ಹಾಗೆಮಾಡು.

೪೩. ರಾಜ್ಯಪಾಲಕನೇ! ನಾನು ನಿನಗೆ ಪಿತಾಮಹಿಯಾಗಿರುವೆನು. ಈ ಕಾರಣದಿಂದ ನನ್ನ ವಕ್ತವ್ಯವನ್ನೆಲ್ಲ ಹೇಳಿರುವೆನು. ಈ ಪ್ರಸಂಗದಲ್ಲಿ ನಿನಗೆ ಯಾವುದು ರುಚಿಸುವುದೋ ಅದರಂತೆ ಮಾಡು.

ಮಾರ್ಕಂಡೇಯ ಮಹಾಪುರಾಣದಲ್ಲಿ ನೂರ ಇಪ್ಪತ್ತಾರನೆಯ ಅಧ್ಯಾಯವು
ಮುಗಿದುದು.

॥ ಓಂ ಶ್ರೀ ದುರ್ಗಾಯೈ ನಮಃ ॥

ಮಾರ್ಕಂಡೇಯ ಪುರಾಣಂ

ಸಪ್ತವಿಂಶತ್ಯಧಿಕಶತತಮೋಽಧ್ಯಾಯಃ

(ಭಾಮಿನ್ಯಾ ಭರ್ತರಿ ಭುಜಙ್ಗರಕ್ಷಣಪ್ರಾರ್ಥನಾ)

ಮಾರ್ಕಣ್ಡೇಯ ಉವಾಚ :—

ಇತಿ ತಾಪಸವಾಕ್ಯಂ ಸ ಶ್ರುತ್ವಾ ಲಜ್ಜಾಪರೋ ನೃಪಃ ।
ಧಿಙ್ಮಾಂ ಚಾರಾನ್ಧಮಿತ್ಯುಕ್ತ್ವಾ ನಿಶ್ವಸ್ಯ ಜಗೃಹೇ ಧನುಃ ॥೧॥

ತತಃ ಸ ತ್ವರಿತಂ ಗತ್ವಾ ತಮೌರ್ವಸ್ಯಾಶ್ರಮಂ ಪ್ರತಿ ।
ವವನ್ದೇ ಶಿರಸಾ ವೀರಾಂ ಮಾತರಂ ಪಿತುರಾತ್ಮನಃ ॥೨॥

ನೂರ ಇಪ್ಪತ್ತೇಳನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಹೇಳಿದನು :—

೧. ಮರುತ್ತರಾಜನು ತಪಸ್ವಿಯು ನುಡಿದ ಈ ವಚನವನ್ನು ಕೇಳಿ ಅತಿಯಾದ ನಾಚಿಕೆಯಿಂದ ಕೂಡಿದವನಾಗಿ " ಚಾರದೃಷ್ಟಿಯಿಲ್ಲದ ನನಗೆ ಧಿಕ್ಕಾ-ರವು " ಎನ್ನುತ್ತ ಉಸಿರುಬಿಟ್ಟು ಕೈಯಲ್ಲಿ ಬಿಲ್ಲನ್ನು ತೆಗೆದುಕೊಂಡನು.

೨. ತರುವಾಯ ಮರುತ್ತರಾಜನು ಆ ಔರ್ವಮುನಿಯ ಆಶ್ರಮಕ್ಕೆ ವೇಗವಾಗಿ ಹೋಗಿ ತಂದೆಯ ಜನನಿಯೂ ತನ್ನ ಪಿತಾಮಹಿಯೂ ಆದ ವೀರಾ-ದೇವಿಯನ್ನು ತಲೆಬಾಗಿಸಿ ನಮಸ್ಕರಿಸಿದನು.

ತಾಪಸಾಂಶ್ಚ ಯಥಾನ್ಯಾಯಂ ತೈಶ್ಚಾಶೀರ್ಭಿರಭಿಷ್ಟುತಃ ।
ದೃಷ್ಟ್ವಾ ಚ ತಾಪಸಾನ್ ಸಪ್ತ ನಾಗೈರ್ದಷ್ಟಾನ್ಮೃತಾನ್ಭುವಿ ॥೩॥

ನಿನಿನ್ದಾತ್ಮಾನಮಸಕೃತ್ ಪುರಸ್ತೇಷಾಂ ಮಹೀಪತಿಃ ।
ಉವಾಚ ಚೈತದದ್ಯಾಹಂ ಮದ್ವೀರ್ಯಮವಮನ್ಯತಾಮ್ ॥೪॥

ಯತ್ಕರೋಮಿ ಭುಜಙ್ಗಾನಾಂ ದುಷ್ಟಾನಾಂ ಬ್ರಾಹ್ಮಣದ್ವಿಷಾಮ್ ।
ತತ್ಪಶ್ಯತು ಜಗತ್ಸರ್ವಂ ಸದೇವಾಸುರಮಾನುಷಮ್ ॥೫॥

ಮಾರ್ಕಣ್ಡೇಯ ಉವಾಚ :—

ಇತ್ಯುಕ್ತ್ವಾ ಜಗೃಹೇ ಕೋಪಾದಸ್ತ್ರಂ ಸಂವರ್ತಕಂ ನೃಪಃ ।
ನಾಶಾಯಾಶೇಷನಾಗಾನಾಂ ಪಾತಾಲೋರ್ವೀವಿಚಾರಿಣಾಮ್ ॥೬॥

---

೩. ಹಾಗು ಯಥಾವಿಧಿಯಾಗಿ ತಪಸ್ವಿ ಜನರಿಗೆ ನಮಸ್ಕಾರಮಾಡಿ ಅವರಿಂದ ಆಶೀರ್ವಚನಗಳಿಂದ ಅಭಿನಂದಿಸಲ್ಪಟ್ಟನು. ಅದಾದ ಬಳಿಕ ಹಾವು ಕಡಿದು ನೆಲದಮೇಲೆ ಸತ್ತು ಬಿದ್ದಿರುವ ಏಳು ಮಂದಿ ಮುನಿಕುಮಾರರನ್ನು ನೋಡಿದನು.

೪. ಮರುತ್ತಮಹಾರಾಜನು ಇತರ ತಪಸ್ವಿ ಜನರೆದುರಿಗೆ ತನ್ನನ್ನು ಮತ್ತೆ ಮತ್ತೆ ನಿಂದಿಸಿಕೊಂಡನು. ಮತ್ತು ಹೀಗೆ ಹೇಳಿದನು. ಇಂದು ನನ್ನ ವೀರ್ಯವನ್ನು ದುಷ್ಟ ಸರ್ಪಗಳು ಅವಮಾನ ಮಾಡಿರುವುವು.

೫. ಬ್ರಾಹ್ಮಣರನ್ನು ದ್ವೇಷಿಸಿದ ದುಷ್ಟವಾದ ಸರ್ಪಗಳಿಗೆ ವೀರನಾದ ನಾನು ಇಂದು ಏನು ಮಾಡುವೆನೊ; ಅದನ್ನು ದೇವ-ದಾನವ-ಮಾನವರಿಂದ ಕೂಡಿದ ಸಮಸ್ತ ಜಗತ್ತು ಪ್ರತ್ಯಕ್ಷವಾಗಿ ನೋಡಲಿ.

ಮಾರ್ಕಂಡೇಯ ಮುನಿಯು ಹೇಳಿದನು :—

೬. ಹೀಗೆಂದು ಹೇಳಿ ಮರುತ್ತರಾಜನು ಕೋಪದಿಂದ ಪಾತಾಲ. ಲೋಕ-ಮರ್ತ್ಯಲೋಕಗಳಲ್ಲಿ ವಾಸಮಾಡುವ ಸಕಲ ಸರ್ಪಗಳನ್ನು ನಾಶ-ಮಾಡಲು ಸಂವರ್ತಕವೆಂಬ ಉತ್ತಮಾಸ್ತ್ರವನ್ನು ತೆಗೆದುಕೊಂಡನು.

ತತೋ ಜಜ್ವಾಲ ಸಹಸಾ ನಾಗಲೋಕಃ ಸಮನ್ತತಃ ।
ಮಹಾಸ್ತ್ರತೇಜಸಾ ವಿಪ್ರ ದಹ್ಯಮಾನೋಽನಿವಾರಿತಃ ॥೭॥

ಹಾ ಹಾ ತಾತೇತಿ ಹಾ ಮಾತರ್ಹಾ ವತ್ಸೇತಿ ಸಮ್ಭ್ರಮೇ ।
ತಸ್ಮಿನ್ನಸ್ತ್ರಕೃತೇ ವಾಚಃ ಪನ್ನಗಾನಾಮಥಾಭವನ್ ॥೮॥

ಕೇಚಿಜ್ಜ್ವಲದ್ಭಿಃ ಪುಚ್ಛಾಗ್ರೈಃ ಫಣೈರನ್ಯೇ ಭುಜಙ್ಗಮಾಃ ।
ಗೃಹೀತಪುತ್ರದಾರಾಶ್ಚ ತ್ಯಕ್ತ್ವಾಭರಣವಾಸಸಃ ॥೯॥

ಪಾತಾಲಮುತ್ಸೃಜ್ಯ ಯಯುಃ ಶರಣಂ ಭಾಮಿನೀಂ ತದಾ ।
ಮರುತ್ತಮಾತರಂ ಪೂರ್ವಂ ಯಯಾ ದತ್ತಂ ತದಾಭಯಮ್ ॥೧೦॥

---

೭. ಬ್ರಹ್ಮರ್ಷಿಯಾದ ಕ್ರೌಷ್ಟುಕಿಯೇ! ತರುವಾಯ ಇದ್ದಕ್ಕಿದ್ದಂತೆಯೇ ಮಹಾಸ್ತ್ರದ ತೇಜೋಜ್ವಾಲೆಯಿಂದ ಕ್ಷಣಕಾಲ ಕೂಡ ಬಿಡದಂತೆಯು ದಹಿಸಲ್ಪಡುತ್ತಿದ್ದ ನಾಗಲೋಕವು ಸುತ್ತಲೂ ಉರಿಯಲು ಆರಂಭಿಸಿತು.

೮. ಅನಂತರ ಸಂವರ್ತಕಾಸ್ತ್ರದಿಂದ ಉಂಟಾದ ಆ ಗಾಬರಿಯ ಸಮಯದಲ್ಲಿ ಅಯ್ಯೋ! ತಂದೆ! ಅಯ್ಯೋ! ತಾಯಿ! ಅಯ್ಯೋ! ಮಗು ಮುಂತಾದ ಸರ್ಪಗಳ ಆರ್ತನಾದವು ಎಲ್ಲೆಲ್ಲಿಯೂ ಕೇಳಿಸಿತು.

೯. ಈ ಪ್ರಸಂಗದಲ್ಲಿ ಕೆಲವು ಸರ್ಪಗಳು ಉರಿಯುತ್ತಿದ್ದ ಬಾಲಗಳ ತುದಿಯಿಂದಲೂ ಮತ್ತೆ ಕೆಲವು ಉರಿಯುತ್ತಿರುವ ಹೆಡೆಗಳ ಅಗ್ರಗಳಿಂದಲೂ ಕೂಡಿದವುಗಳಾಗಿ ಆಭರಣವಸ್ತ್ರಗಳನ್ನು ತ್ಯಜಿಸಿ ಪತ್ನೀ-ಪುತ್ರರನ್ನು ಎತ್ತಿಕೊಂಡು ಅಲ್ಲಿಂದ ಹೊರಟುವು.

೧೦. ಆಗ ಪಾತಾಲಲೋಕವನ್ನು ಬಿಟ್ಟು ತಮಗೆ ಹಿಂದೆ ಅಭಯವನ್ನು ದಾನಮಾಡಿರುವವಳೂ ಮರುತ್ತಮಹಾರಾಜನ ತಾಯಿಯೂ ಆದ ಭಾಮಿನೀ ದೇವಿಯ ಬಳಿಗೆ ಬಂದು ಶರಣು ಹೊಂದಿದುವು.

ತಾಮುಪೇತ್ಯೋರಗಾಃ ಸರ್ವೇ ಸಪ್ರಣಾಮಂ ಭಯಾತುರಾಃ ।
ಸಗದ್ಗದಮಿದಂ ಪ್ರೋಚುಃ ಸ್ಮರ್ಯತಾಂ ನಃ ಪುರೋದಿತಮ್ ॥೧೧॥

ಪ್ರಣಮ್ಯಾಭ್ಯರ್ಥಿತಂ ಪೂರ್ವಂ ಯದಸ್ಮಾಭೀ ರಸಾತಲೇ ।
ತಸ್ಯ ಕಾಲೋಽಯಮಾಯಾತಸ್ತ್ರಾಹಿ ವೀರಪ್ರಜಾಯಿನಿ ॥೧೨॥

ಪುತ್ರೋ ನಿವಾರ್ಯತಾಂ ರಾಜ್ಞಿ ಪ್ರಾಣೈಃ ಸಂಯೋಜ್ಯಮಸ್ತು ನಃ ।
ದಹ್ಯತೇ ಸಕಲೋ ಲೋಕೋ ನಾಗಾನಾಮಸ್ತ್ರವಹ್ನಿನಾ ॥೧೩॥

ಏವಂ ಸನ್ದಹ್ಯಮಾನಾನಾಮಸ್ಮಾಕಂ ತನಯೇನ ತೇ ।
ತ್ವಾಮೃತೇ ಶರಣಂ ನಾನ್ಯತ್ಕೃಪಾಂ ಕುರು ಯಶಸ್ವಿನಿ ॥೧೪॥

---

೧೧. ಭಯದಿಂದ ಗ್ರಸ್ತವಾದ ಎಲ್ಲ ಆ ಸರ್ಪಗಳು ಪ್ರಣಾಮಪೂರ್ವಕವಾಗಿ ಭಾಮಿನಿಯನ್ನು ಶರಣುಹೊಂದಿ ಗದ್ಗದಧ್ವನಿಯಿಂದ ಈ ವಚನವನ್ನು ಹೇಳಿದುವು. ನೀನು ಹಿಂದೆ ನಮಗೆ ಕೊಟ್ಟ ಅಭಯ ವಚನವನ್ನು ಸ್ಮರಿಸಿಕೊ.

೧೨. ವೀರಸಂತತಿಯನ್ನು ಹೊಂದಿದವಳೇ! ಪಾತಾಳಲೋಕದಲ್ಲಿ ಹಿಂದೆ ನಮ್ಮಿಂದ ಪ್ರಣಾಮಪೂರ್ವಕವಾಗಿ ನಿನ್ನಲ್ಲಿ ಪ್ರಾರ್ಥಿಸಲ್ಪಟ್ಟಿದೆ. ಅದರಂತೆ ಈಗ ನಮ್ಮನ್ನು ಕಾಪಾಡು. ನಮ್ಮನ್ನು ರಕ್ಷಿಸಬೇಕಾದ ಕಾಲವು ಈಗ ಪ್ರಾಪ್ತವಾಗಿದೆ.

೧೩. ವೀರರಾಣಿಯಾದ ಭಾಮಿನಿಯೇ! ನಮ್ಮನ್ನು ವಧಿಸಲು ತೊಡಗಿದ ಪುತ್ರನನ್ನು ನಿವಾರಣಮಾಡು. ನಾವು ಪ್ರಾಣಸಹಿತರಾಗಿ ಬಾಳುವಂತಾಗಲಿ, ಈಗಾಗಲೇ ಅಸ್ತ್ರಾಗ್ನಿಜ್ವಾಲೆಯಿಂದ ನಾಗಲೋಕವು ಸಂಪೂರ್ಣವಾಗಿ ಸುಟ್ಟು ಬೂದಿಯಾಗುತ್ತಿದೆ.

೧೪. ಕೀರ್ತಿಶಾಲಿಯಾದ ಭಾಮಿನಿಯೇ! ನಿನ್ನ ವೀರಪುತ್ರನಾದ ಮರುತ್ತನಿಂದ ಅಸ್ತ್ರಾಗ್ನಿಯಿಂದ ಸುಡಲ್ಪಡುತ್ತಿರುವ ನಮಗೆ ನಿನ್ನನ್ನು ಬಿಟ್ಟು ಬೇರೊಂದು ಶರಣವಿಲ್ಲ. ಈಗ ನೀನು ನಮ್ಮಲ್ಲಿ ದಯೆತೋರು.

ಮಾರ್ಕಣ್ಡೇಯ ಉವಾಚ :—

ಇತಿ ಶ್ರುತ್ವಾ ವಚಸ್ತೇಷಾಂ ಸಂಸ್ಮೃತ್ಯಾದೌ ಚ ಭಾಷಿತಮ್ ।
ಭರ್ತಾರಮಾಹ ಸಾ ಸಾಧ್ವೀ ಸಸಮ್ಭ್ರಮಮಿದಂ ವಚಃ ||೧೫||

ಪೂರ್ವಮೇವ ತವಾಖ್ಯಾತಂ ಪಾತಾಲೇ ಯದ್ಭುಜಙ್ಗಮೈಃ ।
ಪ್ರೋಕ್ತಮಭ್ಯರ್ಥನಾಪೂರ್ವಂ ಮಮಾಸೀತ್ತನಯಂ ಪ್ರತಿ ||೧೬||

ತ ಇಮೇಽಭ್ಯಾಗತಾ ಭೀತಾ ದಹ್ಯನ್ತೇ ತಸ್ಯ ತೇಜಸಾ ।
ಮಾಮೇತೇ ಶರಣಂ ಪೂರ್ವಂ ದತ್ತಮೇಭ್ಯೋ ಮಯಾಭಯಮ್ ||೧೭||

ಯೇ ಮಾಂ ಶರಣಮಾಪನ್ನಾಸ್ತೇ ತ್ವಾಂ ಶರಣಮಾಗತಾಃ ।
ಅಪೃಥಗ್ಧರ್ಮಚರಣಾ ಯಾತಾಹಂ ಶರಣಂ ತವ ||೧೮||

ಮಾರ್ಕಂಡೇಯ ಮುನಿಯು ಹೇಳಿದನು :—

೧೫. ಹೀಗೆ ಪತಿವ್ರತೆಯಾದ ಭಾಮಿನಿಯು ಸರ್ಪಗಳು ಹೇಳಿದ ಈ ಬಗೆಯ ವಚನವನ್ನು ಕೇಳಿ ಮೊದಲು ತಾನು ಅವುಗಳಿಗೆ ಭಾಷೆಯಿತ್ತಿರುವುದನ್ನು ನೆನಸಿಕೊಂಡು ತನ್ನ ಪತಿದೇವನನ್ನು ಕುರಿತು ಸಂಭ್ರಮದಿಂದ ಈ ಮಾತನ್ನು ಹೇಳಿದಳು.

೧೬. ಪತಿದೇವನೇ ! ನನ್ನ ಪುತ್ರನ ವಿಷಯವಾಗಿ ಹಿಂದೆ ಪಾತಾಲ-ಲೋಕದಲ್ಲಿ ಸರ್ಪಗಳಿಂದ ಪ್ರಾರ್ಥನಾಪೂರ್ವಕವಾಗಿ ನನ್ನಲ್ಲಿ ಏನು ಹೇಳಲ್ಪಟ್ಟಿತ್ತೋ ಸರ್ಪಗಳ ಆ ಪ್ರಾರ್ಥನಾವಚನವು ನನ್ನಿಂದ ನಿನಗೆ ಮೊದಲು ಹೇಳಲ್ಪಟ್ಟಿದೆ.

೧೭. ಹಾಗೆಯೇ ಸರ್ಪಗಳು ನನ್ನ ಪುತ್ರನಾದ ಮರುತ್ತಮಹಾರಾಜನ ಅಸ್ತ್ರಾಗ್ನಿಜ್ವಾಲೆಯಿಂದ ಸುಟ್ಟುಹೋಗುತ್ತಿವೆ. ಆದರಿಂದ ಭಯಗೊಂಡು ಇವು ನನ್ನಲ್ಲಿ ಶರಣಾರ್ಥಿಯಾಗಿ ಬಂದಿರುವುವು. ಇವುಗಳಿಗೆ ನಾನು ಹಿಂದೆಯೇ ಅಭಯವನ್ನು ಕೊಟ್ಟಿರುವೆನು.

೧೮. ಯಾರು ನನ್ನನ್ನು ಶರಣುಹೊಂದಿರುವರೋ ಅವರು ನಿನ್ನನ್ನು ಶರಣುಹೊಂದಿದಂತೆಯೇ ಸರಿ. ನಿನ್ನೊಡನೆ ಸಮಾನಧರ್ಮಚಾರಿಣಿಯಾದ ನಾನು ನನ್ನ ಶರಣಾಗತರನ್ನು ರಕ್ಷಿಸಲು ನಿನ್ನನ್ನು ಶರಣುಹೊಂದಿರುವೆನು.

ತನ್ನಿವಾರಯ ಪುತ್ರಂ ತ್ವಂ ಮರುತ್ತಂ ವಚನಾತ್ತವ ।
ಮಯಾ ಚಾಭ್ಯರ್ಥಿತೋಽವಶ್ಯಂ ಶಮಮಭ್ಯುಪಯಾಸ್ಯತಿ ॥೧೯॥

ರಾಜೋವಾಚ :—

ಮಹಾಪರಾಧೇ ನಿಯತಂ ಮರುತ್ತಃ ಕ್ರೋಧಮಾಗತಃ ।
ದುರ್ನಿವರ್ತ್ಯಮಹಂ ಮನ್ಯೇ ತಸ್ಯ ಕ್ರೋಧಂ ಸುತಸ್ಯ ತೇ ॥೨೦॥

ನಾಗಾ ಊಚುಃ :—

ಶರಣಾಗತಾಸ್ತವ ವಯಂ ಪ್ರಸಾದಃ ಕ್ರಿಯತಾಂ ನೃಪ ।
ಕ್ಷತ್ರಸ್ಯಾರ್ತಪರಿತ್ರಾಣನಿಮಿತ್ತಂ ಶಸ್ತ್ರಧಾರಣಮ್ ॥೨೧॥

ಮಾರ್ಕಣ್ಡೇಯ ಉವಾಚ :—

ನಾಗಾನಾಂ ತದ್ವಚಃ ಶ್ರುತ್ವಾ ಭೂತಾನಾಂ ಶರಣೈಷಿಣಾಮ್ ।
ತಯಾ ಚಾಭ್ಯರ್ಥಿತಃ ಪತ್ನ್ಯಾ ಪ್ರಾಹಾವಿಕ್ಷಿನ್ಮಹಾಯಶಾಃ ॥೨೨॥

---

೧೯. ಆದುದರಿಂದ ಪುತ್ರನಾದ ಮರುತ್ತನನ್ನು ಸರ್ಪವಧದಿಂದ ಹಿಂತಿರುಗಿಸು. ನಿನ್ನ ಆಜ್ಞಾವಚನದಿಂದಲೂ ಮತ್ತು ನನ್ನ ಪ್ರಾರ್ಥನೆಯಿಂದಲೂ ಮರುತ್ತನು ತಪ್ಪದೇ ಶಾಂತಿಯನ್ನು ಹೊಂದುವನು.

ಅವಿಕ್ಷಿತರಾಜನಿಂತೆಂದನು :—

೨೦. ಮರುತ್ತಮಹಾರಾಜನು ಮಹತ್ತಾದ ಅಪರಾಧದ ನಿಮಿತ್ತದಿಂದ ಸರ್ಪಗಳಲ್ಲಿ ಕೋಪತಾಳಿರುವನು. ನಿನ್ನ ಪುತ್ರನಾದ ಮರುತ್ತನಲ್ಲಿ ಉಂಟಾದ ಈ ಕೋಪವನ್ನು ಶಮನಮಾಡುವುದು ಕಷ್ಟವಾದುದೆಂದು ನಾನು ಭಾವಿಸುವೆನು.

ನಾಗಗಳಿಂತೆಂದುವು : --

೨೧. ಮಹಾರಾಜನೇ ! ನಾವು ನಿನ್ನಲ್ಲಿ ಶರಣಾಗತರಾಗಿದ್ದೇವೆ. ಆದುದರಿಂದ ನಮ್ಮಲ್ಲಿ ಅನುಗ್ರಹವಿಟ್ಟು ರಕ್ಷಿಸು. ಕ್ಷತ್ರಿಯವ್ಯಕ್ತಿಗೆ ನೊಂದವರನ್ನು ರಕ್ಷಿಸುವ ಸಲುವಾಗಿಯೆ ಶಸ್ತ್ರಧಾರಣವು ವಿಹಿತವಾಗಿರುವುದು.

೨೨. ಶರಣಾರ್ಥಿಯಾಗಿ ಬಂದಿರುವ ಪ್ರಾಣಿಯಾದ ಆ ಸರ್ಪಗಳು ಹೇಳಿರುವ ಈ ವಚನವನ್ನು ಕೇಳಿ ಹಾಗು ಪತ್ನಿಯಾದ ಭಾಮಿನಿಯಿಂದ ಈ ರೀತಿಯಾಗಿ ಪ್ರಾರ್ಥಿಸಲ್ಪಟ್ಟಿರುವ, ಮಹಾಕೀರ್ತಿಸಂಪನ್ನನಾದ ಅವಿಕ್ಷಿತ-ರಾಜನು ಹೀಗೆ ಹೇಳಿದನು.

ಗತ್ವಾ ಬ್ರವೀಮಿ ತಂ ಭದ್ರೇ ತನಯಂ ತ್ವರಯಾ ತವ ।
ಪರಿತ್ರಾಣಾಯ ನಾಗಾನಾಂ ನ ತ್ಯಾಜ್ಯಾಃ ಶರಣಾಗತಾಃ ॥೨೫॥

ನೋಪಸಂಹರತೇ ಸೋಽಸ್ತ್ರಂ ಯದಿ ಮದ್ವಚನಾನ್ನೃಪಃ ।
ತದಾಸ್ತ್ರೈರ್ವಾರಯಿಷ್ಯಾಮಿ ತಸ್ಯಾಸ್ತ್ರಂ ತನಯಸ್ಯ ತೇ ॥೨೬॥

ಮಾರ್ಕಣ್ಡೇಯ ಉವಾಚ :—

ತತೋ ಗೃಹೀತ್ವಾ ಸ ಧನುರವಿಕ್ಷಿತ್ಕ್ಷತ್ರಿಯೋತ್ತಮಃ ।
ಭಾರ್ಯಯಾ ಸಹಿತಃ ಪ್ರಾಯಾತ್ತ್ವರಾವಾನ್ ಭಾರ್ಗವಾಶ್ರಮಮ್ ॥೨೭॥

ಇತಿ ಶ್ರೀ ಮಾರ್ಕಣ್ಡೇಯಮಹಾಪುರಾಣೇ ಮರುತ್ತಚರಿತೇ
ಸಪ್ತವಿಂಶತ್ಯಧಿಕಶತತಮೋಽಧ್ಯಾಯಃ

---

೨೫. ಮಂಗಳಮೂರ್ತಿಯೇ ! ನಾನೀಗ ತ್ವರೆಪಟ್ಟು ಹೋಗಿ ನಿನ್ನ ಪುತ್ರನಾದ ಮರುತ್ತನಿಗೆ ನಾಗಗಳನ್ನು ರಕ್ಷಿಸುವಂತೆ ಹೇಳುವೆನು. ಶರಣು-ಹೊಂದಿದ ಪ್ರಾಣಿಯನ್ನು ರಕ್ಷಿಸದೇ ಬಿಡಲಾಗದು.

೨೬. ಮರುತ್ತಮಹಾರಾಜನು ನನ್ನ ಆಜ್ಞೆಯನ್ನು ಲಾಲಿಸಿ ಅದರಂತೆ ತೊಟ್ಟ ಅಸ್ತ್ರವನ್ನು ಹಿಂತೆಗೆದುಕೊಳ್ಳದಿದ್ದರೆ ಆಗ ಆ ನಿನ್ನ ಮಗನ ಅಸ್ತ್ರವನ್ನು ನನ್ನ ಪ್ರತ್ಯಸ್ತ್ರಗಳ ಪ್ರಯೋಗದಿಂದ ತಡೆಗಟ್ಟುತ್ತೇನೆ.

ಮಾರ್ಕಂಡೇಯ ಮುನಿಯು ಹೇಳಿದನು :—

೨೭. ತರುವಾಯ ಕ್ಷತ್ರಿಯರಲ್ಲಿ ಶ್ರೇಷ್ಠನಾದ ಅವಿಕ್ಷಿತಮಹಾರಾಜನು ಬಿಲ್ಲು-ಬಾಣಗಳನ್ನು ತೆಗೆದುಕೊಂಡು ಪತ್ನಿಯಾದ ಭಾಮಿನಿಯೊಡಗೂಡಿ ಬಲು ತ್ವರೆಯಿಂದ ಭಾರ್ಗವಮುನಿಯ ಆಶ್ರಮಕ್ಕೆ ತೆರಳಿದನು.

ಮಾರ್ಕಂಡೇಯ ಮಹಾಪುರಾಣದಲ್ಲಿ ನೂರ ಇಪ್ಪತ್ತೇಳನೆಯ
ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಅಷ್ಟಾವಿಂಶತ್ಯಧಿಕಶತತಮೋಽಧ್ಯಾಯಃ

(ಭಾರ್ಗವಾದಿಭಿರವಿಕ್ಷಿನ್ಮರುತ್ತಯೋಃ ಸಾನ್ತ್ವನಮ್)

ಮಾರ್ಕಣ್ಡೇಯ ಉವಾಚ :—

ಸ ತು ತತ್ರ ಸುತಂ ದೃಷ್ಟ್ವಾ ಗೃಹೀತವರಕಾರ್ಮುಕಮ್ ।
ಧನುಃ ಶಸ್ತ್ರಂ ಚ ತಸ್ಯೋಗ್ರಂ ಜ್ವಾಲಾವ್ಯಾಪ್ತದಿಗನ್ತರಮ್ ॥೧॥

ಉದ್ಗಿರನ್ತಂ ಮಹಾವಹ್ನಿಂ ದೀಪಿತಾಖಿಲಭೂತಲಮ್ ।
ಪಾತಾಲಾನ್ತರ್ಗತಂ ಪ್ರಾಪ್ತಮಸಹ್ಯಂ ಘೋರಭೀಷಣಮ್ ॥೨॥

ನೂರ ಇಪ್ಪತ್ತೆಂಟನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಹೇಳಿದನು :—

೧. ಭಾರ್ಗವಾಶ್ರಮಕ್ಕೆ ಹೋದ ಅವಿಕ್ಷಿತನು ಕೈಯಲ್ಲಿ ಹಿಡಿದಿರುವ ಶ್ರೇಷ್ಠವಾದ ಬಿಲ್ಲು-ಬಾಣಗಳುಳ್ಳ ಪುತ್ರನನ್ನು ನೋಡಿದನು. ಮತ್ತು ಜ್ವಾಲೆಯಿಂದ ವ್ಯಾಪಿಸಿದ ದಿಗಂತರಗಳಿಂದ ಕೂಡಿದ ಬಿಲ್ಲು-ಶಸ್ತ್ರಗಳು ರಾಜನಿಗೆ ಕಂಡುವು.

೨. ಹಾಗು ಅವನು ಪ್ರಯೋಗಿಸಿದ ಅಸ್ತ್ರವು ಅಧಿಕವಾದ ಅಗ್ನಿಯನ್ನು ಸೃಜಿಸುವುದೂ, ಉರಿಸಲ್ಪಟ್ಟ ಸಕಲ ಭೂಲೋಕವುಳ್ಳದ್ದೂ, ಪಾತಾಲಲೋಕದೊಳಗೆ ಪ್ರವೇಶಿಸಿರುವುದೂ, ಘೋರವೂ, ಭಯಂಕರವೂ ಮತ್ತು ಸಹಿಸಲಾಗದಂತಿರುವುದೂ ಆಗಿತ್ತು.

ಸ ತಂ ದೃಷ್ಟ್ವಾ ಮಹೀಪಾಲಂ ಭ್ರುಕುಟೀಕುಟಿಲಾನನಮ್ ।
ಮಾ ಕ್ರುಧಸ್ತ್ವಂ ಮರುತ್ತಾಸ್ತ್ರಮುಪಸಂಹ್ರಿಯತಾಮಿತಿ ॥೩॥

ಸ್ವಾಹಾಸಕೃತ್ತ್ವರಾಲುಪ್ತವರ್ಣಕ್ರಮಮುದಾರಧೀಃ ।
ಸ ನಿಶಮ್ಯ ಗುರೋರ್ವಾಕ್ಯಂ ದೃಷ್ಟ್ವಾ ತಂ ಚ ಪುನಃ ಪುನಃ ॥೪॥

ಗೃಹೀತಕಾರ್ಮುಕಃ ಪಿತ್ರೋಃ ಪ್ರಣಿಪತ್ಯ ಸಗೌರವಮ್ ।
ಪ್ರತ್ಯುವಾಚಾಪರಾದ್ಧಾ ಮೇ ಸುಭೃಶಂ ಪನ್ನಗಾಃ ಪಿತಃ ॥೫॥

ಶಾಸತೀವಮಾಂ ಮಯಿ ಮಹೀಂ ಪರಿಭೂಯ ಬಲಂ ಮಮ ।
ಸಪ್ತಾಶ್ರಮಮುಪಾಗಮ್ಯ ದಷ್ಟಾ ಮುನಿಕುಮಾರಕಾಃ ॥೬॥

---

೩. ಆಗ ಅವಿಕ್ಷಿತನು ಹುಬ್ಬುಗಂಟಿಕ್ಕಿ ವಕ್ರವಾದ ಮುಖವುಳ್ಳ ಆ ಮರುತ್ತರಾಜನನ್ನು ನೋಡಿ ಈ ರೀತಿಯಾಗಿ ಹೇಳಿದನು. ಮರುತ್ತನೇ! ಕೋಪಮಾಡಬೇಡ. ನೀನು ಪ್ರಯೋಗಿಸಿದ ಅಸ್ತ್ರವನ್ನು ಹಿಂದಕ್ಕೆ ತೆಗೆದುಕೊ.

೪. ಉದಾರವಾದ ಬುದ್ಧಿಯುಳ್ಳ ಅವಿಕ್ಷಿತನು ತ್ವರೆಯಿಂದ ಲುಪ್ತವಾದ ಅಕ್ಷರಗಳ ಕ್ರಮವಿರುವಂತೆ ಈ ಮಾತನ್ನು ಮತ್ತೆ ಮತ್ತೆ ಹೇಳಿದನು. ಆಗ ಮರುತ್ತನು ತಂದೆಯ ವಚನವನ್ನು ಕೇಳಿ ಎದುರಿಗೆ ಬಂದ ಗುರುವನ್ನು ಮತ್ತೆ ಮತ್ತೆ ನೋಡಿದನು.

೫. ಕೈಯಲ್ಲಿ ಹಿಡಿದಿರುವ ಬಿಲ್ಲುಳ್ಳ ಮರುತ್ತನು ತಂದೆ-ತಾಯಿಗಳಿಗೆ ಗೌರವಪೂರ್ವಕವಾಗಿ ವಂದಿಸಿ ಪ್ರತ್ಯುತ್ತರವಿತ್ತನು. ತಂದೆಯೇ! ಸರ್ಪಗಳು ನನ್ನ ವಿಷಯದಲ್ಲಿ ಅತಿಯಾಗಿ ಅಪರಾಧವನ್ನೆಸಗಿವೆ.

೬. ನಾನು ಈ ಭೂಮಿಯನ್ನು ಆಳುತ್ತಿರಲು ಈ ಸರ್ಪಗಳು ನನ್ನ ವಿಕ್ರಮಕ್ಕೆ ಕಳಂಕವನ್ನು ತಂದು ಮುನಿಗಳು ವಾಸಿಸುವ ಆಶ್ರಮಕ್ಕೆ ಬಂದು ಏಳುಮಂದಿ ಮುನಿಕುಮಾರಕರನ್ನು ಕಡಿದಿರುವುವು.

ಋಷೀಣಾಮಾಶ್ರಮಸ್ಥಾನಾಮವಿಕ್ಷಾಮವನೀಪತೇ ।
ಮಯಿ ಶಾಸತಿ ದುರ್ವೃತ್ತೈರ್ದೂಷಿತಾನಿ ಹವೀಂಷಿ ಚ ॥೭॥

ಜಲಾಶಯಾಸ್ತಥಾಪ್ಯೇತೈಃ ಸರ್ವ ಏವ ಹಿ ದೂಷಿತಾಃ ॥೮॥

ತದೇತತ್ಕಾರಣಂ ಕಿಞ್ಚಿನ್ನ ವಕ್ತವ್ಯಂ ತ್ವಯಾ ಪಿತಃ ।
ನ ನಿವಾರಯಿತವ್ಯೋಽಹಂ ಬ್ರಹ್ಮಘ್ನಾನ್ ಪ್ರತಿ ಪನ್ನಗಾನ್ ॥೯॥

ಅವಿಕ್ಷಿದುವಾಚ :—

ಯದ್ಯೇಭಿರ್ನಿಹತಾ ವಿಪ್ರ ಯಾಸ್ಯನ್ತಿ ನರಕಂ ಮೃತಾಃ ।
ಮಮೈತತ್ಕ್ರಿಯತಾಂ ವಾಕ್ಯಂ ವಿರಮಾಸ್ತ್ರಪ್ರಯೋಗತಃ ॥೧೦॥

---

೭. ಭೂಮಿಯ ಅಧಿಪತಿಯಾದ ತಂದೆಯೇ! ನಾನು ಭೂಮಂಡಲವನ್ನು ರಕ್ಷಿಸುತ್ತಿರಲು ಕೆಟ್ಟನಡತೆಯುಳ್ಳ ಸರ್ಪಗಳಿಂದ ಆಶ್ರಮಗಳಲ್ಲಿ ವಾಸಮಾಡುವ ಮುನಿಗಳ ಯಜ್ಞಾಂಗವಾದ ಹವಿಸ್ಸುಗಳು ಕೆಡಿಸಲ್ಪಟ್ಟುವು.

೮. ಹಾಗು ಕೊಬ್ಬಿದ ಬುದ್ಧಿಯುಳ್ಳ ಈ ಸರ್ಪಗಳಿಂದ ಆಶ್ರಮದ ಬಳಿಯಿರುವ ಸಕಲ ಜಲಾಶಯಗಳು ಮಲ-ಮೂತ್ರ-ವಿಷಗಳಿಂದ ಕೆಡಿಸಲ್ಪಟ್ಟಿರುವುವು.

೯. ತಂದೆಯೇ! ನಾನು ಕೋಪತಾಳುವುದಕ್ಕೆ ಇದೇ ಕಾರಣವು. ನೀನು ಈ ವಿಷಯದಲ್ಲಿ ಯಾವ ಮಾತನ್ನು ಕೂಡ ಹೇಳಬಾರದು. ಬ್ರಹ್ಮಹತ್ಯೆಯನ್ನು ಮಾಡಿದ ಸರ್ಪಗಳ ವಿಷಯದಲ್ಲಿ ಶಿಕ್ಷಿಸತೊಡಗಿದ ನನ್ನನ್ನು ತಡೆಯಬಾರದು.

ಅವಿಕ್ಷಿತನು ಇಂತೆಂದನು :—

೧೦. ಒಂದು ಸಮಯದಲ್ಲಿ ಈ ಸರ್ಪಗಳಿಂದ ವಿಪ್ರರು ಹತರಾಗಿದ್ದರೆ ಅವರು ಮೃತರಾಗಿ ನರಕಕ್ಕೆ ಹೋಗಲಿ. ಆದರೆ ನೀನು ನನ್ನ ಮಾತನ್ನು ಕೇಳಬೇಕು. ಅಸ್ತ್ರಪ್ರಯೋಗವನ್ನು ನಿಲ್ಲಿಸು.

ಮರುತ್ತ ಉವಾಚ :—

ನಾಹಮೇಷಾಂ ಕ್ಷಮಿಷ್ಯಾಮಿ ದುಷ್ಟಾನಾಮಪರಾಧಿನಾಮ್ ||೧೧||

ಅಹಮೇವ ಗಮಿಷ್ಯಾಮಿ ನರಕಂ ಯದಿ ಪಾಪಿನಾಮ್ |
ನ ನಿಗ್ರಹೇ ಯತಾಮ್ಯೇಷಾಂ ಮಾಂ ನಿವಾರಯ ಮಾ ಪಿತಃ ||೧೨||

ಅವಿಕ್ಷಿದುವಾಚ :—

ಮಾಮೇತೇ ಶರಣಂ ಪ್ರಾಪ್ತಾಃ ಪನ್ನಗಾ ಮಮ ಗೌರವಾತ್ |
ಉಪಸಂಹ್ರಿಯತಾಮಸ್ತ್ರಮಲಂ ಕೋಪೇನ ತೇ ನೃಪ ||೧೩||

ಮರುತ್ತ ಉವಾಚ :—

ನಾಹಮೇಷಾಂ ಕ್ಷಮಿಷ್ಯಾಮಿ ದುಷ್ಟಾನಾಮಪರಾಧಿನಾಮ್ |
ಸ್ವಧರ್ಮಮುಲ್ಲಙ್ಘ್ಯ ಕಥಂ ಕರಿಷ್ಯಾಮಿ ವಚಸ್ತವ ||೧೪||

ಮರುತ್ತನು ನುಡಿದನು :—

೧೧. ತಂದೆಯೇ! ಅಪರಾಧ ಮಾಡಿರುವ ಮತ್ತು ದುಷ್ಟಬುದ್ಧಿಯುಳ್ಳ ಈ ಸರ್ಪಗಳ ವಿಷಯದಲ್ಲಿ ನಾನು ಎಳ್ಳಷ್ಟೂ ಕ್ಷಮೆಯನ್ನು ತೋರಿಸುವವನಲ್ಲ.

೧೨. ಜನಕನೇ! ಹೀಗೆ ಪಾಪವೆಸಗಿದ ದುಷ್ಟರನ್ನು ನಿಗ್ರಹಿಸಲು ನಾನು ಯತ್ನಿಸದಿದ್ದರೆ ಪಾಪಿಗಳು ಹೋಗಬೇಕಾದ ನರಕಕ್ಕೆ ನಾನೇ ಹೋಗಬೇಕಾಗುವುದು. ದುಷ್ಟನಿಗ್ರಹದಲ್ಲಿ ತೊಡಗಿದ ನನ್ನನ್ನು ತಡೆಯಬೇಡ.

ಅವಿಕ್ಷಿತನು ಹೇಳಿದನು :—

೧೩. ಮರುತ್ತ ಮಹಾರಾಜನೇ! ಈ ಸರ್ಪಗಳು ನನ್ನನ್ನು ಶರಣು ಹೊಂದಿರುವುವು. ಆದ್ದರಿಂದ ನನ್ನ ಗೌರವದಿಂದ ನೀನು ಪ್ರಯೋಗಮಾಡಿದ ಅಸ್ತ್ರವನ್ನು ಹಿಂತೆಗೆದುಕೊ. ನೀನು ಹೀಗೆ ಕೋಪಮಾಡಬೇಡ.

ಮರುತ್ತನು ಹೀಗೆಂದನು :—

೧೪. ಪೂಜ್ಯರಾದ ಮುನಿಜನರಲ್ಲಿ ತಪ್ಪುಮಾಡಿದ ನೀಚಾತ್ಮರಾದ ಸರ್ಪಗಳನ್ನು ನಾನು ಕ್ಷಮಿಸುವವನಲ್ಲ. ಮತ್ತು ನಾನು ನನ್ನ ಸ್ವಧರ್ಮವನ್ನು ಉಲ್ಲಂಘಿಸಿ ನಿನ್ನ ವಚನವನ್ನು ಗೌರವಿಸಿ ನಡೆಸುವುದು ಹೇಗೆ?

ದಣ್ಡ್ಯೇ ನಿಪಾತಯನ್ ದಣ್ಡಂ ಭೂಪಃ ಶಿಷ್ಟಾಂಶ್ಚ ಪಾಲಯನ್ ।
ಪುಣ್ಯಲೋಕಾನವಾಪ್ನೋತಿ ನರಕಾಂಶ್ಚಾಪ್ಯುಪೇಕ್ಷಣಾತ್ ॥೧೫॥

ಮಾರ್ಕಣ್ಡೇಯ ಉವಾಚ :—

ಏವಂ ಸ ಬಹುಶಃ ಪಿತ್ರಾ ವಾರ್ಯಮಾಣೋಽಮ್ಬಯಾ ಸಹ ।
ನೋಪಸಂಹರತೇ ಸೋಽಸ್ತ್ರಂ ತತೋಽಸೌ ಪುನರಬ್ರವೀತ್ ॥೧೬॥

ಹಿಂಸಸೇ ಪನ್ನಗಾನ್ಭೀತಾನ್ಮಮೈತಾಞ್ಛರಣಂ ಗತಾನ್ ।
ವಾರ್ಯಮಾಣೋಽಪಿ ತಸ್ಮಾತ್ತೇ ಕರಿಷ್ಯಾಮಿ ಪ್ರತಿಕ್ರಿಯಾಮ್॥೧೭॥

ಮಯಾಪ್ಯಸ್ತ್ರಾಣ್ಯವಾಪ್ತಾನಿ ನ ತ್ವಮೇಕೋಽಸ್ತ್ರವಿದ್ಭುವಿ ।
ಮಮಾಗ್ರತಃ ಸುದುರ್ವೃತ್ತ ಪೌರುಷಂ ಚ ಕಿಯತ್ತವ ॥೧೮॥

---

೧೫. ಶಿಕ್ಷಾರ್ಹರಾದವರಲ್ಲಿ ದಂಡವನ್ನು ಪ್ರಯೋಗಿಸುವವನೂ, ಶಿಷ್ಟಜನರನ್ನು ಪಾಲಿಸುವವನೂ ಆದ ರಾಜನು ಪುಣ್ಯಲೋಕವನ್ನು ಹೊಂದುವನು. ಅದಿಲ್ಲದೆ ತನ್ನ ಧರ್ಮವನ್ನು ಉಪೇಕ್ಷಿಸಿದ ರಾಜನು ನರಕಕ್ಕೆ ಹೋಗುವನು.

ಮಾರ್ಕಂಡೇಯ ಮುನಿಯು ಹೇಳಿದನು :—

೧೬. ಹೀಗೆ ತಾಯಿ ಮತ್ತು ತಂದೆಯಿಂದ ಅನೇಕಸಲ ಸರ್ಪವಧವು ಬೇಡವೆಂದು ತಡೆಯಲ್ಪಟ್ಟರೂ ಮರುತ್ತನು ತನ್ನ ಅಸ್ತ್ರವನ್ನು ಉಪಸಂಹಾರ ಮಾಡದಿರಲು ಆಗ ಅವಿಕ್ಷಿತನು ಮತ್ತೆ ಹೀಗೆಂದನು.

೧೭. ಮರುತ್ತನೇ ! ಬಲು ಭಯಗೊಂಡು ನನ್ನನ್ನು ಶರಣುಹೊಂದಿರುವ ಸರ್ಪಗಳನ್ನು ನೀನು ಎಷ್ಟೇ ನನ್ನಿಂದ ತಡೆಯಲ್ಪಟ್ಟರೂ ಹಿಂಸಿಸುತ್ತಿದ್ದೀಯೆ. ಆದುದರಿಂದ ನಾನೀಗ ನಿನಗೆ ಪ್ರತೀಕಾರವನ್ನು ಮಾಡುವೆನು.

೧೮. ನನ್ನಿಂದಲೂ ಅಸ್ತ್ರಗಳು ಗ್ರಹಿಸಲ್ಪಟ್ಟಿವೆ. ಭೂಲೋಕದಲ್ಲಿ ಅಸ್ತ್ರವೇತ್ತನು ನೀನೊಬ್ಬನೇ ಅಲ್ಲ. ನೀಚವರ್ತನೆಯನ್ನು ಹೊಂದಿದ ಪುತ್ರನೇ ! ನನ್ನ ಮುಂದೆ ನಿನ್ನ ಪೌರುಷವಾದರೂ ಎಷ್ಟರದು ?

ತತಃ ಕಾರ್ಮುಕಮಾರೋಪ್ಯ ಕೋಪತಾಮ್ರವಿಲೋಚನಃ ।
ಅವಿಕ್ಷಿದಸ್ತ್ರಂ ಜಗ್ರಾಹ ಕಾಲಸ್ಯ ಮುನಿಪುಙ್ಗವಃ ||೧೯||

ತತೋ ಜ್ವಾಲಾಪರೀವಾರಮರಿಸಙ್ಘಘ್ನಮುತ್ತಮಮ್ ।
ಕಾಲಾಸ್ತ್ರಂ ತು ಮಹಾವೀರ್ಯಂ ಯೋಜಯಾಮಾಸ ಕಾರ್ಮುಕೇ ||೨೦||

ತತಶ್ಚುಕ್ಷೋಭ ಜಗತೀ ಸಂವರ್ತಾಸ್ತ್ರಪ್ರತಾಪಿತಾ ।
ಸಾಬ್ಧಿಶೈಲಾಖಿಲಾ ವಿಪ್ರ ಕಾಲಸ್ಯಾಸ್ತ್ರೇ ಸಮುದ್ಯತೇ ||೨೧||

ಮಾರ್ಕಣ್ಡೇಯ ಉವಾಚ :—

ಕಾಲಾಸ್ತ್ರಮುದ್ಯತಂ ಪಿತ್ರಾ ಮರುತ್ತಃ ಸೋಽಪಿ ವೀಕ್ಷ್ಯತತ್ ।
ಪ್ರಾಹೋಚ್ಚೈರಸ್ತ್ರಮೇತನ್ಮೇ ದುಷ್ಟಶಾಸ್ತಿಸಮುದ್ಯತಮ್ ||೨೨||

---

೧೯. ಹೀಗೆಂದು ಹೇಳಿದ ತರುವಾಯ ಮುನಿಶ್ರೇಷ್ಠನೂ ಕೋಪದಿಂದ ಕೆಂಡದಂತಾದ ಕಣ್ಣುಗಳುಳ್ಳವನೂ ಆದ ಅವಿಕ್ಷಿತನು ಬಿಲ್ಲನ್ನು ಹೆದೆಯೇರಿಸಿ ಕಾಲದೇವತೆಯ ಅಸ್ತ್ರವನ್ನು ತೆಗೆದುಕೊಂಡನು.

೨೦. ಅನಂತರದಲ್ಲಿ ಅಗ್ನಿಜ್ವಾಲೆಗಳಿಂದ ಸುತ್ತಲ್ಪಟ್ಟಿರುವುದೂ, ಶತ್ರುಗಳ ಗುಂಪನ್ನು ನಾಶಮಾಡುವುದೂ, ಮಹತ್ತಾದ ವೀರ್ಯವುಳ್ಳದ್ದೂ ಮತ್ತು ಉತ್ತಮವೂ ಆದ ಕಾಲಾಸ್ತ್ರವನ್ನು ತನ್ನ ಬಿಲ್ಲಿನಲ್ಲಿ ಸಂಧಾನಮಾಡಿದನು.

೨೧. ವಿಪ್ರರ್ಷಿಯಾದ ಕೌಷ್ಟುಕಿಯೇ! ಮೊದಲು ಸಂವರ್ತಾಸ್ತ್ರದಿಂದ ಬೆಂದುಹೋದ ಸಮುದ್ರ-ಪರ್ವತಶ್ರೇಣಿಗಳಿಂದ ಕೂಡಿದ ಸಮಸ್ತ ಪೃಥ್ವಿಯು ಕಾಲಾಸ್ತ್ರವು ಪ್ರಯೋಗಕ್ಕೆ ಸಿದ್ಧವಾಗಲು ಅತಿಯಾಗಿ ಕ್ಷೋಭಗೊಂಡಿತು.

ಮಾರ್ಕಂಡೇಯ ಮುನಿಯು ಹೇಳಿದನು :--

೨೨. ಆಗ ಕಾಲಾಸ್ತ್ರವನ್ನು ತಂದೆಯು ಎತ್ತಿ ಹಿಡಿದಿರುವುದನ್ನು ಕಂಡು ಮರುತ್ತಮಹಾರಾಜನು ಹೀಗೆ ಗಟ್ಟಿಯಾಗಿ ಕೂಗಿ ಹೇಳಿದನು, ನನ್ನ ಸಂವರ್ತಾಸ್ತ್ರವು ದುಷ್ಟನಿಗ್ರಹಕ್ಕೋಸ್ಕರ ಪ್ರಯೋಗಿಸಲ್ಪಟ್ಟಿರುವುದು.

ನ ತ್ವದ್ವಧಾಯ ಕಾಲಾಸ್ತ್ರಂ ಮಯಿ ಮುಞ್ಚತಿ ಕಿಂ ಭವಾನ್ ।
ಸ್ವಧರ್ಮಚಾರಿಣಿ ಸುತೇ ಸದೈವಾಜ್ಞಾಕರೇ ತವ ॥೨೩॥

ಮಯಾ ಕಾರ್ಯಂ ಮಹಾಭಾಗ ಪ್ರಜಾನಾಂ ಪರಿಪಾಲನಮ್ ।
ತ್ವಯ್ಯೇವಂ ಕ್ರಿಯತೇ ಕಸ್ಮಾನ್ಮದ್ವಧಾಯಾಸ್ತ್ರಮುದ್ಯತಮ್ ॥೨೪॥

ಅವಿಕ್ಷಿದುವಾಚ :—

ಶರಣಾಗತಸನ್ತ್ರಾಣಂ ಕರ್ತುಂ ವ್ಯವಸಿತಾ ವಯಮ್ ।
ತಸ್ಯ ವ್ಯಾಘಾತಕರ್ತಾ ತ್ವಂ ನ ಮೇ ಜೀವನ್ವಿಮೋಕ್ಷ್ಯಸೇ ॥೨೫॥

ಮಾಂ ವಾ ಹತ್ವಾಸ್ತ್ರವೀರ್ಯೇಣ ಜಹಿ ದುಷ್ಟಾನಿಹೋರಗಾನ್ ।
ತ್ವಾಂ ವಾ ಹತ್ವಾಹಮಸ್ತ್ರೇಣ ರಕ್ಷಿಷ್ಯಾಮಿ ಮಹೋರಗಾನ್ ॥೨೬॥

---

೨೩. ತಂದೆಯೆ! ನಿನ್ನನ್ನು ವಧಿಸಲು ಸಂವರ್ತಾಸ್ತ್ರವನ್ನು ಬಿಟ್ಟಿಲ್ಲ. ಹೀಗಿರಲು ಸ್ವಧರ್ಮಾಚರಣೆಯಲ್ಲಿರುವವನೂ ಮತ್ತು ಯಾವಾಗಲೂ ನಿನ್ನ ಆಜ್ಞೆಯಂತೆ ನಡೆಯುವವನೂ ಆದ ನನ್ನಲ್ಲಿ ನೀನು ಕಾಲಾಸ್ತ್ರವನ್ನು ಏಕೆ ಪ್ರಯೋಗಿಸುತ್ತೀಯೆ?

೨೪. ಮಹಾತ್ಮನಾದ ತಂದೆಯೇ! ಪ್ರಜೆಗಳ ಪರಿಪಾಲನವು ನನಗೆ ಸೇರಿದ ಕರ್ತವ್ಯವಲ್ಲವೆ? ನಿನ್ನಿಂದ ಏಕೆ ಹೀಗೆ ಮಾಡಲ್ಪಡುವುದು? ನನ್ನ ಸಂಹಾರಕ್ಕೆ ಏಕೆ ಅಸ್ತ್ರವನ್ನು ಎತ್ತಿದ್ದೀಯೆ?

ಅವಿಕ್ಷಿತನು ಇಂತೆಂದನು:

೨೫. ನಾವು ಶರಣಾಗತರಾದವರನ್ನು ರಕ್ಷಿಸಲು ಉದ್ಯಮವನ್ನು ಕೈಗೊಂಡಿರುವೆವು. ನೀನು ಶರಣಾಗತ ರಕ್ಷಣೆಗೆ ಅಡ್ಡಿಯನ್ನು ಮಾಡುವವನಾಗಿದ್ದೀಯೆ. ನನ್ನೆದುರಿನಿಂದ ಜೀವಂತನಾಗಿ ಹಿಂದಕ್ಕೆ ಹೋಗಲಾರೆ.

೨೬. ನೀನು ಮೊದಲು ನಿನ್ನ ಅಸ್ತ್ರವೀರ್ಯದಿಂದ ನನ್ನನ್ನು ಕೊಂದು ನಿನ್ನ ಸಂಕಲ್ಪದಂತೆ ದುಷ್ಟ ಸರ್ಪಗಳನ್ನು ವಧಿಸು. ಅಥವಾ ನಾನು ನನ್ನ ಕಾಲಾಸ್ತ್ರದಿಂದ ನಿನ್ನನ್ನು ವಧಿಸಿ ನನಗೆ ಶರಣಾಗತರಾದ ಸರ್ಪಗಳನ್ನು ರಕ್ಷಿಸುತ್ತೇನೆ.

ಧಿಕ್ತಸ್ಯ ಜೀವಿತಂ ಪುಂಸಃ ಶರಣಾರ್ಥಿನಮಾಗತಮ್ ।
ಯೋ ನಾರ್ತಮನುಗೃಹ್ಣಾತಿ ವೈರಿಪಕ್ಷಮಪಿ ಧ್ರುವಮ್ ॥೨೭॥

ಕ್ಷತ್ರಿಯೋಽಹಮಿಮೇ ಭೀತಾಃ ಶರಣಂ ಮಾಮುಪಾಗತಾಃ ।
ಅಪಕರ್ತಾ ತ್ವಮೇಷಾಂ ಕಥಂ ವಧ್ಯೋ ನ ಮೇ ಭವಾನ್ ॥೨೮॥

ಮರುತ್ತ ಉವಾಚ :—

ಮಿತ್ರಂ ವಾ ಬಾನ್ಧವೋ ವಾಪಿ ಪಿತಾ ವಾ ಯದಿ ವಾ ಗುರುಃ ।
ಪ್ರಜಾಪಾಲನವಿಘ್ನಾಯ ಯೋ ಹನ್ತವ್ಯಃ ಸ ಭೂಭೃತಾ ॥೨೯॥

ಸೋಽಹಂ ತೇ ಪ್ರಹರಿಷ್ಯಾಮಿ ನ ಕ್ರೋದ್ಧವ್ಯಂ ತ್ವಯಾ ಪಿತಃ ।
ಸ್ವಧರ್ಮಃ ಪರಿಪಾಲ್ಯೋ ಮೇ ನ ಮೇ ಕ್ರೋಧಸ್ತವೋಪರಿ ॥೩೦॥

---

೨೭. ನಿಜವಾಗಿ ಶತ್ರುಪಕ್ಷಕ್ಕೆ ಸೇರಿದವನಾಗಿದ್ದರೂ ನೊಂದವನಾಗಿ ಶರಣಾಗತನಾದವನನ್ನು ಯಾವ ಮಾನವನು ರಕ್ಷಿಸಿ ಅನುಗ್ರಹ ಮಾಡುವುದಿಲ್ಲವೋ ಅಂತಹವನ ಜನ್ಮಕ್ಕೆ ಧಿಕ್ಕಾರವು.

೨೮. ನಾನು ಕ್ಷತ್ರಿಯ ಜಾತಿಯಲ್ಲಿ ಹುಟ್ಟಿದವನು. ಭಯಗ್ರಸ್ತವಾದ ಈ ಸರ್ಪಗಳು ನನ್ನನ್ನು ಶರಣುಹೊಂದಿವೆ. ನನ್ನ ಶರಣಾಗತರಾದವರಲ್ಲಿ ನೀನು ಶಿಕ್ಷೆಮಾಡಿ ಅಪಕಾರಮಾಡುತ್ತಿರುವೆ. ಆದ್ದರಿಂದ ನೀನು ನನಗೆ ಹೇಗೆ ತಾನೆ ವಧಾರ್ಹನಾಗಿಲ್ಲ ?

ಮರುತ್ತನು ಹೇಳಿದನು :- -

೨೯. ಮಿತ್ರನಾಗಲಿ, ಬಂಧುವಾಗಲಿ, ತಂದೆಯಾಗಲಿ ಅಥವಾ ಗುರುವಾಗಲಿ ರಾಜನ ಕರ್ತವ್ಯವಾದ ಪ್ರಜಾಪಾಲನೆಗೆ ಯಾರಿಂದ ಅಡ್ಡಿಯುಂಟಾಗುವುದೋ ಅಂತಹವನನ್ನು ರಾಜನು ವಧಿಸಲೇಬೇಕು.

೩೦. ತಂದೆಯೇ ! ಸ್ವಧರ್ಮತತ್ಪರನಾದ ನಾನು ನಿನ್ನ ಮೇಲೆ ಅಸ್ತ್ರವನ್ನು ಪ್ರಹರಿಸುವೆನು. ನೀನು ನನ್ನಲ್ಲಿ ಕೋಪಮಾಡಲಾಗದು. ನನಗೆ ಸ್ವಧರ್ಮವು ಪಾಲಿಸೀಯವಾದುದು. ಅಷ್ಟೇ ಹೊರತು ನನಗೆ ನಿನ್ನ ಮೇಲೆ ಕೋಪವಿಲ್ಲ.

ಮಾರ್ಕಣ್ಡೇಯ ಉವಾಚ :—

ತತಸ್ತೌ ನಿಶ್ಚಿತೌ ದೃಷ್ಟ್ವಾ ಪರಸ್ಪರವಧಂ ಪ್ರತಿ ।
ಸಮುತ್ಪತ್ಯಾನ್ತರೇ ತಸ್ಥುರ್ಮುನಯೋ ಭಾರ್ಗವಾದಯಃ ॥೩೧॥

ಊಚುಶ್ಚೈನಂ ನ ಮೋಕ್ತವ್ಯಂ ತ್ವಯಾಸ್ತ್ರಂ ಪಿತರಂ ಪ್ರತಿ ।
ತ್ವಯಾ ಚ ನಾಯಂ ಹನ್ತವ್ಯಃ ಪುತ್ರಃ ಪ್ರಖ್ಯಾತಚೇಷ್ಟಿತಃ ॥೩೨॥

ಮರುತ್ತ ಉವಾಚ :—

ಮಯಾ ದುಷ್ಟಾ ನಿಹನ್ತವ್ಯಾಃ ಸನ್ತೋ ರಕ್ಷ್ಯಾ ಮಹೀಕ್ಷಿತಾ ।
ಇಮೇ ಚ ದುಷ್ಟಾ ಭುಜಗಾಃ ಕೋಽಪರಾಧೋಽತ್ರ ಮೇ ದ್ವಿಜಾಃ
॥೩೩॥

ಮಾರ್ಕಂಡೇಯ ಮುನಿಯು ಹೇಳಿದನು :—

೩೧. ತರುವಾಯ ತಂದೆ-ಮಕ್ಕಳೀರ್ವರೂ ತಮ್ಮ ತಮ್ಮ ಕರ್ತವ್ಯ-ನಿರ್ವಹಣೆಗೆ ಒಬ್ಬರನ್ನೊಬ್ಬರು ವಧಿಸುವ ನಿಶ್ಚಯ ಹೊಂದಿರುವುದನ್ನು ಕಂಡು ಭಾರ್ಗವ ಮುಂತಾದ ಅನೇಕ ಮಹರ್ಷಿಗಳು ಬೇಗ ನೆಗೆದು ಬಂದು ತಂದೆ-ಮಕ್ಕಳ ನಡುವೆ ನಿಂತುಕೊಂಡರು.

೩೨. ಮತ್ತು ತಂದೆಯ ಮೇಲೆ ನೀನು ಅಸ್ತ್ರವನ್ನು ಪ್ರಯೋಗಿಸಬಾರ-ದೆಂದು ಮರುತ್ತನಿಗೆ ಹೇಳಿದರು. ಹಾಗು ನಿನ್ನಿಂದ ಲೋಕವಿಖ್ಯಾತವಾದ ವ್ಯಾಪಾರವುಳ್ಳ ಪುತ್ರನು ವಧಿಸಲ್ಪಡಬಾರದೆಂದು ಅವಿಕ್ಷಿತನಿಗೆ ಹೇಳಿದರು.

ಮರುತ್ತನು ಹೇಳಿದನು :—

೩೩. ಭೂಮಿಯನ್ನು ಆಳುತ್ತಿರುವ ನನ್ನಿಂದ ದುಷ್ಟಪ್ರಾಣಿಗಳು ಕೊಲ್ಲಲ್ಪಡಬೇಕು. ಸಾಧುಗಳು ರಕ್ಷಿಸಲ್ಪಡಬೇಕು. ಇದು ನನ್ನ ಧರ್ಮವು. ಈ ಸರ್ಪಗಳು ದುಷ್ಟವಾಗಿವೆ. ದ್ವಿಜೋತ್ತಮರೇ ! ಈ ವಿಷಯದಲ್ಲಿ ನನ್ನ ಅಪರಾಧ-ವೇನಿದೆ ?

ಅವಿಕ್ಷಿದುವಾಚ :—

ಶರಣಾಗತಸನ್ತ್ರಾಣಂ ಮಯಾ ಕಾರ್ಯಮಯಂ ಚ ಮೇ ।
ಅಪರಾಧ್ಯಃ ಸುತೋ ವಿಪ್ರಾ ಯೋ ಹನ್ತಿ ಶರಣಾಗತಾನ್ ||೩೪||

ಋಷಯ ಊಚುಃ :—

ಇಮೇ ವದನ್ತಿ ಭುಜಗಾಸ್ತ್ರಾಸಲೋಲವಿಲೋಚನಾಃ ।
ಸಞ್ಜೀವಯಾಮಸ್ತಾನ್ವಿಪ್ರಾನ್ಯೇ ದಷ್ಟಾ ದುಷ್ಟಪನ್ನಗೈಃ ||೩೫||

ತದಲಂ ವಿಗ್ರಹೇಣೋಭೌ ರಾಜವರ್ಯೌ ಪ್ರಸೀದತಾಮ್ ।
ಉಭಾವಪಿ ವಿನಿರ್ವ್ಯೂಢಪ್ರತಿಜ್ಞೌ ಧರ್ಮಕೋವಿದೌ ||೩೬||

ಅವಿಕ್ಷಿತನು ಹೇಳಿದನು :—

೩೪. ಶರಣಾಗತರನ್ನು ಬದುಕಿಸುವುದು ನನ್ನ ಕರ್ತವ್ಯವಾಗಿದೆ. ವಿಪ್ರೋತ್ತಮರಾದ ಮುನಿಗಳೇ! ನನ್ನ ಪುತ್ರನು ಶರಣಾಗತರನ್ನು ಕೊಲ್ಲುತ್ತಿರುವನು. ಆದ್ದರಿಂದ ಈ ನನ್ನ ಪುತ್ರನು ನನಗೆ ಅಪರಾಧಿಯಾಗಿರುವನು.

ಋಷಿಗಳು ಹೇಳಿದರು :--

೩೫. ಭಯದಿಂದ ಚಂಚಲವಾದ ದೃಷ್ಟಿಯುಳ್ಳ ಈ ಸರ್ಪಗಳು ಹೀಗೆ ಹೇಳುತ್ತಿವೆ. ದುಷ್ಟಭಾವವನ್ನು ಹೊಂದಿದ ಸರ್ಪಗಳಿಂದ ಕಡಿಯಲ್ಪಟ್ಟು ಮರಣ ಹೊಂದಿರುವ ವಿಪ್ರರನ್ನು ನಾವು ಸಂಜೀವನಗೊಳಿಸುತ್ತೇವೆ.

೩೬. ಆದುದರಿಂದ ರಾಜೋತ್ತಮರೀರ್ವರು ಪ್ರಸನ್ನರಾಗಲಿ. ಇಬ್ಬರಿಗೂ ಯುದ್ಧವು ಸಾಕು. ಇಬ್ಬರೂ ಧರ್ಮವೇತ್ತರೂ ಮತ್ತು ಪೂರ್ತಿಗೊಳಿಸಿದ ಪ್ರತಿಜ್ಞೆಯುಳ್ಳವರೂ ಆಗಿದ್ದೀರಿ.

ಮಾರ್ಕಣ್ಡೇಯ ಉವಾಚ :—

ಸಾ ತು ವೀರಾ ಸಮಭ್ಯೇತ್ಯ ಪುತ್ರಮೇತದಭಾಷತ ।
ಮದ್ವಾಕ್ಯಾದೇಷ ತೇ ಪುತ್ರೋ ಹನ್ತುಂ ನಾಗಾನ್ ಕೃತೋದ್ಯಮಃ ||೩೭||

ತನ್ನಿಷ್ಪನ್ನಂ ಯದಾ ವಿಪ್ರಾಸ್ತೇ ಜೀವನ್ತಿ ತಥಾ ಮೃತಾಃ ।
ಸಞ್ಜೀವನ್ತಶ್ಚ ಮುಚ್ಯನ್ತೇ ಯದ್ಯುಷ್ಮಚ್ಛರಣಂ ಗತಾಃ ||೩೮||

ಭಾಮಿನ್ಯುವಾಚ :—

ಅಹಮಭ್ಯರ್ಥಿತಾ ಪೂರ್ವಮೇಭಿಃ ಪಾತಾಲಸಂಶ್ರಯೈಃ ।
ತನ್ನಿಮಿತ್ತಮಯಂ ಭರ್ತಾ ಮಯಾತ್ರ ವಿನಿಯೋಜಿತಃ ||೩೯||

ತದೇತದಾರ್ಯೇ ನಿರ್ವೃತ್ತಮುಭಯೋರಪಿ ಶೋಭನಮ್ ।
ಮಮ ಭರ್ತುಶ್ಚ ಪುತ್ರಸ್ಯ ತ್ವತ್ಪೌತ್ರಸ್ಯಾತ್ಮಜಸ್ಯ ಚ ||೪೦||

ಮಾರ್ಕಂಡೇಯ ಮುನಿಯು ಹೇಳಿದನು :—

೩೭. ಆ ಸಮಯದಲ್ಲಿ ವೀರಾದೇವಿಯು ಅಲ್ಲಿಗೆ ಬಂದು ತನ್ನ ಪುತ್ರನಾದ ಅವಿಕ್ಷಿತನಿಗೆ ಹೀಗೆಂದಳು, ನನ್ನ ಆಜ್ಞೆಯಂತೆ ಈ ನಿನ್ನ ಪುತ್ರನಾದ ಮರುತ್ತನು ಸರ್ಪಗಳನ್ನು ವಧಿಸಲು ಉದ್ಯಮವನ್ನು ಕೈಗೊಂಡನು.

೩೮. ಯಾವಾಗ ಹಾವು ಕಡಿದು ಮರಣಹೊಂದಿದ ವಿಪ್ರರು ಮತ್ತೆ ಬದುಕುವರೋ ಮತ್ತು ನಿಮ್ಮಲ್ಲಿ ಶರಣುಹೊಂದಿದ ಸರ್ಪಗಳು ನಿರಪರಾಧಿಗಳಾಗಿ ಪ್ರಾಣಸಹಿತವಾಗಿ ಬಿಡುಗಡೆಯನ್ನು ಹೊಂದುವುವೋ ಆಗ ನಮ್ಮ ಇಷ್ಟವು ಪೂರ್ತಿಯಾಯಿತು.

ಭಾಮಿನೀದೇವಿಯು ಹೇಳಿದಳು :—

೩೯. ಪಾತಾಳಲೋಕದಲ್ಲಿ ವಾಸಿಸುವ ಈ ಸರ್ಪಗಳಿಂದ ನಾನು ಹಿಂದೆ ಪ್ರಾರ್ಥಿಸಲ್ಪಟ್ಟಿದ್ದೆನು. ಆ ನಿಮಿತ್ತದಿಂದ ಶರಣಾಗತರನ್ನು ರಕ್ಷಿಸುವ ಈ ಕಾರ್ಯದಲ್ಲಿ ನನ್ನ ಪತಿದೇವನು ಉದ್ಯಮಿಸುವಂತೆ ಮಾಡಿದೆನು.

೪೦. ಪೂಜ್ಯಳೇ! ಹೀಗೆ ಒದಗಿದ ವಿಷಮಪ್ರಸಂಗದಲ್ಲಿ ಈಗ ನನ್ನ ಪತಿ-ಪುತ್ರರಿಗೂ ನಿನ್ನ ಪುತ್ರ-ಪೌತ್ರರಿಬ್ಬರಿಗೂ ಮಂಗಳಕರವಾದ ಪರಿಣಾಮವುಂಟಾಯಿತು.

ಮಾರ್ಕಣ್ಡೇಯ ಉವಾಚ :—

ತತಸ್ಸಂಜೀವಯಾಮಾಸುಸ್ತಾನ್ವಿಪ್ರಾಂಸ್ತೇ ಭುಜಙ್ಗಮಾಃ |
ದಿವ್ಯೈರೋಷಧಿಜಾತೈಶ್ಚ ವಿಷಸಂಹರಣೇನ ಚ ||೪೧||

ಪಿತ್ರೋರ್ನನಾಮ ಚರಣೌ ಸ ತತೋ ಜಗತೀಪತಿಃ |
ಮರುತ್ತಶ್ಚ ಸ ತಂ ಪ್ರೀತ್ಯಾ ಪರಿಷ್ವಜ್ಯೇದಮಬ್ರವೀತ್ ||೪೨||

ಮಾನಹಾ ಭವ ಶತ್ರೂಣಾಂ ಚಿರಂ ಪಾಲಯ ಮೇದಿನೀಮ್ |
ಪುತ್ರಪೌತ್ರೈಶ್ಚ ಮೋದಸ್ವ ಮಾ ಚ ತೇ ಸನ್ತು ವಿದ್ವಿಷಃ ||೪೩||

ತತೋ ದ್ವಿಜೈರನುಜ್ಞಾತೌ ವೀರಯಾ ಚ ನರೇಶ್ವರೌ |
ಸಮಾರೂಢೌ ರಥಂ ಸಾ ಚ ಭಾಮಿನೀ ಸ್ವಪುರಂ ಗತಾ ||೪೪||

ಮಾರ್ಕಂಡೇಯ ಮುನಿಯು ಹೇಳಿದನು :—

೪೧. ತರುವಾಯ ಸರ್ಪಗಳು ದಿವ್ಯವಾದ ಔಷಧಿಗಳ ರಾಶಿಯಿಂದಲೂ ಮತ್ತು ವಿಷವನ್ನು ತೆಗೆಯುವ ಉಪಾಯಗಳಿಂದಲೂ ಮರಣಹೊಂದಿದ್ದ ವಿಪ್ರರನ್ನು ಮತ್ತೆ ಸಂಜೀವನಗೊಳಿಸಿದುವು.

೪೨. ತರುವಾಯ ಭೂಮಿಪಾಲಕನಾದ ಮರುತ್ತಮಹಾರಾಜನು ತಂದೆ-ತಾಯಿಗಳ ಚರಣಗಳಿಗೆ ವಂದನಮಾಡಿದನು. ಅವಿಕ್ಷಿತನು ಪ್ರೀತಿಯಿಂದ ಅಪ್ಪಿ-ಕೊಂಡು ಮರುತ್ತನಿಗೆ ಹೀಗೆ ಹೇಳಿದನು.

೪೩. ಶತ್ರುಗಳ ಮಾನವನ್ನು ಭಂಗಗೊಳಿಸುವವನಾಗು. ಚಿರಕಾಲ ಭೂಮಿಯನ್ನು ಪಾಲಿಸು. ಪುತ್ರ-ಪೌತ್ರರಿಂದೊಡಗೂಡಿ ಸುಖವನ್ನು ಅನುಭವಿಸು. ಮತ್ತು ನಿನಗೆ ಎಲ್ಲೆಲ್ಲಿಯೂ ಶತ್ರುಗಳು ಇಲ್ಲದಂತಾಗಲಿ.

೪೪. ತರುವಾಯ ಭಾರ್ಗವ ಮುಂತಾದ ದ್ವಿಜರಿಂದಲೂ ವೀರಾದೇವಿ-ಯಿಂದಲೂ ಸಮ್ಮತಿಯನ್ನು ಪಡೆದ ಅವಿಕ್ಷಿತ-ಮರುತ್ತಮಹಾರಾಜರಿಬ್ಬರು ಭಾಮಿನಿಯೊಡನೆ ರಥಾರೂಢರಾಗಿ ನಗರಕ್ಕೆ ಹೋದರು.

ವೀರಾಪಿ ಕೃತ್ವಾ ಸುಮಹತ್ತಪೋ ಧರ್ಮಭೃತಾಂ ವರಾ ।
ಭರ್ತುಃ ಸಲೋಕತಾಂ ಪ್ರಾಪ್ತಾ ಮಹಾಭಾಗಾ ಪತಿವ್ರತಾ ॥೪೫॥

ಮರುತ್ತೋಽಪಿ ಚಕಾರೋರ್ವ್ಯಾಂ ಧರ್ಮತಃ ಪರಿಪಾಲನಮ್ ।
ವಿನಿರ್ಜಿತಾರಿಷಡ್ವರ್ಗೋ ಭೋಗಾಂಶ್ಚ ಬುಭುಜೇ ನೃಪಃ ॥೪೬॥

ತಸ್ಯ ಪತ್ನೀ ಮಹಾಭಾಗಾ ವಿದರ್ಭತನಯಾ ತಥಾ ।
ಪ್ರಭಾವತೀ ಸುವೀರಸ್ಯ ಸೌವೀರೀ ಚಾಭವತ್ಸುತಾ ॥೪೭॥

ಸುಕೇಶೀ ಕೇತುವೀರ್ಯಸ್ಯ ಮಾಗಧಸ್ಯಾತ್ಮಜಾಭವತ್ ।
ಸುತಾ ಚ ಸಿನ್ಧುವೀರ್ಯಸ್ಯ ಮದ್ರರಾಜಸ್ಯ ಕೇಕಯೀ ॥೪೮॥

---

೪೫. ಇತ್ತ ಮಹಾಭಾಗ್ಯವತಿಯೂ, ಪತಿವ್ರತೆಯೂ ಮತ್ತು ಧರ್ಮಾ-ನುಷ್ಠಾನಮಾಡುವವರಲ್ಲಿ ಶ್ರೇಷ್ಠಳೂ ಆದ ವೀರಾದೇವಿಯು ಮಹತ್ತಾದ ತಪವನ್ನುಮಾಡಿ ಪತಿದೇವನ ಸಾಲೋಕ್ಯವನ್ನು ಹೊಂದಿದಳು.

೪೬. ನಿಗ್ರಹಿಸಿದ ಕಾಮ-ಕ್ರೋಧಾದಿ ಅರಿಷಡ್ವರ್ಗವುಳ್ಳ ಮರುತ್ತ-ರಾಜನು ಭೂಮಿಯಲ್ಲಿ ಧರ್ಮದಿಂದ ಪಾಲನೆಯನ್ನುಮಾಡಿದನು. ಹಾಗು ಅನೇಕ ಉತ್ತಮ ಭೋಗಗಳನ್ನು ಭುಂಜಿಸಿದನು.

೪೭. ಆ ಮರುತ್ತರಾಜನಿಗೆ ವಿದರ್ಭರಾಜನ ಪುತ್ರಿಯೂ, ಮಹಾ-ಭಾಗ್ಯವತಿಯೂ ಆದ ಪ್ರಭಾವತಿಯೆಂಬುವಳೂ ಮತ್ತು ಸುವೀರರಾಜನ ಪುತ್ರಿಯಾದ ಸೌವೀರಿ ಎಂಬುವಳೂ ಪತ್ನಿಯರಾಗಿದ್ದರು.

೪೮. ಮತ್ತು ಮಗಧ ದೇಶಾಧಿಪತಿಯಾದ ಕೇತುವೀರ್ಯನ ಪುತ್ರಿ ಸುಕೇಶಿಯೆಂಬುವಳೂ ಮದ್ರದೇಶದ ರಾಜನಾದ ಸಿಂಧುವೀರ್ಯ ರಾಜನ ಪುತ್ರಿಯೂ ಮರುತ್ತನ ಪತ್ನಿಯರಾಗಿದ್ದರು.

ಕೇಕಯಸ್ಯ ಚ ಸೈರನ್ಧ್ರೀ ಸಿನ್ಧುಭರ್ತುರ್ವಪುಷ್ಮತೀ ।
ಚೇದಿರಾಜಸುತಾ ಚಾಭೂದ್ಭಾರ್ಯಾ ತಸ್ಯ ಸುಶೋಭನಾ ॥೪೯॥

ತಾಸಾಂ ಪುತ್ರಾಸ್ತಸ್ಯ ಚಾಸನ್ಪ್ರಭೃತೋಽಷ್ಟಾದಶ ದ್ವಿಜ ।
ತೇಷಾಂ ಪ್ರಧಾನೋ ಜ್ಯೇಷ್ಠಶ್ಚ ನರಿಷ್ಯನ್ತಃ ಸುತೋಽಭವತ್ ॥೫೦॥

ಏವಂವೀರ್ಯೋ ಮರುತ್ತೋಽಭೂನ್ಮಹಾರಾಜೋ ಮಹಾಬಲಃ ।
ತಸ್ಯಾಪ್ರತಿಹತಂ ಚಕ್ರ ಮಾಸೀದ್ದ್ವೀಪೇಷು ಸಪ್ತಸು ॥೫೧॥

ಯಸ್ಯ ತುಲ್ಯೋಽಪರೋ ರಾಜಾ ನ ಭೂತೋ ನ ಭವಿಷ್ಯತಿ ।
ಸತ್ತ್ವವಿಕ್ರಮಯುಕ್ತಸ್ಯ ರಾಜರ್ಷೇರಮಿತೌಜಸಃ ॥೫೨॥

---

೪೯. ಹಾಗು ಕೇಕಯರಾಜನ ಪುತ್ರಿಯಾದ ಕೇಕಯಿ ಎಂಬುವಳು, ಸಿಂಧುದೇಶಾಧಿಪತಿಯ ಮಗಳಾದ ಸೈರಂಧ್ರಿ ಎಂಬುವಳು ಮತ್ತು ಚೇದಿರಾಜನ ಪುತ್ರಿಯಾದ ವಪುಷ್ಮತಿ ಎಂಬುವಳು ಮರುತ್ತಮಹಾರಾಜನ ಮಂಗಳಕರರಾದ ಸತಿಯರಾಗಿದ್ದರು.

೫೦. ವಿಪ್ರೋತ್ತಮನಾದ ಕ್ರೌಷ್ಟುಕಿಯೇ ! ಮರುತ್ತಮಹಾರಾಜನಿಗೆ ಆ ಸತಿಯರಲ್ಲಿ ಹದಿನೆಂಟು ಮಂದಿ ಪುತ್ರರು ಜನಿಸಿದರು. ಆ ಪುತ್ರರಲ್ಲೆಲ್ಲ ನರಿಷ್ಯಂತ ಎಂಬುವನು ಜ್ಯೇಷ್ಠನೂ ಮತ್ತು ಪ್ರಧಾನನೂ ಆದ ಪುತ್ರನಾಗಿದ್ದನು.

೫೧. ಮಹಾಬಲಿಷ್ಠನಾದ ಮರುತ್ತಮಹಾರಾಜನು ಹೀಗೆ ಅದ್ಭುತವಾದ ಚರಿತ್ರೆಯುಳ್ಳವನಾಗಿದ್ದನು. ಆ ಮರುತ್ತಮಹಾರಾಜನ ರಥದ ಚಕ್ರವು ಏಳು ದ್ವೀಪಗಳಲ್ಲಿ ಎಲ್ಲೆಲ್ಲಿಯೂ ತಡೆಯಿಲ್ಲದ ಸಂಚಾರವುಳ್ಳದ್ದಾಗಿತ್ತು.

೫೨. ಸತ್ತ್ವಗುಣ, ವಿಕ್ರಮಗಳಿಂದ ಕೂಡಿದವನೂ, ಅಳೆಯಲಾಗದ ಓಜಸ್ಸಿನಿಂದ ಶೋಭಿತನೂ ಮತ್ತು ರಾಜರ್ಷಿಯೂ ಆದ ಮರುತ್ತನಿಗೆ ಸಮಾನನಾದ ಬೇರೊಬ್ಬ ರಾಜನು ಭೂಮಂಡಲದಲ್ಲಿ ಹಿಂದೆ ಯಾರೂ ಇರಲಿಲ್ಲ. ಮುಂದೆ ಹುಟ್ಟುವುದೂ ಇಲ್ಲ.

ತಸ್ಯೈತಚ್ಚರಿತಂ ಶ್ರುತ್ವಾ ಮರುತ್ತಸ್ಯ ಮಹಾತ್ಮನಃ ।
ಜನ್ಮ ಚಾಗ್ರ್ಯಂ ದ್ವಿಜಶ್ರೇಷ್ಠ ಮುಚ್ಯತೇ ಸರ್ವಕಿಲ್ಬಿಷೈಃ ॥೫೩॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ
ಮರುತ್ತ ಚರಿತೇಽಷ್ಟಾವಿಂಶತ್ಯಧಿಕಶತತಮೋಽಧ್ಯಾಯಃ

---

೫೩. ದ್ವಿಜೋತ್ತಮನಾದ ಕ್ರೌಷ್ಟುಕಿಮುನಿಯೇ! ಇಂತಹ ಮಹಾತ್ಮನಾದ ಮರುತ್ತಮಹಾರಾಜನ ಶ್ರೇಷ್ಠವಾದ ಜನ್ಮವನ್ನೂ ಮತ್ತು ಅದ್ಭುತವಾದ ಚರಿತ್ರವನ್ನೂ ಕೇಳಿದ ಮಾನವನು ಸಕಲ ಪಾತಕಗಳಿಂದ ಮುಕ್ತನಾಗುತ್ತಾನೆ.

ಮಾರ್ಕಂಡೇಯ ಮಹಾಪುರಾಣವಲ್ಲಿ ನೂರ ಇಪ್ಪತ್ತೆಂಟನೆಯ
ಅಧ್ಯಾಯವು ಮುಗಿದುದು.

॥ ಓಂ ಶ್ರೀ ದುರ್ಗಾಯೈ ನಮಃ ॥

ಮಾರ್ಕಂಡೇಯ ಪುರಾಣಂ

ಏಕೋನತ್ರಿಂಶದಧಿಕಶತತಮೋಽಧ್ಯಾಯಃ

(ಅವಿಕ್ಷಿತ್-ಮರುತ್ತಯೋರುಭಯೋಃ ಪ್ರತಿಜ್ಞಾನಿರ್ವಾಹಃ)

ಕ್ರೌಷ್ಟುಕಿರುವಾಚ—

ಮರುತ್ತಚರಿತಂ ಕೃತ್ಸ್ನಂ ಭಗವನ್ ಕಥಿತಂ ತ್ವಯಾ ।
ತತ್ಸನ್ತತಿಮಶೇಷೇಣ ಶ್ರೋತುಮಿಚ್ಛಾ ಪ್ರವರ್ತತೇ ॥೧॥

ತತ್ಸನ್ತತೌ ಕ್ಷಿತೀಶಾ ಯೇ ರಾಜ್ಯಾರ್ಹಾ ವೀರ್ಯಶಾಲಿನಃ ।
ತಾನಹಂ ಶ್ರೋತುಮಿಚ್ಛಾಮಿ ತ್ವಯಾ ಖ್ಯಾತಾನ್ಮಹಾಮುನೇ ॥೨॥

ನೂರ ಇಪ್ಪತ್ತೊಂಭತ್ತನೆಯ ಅಧ್ಯಾಯ

ಕ್ರೌಷ್ಟುಕಿ ಮುನಿಯು ಹೇಳಿದನು :—

೧. ಪೂಜ್ಯನಾದ ಮಾರ್ಕಂಡೇಯ ಮುನಿಯೇ! ನಿನ್ನಿಂದ ಮರುತ್ತ-ಮಹಾರಾಜನ ಸಂಪೂರ್ಣ ಚರಿತ್ರೆಯು ನನಗೆ ಹೇಳಲ್ಪಟ್ಟಿದೆ. ಈಗ ಆ ಮರುತ್ತನ ಸಂತತಿಗೆ ಸಂಬಂಧಿಸಿದ ಚರಿತ್ರೆಯನ್ನು ಕೇಳಬೇಕೆಂದು ಇಚ್ಛೆಯು ನನಗೆ ಉದಯಿಸುತ್ತಿದೆ.

೨. ಮಹಾಮುನಿಯಾದ ಮಾರ್ಕಂಡೇಯ ಮಹರ್ಷಿಯೇ! ಆ ಮರುತ್ತರಾಜನ ವಂಶದಲ್ಲಿ ವೀರ್ಯಸಂಪನ್ನರೂ, ರಾಜ್ಯಾಧಿಕಾರಕ್ಕೆ ಯೋಗ್ಯರೂ ಆದ ಯಾವ ರಾಜರು ಜನಿಸಿದರೋ ನೀನು ವರ್ಣಿಸುವ ಅವರೆಲ್ಲರ ಚರಿತ್ರೆಯನ್ನು ಕೇಳಲು ಕುತೂಹಲಿಯಾಗಿರುವೆನು.

ಮಾರ್ಕಣ್ಡೇಯ ಉವಾಚ—

ನರಿಷ್ಯನ್ತ ಇತಿ ಖ್ಯಾತೋ ಮರುತ್ತಸ್ಯಾಭವತ್ಸುತಃ ।
ಅಷ್ಟಾದಶಾನಾಂ ಪುತ್ರಾಣಾಂ ಸ ಜ್ಯೇಷ್ಠಃ ಶ್ರೇಷ್ಠ ಏವ ಚ ॥೧॥

ವರ್ಷಾಣಾಂ ಚ ಸಹಸ್ರಾಣಿ ಸಪ್ತತಿಂ ದಶ ಪಞ್ಚ ಚ ।
ಬುಭುಜೇ ಪೃಥಿವೀಂ ಕೃತ್ಸ್ನಾಂ ಮರುತ್ತಃ ಕ್ಷತ್ರಿಯರ್ಷಭಃ ॥೨॥

ಕೃತ್ವಾ ರಾಜ್ಯಂ ಸ್ವಧರ್ಮೇಣ ಇಷ್ಟ್ವಾ ಯಜ್ಞಾನನುತ್ತಮಾನ್ ।
ನರಿಷ್ಯನ್ತಂ ಸುತಂ ಜ್ಯೇಷ್ಠಮಭಿಷಿಚ್ಯ ಯಯೌ ವನಮ್ ॥೩॥

ಏಕಾಗ್ರಚಿತ್ತಃ ಸ ನೃಪಸ್ತಪ್ತ್ವಾ ತತ್ರ ತಪೋ ಮಹತ್ ।
ಆರುರೋಹ ದಿವಂ ವಿಪ್ರ ಯಶಸಾವೃತ್ಯ ರೋದಸೀ ॥೪॥

ಮಾರ್ಕಂಡೇಯ ಮುನಿಯು ಹೇಳಿದನು :—

೧. ಮರುತ್ತಮಹಾರಾಜನಿಗೆ ನರಿಷ್ಯಂತ ಎಂಬ ನಾಮಾಂಕನದಿಂದ ಪ್ರಸಿದ್ಧನಾದ ಒಬ್ಬ ಪುತ್ರನು ಜನಿಸಿದನು. ಅವನು ಹದಿನೆಂಟು ಮಂದಿ ಪುತ್ರರಲ್ಲಿ ಜ್ಯೇಷ್ಠನೂ ಮತ್ತು ಶ್ರೇಷ್ಠನೂ ಆಗಿದ್ದನು.

೨. ಕ್ಷತ್ರಿಯೋತ್ತಮನಾದ ಮರುತ್ತಮಹಾರಾಜನು ರಾಜ್ಯಪಟ್ಟಾಭಿಷೇಕವನ್ನು ಹೊಂದಿ ಎಂಭತ್ತೈದು ಸಹಸ್ರ ವರ್ಷಗಳ ವರೆಗಿನ ದೀರ್ಘಕಾಲ ಸಮಗ್ರವಾಗಿ ಭೂಮಿಯನ್ನು ಆಳಿ ರಾಜ್ಯಭೋಗವನ್ನು ಭುಂಜಿಸಿದನು.

೩. ಹೀಗೆ ಮರುತ್ತರಾಜನು ಸ್ವಧರ್ಮದಿಂದ ರಾಜ್ಯವನ್ನು ಪಾಲಿಸಿ ಉತ್ತಮವಾದ ಅನೇಕ ಯಜ್ಞಗಳನ್ನು ಆಚರಿಸಿ ಮತ್ತು ತನ್ನ ಜ್ಯೇಷ್ಠಪುತ್ರನಾದ ನರಿಷ್ಯಂತನನ್ನು ರಾಜ್ಯಸಿಂಹಾಸನದಲ್ಲಿ ಕುಳ್ಳಿರಿಸಿ ತಾನು ವನಕ್ಕೆ ತೆರಳಿದನು.

೪. ವಿಪ್ರರ್ಷಿಯಾದ ಕ್ರೌಷ್ಟುಕಿಯೇ ! ಆ ಮರುತ್ತರಾಜನು ವನದಲ್ಲಿ ಏಕಾಗ್ರತೆಯ ಮನಸ್ಸುಳ್ಳವನಾಗಿ ಕಠಿನವಾದ ತಪವನ್ನು ಆಚರಿಸಿ ಕೀರ್ತಿಯಿಂದ ಭೂಮಿ-ಆಕಾಶಗಳನ್ನು ಮುಚ್ಚಿ ತಪೋಬಲದಿಂದ ಸ್ವರ್ಗಕ್ಕೆ ಹೋದನು.

ನರಿಷ್ಯನ್ತಃ ಸುತಃ ಸೋಽಸ್ಯ ಚಿನ್ತಯಾಮಾಸ ಬುದ್ಧಿಮಾನ್ ।
ಪಿತುರ್ವೃತ್ತಂ ಸಮಾಲೋಕ್ಯ ತಥಾನ್ಯೇಷಾಂ ಚ ಭೂಭೃತಾಮ್ ॥೭॥

ಅತ್ರ ವಂಶೇ ಮಹಾತ್ಮಾನೋ ರಾಜಾನೋ ಮಮ ಪೂರ್ವಜಾಃ ।
ಯಜ್ವಿನೋ ಧರ್ಮತಃ ಪೃಥ್ವೀಂ ಪಾಲಯಾಮಾಸುರೂರ್ಜಿತಾಃ ॥೮॥

ದಾತಾರಶ್ಚಾಪಿ ವಿತ್ತಾನಾಂ ಸಙ್ಗ್ರಾಮೇಷ್ವನಿವರ್ತಿನಃ ।
ತೇಷಾಂ ಕಶ್ಚರಿತಂ ಶಕ್ತಸ್ತ್ವನುಯಾತುಂ ಮಹಾತ್ಮನಾಮ್ ॥೯॥

ಕಿಂ ತು ತೈರ್ಯತ್ಕೃತಂ ಕರ್ಮ ಧರ್ಮ್ಯಮಾಹವನಾದಿಭಿಃ ।
ತದಹಂ ಕರ್ತುಮಿಚ್ಛಾಮಿ ತಚ್ಚ ನಾಸ್ತಿ ಕರೋಮಿ ಕಿಮ್ ॥೧೦॥

ಧರ್ಮಾತ್ಪಾಲಯತಃ ಪೃಥ್ವೀಂ ಕೋ ಗುಣೋಽತ್ರ ಮಹೀಪತೇಃ ।
ಅಸಮ್ಯಕ್ಪಾಲನಾತ್ಪಾಪೀ ನರೇನ್ದ್ರೋ ನರಕಂ ವ್ರಜೇತ್ ॥೧೧॥

---

೭. ಆಗ ಮರುತ್ತಮಹಾರಾಜನ ಬುದ್ಧಿಶಾಲಿಯಾದ ನರಿಷ್ಯಂತನೆಂಬ ಪುತ್ರನು ತನ್ನ ತಂದೆಯ ಮತ್ತು ತನ್ನ ವಂಶಕ್ಕೆ ಸೇರಿದ ಪೂರ್ವೀಕರಾದ ಅನೇಕ ರಾಜರ ಚರಿತ್ರೆಯನ್ನು ಸ್ಮರಿಸಿಕೊಂಡು ಚಿಂತಿಸಿದನು.

೮. ಈ ವಂಶದಲ್ಲಿ ನನ್ನ ಪೂರ್ವೀಕರಾದ ಅನೇಕ ಮಂದಿ ರಾಜರು ಮಹಾತ್ಮರೂ, ಯಾಗಶೀಲರೂ ಮತ್ತು ಊರ್ಜಿತವಾದ ಪ್ರಭಾವವುಳ್ಳವರೂ ಆಗಿ ಧರ್ಮದಿಂದ ರಾಜ್ಯವನ್ನು ಪಾಲಿಸಿರುವರು.

೯. ಹಾಗು ಔದಾರ್ಯದಿಂದ ಐಶ್ವರ್ಯವನ್ನು ವಿತರಣ ಮಾಡುವವರೂ ಯುದ್ಧದಲ್ಲಿ ಹಿಂದೆಗೆಯದಿರುವವರೂ ಆಗಿದ್ದರು. ಅಂತಹ ಮಹಾತ್ಮರ ಚರಿತ್ರೆಯನ್ನು ಅನುಕರಿಸಲು ಯಾರುತಾನೇ ಶಕ್ತರಾಗಿಹರು ?

೧೦. ಪೂರ್ವೀಕರು ಹವನ ಮುಂತಾದುವುಗಳಿಂದ ಯಾವ ಧರ್ಮ-ಕಾರ್ಯವನ್ನು ಮಾಡಲಿಲ್ಲವೊ ನಾನು ಅದನ್ನು ಮಾಡುವ ಇಷ್ಟವುಳ್ಳವನಾಗಿದ್ದೇನೆ. ಆದರೆ ಅಂತಹ ಕರ್ಮವಾವುದೂ ಇಲ್ಲ. ನಾನೇನು ಮಾಡಲಿ.

೧೧. ಧರ್ಮದಿಂದ ರಾಜ್ಯಪರಿಪಾಲನೆಯನ್ನು ಮಾತ್ರ ನಿರ್ವಹಿಸುವ ರಾಜನಿಗೆ ಲಭಿಸುವ ಗುಣವೇನಿದೆ? ಆದರೆ ಹಾಗೆ ಧರ್ಮದಿಂದ ರಾಜ್ಯವನ್ನು ಪಾಲಿಸದಿರುವ ರಾಜನು ನರಕಯಾತನೆಗೆ ಗುರಿಯಾಗುತ್ತಾನೆ.

ಸತಿ ವಿತ್ತೇ ಮಹಾಯಜ್ಞಾಃ ಕರ್ತವ್ಯಾ ಏವ ಭೂಭೃತಾ ।
ದಾತವ್ಯಂ ಚಾತ್ರ ಕಿಂ ಚಿತ್ರಂ ಸೀದತಾಮೀಶ್ವರೋ ಗತಿಃ ॥೧೨॥

ಆಭಿಜಾತ್ಯಂ ತಥಾ ಲಜ್ಜಾ ಕೋಪಶ್ಚಾರಿಜನಾಶ್ರಯಃ ।
ಕಾರಯನ್ತಿ ಸ್ವಧರ್ಮಶ್ಚ ಸಙ್ಗ್ರಾಮಾದಪಲಾಯನಮ್ ॥೧೩॥

ಏತತ್ಸರ್ವಂ ಯಥಾ ಸಮ್ಯಙ್ಮತ್ಪೂರ್ವೈಃ ಪುರುಷೈಃ ಕೃತಮ್ ।
ಪಿತ್ರಾ ಚ ಮೇ ಮರುತ್ತೇನ ತಥಾ ತತ್ಕೇನ ಶಕ್ಯತೇ ॥೧೪॥

ತದಹಂ ಕಿಂ ಕರಿಷ್ಯಾಮಿ ಯತ್ತು ತೈಃ ಪೂರ್ವಜೈಃ ಕೃತಮ್ ।
ಯೇ ಯಜ್ವಿನೋ ವರಾ ದಾನ್ತಾಃ ಸಙ್ಗ್ರಾಮಾಚ್ಚಾನಿವರ್ತಿನಃ
॥೧೫॥

---

೧೨. ರಾಜನು ಅಪಾರವಾದ ಐಶ್ವರ್ಯವಿದ್ದರೆ ಮಹಾಯಜ್ಞಗಳನ್ನು ಆಚರಿಸಲೇಬೇಕು. ಹಾಗು ಅರ್ಥಿಗಳಿಗೆ ಧನವನ್ನು ತ್ಯಾಗಮಾಡಲೇಬೇಕು. ಅದೇನೂ ಆಶ್ಚರ್ಯಕರವಲ್ಲ. ಐಶ್ವರ್ಯವಿಲ್ಲದವರಿಗೆ ಈಶ್ವರನೇ ರಕ್ಷಕನಾಗುವನು.

೧೩. ಸದ್ವಂಶದಲ್ಲಿ ಜನ್ಮವೆತ್ತುವುದು, ಲಜ್ಜೆ ಮತ್ತು ಶತ್ರುಜನಗಳ ವಿಷಯದಲ್ಲಿ ಮಹತ್ತಾದ ಕೋಪ--ಇವು ರಾಜನಲ್ಲಿ ಸೇರಿ ಯುದ್ಧರಂಗದಿಂದ ಹಿಮ್ಮೆಟ್ಟದಂತೆ ಮಾಡಿ ಸ್ವಧರ್ಮಾರ್ಜನೆಗೋಸ್ಕರ ಯುದ್ಧವನ್ನು ಮಾಡಿಸುತ್ತವೆ.

೧೪. ನನ್ನ ವಂಶವನ್ನು ಅಲಂಕರಿಸಿದ್ದ ಪೂರ್ವಪುರುಷರಿಂದಲೂ ಮತ್ತು ನನ್ನ ತಂದೆಯಾದ ಮರುತ್ತಮಹಾರಾಜನಿಂದಲೂ ಇದೆಲ್ಲವೂ ಹೇಗೆ ಸಾಂಗವಾಗಿ ಆಚರಿಸಲ್ಪಟ್ಟಿತೋ ಅದರಂತೆ ನಡೆಸಲು ಯಾರಿಗೆ ತಾನೆ ಸಾಧ್ಯವು?

೧೫. ನನ್ನ ಪೂರ್ವಿಕರು ಯಾಗಶೀಲರೂ, ಶ್ರೇಷ್ಠರೂ, ಜಿತೇಂದ್ರಿಯರೂ ಮತ್ತು ಯುದ್ಧದಿಂದ ಹಿಮ್ಮೆಟ್ಟದವರೂ ಆಗಿ ಯಾವ ಶ್ರೇಷ್ಠಕರ್ಮಗಳನ್ನು ಆಚರಿಸಿದರೋ ಅವುಗಳಲ್ಲಿ ನಾನೇನು ಮಾಡಲಿ?

ಮಹತ್ಸಙ್ಗ್ರಾಮಸಮ್ಮರ್ದಾ ವಿಸಂವಾದಿತಪೌರುಷಾಃ ।
ಕ್ರಮೇಣಾಹಂ ಯತಿಷ್ಯಾಮಿ ಕಸ್ಮಿನ್ನಿತ್ಯನಭಿಶಙ್ಕಿತಮ್ ॥೧೬॥

ಅಥವಾ ತೈಃ ಸ್ವಯಂ ಯಜ್ಞಾಃ ಕೃತಾಃ ಪೂರ್ವಜನೇಶ್ವರೈಃ ।
ಅವಿಶ್ರಮದ್ಭಿರ್ನಾನ್ಯೈಸ್ತು ಕಾರಿತಾಸ್ತತ್ಕರೋಮ್ಯಹಮ್ ॥೧೭॥

ಮಾರ್ಕಣ್ಡೇಯ ಉವಾಚ :—

ಇತಿ ಸಞ್ಚಿನ್ತ್ಯ ಯಜ್ಞಂ ಸ ಚಕಾರೈಕಂ ನರೇಶ್ವರಃ ।
ಯಾದೃಶಂ ನ ಚಕಾರಾನ್ಯೋ ವಿತ್ತೋತ್ಸರ್ಗೋಪಶೋಭಿತಮ್ ॥೧೮॥

ದ್ವಿಜಾನಾಂ ಜೀವನಾಯಾಲಂ ದತ್ತ್ವಾ ತು ಸ ಮಹಾಧನಮ್ ।
ತತಃ ಶತಗುಣಂ ತೇಷಾಂ ಯಜ್ಞಾರ್ಥಮದದಾನ್ನೃಪಃ ॥೧೯॥

---

೧೬. ಮಹತ್ತಾದ ಸಂಗ್ರಾಮದ ಘರ್ಷಣೆಗಳು ಪೌರುಷವನ್ನು ವ್ಯರ್ಥಗೊಳಿಸುವುದೂ ಉಂಟು. ಆದುದರಿಂದ ಸಂದೇಹವಿಲ್ಲದ ಹಾಗೆ ಪೌರುಷವನ್ನು ಸಾರ್ಥಕಗೊಳಿಸುವ ಯಾವ ಉದ್ಯಮದಲ್ಲಿ ನಾನು ಕ್ರಮವಾಗಿ ಯತ್ನಿಸಲಿ?

೧೭. ಅಥವಾ ನನ್ನ ಪೂರ್ವಿಕರು ಸ್ವಲ್ಪವೂ ಬಿಡುವಿಲ್ಲದೆ ಹಾಗೆ ತಾವು ದೊಡ್ಡ ಯಜ್ಞಗಳನ್ನು ಮಾಡಿರುವರು. ಆದರೆ ಬೇರೆಯವರಿಂದ ಯಜ್ಞಕರ್ಮಗಳನ್ನು ಮಾಡಿಸಲಿಲ್ಲ. ನಾನು ಅದನ್ನು ಮಾಡುವೆನು.

ಮಾರ್ಕಂಡೇಯ ಮುನಿಯು ಹೇಳಿದನು :—

೧೮. ಆ ನರಿಷ್ಯಂತ ಮಹಾರಾಜನು ಹೀಗೆಂದು ಯೋಚಿಸಿ ಒಂದು ದೊಡ್ಡ ಯಜ್ಞಸಮಾರಂಭವನ್ನು ನೆರವೇರಿಸಿದನು. ಇಷ್ಟು ಐಶ್ವರ್ಯವಿತರಣೆಯಿಂದ ಕೂಡಿದ ಯಜ್ಞವನ್ನು ಮತ್ತಾರೂ ಎಂದೂ ಮಾಡಿರಲಿಲ್ಲ.

೧೯. ಅಂತಹ ಯಜ್ಞಕರ್ಮದಲ್ಲಿ ರಾಜನು ದ್ವಿಜರಿಗೆ ಜೀವನಕ್ಕೆ ಸಾಕಾಗುವಷ್ಟು ಧನವನ್ನು ಕೊಟ್ಟನು. ಅಷ್ಟಕ್ಕೆ ತೃಪ್ತನಾಗದೆ ಅದಕ್ಕಿಂತ ನೂರರಷ್ಟು ಅಧಿಕ ಧನವನ್ನು ಯಜ್ಞಾನುಷ್ಠಾನಕ್ಕೋಸ್ಕರ ದ್ವಿಜರಿಗೆ ಅರ್ಪಿಸಿದನು.

ಗಾವೋ ವಸ್ತ್ರಾಣ್ಯಲಙ್ಕಾರಂ ಧಾನ್ಯಾಗಾರಾದಿಕಂ ತಥಾ ।
ಪ್ರತ್ಯೇಕಮದದಾತ್ತೇಷಾಂ ಸರ್ವಪೃಥ್ವೀನಿವಾಸಿನಾಮ್ ॥೨೦॥

ತತಸ್ತೇನ ಯದಾ ಯಜ್ಞಃ ಪ್ರಾರಬ್ಧೋ ಭೂಭುಜಾ ಪುನಃ ।
ಪ್ರಾರಬ್ಧೇ ಸ ಮಖೇ ಯಷ್ಟುಂ ತತೋ ನಾಲಭತ ದ್ವಿಜಾನ್ ॥೨೧॥

ಯಾನ್ಯಾನ್ವೃಣೋತಿ ಸ ನೃಪೋ ವಿಪ್ರಾನಾರ್ತ್ವಿಜ್ಯಕರ್ಮಣಿ ।
ತೇ ತೇ ತಮೂಚುರ್ಯಜ್ಞಾಯ ವಯಮಪ್ಯತ್ರ ದೀಕ್ಷಿತಾಃ ॥೨೨॥

ಅನ್ಯಂ ವರಯ ಯದ್ವಿತ್ತಂ ತ್ವಯಾಸ್ಮಾಕಂ ವಿಸರ್ಜಿತಮ್ ।
ತಸ್ಯಾನ್ತೋ ನಾಸ್ತಿ ಯಜ್ಞೇಷು ದದ್ಯಾಸ್ತ್ವಂ ನೃಪತೇ ಕಥಮ್॥೨೩॥

---

೨೦. ಪೃಥಿವಿಯಲ್ಲಿ ವಾಸಮಾಡುವ ಸಮಸ್ತ ದ್ವಿಜೋತ್ತಮರಿಗೆ ಗೋವು-ವಸ್ತ್ರ-ಅಲಂಕಾರ-ಧಾನ್ಯ-ಗೃಹ ಮುಂತಾದ ಸಮಸ್ತ ಉಪಕರಣಗಳನ್ನು ಪ್ರತ್ಯೇಕವಾಗಿ ಕೊಟ್ಟು ಎಲ್ಲರನ್ನೂ ಆನಂದಗೊಳಿಸಿದನು.

೨೧. ತರುವಾಯ ಆ ನರಿಷ್ಯಂತ ಮಹಾರಾಜನಿಂದ ಯಾವಾಗ ಮತ್ತೊಂದು ಯಜ್ಞವು ಪ್ರಾರಂಭಿಸಲ್ಪಟ್ಟಿತೋ ಆಗ ಪ್ರಾರಂಭಮಾಡಿದ ಆ ಯಜ್ಞಾನುಷ್ಠಾನದಲ್ಲಿ ಋತ್ವಿಜರಾಗಲು ವಿಪ್ರರನ್ನು ಹೊಂದಲಿಲ್ಲ.

೨೨. ನರಿಷ್ಯಂತ ಮಹಾರಾಜನು ಯಾವ ಯಾವ ವಿಪ್ರರ ಬಳಿಗೆ ಹೋಗಿ ಋತ್ವಿಜರಾಗಿ ಬರಲು ಅವರನ್ನು ಕೇಳಿಕೊಂಡನೋ ಅವರೆಲ್ಲರೂ ನಾವು ಕೂಡ ಯಜ್ಞವನ್ನು ಪ್ರಾರಂಭಿಸಿ ದೀಕ್ಷಿತರಾಗಿರುವೆವೆಂದು ಹೇಳಿದರು.

೨೩. ನರಿಷ್ಯಂತ ರಾಜನೇ! ಮತ್ತು ಹಿಂದೆ ನಿನ್ನಿಂದ ಯಜ್ಞಗಳಲ್ಲಿ ಕೊಡಲ್ಪಟ್ಟಿರುವ ಹಣದರಾಶಿಯು ನಮ್ಮಲ್ಲಿ ಅನಂತವಾಗಿರುವುದು. ಮತ್ತೆ ಈಗಲೂ ಹೇಗೆ ಕೊಡುತ್ತೀಯೆ? ಆದುದರಿಂದ ಬೇರೆ ಋತ್ವಿಜರನ್ನು ವರಿಸು ಹೀಗೆಂದು ಎಲ್ಲ ವಿಪ್ರರು ಹೇಳಿದರು.

ಮಾರ್ಕಣ್ಡೇಯ ಉವಾಚ :—

ನ ಚಾಪ ಋತ್ವಿಜೋ ವಿಪ್ರಾಂಸ್ತದಾಶೇಷಕ್ಷಿತೀಶ್ವರಃ ।
ಬಹಿರ್ವೇದ್ಯಾಂ ತದಾ ದಾನಂ ಸ ದಾತುಮುಪಚಕ್ರಮೇ ॥೨೪॥

ತಥಾಪಿ ಜಗೃಹುರ್ನೈವ ಧನಸಮ್ಪೂರ್ಣಮನ್ದಿರಾಃ ।
ದ್ವಿಜಾ ಯದಾ ತು ಭೂಯೋಽಸೌ ನಿರ್ವಿಣ್ಣ ಇದಮಬ್ರವೀತ್ ॥೨೫॥

ಅಹೋಽತಿಶೋಭನಂ ಪೃಥ್ವ್ಯಾಂ ಯದ್ವಿಪ್ರೋ ನಾಧನಃ ಕ್ವಚಿತ್ ।
ಅಶೋಭನಂ ಚ ಯತ್ಕೋಶೋ ವಿಫಲೋಽಯಮಯಜ್ವಿನಃ ॥೨೬॥

ನಾರ್ತ್ವಿಜ್ಯಂ ಕುರುತೇ ಕಶ್ಚಿದ್ಯಜಮಾನೋಽಖಿಲೋ ಜನಃ !
ದ್ವಿಜಾನಾಂ ನ ಚ ನೋ ದಾನಂ ದದತಾಂ ಸಂಪ್ರತೀಚ್ಛತೇ ॥೨೭॥

ಮಾರ್ಕಂಡೇಯ ಮುನಿಯು ಹೇಳಿದನು :--

೨೪. ಆಗ ಸಕಲ ಪೃಥ್ವೀಮಂಡಲಕ್ಕೆ ಈಶ್ವರನಾದ ಮರುತ್ತನೆಂಬ ರಾಜನಿಗೆ ಋತ್ವಿಜರಾಗಲು ವಿಪ್ರರು ಲಭಿಸಲಿಲ್ಲ. ತರುವಾಯ ರಾಜನು ವಿವಾಹ-ವಿದ್ಯಾರ್ಜನ-ವೃತ್ತಿಸಂಪಾದನೆ ಮುಂತಾದುವುಗಳಿಗಾಗಿ ಯಜ್ಞಕರ್ಮ-ಗಳಿಗೆ ಸೇರದ ದಾನಗಳನ್ನು ಕೊಡಲಾರಂಭಿಸಿದನು.

೨೫. ಹಾಗಿದ್ದರೂ ಧನರಾಶಿಯಿಂದ ತುಂಬಿದ ವಿಪ್ರರು ಬಹಿರ್ವೇದಿ ದಾನವನ್ನು ಯಾವಾಗ ತೆಗೆದುಕೊಳ್ಳಲಿಲ್ಲವೋ ಆಗ ಮತ್ತೆ ರಾಜನು ಖೇದ-ಹೊಂದಿದವನಾಗಿ ಈರೀತಿಯಾಗಿ ಹೇಳಿಕೊಂಡನು.

೨೬. ಭೂಮಿಯಲ್ಲಿ ಯಾವ ವಿಪ್ರನೂ ಧನದರಿದ್ರನಾಗಿಲ್ಲವೆಂಬುದು ಆಶ್ಚರ್ಯಕರವಾದ ಶುಭಮಹಿಮೆಯು. ಆದರೆ ಯಾಗ ಮಾಡದಂತಾದ ನನ್ನ ಐಶ್ವರ್ಯಭಂಡಾರವು ಅರ್ಥಿಗಳಿಲ್ಲದೇ ವ್ಯರ್ಥವಾಗಿ ಹೋಗುತ್ತಿದೆಯೆಂಬುವೊಂದು ದೊಡ್ಡ ಅನರ್ಥವು.

೨೭. ವಿಪ್ರರಲ್ಲಿ ಯಾರೊಬ್ಬನೂ ಋತ್ವಿಜನಾಗಿ ಬರಲು ಸಮ್ಮತಿಸು-ವುದಿಲ್ಲ. ಎಲ್ಲರೂ ತಾವೇ ಯಜ್ಞಮಾಡಲು ದೀಕ್ಷಿತರಾಗಿರುವರು. ಹಾಗು ಎಲ್ಲ ವಿಪ್ರರು ತಾವೇ ದಾನವನ್ನು ಕೊಡುವವರಾಗಿದ್ದುದರಿಂದ ನನ್ನಿಂದ ಯಾರೂ ದಾನವನ್ನು ಪರಿಗ್ರಹಿಸುವುದಿಲ್ಲ.

ಮಾರ್ಕಣ್ಡೇಯ ಉವಾಚ :—

ತತಃ ಕಾಂಶ್ಚಿದ್ದ್ವಿಜಾನ್ಭಕ್ತ್ಯಾ ಪ್ರಣಿಪತ್ಯ ಪುನಃ ಪುನಃ ।
ಸ್ವಯಜ್ಞೇ ಋತ್ವಿಜಶ್ಚಕ್ರೇ ತೇ ಪ್ರಚಕ್ರುರ್ಮಹಾಮಖಮ್ ॥೨೮॥

ಅತ್ಯದ್ಭುತಮಿದಂ ಚಾಸೀದ್ಯದಾ ತಸ್ಯ ಮಹೀಪತೇಃ ।
ಸ ಯಜ್ಞೋಽಭೂತ್ತದಾ ಪೃಥ್ವ್ಯಾಂ ಯಜಮಾನೋಽಖಿಲೋ ಜನಃ ॥೨೯॥

ದ್ವಿಜನ್ಮನಾಮಭೂನ್ನಾಸೀತ್ಸದಸ್ಯಸ್ತತ್ರ ಕಶ್ಚನ ।
ಯಜಮಾನಾ ದ್ವಿಜಾಃ ಕೇಚಿತ್ಕೇಚಿತ್ತೇಷಾಂ ತು ಯಾಜಕಾಃ ॥೩೦॥

ನರಿಷ್ಯನ್ತೋ ನರಪತಿರಿಯಾಜ ಸ ಯದಾ ತದಾ ।
ತತ್ಪ್ರದಾತುರ್ಧನೈರ್ಯಾಗಂ ಕುರ್ಯುಃ ಪೃಥ್ವ್ಯಾಮಶೇಷತಃ ॥೩೧॥

ಮಾರ್ಕಂಡೇಯ ಮುನಿಯು ಹೇಳಿದನು :—

೨೮. ತರುವಾಯ ರಾಜನು ಕೆಲವರು ದ್ವಿಜರನ್ನು ಭಕ್ತಿಯಿಂದ ಮತ್ತೆ ಮತ್ತೆ ಕೇಳಿಕೊಂಡು ತಾನು ಉಪಕ್ರಮಿಸಿರುವ ಯಜ್ಞದಲ್ಲಿ ಋತ್ವಿಜರನ್ನಾಗಿ ಏರ್ಪಡಿಸಿದನು. ಅವರು ರಾಜನಾರಂಭಿಸಿದ ಮಹತ್ತಾದ ಯಜ್ಞವನ್ನು ನೆರವೇರಿಸಿದರು.

೨೯. ಹೀಗೆ ನರಿಷ್ಯಂತರಾಜನ ಯಜ್ಞವು ಯಾವಾಗ ನಡೆಯುತ್ತಿತ್ತೋ ಆ ಸಮಯದಲ್ಲಿ ಇದೊಂದು ಅದ್ಭುತಸಂಗತಿಯು ಉಂಟಾಯಿತು. ಪೃಥಿವಿಯಲ್ಲಿರುವ ವಿಪ್ರರಲ್ಲಿ ಪ್ರತಿಯೊಬ್ಬನೂ ಯಾಗಮಾಡುವವನಾಗಿದ್ದನು.

೩೦. ಹೀಗೆ ವಿಪ್ರರೆಲ್ಲರೂ ಯಜ್ಞಪರರಾದುದರಿಂದ ರಾಜನ ಯಜ್ಞದಲ್ಲಿ ಯಾರೊಬ್ಬನು ಕೂಡ ಸದಸ್ಯನಿರಲಿಲ್ಲ. ಕೆಲವರು ವಿಪ್ರರು ತಾವು ಯಜ್ಞವನ್ನು ಉಪಕ್ರಮಿಸಿದವರೂ ಮತ್ತೆ ಕೆಲವರು ಅವರ ಋತ್ವಿಜರೂ ಆಗಿದ್ದರು.

೩೧. ನರಿಷ್ಯಂತರಾಜನು ಯಾವಾಗ ಯಜ್ಞವನ್ನು ಮಾಡಿದನೋ ಆಗ ಆ ರಾಜನಿಂದ ಸಂಪಾದಿಸಿದ ಧನದಿಂದ ಪೃಥಿವಿಯಲ್ಲಿದ್ದ ಎಲ್ಲ ವಿಪ್ರರೂ ಯಾಗವನ್ನು ಮಾಡಿದರು.

ಪ್ರಾಚ್ಯಾಂ ಕೋಟ್ಯಸ್ತು ಯಜ್ಞಾನಾಮಾಸನ್ನಷ್ಟಾದಶಾಧಿಕಾಃ ।
ಪ್ರತೀಚ್ಯಾಂ ಸಪ್ತ ವೈ ಕೋಟ್ಯೋ ದಕ್ಷಿಣಸ್ಯಾಂ ಚತುರ್ದಶ ॥೩೨॥

ಉತ್ತರಸ್ಯಾಂ ಚ ಪಞ್ಚಾಶದೇಕಕಾಲಂ ತದಾಭವನ್ ।
ಮುನೇ ಬ್ರಾಹ್ಮಣಯಜ್ಞಾನಾಂ ನರಿಷ್ಯನ್ತೋ ಯದಾಯಜತ್॥೩೩॥

ಏವಂ ಸ ರಾಜಾ ಧರ್ಮಾತ್ಮಾ ನರಿಷ್ಯನ್ತೋಽಭವತ್ಪುರಾ ।
ಮರುತ್ತತನಯೋ ವಿಪ್ರ ವಿಖ್ಯಾತಬಲಪೌರುಷಃ ॥೩೪॥

ಇತಿ ಶ್ರೀ ಮಾರ್ಕಣ್ಡೇಯಮಹಾಪುರಾಣೇ
ನರಿಷ್ಯನ್ತಚರಿತಂ ನಾಮೈಕೋನತ್ರಿಂಶದಧಿಕಶತತಮೋಽಧ್ಯಾಯಃ

---

೩೨. ಪೂರ್ವದಿಕ್ಕಿನಲ್ಲಿ ಹದಿನೆಂಟಕ್ಕಿಂತಲೂ ಹೆಚ್ಚು ಕೋಟಿಸಂಖ್ಯೆಯ ಯಜ್ಞಗಳು ನಡೆದುವು. ಪಶ್ಚಿಮದಿಕ್ಕಿನಲ್ಲಿ ಏಳುಕೋಟಿ ಯಜ್ಞಗಳು ನಡೆದುವು. ಮತ್ತು ದಕ್ಷಿಣದಿಕ್ಕಿನಲ್ಲಿ ಹದಿನಾಲ್ಕುಕೋಟಿ ಯಜ್ಞಗಳು ನಡೆದುವು.

೩೩. ಕ್ರೌಷ್ಟುಕಿಮುನಿಯೇ! ಉತ್ತರ ದಿಕ್ಕಿನಲ್ಲಿ ಐವತ್ತುಕೋಟಿ ಯಜ್ಞಗಳು ನಡೆದುವು. ಹೀಗೆ ನರಿಷ್ಯಂತಮಹಾರಾಜನು ಯಜ್ಞವನ್ನು ಮಾಡುವ ಸಮಯದಲ್ಲಿ ಏಕಕಾಲದಲ್ಲಿ ಬ್ರಾಹ್ಮಣರು ಮಾಡಿದ ಯಜ್ಞಗಳು ಎಲ್ಲೆಲ್ಲಿಯೂ ನಡೆದುವು.

೩೪. ವಿಪ್ರೋತ್ತಮನಾದ ಕ್ರೌಷ್ಟುಕಿಯೇ! ಹಿಂದೆ ಮರುತ್ತರಾಜನ ಪುತ್ರನಾದ ನರಿಷ್ಯಂತಮಹಾರಾಜನು ಈ ರೀತಿಯಾಗಿ ಧರ್ಮಾತ್ಮನೂ, ಎಲ್ಲೆಲ್ಲಿಯೂ ಖ್ಯಾತಿಯನ್ನು ಗಳಿಸಿದ ಬಲ-ಪೌರುಷಗಳಿಂದ ಕೂಡಿದವನೂ ಆಗಿದ್ದನು.

ಮಾರ್ಕಂಡೇಯ ಮಹಾಪುರಾಣದಲ್ಲಿ ನೂರ ಇಪ್ಪತ್ತೊಂಭತ್ತನೆಯ
ಅಧ್ಯಾಯವು ಮುಗಿದುದು.

॥ ಓಂ ಶ್ರೀ ದುರ್ಗಾಯೈ ನಮಃ ॥

ಮಾರ್ಕಂಡೇಯ ಪುರಾಣಂ

ತ್ರಿಂಶದಧಿಕಶತತಮೋಽಧ್ಯಾಯಃ

(ದಮುಚರಿತಮ್)

ಮಾರ್ಕಣ್ಡೇಯ ಉವಾಚ :—

ನರಿಷ್ಯನ್ತಸ್ಯ ತನಯೋ ದುಷ್ಟಾರಿದಮನೋ ದಮಃ ।
ಶಕ್ರಸ್ಯೇವ ಬಲಂ ತಸ್ಯ ದಯಾ ಶೀಲಂ ಮುನೇರಿವ ॥೧॥

ಬಾಭ್ರವ್ಯಾಮಿನ್ದ್ರಸೇನಾಯಾಂ ಸ ಜಜ್ಞೇ ತಸ್ಯ ಭೂಭೃತಃ ।
ನವ ವರ್ಷಾಣಿ ಜಠರೇ ಸ್ಥಿತ್ವಾ ಮಾತುರ್ಮಹಾಯಶಾಃ ॥೨॥

ನೂರ ಮೂವತ್ತನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಹೇಳಿದನು :-

೧. ದುಷ್ಟರಾದ ಶತ್ರುಗಳನ್ನು ಮರ್ದಿಸುವ ದಮ ಎಂಬುವನು ನರಿಷ್ಯಂತನಿಗೆ ಪುತ್ರನಾಗಿ ಜನಿಸಿದನು. ದಮಕುಮಾರನಿಗೆ ಇಂದ್ರನಿಗೊಪ್ಪುವ ಬಲವೂ ಮುನಿಜನರಿಗೊಪ್ಪುವ ದಯಾಶೀಲಗಳೂ ಇದ್ದುವು.

೨. ಅಧಿಕವಾದ ಕೀರ್ತಿಶಾಲಿಯಾದ ದಮಕುಮಾರನು ನರಿಷ್ಯಂತ ರಾಜನ ಪತ್ನಿಯೂ ಬಭ್ರುರಾಜನ ಪುತ್ರಿಯೂ ಆದ ಇಂದ್ರಸೇನಾ ಎಂಬ ಜನನಿಯ ಜಠರದಲ್ಲಿ ಒಂಭತ್ತುವರ್ಷಗಳಿದ್ದು ಜನ್ಮವೆತ್ತಿದನು.

ಯದ್ಗ್ರಾಹಯಾಮಾಸ ದಮಂ ಮಾತರಂ ಜಠರೇ ಸ್ಥಿತಃ ।
ದಮಶೀಲಶ್ಚ ಭವಿತಾ ಯತಶ್ಚಾಯಂ ನೃಪಾತ್ಮಜಃ ॥೩॥

ತತಸ್ತ್ರಿಕಾಲವಿಜ್ಞಾನಃ ಸ ಹಿ ತಸ್ಯ ಪುರೋಹಿತಃ ।
ದಮ ಇತ್ಯಕರೋನ್ನಾಮ ನರಿಷ್ಯನ್ತಸುತಸ್ಯ ತು ॥೪॥

ಸ ದಮೋ ರಾಜಪುತ್ರಸ್ತು ಧನುರ್ವೇದಮಶೇಷತಃ ।
ಜಗೃಹೇಽಸುರರಾಜಸ್ಯ ಸಕಾಶಾದ್ವೃಷಪರ್ವಣಃ ॥೫॥

ದುನ್ದುಭೇರ್ದೈತ್ಯವರ್ಯಸ್ಯ ತಪೋವನನಿವಾಸಿನಃ ।
ಸಕಾಶಾಜ್ಜಗೃಹೇ ಕೃತ್ಸ್ನಮಸ್ತ್ರಗ್ರಾಮಂ ಚ ತತ್ತ್ವತಃ ॥೬॥

---

೩. ಈ ಪುತ್ರನು ದೀರ್ಘಕಾಲದವರೆಗೆ ಜನನಿಯ ಜಠರದಲ್ಲಿದ್ದು ತಾಯಿಗೆ ಸಹನಶಕ್ತಿಯ ರೂಪದಿಂದ ದಮಗುಣವನ್ನು ಕೊಟ್ಟನು. ಮತ್ತು ಈ ರಾಜಕುಮಾರನು ಮುಂದೆ ದಮಗುಣದಿಂದ ಕೂಡಿದ ಶೀಲವುಳ್ಳವನಾ-ಗಿರುವನು.

೪. ತರುವಾಯ ತ್ರಿಕಾಲಜ್ಞಾನಸಂಪನ್ನನಾದ ಪುರೋಹಿತನು ಕುಮಾರನ ಭೂತ-ಭವಿಷ್ಯಗಳನ್ನು ಅರಿತು ನರಿಷ್ಯಂತನ ಕುಮಾರನಿಗೆ ದಮ ಎಂಬ ನಾಮಾಂಕನವನ್ನು ಇಟ್ಟನು.

೫. ಆ ರಾಜಪುತ್ರನಾದ ದಮಕುಮಾರನು ಅಸುರರಿಗೆ ರಾಜನಾದ ವೃಷಪರ್ವ ಎಂಬುವನಿಂದ ಸಂಪೂರ್ಣವಾಗಿ ಧನುರ್ವೇದವನ್ನು ಅಭ್ಯಾಸ ಮಾಡಿದನು.

೬. ಹಾಗು ತಪೋವನದಲ್ಲಿ ವಾಸಮಾಡುತ್ತಿದ್ದ, ದೈತ್ಯೋತ್ತಮನಾದ ದುಂದುಭಿ ಎಂಬುವನಿಂದ ಸಾರವತ್ತಾಗಿ ಸಂಪೂರ್ಣ ಅಸ್ತ್ರವಿದ್ಯೆಯನ್ನು ಗ್ರಹಿಸಿದನು.

ಶಕ್ತೇಃ ಸಕಾಶಾದ್ವೇದಾಂಶ್ಚ ವೇದಾಙ್ಗಾನ್ಯಖಿಲಾನಿ ಚ ।
ತಥಾರ್ಷ್ಟಿಷೇಣಾದ್ರಾಜರ್ಷೇರ್ಜಗೃಹೇ ಯೋಗಮಾತ್ಮವಾನ್ ॥೮॥

ತಂ ಸುರೂಪಂ ಮಹಾತ್ಮಾನಂ ಗೃಹೀತಾಸ್ತ್ರಂ ಮಹಾಬಲಮ್ ।
ಸ್ವಯಂವರೇ ಕೃತಾ ಪಿತ್ರಾ ಜಗೃಹೇ ಸುಮನಾ ಪತಿಮ್ ॥೯॥

ಸುತಾ ದಶಾರ್ಣಾಧಿಪತೇರ್ಬಲಿನಶ್ಚಾರುವರ್ಮಣಃ ।
ಪಶ್ಯತಾಂ ಸರ್ವಭೂಪಾನಾಂ ಯೇ ತದರ್ಥಮುಪಾಗತಾಃ ॥೯॥

ತಸ್ಯಾಂ ಚ ಸಾನುರಾಗೋಽಭೂನ್ಮದ್ರರಾಜಸ್ಯ ವೈ ಸುತಃ ।
ಸುಮನಾಯಾಂ ಮಹಾನಾದೋ ಮಹಾಬಲಪರಾಕ್ರಮಃ ॥೧೦॥

---

೭. ಹಾಗು ರಾಜಪುತ್ರನು ಶಕ್ತಿಮುನಿಯಿಂದ ಎಲ್ಲ ವೇದ-ವೇದಾಂಗಗಳನ್ನು ಕಲಿತನು. ಮತ್ತು ಜಿತೇಂದ್ರಿಯನಾಗಿ ಆರ್ಷ್ಟಿಷೇಣ ಎಂಬ ರಾಜರ್ಷಿಯಿಂದ ಯೋಗವಿದ್ಯೆಯನ್ನು ಗ್ರಹಿಸಿದನು.

೮. ಹೀಗೆ ರೂಪವಂತನೂ, ಮಹಾತ್ಮನೂ, ಗ್ರಹಿಸಿದ ಅಸ್ತ್ರವಿದ್ಯೆಯುಳ್ಳವನೂ ಮತ್ತು ಮಹಾಬಲಿಷ್ಠನೂ ಆದ ದಮಕುಮಾರನನ್ನು ತಂದೆಯಿಂದ ಸ್ವಯಂವರಕ್ಕೆ ಸಜ್ಜುಗೊಳಿಸಲ್ಪಟ್ಟಿರುವ ಸುಮನಾ ಎಂಬ ರಾಜಪುತ್ರಿಯು ಪತಿಯನ್ನಾಗಿ ವರಿಸಿದಳು.

೯. ದಶಾರ್ಣದೇಶಕ್ಕೆ ಅಧಿಪತಿಯೂ, ಬಲಿಷ್ಠನೂ ಆದ ಚಾರುವರ್ಮ ಎಂಬ ರಾಜನ ಪುತ್ರಿಯಾದ ಸುಮನೆ ಎಂಬಾಕೆಯು ಕನ್ಯಾರ್ಥಿಗಳಾಗಿ ಬಂದಿರುವ ಅನೇಕ ರಾಜಕುಮಾರರು ನೋಡುತ್ತಿರುವ ಹಾಗೆ ದಮನನ್ನು ವರಿಸಿದಳು.

೧೦. ಮಹತ್ತಾದ ಬಲ-ಪರಾಕ್ರಮಗಳಿಂದ ಶೋಭಿಸುವ ಮಹಾನಾದ ಎಂಬುವನೂ ಮತ್ತು ಮದ್ರರಾಜನ ಪುತ್ರನೂ ಸುಮನಾ ಎಂಬ ಆ ರಾಜಕನ್ಯೆಯಲ್ಲಿ ಅಧಿಕವಾದ ಪ್ರೀತಿ-ಅನುರಾಗಗಳನ್ನು ಹೊಂದಿದ್ದರು.

ತಥಾ ವಿದರ್ಭಾಧಿಪತೇಃ ಪುತ್ರಃ ಸಙ್ಕ್ರನ್ದನಸ್ಯ ಚ ।
ವಪುಷ್ಮಾನ್ರಾಜಪುತ್ರಶ್ಚ ಮಹಾಧನುರುದಾರಧೀಃ ॥೧೧॥

ತೇ ತದಾ ತಂ ವೃತಂ ದೃಷ್ಟ್ವಾ ದುಷ್ಕಾರಿದಮನಂ ದಮಮ್ ।
ಮನ್ತ್ರಯಾಮಾಸುರನ್ಯೋಽನ್ಯಂ ತತ್ರಾನಙ್ಗವಿಮೋಹಿತಾಃ ॥೧೨॥

ಏತಾಮಸ್ಯ ಬಲಾತ್ಕನ್ಯಾಂ ಗೃಹೀತ್ವಾ ರೂಪಶಾಲಿನೀಮ್ ।
ಗೃಹಂ ಪ್ರಯಾಮಸ್ತಸ್ಯೇಯಮಸ್ಮಾಕಂ ಯಂ ಗೃಹೀಷ್ಯತಿ ॥೧೩॥

ಭರ್ತೃಬುದ್ಧ್ಯಾ ವರಾರೋಹಾ ಸ್ವಯಂವರವಿಧಾನತಃ ।
ತಸ್ಯೇಚ್ಛಯಾ ನೋ ಭವಿತ್ರೀ ಭಾರ್ಯಾ ಧರ್ಮೋಪಪಾದಿತಾ॥೧೪॥

---

೧೧. ಹಾಗು ಮಹತ್ತಾದ ಧನುಸ್ಸುಳ್ಳವನೂ, ಉದಾರವಾದ ಪ್ರಜ್ಞೆಯುಳ್ಳವನೂ ಮತ್ತು ವಿದರ್ಭದೇಶಕ್ಕೆ ಅಧಿಪತಿಯಾದ ಸಂಕ್ರಂದನ ಎಂಬುವನ ಪುತ್ರನೂ ಆದ ವಪುಷ್ಮಾನ್ ಎಂಬುವನೂ ಸುಮನೆಯಲ್ಲಿ ಅನುರಾಗವುಳ್ಳವನಾಗಿದ್ದನು.

೧೨. ಕಾಮಾಗ್ನಿಪೀಡಿತರಾದ ಈ ಎಲ್ಲ ರಾಜಕುಮಾರರು ಸೇರಿ ಆಗ ದುಷ್ಕರಾದ ಶತ್ರುಗಳನ್ನು ನಿಗ್ರಹಿಸಬಲ್ಲ ದಮಕುಮಾರನನ್ನು ಸುಮನೆಯು ವರಿಸಿರುವುದನ್ನು ಕಂಡು ಅನ್ಯೋನ್ಯವಾಗಿ ಮಂತ್ರಾಲೋಚನೆಯನ್ನು ಮಾಡಿದರು.

೧೩. ಸೌಂದರ್ಯದಿಂದ ರಾಜಿಸುವ ಈ ಕನ್ಯೆಯನ್ನು ನಾವು ಇವನ ಬಳಿಯಿಂದ ಬಲಾತ್ಕಾರವಾಗಿ ಎತ್ತಿಕೊಂಡು ಮನೆಗೆ ಹೋಗೋಣ. ತರುವಾಯ ಈಕೆಯು ನಮ್ಮಲ್ಲಿ ಯಾರನ್ನು ಒಪ್ಪಿಕೊಳ್ಳುವಳೋ ಅವನಿಗೆ ಪ್ರಿಯೆಯಾಗಲಿ.

೧೪. ಸುಂದರಾಂಗಿಯಾದ ಈ ಕನ್ಯೆಯು ಸ್ವಯಂವರ ವಿಧಾನದಂತೆ ಮತ್ತೆ ನಮ್ಮಲ್ಲಿ ಯಾರನ್ನು ಪತಿಬುದ್ಧಿಯಿಂದ ವರಿಸುವಳೋ ಅವನಿಗೆ ಧರ್ಮದಿಂದ ಹೊಂದಿದ ಪತ್ನಿಯಾಗಿರಲಿ. ನಾವು ಅದನ್ನು ಎಲ್ಲರೂ ಒಪ್ಪುತ್ತೇವೆ.

ಅಥ ನೇಚ್ಛತಿ ಸಾ ಕಂಚಿದಸ್ಮಾಕಂ ಮದಿರೇಕ್ಷಣಾ ।
ತತಸ್ತಸ್ಯ ಭವಿತ್ರೀ ಸಾ ಯೋ ದಮಂ ಘಾತಯಿಷ್ಯತಿ ॥೧೫॥

ಮಾರ್ಕಣ್ಡೇಯ ಉವಾಚ :—

ಇತಿ ತೇ ನಿಶ್ಚಯಂ ಕೃತ್ವಾ ತ್ರಯಃ ಪಾರ್ಥಿವನನ್ದನಾಃ ।
ಜಗೃಹುಸ್ತಾಂ ಸುಚಾರ್ವಙ್ಗೀಂ ದಮಪಾರ್ಶ್ವಾನುವರ್ತಿನೀಮ್ ॥೧೬॥

ತತಃ ಕೇಚಿನ್ನೃಪಾಸ್ತೇಷಾಂ ಯೇ ತತ್ಪಕ್ಷಾ ವಿಚುಕ್ರುಶುಃ ।
ಚುಕ್ರುಶುಶ್ಚಾಪರೇ ಭೂಪಾಃ ಕೇಚಿನ್ಮಧ್ಯಸ್ಥತಾಂ ಗತಾಃ ॥೧೭॥

ತತೋ ದಮಸ್ತಾನ್ಭೂಪಾಲಾನವಲೋಕ್ಯ ಸಮನ್ತತಃ ।
ಅನಾಕುಲಮನಾ ವಾಕ್ಯಮಿದಮಾಹ ಮಹಾಮುನೇ ॥೧೮॥

---

೧೫. ವಿಲಾಸಗಳಿಂದ ಮದಿಸಿದಂತಿರುವ ದೃಷ್ಟಿಯುಳ್ಳ ಸುಂದರಿಯು ನಮ್ಮಲ್ಲಿ ಯಾರನ್ನೂ ವರಿಸದಿದ್ದರೆ ಯಾವ ದಮಕುಮಾರನನ್ನು ವಧಿಸುವನೋ ಅವನಿಗೆ ಪತ್ನಿಯಾಗಿ ಸೇರಲಿ.

ಮಾರ್ಕಂಡೇಯ ಮುನಿಯು ಹೇಳಿದನು :—

೧೬. ಆ ಮೂರುಮಂದಿ ರಾಜಕುಮಾರರು ಈ ವಿಧವಾಗಿ ನಿರ್ಣಯವನ್ನು ಮಾಡಿಕೊಂಡು ದಮಕುಮಾರನ ಪಾರ್ಶ್ವದಲ್ಲಿದ್ದ ಸುಂದರಾಂಗಿಯಾದ ಸುಮನಾ ಕನ್ಯೆಯನ್ನು ಸೆಳೆದುಕೊಂಡು ಹೋದರು.

೧೭. ಆಗ ದಶಾರ್ಣರಾಜನಲ್ಲಿ ಪಕ್ಷಪಾತಿಗಳಾದ ಕೆಲವು ಮಂದಿ ರಾಜರು ಈ ಅಕೃತ್ಯವನ್ನು ನೋಡಿ ಕೂಗಿಕೊಂಡರು. ಹಾಗು ಮಧ್ಯಸ್ಥ ಸ್ವಭಾವವನ್ನು ಹೊಂದಿದ ಮತ್ತೆ ಕೆಲವು ಮಂದಿ ರಾಜರು ಕೂಗಿದರು.

೧೮. ಮಹಾಮುನಿಯಾದ ಕ್ರೌಷ್ಟುಕಿಯೇ ! ತರುವಾಯ ವ್ಯಾಕುಲಗೊಳ್ಳದಿರುವ ಮಾನಸವುಳ್ಳ ದಮಭೂಪತಿಯು ಸುತ್ತಲೂ ಮುತ್ತಿರುವ ಸಕಲ ಭೂಪಾಲಕರನ್ನು ಕಂಡು ಈ ವಚನವನ್ನು ಹೇಳಿದನು.

ದಮ ಉವಾಚ :—

ಭೋ ಭೂಪಾ ಧರ್ಮಕೃತ್ಯೇಷು ಯದ್ವದಸ್ತಿ ಸ್ವಯಂವರಮ್ ||೧೯||

ದಶಾರ್ಣಪತಿನಾ ಭೂಪಾಃ ಕೃತೇ ಧನ್ಯೇ ಸ್ವಯಂವರೇ |
ಅಧರ್ಮೋ ವಾಥವಾ ಧರ್ಮೋ ಯದೇಭಿರ್ಗೃಹ್ಯತೇ ಬಲಾತ್ ||೨೦||

ಯದ್ಯಧರ್ಮೋ ನ ಮೇ ಕಾರ್ಯಮನ್ಯಭಾರ್ಯಾ ಭವಿಷ್ಯತಿ |
ಧರ್ಮೋ ವಾ ತದಲಂ ಪ್ರಾಣೈರ್ಯೋ ರಕ್ಷ್ಯನ್ತೇಽರಿಲಙ್ಘನೇ ||೨೧||

ತತೋ ದಶಾರ್ಣಾಧಿಪತಿಶ್ಚಾರುವರ್ಮಾ ನರಾಧಿಪಃ |
ನಿಶ್ಶಬ್ದಂ ಕಾರಯಿತ್ವಾ ತತ್ಸದಃ ಪ್ರಾಹ ಮಹಾಮುನೇ ||೨೨||

ದಮಭೂಪಾಲಕನು ಹೇಳಿದನು :—

೧೯. ಎಲೈ ರಾಜಾಧಿರಾಜರೇ! ಕನ್ಯಾದಾನಾರ್ಥವಾದ ವಿವಾಹವಿಧಿಗಳಲ್ಲಿ ಸ್ವಯಂವರ ವಿಧಾನವೆಂಬುದು ಧರ್ಮರೂಪವಾದುದೆಂದು ಪ್ರಾಜ್ಞರು ಹೇಳುವರು.

೨೦. ರಾಜರೇ! ಅದನ್ನು ಅನುಸರಿಸಿ ದಶಾರ್ಣದೇಶಾಧಿಪತಿಯು ತನ್ನ ಪುತ್ರಿಯ ವಿವಾಹಕ್ಕೆ ಸ್ವಯಂವರ ವಿಧಾನವನ್ನು ಏರ್ಪಡಿಸಿರಲು ಈ ರಾಜಕುಮಾರರಿಂದ ಕನ್ಯೆಯು ಬಲಾತ್ಕಾರವಾಗಿ ಸೆಳೆಯಲ್ಪಡುತ್ತಿರುವುದು ಧರ್ಮವೇ? ಅಧರ್ಮವೇ?

೨೧. ಸ್ವಯಂವರ ವಿಧಾನದಿಂದ ಮಾಡುವ ಕನ್ಯಾದಾನವು ಅಧರ್ಮವಾಗಿದ್ದರೆ ಆಗ ನಾನೇನೂ ಮಾಡಬೇಕಾದುದಿಲ್ಲ. ಈಕೆಯು ಬೇರೊಬ್ಬನ ಸತಿಯಾಗಿರಲಿ. ಒಂದು ಪಕ್ಷದಲ್ಲಿ ಧರ್ಮವಾಗಿದ್ದರೆ ಶತ್ರುಗಳು ಆಕ್ರಮಿಸುವಾಗಲೂ ರಕ್ಷಿಸುವುದಾದರೆ ಅಂತಹ ಪ್ರಾಣವು ನನಗೆ ಬೇಡ.

೨೨. ಮಹಾಮುನಿಯಾದ ಕ್ರೌಷ್ಟುಕಿಯೇ! ತರುವಾಯ ಚಾರುವರ್ಮನೆಂಬ ದಶಾರ್ಣದೇಶಾಧಿಪತಿಯಾದ ರಾಜನು ಆ ಸಭೆಯನ್ನು ಪ್ರಾರ್ಥಿಸಿಕೊಂಡು ನಿಶ್ಶಬ್ದವನ್ನಾಗಿ ಮಾಡಿ ಈ ರೀತಿಯಾಗಿ ಹೇಳಿದನು.

ದಮೇನ ಯದಿದಂ ಪ್ರೋಕ್ತಂ ಧರ್ಮಾಧರ್ಮಾಶ್ರಿತಂ ನೃಪಾಃ ।
ತದ್ವದಧ್ವಂ ಯಥಾ ಧರ್ಮೋ ಮಮಾಸ್ಯ ಚ ನ ಲುಪ್ಯತೇ ॥೨೩॥

ಮಾರ್ಕಣ್ಡೇಯ ಉವಾಚ :—

ತತಃ ಕೇಚಿನ್ಮಹೀಪಾಲಾಸ್ತಮೂಚುರ್ವಸುಧಾಧಿಪಮ್ ।
ಪರಸ್ಪರಾನುರಾಗೇಣ ಗಾನ್ಧರ್ವೋ ವಿಹಿತೋ ವಿಧಿಃ ॥೨೪॥

ಕ್ಷತ್ರಿಯಾಣಾಂ ಪರಮಯಂ ನ ವಿಟ್ಶೂದ್ರದ್ವಿಜನ್ಮನಾಮ್ ।
ದಮಮಾಶ್ರಿತ್ಯ ನಿಷ್ಪನ್ನಃ ಸ ಚಾಸ್ಯಾ ದುಹಿತುಸ್ತವ ॥೨೫॥

ಇತಿ ಧರ್ಮಾದ್ದಮಸ್ಯೈಷಾ ದುಹಿತಾ ತವ ಪಾರ್ಥಿವ ।
ಯೋಽನ್ಯಥಾ ವರ್ತತೇ ಮೋಹಾತ್ಕಾಮಾತ್ಮಾ ಸಂಪ್ರವರ್ತತೇ ॥೨೬॥

---

೨೩. ರಾಜರೇ! ಧರ್ಮ-ಅಧರ್ಮಗಳ ವಿಷಯವಾಗಿ ದಮಕುಮಾರನು ಆಡಿರುವ ವಚನಕ್ಕೆ ಸಮಂಜಸವಾದ ಉತ್ತರವನ್ನು ಹೇಳಿರಿ. ಮುಖ್ಯವಾಗಿ ನನಗೂ ಮತ್ತು ಈ ದಮಕುಮಾರನಿಗೂ ಧರ್ಮವು ಲೋಪವಾಗದಿರಲಿ.

ಮಾರ್ಕಂಡೇಯ ಮುನಿಯು ಹೇಳಿದನು :—

೨೪. ತರುವಾಯ ಆ ಸಭೆಯಲ್ಲಿ ನೆರೆದ ಕೆಲವುಮಂದಿ ರಾಜರು ಚಾರುವರ್ಮರಾಜನಿಗೆ ಹೀಗೆ ಹೇಳಿದರು. ಕನ್ಯಾ-ವರರಲ್ಲಿ ಪರಸ್ಪರ ಪ್ರೀತಿಯುಂಟಾಗಿ ನಡೆಯುವ ವಿವಾಹವು ಗಾಂಧರ್ವವಿವಾಹವೆನಿಸುವುದು.

೨೫. ಆದರೆ ಗಾಂಧರ್ವವಿವಾಹವು ಕ್ಷತ್ರಿಯರಲ್ಲಿ ಮಾತ್ರ ನಡೆಯುವುದು ಧರ್ಮವು. ವೈಶ್ಯ-ಶೂದ್ರರಲ್ಲಿ ಅಥವಾ ಬ್ರಾಹ್ಮಣರಲ್ಲಿ ಇದು ಧರ್ಮವಲ್ಲ. ನಿನ್ನ ಪುತ್ರಿಗೆ ದಮಕುಮಾರನೊಡನೆ ಇಂತಹ ಗಾಂಧರ್ವ ವಿವಾಹವು ನಡೆದಿದೆ.

೨೬. ಎಲೈ, ಚಾರುವರ್ಮರಾಜನೇ! ಆದುದರಿಂದ ನಿನ್ನ ಮಗಳು ಧರ್ಮದೃಷ್ಟಿಯಿಂದ ದಮಕುಮಾರನ ಭಾರ್ಯೆಯಾಗಿರುವಳು. ಇದಕ್ಕೆ ವ್ಯತಿರೇಕವಾಗಿ ಹೋಗುವವನು ಕಾಮವಶನಾಗಿ ನಡೆದಂತಾಗುವುದು.

ತಥಾಪರೇ ತದಾ ಪ್ರೋಚುರ್ಮಹಾತ್ಮಾನೋ ಹಿ ಭೂಭೃತಾಮ್ ।
ಪಕ್ಷೇ ಯೇ ಭೂಭೃತೋ ವಿಪ್ರ ದಶಾರ್ಣಾಧಿಪತಿಂ ವಚಃ ॥೨೭॥

ನೋಹಾತ್ಕಿಮಾಹುರ್ಧರ್ಮೋಽಯಂ ಗಾನ್ಧರ್ವಂ ಕ್ಷತ್ರಜನ್ಮನಃ ।
ನ ತ್ವೇಷ ಶಸ್ತೋ ನಾನ್ಯೋ ಹಿ ರಾಕ್ಷಸಃ ಶಸ್ತ್ರಜೀವಿನಾಮ್ ॥೨೮॥

ಬಲಾದಿಮಾಂ ಯೋ ಹರತಿ ಹತ್ವಾ ತು ಪರಿಪನ್ಥಿನಃ ।
ತಸ್ಯೈಷಾ ಸ್ಯಾದ್ರಾಕ್ಷಸೇನ ವಿವಾಹೇನಾವನೀಶ್ವರಾಃ ॥೨೯॥

ಪ್ರಧಾನತರ ಏಷೋಽತ್ರ ವಿವಾಹದ್ವಿತಯೇ ಮತಃ ।
ಕ್ಷತ್ರಿಯಾಣಾಮತೋ ಧರ್ಮೋ ಮಹಾನನ್ವಾದಿಭಿಃ ಕೃತಃ ॥೩೦॥

---

೨೭. ವಿಪ್ರೋತ್ತಮನೇ! ಆ ಸಮಯದಲ್ಲಿ ರಾಜರಲ್ಲಿ ಮಹಾತ್ಮರೆನಿಸಿದ ಮತ್ತೆ ಕೆಲವರು ವಿರೋಧಪಕ್ಷದ ರಾಜರ ಮತವನ್ನು ಆಶ್ರಯಿಸಿ ದಶಾರ್ಣಾಧಿಪತಿಯಾದ ಚಾರುವರ್ಮನನ್ನು ಕುರಿತು ಹೀಗೆಂದರು.

೨೮. ಮೋಹದಿಂದ ಇಂತಹ ಮಾತುಗಳನ್ನಾಡುವುದೇಕೆ? ಕ್ಷತ್ರಿಯ ಜಾತಿಯಲ್ಲಿ ಜನಿಸಿದವನಿಗೆ ಗಾಂಧರ್ವವಿವಾಹವು ಧರ್ಮವಾದರೂ ಅದು ಪ್ರಶಸ್ತವಲ್ಲ. ಶಸ್ತ್ರದಿಂದ ಜೀವಿಸುವವರಿಗೆ ರಾಕ್ಷಸವಿವಾಹಕ್ಕಿಂತಲೂ ಶ್ರೇಷ್ಠವಾದುದು ಬೇರೊಂದಿಲ್ಲ.

೨೯. ಎಲೈ, ರಾಜರೇ! ಶತ್ರುಗಳನ್ನು ಸದೆಬಡಿದು ಯಾವ ವೀರನು ಬಲಾತ್ಕಾರದಿಂದ ಈಕೆಯನ್ನು ಅಪಹರಿಸುವನೋ ಅವನಿಗೆ ರಾಕ್ಷಸವಿವಾಹ ವಿಧಾನದಂತೆ ಈಕೆಯು ಪತ್ನಿಯಾಗುವಳು.

೩೦. ಕ್ಷತ್ರಿಯರಿಗೆ ವಿಹಿತವಾದ ಗಾಂಧರ್ವ ಮತ್ತು ರಾಕ್ಷಸವೆಂಬ ಎರಡು ವಿವಾಹಗಳಲ್ಲಿ ರಾಕ್ಷಸವಿವಾಹವು ಅತ್ಯಂತ ಪ್ರಧಾನವಾದುದು. ಇದರಿಂದ ಮಹಾಸಂದ ಮುಂತಾದವರು ಮಾಡಿರುವ ಕನ್ಯಾಪಹಾರವು ಧರ್ಮವೇ ಸರಿ.

ಮಾರ್ಕಣ್ಡೇಯ ಉವಾಚ :—

ಅಥ ಪ್ರೋಚುಃ ಪುನರ್ಭೂಪಾ ಯೈಃ ಪೂರ್ವಮುದಿತೋ ನೃಪಃ ।
ಪರಸ್ಪರಾನುರಾಗೇಣ ಜಾತಿಧರ್ಮಾಶ್ರಿತಂ ವಚಃ ॥೩೦॥

ಸತ್ಯಂ ಶಸ್ತೋ ರಾಕ್ಷಸೋಽಪಿ ಕ್ಷತ್ರಿಯಾಣಾಂ ಪರೋ ವಿಧಿಃ ।
ಕಿಂ ತ್ವಸೌ ಜನಕಸ್ವಾಮ್ಯೇ ಕುಮಾರ್ಯಾನುಮತೋ ವರಃ ॥೩೨॥

ಹತ್ವಾ ತು ಪಿತೃಸಮ್ಬನ್ಧಂ ಬಲೇನ ಹ್ರಿಯತೇ ಹಿ ಯಾ ।
ಸ ರಾಕ್ಷಸೋ ವಿಧಿಃ ಪ್ರೋಕ್ತೋ ನಾತ್ರ ಭರ್ತೃಕರೇ ಸ್ಥಿತಾ ॥೩೩॥

ಪಶ್ಯತಾಂ ಸರ್ವಭೂಪಾನಾಮನಯಾ ಯದ್ವೃತೋ ದಮಃ ।
ಗಾನ್ಧರ್ವಸ್ಯೇಹ ನಿಷ್ಪತ್ತೌ ವಿವಾಹೋ ರಾಕ್ಷಸೋಽತ್ರ ಕಃ ॥೩೪॥

ಮಾರ್ಕಂಡೇಯ ಮುನಿಯು ಹೇಳಿದನು :—

೩೧. ತರುವಾಯ ಹಿಂದೆ ಮಾತನಾಡಿರುವ ಭೂಪಾಲಕರು ಮತ್ತೆ ಚಾರುವರ್ಮನ ಮುಂದೆ ಈ ಪ್ರಸಂಗದಲ್ಲಿ ಪರಸ್ಪರ ಪ್ರೀತಿಯಿಂದ ನಡೆಯುವ ಗಾಂಧರ್ವವಿವಾಹವೇ ಕ್ಷತ್ರಿಯ ಜಾತಿಗೆ ಶ್ರೇಷ್ಠವೆಂಬ ವಿಷಯವಾಗಿ ಮಾತನಾಡಿದರು.

೩೨. ಕ್ಷತ್ರಿಯರಿಗೆ ರಾಕ್ಷಸವಿವಾಹದ ಉತ್ತಮ ವಿಧಾನವು ಶ್ರೇಷ್ಠವೆಂಬುದು ಸತ್ಯವು. ಆದರೆ ಕನ್ಯೆಯು ಜನಕನ ಸ್ವಾಮಿತ್ವದಲ್ಲಿದ್ದಾಗ ಮಾತ್ರ ಆ ವಿಧಿಯಿಂದ ವೀರಪುರುಷನು ಕನ್ಯೆಗೆ ವರನಾಗುವನು.

೩೩. ಬಲಾತ್ಕಾರದಿಂದ ಪಿತೃಸಂಬಂಧದ ಜನರನ್ನು ನಾಶಗೊಳಿಸಿ ಕನ್ಯೆಯನ್ನು ಅಪಹರಿಸುವುದೆಂಬುದು ರಾಕ್ಷಸವಿವಾಹವಿಧಿಯೆಂದು ಪ್ರಾಜ್ಞರಿಂದ ಹೇಳಲ್ಪಟ್ಟಿದೆ. ಪತಿಯನ್ನು ವರಿಸಿದ ಬಳಿಕ ಕನ್ಯೆಯನ್ನು ಅಪಹರಿಸುವುದು ವಿವಾಹವಿಧಿಯಲ್ಲ.

೩೪. ಈ ಸುಮನಾ ಕನ್ಯೆಯು ಸ್ವಯಂವರಕ್ಕಾಗಿ ಬಂದಿರುವ ಅನೇಕ ಮಂದಿ ರಾಜರು ನೋಡುತ್ತಿರುವ ಹಾಗೆ ದಮಕುಮಾರನನ್ನು ವರಿಸಿರುವಳು. ಆದ್ದರಿಂದ ಗಾಂಧರ್ವವಿವಾಹವು ನಡೆದಮೇಲೆ ರಾಕ್ಷಸವಿವಾಹಕ್ಕೆ ಇಲ್ಲಿ ಪ್ರಸಂಗವೇನು?

ವಿವಾಹಿತಾಯಾಃ ಕನ್ಯಾಯಾಃ ಕನ್ಯಾತ್ವಂ ನೈವ ವಿದ್ಯತೇ ।
ಕನ್ಯಾಯಾಶ್ಚ ವಿವಾಹೇನ ಸಮ್ಬನ್ಧಃ ಪೃಥಿವೀಶ್ವರಾಃ ॥೩೫॥

ತ ಇಮೇ ಯೇ ಬಲಾದೇನಾಂ ದಮಾದಾದಾತುಮುದ್ಯತಾಃ ।
ಬಲಿನಸ್ತೇ ಯದಿ ತತಃ ಕುರ್ವನ್ತು ನ ತು ಸಾಧು ತತ್ ॥೩೬॥

ಮಾರ್ಕಣ್ಡೇಯ ಉವಾಚ :—

ತಚ್ಛ್ರುತ್ವಾ ಸ ದಮಃ ಕೋಪಕಷಾಯೀಕೃತಲೋಚನಃ ।
ಆರೋಪಯಾಮಾಸ ಧನುರ್ವಚನಂ ಚೇದಮಬ್ರವೀತ್ ॥೩೭॥

ಮಮಾಪಿ ಭಾರ್ಯಾ ಬಲಿಭಿಃ ಪಶ್ಯತೋ ಹ್ರಿಯತೇ ಯದಿ ।
ತತ್ಕುಲೇನ ಭುಜಾಭ್ಯಾಂ ವಾ ಕೋ ಗುಣಃ ಕ್ಲೀಬಜನ್ಮನಃ ॥೩೮॥

---

೩೫. ಕನ್ಯೆಗೆ ವಿವಾಹವಾದ ಬಳಿಕ ಆಕೆಯಲ್ಲಿ ಕನ್ಯಾತ್ವವು ಉಳಿಯುವುದಿಲ್ಲ. ಎಲೈ ರಾಜರೇ! ವಿವಾಹದ ಮೂಲಕವಾಗಿ ಸಂಬಂಧವು ಬೆಳೆಯಬೇಕಾದರೆ ಕನ್ಯಾತ್ವವಿರುವವಳಿಗೆ ಮಾತ್ರವಲ್ಲವೇ?

೩೬. ಈ ರಾಜಕುಮಾರರು ಬಲಾತ್ಕಾರವಾಗಿ ಈ ಕನ್ಯೆಯನ್ನು ದಮಕುಮಾರನಿಂದ ಅಪಹರಿಸಲು ಯತ್ನಿಸುತ್ತಿರುವರು. ಅವರು ಬಲಿಷ್ಠರಾಗಿ ಹಾಗೆ ಮಾಡುವುದಾದರೆ ಮಾಡಲಿ. ಆದರೆ ಅದು ಸಾಧುವಲ್ಲ.

ಮಾರ್ಕಂಡೇಯ ಮುನಿಯು ಹೇಳಿದನು :—

೩೭. ರಾಜರ ಆ ವಚನವನ್ನು ಕೇಳಿ ಕೋಪದಿಂದ ಕೆಂಡದಂತಾದ ಕಣ್ಣುಗಳುಳ್ಳ ದಮಕುಮಾರನು ಬಿಲ್ಲನ್ನು ಹೆದೆಯೇರಿಸಿದನು. ಮತ್ತು ದುಷ್ಟರನ್ನು ಕುರಿತು ಹೀಗೆ ಆರ್ಭಟಿಸಿಹೇಳಿದನು.

೩೮. ಬಲಿಷ್ಠರೆಂದು ಬಂದ ದುಷ್ಟರಿಂದ ನಾನು ನೋಡುತ್ತಿರುವ ಹಾಗೆ ನನ್ನ ಪತ್ನಿಯು ಅಪಹರಿಸಲ್ಪಡುವುದಾದರೆ ನಪುಂಸಕನಂತೆ ಜನ್ಮವೆತ್ತಿದ ನನಗೆ ಇಂತಹ ಮಹತ್ತಾದ ವಂಶದಿಂದಲೂ ಬಾಹುಗಳಿಂದಲೂ ಪ್ರಯೋಜನವೇನಾಯಿತು?

ಧಿಙ್ಮಮಾಸ್ತ್ರಾಣಿ ಧಿಕ್ಶೌರ್ಯಂ ಧಿಕ್ಛರಾನ್ಧಿಕ್ಶರಾಸನಮ್ ।
ಧಿಗ್ವ್ಯರ್ಥಂ ಮೇ ಕುಲೇ ಜನ್ಮ ಮರುತ್ತಸ್ಯ ಮಹಾತ್ಮನಃ ॥೩೯॥

ಯದಿ ಭಾರ್ಯಾಮಿಮೇ ಮೂಢಾಃ ಸಮಾದಾಯ ಬಲಾನ್ವಿತಾಃ ।
ಪ್ರಯಾನ್ತಿ-ಜೀವತೋ ಧಿಕ್ತಾಂ ಮಮ ವ್ಯರ್ಥಮನುಷ್ಯತಾಮ್ ॥೪೦॥

ಇತ್ಯುಕ್ತ್ವಾ ತಾನ್ಮಹೀಪಾಲಾನ್ಮಹಾನನ್ದಮುಖಾನ್ಬಲೀ ।
ಅಥಾಬ್ರವೀತ್ತದಾ ಸರ್ವಾನ್ನೃಪಾರಿದಮನೋ ದಮಃ ॥೪೧॥

ಏಷಾತಿಶೋಭನಾ ಬಾಲಾ ಚಾರ್ವಙ್ಗೀ ಮದಿರೇಕ್ಷಣಾ ।
ಕಿಂ ತಸ್ಯ ಜನ್ಮನಾ ಭಾರ್ಯಾ ನ ಯಸ್ಯೇಯಂ ಕುಲೋದ್ಭವಾ ॥೪೨॥

---

೩೯. ಶತ್ರುಗಳಿಂದ ಪತ್ನಿಯನ್ನು ರಕ್ಷಿಸಲಾರದ ನನ್ನ ಅಸ್ತ್ರಗಳಿಗೆ ಧಿಕ್ಕಾರವು. ನನ್ನ ಶೌರ್ಯಕ್ಕೆ ಧಿಕ್ಕಾರವು. ನನ್ನ ಬಾಣಗಳಿಗೆ ಧಿಕ್ಕಾರವು. ನನ್ನ ಬಿಲ್ಲಿಗೆ ಧಿಕ್ಕಾರವು. ಮತ್ತು ಮಹಾತ್ಮನಾದ ಮರುತ್ತನ ವಂಶದಲ್ಲಿ ಲಭಿಸಿ ವ್ಯರ್ಥವಾದ ಜನ್ಮಕ್ಕೆ ಧಿಕ್ಕಾರವು.

೪೦. ಬಲದಿಂದ ಕೊಬ್ಬಿದ ಈ ಮೂಢ ಶತ್ರುಗಳು ನಾನು ಜೀವಂತನಾಗಿದ್ದು ನನ್ನ ಭಾರ್ಯೆಯನ್ನು ಎತ್ತಿಕೊಂಡು ಹೋಗುವುದಾದರೆ ನಾನು ಹೊಂದಿದ ಮನುಷ್ಯ ಜಾತಿಯ ವ್ಯರ್ಥಜನ್ಮಕ್ಕೆ ಧಿಕ್ಕಾರವು.

೪೧. ತರುವಾಯ ದೊಡ್ಡ ಶತ್ರುಗಳನ್ನು ನಿಗ್ರಹಿಸಬಲ್ಲವನೂ, ಬಲಿಷ್ಠನೂ ಆದ ದಮಕುಮಾರನು ಮಹಾನಂದ ಮುಂತಾದ ರಾಜರನ್ನು ಕುರಿತು ಹೀಗೆ ಹೇಳುತ್ತ ಮತ್ತೆ ಎಲ್ಲ ರಾಜರನ್ನು ಕುರಿತು ಹೇಳಿದನು.

೪೨. ಈ ಸುಮನಾಕನ್ಯೆಯು ಮಂಗಳಕರಳೂ, ಬಾಲಿಕೆಯೂ, ಸುಂದರಾಂಗಿಯೂ, ಮದಿಸಿದಂತಿರುವ ಕಣ್ಣುಗಳುಳ್ಳವಳೂ ಮತ್ತು ಸತ್ಕುಲಪ್ರಸೂತಳೂ ಆಗಿರುವಳು. ಇಂತಹವಳು ಭಾರ್ಯೆಯಾಗಿ ಲಭಿಸದವನ ಜನ್ಮಕ್ಕೆ ಧಿಕ್ಕಾರವು.

ಇತಿ ಸಞ್ಚಿನ್ತ್ಯ ಭೂಪಾಲಾಸ್ತಥಾ ಯತತ ಸಂಯುಗೇ ।
ಯಥಾ ನಿರ್ಜಿತ್ಯ ಮಾಮೇತಾಂ ಪತ್ನೀಂ ಕುರುತ ಮಾನಿನಃ ॥೪೩॥

ಇತ್ಯಾಭಾಷ್ಯ ತತಸ್ತತ್ರ ಶರವರ್ಷಮಮುಞ್ಚತ ।
ಛಾದಯನ್ಪೃಥಿವೀಪಾಲಾಂಸ್ತಮಸೇವ ಮಹೀರುಹಾನ್ ॥೪೪॥

ತೇಽಪಿ ವೀರಾ ಮಹೀಪಾಲಾಃ ಶರಶಕ್ತ್ಯೃಷ್ಟಿಮುದ್ಗರಾನ್ ।
ಮುಮುಚುಸ್ತತ್ಪ್ರಯುಕ್ತಾಂಶ್ಚ ದಮಶ್ಚಿಚ್ಛೇದ ಲೀಲಯಾ ॥೪೫॥

ತೇಽಪಿ ತತ್ಪ್ರಹಿತಾನ್ಬಾಣಾಂಸ್ತೇಷಾಂ ಚಾಸೌ ಶರೋತ್ಕರಾನ್ ।
ಚಿಚ್ಛೇದ ಪೃಥಿವೀಶಾನಾಂ ನರಿಷ್ಯನ್ತಾತ್ಮಜೋ ಮುನೇ ॥೪೬॥

---

೪೩. ಎಲೈ ಸಕಲ ಭೂಪಾಲಕರೇ! ಮಾನವಂತರಾದ ನೀವು ಹೀಗೆಂದು ಯೋಚಿಸಿ ನನ್ನನ್ನು ಜಯಿಸಿ ಈ ಕನ್ಯೆಯನ್ನು ಪತ್ನಿಯನ್ನಾಗಿ ಹೊಂದುವ ಹಾಗೆ ಯುದ್ಧರಂಗದಲ್ಲಿ ಯತ್ನಮಾಡಿರಿ.

೪೪. ದಮಕುಮಾರನು ಹೀಗೆಂದು ಹೇಳಿ ಕೂಡಲೇ ಅಲ್ಲಿ ಕತ್ತಲಿನಿಂದ ಮರಗಳು ಮುಚ್ಚಿಹೋಗುವಂತೆ ಆ ದುಷ್ಟರಾಜರು ಮುಚ್ಚಿಹೋಗುವ ಹಾಗೆ ಬಾಣಗಳ ವೃಷ್ಟಿಯನ್ನು ಸುರಿಸಿದನು.

೪೫. ಆಗ ವೀರರಾದ ಶತ್ರುರಾಜರು ಬಾಣ-ಶಕ್ತಿ-ಋಷ್ಟಿ-ದಂಡ ಮುಂತಾದ ತಮ್ಮ ಆಯುಧಗಳನ್ನು ದಮನ ಮೇಲೆ ಪ್ರಯೋಗಿಸಿದರು. ದಮಕುಮಾರನು ಶತ್ರುಗಳಿಂದ ಬಂದ ಆಯುಧಗಳನ್ನು ಲೀಲೆಯಿಂದ ಕತ್ತರಿಸಿದನು.

೪೬. ಕ್ರೌಷ್ಟುಕಿಮುನಿಯೇ! ಶತ್ರುರಾಜರು ದಮಕುಮಾರನಿಂದ ಪ್ರಯೋಗಿಸಲ್ಪಟ್ಟ ಬಾಣಗಳನ್ನೂ, ನರಿಷ್ಯಂತನ ಪುತ್ರನಾದ ದಮಕುಮಾರನು ಆ ವೀರ ಶತ್ರುರಾಜರ ಬಾಣಗಳನ್ನೂ ಛೇದಿಸಿದರು.

ವರ್ತಮಾನೇ ತದಾ ಯುದ್ಧೇ ದಮಸ್ಯ ಕ್ಷಿತಿಪಾತ್ಮಜೈಃ ।
ಪ್ರವಿವೇಶ ಮಹಾನನ್ದಃ ಖಡ್ಗಪಾಣಿರ್ಯತೋ ದಮಃ ॥೪೭॥

ತಮಾಯಾನ್ತಂ ದಮೋ ದೃಷ್ಟ್ವಾ ಖಡ್ಗಪಾಣಿಂ ಮಹಾಮೃಧೇ ।
ಮುಮೋಚ ಶರವರ್ಷಾಣಿ ವರ್ಷಾಣೀವ ಪುರನ್ದರಃ ॥೪೮॥

ತದಸ್ತ್ರಾಣಿ ತತಸ್ತಾನಿ ಶರಜಾಲಾನಿ ತತ್ಕ್ಷಣಾತ್ ।
ಮಹಾನನ್ದಃ ಪ್ರಚಿಚ್ಛೇದ ಖಡ್ಗೇನಾನ್ಯಾನವಞ್ಚಯತ್ ॥೪೯॥

ತತೋ ರೋಷಾತ್ಸಮಾರುಹ್ಯ ತಂ ದಮಸ್ಯ ತದಾ ರಥಮ್ ।
ಮಹಾನನ್ದೋ ಮಹಾವೀರ್ಯೋ ದಮೇನ ಯುಯುಧೇ ಸಹ॥೫೦॥

ಬಹುಧಾ ಯುಧ್ಯಮಾನಸ್ಯ ಮಹಾನನ್ದಸ್ಯ ಲಾಘವಾತ್ ।
ದಮೋ ಮುಮೋಚ ಹೃದಯೇ ಶರಂ ಕಾಲಾನಲಪ್ರಭಮ್ ॥೫೧॥

---

೪೭. ಹೀಗೆ ದಮರಾಜನಿಗೆ ಇತರ ವೀರ ರಾಜಕುಮಾರರೊಡನೆ ಯುದ್ಧವು ನಡೆಯುತ್ತಿರಲು ಆ ಸಮಯದಲ್ಲಿ ಕೈಯಲ್ಲಿ ಖಡ್ಗವನ್ನು ಧರಿಸಿದ ಮಹಾನಂದ ಎಂಬುವನು ದಮನು ಇದ್ದ ಸ್ಥಳಕ್ಕೆ ಧಾವಿಸಿ ಬಂದನು.

೪೮. ಆಗ ದಮರಾಜನು ಮಹಾಯುದ್ಧರಂಗದಲ್ಲಿ ಕೈಯಲ್ಲಿ ಖಡ್ಗಧಾರಿಯಾಗಿ ಬರುತ್ತಿದ್ದ ಮಹಾನಂದನನ್ನು ನೋಡಿ ಇಂದ್ರನು ಮಳೆಯನ್ನು ಸುರಿಸುವಂತೆ ಅವನ ಮೇಲೆ ಬಾಣವೃಷ್ಟಿಯನ್ನು ಸುರಿಸಿದನು.

೪೯. ತರುವಾಯ ಮಹಾನಂದನು ದಮನ ಅಸ್ತ್ರಗಳನ್ನೂ ಮತ್ತು ಅವನು ಪ್ರಯೋಗಿಸಿದ ಬಾಣಗಳ ಮಳೆಯನ್ನೂ ತನ್ನ ಖಡ್ಗದಿಂದ ಕತ್ತರಿಸಿದನು. ಹಾಗು ಕೆಲವು ಅಸ್ತ್ರಗಳನ್ನು ಗುರಿತಪ್ಪಿಸಿಕೊಂಡು ವ್ಯರ್ಥಗೊಳಿಸಿದನು.

೫೦. ಅನಂತರದಲ್ಲಿ ಮಹಾವೀರ್ಯಶಾಲಿಯಾದ ಮಹಾನಂದನು ಆಗ ಆ ದಮರಾಜನೇರಿದ ರಥವನ್ನು ಏರಿಕೊಂಡು ದಮಕುಮಾರನೊಡನೆ ಹೋರಾಡಿದನು.

೫೧. ರಥದಲ್ಲಿ ಚಟುವಟಿಕೆಯಿಂದ ತರತರವಾಗಿ ಯುದ್ಧಮಾಡುತ್ತಿದ್ದ ಮಹಾನಂದನ ಮೇಲೆ ದಮಕುಮಾರನು ಪ್ರಲಯಾಗ್ನಿಗೆ ಸಮಾನವಾದ ಪ್ರಭೆಯುಳ್ಳ ಒಂದು ತೀಕ್ಷ್ಣಬಾಣವನ್ನು ಬಿಟ್ಟನು.

ತಂ ಲಗ್ನಮಾತ್ಮನೋತ್ಕೃಷ್ಯ ವಿಭಿನ್ನೇನ ತತೋ ಹೃದಾ ।
ದಮಂ ಪ್ರತಿ ವಿಚಿಕ್ಷೇಪ ಮಹಾನನ್ದೋಽಸಿಮುಜ್ಜ್ವಲಮ್ ॥೫೨॥

ಪತನ್ತಂ ಚೈನಮುಲ್ಕಾಭಂ ಶಕ್ತ್ಯಾ ಚಿಕ್ಷೇಪ ತಂ ದಮಃ ।
ಶಿರೋ ವೇತಸಪತ್ರೇಣ ಮಹಾನನ್ದಸ್ಯ ಚಾಚ್ಛಿನತ್ ॥೫೩॥

ತಸ್ಮಿನ್ಹತೇ ಮಹಾನನ್ದೇ ಪ್ರಾಚುರ್ಯೇಣ ಪರಾಙ್ಮುಖಾಃ ।
ಬಭೂವುಃ ಪಾರ್ಥಿವಾಸ್ತಸ್ಥೌ ವಪುಷ್ಮಾನ್ಕುಣ್ಡಿನಾಧಿಪಃ ॥೫೪॥

ದಮೇನ ಯುಯುಧೇ ಚಾಸೌ ಬಲಗರ್ವಮದಾನ್ವಿತಃ ।
ದಾಕ್ಷಿಣಾತ್ಯಮಹೀಪಾಲತನಯೋ ರಣಗೋಚರಃ ॥೫೫॥

ಯುಧ್ಯಮಾನಸ್ಯ ತಸ್ಯೋಗ್ರಂ ಕರವಾಲಂ ಸ ವೈ ಲಘು ।
ಚಿಚ್ಛೇದ ಸಾರಥೇಶ್ಚೈವ ಶಿರಃ ಸಜ್ಜಸ್ಯ ತಥಾ ಧ್ವಜಮ್ ॥೫೬॥

---

೫೨. ಆಗ ಮಹಾನಂದನು ಆ ಬಾಣವು ತಗುಲಿ ಹೃದಯವು ಭೇದಿಸಲ್ಪಟ್ಟಿದ್ದರೂ ಕೂಡ ತಾನು ಒರೆಯಿಂದ ಉಜ್ವಲವಾದ ಖಡ್ಗವನ್ನು ಎತ್ತಿಕೊಂಡು ದಮಕುಮಾರನನ್ನು ಗುರಿಯಿಟ್ಟು ಎಸೆದನು.

೫೩. ಬೆಂಕಿಯ ಕೊಳ್ಳಿಯಂತೆ ಹೊಳೆಯುತ್ತ ತನ್ನ ಮೇಲೆ ಬರುತ್ತಿದ್ದ ಖಡ್ಗವನ್ನು ದಮರಾಜನು ತನ್ನ ಶಕ್ತಿಆಯುಧದಿಂದ ಕೆಡವಿದನು. ಮತ್ತು ಮಹಾನಂದನ ಶಿರವನ್ನು ವೇತಸಪತ್ರವೆಂಬ ಆಯುಧದಿಂದ ಕತ್ತರಿಸಿಹಾಕಿದನು.

೫೪. ಹಾಗೆ ಮಹಾನಂದ ರಾಜನು ಸಂಹರಿಸಲ್ಪಡಲು ಅಲ್ಲಿದ್ದ ಅನೇಕ ಮಂದಿ ರಾಜರಲ್ಲಿ ಪ್ರಾಯಕವಾಗಿ ಎಲ್ಲರೂ ಹಿಂದಕ್ಕೆ ಸರಿದರು. ಕುಂಡಿನದೇಶಾಧಿಪತಿಯಾದ ವಪುಷ್ಮಾನ್ ಎಂಬುವನು ಮಾತ್ರ ಅಲ್ಲೇ ನಿಂತನು.

೫೫. ದಕ್ಷಿಣದೇಶದ ರಾಜ್ಯಾಧಿಪತಿಯ ಪುತ್ರನೂ ಯುದ್ಧದಲ್ಲಿ ನಿಪುಣನೂ ಆದ ವಪುಷ್ಮಾನ್ ಎಂಬುವನು ತನ್ನ ಬಲದಲ್ಲಿ ಗರ್ವ-ಮದಗಳಿಂದ ಕೂಡಿದವನಾಗಿ ದಮರಾಜನೊಡನೆ ಕದನ ನಡೆಸಿದನು.

೫೬. ಲಾಘವದಿಂದ ಯುದ್ಧಮಾಡುತ್ತಿದ್ದ ವಪುಷ್ಮಂತನ ಉಗ್ರವಾದ ಖಡ್ಗಾಯುಧವನ್ನೂ, ಸಾರಥಿಯ ಶಿರವನ್ನೂ, ಮತ್ತು ರಥದ ಧ್ವಜವನ್ನೂ ದಮಕುಮಾರನು ಕತ್ತರಿಸಿ ಯುದ್ಧರಂಗದಲ್ಲಿ ಕೆಡವಿದನು.

ಛಿನ್ನೇ ಖಡ್ಗೇ ಗವಾಂ ಸೋಽಥ ಜಗ್ರಾಹ ಬಹುಕಣ್ಟಕಾವ್ |
ತಾಮುಸ್ಯಸ್ಯ ಸ ಚಿಚ್ಛೇದ ಕರಸ್ಥಾಮೇವ ಸತ್ವರಃ ||೫೭||

ಯಾವದನ್ಯತ್ಸಮಾದತ್ತೇ ಸ ವಪುಷ್ಮಾನ್ವರಾಯುಧಮ್ |
ತಾವಚ್ಛರೇಣ ತಂ ವಿಧ್ವಾ ದಮೋ ಭೂಮಾವಪಾತಯತ್ ||೫೮||

ಸ ಪಾತಿತಸ್ತತೋ ಭೂಮೌ ವಿಹ್ವಲಾಙ್ಗಃ ಸವೇಪಥುಃ |
ವಿನಿವೃತ್ತಮತಿರ್ಯುದ್ಧಾದ್ಬಭೂವ ಕ್ಷಿತಿಪಾತ್ಮಜಃ ||೫೯||

ತಮಾಲೋಕ್ಯ ತಥಾಭೂತಮಯುದ್ಧಮತಿಮಾತ್ಮವಾನ್ |
ಉತ್ಸೃಜ್ಯಾದಾಯ ಸುಮನಾಂ ಸುಮನಾಃ ಪ್ರಯಯೌ ದಮಃ||೬೦||

---

೫೭. ಖಡ್ಗವು ಕತ್ತರಿಸಿಹೋದ ಬಳಿಕ ವಪುಷ್ಮಂತನು ಮುಳ್ಳುಗಳಿಂದ ತುಂಬಿಹೋದ ಬಹುಕಂಟಕಾ ಎಂಬ ಅಸ್ತ್ರವನ್ನು ಕೈಯಲ್ಲಿ ತೆಗೆದುಕೊಂಡನು. ದಮಕುಮಾರನು ತ್ವರೆಯಿಂದ ಶತ್ರುವಿನ ಕೈಯಲ್ಲಿದ್ದ ಹಾಗೆಯೆ ಬಹುಕಂಟಕಾ ಯುಧವನ್ನು ಕತ್ತರಿಸಿದನು.

೫೮. ಹೀಗೆ ವಪುಷ್ಮಂತನು ಯಾವಾಗ ಬೇರೆ ಬೇರೆಯಾದ ಉತ್ತಮಾಸ್ತ್ರವನ್ನು ಕೈಯಲ್ಲಿ ಹಿಡಿಯುವನೋ ಅಷ್ಟರಲ್ಲಿ ದಮರಾಜನು ಬಾಣದಿಂದ ಅವನ್ನು ಕತ್ತರಿಸಿ ನೆಲದ ಮೇಲೆ ಕೆಡವುತ್ತಿದ್ದನು.

೫೯. ತರುವಾಯ ನೆಲವಲ್ಲಿ ಉರುಳಿಸಲ್ಪಟ್ಟ ರಾಜಪುತ್ರನಾದ ಆ ವಪುಷ್ಮಂತನು ನಿಸ್ತ್ರಾಣವಾದ ದೇಹವುಳ್ಳವನೂ ಮತ್ತು ನಡುಕಿನಿಂದ ಕೂಡಿದವನೂ ಆಗಿ ಮುಂದೆ ಯುದ್ಧವು ಬೇಡವೆಂಬ ಸಂಕಲ್ಪವುಳ್ಳವನಾದನು.

೬೦. ಶಾಂತಮಾನಸದಿಂದ ಕೂಡಿದ ದೃಢಚಿತ್ತನಾದ ದಮರಾಜನು ಆ ದುರವಸ್ಥೆಯನ್ನು ಹೊಂದಿದವನೂ ಯುದ್ಧಸಂಕಲ್ಪವನ್ನು ತ್ಯಜಿಸಿದವನೂ ಆದ ವಪುಷ್ಮಂತನನ್ನು ನೋಡಿ ಹಾಗೆಯೇ ಬಿಟ್ಟು ಪತ್ನಿಯಾದ ಸುಮನೆಯನ್ನು ಕರೆದುಕೊಂಡು ಹೋದನು.

ತತೋ ದಶಾರ್ಣಾಧಿಪತಿಃ ಪ್ರೀತಿಮಾನಕರೋತ್ತಯೋಃ ।
ದಮಸ್ಯ ಸುಮನಾಯಾಶ್ಚ ವಿವಾಹಂ ವಿಧಿಪೂರ್ವಕಮ್ ॥೬೧॥

ಕೃತದಾರೋ ದಮಸ್ತತ್ರ ದಶಾರ್ಣಾಧಿಪತೇಃ ಪುರೇ ।
ಸ್ಥಿತ್ವಾಲ್ಪಕಾಲಂ ಪ್ರಯಯೌ ಸಭಾರ್ಯೋ ನಿಜಮನ್ದಿರಮ್ ॥೬೨॥

ದಶಾರ್ಣಾಧಿಪತಿಶ್ಚಾಸೌ ದತ್ವಾ ನಾಗಾಂಸ್ತುರಙ್ಗಮಾನ್ ।
ರಥಗೋಽಶ್ವಖರೋಷ್ಟ್ರಾಂಶ್ಚ ದಾಸೀದಾಸಾಂಸ್ತಥಾ ಬಹೂನ್ ॥೬೩॥
ವಸ್ತ್ರಾಲಙ್ಕಾರಚಾಪಾದಿವರೋಪಸ್ಕರಮಾಸನಮ್ ।
ಅನ್ಯೈಸ್ತೈಶ್ಚ ತಥಾ ಭಾಣ್ಡೈಃ ಪರಿಪೂರ್ಣಂ ವ್ಯಸರ್ಜಯತ್ ॥೬೪॥

ಇತಿ ಶ್ರೀಮಾರ್ಕಣ್ಡೇಯಮಹಾಪುರಾಣೇ ದಮಚರಿತೇ
ತ್ರಿಂಶದಧಿಕಶತತಮೋಽಧ್ಯಾಯಃ

---

೬೧. ತರುವಾಯ ದಶಾರ್ಣದೇಶದ ಅಧಿಪತಿಯಾದ ಚಾರುವರ್ಮ ರಾಜನು ಬಹಳ ಪ್ರೀತಿಯುಳ್ಳವನಾಗಿ ದಮಕುಮಾರನಿಗೂ, ಸುಮನಾಕನ್ಯೆಗೂ ಇಬ್ಬರಿಗೂ ವಿಧಿಪೂರ್ವಕವಾಗಿ ವಿವಾಹವನ್ನು ನೆರವೇರಿಸಿದನು.

೬೨. ಪತ್ನಿಯ ಪಾಣಿಗ್ರಹಣವನ್ನು ಮಾಡಿದ ದಮರಾಜನು ದಶಾರ್ಣ ರಾಜನ ನಗರದಲ್ಲಿ ಕೆಲವು ದಿನಗಳು ಸುಖವಾಗಿ ವಾಸಮಾಡಿದ್ದು ತರುವಾಯ ಪತ್ನೀಸಮೇತನಾಗಿ ಅಲ್ಲಿಂದ ತನ್ನ ಮನೆಗೆ ತೆರಳಿದನು.

೬೩. ದಶಾರ್ಣರಾಜನಾದ ಚಾರುವರ್ಮನು ಆನೆ, ಕುದುರೆ, ರಥ, ಗೋವು, ಹೇಸರುಗತ್ತೆ, ಒಂಟೆ, ದಾಸೀ ಮತ್ತು ದಾಸಜನರಿಂದ ಕೂಡಿದ ಬಹು ವಿಧವಾದ ಬಳುವಳಿಯನ್ನು ಕೊಟ್ಟು ದಮನನ್ನು ಕಳಿಸಿಕೊಟ್ಟನು.

೬೪. ಮತ್ತು ವಸ್ತ್ರ, ಅಲಂಕಾರ, ಉತ್ತಮವಾದ ಬಿಲ್ಲು-ಬಾಣ, ಆಸನ ಮತ್ತು ಇನ್ನೂ ಅನೇಕ ವಿಧವಾದ ಉಪಕರಣಗಳನ್ನು ಕೊಟ್ಟು ಸಮಸ್ತ ಪರಿವಾರಪೂರ್ಣನನ್ನಾಗಿ ಮಾಡಿ ಕಳುಹಿಸಿದನು.

ಮಾರ್ಕಂಡೇಯ ಮಹಾಪುರಾಣದಲ್ಲಿ ನೂರ ಮೂವತ್ತನೆಯ
ಅಧ್ಯಾಯವು ಮುಗಿದುದು.

॥ ಓಂ ಶ್ರೀ ದುರ್ಗಾಯೈ ನಮಃ ॥

ಮಾರ್ಕಂಡೇಯ ಪುರಾಣಂ

ಏಕತ್ರಿಂಶದಧಿಕಶತತಮೋಽಧ್ಯಾಯಃ

(ದಮೇನ ವಪುಷ್ಮದ್ವಧಪ್ರತಿಜ್ಞಾ)

ಮಾರ್ಕಣ್ಡೇಯ ಉವಾಚ :—

ಸ ತಾಂ ಲಬ್ಧ್ವಾ ತಥಾ ಪತ್ನೀಂ ಸುಮನಾಂ ಸುಮಹಾಮುನೇ ।
ಪ್ರಣಮ್ಯ ಸ ಪಿತುಃ ಪಾದೌ ಮಾತುಶ್ಚ ಕ್ಷಿತಿಪಾತ್ಮಜಃ ॥೧॥

ಸಾ ಚ ತೌ ಶ್ವಶುರೌ ಸುಭ್ರೂರ್ನನಾಮ ಸುಮನಾ ತದಾ ।
ತಾಭ್ಯಾಂ ತೌ ಚ ತದಾ ವಿಪ್ರ ಆಶೀರ್ಭಿರಭಿನನ್ದಿತೌ ॥೨॥

ನೂರ ಮೂವತ್ತೊಂದನೆಯ ಅಧ್ಯಾಯ

ಮಾರ್ಕಂಡೇಯ ಮಹರ್ಷಿಯು ಹೇಳಿದನು :—

೧. ಕ್ರೌಷ್ಟುಕಿಮಹಾಮುನಿಯೇ ! ರಾಜಪುತ್ರನಾದ ದಮರಾಜನು ಸುಮನೆಯೆಂಬ ಕನ್ಯೆಯನ್ನು ಪತ್ನಿಯನ್ನಾಗಿ ಹೊಂದಿ ನಗರಕ್ಕೆ ಬಂದು ಮೊದಲು ತನ್ನ ಜನನೀ-ಜನಕರ ಪಾದಗಳನ್ನು ವಂದಿಸಿದನು.

೨. ವಿಪ್ರೋತ್ತಮನಾದ ಕ್ರೌಷ್ಟುಕಿಯೇ ! ಸುಂದರವಾದ ಹುಬ್ಬುಗಳಿಂದ ಕೂಡಿದ ಆ ಸುಮನೆಯು ಅತ್ತೆ-ಮಾವಂದಿರನ್ನು ನಮಸ್ಕರಿಸಿದಳು. ಆಗ ಆ ದಂಪತಿಗಳು ಅವರಿಂದ ಅನೇಕ ಆಶೀರ್ವಾದಗಳಿಂದ ಅಭಿನಂದಿಸಲ್ಪಟ್ಟರು.

ಮಹೋತ್ಸವಶ್ಚ ಸಞ್ಜಜ್ಞೇ ನರಿಷ್ಯನ್ತಸ್ಯ ವೈ ಪುರೇ ।
ಕೃತದಾರೇ ಚ ಸಮ್ಪ್ರಾಪ್ತೇ ದಶಾರ್ಣಾಧಿಪತೇಃ ಪುರಾತ್ ॥೩॥

ಸಮ್ಬನ್ಧಿನಂ ದಶಾರ್ಣೇಶಂ ಜಿತಾಂಶ್ಚ ಪೃಥಿವೀಶ್ವರಾನ್ ।
ಶ್ರುತ್ವಾ ಪುತ್ರೇಣ ಮುಮುದೇ ನರಿಷ್ಯನ್ತೋ ಮಹೀಪತಿಃ ॥೪॥

ಸೋಽಪಿ ರೇಮೇ ಸುಮನಯಾ ಮಹಾರಾಜಸುತೋ ದಮಃ ।
ವರೋದ್ಯಾನವನೋದ್ದೇಶಪ್ರಾಸಾದಗಿರಿಸಾನುಷು ॥೫॥

ಅಥ ಕಾಲೇನ ಮಹತಾ ರಮಮಾಣಾ ದಮೇನ ಸಾ ।
ಅವಾಪ ಗರ್ಭಂ ಸುಮನಾ ದಶಾರ್ಣಾಧಿಪತೇಃ ಸುತಾ ॥೬॥

ಸೋಽಪಿ ರಾಜಾ ನರಿಷ್ಯನ್ತೋ ಭುಕ್ತಭೋಗೋ ಮಹೀಪತಿಃ ।
ವಯಃಪರಿಣತಿಂ ಪ್ರಾಪ್ಯ ದಮಂ ರಾಜ್ಯೇಽಭಿಷಿಚ್ಯ ಚ ॥೭॥

---

೩. ಆಗ ದಮಕುಮಾರನು ಪಾಣಿಗ್ರಹಣ ಮಾಡಿಕೊಂಡು ಪತ್ನೀ-ಸಮೇತನಾಗಿ ದಶಾರ್ಣರಾಜನ ನಗರದಿಂದ ಬರುತ್ತಿರಲು ನರಿಷ್ಯಂತರಾಜನ ನಗರದಲ್ಲಿ ದೊಡ್ಡ ಉತ್ಸವದಂತೆ ಆಯಿತು.

೪. ದಶಾರ್ಣದೇಶದ ದೊರೆಯು ಸಂಬಂಧಿಯಾದುದನ್ನೂ ಮತ್ತು ತನ್ನ ಪುತ್ರನಿಂದ ಸಮಸ್ತ ರಾಜರು ಸೋತುಹೋದುದನ್ನೂ ಕೇಳಿ ನರಿಷ್ಯಂತ ಮಹಾರಾಜನು ತುಂಬ ಸಂತೋಷಪಟ್ಟನು.

೫. ನರಿಷ್ಯಂತಮಹಾರಾಜನ ಪುತ್ರನಾದ ದಮಕುಮಾರನು ಆ ಸುಮನಾ ಪ್ರೇಯಸಿಯೊಡಗೂಡಿ ಸುಂದರವಾದ ಉದ್ಯಾನ, ರಮ್ಯವಾದ ವನಪ್ರದೇಶ, ಪ್ರಾಸಾದ, ಪರ್ವತಗಳ ತಪ್ಪಲು ಮುಂತಾದ ವಿವಿಧ ಸ್ಥಳಗಳಲ್ಲಿ ರಮಿಸಿದನು.

೬. ತರುವಾಯ ದಶಾರ್ಣರಾಜನ ಪುತ್ರಿಯಾದ ಸುಮನೆಯು ಬಹು ದೀರ್ಘಕಾಲ ದಮಕುಮಾರನೊಡನೆ ರಮಿಸುತ್ತ ಗರ್ಭವನ್ನು ಧರಿಸಿದಳು.

೭. ಅನಂತರದಲ್ಲಿ ಅದುವರೆಗೂ ಭೂಮಿಯನ್ನು ಆಳಿದವನೂ, ತೃಪ್ತಿಯಾಗುವಂತೆ ಭೋಗಗಳನ್ನು ಭುಂಜಿಸಿದವನೂ ಆದ ನರಿಷ್ಯಂತರಾಜನು ವಯಸ್ಸಿನ ಪರಿಣಾಮವಾದ ವೃದ್ಧಾಪ್ಯವನ್ನು ಹೊಂದಿ ದಮಕುಮಾರನಿಗೆ ರಾಜ್ಯಪಟ್ಟಾಭಿಷೇಕವನ್ನು ಮಾಡಿದನು.

ವನಂ ಜಗಾಮೇನ್ದ್ರಸೇನಾ ಪತ್ನೀ ಚಾಸ್ಯ ತಪಸ್ವಿನೀ ।
ವಾನಪ್ರಸ್ಥವಿಧಾನೇನ ಸ ತತ್ರ ಸಮತಿಷ್ಠತ ॥೮॥

ದಾಕ್ಷಿಣಾತ್ಯಃ ಸುದುರ್ವೃತ್ತಃ ಸಙ್ಕ್ರನ್ದನಸುತೋ ವನೇ ।
ವಪುಷ್ಮಾನ್ ಸ ಮೃಗಾನ್ಘ್ನಂಸ್ತಂ ಯಯಾವಲ್ಪಪದಾನುಗಃ ॥೯॥

ಸ ತಂ ದೃಷ್ಟ್ವಾ ನರಿಷ್ಯನ್ತಂ ತಾಪಸಂ ಮಲಪಙ್ಕಿನಮ್ ।
ಇನ್ದ್ರಸೇನಾಂ ಚ ತತ್ಪತ್ನೀಂ ತಪಸಾತಿ ಸುದುರ್ಬಲಾಮ್ ॥೧೦॥

ಪಪ್ರಚ್ಛ ಕಸ್ತ್ವಂ ಭೋ ವಿಪ್ರಃ ಕ್ಷತ್ರಿಯೋ ವಾ ವನೇಚರಃ ।
ವಾನಪ್ರಸ್ಥಮುಪಪ್ರಾಪ್ತೋ ವೈಶ್ಯೋ ವಾ ಮಮ ಕಥ್ಯತಾಮ್ ॥೧೧॥

೮. ಹೀಗೆ ತನ್ನ ಕರ್ತವ್ಯವನ್ನು ಪೂರೈಸಿದ ನರಿಷ್ಯಂತರಾಜನು ವನಕ್ಕೆ ಹೋದನು. ಅವನ ಪತ್ನಿಯಾದ ಇಂದ್ರಸೇನೆಯೂ ತಪಸ್ಸುಮಾಡುವವಳಾಗಿ ಪತಿಯ ಜೊತೆಯಲ್ಲಿ ಹೋದಳು. ನರಿಷ್ಯಂತನು ವನದಲ್ಲಿ ವಾನಪ್ರಸ್ಥ ಧರ್ಮಾವಲಂಬಿಯಾಗಿ ಇದ್ದನು.

೯. ಹೀಗಿರಲು ದಕ್ಷಿಣದೇಶದವನೂ, ದುರಾಚಾರನೂ ಮತ್ತು ಸಂಕ್ರಂದನ ಎಂಬುವನ ಪುತ್ರನೂ ಆದ ವಪುಷ್ಮಾನ್ ಎಂಬುವನು ಸ್ವಲ್ಪಮಾತ್ರ ಪರಿವಾರದಿಂದ ಸಮೇತನಾಗಿ ಮೃಗಗಳನ್ನು ಕೊಲ್ಲಲು ಬೇಟೆಯಾಡುತ್ತ ಅಲ್ಲಿಗೆ ಬಂದನು.

೧೦. ಆ ವಪುಷ್ಮಂತನು ಧೂಳಿ ಮುಂತಾದ ಕೊಳೆಯು ಅಂಟಿಕೊಂಡು ಮಲಿನನೂ, ತಪಸ್ವಿಯೂ ಆದ ನರಿಷ್ಯಂತನನ್ನೂ ಹಾಗು ತಪಸ್ಸಿನಿಂದ ಅತ್ಯಂತ ಕೃಶಳೂ, ನರಿಷ್ಯಂತನ ಪತ್ನಿಯೂ ಆದ ಇಂದ್ರಸೇನೆಯನ್ನೂ ಕಂಡನು.

೧೧. ಮತ್ತು ವಪುಷ್ಮಂತನು ಹೀಗೆ ಪ್ರಶ್ನಿಸಿದನು. ಎಲೈ ತಪಸ್ವಿಯೇ! ನೀನು ಯಾರು? ವಿಪ್ರನೇ? ವನಕ್ಕೆ ತೆರಳಿರುವ ಕ್ಷತ್ರಿಯನೇ? ಅಥವಾ ವಾನಪ್ರಸ್ಥಧರ್ಮವನ್ನು ಕೈಗೊಂಡಿರುವ ವೈಶ್ಯನೇ? ನೀನು ಇದನ್ನು ನನಗೆ ಹೇಳು.

ತತೋ ಮೌನವ್ರತೀ ಭೂಪೋ ನ ಹಿ ತಸ್ಯೋತ್ತರಂ ದದೌ ।
ಇನ್ದ್ರಸೇನಾ ಚ ತತ್ಸರ್ವಮಾಚಷ್ಟಾಸ್ಮೈ ಯಥಾತಥಮ್ ॥೧೨॥

ಮಾರ್ಕಣ್ಡೇಯ ಉವಾಚ :—

ಜ್ಞಾತ್ವಾ ತಂ ಚ ನರಿಷ್ಯನ್ತಂ ವಪುಷ್ಮಾನ್ಪಿತರಂ ರಿಪೋಃ ।
ಪ್ರಾಪ್ತೋಽಸೀತಿ ವದನ್ ಕೋಪಾಜ್ಜಟಾಸು ಪರಿಗೃಹ್ಯ ಚ ॥೧೩॥

ಹಾಹೇತಿ ಚೇನ್ದ್ರಸೇನಾಯಾಂ ರುದನ್ತ್ಯಾಂ ಬಾಷ್ಪಗದ್ಗದಮ್ ।
ಚಕರ್ಷ ಕೋಪಾತ್ಖಡ್ಗಂ ಚ ವಾಕ್ಯಂ ಚೇದಮುವಾಚ ಹ ॥೧೪॥

ನಿರ್ಜಿತಃ ಸಮರೇ ಯೇನ ಯೇನ ಮೇ ಸುಮನಾ ಹೃತಾ ।
ದಮಸ್ಯ ತಸ್ಯ ಪಿತರಂ ಹನಿಷ್ಯೇಽವತು ತಂ ದಮಃ ॥೧೫॥

---

೧೨. ತರುವಾಯ ಮೌನವ್ರತವನ್ನು ಧರಿಸಿದ ರಾಜನು ಅದೊಂದಕ್ಕೂ ಉತ್ತರವನ್ನು ಹೇಳಲಿಲ್ಲ. ಆದರೆ ಇಂದ್ರಸೇನೆಯು ಆ ಎಲ್ಲ ಪ್ರಶ್ನೆಗಳಿಗೂ ತಾತ್ತ್ವಿಕವಾಗಿ ಉತ್ತರವನ್ನು ಹೇಳಿದಳು.

ಮಾರ್ಕಂಡೇಯ ಮುನಿಯು ಹೇಳಿದನು :—

೧೩. ಆಗ ವಪುಷ್ಮಂತನು ಆ ತಪಸ್ವಿಯನ್ನು ತನ್ನ ಶತ್ರುವಾದ ದಮರಾಜನ ತಂದೆಯಾದ ನರಿಷ್ಯಂತರಾಜನೆಂದು ಅರಿತು "ಈಗ ಸಿಕ್ಕಿಬಿದ್ದಿದ್ದೀಯೆ" ಎನ್ನುತ್ತ ಕೋಪದಿಂದ ತಪಸ್ವಿಯ ಜಡೆಗಳನ್ನು ಹಿಡಿದುಕೊಂಡನು.

೧೪. ಅಷ್ಟರಲ್ಲಿ ಕಣ್ಣೀರು-ಗದ್ಗದಧ್ವನಿಗಳಿಂದ ಕೂಡಿ ಇಂದ್ರಸೇನೆಯು ಅಯ್ಯೋ! ಅಯ್ಯೋ! ಎನ್ನುತ್ತ ಅಳುತ್ತಿರಲು ಕೋಪದಿಂದ ಆ ವಪುಷ್ಮಂತನು ಒರೆಯಿಂದ ಖಡ್ಗವನ್ನು ಸೆಳೆದು ಈ ಮಾತುಗಳನ್ನು ಆಡಿದನು.

೧೫. ಯಾರಿಂದ ನಾನು ಅಪಜಯವನ್ನು ಹೊಂದಿದೆನೋ : ಯಾರಿಂದ ನನ್ನ ಸುಮನೆಯು ಅಪಹರಿಸಲ್ಪಟ್ಟಳೋ ; ಅಂತಹ ನನ್ನ ಶತ್ರುವಾದ ದಮ-ಕುಮಾರನ ತಂದೆಯನ್ನು ಈಗ ಕೊಲ್ಲುತ್ತೇನೆ. ದಮಕುಮಾರನು ಬಂದು ರಕ್ಷಿಸಲಿ !

ಯೇನಾಖಿಲಮಹೀಪಾಲಪುತ್ರಾಃ ಕನ್ಯಾರ್ಥಮಾಗತಾಃ ।
ಅವಧೂತಾ ಹನಿಷ್ಯೇಽಹಂ ಪಿತರಂ ತಸ್ಯ ದುರ್ಮತೇಃ ||೧೬||

ಯೌವನಾಸ್ತ್ರಸ್ವರೂಪೇಷು ಮದೋ ಯಸ್ಯ ದುರಾತ್ಮನಃ ।
ಸ ದಮೋ ವಾರಯತ್ವೇಷ ಹನ್ಮಿ ತಸ್ಯ ರಿಪೋರ್ಗುರುಮ್ ||೧೭||

ಮಾರ್ಕಣ್ಡೇಯ ಉವಾಚ :—

ಇತ್ಯುಕ್ತ್ವಾ ಸ ದುರಾಚಾರೋ ವಪುಷ್ಮಾನವನೀಪತಿಃ ।
ಕ್ರನ್ದನ್ತ್ಯಾಮಿನ್ದ್ರಸೇನಾಯಾಂ ಶಿರಶ್ಚಿಚ್ಛೇದ ತಸ್ಯ ಚ ||೧೮||

ತತೋ ಧಿಗ್ಧಿಙ್ಮುನಿಜನಾ ಅನ್ಯೇ ಚ ವನವಾಸಿನಃ ।
ತಮೂಚುಃ ಸ ಚ ತಂ ಹತ್ವಾ ಜಗಾಮ ಸ್ವಪುರಂ ವನಾತ್ ||೧೯||

---

೧೬. ಯಾರಿಂದ ಕನ್ಯಾರ್ಥಿಗಳಾಗಿ ಬಂದಿರುವ ಎಲ್ಲ ರಾಜಕುಮಾರರು ಕನ್ಯೆಯನ್ನು ಹೊಂದಿ ವಿಕ್ರಮದಿಂದ ತಿರಸ್ಕರಿಸಲ್ಪಟ್ಟರೋ ಅಂತಹ ಅವಿವೇಕಿಯಾದ ದಮಕುಮಾರನ ಜನಕನನ್ನು ಕೊಲ್ಲುವೆನು.

೧೭. ಯಾವ ನೀಚಾತ್ಮನಲ್ಲಿ ತಾರುಣ್ಯ, ಸುಂದರರೂಪ ಮತ್ತು ಶಸ್ತ್ರಾಸ್ತ್ರಗಳ ವಿಷಯದಲ್ಲಿ ಅಪಾರವಾದ ಮದವು ತುಂಬಿರುವುದೋ ಅಂತಹ ದಮಕುಮಾರನು ಬಂದು ಈಗ ಬಿಡಿಸಲಿ. ನನ್ನ ಆ ಶತ್ರುವಾದ ದಮನ ತಂದೆಯನ್ನು ಕೊಲ್ಲುವೆನು.

ಮಾರ್ಕಂಡೇಯ ಮುನಿಯು ಹೇಳಿದನು :—

೧೮. ಹೀಗೆಂದು ಹೇಳಿ ದುರಾಚಾರವುಳ್ಳ ವಪುಷ್ಮಂತನೆಂಬ ಆ ರಾಜನು ಇತ್ತ ಇಂದ್ರಸೇನೆಯು ಕೂಗಿಕೊಳ್ಳುತ್ತಿದ್ದ ಹಾಗೆ ತಪಸ್ವಿಯಾದ ನರಿಷ್ಯಂತನ ಶಿರವನ್ನು ಛೇದಿಸಿದನು.

೧೯. ತರುವಾಯ ಅಲ್ಲಿದ್ದ ಮುನಿಜನರು ಮತ್ತು ಇತರ ವನವಾಸಿಗಳು ಎಲ್ಲರೂ ವಪುಷ್ಮಂತನನ್ನು ನೋಡಿ ಧಿಕ್ಕಾರ! ಧಿಕ್ಕಾರ! ಎಂದು ಹೇಳಿದರು. ಅವನು ಹಾಗೆ ನರಿಷ್ಯಂತನನ್ನು ಕೊಂದು ಅಲ್ಲಿಂದ ತನ್ನ ನಗರಕ್ಕೆ ಹೋದನು.

ಗತೇ ತಸ್ಮಿನ್ವಿನಿಶ್ವಸ್ಯ ಸೇನ್ದ್ರಸೇನಾ ವಪುಷ್ಮತೀ ।
ಪ್ರೇಷಯಾಮಾಸ ಪುತ್ರಸ್ಯ ಸಮೀಪಂ ಶೂದ್ರತಾಪಸಮ್ ॥೨೦॥

ಗಚ್ಛೇಥಾ ಆಶು ಮೇ ಪುತ್ರಂ ದಮಂ ಬ್ರೂಹಿ ವಚೋ ಮಮ ।
ಅಭಿಜ್ಞೋ ಹ್ಯಸಿ ಮದ್ಭರ್ತುರ್ವೃತ್ತಾನ್ತಂ ಪ್ರೋಚ್ಯತೇಽತ್ರ ಕಿಮ್ ॥೨೧॥

ತಥಾಪಿ ವಾಚ್ಯಃ ಪುತ್ರೋ ಮೇ ಯದ್ಬ್ರವೀಮ್ಯತಿದುಃಖಿತಾ ।
ಲಙ್ಘನಾಮೀದೃಶೀಂ ಪ್ರಾಪ್ತಾಂ ವಿಲೋಕ್ಯೈತಾಂ ಮಹೀಪತೇಃ ॥೨೨॥

ಮದ್ಭರ್ತಾಧಿಕೃತೋ ರಾಜಾ ಚತುರ್ಣಾಂ ಪರಿಪಾಲಕಃ ।
ತ್ವಮಾಶ್ರಮಾಣಾಂ ಕಿಂ ಯುಕ್ತಂ ತಾಪಸಾನ್ ಯನ್ನ ರಕ್ಷಸಿ ॥೨೩॥

---

೨೦. ವಪುಷ್ಮಂತನು ಅಲ್ಲಿಂದ ಹೊರಟುಹೋದ ಮೇಲೆ ಸುಂದರಾಂಗಿಯಾದ ಇಂದ್ರಸೇನೆಯು ಈ ವೃತ್ತಾಂತವನ್ನು ಮಗನಿಗೆ ಹೇಳಲು ಮಗನ ಸಮೀಪಕ್ಕೆ ಒಬ್ಬ ಶೂದ್ರಜಾತಿಯ ತಪಸ್ವಿಮುನಿಯನ್ನು ಕಳುಹಿಸಿಕೊಟ್ಟಳು.

೨೧. ಇಂದ್ರಸೇನೆಯು ಶೂದ್ರತಪಸ್ವಿಯನ್ನು ಕುರಿತು ಹೀಗೆ ಹೇಳಿದಳು. ನೀನು ಈಗ ಬೇಗ ನನ್ನ ಪುತ್ರನಾದ ದಮಕುಮಾರನ ಬಳಿಗೆ ಹೋಗು. ನನ್ನ ಸಂದೇಶವಚನವನ್ನು ಅವನಿಗೆ ಹೇಳು. ನನ್ನ ಪತಿಗೆ ಉಂಟಾದ ದುರವಸ್ಥೆಯನ್ನು ನೀನು ತಿಳಿದವನಾಗಿದ್ದೀಯೆ. ಇನ್ನೇನು ಹೇಳತಕ್ಕದ್ದಿದೆ ?

೨೨. ಆದರೂ ಭೂಪತಿಯಾದ ನನ್ನ ಪತಿದೇವನಿಗೆ ದುರವಸ್ಥೆಯನ್ನು ಉಂಟುಮಾಡಿದ ಶತ್ರುವಿನ ಜುಗುಪ್ಸಾಕರವಾದ ಹಿಂಸಾವರ್ತನೆಯನ್ನು ನೋಡಿ ಅತಿ ದುಃಖಕ್ಕೆ ಈಡಾದ ನಾನು ನುಡಿಯುವ ಮಾತನ್ನು ನೀನು ನನ್ನ ಪುತ್ರನೆದುರಿನಲ್ಲಿ ಹೇಳಬೇಕು.

೨೩. ನನ್ನ ಪತಿದೇವನಿಂದ ನೀನು ನಾಲ್ಕು ಆಶ್ರಮಿಗಳನ್ನು ಪಾಲಿಸಬೇಕೆಂದು ರಕ್ಷಣಾಧಿಕಾರದಲ್ಲಿ ನಿಯೋಜಿಸಲ್ಪಟ್ಟಿದ್ದೀಯೆ. ಹೀಗಿರಲು ನೀನು ತಪಸ್ವಿಜನರನ್ನು ರಕ್ಷಿಸದೇ ಇದ್ದೀಯೆ, ನಿನಗಿದು ಯುಕ್ತವೇ ?

ಭರ್ತಾ ಮಮ ನರಿಷ್ಯನ್ತಸ್ತಾಪಸಸ್ತಪಸಿ ಸ್ಥಿತಃ ।
ವಿಲಪನ್ತ್ಯಾಸ್ತಥಾನಾಥೋ ಯಥಾ ನಾಸಿ ತಥಾ ತ್ವಯಿ ॥೨೪॥

ಆಕೃಷ್ಯ ಕೇಶೇಷು ಬಲಾದಪರಾಧಂ ವಿನಾ ತತಃ ।
ಹತೋ ವಪುಷ್ಮತಾ ಖ್ಯಾತಿಮಿತಿ ತೇ ಭೂಪತಿರ್ಗತಃ ॥೨೫॥

ಏವಂ ಸ್ಥಿತೇ ತತ್ಕ್ರಿಯತಾಂ ಯಥಾ ಧರ್ಮೋ ನ ಲುಪ್ಯತೇ ।
ತಥಾ ಚ ನೈವ ವಕ್ತವ್ಯಂ ಮಾತಾಹಂ ತಾಪಸೀ ಯತಃ ॥೨೬॥

ಪಿತಾ ವೃದ್ಧಸ್ತಪಸ್ವೀ ಚ ನಾಪರಾಧೇನ ದೂಷಿತಃ ।
ನಿಹತೋ ಯೇನ ಯತ್ತಸ್ಯ ಕರ್ತವ್ಯಂ ತದ್ವಿಚಿನ್ತ್ಯತಾಮ್ ॥೨೭॥

---

೨೪. ತಪಸ್ವಿವೃತ್ತಿಯನ್ನು ಕೈಗೊಂಡಿರುವ ನನ್ನ ಪತಿದೇವನಾದ ನರಿಷ್ಯಂತನು ತಪಶ್ಚರ್ಯೆಯಲ್ಲಿ ನಿರತನಾಗಿರುವಾಗಲೇ ನಾನು ವಿಲಾಪ-ಮಾಡುತ್ತಿರುವ ಹಾಗೆ ರಾಜ್ಯಪಾಲಕನಾಗಿ ನೀನು ಇದ್ದೂ ಇಲ್ಲದ ಹಾಗೆ ಅನಾಥನಾಗಿ ಹೋದನು.

೨೫. ಹೀಗೆ ಅನಾಥನಾದ ನರಿಷ್ಯಂತನು ಏನೊಂದು ಅಪರಾಧವೂ ಇಲ್ಲದೆ ವಪುಷ್ಮಂತನೆಂಬುವನಿಂದ ಬಲಾತ್ಕಾರವಾಗಿ ಜಡೆಯನ್ನು ಹಿಡಿದೆಳೆದು ಕೊಲ್ಲಲ್ಪಟ್ಟನು. ನರಿಷ್ಯಂತನ ಈ ವಿಧದ ಮರಣದಿಂದ ನಿನಗೆ ತಂದೆಯನ್ನು ಅನಾಥನನ್ನಾಗಿ ಮಾಡಿದ ಅಪಕೀರ್ತಿಯುಂಟಾಯಿತಲ್ಲವೇ !

೨೬. ಈ ಪ್ರಸಂಗದಲ್ಲಿ ಹೇಗೆ ನಡೆದರೆ ನಿನಗೆ ಧರ್ಮಲೋಪವುಂಟಾಗ-ಲಾರದೋ ಆ ವಿಧಾನವು ಮಾಡಲ್ಪಡಲಿ. ಅದನ್ನೆಲ್ಲ ನಾನು ಹೇಳುವುದು ಸರಿಯಲ್ಲ. ನಾನು ನಿನ್ನ ಜನನಿ ಹಾಗು ತಾಪಸಿಯಾಗಿರುವೆನು.

೨೭. ವೃದ್ಧನೂ, ತಪಶ್ಚರ್ಯೆಯಲ್ಲಿ ನಿರತನೂ ಮತ್ತು ಯಾವ ಅಪರಾಧ ಕಲಂಕವಿಲ್ಲದವನೂ ಆದ ನಿನ್ನ ಪಿತನು ಯಾರಿಂದ ವಧಿಸಲ್ಪಟ್ಟನೋ ಅಂತಹ ಕೊಲೆಪಾತಕಿಗೆ ಯಾವ ಪ್ರತೀಕಾರವಾಗಬೇಕೋ ಅದನ್ನು ನೀನು ಯೋಚಿಸು.

ಸನ್ತಿ ತೇ ಮನ್ತ್ರಿಣೋ ವೀರಾಃ ಸರ್ವಶಾಸ್ತ್ರಾರ್ಥವೇದಿನಃ ।
ತೈಃ ಸಹಾಲೋಚ್ಯ ಯತ್ಕಾರ್ಯಮೇವಂಭೂತೇ ಕುರುಷ್ವ ತತ್ ॥೨೮॥

ನಾಸ್ಮಾಕಮಧಿಕಾರೋಽತ್ರ ತಾಪಸಾನಾಂ ನರಾಧಿಪ ।
ಕುರುಷ್ವೈತದಿತೀತ್ಥಂ ತ್ವಮೇವಂ ಭೂಪತಿಭಾಷಿತಮ್ ॥೨೯॥

ವಿದೂರಥಸ್ಯ ಜನಕೋ ಯವನೇನ ಯಥಾ ಹತಃ ।
ತಥಾಯಂ ತವ ಪುತ್ರಸ್ಯ ಕುಲಂ ತೇನ ವಿನಾಶಿತಮ್ ॥೩೦॥

ಜಮ್ಭಸ್ಯಾಸುರರಾಜಸ್ಯ ಪಿತಾ ದಷ್ಟೋ ಭುಜಙ್ಗಮೈಃ ।
ತೇನಾಪ್ಯಖಿಲಪಾತಾಲವಾಸಿನಃ ಪನ್ನಗಾ ಹತಾಃ ॥೩೧॥

---

೨೮. ಇಂತಹ ವಿಷಮಪ್ರಸಂಗದಲ್ಲಿ ಯಾವ ವಿಧಾನವು ಅವಶ್ಯ ಕರ್ತವ್ಯವೋ ಅದನ್ನು ಮಂತ್ರಿಗಳ ಸಂಗಡ ಆಲೋಚಿಸಿ ಉಪಕ್ರಮಿಸು. ನಿನಗೆ ಸಕಲ ಶಾಸ್ತ್ರಾರ್ಥವೇತ್ತರೂ, ವೀರರೂ ಆದ ಮಂತ್ರಿಗಳು ಇರುವರು.

೨೯. ರಾಜನಾದ ದಮಕುಮಾರನೇ ! ನೀನು ಈ ಸಮಯದಲ್ಲಿ ಇದನ್ನು ಹೀಗೆ ಮಾಡು ಎಂದು ಪ್ರಚೋದಿಸುವುದಕ್ಕೆ ತಪಸ್ವಿಗಳಾದ ನಮಗೆ ಈ ವಿಷಯದಲ್ಲಿ ಅಧಿಕಾರವಿಲ್ಲವೆಂದು ನರಿಷ್ಯಂತನು ಹಿಂದೆ ಅನೇಕಸಲ ಹೇಳಿರುವನು.

೩೦. ಒಬ್ಬ ದುಷ್ಟ ಯವನನಿಂದ ವಿದೂರಥನೆಂಬ ರಾಜನ ಜನಕನು ಕೊಲೆಮಾಡಲ್ಪಟ್ಟಂತೆ ಪುತ್ರನಾದ ನೀನು ರಾಜ್ಯವೈಭವದಲ್ಲಿದ್ದರೂ ತಂದೆಯು ವಪುಷ್ಮಂತನಿಂದ ವಧಿಸಲ್ಪಟ್ಟಿರುವನು. ಆಗ ವಿದೂರಥನು ಅಂತಹ ನೀಚ ಯವನನ ಕುಲವನ್ನು ನಾಶಮಾಡಿದನು.

೩೧. ಅಸುರರಿಗೆ ರಾಜನಾದ ಜಂಭಾಸುರನ ತಂದೆಯು ಸರ್ಪಗಳಿಂದ ಕಡಿಯಲ್ಪಟ್ಟು ಮರಣಹೊಂದಿದನು. ಆಗ ಜಂಭಾಸುರನಿಂದ ಪಾತಾಲ ಲೋಕದಲ್ಲಿ ವಾಸಮಾಡುವ ಎಲ್ಲ ಸರ್ಪಗಳೂ ವಧಿಸಲ್ಪಟ್ಟವು.

ಪರಾಶರೇಣ ಪಿತರಂ ಶಕ್ತಿಂ ತಂ ರಕ್ಷಸಾ ಹತಮ್ ।
ಶ್ರುತ್ವಾಗ್ನೌ ಪಾತಿತಂ ಕೃತ್ಸ್ನಂ ರಕ್ಷಸಾಮುಭವತ್ಕುಲಮ್ ||೩೨||

ಅನ್ಯಸ್ಯಾಪಿ ಸ್ವವಂಶಸ್ಯ ಲಜ್ಘನಾ ಕ್ರಿಯತೇ ಹಿ ಯಾ ।
ತಾಂ ನಾಲಂ ಕ್ಷತ್ರಿಯಃ ಸೋಢುಂ ಕಿಂ ಪುನಃ ಪಿತೃಮಾರಣಮ್ ||೩೩||

ನಾಯಂ ಪಿತಾ ತೇ ನಿಹತೋ ನಾಸ್ಮಿಞ್ಛಸ್ತ್ರಂ ನಿಪಾತಿತಮ್ ।
ತ್ವಾಮತ್ರ ನಿಹತಂ ಮನ್ಯೇ ತ್ವಯಿ ಶಸ್ತ್ರಂ ನಿಪಾತಿತಮ್ ||೩೪||

ಬಿಭೇತ್ಯಸ್ಯ ಹಿ ಕಃ ಶಸ್ತ್ರಂ ನ್ಯಸ್ತಂ ಯೇನ ವನೌಕಸಾಮ್ ।
ತವ ಭೂಪಸ್ಯ ಪುತ್ರಸ್ಯ ಮಾ ಬಿಭೇತು ಬಿಭೇತು ವಾ ||೩೫||

---

೩೨. ಹಾಗು ಪರಾಶರಮುನಿಯ ತಂದೆಯಾದ ಶಕ್ತಿಮುನಿಯು ರಾಕ್ಷಸನಿಂದ ಸಂಹರಿಸಲ್ಪಟ್ಟನು. ಇದನ್ನು ಕೇಳಿ ಪರಾಶರಮುನಿಯಿಂದ ರಾಕ್ಷಸ-ವಂಶವೆಲ್ಲವೂ ಅಗ್ನಿಯಲ್ಲಿ ಹೋಮಮಾಡಲ್ಪಟ್ಟಿತು.

೩೩. ಕ್ಷತ್ರಿಯನು ತನ್ನ ವಂಶದಲ್ಲಿ ಜನಿಸಿದ ಯಾವುದೇ ವ್ಯಕ್ತಿಯ ವಿಷಯದಲ್ಲಾದರೂ ತಿರಸ್ಕಾರಮಾಡುವುದನ್ನು ಸಹಿಸಲಾರನು. ಹೀಗಿರಲು ತಂದೆಯನ್ನೇ ವಧಿಸಿದುದನ್ನು ಸಹಿಸಲಾದೀತೇ?

೩೪. ಈ ಸಂದರ್ಭದಲ್ಲಿ ಶತ್ರುವಿನಿಂದ ನಿನ್ನ ತಂದೆಯು ವಧಿಸಲ್ಪಟ್ಟಂತೆ ಅಲ್ಲ. ಹಾಗು ನಿನ್ನ ತಂದೆಯಲ್ಲಿ ಶಸ್ತ್ರವು ಪ್ರಯೋಗಿಸಲ್ಪಟ್ಟಂತೆಯೂ ಅಲ್ಲ. ಶತ್ರುವಿನಿಂದ ನೀನು ಹತನಾದಂತೆಯೂ ನಿನ್ನಲ್ಲಿ ಶಸ್ತ್ರವು ಪ್ರಯೋಗಿಸಲ್ಪಟ್ಟಂತೆಯೂ ನಾನು ಭಾವಿಸುವೆನು.

೩೫. ಯಾವ ನೀಚನಿಂದ ವನವಾಸಿಗಳಾದ ತಪಸ್ವಿಗಳಲ್ಲಿ ಶಸ್ತ್ರವು ಇಡಲ್ಪಟ್ಟಿತೊ ಅಂತಹವನಿಗೆ ಯಾರು ಹೆದರುವರು? ಆದರೆ ಆ ನೀಚನು ತನ್ನಿಂದ ಹತನಾದ ನರಿಷ್ಯಂತನ ಪುತ್ರನಾದ ನೀನು ರಾಜನೆನಿಸಿಕೊಂಡಿರುವಾಗ ನಿನ್ನಿಂದ ಭಯಪಡಲಿ ಅಥವಾ ನಿರ್ಭಯನಾಗಿರಲಿ.

ತವೇಯಂ ಲಜ್ಜನಾ ಯುಕ್ತಾ ಯದಸ್ಮಿಂಸ್ತತ್ಸಮಾಚರ ।
ವಪುಷ್ಮತಿ ಮಹಾರಾಜ ಸಭೃತ್ಯಜ್ಞಾತಿಬಾನ್ಧವೇ ॥೩೬॥

ಮಾರ್ಕಣ್ಡೇಯ ಉವಾಚ :—

ಇತಿ ಸಞ್ಚಾನ್ತಸನ್ದೇಶಮಿನ್ದ್ರಸೇನಾ ವಿಸೃಜ್ಯ ತಮ್ ।
ಪತಿದೇಹಮುಪಾಶ್ಲಿಷ್ಯ ವಿವೇಶಾಗ್ನಿಂ ಮನಸ್ವಿನೀ ॥೩೭॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ದಮಚರಿತೇ
ಏಕತ್ರಿಂಶದಧಿಕಶತತಮೋಽಧ್ಯಾಯಃ

---

೩೬. ಮಹಾರಾಜನೇ ! ವಪುಷ್ಮಂತನು ನಿನ್ನಲ್ಲಿ ಈ ಬಗೆಯಿಂದ ಅಸಭ್ಯತೆಯಿಂದ ವರ್ತಿಸಿ ಅವಮಾನಮಾಡಿರುವುದು ತಪ್ಪು. ಆದ್ದರಿಂದ ಭೃತ್ಯ, ಜ್ಞಾತಿ, ಬಾಂಧವಜನರಿಂದ ಕೂಡಿದ ವಪುಷ್ಮಂತನ ವಿಷಯದಲ್ಲಿ ಯಾವುದು ಯುಕ್ತವೊ ಅದನ್ನು ಮಾಡು.

ಮಾರ್ಕಂಡೇಯ ಮುನಿಯು ಹೇಳಿದನು :—

೩೭. ಮಾನವತಿಯೂ ಸ್ಥಿರಚಿತ್ತಳೂ ಆದ ಇಂದ್ರಸೇನೆಯು ಸಂದೇಶವನ್ನು ಹೇಳಿ ಆ ಶೂದ್ರಮುನಿಯನ್ನು ಕಳುಹಿಸಿ ಮೃತನಾದ ಪತಿಯ ದೇಹವನ್ನು ಅಪ್ಪಿಕೊಂಡು ತಾನು ಜೊತೆಯಲ್ಲಿ ಅಗ್ನಿಪ್ರವೇಶಮಾಡಿದಳು.

ಮಾರ್ಕಂಡೇಯ ಮಹಾಪುರಾಣದಲ್ಲಿ ನೂರ ಮೂವತ್ತೊಂದನೆಯ
ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ದ್ವಾತ್ರಿಂಶದಧಿಕಶತತಮೋಽಧ್ಯಾಯಃ

(ದಮೇನ ವಪುಷ್ಮತೋ ವಧಪ್ರತಿಜ್ಞಾ)

ಮಾರ್ಕಣ್ಡೇಯ ಉವಾಚ :—

ಇನ್ದ್ರಸೇನಾಸಮಾಜ್ಞಪ್ತಃ ಸ ಗತ್ವಾ ಶೂದ್ರತಾಪಸಃ ।
ಸಮಾಚಷ್ಟ ಯಥಾಪೂರ್ವಂ ದಮಾಯ ನಿಧನಂ ಪಿತುಃ ||೧||

ತಾಪಸೇನ ಸಮಾಖ್ಯಾತೇ ದಮಸ್ತೇನ ಪಿತುರ್ವಧೇ ।
ಕ್ರೋಧೇನಾತೀವ ಜಜ್ವಾಲ ಹವಿಷೇವಾಗ್ನಿರುದ್ಧತಃ ||೨||

ನೂರ ಮೂವತ್ತೆರಡನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಇಂತೆಂದನು :—

೧. ಇಂದ್ರಸೇನೆಯಿಂದ ಹೀಗೆ ಆಜ್ಞಾಪಿಸಲ್ಪಟ್ಟಿರುವ ಆ ಶೂದ್ರ ತಾಪಸನು ರಾಜಧಾನಿಗೆ ಹೋಗಿ ದಮಮಹಾರಾಜನ ಬಳಿಯಲ್ಲಿ ಹಿಂದೆ ನಡೆದಿರುವಂತೆ ದಮನ ಪಿತನಾದ ನರಿಷ್ಯಂತನ ನಿಧನವನ್ನು ನಿವೇದಿಸಿದನು.

೨. ಸಂದೇಶವನ್ನು ಹೇಳಲು ಬಂದ ಶೂದ್ರತಾಪಸನಿಂದ ತಂದೆಯ ವಧ ವೃತ್ತಾಂತವು ನುಡಿಯಲ್ಪಡಲು ತುಪ್ಪ ಮುಂತಾದ ಆಹುತಿಯಿಂದ ಎದ್ದು ಉರಿಯುವ ಅಗ್ನಿಯಂತೆ ದಮಮಹಾರಾಜನು ಕೋಪದಿಂದ ಅತಿಯಾಗಿ ಜ್ವಲಿಸಿದನು.

ಸ ತು ಕ್ರೋಧಾಗ್ನಿನಾ ಧೀರೋ ದಹ್ಯಮಾನೋ ಮಹಾಮುನೇ ।
ಕರಂ ಕರೇಣ ನಿಷ್ಪಿಷ್ಯ ವಾಕ್ಯಮೇತದುವಾಚ ಹ ॥೩॥

ಅನಾಥ ಇವ ಮೇ ತಾತೋ ಮಯಿ ಪುತ್ರೇ ತು ಜೀವತಿ ।
ಘಾತಿತಃ ಸ ನೃಶಂಸೇನ ಪರಿಭೂಯ ಕುಲಂ ಮಮ ॥೪॥

ತಾಪಂ ಕರೋಮ್ಯಹಂ ಕಿಂ ವಾಪ್ಯೇಷ ಕ್ಲೈಬ್ಯಾತ್ಕ್ಷಮಾಮ್ಯಹಮ್ ।
ದುರ್ವೃತ್ತಶಾಸ್ತ್ರೌ ಶಿಷ್ಟಾನಾಂ ಪಾಲನೇಽಧಿಕೃತಾ ವಯಮ್ ॥೫॥

ಪಿತರಂ ಚಾಪಿ ನಿಹತಂ ದೃಷ್ಟ್ವಾ ಜೀವನ್ತಿ ಶತ್ರವಃ ।
ತತ್ಕಿಮೇತೇನ ಬಹುನಾ ಹಾ ತಾತೇತಿ ಚ ಕಿಂ ಪುನಃ ॥೬॥

---

೩. ಕ್ರೌಷ್ಟುಕಿಮಹಾಮುನಿಯೇ! ಧೀರನಾದ ಆ ದಮಮಹಾರಾಜನು ಕ್ರೋಧಾಗ್ನಿಯಿಂದ ಜ್ವಲಿಸುವವನಂತಾಗಿ ಕೈಯಿಂದ ಕೈಯನ್ನು ಹಿಸುಕಿಕೊಂಡು ಈ ಮಾತನ್ನು ಆಡಿದನು.

೪. ಪುತ್ರನಾದ ನಾನು ಜೀವಂತನಾಗಿರುವ ಹೊತ್ತಿನಲ್ಲಿ ಘಾತುಕನಾದ ಶತ್ರುವಿನಿಂದ ನನ್ನ ಕುಲವನ್ನು ಮಲಿನಗೊಳಿಸಿ ನನ್ನ ತಂದೆಯು ಅನಾಥನಂತೆ ಕೊಲೆಮಾಡಲ್ಪಟ್ಟಿರುವನು.

೫. ಈಗ ನಾನು ತಂದೆಯ ನಿಧನದಿಂದ ಸಂಕಟಪಡಲೇ? ತಂದೆಯನ್ನು ವಧಿಸಿದ ಶತ್ರುವನ್ನು ನಪುಂಸಕಭಾವದಿಂದ ಕ್ಷಮಿಸಲೇ! ನಾವಾದರೊ ದುಷ್ಟರ ಮರ್ದನದಲ್ಲಿಯೂ ಶಿಷ್ಟರ ಪಾಲನದಲ್ಲಿಯೂ ಅಧಿಕಾರಹೊಂದಿರುವ-ರಲ್ಲವೇ!

೬. ನನ್ನ ತಂದೆಯು ವಧಿಸಲ್ಪಟ್ಟಿರುವುದನ್ನು ನಾನು ಕಂಡಾಗಲೂ ನನ್ನ ಶತ್ರುಗಳು ಬದುಕಿರುವರಲ್ಲವೇ! ಈಗ ಈ ಹೆಚ್ಚು ಮಾತುಗಳಿಂದಾಗುವುದೇನು? ಅಯ್ಯೋ ತಂದೆಯೆ! ಮತ್ತೇನುಮಾಡಲಿ?

ವಿಲಾಪೇನಾತ್ರ ಯತ್ಕೃತ್ಯಂ ತದೇಷೋಽತ್ರ ಕರೋಮ್ಯಹಮ್ ||೭||

ಯದ್ಯಹಂ ತಸ್ಯ ರಕ್ತೇನ ದೇಹೋತ್ಥೇನ ವಪುಷ್ಮತಃ ।
ನ ಕರೋಮಿ ಗುರೋಸ್ತೃಪ್ತಿಂ ತತ್ಪ್ರವೇಕ್ಷ್ಯೇ ಹುತಾಶನಮ್ ||೮||

ತಚ್ಛೋಣಿತೇನೋದಕಕರ್ಮ ತಸ್ಯ
ಮಾಂಸೇನ ಸಮ್ಯಗ್ದ್ವಿಜಭೋಜನಂ ಚ ।
ಕುರ್ಯಾಂ ಪಿತುಸ್ತಸ್ಯ ಚ ಪಿಣ್ಡದಾನಂ
ನ ಚೇತ್ಪ್ರವೇಕ್ಷ್ಯಾಮಿ ಹುತಾಶನಂ ತತ್ ||೯||

ಸಾಹಾಯ್ಯಮಸ್ಯಾಸುರದೇವಯಕ್ಷ-
ಗನ್ಧರ್ವವಿದ್ಯಾಧರಸಿದ್ಧಸಙ್ಘಾಃ ।
ಕುರ್ವನ್ತಿ ಚೇತ್ತಾನಪಿ ಶಾಸ್ತ್ರಪೂಗೈ-
ರ್ಭಸ್ಮೀಕರೋಮ್ಯೇಷ ರುಷಾ ಸಮೇತಃ ||೧೦||

---

೭. ಈಗ ವಿಲಪಿಸುತ್ತ ಕಾಲಕಳೆಯುವುದು ಉಚಿತವಲ್ಲ. ವಿಲಾಪ-ಮಾತ್ರದಿಂದ ಆಗುವುದೇನೂ ಇಲ್ಲ. ಆದುದರಿಂದ ನಾನೀಗ ಹೀಗೆ ಮಾಡುವೆನು.

೮. ದುಷ್ಟನಾದ ವಪುಷ್ಮಂತನನ್ನು ಕೊಂದು ಅವನ ದೇಹದಿಂದ ಹರಿದ ರಕ್ತಧಾರೆಯಿಂದ ನನ್ನ ತಂದೆಗೆ ತರ್ಪಣವನ್ನು ಕೊಡಲಾರದೇಹೋದರೆ ಆಗ ನಾನು ಅಗ್ನಿಯನ್ನು ಪ್ರವೇಶಿಸುವೆನು.

೯. ಹಾಗು ನೀಚಶತ್ರುವಿನ ದೇಹದಿಂದ ಹರಿದ ರಕ್ತದಿಂದ ತರ್ಪ-ಣಾಂಜಲಿಯನ್ನೂ ಅವನ ಮಾಂಸದಿಂದ ತೃಪ್ತಿಯಾಗುವ ಹಾಗೆ ಬ್ರಾಹ್ಮಣ ಭೋಜನವನ್ನೂ ಮತ್ತು ಮರಣಹೊಂದಿದ ನನ್ನ ತಂದೆಗೆ ಪಿಂಡದಾನವನ್ನೂ ಮಾಡಲಾರದಿದ್ದರೆ ನಾನು ಆಗ ಅಗ್ನಿಪ್ರವೇಶವನ್ನು ಮಾಡುವೆನು.

೧೦. ನೀಚನಾದ ವಪುಷ್ಮಂತನಿಗೆ ಒಂದು ಸಮಯ ಅಸುರ, ದೇವ, ಯಕ್ಷ, ಗಂಧರ್ವ, ವಿದ್ಯಾಧರ ಮತ್ತು ಸಿದ್ಧ ಮುಂತಾದವರ ಗುಂಪು ಬಂದು ಸಹಾಯಮಾಡಿದರೆ ಕೋಪಶಾಲಿರುವ ನಾನು ನನ್ನ ಅಸ್ತ್ರರಾಶಿಯ ಪ್ರಯೋಗ-ದಿಂದ ಮೊದಲು ಅವರನ್ನೂ ಭಸ್ಮಮಾಡುವೆನು.

ನೀಚಶೂರವಮಾಧರ್ಮಿಕಮಪ್ರಶಸ್ತಂ
ತಂ ದಾಕ್ಷಿಣಾತ್ಯಂ ಸಮರೇ ನಿಹತ್ಯ ।
ಭೋಕ್ಷ್ಯೇ ತತೋಽಹಂ ಪೃಥಿವೀಂ ಚ ಕೃತ್ಸ್ನಾಂ
ವಹ್ನಿಂ ಪ್ರವೇಕ್ಷ್ಯಾಮ್ಯನಿಹತ್ಯ ತಂ ವಾ ॥೧೧॥

ಸುದುರ್ಮತಿಂ ತಾಪಸವೃದ್ಧಘಾತಿನಂ
ವನಸ್ಥಗಂ ಸಾಧುಪಥಿಂ ವಿದಗ್ಧಗಮ್ ।
ಹನ್ತಾಹಮದ್ಯಾಖಿಲಬನ್ಧುಮಿತ್ರ-
ಪದಾತಿಹಸ್ತ್ಯಶ್ವಬಲೈಃ ಸಮೇತಮ್ ॥೧೨॥

ಏಷೋಽಹಮಾದಾಯ ಧನುಃ ಸಖಡ್ಗೋ
ರಥೀ ತಥೈವಾರಿಬಲಂ ಸಮೇತ್ಯ ।
ಕರೋಮಿ ಯೈ ಯತ್ಕದನಂ ಸಮಸ್ತಾಃ
ಪಶ್ಯನ್ತು ಮೇ ದೇವಗಣಾಃ ಸಮೇತಾಃ ॥೧೩॥

---

೧೧. ಶೂರನಲ್ಲದವನೂ, ಅಧಾರ್ಮಿಕನೂ, ನೀಚನೂ ಮತ್ತು ದಕ್ಷಿಣದೇಶದ ರಾಜನೂ ಆದ ಆ ಅಧಮಶತ್ರುವನ್ನು ಕೊಂದು ತರುವಾಯ ನಾನು ನಿಷ್ಕಂಟಕವಾದ ಸಮಗ್ರ ಭೂಮಂಡಲವನ್ನು ಆಳುತ್ತ ರಾಜ್ಯಭೋಗ-ವನ್ನು ಭುಂಜಿಸುವೆನು. ಅವನನ್ನು ಕೊಲ್ಲಲಾರದೆ ಅಗ್ನಿಯನ್ನಾದರೂ ಪ್ರವೇಶಿ-ಸುವೆನು.

೧೨. ಅವಿವೇಕಿಗಳಲ್ಲಿ ಗಣ್ಯನೂ, ತಪಸ್ವಿಯಾದ ವೃದ್ಧನನ್ನು ಕೊಂದ-ವನೂ, ವನವಾಸಿಯ ಮೇಲೆ ಎರಗಿದವನೂ, ನೀಚವರ್ತನೆಯುಳ್ಳವನೂ ಮತ್ತು ತನ್ನ ನೀಚಕರ್ಮದಿಂದ ಹತನಾದವನೂ ಆದ ಶತ್ರುವನ್ನು ಸಮಸ್ತ ಬಂಧು, ಮಿತ್ರ, ಪದಾತಿ, ಗಜ, ತುರಗ, ರಥಸೈನ್ಯ ಮುಂತಾದ ಪರಿವಾರಸಮೇತವಾಗಿ ಇಂದು ನಾನು ವಧಿಸುವವನಾಗಿದ್ದೇನೆ.

೧೩. ಬಿಲ್ಲನ್ನು ತೆಗೆದುಕೊಂಡು, ಖಡ್ಗಸಮೇತನೂ, ರಥಾರೂಢನೂ ಆದ ಈ ನಾನು ಶತ್ರುಸೈನ್ಯವನ್ನು ನುಗ್ಗಿ ಯಾವ ಬಿರುಸಾದ ಕದನವನ್ನು ನಡೆ-ಸುವೆನೊ ಆ ನನ್ನ ಕದನವನ್ನು ಸಕಲದೇವತೆಗಳ ಸಂಘಗಳು ನೋಡಲಿ.

ಯೋ ಯಃ ಸಹಾಯೋ ಭವಿತಾದ್ಯ ತಸ್ಯ
ಮಯಾ ಸಮೇತಸ್ಯ ರಣಾಯ ಭೂಯಃ ।
ತಸ್ಯೈವ ನಿಶ್ಶೇಷಕುಲಕ್ಷಯಾಯ
ಸಮುದ್ಯತೋಽಹಂ ನಿಜಬಾಹುಸೈನ್ಯೈಃ ॥೧೪॥

ಯದಿ ಕುಲಿಶಕರೋಽಸ್ಮಿನ್ ಸಂಯುಗೇ ದೇವರಾಜಃ
ಪಿತೃಪತಿರಥ ಚೋಗ್ರಂ ದಣ್ಡಮುದ್ಯಮ್ಯ ಕೋಪಾತ್ ।
ಧನಪತಿವರುಣಾರ್ಕಾ ರಕ್ಷಿತುಂ ತಂ ಯತನ್ತೇ
ನಿಶಿತಶರವರೌಘೈರ್ಘಾತಯಿಷ್ಯೇ ತಥಾಪಿ ॥೧೫॥

ನಿಯತಮತಿರದೋಷಃ ಕಾನನಾಖಣ್ಡಲೋಕಾ
ನಿಪತಿತಫಲಭಕ್ಷಃ ಸರ್ವಭೂತೇಷು ಮೈತ್ರಃ ।

---

೧೪. ಇಂದು ಯುದ್ಧಮಾಡಲು ನನ್ನೊಡನೆ ಸೇರಿದ್ದ ದುಷ್ಟಶತ್ರುವಿಗೆ ಮತ್ತೆ ಮತ್ತೆ ಯಾರಾರು ಸಹಾಯಕರಾಗಿ ಬರುವರೊ ಅವರ ವಿಷಯದಲ್ಲಿ ಮೊದಲು ನಿಶ್ಶೇಷವಾಗಿ ಕುಲವನ್ನು ಧ್ವಂಸಮಾಡಲು ನಾನು ನನ್ನ ಬಾಹುಬಲ ಸೈನ್ಯಗಳಿಂದ ಸಮೇತನಾಗಿ ಸಿದ್ಧನಾಗಿರುವೆನು.

೧೫. ಒಂದು ಸಮಯದಲ್ಲಿ ಈ ಘೋರಕದನದಲ್ಲಿ ವಜ್ರಾಯುಧವನ್ನು ಕೈಯಲ್ಲಿ ಧರಿಸಿದ ದೇವರಾಜ, ಕೋಪದಿಂದ ನಿಜದಂಡವನ್ನು ಎತ್ತಿ ಬಂದ ಯಮಧರ್ಮರಾಜ, ಅಥವಾ ಕುಬೇರ, ವರುಣ, ಸೂರ್ಯ ಇವರು ಆ ಶತ್ರು-ವನ್ನು ರಕ್ಷಿಸಲು ಪ್ರಯತ್ನಿಸಿದರೆ ಆಗಲೂ ನನ್ನ ಹರಿತವಾದ ಉತ್ತಮಾಸ್ತ್ರಗಳ ರಾಶಿಯಿಂದ ಅವನನ್ನು ಕೊಂದೇಬಿಡುವೆನು.

೧೬. ನಿಗ್ರಹಿಸಿದ ಮನಸ್ಸುಳ್ಳವನೂ, ನಿರಪರಾಧಿಯೂ, ವನಪ್ರದೇಶ-ದಲ್ಲಿ ವಾಸಿಸುವವನೂ, ಕೆಳಗೆ ಬಿದ್ದ ಫಲಗಳನ್ನು ಭುಂಜಿಸುವವನೂ ಮತ್ತು ಸಮಸ್ತಭೂತಗಳಲ್ಲಿ ಮೈತ್ರಿಯುಳ್ಳವನೂ ಆದ ವಾನಪ್ರಸ್ಥಧರ್ಮಿ ನನ್ನ

ಪ್ರಭವತಿ ಮಯಿ ಪುತ್ರೇ ಹಿಂಸಿತೋ ಯೇನ ತಾತಃ
ಪಿಶಿತರುಧಿರತೃಪ್ತಾಸ್ತಸ್ಯ ಸನ್ತ್ವದ್ಯ ಗೃಧ್ರಾಃ ॥೧೬॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ದಮಚರಿತೇ
ದ್ವಾತ್ರಿಂಶದಧಿಕಶತತಮೋಽಧ್ಯಾಯಃ

ತಂದೆಯು ಯಾರಿಂದ ವಧಿಸಲ್ಪಟ್ಟನೋ ಆ ನೀಚನ ರಕ್ತ-ಮಾಂಸಗಳಿಂದ ಇಂದು ಹದ್ದು-ಗಿಡಗಗಳು ತೃಪ್ತಿಹೊಂದಲಿ.

ಮಾರ್ಕಂಡೇಯ ಮಹಾಪುರಾಣದಲ್ಲಿ ನೂರಮೂವತ್ತೆರಡನೆಯ ಅಧ್ಯಾಯವು ಮುಗಿದುದು.

॥ ಓಂ ಶ್ರೀ ದುರ್ಗಾಯೈ ನಮಃ ॥

ಮಾರ್ಕಂಡೇಯ ಪುರಾಣಂ

ತ್ರಯಸ್ತ್ರಿಂಶದಧಿಕಶತತಮೋಽಧ್ಯಾಯಃ

(ದಮುವಪುಷ್ಮತೋರ್ಯುದ್ಧಮ್)

ಮಾರ್ಕಣ್ಡೇಯ ಉವಾಚ :—

ಇತಿ ಪ್ರತಿಜ್ಞಾಯ ತದಾ ನರಿಷ್ಯನ್ತಸುತೋ ದಮಃ ।
ಕೋಪಾಮರ್ಷವಿವೃತ್ತಾಕ್ಷಃ ಶ್ಮಶ್ರುಮಾವೃತ್ಯ ಪಾಣಿನಾ ॥೧॥

ಹಾ ಹತೋಽಸ್ಮೀತಿ ಪಿತರಂ ಧ್ಯಾತ್ವಾ ದೈವಂ ವಿನಿನ್ದ್ಯ ಚ ।
ಪ್ರೋವಾಚ ಮನ್ತ್ರಿಣಃ ಸರ್ವಾನಾನಿನಾಯ ಪುರೋಹಿತಮ್ ॥೨॥

ನೂರ ಮೂವತ್ತಮೂರನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಹೇಳಿದನು :—

೧. ಶತ್ರುವಿನಲ್ಲಿ ಕೋಪ-ಅಸಹನೆಗಳಿಂದ ಸುತ್ತಿಸುತ್ತಿವ್ವ ಕಣ್ಣುಗಳಿಂದ ಕೂಡಿದ ನರಿಷ್ಯಂತನ ಪುತ್ರನಾದ ದಮರಾಜನು ಕೈಯಿಂದ ಮೀಸೆಯನ್ನು ಸವರಿಕೊಳ್ಳುತ್ತ ಹೀಗೆ ಪ್ರತಿಜ್ಞೆಯನ್ನು ಮಾಡಿದನು.

೨. ನಡುವೆ ತಂದೆಯನ್ನು ಧ್ಯಾನಿಸಿಕೊಂಡು, "ಅಯ್ಯೋ! ನಾನು ಹಾಳಾಗಿಹೋದೆನು" ಎಂದು ಕೊಳ್ಳುತ್ತ ದೈವವನ್ನು ನಿಂದಿಸಿ ಸಕಲ ಮಂತ್ರಿಗಳನ್ನೂ ಪುರೋಹಿತನನ್ನೂ ಸೇರಿಸಿಕೊಂಡು ಅವರ ಎದುರಿನಲ್ಲಿ ಹೀಗೆ ಹೇಳಿದನು.

ದಮ ಉವಾಚ :—

ಯದತ್ರ ಕೃತ್ಯಂ ತದ್ಬ್ರೂತ ತಾತೇ ಪ್ರಾಪ್ತೇ ಸುರಾಲಯಮ್ ।
ಶ್ರುತಂ ಭವದ್ಭಿರ್ಯತ್ಪ್ರೋಕ್ತಂ ತೇನ ಶೂದ್ರತಪಸ್ವಿನಾ ॥೩॥

ವೃದ್ಧಸ್ತಪಸ್ವೀ ಸ ನೃಪೋ ವಾನಪ್ರಸ್ಥವ್ರತೇ ಸ್ಥಿತಃ ।
ಮೌನವ್ರತಧರೋಽಶಸ್ತ್ರೋ ಮನ್ಮಾತ್ರಾ ಚೇನ್ದ್ರಸೇನಯಾ ॥೪॥

ಪ್ರೋಕ್ತಂ ಸಂಸ್ಪೃಷ್ಟಯಾ ಸ್ವಾತ್ಮ್ಯಾದ್ಯಾಥಾತಥ್ಯಂ ವಪುಷ್ಮತೇ ।
ತೇನಾಪಿ ಖಡ್ಗಮಾಕೃಷ್ಯ ಜಟಾಂ ಸವ್ಯೇನ ಪಾಣಿನಾ ॥೫॥

ಧೃತ್ವಾ ಜಘಾನ ದುಷ್ಟಾತ್ಮಾ ಲೋಕನಾಥಮನಾಥವತ್ ।
ಮಾತಾ ಚ ಸನ್ದಿಶ್ಯ ಹಿ ಮಾಂ ಧಿಕ್ಶಬ್ದಂ ಬ್ರುವತೀ ಸತೀ ॥೬॥

ದಮ ಮಹಾರಾಜನು ಇಂತೆಂದನು :—

೩. ನನ್ನ ಜನನಿಯು ಕಳುಹಿಸಿರುವ ಶೂದ್ರಮುನಿಯಿಂದ ಹೇಳಲ್ಪಟ್ಟಿರುವ ಪ್ರಸಂಗವು ನಿಮ್ಮೆಲ್ಲರಿಂದ ಕೇಳಲ್ಪಟ್ಟಿರುವುದು. ಹೀಗೆ ನನ್ನ ತಂದೆಯು ಸ್ವರ್ಗಕ್ಕೆ ಹೋಗಿರಲು ಈಗ ಮುಂದಿನ ನನ್ನ ಕರ್ತವ್ಯವೇನಿದೆಯೋ ಅದನ್ನು ಹೇಳಿರಿ.

೪. ವೃದ್ಧಾವಸ್ಥೆಯುಳ್ಳವನೂ, ತಪಸ್ವಿಯೂ, ವಾನಪ್ರಸ್ಥಧರ್ಮಾವಲಂಬಿಯೂ, ಮೌನವ್ರತವನ್ನು ಧರಿಸಿದವನೂ ಮತ್ತು ಶಸ್ತ್ರರಹಿತನೂ ಆಗಿರುವ ನನ್ನ ತಂದೆಯು ಜನನಿಯಿಂದ ಶತ್ರುವಿಗೆ ನಿರ್ದೇಶಿಸಲ್ಪಟ್ಟನು.

೫. ಪತಿದೇವನ ಜೊತೆಯಲ್ಲಿದ್ದ ನನ್ನ ಜನನಿಯು ತನ್ನ ಸರಳಬುದ್ಧಿಯಿಂದ ವಪುಷ್ಮಂತನಿಗೆ " ಈ ತಪಸ್ವಿಯು ಇಂತಹವನು " ಎಂದು ತಾತ್ತ್ವಿಕವಾಗಿ ಹೇಳಲ್ಪಟ್ಟನು. ಆ ದುರುಳನು ತಪಸ್ವಿಯ ಜಡೆಯನ್ನು ಕೈಯಲ್ಲಿ ಹಿಡಿದು ಖಡ್ಗವನ್ನು ಸೆಳೆದುಕೊಂಡನು.

೬. ದುಷ್ಟಾತ್ಮನಾದ ಶತ್ರುವು ಲೋಕೇಶ್ವರನಾದ ನನ್ನ ತಂದೆಯನ್ನು ಅನಾಥನಂತೆ ಜಡೆಹಿಡಿದೆಳೆದು ಶಿರಚ್ಛೇದಮಾಡಿ ಕೊಂದುಹಾಕಿದನು. ಮಾತೆಯು ನನ್ನ ವಿಷಯದಲ್ಲಿ ಧಿಕ್ಕಾರವಾಣಿಯನ್ನು ಆಡುತ್ತ ನನಗೆ ಆ ವೃತ್ತಾಂತವನ್ನು ಹೇಳಿಕಳುಹಿಸಿರುವಳು.

ಮನ್ದಭಾಗ್ಯಂ ಚ ನಿಶ್ರೀಕಂ ಪ್ರವಿಷ್ಟಾ ಹವ್ಯವಾಹನಮ್ ।
ತಮಾಲಿಙ್ಗ್ಯ ನರಿಷ್ಯನ್ತಂ ಪ್ರಯಾತಾ ತ್ರಿದಶಾಲಯಮ್ ॥೭॥

ಸೋಽಹಮದ್ಯ ಕರಿಷ್ಯಾಮಿ ಯನ್ಮೇ ಮಾತುರುದೀರಿತಮ್ ।
ಹಸ್ತ್ಯಶ್ವರಥಪಾದಾತಂ ಸೈನ್ಯಂ ಚ ಪರಿಕಲ್ಪ್ಯತಾಮ್ ॥೮॥

ಅನಿರ್ವಾಪ್ಯ ಪಿತುರ್ವೈರಮಹತ್ವಾ ಪಿತೃಘಾತಕಮ್ ।
ಅಕೃತ್ವಾ ಚ ವಚೋ ಮಾತುರ್ಜೀವಿತುಂ ಕಿಮಿಹೋತ್ಸಹೇ ॥೯॥

ಮಾರ್ಕಣ್ಡೇಯ ಉವಾಚ :—

ಮನ್ತ್ರಿಣಸ್ತದ್ವಚಃ ಶ್ರುತ್ವಾ ಹಾಹೇತ್ಯುಕ್ತ್ವಾ ತಥಾ ಚ ತತ್ ।
ಕೃತವನ್ತೋ ವಿಮನಸಃ ಸಭೃತ್ಯಬಲವಾಹನಾಃ ॥೧೦॥

---

೭. ನಿರ್ಭಾಗ್ಯನೂ, ಲಕ್ಷ್ಮೀವರ್ಜಿತನೂ ಆದ ನನಗೆ ಸಂದೇಶವನ್ನು ಕಳುಹಿಸಿ ಜನನಿಯು ಪತಿದೇವನಾದ ನರಿಷ್ಯಂತನನ್ನು ಅಪ್ಪಿಕೊಂಡು ಅಗ್ನಿಯಲ್ಲಿ ಪ್ರವೇಶಮಾಡಿ ದೇವಲೋಕಕ್ಕೆ ಹೋದಳು.

೮. ಅಂತಹ ನಾನು ಇಂದು ಜನನಿಯ ಸಂದೇಶವನ್ನು ನೆರವೇರಿಸುವೆನು. ಅದಕ್ಕೋಸ್ಕರ ಗಜ-ತುರಗ-ರಥ-ಪದಾತಿರೂಪವಾದ ಚತುರಂಗಸೈನ್ಯವು ಸಿದ್ಧಗೊಳಿಸಲ್ಪಡಲಿ.

೯. ತಂದೆಯ ನಿಮಿತ್ತದಿಂದ ಉಂಟಾದ ವೈರವನ್ನು ಅಡಗಿಸದೇ, ಪಿತೃಘಾತಿಯಾದ ನೀಚನನ್ನು ಕೊಲ್ಲದೇ ಮತ್ತು ಜನನಿಯ ಆಜ್ಞಾವಚನವನ್ನು ನಡೆಸದೇ ನಾನು ಈ ಜೀವಲೋಕದಲ್ಲಿ ಜೀವಿಸಲು ಏಕೆ ಇಷ್ಟಪಡಲಿ ?

ಮಾರ್ಕಂಡೇಯ ಮುನಿಯು ಇಂತು ಹೇಳಿದನು :—

೧೦. ಆಗ ಮಂತ್ರಿಗಳು ಆ ವಚನವನ್ನು ಕೇಳಿ ತಾವು ದುಃಖದಿಂದ ಅಯ್ಯೋ ! ಅಯ್ಯೋ ! ಎಂದುಕೊಳ್ಳುತ್ತ ಶೂನ್ಯಮನಸ್ಸುಳ್ಳವರಾಗಿ ಭೃತ್ಯ, ಸೈನ್ಯ, ವಾಹನಪರಿವಾರದಿಂದ ಕೂಡಿ ರಾಜಾಜ್ಞೆಯಂತೆ ನಡೆದುಕೊಂಡರು.

ನಿರ್ಯಯುಃ ಸಪರೀವಾರಾಃ ಪುರಸ್ಕೃತ್ಯ ದಮಂ ನೃಪಮ್ ।
ಗೃಹೀತ್ವಾ ಚಾಶಿಷೋ ವಿಪ್ರಾತ್ತ್ರಿಕಾಲಜ್ಞಾತ್ಪುರೋಧಸಃ ॥೧೧॥

ಅಹಿರಾಡಿವ ನಿಶ್ವಸ್ಯ ದಮಃ ಪ್ರಾಯಾದ್ವಪುಷ್ಮತಮ್ ।
ಸೀಮಾಪಾಲಾದಿಸಾಮನ್ತಾನ್ನಿಘ್ನನ್ಯಾಮ್ಯಾನ್ದಿಶಂ ತ್ವರಾ ॥೧೨॥

ನಿರೀಕ್ಷ್ಯ ತಂ ಸಮಾಯಾನ್ತಂ ವಪುಷ್ಮಾನ್ಮರ್ಷಪೂರಿತಃ ॥೧೩॥

ಸಙ್ಕ್ರನ್ದನಸುತೇನಾಪಿ ದಮೋ ಜ್ಞಾತೋ ವಪುಷ್ಮತಾ ।
ಆಯಾತಃ ಸಪರೀವಾರಃ ಸಾಮಾತ್ಯಃ ಸಪರಿಚ್ಛದಃ ॥೧೪॥

ಅಕಮ್ಪಿತೇನ ಮನಸಾ ಸ ಸೈನ್ಯಾನ್ಯಾದಿದೇಶ ಹ ।
ದೂತಂ ಚ ಪ್ರೇಷಯಾಮಾಸ ನಿರ್ಗಮ್ಯ ನಗರಾದ್ಬಹಿಃ ॥೧೫॥

---

೧೧. ಭೂತ-ಭವಿಷ್ಯ-ವರ್ತಮಾನ ಕಾಲತ್ರಯವೇತ್ತನೂ, ಪುರೋಹಿತನೂ ಆದ ವಿಪ್ರನಿಂದ ಆಶೀರ್ವಚನವನ್ನು ಪಡೆದು ಮಂತ್ರಿಗಳು ಎಲ್ಲರೂ ಸೈನ್ಯಪರಿವಾರ ಸಮೇತರಾಗಿ ದಮ ರಾಜನನ್ನು ಪುರಸ್ಕರಿಸಿ ಪ್ರಯಾಣವನ್ನು ಕೈಗೊಂಡರು.

೧೨. ದಮಕುಮಾರನು ನಾಗರಾಜನಂತೆ ಕೋಪದಿಂದ ಉಸಿರುಬಿಡುತ್ತ ಸೀಮಾಪಾಲಕ ಮುಂತಾದ ಶತ್ರುವಿನ ಸಾಮಂತರಾಜರನ್ನು ಸಂಹರಿಸುತ್ತ ವೇಗದಿಂದ ದಕ್ಷಿಣದಿಕ್ಕಿನ ಕಡೆ ಪ್ರಯಾಣಮಾಡಿ ವಪುಷ್ಮಂತ ಶತ್ರುವಿಗೆ ಎದುರಾಗಿ ಬಂದನು.

೧೩. ಆ ಸಮಯದಲ್ಲಿ ದಕ್ಷಿಣದೇಶದ ದೊರೆಯಾದ ವಪುಷ್ಮಂತನು ತನ್ನನ್ನಾಕ್ರಮಿಸಲು ಬರುತ್ತಿದ್ದ ದಮನನ್ನು ನೋಡಿ ಕೋಪ-ಅಸಹನೆಗಳಿಂದ ತುಂಬಿಹೋದನು.

೧೪. ಸಂಕ್ರಂದನ ಎಂಬುವನ ಪುತ್ರನಾದ ವಪುಷ್ಮಂತನಿಂದ ದಮ ರಾಜನು ಮಂತ್ರಿವರ್ಗ, ಭೃತ್ಯಜನ ಮತ್ತು ಸೈನ್ಯಪರಿವಾರ ಸಮೇತನಾಗಿ ದುರಾಕ್ರಮಣಕ್ಕೆ ಬಂದಿರುವನೆಂದು ತಿಳಿಯಲ್ಪಟ್ಟನು.

೧೫. ಆಗ ವಪುಷ್ಮಂತನು ಧೈರ್ಯದಿಂದ ಚಲಿಸದಿರುವ ಮಾನಸದಿಂದ ತನ್ನ ಕಡೆಯ ಸೈನ್ಯವು ಯುದ್ಧಕ್ಕೆ ಸಿದ್ಧವಾಗುವಂತೆ ಅಪ್ಪಣೆಮಾಡಿದನು. ಮತ್ತು ತಾನು ನಗರದಿಂದ ಹೊರಕ್ಕೆ ಹೊರಟು ದೂತನನ್ನು ಕಳುಹಿಸಿದನು.

ತ್ವಂ ಶೀಘ್ರತರಮಾಗಚ್ಛ ನರಿಷ್ಯನ್ತಃ ಪ್ರತೀಕ್ಷತೇ ।
ಸಭಾರ್ಯಃ ಕ್ಷತ್ರಬನ್ಧೋ ತ್ವಂ ಸಮಾಯಾಹಿ ಮಮಾನ್ತಿಕಮ್ ॥೧೬॥

ಇಮೇ ಮದ್ಬಾಹುನಿರ್ಮುಕ್ತಾಃ ಶಿತಾ ಬಾಣಾಃ ಪಿಪಾಸಿತಾಃ ।
ಭಿತ್ವಾ ಶರೀರಂ ಸಙ್ಗ್ರಾಮೇ ಪಾಸ್ಯನ್ತಿ ರುಧಿರಂ ತವ ॥೧೭॥

ಶ್ರುತ್ವಾ ದಮಸ್ತು ತತ್ಸರ್ವಂ ದೂತಪ್ರೋಕ್ತಂ ಯಯೌ ತ್ವರನ್ ।
ಸ್ಮೃತ್ವಾ ಪ್ರತಿಜ್ಞಾಂ ಪೂರ್ವೋಕ್ತಾಂ ನಿಶ್ವಸನ್ನುರಗೋ ಯಥಾ ॥೧೮॥

ಆಹೂತಃ ಸಮರೇ ಚೈವ ವಪುಮಾನ್ ಸೇನಾವಿಕತ್ಥನಃ ।
ತತೋ ಯುದ್ಧಮತೀವಾಸೀದ್ದಮಸ್ಯ ಚ ವಪುಷ್ಮತಃ ॥೧೯॥

---

೧೬. ಆ ದೂತನ ಮೂಲಕ ಹೀಗೆ ಹೇಳಿ ಕಳುಹಿಸಿದನು; ಎಲೈ, ಶತ್ರುವೇ! ನೀನು ಬಲು ಬೇಗ ಬಾ. ಮುಂದೆ ಹೊರಟುಹೋದ ನರಿಷ್ಯಂತನು ನಿನ್ನ ನಿರೀಕ್ಷಣೆಯಲ್ಲಿರುವನು. ಪತ್ನೀಪರಿವಾರ ಸಮೇತನಾದ ನೀಚಕ್ಷತ್ರಿಯನೇ! ನೀನು ನನ್ನ ಬಳಿಗೆ ಬೇಗ ಬಾ.

೧೭. ನೀರಡಿಕೆಯಿಂದ ಕೂಡಿದ, ಹರಿತವಾದ, ಮತ್ತು ನನ್ನ ಬಾಹುಗಳಿಂದ ಪ್ರಯೋಗಿಸಲ್ಪಟ್ಟ ಈ ಬಾಣಗಳು ಸಂಗ್ರಾಮದಲ್ಲಿ ನಿನ್ನ ಶರೀರವನ್ನು ಭೇದಿಸಿ ರಕ್ತವನ್ನು ಕುಡಿದು ತೃಪ್ತಿಹೊಂದಲಿ.

೧೮. ದಮ ಮಹಾರಾಜನು ವಪುಷ್ಮಂತನ ದೂತನು ಹೇಳಿರುವುದೆಲ್ಲವನ್ನೂ ಕೇಳಿ ತಾನು ಹಿಂದೆ ಮಾಡಿಕೊಂಡಿರುವ ಪ್ರತಿಜ್ಞೆಯನ್ನು ನೆನೆಸಿಕೊಂಡು ಹಾವಿನಂತೆ ಬುಸುಗುಟ್ಟುತ್ತ ವೇಗವಾಗಿ ಪ್ರಯಾಣಮಾಡಿದನು.

೧೯. ಸೈನ್ಯಬಲದಿಂದ ಜಂಭಮಾಡುತ್ತಿದ್ದ ವೀರವಪುಷ್ಮಂತನು ದಮ ರಾಜನಿಂದ ರಣಕ್ಕೆ ಕರೆಯಲ್ಪಟ್ಟನು. ತರುವಾಯ ದಮ ರಾಜನಿಗೂ ಆ ವಪುಷ್ಮಂತನಿಗೂ ಘೋರವಾದ ಕದನವು ಜರುಗಿತು.

ರಥೀ ಚ ರಥಿನಾ ನಾಗೀ ನಾಗಿನಾ ಹಯಿನಾ ಹಯೀ ।
ಅಯುಧ್ಯನ್ತ ಚ ವಿಪ್ರರ್ಷೇ ತದ್ಯುದ್ಧಂ ತುಮುಲಂ ಹ್ಯಭೂತ್ ॥೨೦॥

ಪಶ್ಯತಾಂ ಸರ್ವದೇವಾನಾಂ ಸಿದ್ಧಗನ್ಧರ್ವರಕ್ಷಸಾಮ್ ॥೨೧॥

ಚಕಮ್ಪೇ ವಸುಧಾ ಬ್ರಹ್ಮನ್ಯುಧ್ಯಮಾನೇ ದಮೇ ಯುಧಿ ।
ನ ಗಜೋ ನ ರಥೀ ನಾಶ್ವಸ್ತಸ್ಯ ಬಾಣಸಹಸ್ತು ಯಃ ॥೨೨॥

ತತೋ ದಮೇನ ಯುಯುಧೇ ಸೇನಾಧ್ಯಕ್ಷೋ ವಪುಷ್ಮತಃ ।
ಹೃದಿ ವಿವ್ಯಾಧ ಚ ದಮ ಇಷುಣಾಗಾದ್ಯಮಾನ್ತಿಕಮ್ ॥೨೩॥

---

೨೦. ಬ್ರಹ್ಮರ್ಷಿಯಾದ ಕ್ರೌಷ್ಟುಕಿಯೇ! ರಣರಂಗದಲ್ಲಿ ರಥಿಕನು ರಥಾಧಿರೂಢನೊಡನೆ, ಗಜಾರೂಢನು ಗಜಾರೂಢನೊಡನೆ, ಮತ್ತು ಕುದುರೆಯ ಸವಾರನು ಕುದುರೆಸವಾರನೊಡನೆ ಸೇರಿ ಯುದ್ಧಮಾಡಿದರು. ಆ ಯುದ್ಧವು ಬಲು ಘೋರರೂಪವನ್ನು ಹೊಂದಿತು.

೨೧. ಹಾಗು ಸಿದ್ಧ, ಗಂಧರ್ವ, ರಾಕ್ಷಸ ಮುಂತಾದವರೂ ಸಕಲ ದೇವತೆಗಳೂ ನೋಡುತ್ತಿರುವ ಹಾಗೆ ದಮರಾಜ-ವಪುಷ್ಮಂತರಿಗೆ ಘೋರವಾದ ಕಾಳಗವು ನಡೆಯಿತು.

೨೨. ವಿಪ್ರರ್ಷಿಯಾದ ಕ್ರೌಷ್ಟುಕಿಯೇ! ರಣರಂಗದಲ್ಲಿ ದಮಮಹಾರಾಜನು ಯುದ್ಧಮಾಡುತ್ತಿರಲು ಅವನ ಬಾಣವೇಗವನ್ನು ಸಹಿಸಲು ರಥಿಕ-ಆನೆ-ಕುದುರೆಗಳಲ್ಲಿ ಯಾರಿಗೂ ಶಕ್ಯವಾಗುತ್ತಿರಲಿಲ್ಲ. ಭೂಮಿಯೆಲ್ಲವೂ ನಡುಗಿತು.

೨೩. ಆ ಸಮಯದಲ್ಲಿ ವಪುಷ್ಮಂತನ ಸೇನಾಪತಿಯು ದಮಭೂಪಾಲಕನೊಡನೆ ಯುದ್ಧಮಾಡಿದನು. ಆಗ ದಮನು ಹೃದಯಕ್ಕೆ ಗುರಿಯಿಟ್ಟು ಬಾಣವನ್ನು ಪ್ರಯೋಗಿಸಿದನು. ಆದರಿಂದ ಸೇನಾಪತಿಯು ಮೃತ್ಯುಲೋಕಕ್ಕೆ ಸೇರಿದನು.

ತಸ್ಮಿನ್ನಿಪತಿತೇ ಸೈನ್ಯಂ ಪಲಾಯನಪರಂ ಹ್ಯಭೂತ್ ।
ಸ ಸ್ವಾಮಿನಂ ತತಃ ಪ್ರಾಹ ದಮಃ ಶತ್ರುಂದವಸ್ತಥಾ ॥೨೪॥

ಕ್ವ ಯಾಸಿ ದುಷ್ಟ ಪಿತರಂ ಘಾತಯಿತ್ವಾ ತಪಸ್ವಿನಮ್ ।
ಅಶಸ್ತ್ರಂ ಚ ತಪಸ್ಯಸ್ತಂ ಕ್ಷತ್ರಿಯೋಽಸಿ ನಿವರ್ತತಾಮ್ ॥೨೫॥

ತತೋ ನಿವೃತ್ತ್ಯ ಸ ದಮಂ ಯೋಧಯಾಮಾಸ ಸಾನುಜಃ ।
ಸಪುತ್ರಃ ಸಹಸಮ್ಬನ್ಧಿಬಾನ್ಧವೈರ್ಯುಯುಧೇ ರಥೀ ॥೨೬॥

ತತಃ ಶರಾಸನಾನ್ಮುಕ್ತಬಾಣೈರ್ವ್ಯಾಪ್ತಾಸ್ತತೋ ದಿಶಃ ।
ದಮಂ ಚ ಸರಥಂ ಚಾಶು ಶರಜಾಲೈರಪೂರಯತ್ ॥೨೭॥

---

೨೪. ಹಾಗೆ ಸೇನಾಪತಿಯು ಕೆಳಗೆ ಬೀಳಲಾಗಿ ಉಳಿದ ಸೈನ್ಯವು ರಣವನ್ನು ಬಿಟ್ಟು ಪಲಾಯನ ಮಾಡಲಾರಂಭಿಸಿತು. ತರುವಾಯ ಶತ್ರುಗಳನ್ನು ಸದೆಬಡಿಯುವ ದಮರಾಜನು ಸೈನ್ಯದ ಜೊತೆಗೆ ಹಿಂದಕ್ಕೆ ಅಡಿಯಿಡುತ್ತಿದ್ದ ವಪುಷ್ಮಂತನಿಗೆ ಹೀಗೆಂದನು.

೨೫. ನೀಚನೇ ! ತಪಸ್ವಿಯಾಗಿದ್ದ ನನ್ನ ತಂದೆಯನ್ನು ವಧಿಸಿ ಅಪರಾಧವೆಸಗಿದ ನೀನಿಂದು ಎಲ್ಲಿಗೆ ಓಡಿಹೋಗುವೆ ? ಶಸ್ತ್ರವನ್ನು ತ್ಯಜಿಸಿ ತಪಸ್ವಿಸ ಸ್ಥಿತಿಯಲ್ಲಿರುವವನನ್ನು ವಧಿಸಿದ್ದೀಯೆ. ಕ್ಷತ್ರಿಯನಲ್ಲವೇ ನೀನು ? ಯುದ್ಧಕ್ಕೆ ಹಿಂತಿರುಗು.

೨೬. ತರುವಾಯ ವಪುಷ್ಮಂತನು ಓಡಿಹೋಗುವುದನ್ನು ಬಿಟ್ಟು ಹಿಂತಿರುಗಿ ರಥಾರೂಢನಾಗಿ ತಮ್ಮಂದಿರು-ಪುತ್ರರು-ಸಂಬಂಧಿ-ಬಾಂಧವರು-ಎಲ್ಲರಿಂದೊಡಗೂಡಿ ದಮರಾಜನೊಡನೆ ಯುದ್ಧಮಾಡಿದನು.

೨೭. ಅನಂತರ ವಪುಷ್ಮಂತನು ಬಿಲ್ಲನ್ನು ಹೆದೆಯೇರಿಸಿ ಪ್ರಯೋಗಿಸಿದ ಬಾಣಗಳಿಂದ ಎಲ್ಲ ದಿಕ್ಕುಗಳು ತುಂಬಿಹೋದುವು. ಮತ್ತು ರಥವನ್ನೇರಿರುವ ದಮಕುಮಾರನನ್ನು ರಥಸಮೇತವಾಗಿ ಬಾಣವೃಷ್ಟಿಯಿಂದ ಮುಚ್ಚಿಹಾಕಿದನು.

ತತಃ ಪಿತೃವಧೋತ್ಥೇನ ಕೋಪೇನ ಸ ದಮಸ್ತಥಾ ।
ಚಿಚ್ಛೇದ ತಾಞ್ಛರಾಂಸ್ತೇಷಾಂ ವಿವ್ಯಾಧಾನ್ಯೈಶ್ಚ ತಾನಪಿ ॥೨೮॥

ಏಕೇನೈಕೇನ ಬಾಣೇನ ಸಪ್ತಪುತ್ರಾಂಸ್ತಥಾ ದ್ವಿಜ ।
ಸಮ್ಬನ್ಧಿಬಾನ್ಧವಾನ್ಮಿತ್ರಾನ್ನಿನಾಯ ಯಮಸಾದನಮ್ ॥೨೯॥

ವಪುಷ್ಮಾನ್ ಸ ರಥೀ ಕ್ರೋಧಾನ್ನಿಹತಾತ್ಮಜಬಾನ್ಧವಃ ।
ಯುಯುಧೇ ಚ ಸ ತೇನಾಜೌ ಶರೈರಾಶೀವಿಷೋಪಮೈಃ ॥೩೦॥

ಚಿಚ್ಛೇದ ತಸ್ಯ ತಾನ್ಬಾಣಾನ್ ಸ ದಮಶ್ಚ ಮಹಾಮುನೇ ।
ಯುಯುಧಾತೇ ಚ ಸಂರಬ್ಧೌ ಪರಸ್ಪರಜಯೈಷಿಣೌ ॥೩೧॥

---

೨೮. ತರುವಾಯ ಆ ದಮಮಹಾರಾಜನು ತನ್ನ ಪಿತೃವಧವನ್ನು ನೆನೆಸಿಕೊಂಡು ಉಂಟಾದ ಕೋಪದಿಂದ ವಪುಷ್ಮಂತನು ಬಿಟ್ಟ ಎಲ್ಲ ಬಾಣಗಳನ್ನು ಕತ್ತರಿಸಿದನು. ಮತ್ತು ತನ್ನ ಬಾಣಗಳಿಂದ ಶತ್ರುಗಳನ್ನು ಹೊಡೆದನು.

೨೯. ಎಲೈ, ದ್ವಿಜರ್ಷಿಯೇ! ದಮಕುಮಾರನು ಒಂದೊಂದು ಬಾಣದಿಂದ ಏಳುಮಂದಿ ವಪುಷ್ಮಂತನ ಪುತ್ರರನ್ನು ವಧಿಸಿದನು. ಹಾಗೂ ಅವನ ಅನೇಕಮಂದಿ ಸಂಬಂಧಿ-ಬಾಂಧವ-ಮಿತ್ರವರ್ಗವನ್ನು ಮೃತ್ಯುಲೋಕಕ್ಕೆ ಕಳುಹಿಸಿದನು.

೩೦. ಹೀಗೆ ವಧಿಸಲ್ಪಟ್ಟ ಅನೇಕ ಸಂಬಂಧಿ-ಬಾಂಧವರುಳ್ಳ, ರಥಾರೂಢನಾದ ವಪುಷ್ಮಂತನು ಕೋಪದಿಂದ ಸರ್ಪಗಳಂತೆ ಉಲ್ಬಣವಾದ ಬಾಣಗಳನ್ನು ಬಿಡುತ್ತ ದಮಭೂಪತಿಯೊಡನೆ ಯುದ್ಧಮಾಡಿದನು.

೩೧. ಮಹಾಮುನಿಯಾದ ಕ್ರೌಷ್ಟುಕಿಯೇ! ದಮಮಹಾರಾಜನು ವಪುಷ್ಮಂತನ ಆ ಬಾಣಗಳನ್ನು ಕತ್ತರಿಸಿದನು. ಮತ್ತು ಆಗ ಇಬ್ಬರೂ ಪರಸ್ಪರ ಜಯಾಕಾಂಕ್ಷಿಗಳೂ ಸ್ಪರ್ಧಾವಂತರೂ ಆಗಿ ಯುದ್ಧಮಾಡಿದರು.

ಪರಸ್ಪರಶರಾಘಾತವಿಚ್ಛಿನ್ನಧನುಷೌ ತ್ವರಾ ।
ಗೃಹೀತಖಡ್ಗಾವೃತ್ತೀರ್ಯ ಚಿಕ್ರೀಡಾತೇ ಮಹಾಬಲೌ ॥೩೨॥

ದಮಃ ಕ್ಷಣಂ ನೃಪಂ ಧ್ಯಾತ್ವಾ ಪಿತರಂ ನಿಹತಂ ವನೇ ॥೩೩॥

ಕೇಶೇಷ್ವಾಕೃಷ್ಯ ಚಾಕ್ರಮ್ಯ ನಿಪಾತ್ಯ ಧರಣೀತಲೇ ।
ಶಿರೋಧರಾಯಾಂ ಪಾದೇನ ಭುಜಮುದ್ಯಮ್ಯ ಚಾಬ್ರವೀತ್ ॥೩೪॥

ಪಶ್ಯನ್ತು ದೇವತಾಃ ಸರ್ವಾ ಮಾನುಷಾಃ ಪನ್ನಗಾಃ ಖಗಾಃ ।
ಪಾಟ್ಯಮಾನಂ ಚ ಹೃದಯಂ ಕ್ಷತ್ರಬನ್ಧೋರ್ವಪುಷ್ಮತಃ ॥೩೫॥

ಏವಮುಕ್ತ್ವಾ ಚ ಸ ದಮೋ ಹೃದಯಂ ಚ ವ್ಯದಾರಯತ್ ।
ಪಾತುಕಾಮಶ್ಚ ಸ ಸುರೈಃ ಕ್ಷತಜೇನ ನಿವಾರಿತಃ ॥೩೬॥

---

೩೨. ಆ ಸಮಯದಲ್ಲಿ ಪರಸ್ಪರ ಬಾಣಪ್ರಹಾರದಿಂದ ಕತ್ತರಿಸಿದ ಬಿಲ್ಲುಗಳುಳ್ಳವರಾಗಿ ತ್ವರೆಯಿಂದ ರಥದಿಂದ ಕೆಳಗಿಳಿದು ತಮ್ಮ ತಮ್ಮ ಬಲವನ್ನೆಲ್ಲ ಉಪಯೋಗಿಸುತ್ತ ಖಡ್ಗವನ್ನು ಹಿಡಿದು ಯುದ್ಧಮಾಡಿದರು.

೩೩. ಈ ಸಮಯದಲ್ಲಿ ದಮಭೂಪಾಲಕನು ಅರಣ್ಯದಲ್ಲಿ ತನ್ನ ತಂದೆಯು ಅನಾಥನಂತೆ ವಪುಷ್ಮಂತನಿಂದ ವಧಿಸಲ್ಪಟ್ಟಿದನ್ನು ಕ್ಷಣಕಾಲ ಧ್ಯಾನಿಸಿದನು.

೩೪. ಆದುದರಿಂದ ಶತ್ರುವನ್ನು ಕೂದಲು ಹಿಡಿದೆಳೆದು ನೆಲದಮೇಲೆ ಉರುಳಿಸಿ ಕತ್ತಿನಲ್ಲಿ ಕಾಲನ್ನು ಇಟ್ಟು ತುಳಿಯುತ್ತ ತನ್ನ ಭುಜವನ್ನು ಮೇಲಕ್ಕೆ ಎತ್ತಿಕೊಂಡು ಕೂಗಿ ಹೇಳಿದನು.

೩೫. ನಾನು ಕ್ಷತ್ರಿಯಾಧಮನಾದ ವಪುಷ್ಮಂತನ ಹೃದಯವನ್ನು ಸೀಳುತ್ತಿರುವುದನ್ನು ಸಮಸ್ತ ದೇವತೆಗಳು, ಮನುಷ್ಯ, ಸರ್ಪ, ಪಕ್ಷಿ ಮುಂತಾದುವರು ನೋಡಲಿ.

೩೬. ಹೀಗೆಂದು ಹೇಳುತ್ತ ದಮಭೂಪಾಲಕನು ಶತ್ರುವಾದ ವಪುಷ್ಮಂತನ ಎದೆಯನ್ನು ಬಗೆದನು. ಮತ್ತು ಆ ನೀಚನ ರಕ್ತವನ್ನು ಪಾನಮಾಡುವ ಕಾಮನೆಯಿಂದ ಇರಲು ದೇವತೆಗಳು ರಕ್ತಪಾನಮಾಡದಂತೆ ತಡೆಗಟ್ಟಿದರು.

ತತಶ್ಚಕಾರ ತಾತಸ್ಯ ರಕ್ತೇನೈವೋದಕಕ್ರಿಯಾಮ್ ।
ಆನೃಣ್ಯಂ ಪ್ರಾಪ್ಯ ಸ ಪಿತುಃ ಪುನಃ ಪ್ರಾಯಾತ್ಸ್ವಮನ್ದಿರಮ್ ॥೩೭॥

ವಪುಷ್ಮತಶ್ಚ ಮಾಂಸೇನ ಪಿಣ್ಡದಾನಂ ಚಕಾರ ಹ ।
ಬ್ರಾಹ್ಮಣಾನ್ಭೋಜಯಾಮಾಸ ರಕ್ಷಃಕುಲಸಮುದ್ಭವಾನ್ ॥೩೮॥

ಏವಂವಿಧಾ ಹಿ ರಾಜಾನೋ ಬಭೂವುಃ ಸೂರ್ಯವಂಶಜಾಃ ।
ಅನ್ಯೇಽಪಿ ಸುಧಿಯಃ ಶೂರಾ ಯಜ್ವಿನೋ ಧರ್ಮಕೋವಿದಾಃ॥೩೯॥

ವೇದಾನ್ತಪಾರಗಾಂಸ್ತಾಂಶ್ಚ ನ ಸಙ್ಖ್ಯಾತುಮಿಹೋತ್ಸಹೇ ।
ಏತೇಷಾಂ ಚರಿತಂ ಶ್ರುತ್ವಾ ನರಃ ಪಾಪೈಃ ಪ್ರಮುಚ್ಯತೇ ॥೪೦॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ದಮಚರಿತೇ
ವಪುಷ್ಮದ್ವಧೋ ನಾಮ ತ್ರಯಸ್ತ್ರಿಂಶದಧಿಕಶತತಮೋಽಧ್ಯಾಯಃ

---

೩೭. ತರುವಾಯ ದಮಕುಮಾರನು ತಂದೆಗೆ ಶತ್ರುವಿನ ರಕ್ತಧಾರೆ-ಯಿಂದಲೇ ಜಲಾಂಜಲಿಯನ್ನು ಒಪ್ಪಿಸಿದನು. ಹಾಗು ತಂದೆಯ ವಿಷಯದಲ್ಲಿ ಆನೃಣ್ಯವನ್ನು ಹೊಂದಿ ಮರಳಿ ತನ್ನ ಮಂದಿರಕ್ಕೆ ಹಿಂದಿರುಗಿಬಂದನು.

೩೮. ಮತ್ತು ವಪುಷ್ಮಂತನ ಮಾಂಸದಿಂದ ತಂದೆಗೆ ಪಿಂಡದಾನವನ್ನು ಆಚರಿಸಿದನು. ಹಾಗು ರಾಕ್ಷಸ ವಂಶದಲ್ಲಿ ಜನಿಸಿದಂತಹ ಬ್ರಾಹ್ಮಣರನ್ನು ಕರೆದು ಶತ್ರುವಿನ ಮಾಂಸಾನ್ನವನ್ನು ಭೋಜನಮಾಡಿಸಿದನು.

೩೯. ಸೂರ್ಯವಂಶದಲ್ಲಿ ಜನಿಸಿದ ರಾಜರು ಈ ವಿಧವಾದ ಮಹಿಮೆ-ಯುಳ್ಳವರಾಗಿದ್ದರು. ಇವರು ಮಾತ್ರವಲ್ಲದೆ ಇನ್ನೂ ಅನೇಕಮಂದಿ ಜ್ಞಾನಿಗಳೂ, ಶೂರರೂ, ಯಾಗಶೀಲರೂ ಮತ್ತು ಧರ್ಮತತ್ತ್ವವನ್ನು ತಿಳಿದವರೂ ಆಗಿದ್ದರು.

೪೦. ಹಾಗು ಅನೇಕಮಂದಿ ರಾಜರು ವೇದಾಂತ ಪಾರಂಗತರೂ ಆಗಿದ್ದರು. ಅಂತಹ ಮಹಾಮಹಿಮರನ್ನು ಎಣಿಸಿ ಹೇಳುವುದು ಶಕ್ಯವಲ್ಲ. ಇಂತಹ ಮಹಾತ್ಮರ ಚರಿತ್ರವನ್ನು ಕೇಳಿದ ಮಾನವನು ಪಾಪಗಳಿಂದ ಬಿಡುಗಡೆ ಹೊಂದುವನು.

ಮಾರ್ಕಂಡೇಯ ಮಹಾಪುರಾಣದಲ್ಲಿ ನೂರ ಮೂವತ್ತಮೂರನೆಯ
ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಚತುಸ್ತ್ರಿಂಶದಧಿಕಶತತಮೋಽಧ್ಯಾಯಃ

(ಪುರಾಣಕಥೋಪಸಂಹಾರಃ)

ಪಕ್ಷಿಣ ಊಚುಃ :—

ಏವಮುಕ್ತ್ವಾ ಜೈಮಿನೇಽಯಂ ಮಾರ್ಕಣ್ಡೇಯೋ ಮಹಾಮುನಿಃ ।
ವಿಸೃಜ್ಯ ಕ್ರೌಷ್ಟುಕಿಮುನಿಂ ಚಕ್ರೇ ಮಾಧ್ಯಾಹ್ನಿಕೀಂ ಕ್ರಿಯಾಮ್ ||೧||

ಅಸ್ಮಾಭಿಶ್ಚ ಶ್ರುತಂ ತಸ್ಮಾದ್ಯತ್ತೇ ಪ್ರೋಕ್ತಂ ಮಹಾಮುನೇ ।
ಅನಾದಿಸಿದ್ಧಮೇತದ್ಧಿ ಪುರಾ ಪ್ರೋಕ್ತಂ ಸ್ವಯಮ್ಭುವಾ ||೨||

ನೂರ ಮೂವತ್ತನಾಲ್ಕನೆಯ ಅಧ್ಯಾಯ

ಧರ್ಮಪಕ್ಷಿಗಳು ಇಂತೆಂದುವು :—

೧. ಜೈಮಿನಿ ಮುನಿಯೇ! ಮಹಾಮುನಿಯಾದ ಆ ಮಾರ್ಕಂಡೇಯ ಋಷಿಯು ಕ್ರೌಷ್ಟುಕಿಮುನಿಗೆ ಹೀಗೆ ಪುರಾಣಕಥೆಯನ್ನು ಉಪದೇಶಿಸಿ ಶಿಷ್ಯನನ್ನು ಕಳುಹಿಸಿಕೊಟ್ಟು ತಾನು ಮಾಧ್ಯಾಹ್ನಿಕ ಕರ್ಮಾನುಷ್ಠಾನವನ್ನು ಮಾಡಿದನು.

೨. ಜೈಮಿನಿ ಮಹಾಮುನಿಯೇ! ನಮ್ಮಿಂದ ನಿನಗೆ ಇದುವರೆಗೆ ಹೇಳಲ್ಪಟ್ಟಿರುವ ಚರಿತ್ರೆಯನ್ನು ಮಾರ್ಕಂಡೇಯ ಮುನಿಯ ಸನ್ನಿಧಿಯಲ್ಲಿ ನಾವು ಕೇಳಿದೆವು. ಅನಾದಿಯಾದ ಈ ಚರಿತ್ರೆಯು ಹಿಂದೆ ಬ್ರಹ್ಮದೇವನಿಂದ ಉಪ-ದೇಶಿಸಲ್ಪಟ್ಟಿತು.

ಮಾರ್ಕಣ್ಡೇಯಾಯ ಮುನಯೇ ಯತ್ತೇಽಸ್ಮಾಭಿರುದಾಹೃತಮ್ ।
ಪುಣ್ಯಂ ಪವಿತ್ರಮಾಯುಷ್ಯಂ ಧರ್ಮಕಾಮಾರ್ಥಸಿದ್ಧಿದಮ್ ॥೩॥

ಪಠತಾಂ ಶೃಣ್ವತಾಂ ಸದ್ಯಃ ಸರ್ವಪಾಪಪ್ರಮೋಚನಮ್ ।
ಆದಾವೇವ ಕೃತಾ ಯೇ ಚ ಪ್ರಶ್ನಾಶ್ಚತ್ವಾರ ಏವ ಹಿ ॥೪॥

ಪಿತುಃ ಪುತ್ರಸ್ಯ ಸಂವಾದಸ್ತಥಾ ಸೃಷ್ಟಿಃ ಸ್ವಯಮ್ಭುವಃ ।
ತಥಾ ಮನೂನಾಂ ಸ್ಥಿತಯೋ ರಾಜ್ಞಾಂ ಚ ಚರಿತಂ ಮುನೇ ॥೫॥

ಅಸ್ಮಾಭಿರೇತತ್ತೇ ಪ್ರೋಕ್ತಂ ಕಿಮದ್ಯ ಶ್ರೋತುಮಿಚ್ಛಸಿ ॥೬॥

---

೩. ಪಾವನವೂ, ಪುಣ್ಯಸಾಧನವೂ, ಆಯುಷ್ಯಕಾರಕವೂ ಮತ್ತು ಧರ್ಮ-ಅರ್ಥ-ಕಾಮಗಳ ಸಿದ್ಧಿಯನ್ನು ಉಂಟುಮಾಡುವುದೂ ಆದ ಈ ಚರಿತ್ರೆಯು ಹಿಂದೆ ಬ್ರಹ್ಮದೇವನಿಂದ ಮಾರ್ಕಂಡೇಯ ಮುನಿಗೆ ಹೇಳಲ್ಪಟ್ಟಿತು. ಅದನ್ನು ನಾವು ನಿನಗೆ ಹೇಳಿರುವೆವು.

೪. ಮತ್ತು ಈ ಚರಿತ್ರೆಯು ಪಠನ-ಶ್ರವಣಮಾಡಿದವರ ಸಕಲ ಪಾಪ-ಗಳನ್ನು ಮೋಚನಮಾಡುವುದು. ಈ ಪುರಾಣದ ಪ್ರಾರಂಭದಲ್ಲಿ ಜೈಮಿನಿ ಮುನಿಯಿಂದ ಕೇಳಲ್ಪಟ್ಟಿರುವ ನಾಲ್ಕು ಪ್ರಶ್ನೆಗಳ ಸಮಾಧಾನ ನಿರೂಪಣೆಯು ಇರುವುದು.

೫. ಜೈಮಿನಿ ಮಹರ್ಷಿಯೇ ! ಮುಂದೆ ಪಿತಾ-ಪುತ್ರರ ಸಂವಾದ, ಬ್ರಹ್ಮದೇವನ ಸೃಷ್ಟಿಪ್ರಕಾರ, ಮನ್ವಂತರಾಧಿಪರೆನಿಸಿದ ಮನುಗಳ ಸ್ಥಿತಿ ಮತ್ತು ಅನೇಕ ಮಹನೀಯ ರಾಜರ ಚರಿತ್ರಗಳು ವರ್ಣಿಸಲ್ಪಟ್ಟಿವೆ.

೬. ಹೀಗೆ ಈ ಪುರಾಣ ಚರಿತ್ರೆಗಳಿಗೆ ಸಂಬಂಧಿಸಿದ ಎಲ್ಲ ವಿಷಯ-ಗಳನ್ನು ನಾವು ನಿನಗೆ ಹೇಳಿರುವೆವು. ಈಗ ನೀನು ಏನು ಕೇಳಬೇಕೆಂದು ಆಶಿಸುತ್ತೀಯೆ ?

ಏತಾನ್ಸರ್ವಾನ್ನರಃ ಶ್ರುತ್ವಾ ಪಠತೇ ವಾ ಸಭಾಸು ಚ ।
ವಿಧೂಯ ಸರ್ವಪಾಪಾನಿ ಬ್ರಹ್ಮಣೋಽನ್ತೇ ಲಯಂ ವ್ರಜೇತ್ ॥೭॥

ಅಷ್ಟಾದಶ ಪುರಾಣಾನಿ ಯಾನಿ ಪ್ರಾಹ ಪಿತಾಮಹಃ ।
ತೇಷಾಂ ತು ಸಪ್ತಮಂ ಜ್ಞೇಯಂ ಮಾರ್ಕಣ್ಡೇಯಂ ಸುವಿಶ್ರುತಮ್ ॥೮॥

ಬ್ರಾಹ್ಮಂ ಪಾದ್ಮಂ ವೈಷ್ಣವಂ ಚ ಶೈವಂ ಭಾಗವತಂ ತಥಾ ।
ತಥಾನ್ಯನ್ನಾರದೀಯಂ ಚ ಮಾರ್ಕಣ್ಡೇಯಂ ಚ ಸಪ್ತಮಮ್ ॥೯॥

ಆಗ್ನೇಯಮಷ್ಟಮಂ ಪ್ರೋಕ್ತಂ ಭವಿಷ್ಯಂ ನವಮಂ ತಥಾ ।
ದಶಮಂ ಬ್ರಹ್ಮವೈವರ್ತಂ ಲೈಙ್ಗಮೇಕಾದಶಂ ಸ್ಮೃತಮ್ ॥೧೦॥

---

೭. ಪವಿತ್ರವಾದ ಈ ಚರಿತ್ರಾಂಶಗಳನ್ನು ಶ್ರವಣಮಾಡಿದ ಅಥವಾ ಸಭೆಗಳಲ್ಲಿ ಪಠನಮಾಡಿದ ಮಾನವನು ಸಮಸ್ತ ಪಾಪಗಳನ್ನು ಕಳೆದುಕೊಂಡು ದೇಹದ ಅವಸಾನದಲ್ಲಿ ಬ್ರಹ್ಮಲೋಕವನ್ನು ಸೇರುವನು.

೮. ಬ್ರಹ್ಮದೇವನು ಯಾವ ಹದಿನೆಂಟು ಪುರಾಣಗಳನ್ನು ಹಿಂದೆ ಉಪದೇಶ ಮಾಡಿದನೋ ಅವುಗಳಲ್ಲಿ ಮಾರ್ಕಂಡೇಯವೆಂದು ಎಲ್ಲೆಲ್ಲಿಯೂ ಪ್ರಸಿದ್ಧಿಹೊಂದಿರುವ ಈ ಪುರಾಣವು ಏಳನೆಯ ಪುರಾಣವೆಂದು ತಿಳಿಯಬೇಕು.

೯. ಬ್ರಹ್ಮ ಪುರಾಣ, ಪದ್ಮ ಪುರಾಣ, ವಿಷ್ಣು ಪುರಾಣ, ಶಿವ ಪುರಾಣ, ಭಾಗವತ, ನಾರದ ಪುರಾಣ ಮತ್ತು ಮಾರ್ಕಂಡೇಯವೆಂಬ ಏಳನೆಯ ಪುರಾಣ ಇವು ಹದಿನೆಂಟು ಪುರಾಣಗಳಲ್ಲಿ ಸೇರಿದವುಗಳಾಗಿವೆ.

೧೦. ಹಾಗು ಅಗ್ನಿ ಪುರಾಣವು ಎಂಟನೆಯದಾಗಿ ಗಣಿಸಲ್ಪಟ್ಟದೆ. ಭವಿಷ್ಯ ಪುರಾಣವು ಒಂಭತ್ತನೆಯದಾಗಿದೆ. ಬ್ರಹ್ಮ ವೈವರ್ತವೆಂಬ ಪುರಾಣವು ಹತ್ತನೆಯದಾಗಿರುವುದು. ಮತ್ತು ಲಿಂಗ ಪುರಾಣವು ಹನ್ನೊಂದನೆಯದಾಗಿ ಸ್ಮರಿಸಲ್ಪಟ್ಟದೆ.

ವಾರಾಹಂ ದ್ವಾದಶಂ ಪ್ರೋಕ್ತಂ ಸ್ಕಾನ್ದಮತ್ರ ತ್ರಯೋದಶಮ್ ।
ಚತುರ್ದಶಂ ವಾಮನಂ ಚ ಕೌರ್ಮಂ ಪಞ್ಚದಶಂ ತಥಾ ॥೧೧॥

ಮಾತ್ಸ್ಯಂ ಚ ಗಾರುಡಂ ಚೈವ ಬ್ರಹ್ಮಾಣ್ಡಂ ಚ ತತಃ ಪರಮ್ ॥೧೨॥

ಅಷ್ಟಾದಶಪುರಾಣಾನಾಂ ನಾಮಧೇಯಾನಿ ಯಃ ಪಠೇತ್ ।
ತ್ರಿಸನ್ಧ್ಯಂ ಜಪತೇ ನಿತ್ಯಂ ಸೋಽಶ್ವಮೇಧಫಲಂ ಲಭೇತ್ ॥೧೩॥

ಸರ್ಗಶ್ಚ ಪ್ರತಿಸರ್ಗಶ್ಚ ವಂಶೋ ಮನ್ವನ್ತರಾಣಿ ಚ ।
ವಂಶಾನುಚರಿತಂ ಚೈವ ಪುರಾಣಂ ಪಞ್ಚಲಕ್ಷಣಮ್ ॥೧೪॥

ಚತುಃಪ್ರಶ್ನಸಮೋಪೇತಂ ಪುರಾಣಂ ಹ್ಯೇತದುತ್ತಮಮ್ ।
ಶ್ರುತ್ವಾ ಪುನಶ್ಚ ತೇ ಪಾಪಂ ಕಲ್ಪಕೋಟಿಶತೈಃ ಕೃತಮ್ ॥೧೫॥

---

೧೧. ವರಾಹ ಪುರಾಣವು ಹನ್ನೆರಡನೆಯದೆಂದೂ, ಸ್ಕಂದ ಪುರಾಣವು ಹದಿಮೂರನೆಯದೆಂದೂ, ವಾಮನ ಪುರಾಣವು ಹದಿನಾಲ್ಕನೆಯದೆಂದೂ ಮತ್ತು ಕೂರ್ಮ ಪುರಾಣವು ಹದಿನೈದನೆಯ ಪುರಾಣವೆಂದೂ ಹೇಳಲ್ಪಟ್ಟಿದೆ.

೧೨. ಹಾಗು ಮತ್ಸ್ಯ ಪುರಾಣ, ಗರುಡ ಪುರಾಣ ಮತ್ತು ಬ್ರಹ್ಮಾಂಡ ಪುರಾಣವೆಂಬ ಮೂರು ಪುರಾಣಗಳು ಸೇರಿ ಒಟ್ಟು ಹದಿನೆಂಟು ಪುರಾಣಗಳು ಪ್ರಸಿದ್ಧವಾಗಿವೆ.

೧೩. ಈ ಹದಿನೆಂಟು ಮಹಾಪುರಾಣಗಳ ನಾಮಾಂಕನಗಳನ್ನು ಯಾವ ಮಾನವನು ಪ್ರತಿದಿನ ಮೂರು ಸಂಧ್ಯಾಸಮಯಗಳಲ್ಲಿ ಪಠಿಸುವನೋ ಅವನು ಅಶ್ವಮೇಧ ಮಹಾಯಾಗದ ಫಲವನ್ನು ಹೊಂದುವನು.

೧೪. ಬ್ರಹ್ಮದೇವನು ಆದಿಯಾಗಿ ಸಕಲ ಪ್ರಪಂಚದ ಸೃಷ್ಟಿ, ಪ್ರಲಯ, ಮಹಾವಂಶಗಳು, ಮನ್ವಂತರ ಚರಿತ್ರ ಮತ್ತು ವಂಶಪ್ರಸೂತರಾದ ಮಹಾತ್ಮರ ಚರಿತ್ರ—ಇವುಗಳನ್ನು ನಿರೂಪಿಸುವ ಐದುಲಕ್ಷಣಗಳಿಂದ ಕೂಡಿರುವುದು ಪುರಾಣವೆನಿಸುವುದು.

೧೫. ಆದಿಯಲ್ಲಿ ನಾಲ್ಕು ಪ್ರಶ್ನಾಂಶಗಳಿಂದ ಕೂಡಿದ ಸರ್ವೋತ್ತಮವಾದ ಈ ಪುರಾಣವನ್ನು ಶ್ರವಣಮಾಡಿದ ಮಾನವನು ಕೋಟಿಸಂಖ್ಯೆಯ ಕಲ್ಪಗಳಲ್ಲಿ ಮಾಡಿರುವ ಸಮಸ್ತ ಪಾಪಗಳಿಂದಲೂ ಮುಕ್ತನಾಗುವನು.

ಬ್ರಹ್ಮಹತ್ಯಾದಿಪಾಪಾನಿ ಯಾನ್ಯನ್ಯಾನ್ಯಶುಭಾನಿ ಚ ।
ತಾನಿ ಸರ್ವಾಣಿ ನಶ್ಯನ್ತಿ ತೃಣಂ ವಾತಹತಂ ಯಥಾ ॥೧೬॥

ಪುಷ್ಕರೇ ದಾನಜಂ ಪುಣ್ಯಂ ಶ್ರವಣಾದಸ್ಯ ಜಾಯತೇ ।
ಸರ್ವವೇದಾಧಿಕಫಲಂ ಸಮಾಪ್ತ್ಯಾ ಚಾಧಿಗಚ್ಛತಿ ॥೧೭॥

ಯಃ ಶ್ರಾವಯೇತ್ಪೂಜಯೇತ್ತಂ ಯಥಾ ದೇವಂ ಪಿತಾಮಹಮ್ ।
ಗನ್ಧಪುಷ್ಪೈಸ್ತಥಾ ವಸ್ತ್ರೈರ್ಬ್ರಾಹ್ಮಣಾನಾಂ ಚ ತರ್ಪಣೈಃ ॥೧೮॥

ಯಥಾಶಕ್ತ್ಯಾ ಚ ದಾತವ್ಯಂ ನೃಪೈರ್ಗ್ರಾಮಾದಿ ವಾಹನಮ್ ॥೧೯॥

ಏತತ್ಪುರಾಣಮಖಿಲಂ ವೇದಾರ್ಥೈರುಪಬೃಂಹಿತಮ್ ।
ಧರ್ಮಶಾಸ್ತ್ರೈಕನಿಲಯಂ ಶ್ರುತ್ವಾ ಸರ್ವಾರ್ಥಮಾಪ್ನುಯಾತ್॥೨೦॥

---

೧೬. ಮತ್ತು ಈ ಪುರಾಣದ ಶ್ರವಣ-ಪಠನಗಳಿಂದ ಬ್ರಹ್ಮಹತ್ಯಾ ಮುಂತಾದ ಮಹಾಪಾತಕಗಳು, ಹಾಗು ಇತರ ಸಮಸ್ತ ಅಶುಭಕರ್ಮಗಳು ಗಾಳಿಗೆ ಸಿಕ್ಕಿದ ಹುಲ್ಲುಕಡ್ಡಿಯಂತೆ ಚೂರುಚೂರಾಗಿ ಲಯವಾಗುವುವು.

೧೭. ಈ ಪುರಾಣವನ್ನು ಶ್ರವಣಮಾಡುವುದರಿಂದ ಪುಷ್ಕರ ಕ್ಷೇತ್ರದಲ್ಲಿ ದಾನಮಾಡಿ ಲಭಿಸುವ ಪುಣ್ಯವನ್ನು ಆರ್ಜಿಸುವನು. ಹಾಗು ಪೂರ್ತಿಯಾಗಿ ಶ್ರವಣಮಾಡಿ ಸಮಸ್ತ ವೇದಗಳನ್ನು ಪಾರಾಯಣಮಾಡಿ ಹೊಂದಬಹುದಾದ ಫಲವನ್ನು ಹೊಂದುತ್ತಾನೆ.

೧೮. ಯಾವ ಮಾನವನು ಈ ಪುರಾಣವನ್ನು ಶ್ರವಣಮಾಡಿಸುವನೋ ಅವನನ್ನು ಬ್ರಾಹ್ಮಣ ಸಂತರ್ಪಣಪೂರ್ವಕವಾಗಿ ಗಂಧ-ಪುಷ್ಪ-ವಸ್ತ್ರ ಮುಂತಾದ ಉಪಚಾರಗಳನ್ನು ಅರ್ಪಿಸಿ ಬ್ರಹ್ಮದೇವನಂತೆ ಪೂಜಿಸಬೇಕು.

೧೯. ಮತ್ತು ಶ್ರವಣ ಮಾಡಿರುವ ರಾಜರಿಂದ ಮಹತ್ತಾದ ಗ್ರಾಮ-ವಾಹನ ಮುಂತಾದ ಸಂಪತ್ತು ಯಥಾಶಕ್ತಿಯಾಗಿ ಆಚಾರ್ಯನಿಗೆ ಅರ್ಪಿಸಲ್ಪಡಬೇಕು.

೨೦. ಸಮಸ್ತ ವೇದಾರ್ಥಗಳಿಂದ ಪರಿಪೂರ್ಣವೂ ಮತ್ತು ಧರ್ಮಶಾಸ್ತ್ರಕ್ಕೆ ಮುಖ್ಯಾಧಾರವೂ ಆದ ಈ ಪುರಾಣವನ್ನು ಸಮಗ್ರವಾಗಿ ಕೇಳಿದ ಮಾನವನು ಸಮಸ್ತ ಇಷ್ಟಾರ್ಥಗಳನ್ನು ಹೊಂದುತ್ತಾನೆ.

ಶ್ರುತ್ವಾ ಪುರಾಣಮಖಿಲಂ ವ್ಯಾಸಂ ಸಮ್ಪೂಜಯೇದ್ಬುಧಃ ।
ಧರ್ಮಾರ್ಥಕಾಮಮೋಕ್ಷಾಣಾಂ ಯಥೋಕ್ತಫಲಹೇತವೇ ॥೨೧॥

ದದ್ಯಾದ್ಗಾಂ ಗುರವೇ ಸ್ವರ್ಣವಸ್ತ್ರಾಲಙ್ಕಾರಸಂಯುತಾಮ್ ।
ಶ್ರವಣಸ್ಯ ಫಲಾವಾಪ್ತ್ಯೈ ದಾನೈಃ ಸನ್ತೋಷಯೇದ್ಗುರುಮ್ ॥೨೨॥

ಅಪೂಜ್ಯ ಪಾಠಕರ್ತಾರಂ ಶ್ಲೋಕಮೇಕಂ ಶೃಣೋತಿ ಯಃ ।
ನಾಸೌ ಪುಣ್ಯಮವಾಪ್ನೋತಿ ಶಾಸ್ತ್ರಚೋರಃ ಸ್ಮೃತೋ ಹಿ ಸಃ ॥೨೩॥

ನ ತಸ್ಯ ದೇವಾಃ ಪ್ರೀಣನ್ತಿ ಪಿತರೌ ನೈವ ಪುತ್ರಕಾನ್ ।
ದತ್ತಂ ಶ್ರಾದ್ಧಂ ತಥೇಚ್ಛನ್ತಿ ತೀರ್ಥಸ್ನಾನಫಲಂ ನ ಚ ॥೨೪॥

---

೨೧. ಜ್ಞಾನಿಯಾದ ಮಾನವನು ಸಮಗ್ರವಾಗಿ ಪುರಾಣವನ್ನು ಶ್ರವಣಮಾಡಿ ಧರ್ಮ-ಅರ್ಥ-ಕಾಮ-ಮೋಕ್ಷಗಳಲ್ಲಿ ಯಥೋಕ್ತವಾದ ಫಲವನ್ನು ಹೊಂದುವುದಕ್ಕೋಸ್ಕರ ಶ್ರವಣಮಾಡಿಸಿರುವ ಗುರುಸನ್ನಿಧಿಯಲ್ಲಿ ವ್ಯಾಸ-ಪೂಜೆಯನ್ನು ಮಾಡಬೇಕು.

೨೨. ಮತ್ತು ಶ್ರವಣಮಾಡಿದ ಫಲವು ಲಭಿಸುವುದಕ್ಕೋಸ್ಕರ ಗುರುವಿಗೆ ಗೋವು, ಸುವರ್ಣ, ವಸ್ತ್ರ, ಅಲಂಕಾರ ಮುಂತಾದ ಸಮಸ್ತೋಪಚಾರಗಳನ್ನು ಅರ್ಪಿಸಬೇಕು. ಹಾಗು ಅನೇಕ ದಾನಗಳಿಂದ ಗುರುವನ್ನು ಸಂತೋಷ-ಪಡಿಸಬೇಕು.

೨೩. ಪಠನಮಾಡಿಸಿದವನನ್ನು ಸಗೌರವವಾಗಿ ಪೂಜಿಸದೇ ಯಾವನು ಒಂದು ಶ್ಲೋಕವನ್ನು ಶ್ರವಣಮಾಡುವನೋ ಅವನಿಗೆ ಶ್ರವಣದ ಫಲವು ದೊರೆಯಲಾರದು. ಮತ್ತು ಅಂತಹವನು ಶಾಸ್ತ್ರಚೋರನೆಂದು ಗಣಿಸಲ್ಪಟ್ಟಿರುವನು.

೨೪. ಅಂತಹ ಶಾಸ್ತ್ರಚೋರನ ಕರ್ಮದಿಂದ ದೇವತೆಗಳು ತೃಪ್ತಿಯನ್ನು ಹೊಂದುವುದಿಲ್ಲ. ತಂದೆ-ತಾಯಿಗಳು ಅಂತಹ ಪುತ್ರನು ಕೊಟ್ಟ ಶ್ರಾದ್ಧಾನ್ನವನ್ನು ಭುಂಜಿಸಲು ಇಷ್ಟಪಡುವುದಿಲ್ಲ. ಮತ್ತು ಅವನಿಗೆ ತೀರ್ಥಸ್ನಾನ ಮಾಡಿದರೂ ಫಲವು ದೊರೆಯದೆ ವ್ಯರ್ಥವಾಗುವುದು.

ಲಭತೇ ಶಾಸ್ತ್ರಚೋರಶ್ಚ ನಿನ್ದಾಂ ಸಜ್ಜನಸಂಸದಿ ।
ಅವಜ್ಞಯಾ ನ ಶ್ರೋತವ್ಯಂ ಶಾಸ್ತ್ರಮೇತದ್ವಿಚಕ್ಷಣೈಃ ॥೨೫॥

ಪಠ್ಯಮಾನೇ ತ್ವವಜ್ಞಾತೇ ಸಾಧುಭಿಃ ಶಾಸ್ತ್ರ ಉತ್ತಮೇ ।
ಮೂಕೋ ಭವತಿ ಜನ್ಮಾನಿ ಸಪ್ತ ಮೂರ್ಖಃ ಪ್ರಜಾಯತೇ ॥೨೬॥

ಶ್ರುತ್ವಾ ತತ್ಪೂಜಯೇದ್ಯಸ್ತು ಪುರಾಣಂ ಸಪ್ತಮಂ ಪುನಃ ।
ಸರ್ವಪಾಪವಿನಿರ್ಮುಕ್ತಃ ಪುನಾತ್ಯೇವ ನಿಜಂ ಕುಲಮ್ ॥೨೭॥

ಪೂತೋ ಯಾತಿ ನ ಸನ್ದೇಹೋ ವಿಷ್ಣುಲೋಕಂ ಸನಾತನಮ್ ।
ಚ್ಯುತಸ್ತತಃ ಪುನರ್ನೈವ ಸ ಭವಿಷ್ಯತಿ ಮಾನವಃ ॥೨೮॥

ಪುರಾಣಶ್ರವಣಾದೇವ ಪರಂ ಯೋಗಮವಾಪ್ನುಯಾತ್ ॥೨೯॥

---

೨೫. ಮತ್ತು ಅಂತಹ ಶಾಸ್ತ್ರಚೋರನು ಸಾಧುಜನಗಳ ಸಭೆಯಲ್ಲಿ ನಿಂದೆಗೆ ಗುರಿಯಾಗುತ್ತಾನೆ. ಪುರಾಣರೂಪವಾದ ಈ ಶಾಸ್ತ್ರೋಪದೇಶವನ್ನು ಜ್ಞಾನಿಗಳು ತಿರಸ್ಕಾರಭಾವನೆಯಿಂದ ಕೇಳಬಾರದು.

೨೬. ಯಾವ ಮಾನವನು ಉತ್ತಮ ಶಾಸ್ತ್ರರೂಪವಾದ ಈ ಪುರಾಣ-ವನ್ನು ಪಠಿಸುತ್ತಿರುವಾಗ ಅವಮಾನ ಮಾಡುವನೋ ಅಂತಹ ಪಾಪಿಯು ಏಳು ಜನ್ಮಗಳಲ್ಲಿ ಮೂಕನೂ ಮತ್ತು ಮೂರ್ಖನೂ ಆಗುತ್ತಾನೆ.

೨೭. ಯಾವ ಮಾನವನು ಈ ಏಳನೆಯದಾದ ಮಾರ್ಕಂಡೇಯ ಮಹಾಪುರಾಣವನ್ನು ಶ್ರವಣಮಾಡಿ ಅದನ್ನು ಪೂಜಿಸುವನೋ ಅವನು ಸಮಸ್ತ ಪಾಪಗಳಿಂದ ಮುಕ್ತನಾಗಿ ತನ್ನ ವಂಶವನ್ನು ಪಾವನಗೊಳಿಸುವನು.

೨೮. ಹಾಗು ಗೌರವದಿಂದ ಈ ಪುರಾಣವನ್ನು ಶ್ರವಣಮಾಡಿದವನು ಪವಿತ್ರನಾಗಿ ಸನಾತನವಾದ ವಿಷ್ಣುಲೋಕಕ್ಕೆ ಹೋಗುವನು. ಮತ್ತೆ ಆ ಮಾನವನು ಅಲ್ಲಿಂದ ಚ್ಯುತನಾಗಿ ಜನ್ಮವೆತ್ತುವುದಿಲ್ಲ. ಇದರಲ್ಲಿ ಸಂದೇಹವಿಲ್ಲ.

೨೯. ಮತ್ತು ಭಕ್ತಿ-ಶ್ರದ್ಧೆಗಳಿಂದ ಪುರಾಣವನ್ನು ಶ್ರವಣಮಾಡಿದುದ-ರಿಂದಲೇ ಪರಮಯೋಗವನ್ನು ಹೊಂದಿ ತನ್ಮೂಲಕ ಪುರುಷಾರ್ಥವನ್ನು ಹೊಂದುವನು.

ನಾಸ್ತಿಕಾಯ ನ ದಾತವ್ಯಂ ವೃಷಲೇ ವೇದನಿನ್ದಕೇ ।
ಗುರುದ್ವಿಜಾತಿನಿನ್ದಾಯ ತಥಾ ಭಗ್ನವ್ರತಾಯ ಚ ॥೩೦॥

ಮಾತಾಪಿತ್ರೋರ್ನಿನ್ದಕಾಯ ವೇದಶಾಸ್ತ್ರಾದಿನಿನ್ದಿನೇ ।
ಭಿನ್ನಮರ್ಯಾದಿನೇ ಚೈವ ತಥಾ ವೈ ಜ್ಞಾತಿಕೋಪಿನೇ ॥೩೧॥

ಏತೇಷಾಂ ನೈವ ದಾತವ್ಯಂ ಪ್ರಾಣೈಃ ಕಣ್ಠಗತೈರಪಿ ॥೩೨॥

ಲೋಭಾದ್ವಾ ಯದಿ ವಾ ಮೋಹಾದ್ಭಯಾದ್ವಾಪಿ ವಿಶೇಷತಃ ।
ಪಠೇದ್ವಾ ಪಾಠಯೇದ್ವಾಪಿ ಸ ಗಚ್ಛೇನ್ನರಕಂ ಧ್ರುವಮ್ ॥೩೩॥

---

೩೦. ನಾಸ್ತಿಕ, ವೃಷಲ, ವೇದಗ್ರಂಥವನ್ನು ನಿಂದಿಸುವವನು, ಗುರು-ದ್ವಿಜರನ್ನು ಅತಿಯಾಗಿ ನಿಂದಿಸುವವನು ಮತ್ತು ವ್ರತದಿಂದ ಭಂಗಹೊಂದಿದವನು, ಇಂತಹವರಿಗೆ ಈ ಪುರಾಣವನ್ನು ಉಪದೇಶಿಸಬಾರದು.

೩೧. ಮತ್ತು ಮಾತಾ-ಪಿತೃಗಳನ್ನು ನಿಂದಿಸುವವನೂ, ವೇದ-ಶಾಸ್ತ್ರ-ಗಳನ್ನು ತಿರಸ್ಕರಿಸುವವನೂ, ಮರ್ಯಾದೆ-ನಿಯಮಗಳನ್ನು ಭೇದಿಸುವವನೂ ಮತ್ತು ಜ್ಞಾತಿಜನರಲ್ಲಿ ಕೋಪವುಳ್ಳವನೂ ಆದ ಮಾನವನಿಗೆ ಈ ಪುರಾಣವನ್ನು ಉಪದೇಶಮಾಡಬಾರದು.

೩೨. ಒಂದು ಸಮಯ ಪ್ರಾಣಗಳು ಉತ್ಕ್ರಾಂತಿಯಾಗುವಂತಾಗಿ ಕಂಠಕ್ಕೆ ಬಂದರೂ ಬರಲಿ, ಆದರೂ ಇಂತಹ ನೀಚರಿಗೆ ಈ ಪುರಾಣದ ಉಪದೇಶವನ್ನು ಮಾಡಬಾರದು.

೩೩. ಹಾಗು ಲೋಭ, ಅಜ್ಞಾನ ಅಥವಾ ಭಯ ಮುಂತಾದ ವಿಶೇಷ ನಿಮಿತ್ತಗಳಿಂದ ಈ ಪುರಾಣದ ಪಠನ ಮತ್ತು ಪಾಠಣಮಾಡಿಸಿದವನು ಶಾಶ್ವತ-ವಾಗಿ ನರಕದಲ್ಲಿ ವಾಸಮಾಡುವನು.

ಮಾರ್ಕಣ್ಡೇಯ ಉವಾಚ :—

ಏತತ್ಸರ್ವಮುಪಾಖ್ಯಾನಂ ಧರ್ಮ್ಯಂ ಸ್ವರ್ಗಾಪವರ್ಗದಮ್ ।
ಯಃ ಶೃಣೋತಿ ಪಠೇದ್ವಾಪಿ ಸಿದ್ಧಂ ತಸ್ಯ ಸಮೀಹಿತಮ್ ॥೩೪॥

ಆಧಿವ್ಯಾಧಿಜದುಃಖೇನ ಕದಾಚಿನ್ನಾಭಿಯುಜ್ಯತೇ ।
ಬ್ರಹ್ಮಹತ್ಯಾದಿಪಾಪೇಭ್ಯೋ ಮುಚ್ಯತೇ ನಾತ್ರ ಸಂಶಯಃ ॥೩೫॥

ಸನ್ತಃ ಸ್ವಜನಮಿತ್ರಾಣಿ ಭವನ್ತಿ ಹಿತಬುದ್ಧಯಃ ।
ನಾರಯಃ ಸಮ್ಭವಿಷ್ಯನ್ತಿ ದಸ್ಯವೋ ವಾ ಕದಾಚನ ॥೩೬॥

ಸದರ್ಥೋ ಮಿಷ್ಟಭೋಗೀ ಚ ದುರ್ಭಿಕ್ಷೈರ್ನಾವಸೀದತಿ ॥೩೭॥

ಮಾರ್ಕಂಡೇಯ ಮುನಿಯು ಹೇಳಿದನು :—

೩೪. ಧರ್ಮಸಾಧನವೂ, ಸ್ವರ್ಗ-ಮೋಕ್ಷಗಳನ್ನು ನೀಡುವುದೂ, ಆದ ಈ ಉಪಾಖ್ಯಾನವನ್ನು ಸಮಗ್ರವಾಗಿ ಯಾವ ಮಾನವನು ಶ್ರವಣಮಾಡುವನೋ ಅವನಿಗೆ ಸಕಲ ಇಷ್ಟಾರ್ಥವೂ ಸಿದ್ಧಿ ಹೊಂದುವುದು.

೩೫. ಮತ್ತು ಶ್ರವಣಮಾಡಿದ ಪುಣ್ಯಾತ್ಮನು ರೋಗ-ಮನೋವ್ಯಥೆ-ಗಳಿಂದ ಉಂಟಾಗುವ ದುಃಖಕ್ಕೆ ಯಾವಾಗಲೂ ಭಾಗಿಯಾಗುವುದಿಲ್ಲ. ಮತ್ತು ನಿಸ್ಸಂಶಯವಾಗಿ ಬ್ರಹ್ಮಹತ್ಯಾ ಮುಂತಾದ ಮಹಾಪಾತಕಗಳಿಂದ ಮುಕ್ತ-ನಾಗುತ್ತಾನೆ.

೩೬. ಮತ್ತು ಅಂತಹ ಪುಣ್ಯಾತ್ಮನ ಮಿತ್ರರು ಸಾಧುಗಳೂ ಹಿತೈಷಿ-ಗಳೂ ಆಗಿರುವರು ಮತ್ತು ಅವನಿಗೆ ಯವವಾಗಲೂ ಶತ್ರುಗಳು ಇರುವುದಿಲ್ಲ. ಹಾಗು ಕಳ್ಳಕಾಕರು ಪೀಡಿಸುವುದಿಲ್ಲ.

೩೭. ಮತ್ತು ಪುರಾಣಶ್ರವಣದ ಭಾಗ್ಯವಂತನು ಉತ್ತಮವಾದ ಅರ್ಥವನ್ನು ಸಂಪಾದಿಸಿದವನೂ ಮಿಷ್ಟಾನ್ನಭೋಜಿಯೂ ಆಗುವನು. ಎಂದೂ ದುರ್ಭಿಕ್ಷದ ಪೀಡೆಗೆ ಪಾತ್ರನಾಗುವುದಿಲ್ಲ.

ಪರದಾರಪರದ್ರವ್ಯಪರಹಿಂಸಾದಿಕಲ್ಬಿಷೈಃ ।
ಮುಚ್ಯತೇಽನೇಕದುಃಖೇಭ್ಯೋ ನಿತ್ಯಂ ಚೈವ ದ್ವಿಜೋತ್ತಮ ॥೩೮॥

ಋದ್ಧಿರ್ವೃದ್ಧಿಃ ಸ್ಮೃತಿಃ ಶಾನ್ತಿಃ ಶ್ರೀಃ ಪುಷ್ಟಿಸ್ತುಷ್ಟಿರೇವ ಚ ।
ನಿತ್ಯಂ ತಸ್ಯ ಭವೇದ್ವಿಪ್ರ ಯಃ ಶೃಣೋತಿ ಕಥಾಮಿಮಾಮ್ ॥೩೯॥

ಮಾರ್ಕಣ್ಡೇಯ ಪುರಾಣಮೇತದಖಿಲಂ ಶೃಣ್ವನ್ನ ಶೋಚ್ಯಃ ಪುಮಾನ್
ಯೋ ವಾ ಸಮ್ಯಗುದೀರಯೇದ್ರಸಮಯಂ ಶೋಚ್ಯೋ ನ ಸೋಽಪಿ ದ್ವಿಜ ।
ಯೋಗಜ್ಞಾನವಿಶುದ್ಧಸಿದ್ಧಿಸಹಿತಂ ಸ್ವರ್ಗಾದಿಲೋಕೇಽಪ್ಯಸೌ
ಶಕ್ರಾದ್ಯೈಶ್ಚ ಸುರಾದಿಭಿಃ ಪರಿವೃತಃ ಸ್ವರ್ಗೇ ಸದಾ ಪೂಜ್ಯತೇ ॥೪೦॥

---

೩೮. ದ್ವಿಜೋತ್ತಮನೇ! ಮತ್ತು ಶ್ರವಣಮಾಡಿದವನು ಪರಸ್ತ್ರೀಸಂಗ, ಪರದ್ರವ್ಯಾಪಹಾರ, ಪರಹಿಂಸಾ ಮುಂತಾದ ಪಾಪಗಳಿಂದಲೂ, ಅನೇಕ ಪಾಪಪರಿಣಾಮದ ದುಃಖಗಳಿಂದಲೂ ತಪ್ಪದೇ ಬಿಡುಗಡೆಯನ್ನು ಹೊಂದುವನು.

೩೯. ವಿಪ್ರೋತ್ತಮನೇ! ಯಾವ ಮಾನವನು ಈ ಪುರಾಣಕಥೆಯನ್ನು ಶ್ರವಣಮಾಡುವನೋ ಅವನ ಮನೆಯಲ್ಲಿ ಐಶ್ವರ್ಯ, ಪಶ್ವಾದಿಸಮೃದ್ಧಿ, ಅಭಿವೃದ್ಧಿ, ಸ್ಮೃತಿ, ಶಾಂತಿ, ದೈವೀಸಂಪತ್ತು, ಪುಷ್ಟಿ ಮತ್ತು ತುಷ್ಟಿ ಇವು ಯಾವಾಗಲೂ ತುಂಬಿಕೊಂಡಿರುವುವು.

೪೦. ದ್ವಿಜವರನೇ! ಈ ಪವಿತ್ರವಾದ ಮಾರ್ಕಂಡೇಯ ಮಹಾ-ಪುರಾಣವನ್ನು ಸಂಪೂರ್ಣವಾಗಿ ಶ್ರವಣಮಾಡಿದ ಮಾನವನು ಶೋಚನೀಯ-ನಾಗುವುದಿಲ್ಲ. ಅಥವಾ ಇದನ್ನು ರಸಮಯವಾಗಿ ಉತ್ತಮರೀತಿಯಿಂದ ಪಠನ ಮಾಡಿದ ಮಾನವನು ಶೋಕಭಾಗಿಯಾಗುವುದಿಲ್ಲ. ಅಂತಹವನು ಯೋಗ-ಜ್ಞಾನಗಳಿಂದ ಶುದ್ಧವಾದ ಸಿದ್ಧಿಯನ್ನು ಹೊಂದಿದವನಾಗಿ ಸ್ವರ್ಗಾದಿಲೋಕಗಳಲ್ಲಿ ಇಂದ್ರ ಮುಂತಾದವರ ಜೊತೆಯಲ್ಲಿದ್ದು ಅವರಿಂದಲೂ ಗೌರವಿಸಲ್ಪಡುತ್ತಾನೆ.

ಪುರಾಣಮೇತಚ್ಛ್ರುತ್ವಾ ಚ ಜ್ಞಾನವಿಜ್ಞಾನಸಂಯುತಮ್ ।
ವಿಮಾನವರಮಾರುಹ್ಯ ಸ್ವರ್ಗಲೋಕೇ ಮಹೀಯತೇ ॥೪೧॥

ಪುರಾಣಾಕ್ಷರಸಙ್ಖ್ಯಾ ಚ ಪ್ರಖ್ಯಾತಾ ತತ್ತ್ವಬುದ್ಧಿನಾ ।
ಶ್ಲೋಕಾನಾಂ ಷಟ್ಸಹಸ್ರಾಣಿ ತಥಾ ಚಾಷ್ಟಶತಾನಿ ಚ ॥೪೨॥

ಶ್ಲೋಕಾಸ್ತತ್ರ ನವಾಶೀತಿರೇಕಾದಶ ಸಮಾಹಿತಾಃ ।
ಕಥಿತಾ ಮುನಿನಾ ಪೂರ್ವಂ ಮಾರ್ಕಣ್ಡೇಯೇನ ಧೀಮತಾ ॥೪೩॥

ಜೈಮಿನಿರುವಾಚ :—

ಭಾರತೇ ನಾಭವದ್ಯನ್ಮೇ ಸಂಶಯಸ್ಫೋಟನಂ ದ್ವಿಜಾಃ ।
ತದ್ಭವದ್ಭಿಃ ಕೃತಂ ಯನ್ನ ಕಶ್ಚಿ ದದ್ಯ ಕರಿಷ್ಯತಿ ॥೪೪॥

---

೪೧. ಜ್ಞಾನ-ವಿಜ್ಞಾನಸಂಪತ್ತಿನಿಂದ ತುಂಬಿದ ಈ ಮಹಾಪುರಾಣವನ್ನು ಶ್ರವಣಮಾಡಿದವನು ಮರಣಸಮಯದಲ್ಲಿ ಸರ್ವೋತ್ತಮವಾದ ವಿಮಾನವನ್ನು ಏರಿ ಸ್ವರ್ಗಲೋಕದಲ್ಲಿ ಪೂಜ್ಯನಾಗುತ್ತಾನೆ.

೪೨. ಈ ಪುರಾಣದಲ್ಲಿರುವ ಶ್ಲೋಕರೂಪವಾದ ಅಕ್ಷರಗಳಸಂಖ್ಯೆಯು ತತ್ತ್ವಜ್ಞಾನಿಯಾದ ಮುನಿಯಿಂದ ಗಣಿಸಿ ಹೇಳಲ್ಪಟ್ಟಿರುವುದು. ಆರುಸಹಸ್ರ ಸಂಖ್ಯೆ, ಮತ್ತು ಎಂಟುನೂರು ಸಂಖ್ಯೆಯುಳ್ಳ ಶ್ಲೋಕಗಳು ಒಂದು ಭಾಗವಾಗಿರುವುವು.

೪೩. ಮತ್ತು ಎಂಭತ್ತೊಂಭತ್ತು, ಹನ್ನೊಂದು ಈ ಸಂಖ್ಯೆಗಳನ್ನು ಸೇರಿಸಿ ಒಟ್ಟು ಆರು ಸಹಸ್ರ ಒಂಭತ್ತುನೂರು ಶ್ಲೋಕಗಳು ಪ್ರಾಜ್ಞನಾದ ಮಾರ್ಕಂಡೇಯ ಮುನಿಯಿಂದ ಪೂರ್ವಕಾಲದಲ್ಲಿ ಹೇಳಲ್ಪಟ್ಟಿವೆ.

ಜೈಮಿನಿ ಮುನಿಯು ಹೀಗೆಂದನು :—

೪೪. ಪಕ್ಷೀಂದ್ರರೇ! ನನಗೆ ಮಹಾಭಾರತದ ಕಥೆಯಲ್ಲಿ ಯಾವ ಸಂಶಯಗಳು ಹುಟ್ಟಿದ್ದುವೊ ಅವುಗಳಿಗೆ ನಿಮ್ಮಿಂದ ಪರಿಹಾರವು ಮಾಡಲ್ಪಟ್ಟಿದೆ. ಈರೀತಿಯಾಗಿ ಸಂಶಯವನ್ನು ಪರಿಹರಿಸುವುದು ಇಂದು ಮತ್ತಾರಿಂದಲೂ ಸಾಧ್ಯವಿಲ್ಲ.

ಯೂಯಂ ದೀರ್ಘಾಯುಷಃ ಸ್ಯಾತ ಪ್ರಜ್ಞಾಬುದ್ಧಿವಿಶಾರದಾಃ ।
ಸಾಙ್ಖ್ಯಯೋಗೇ ತಥಾ ಚಾಸ್ತು ಬುದ್ಧಿರವ್ಯಭಿಚಾರಿಣೀ ||೪೫||

ಪಿತೃಶಾಪಕೃತಾದ್ದುಃಖಾದ್ದೌರ್ಮನಸ್ಯಂ ವ್ಯಪೇತು ವಃ ||೪೬||

ಏತಾವದುಕ್ತ್ವಾ ವಚನಂ ಜಗಾಮ ಸ್ವಾಶ್ರಮಂ ಮುನಿಃ ।
ಚಿನ್ತಯನ್ಸರಸೋದಾರಂ ಪಕ್ಷಿಣಾಂ ವಾಕ್ಯಮೀರಿತಮ್ ||೪೭||

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಏತತ್ಪುರಾಣಮಾಹಾತ್ಮ್ಯ-ಶ್ರವಣಪಠನಫಲಂ ನಾಮ ಚತುಸ್ತ್ರಿಂಶದಧಿಕಶತತಮೋಽಧ್ಯಾಯಃ

೪೫. ನೀವು ಇನ್ನೂ ಹೆಚ್ಚಾಗಿ ವಿವೇಕ-ಬುದ್ಧಿಗಳಲ್ಲಿ ವಿಶಾರದರೂ ಮತ್ತು ದೀರ್ಘಾಯುಷ್ಮಂತರೂ ಆಗಿರಿ. ಹಾಗು ಸಾಂಖ್ಯಯೋಗದಲ್ಲಿ ನಿಮಗೆ ನಿರಂತರವಾದ ಭಾವನೆಯುಂಟಾಗಲಿ.

೪೬. ಮತ್ತು ಪಕ್ಷಿಜನ್ಮಪ್ರಾಪ್ತಿಯಾಗುವಂತೆ ತಂದೆಯಿತ್ತ ಶಾಪದಿಂದ ಮನಸ್ಸಿಗೆ ಉಂಟಾಗಬಹುದಾದ ವ್ಯಥೆಯು ನಿಮ್ಮನ್ನು ಪೀಡಿಸುವುದು ಬೇಡ.

೪೭. ಜೈಮಿನಿ ಮುನಿಯು ಇಷ್ಟುಮಾತನ್ನು ಪಕ್ಷಿಗಳ ಎದುರಿನಲ್ಲಿ ಹೇಳಿ ಉತ್ತಮವೂ ಉದಾರವೂ ಆದ ಪಕ್ಷೀಂದ್ರರ ವಚನವನ್ನು ಮನಸ್ಸಿನಲ್ಲಿ ಚಿಂತಿಸುತ್ತ ತನ್ನ ಆಶ್ರಮಕ್ಕೆ ಪ್ರಯಾಣಮಾಡಿದನು.

ಮಾರ್ಕಂಡೇಯ ಮಹಾಪುರಾಣದಲ್ಲಿ ನೂರಮೂವತ್ತನಾಲ್ಕನೆಯ ಅಧ್ಯಾಯವು ಮುಗಿದುದು.

ಕಥಾನುವಾದವು ಸಂಪೂರ್ಣವಾಯಿತು.

|| ಶ್ರೀಃ ||